|| ಶ್ರೀಃ ಹರಿಃ ಓಂ ||

|| ಶ್ರೀ ಲಕ್ಷ್ಮೀನರಸಿಂಹಾಯ ನಮಃ ||

|| ಶ್ರೀ ಜಗನ್ನಾಥವಿಠ್ಠಲಾಯ ನಮಃ ||

# ಸಂಧಿ (೭)

# ಪಂಚತನ್ಮಾತ್ರಾ ಸಂಧಿ

**ಸಂಧಿಯ ಸಾರ:-**

ಅಗಮ್ಯ ಮಹಿಮನೂ, ಅನಂತಕಲ್ಯಾಣಗುಣಗಣಪರಿಪೂರ್ಣನೂ, ಅತ ಏವ ಸಮಸ್ತ ದೋಷ ವಿದೂರನೂ, ಸರ್ವೋತ್ತಮನೂ ಆದ ಶ್ರೀ ಗರುಡ ವಾಹನ ಲಕ್ಷ್ಮೀನರಸಿಂಹ ದೇವರನ್ನು ದೇವತಾ ತಾರತಮ್ಯಾನುಸಾರವಾಗಿ ಕೊಂಡಾಡುತ್ತಾ, ಇಷ್ಟಪ್ರಾಪ್ತಿ ಹಾಗೂ ಅನಿಷ್ಟ ನಿವೃತ್ಯರ್ಥವಾಗಿ ಮಂಗಳಾ ಚರಣೆಯನ್ನು ಪ್ರಾರಂಭಿಸಿ ಪ್ರಥಮ ಸಂಧಿ - **ಮಂಗಳಾಚರಣ ಸಂಧಿ**ಗತ ಪದ್ಯಾರ್ಥಗಳನ್ನು ವಿವರಿಸುತ್ತಾ ಸಂಧಿಗತ ವಿಷಯವನ್ನು ತಮ್ಮ ಉಪಾಸ್ಯ ಮೂರ್ತಿಯೂ ಕುಲದೇವನೂ ಆದ ಶ್ರೀ ಲಕ್ಷ್ಮೀನರಸಿಂಹನ ಪಾದಪದ್ಮಂಗಳಲ್ಲಿ ಅರ್ಪಿಸಿರುತ್ತಾರೆ, ಅಪರೋಕ್ಷೀಕೃತಶ್ರೀಶರಾದ ಜ್ಞಾನಿವರೇಣ್ಯ ಶ್ರೀ ಜಗನ್ನಾಥ ದಾಸವರ್ಯರು.

ಅಚಿತ್ಯಾದ್ಭುತ ಚರಿತನಾದ ಶ್ರೀ ಪರಮಾತ್ಮನ ಕಾರುಣ್ಯ ವಿಶೇಷವನ್ನು ಹಲವಾರು ಪುರಾಣ ಹಾಗೂ ಇತಿಹಾಸ ಘಟಕವಾದ ದೃಷ್ಟಾಂತಗಳಿಂದ ಹೃದ

ಯಂಗಮವಾಗಿ ನಿರೂಪಿಸುತ್ತಾ ಮುಂದಿನ ದ್ವಿತೀಯ ಸಂಧಿ-**ಕರುಣಾ ಸಂಧಿ** ಯಲ್ಲಿ ಉಲ್ಲೇಖಿಸಿರುತ್ತಾರೆ.

ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತವಾಗಿದ್ದು, ಸಕಲಚೇತನರ ಬಿಂಬರೂಪಿಯಾಗಿ ಜಗದಾದ್ಯಂತ ಓತಪ್ರೋತನಾಗಿರುವ ಶ್ರೀ ಪರಮಾತ್ಮನ ಅಮಲ ಗುಣಾವಳಿಗಳನ್ನು ಕೊಂಡಾಡುತ್ತಾ ವ್ಯಾಪ್ತ್ಯೋಪಾಸನಾ ಕ್ರಮವನ್ನು ವಿವರಿಸಿರುತ್ತಾರೆ. ತೃತೀಯ ಸಂಧಿ **ವ್ಯಾಪ್ತಿ ಸಂಧಿಯಲ್ಲಿ.**

ಅಂತು ಸಕಲ ಚರಾಚರಗಳಲ್ಲಿ ವ್ಯಾಪ್ತನಾಗಿ ಪರಿಪೂರ್ಣರೂಪದಿಂದಿದ್ದು ಸಮಸ್ತ ಜಗದ್ವ್ಯಾಪಾರಗಳನ್ನೂ ತಾನೇ ಸರ್ವತಂತ್ರ ಸ್ವತಂತ್ರನಾಗಿ ನಿರ್ವಹಿಸುತ್ತಿರುವ ಆ ಜಗದ್ವಿಲಕ್ಷಣನಾದ ಶ್ರೀ ಪರಮಾತ್ಮನು ಭೋಜನ ಯೋಗ್ಯವಾದ ನಾನಾ ಆಹಾರ ಪದಾರ್ಥಗಳಲ್ಲಿ ವ್ಯಾಪ್ತನಾಗಿದ್ದು ರಸವಿಭಾಗವನ್ನು ಮಾಡಿ ತ್ರಿವಿಧ ಜೀವರಿಗೆ ಬಿಂಬಕ್ರಿಯದ್ವಾರಾ ಉಂಡು ಉಣಿಸಿ ತೃಪ್ತಿಯನ್ನೀಯುತ್ತಾ, ಸ್ಥೂಲ ದೇಹಕ್ಕೆ ಉಪಚಯಮಾಡುವ ಆ ಭಗವಂತನ ಅಚಿಂತ್ಯ ವ್ಯಾಪಾರ ವಿಶೇಷವು ಮುಂದಿನ ಚತುರ್ಥ ಸಂಧಿ **ಭೋಜನರಸವಿಭಾಗ ಸಂಧಿ** ಯಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ.

ಸರ್ವತ್ರ ವ್ಯಾಪ್ತನಾದ ಆ ಜಗದ್ಭರಿತನ ವಿಭೂತಿರೂಪಗಳನ್ನೂ, ಆ ರೂಪಗಳನ್ನು ಉಪಾಸಿಸುವ ಅನುಸಂಧಾನ ಕ್ರಮವನ್ನೂ ಆ ವಿಭೂತಿ ರೂಪಗತ ಅಧಿಷ್ಠಾನ ವಿಶೇಷಗಳನ್ನೂ ಮುಂದಿನ ಪಂಚಮ ಸಂಧಿ **ವಿಭೂತಿ ಸಂಧಿ**ಯಲ್ಲಿ ಸದೃಷ್ಟಾಂತವಾಗಿ ವಿಸ್ತಾರ ರೂಪದಲ್ಲಿ ವಿವರಿಸಿರುತ್ತಾರೆ.

ಆಕಾಶ, ಪರ್ಜನ್ಯ, ಭೂಮಿ, ಜನಕ, ಜನನೀ ಎಂಬ ಪಂಚಾಧಿಷ್ಠಾನನಗಳಲ್ಲಿ ಅಗ್ನಿ, ಜ್ವಾಲೆ, ಧೂಮ. ಕಿಡಿಗಳು, ಅಂಗಾರಗಳೆಂಬ ಯಜ್ಞೋಪಕರಣಗಳಲ್ಲಿ ವಿದ್ಯಮಾನನಾಗಿದ್ದು, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಗಳಿಂದ, ಪಂಚಾಗ್ನಿಗಳಲ್ಲಿದ್ದು ತ್ರಿಶಂತಿರೂಪಗಳಿಂದ ವಿದ್ಯಮಾನವಾಗಿರುವ ಶ್ರೀ ಪರಮಾತ್ಮನ ಮಹಿಮಾ ವಿಶೇಷಗಳನ್ನೂ, ಪಂಚಾಗ್ನಿಗತ ಭಗವದ್ರೂಪೋಪಾಸನೆಯ ವಿಧಾನವನ್ನೂ

ಮತ್ತು **ಜೀವನ ಸೃಷ್ಟಿಕ್ರಮ ರಹಸ್ಯವನ್ನು** ಸಹ **ಛಾಂದೋಗ್ಯೋಪನಿಷತ್ತಿ**ನಲ್ಲಿ ವರ್ಣಿತವಾಗಿರುವಂತೆ, ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಮುಂದಿನ ಷಷ್ಠಿ ಸಂಧಿ - **ಪಂಚ ಮಹಾಯಜ್ಞ ಸಂಧಿ**ಯಲ್ಲಿ ಜ್ಞಾನಿಶ್ರೇಷ್ಠರಾದ ದಾಸವರೇಣ್ಯರು.

ಭೂಮಿ, ಜಲ, ಅಗ್ನಿ, ವಾಯು ಮತ್ತು ಆಕಾಶವೆಂಬ ಭೂತ ಪಂಚಕಗಳಲ್ಲಿ ಅವುಗಳ ತನ್ಮಾತ್ರಾಗುಣಗಳಾದ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳಲ್ಲಿ, ಏಕ ಪಂಚಾಶದ್ವರ್ಣವೆಂಬ ಅಕಾರಾದಿ ಕ್ಷಕಾರ ಪರ್ಯಂತ ಅಜಾದಿರೂಪಗಳಿಂದ ಪ್ರಾರಂಭಿಸಿ, ಕ್ಷವರ್ಣವಾಚ್ಯ ಶ್ರೀ ಲಕ್ಷ್ಮೀನರಸಿಂಹ ರೂಪ ಪರ್ಯಂತ ವರ್ಣ ಪ್ರತಿಪಾದ್ಯನಾದ ಶ್ರೀ ಪರಮಾತ್ಮನು, ಈ ಸ್ಥೂಲ ಶರೀರದಲ್ಲಿ ಪಾದಾದಿ ಶಿರಃ ಪರ್ಯಂತ ವ್ಯಾಪಿಸಿದ್ದು, ತತ್ತ್ವಪತಿದೇವತೆಗಳಿಗೆ ಸುಖಪ್ರದನಾಗಿದ್ದು, ತತ್ತ್ವಾಭಿಮಾನಿ ದೈತ್ಯರಿಗೆ ನಿತ್ಯ ದುಃಖಪ್ರದನಾಗಿ ಕ್ರೀಡಿಸುವನು. ಭಗವದ್ವೇಷಿಗಳಾದ ಅಸುರರನ್ನು ಸಂಹರಿಸುವನು.

"ಓಂ" ಕಾರ ಪ್ರತಿಪಾದ್ಯನಾದ ಶ್ರೀ ಪರಮಾತ್ಮನು ಅ-ಕಾರ, ಉ-ಕಾರ, ಮ-ಕಾರ ವಾಚ್ಯನಾಗಿದ್ದು, ಈ ಸ್ಥೂಲ ದೇಹದಲ್ಲಿ ತ್ರಿಸ್ಥಾನಗತನಾಗಿ ಅಂದರೆ ಬಲಗಣ್ಣಿನ ತುದಿಯಲ್ಲಿ ಆಕಾರ ವಾಚ್ಯ ವಿಶ್ವನಾಮಕನಾಗಿಯೂ, ಕಂಠದಲ್ಲಿ ಉಕಾರ ವಾಚ್ಯ ತೈಜಸನಾಮಕನಾಗಿಯೂ ಮತ್ತು ಹೃದಯದಲ್ಲಿ ಮಕಾರ ವಾಚ್ಯ ಪ್ರಾಜ್ಞನಾಮಕನಾಗಿಯೂ ಇದ್ದು, ಅನಿರುದ್ಧಾದಿ ಪಂಚ ರೂಪಗಳಿಂದ ಪೂರ್ವೋಕ್ತ ಸ್ಥಾನತ್ರಯಗಳಲ್ಲಿ ೫ × ೩ = ೧೫ ರೂಪಗಳಿಂದಲೂ (ತ್ರಿಪಂಚಕ), ಪಂಚಕರ್ಮೇಂದ್ರಿಯಗಳು = ೫, ಪಂಚ ಜ್ಞಾನೇದ್ರಿಯಗಳು = ೫, ಪಂಚ ಭೂತಗಳು = ೫, ಪಂಚ ತನ್ಮಾತ್ರಗಳು = ೫ ಮತ್ತು ಮನಸ್ಸು = ೧. ಹೀಗೆ ಒಟ್ಟು ೨೧ ರೂಪಗಳಿಂದಲೂ (ಏಕವಿಂಶತಿ) ಮತ್ತು ೨೪ ತತ್ತ್ವಗತನಾಗಿ ಚತುರ್ವಿಂಶತಿ ರೂಪಗಳಿಂದಲೂ, ಈ ದೇಹದಲ್ಲಿ ಆದ್ಯಂತ ಓತಪ್ರೋತನಾಗಿ ವ್ಯಾಪಿಸಿರುವ ೭೨ ಸಾವಿರ ನಾಡಿಗಳಲ್ಲಿ (೨೪ ತತ್ತ್ವಗಳು × ತ್ರಿಗುಣಗಳು × ವಿಶ್ವಾದಿ ಸಹಸ್ರ ರೂಪಗಳು = ೭೨೦೦೦ ಭಗವದ್ರೂಪಗಳು) ನಿಯಾಮಕನಾಗಿದ್ದು, ಸೂರ್ಯನ ಸಹಸ್ರ ಕಿರಣಗತನಾಗಿ ಈ ಜಗತ್ತಿನಲ್ಲಿ ಸರ್ವತ್ರ ಪ್ರಕಾಶಿಸುತ್ತಿರುವನು.

ಮುಂದಿನ ಪದ್ಯದಿಂದ ದೇಹ ಚತುಷ್ಟಯಗತ ರೂಪೋಪಾಸನೆ ತಿಳಿಸುತ್ತಾರೆ. ಜೀವನ ಸ್ವರೂಪದಲ್ಲಿ ವಿಶ್ವನಾಮಕ ಪರಮಾತ್ಮ, ಅನಾದಿ ಲಿಂಗ ಶರೀರದಲ್ಲಿ ಹಯಗ್ರೀವ ರೂಪಿ ಪರಮಾತ್ಮ, ಅನಿರುದ್ಧ ದೇಹದಲ್ಲಿ ಮೂಲೇಶನಾಮಕನು ಮತ್ತು ಸ್ಥೂಲ ದೇಹದಲ್ಲಿ ಅಚ್ಯುತನಾಮಕ ಪರಮಾತ್ಮನು ವಿದ್ಯಮಾನನಾಗಿದ್ದು ಅಚ್ಯುತ, ಅನಂತ, ಗೋವಿಂದ ಮತ್ತು ಹಂಸ ಎಂಬ ನಾಲ್ಕು ಹೆಸರುಗಳಿಂದ ಶಾಂತಿರಮಣನಾದ ಅನಿರುದ್ಧನು ಅನಿರುದ್ಧ-ಪ್ರದ್ಯುಮ್ನ ಅನಿರುದ್ಧ-ಸಂಕರ್ಷಣ ಅನಿರುದ್ಧ-ವಾಸುದೇವ ಮತ್ತು ಅನಿರುದ್ಧ-ನಾರಾಯಣ ಎಂಬ ನಾಲ್ಕು ರೂಪಗಳಿಂದ ಕ್ರೀಡಿಸುತ್ತಿರುವ ಪರಮಾತ್ಮನ ೧೯ ರೂಪಗಳನ್ನು (ಏಕೋನವಿಂಶತಿ ಮೂರ್ತಿ) ಸರ್ವತ್ರ ಉಪಾಸನೆ ಮಾಡಬೇಕೆಂದು ತಿಳಿಸುತ್ತಾರೆ. ಈ ೧೯ ರೂಪಗಳ ವಿವರಗಳನ್ನು ಮೂರನೆಯ ಪದ್ಯದ ವ್ಯಾಖ್ಯಾನದಲ್ಲಿ ಕೊಟ್ಟಿದೆ.

ನಾಲ್ಕನೆಯ ಪದ್ಯದಲ್ಲಿ ಭಾವನಾ ಪ್ರಕಾರ ಚಿಂತನಾಕ್ರಮವನ್ನು ಸದೃಷ್ಟಾಂತ ವಿವರಿಸುತ್ತಾರೆ. ಸ್ವಚ್ಛವಾದ ಕನ್ನಡಿಯಲ್ಲಿ ಸಮಸ್ತ ವಸ್ತುಗಳೂ ಪ್ರತಿಫಲಿಸಿ ಸ್ಪಷ್ಟ ರೂಪದಲ್ಲಿ ಗೋಚರಿಸುವುವು. ವಸ್ತುಗಳ ಸ್ವಚ್ಛವಾದ ಪ್ರತಿಬಿಂಬೋತ್ಪತ್ತಿಗೆ ಉಪಾಧಿಯಾದ ಕನ್ನಡಿಯು ನಿರ್ಮಲವಾಗಿರಬೇಕು. ಅಂತೆಯೇ, ಬಿಂಬ ರೂಪನಾದ ಶ್ರೀ ಪರಮಾತ್ಮನು ಸರ್ವ ಜಡ ಜೀವರಲ್ಲಿದ್ದು ಪ್ರಕಾಶಿಸುವನು. ಶಶ್ವದೇಕ ಪ್ರಕಾರನೂ. ನಿತ್ಯನೂ. ಸರ್ವದಾ ಏಕ ಪ್ರಕಾರವಾಗಿ ನಿರ್ವಿಕಾರನಾಗಿ ಜಗತ್ತಿನಲ್ಲಿ ವ್ಯಾಪ್ತನಾಗಿದ್ದರೂ. ಅವುಗಳ ಗುಣ ದೋಷಗಳಿಂದ ನಿರ್ಲೇಪನಾಗಿ, ಜೀವ ಜಡವರ್ಗದಿಂದ ಅತ್ಯಂತ ಭಿನ್ನನಾಗಿರುವ ಆ ಬಿಂಬನು ಸರ್ವ ದೋಷವಿದೂರನು. ಮುಕ್ತಿಯೋಗ್ಯರಾದ ಸಾತ್ವಿಕ ಜೀವರ ಸ್ವರೂಪದಲ್ಲಿ ಅವರವರ ಯೋಗ್ಯತಾನುಸಾರ ಬಿಂಬನು ಪ್ರಕಾಶಿಸುತ್ತಿರುವನು.

ಸ್ವರೂಪದೇಹ, ಅನಾದಿಲಿಂಗ ಶರೀರ, ಅನಿರುದ್ಧದೇಹ ಮತ್ತು ಸ್ಥೂಲ ಶರೀರಗಳೆಂಬ ತನುಚತುಷ್ಟಯಗಳಲ್ಲೂ. ಅನ್ನಮಯಾದಿ ಪಂಚ ಕೋಶಗಳಲ್ಲಿಯೂ, ತ್ವಗಾದಿ ಸಪ್ತಧಾತುಗಳಲ್ಲಿಯೂ. ಭಾರತೀರಮಣ

ರಾದ ಮುಖ್ಯ ಪ್ರಾಣದೇವರು. ಈ ಸ್ಥೂಲದೇಹದಲ್ಲಿ ವಿದ್ಯಮಾನರಾಗಿದ್ದು **"ಹಂಸ ಸ್ಸೋಹಂ ಸ್ವಾಹ"** ಎಂಬ ಷಡಕ್ಷರಾತ್ಮಕ ಹಂಸ ಮಂತ್ರರೂಪ ನಾದ ೨೧೬೦೦ ಸಂಖ್ಯಾಕವಾದ ಶ್ವಾಸ ಜಪಗಳನ್ನು ಸೂರ್ಯ ಮತ್ತು ಚಂದ್ರ ರಲ್ಲಿ ಇದ್ದು. ಬಲ ಮತ್ತು ಎಡ ಶ್ವಾಸಕಾರ್ಯಗಳನ್ನು ಮಾಡಿಸುತ್ತಾ. ಆ ವಾಯು ದೇವರ ಅಂತರ್ಗತನಾದ ಹಂಸನಾಮಕ ಪರಮಾತ್ಮನು ಈ ಬ್ರಹ್ಮಾಂಡದಲ್ಲಿ ಸರ್ವಕಾಲ ದೇಶಾದಿಗಳಲ್ಲಿ ಪರಿಪೂರ್ಣ ರೂಪದಿಂದ ತುಂಬಿ ರುವನು ಎಂದು ನಿರೂಪಿಸಿರುತ್ತಾರೆ. ಮುಂದಿನ ಪದ್ಯದಿಂದ.

೬ನೆಯ ಪದ್ಯದಲ್ಲಿ **ವಾಙ್ಮನೋಮಯ ರೂಪೋಪಾಸನೆ** ವಿವರಿಸು ತ್ತಾರೆ. ಪಂಚಭೂತಗಳಿಗೆ ಆಧಾರವಾದ ಪಂಚಕೋಶಗಳೇ ೫ ತಲೆಗಳು, ದಶೇಂದ್ರಿಯಗಳೇ ಹತ್ತು ಬಾಹುಗಳು (ಐದೆರಡು). ಶುಭಾಶುಭವೆಂಬ ಕರ್ಮದ್ವಯಗಳೇ ಎರಡು ಪಾದಗಳು, ಮಧ್ಯಗಳ ಉದರ ಪ್ರದೇಶ ಒಂದು. ಈ ರೀತಿ ದೇಹಗತ ರೂಪದಿಂದ ಪರಿಶೋಭಿಸುತ್ತಾ. ವಾಗಿಂದ್ರಿಯ ದ್ವಾರಾ ವಾಗ್ವ್ಯಾಪಾರಗಳನ್ನು ಮಾಡುತ್ತಾ, ಮನಸೇಂದ್ರಿಯ ದ್ವಾರಾ ಪಂಚ ಮನೋವೃತ್ತಿಗಳ ಕ್ರಿಯೆಗಳನ್ನು ನಿರ್ವಹಿಸುತ್ತಾ. **ವಾಙ್ಮನೋಮಯ** ನಂದೆನಿಸಿ. ನಿರಂತರದಿ ಏಕಾದಶೇಂದ್ರಿಯಗಳಲ್ಲಿ, ಸಪ್ತಧಾತುಗಳಲ್ಲಿ, ೭೨.೦೦೦ ಸಂಖ್ಯಾಕವಾದ ನಾಡಿವ್ಯೂಹದಲ್ಲಿ ವಿದ್ಯಮಾವನಾಗಿದ್ದು, ಪಂಚಮ ವೇದವೆಂದು ಖ್ಯಾತವಾಗಿರುವ ಭಾರತ ಪ್ರತಿಪಾದ್ಯನಾಗಿ, ಸರ್ವದೋಷ ವಿವರ್ಜಿತನಾದ ಶ್ರೀ ಪರಮಾತ್ಮನು ಸಕಲ ದೇಹಗತ ವ್ಯಾಪಾರಗಳನ್ನೂ ಮಾಡುತ್ತಿರುವನು.

ಚತುಷ್ಷಷ್ಟಿ ಕಳಾಧಾರಕ ವಿಷ್ಣ್ವಾದಿರೂಪಗಳನ್ನು ತಿಳಿಸುತ್ತಾರೆ. ಮುಂದಿನ ೭ನೆಯ ಪದ್ಯದಿಂದ. ಈ ಸ್ಥೂಲ ದೇಹಕ್ಕೆ ಶುಕ್ಲ ರೂಪಾವಸ್ಥೆ. ಗರ್ಭೋತ್ಪತ್ತಿ, ಅವಯುವಗಳ ಬೆಳವಣಿಗೆ, ದೇಹವೃದ್ಧಿ, ವಾರ್ಧಕ್ಯದಿಂದ ಶರೀರಕ್ಷೀಣ, ಮರಣದಿಂದ ದೇಹ ನಾಶ-ಈ ರೀತಿಯಾದ ಆರು ವಿಕಾರ ಗಳುಂಟು. ಇವುಗಳಿಗೆ **ಷಡೂರ್ಮಿ**ಗಳೆಂದು ಹೆಸರು. ಇಂತು, ಷಡೂರ್ಮಿ ಗಳಲ್ಲಿಯೂ, ಪೃಥ್ವ್ಯಾದಿ ಪಂಚಭೂತಗಳಲ್ಲಿಯೂ. **"ಉದೀತ್ಯಂ ಜಾತವೇ**

**ರಸಂ**" ಎಂಬ ಋುಕ್ಕಿನಿಂದ "**ರಂಥಂಯುನ್ಮ್ಯೋsಹಂ**" ಪರ್ಯಂತ ಇರುವ ಹದಿನಾರು ಋುಕ್ಕುಗಳಿಂದ (ಆರಧಿಕದಳ ಋುಗ್ವಿನುತ) ಸ್ತುತ್ಯನಾದ ಲಕ್ಷ್ಮೀಪತಿಯು ವಿಶ್ವಾದಿ ಸಹಸ್ರ ರೂಪಗಳಿಂದ ವಿದ್ಯಮಾನನಾಗಿದ್ದು. ಚತುರ್ವೇದಗಳು (ಋುಗಾದಿ) ಆಯುರ್ವೇದಾದಿ ನಾಲ್ಕು ಉಪವೇದಗಳು, ಶಿಕ್ಷಾದಿ ಷಡಂಗಗಳೂ ಸೇರಿ ಒಟ್ಟು ೧೪ ವಿದ್ಯೆಗಳಿಗೆ ಪ್ರವರ್ತಕನಾಗಿ, ಅಂದರೆ ಚತುಷ್ಷಷ್ಟಿ ಕಳಾಧಾರಕನಾಗಿದ್ದು, ಬ್ರಹ್ಮ ಮತ್ತು ರುದ್ರಾದಿ ಮುಖ್ಯ ದೇವತೆಗಳಲ್ಲಿ ತಾನೆ ಇದ್ದು, ಈ ಜಗತ್ತಿನಲ್ಲಿ ಚಾತುರ್ವರ್ಣಗಳಿಗೆ ಧರ್ಮ ಕರ್ಮ ಪ್ರವರ್ತಕನಾಗಿ "**ಚತುಷ್ಪಾತ್**" ಎಂದೆನಿಸಿ ಕ್ರೀಡಿಸುತ್ತಿರುವನು.

ಮುಂದಿನ ೮ನೆಯ ಪದ್ಯದಿಂದ ಸರ್ವ ಜೀವರ ತನು ಚತುಷ್ಟಯಗತ ಅಕ್ಷರ ಸಂಖ್ಯಾ ರೂಪಗಳ ವಿವರಣೆ ಮಾಡುತ್ತಾರೆ, ತೃಣಾದಿ ಬ್ರಹ್ಮ ಪರ್ಯಂತ ಸಮಸ್ತ ಜೀವರ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲ ಎಂಬ ನಾಲ್ಕು ಶರೀರಗಳಲ್ಲಿ ಮೂಲ ರೂಪಿ ಶ್ರೀ ಮನ್ನಾರಾಯಣನು ೧೫೨೬ ಅಕ್ಷರ ಸಾಂಕೇತ ರೂಪಗಳನ್ನು ಧರಿಸಿ ಇದ್ದಾನೆಂದು ಚಿಂತಿಸಿ. ಉಪಾಸನೆ ಮಾಡುವ, ಸೂರ್ಯ, ಆದಿತ್ಯಾದಿ ನಾಮಗಳನ್ನು ಜಪಿಸುವ ಜ್ಞಾನಿಗಳಿಗೆ **ಘೃಣೀ** ನಾಮಕ ಶ್ರೀ ಪರಮಾತ್ಮನು ಆರೋಗ್ಯ ಮತ್ತು ಸಂಪತ್ತು ಎಂಬ ಭಾಗ್ಯವನ್ನು ಕರುಣಿಸುವನು.

೯ನೆಯ ಪದ್ಯದಲ್ಲಿ ಆಧಿಭೌತಿಕ. ಆಧ್ಯಾತ್ಮಿಕ ಮತ್ತು ಆದಿದೈವಿಕಗಳೆಂಬ ಅಧಿಷ್ಠಾನತ್ರಯಗಳಲ್ಲಿ ಇರುವ ಅಕ್ಷರ ಸಂಖ್ಯಾ ಭಗವದ್ರೂಪಗಳ ವಿವರಣೆಯನ್ನು ತಿಳಿಸುತ್ತಾರೆ. ಅಧಿಭೂತ ಎಂಬ ಸೂರ್ಯನ ವಾಸಸ್ಥಾನವಾದ ಕಣ್ಣಿನ ಗುಡ್ಡೆ ಎಂಬ ಗೋಳಕದಲ್ಲಿ "**ಘೃಣೀ**" ನಾಮಕನ ೫೨೪ ಅಕ್ಷರ ಸಾಂಕೇತ ರೂಪಗಳು. ಅಧ್ಯಾತ್ಮನೆಂಬ ಸೂರ್ಯನಲ್ಲಿ ೭೭೧ ರೂಪಗಳು ಮತ್ತು ಆಧಿದೈವವೆಂಬ ಆಧಿತ್ಯನಲ್ಲಿ ೨೩೧ ರೂಪಗಳ ಚಿಂತನೆಯನ್ನು ಜ್ಞಾನಿಗಳು ಅನುಸಂಧಾನದಿಂದ ಮಾಡಬೇಕೆಂದು ನಿರುಪಿಸುತ್ತಾರೆ.

ಮುಂದಿನ ೧೦ನೆಯ ಪದ್ಯದಲ್ಲಿ ಸಾವನಮಾನ ಸಂವತ್ಸರಗತ ರೂಪ ಚಿಂತನಾ ಕ್ರಮವನ್ನು ತಿಳಿಸುತ್ತಾರೆ.

**ಸುರುಚಿ** ಎಂಬ ವಿಶೇಷ ಪ್ರಕಾಶವುಳ್ಳ ಸೂರ್ಯನಲ್ಲಿಯೂ ಮತ್ತು **ಶಾರ್ವರೀಕರ** ವೆಂಬ ರಾತ್ರಿ ಕಾಲದಲ್ಲಿ ಬೆಳಕನ್ನೀಯುವ ಚಂದ್ರನಲ್ಲಿಯೂ ತತ್ತನ್ನಾಮಕನಾಗಿ ಸಂಕರ್ಷಣ ಮತ್ತು ಪ್ರದ್ಯುಮ್ನ ಎಂಬ ರೂಪದ್ವಯ ಗಳಿಂದ ಇದ್ದವನಾಗಿ, ಒಂದು ಸಂವತ್ಸರದ ಕಾಲಾವಧಿಯಾದ ೩೬೦ ದಿವಸ ಗಳಲ್ಲಿ ಅದೇ ಸಂಖ್ಯಾಕವಾದ ೩೬೦ (ಅರವತ್ತಧಿಕ ಮೂನ್ನೂರು) ರೂಪ ಗಳಿಂದ **ಅಹಸ್ಸಂವತ್ಸರ** ಎಂದು ಉತ್ತಮ ನಾಮಾಧೇಯನಾಗಿ ಕರಸಿ ಕೊಳ್ಳುತ್ತಾ, ಆನಂದ ಮಯನಾದ ಆ ಜಗತ್ಪ್ರಭುವು, ಈ ರೀತಿ ತಿಳಿದು ತನ್ನ ರೂಪೋಪಾಸನೆಗೈವ ಜ್ಞಾನಿಗಳಿಗೆ ಆರೋಗ್ಯ ಐಶ್ವರ್ಯಾದಿ ಭಾಗ ಗಳನ್ನು ಕೊಡುವನು.

೧೧ನೆಯ ಪದ್ಯದಿಂದ ಏಕಪಂಚಾಶದ್ವರ್ಣಗತ ರೂಪ ಚಿಂತನಾ ಕ್ರಮ ತಿಳಿಸುತ್ತಾರೆ.

ಅಕಾರಾದಿ ಕ್ಷಕಾರ ಪರ್ಯಂತ ೫೧ ವರ್ಣಪ್ರತಿಪಾದ್ಯನಾದ ಅಜಾದಿ ಲಕ್ಷ್ಮೀನರಸಿಂಹ ಪರ್ಯಂತ ಇರುವ ರಮಾಪತಿಯು ಬ್ರಹ್ಮಾದಿ ತೃಣಾಂತ ಸರ್ವಜೀವರಲ್ಲಿ ಇದ್ದು. ಬ್ರಹಾಂಡದ ಒಳಗೆ ಹಾಗೂ ಬ್ರಹ್ಮಾಂಡದ ಹೊರಗೆ ಶ್ರೀ ರಮಾ ಅಭಿಮನ್ಯಮಾನವಾದ ಅವ್ಯಾಕೃತಾಕಾಶದಲ್ಲಿ ವ್ಯಾಪಿ ಸಿದ್ದಾನೆ. ಅನಂತಾನಂತ ವೇದಸಮೂಹಗಳಿಗೆ ಅಭಿವ್ಯಂಜಕ ಶಕ್ತಿ ಪ್ರದ ವಾಗಿದ್ದು, ಅಜಾದಿ ೫೧ ವರ್ಣ ಪ್ರತಿಪಾದ್ಯ ರೂಪಗಳಿಂದಲೇ ವ್ಯಾಕರಣಶಾಸ್ತ್ರ ಪಂಚಮವೇದವೆಂದು ಪ್ರಸಿದ್ಧವಾದ ಶ್ರೀಮನ್ಮಹಾಭಾರತ ಇತ್ಯಾದಿ ಅನೇಕ ಶಾಸ್ತ್ರ (ಬ್ರಹ್ಮಸೂತ್ರ) ಪುರಾಣಾದಿಗಳನ್ನೂ ಭಾಷಾಸಮೂಹಗಳನ್ನೂ ತಾನೇ ವೇದವ್ಯಾಸರೂಪದಿಂದ ಅವತರಿಸಿ. ನಾಲ್ಕು ಅಬ್ಜ ಮೂವತ್ತೆರಡು ಕೋಟಿ ಗ್ರಂಥಗಳನ್ನು ನಿರ್ಮಾಣಮಾಡಿ ಮನೋಜ್ಞಯ ಮತ್ತು ವಾಙ್ಮಯನೆಂದು ಪ್ರಸಿದ್ಧದಾಗಿದ್ದಾನೆ.

ಮುಂದಿನ ೧೨ನೆಯ ಪದ್ಯದಿಂದ ಶ್ರೀ ಪರಮಾತ್ಮನ "**ಭಾರಭೃತ್**" ಎಂಬ ಅಕ್ಷರ ಸಂಖ್ಯಾ ಭಗವದ್ರೂಪೋಪಾಸನಾ ಕ್ರಮ ತಿಳಿಸುತ್ತಾರೆ. ಸಮಗ್ರ

ಬ್ರಹ್ಮಾಂಡದ ಭಾರವನ್ನು ಹೊತ್ತು ಬ್ರಹ್ಮಾಂಡಕ್ಕೆ ಆಶ್ರಯದಾತನಾಗಿರುವುದರಿಂದ ಶ್ರೀ ಪರಮಾತ್ಮನಿಗೆ "**ಭಾರಭೃತ್**" ಎಂದು ಹೆಸರು. ಭಾರಭೃನ್ನಾಮಕನಾದ ಶ್ರೀ ಪರಮಾತ್ಮನು ಆದೇ ಶಬ್ದದ ಅಕ್ಷರ ಸಾಂಕೇತವಾದ ೧೬೨೪ ಭಗವದ್ರೂಪಗಳಿಂದ (ಸಾವಿರದಾರುನೂರಿಪ್ಪತ್ತುನಾಲ್ಕು ಮೂರು ತಿಂಗಳು) ಚರಾಚರಾತ್ಮಕವಾದ ಈ ಜಗತ್ತಿನಲೆಲ್ಲಾ ಪರಿಪೂರ್ಣವಾಗಿ ವ್ಯಾಪಿಸಿದ್ದಾನೆ. ಇಂತಹ ಜಗದ್ಭರಿತನ ರೂಪಗಳನ್ನು ೨೪ ತತ್ತ್ವಗಳಲ್ಲಿ (ಆರು ನಾಲಕು ಜಡಗಳು) ಮತ್ತು ಹದಿನಾರು ಕಳೆಗಳಲ್ಲಿ (ಇಂದ್ರಿಯಗಳು = ೧೦. ಮನಸ್ಸು = ೧ ಮತ್ತು ಪಂಚಭೂತಗಳು = ೫, ಎಲ್ಲಾ ಸೇರಿ ೧೦ + ೧ + ೫ = ೧೬. ಈ ಕಳಾಭಿಮಾನಿ ದೇವತೆಗಳಲ್ಲಿ) ಚಿಂತಿಸುತ್ತಿರುವ ಸಾಧಕರಿಗೆ ಸಮಸ್ತ ದೇಶದಲ್ಲಿಯೂ ತನ್ನ ಸಂದರ್ಶನ ಭಾಗ್ಯವನ್ನು ಕೊಡುವನು. ಅಂತಹ ಜ್ಞಾನಿಗಳು ವ್ಯಾಪ್ತ್ಯೋಪಾಸಕರೆನಿಸುವರು.

ಮುಂದಿನ ೧೩ನೆಯ ಪದ್ಯದಿಂದ ಆಧಾರಾಧೇಯ ರೂಪೋಪಾಸನೆ ತಿಳಿಸುತ್ತಾರೆ. ಬಂಗಾರದ ವಸ್ತುಗಳ ಮೇಲೆ ಜೋಡಿಸಿರುವ ಕುಂದಣಗತ ನವರತ್ನಗಳಂತೆ, ಶ್ರೀ ಪರಮಾತ್ಮನು ನಾನಾ ರೂಪಧಾರಕನಾಗಿ, ಬ್ರಹ್ಮಾದಿ ದೇವತೆಗಳ ಮನಸ್ಸಿನಲ್ಲಿ ಪ್ರಕಾಶಿಸುವನು. ಬ್ರಹ್ಮಾಂಡ ಭಾರವನ್ನು ಧರಿಸಿರುವುದರಿಂದ ಜಗತ್ತಿಗೇ **ಆಧಾರ** ರೂಪನಾಗಿದ್ದಾನೆ (ಬಿಸಜಜಾಂಡಧಾರಕನು) **ಆಧಾರ** ಶಬ್ದದ ಅಕ್ಷರ ಸಾಂಕೇತವಾದ ೨೪೨ ರೂಪಗಳಿಂದ (ದ್ವಿಶತ ನಾಲ್ವತ್ತೆರಡು ರೂಪದಿ) ಆಧಾರ ನಾಮಕನಾಗಿ ಬ್ರಹ್ಮ, ವಾಯು, ಇತ್ಯಾದಿ ದೇವತಾ ಸಮೂಹದ ಮನೋಮಂದಿರದಲ್ಲಿ ಬಂಗಾರದಲ್ಲಿ ಜೋಡಿಸಿರುವ ನವರತ್ನ ಮಣಿಗಳ ಕಾಂತಿಯಂತೆ ಅವರವರ ಯೋಗ್ಯತಾನುಸಾರ ಹೊಳೆಯುವನು. ಚಂದ್ರನಲ್ಲಿ ಶಶಿಕಲಾ ಇದೆ, (ಚಂದ್ರ ಮಂಡಲಗತ ಮೊಲದ ಆಕಾರ) ಚಂದ್ರನು ಈ ಕಾಲಕ್ಕೆ ಆಧಾರನು. ಕಲೆಯು ಆಧೇಯವು. ಅಂತೆಯೇ **ಆಧೇಯ** ರೂಪನಾಗಿ ಅದೇಶಬ್ದ ವಾಚ್ಯನಾಗಿ ಅಕ್ಷರ ಸಂಖ್ಯಾಕವಾದ ೧೪೨ ರೂಪಗಳಿಂದ (ನಾಲ್ವತ್ತೆರಡಧಿಕಶತ) ಚರಾ ಚರಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಅಂತಃರ್ಬಹಿಶ್ಚ ವ್ಯಾಪ್ತನಾಗಿ ಎಡಬಿಡದೆ ಇದ್ದಾನೆ. ಆಧಾರ ಮತ್ತು ಅಧೇಯ ರೂಪದ್ವಯಗಳಿಂದ.

ಸರ್ವ ಪದಾರ್ಥಗತ ಸಮಷ್ಟಿ ರೂಪವಾದ ಅಖಂಡ ರೂಪೋಪಾಸನಾ ಕ್ರಮವನ್ನು ಮುಂದಿನ ೧೪ನೆಯ ಪದ್ಯದಿಂದ ತಿಳಿಸುತ್ತಾರೆ.

| | | | |
|---|---|---|---|
| **ಭಾರಭೃತ್** | ಶಬ್ದವಾಚ್ಯ ಅಕ್ಷರಸಾಂಕೇತ ರೂಪಗಳು | = | ೧೬೨೪ |
| **ಆಧಾರ** | ಶಬ್ದವಾಚ್ಯ ಅಕ್ಷರಸಂಖ್ಯಾ ರೂಪಗಳು | = | ೨೪೨ |
| **ಆಧೇಯ** | ಶಬ್ದವಾಚ್ಯ ಅಕ್ಷರ ಸಾಂಕೇತ ರೂಪಗಳು | = | ೧೪೨ |
| | ಒಟ್ಟು | = | ೨೦೦೮ |

ಅಂದರೆ ಒಟ್ಟು ೨೦೦೮ (ಎರಡು ಸಾವಿರದ ಎಂಟು ರೂಪದ) ರೂಪಗಳಿಂದ ಭಾರಭೃನ್ನಾಮಕವಾಗಿ ಈ ಚರಾಚರಾತ್ಮಕವಾದ ಸಮಸ್ತ ಬ್ರಹ್ಮಾಂಡಕ್ಕೆ ಆಧಾರ ಮತ್ತು ಆಧೇಯನೆಂದೆನಿಸಿ ವಿದ್ಯಮಾನನಾಗಿರುವ ರಮಾಪತಿಯನ್ನು ಸರ್ವ ಪದಾರ್ಥಗತನೆಂದು ತಿಳಿದು, ಮನಸಾ ಚಿಂತಿಸಿ, ಜ್ಞಾನ, ಭಕ್ತಿ ವೈರಾಗ್ಯಗಳೆಂಬ ಭಗವತ್ಪ್ರೀತಿಕರವಾದ ಉತ್ತಮ ವರಗಳನ್ನು ಬೇಡಬೇಕೆಂದು ದಾಸರಾಯರು ಮಾರ್ಗದರ್ಶನ ತೋರಿದ್ದಾರೆ. ಈ ಉತ್ತಮಾನುಸಂಧಾನ ಮಾರ್ಗವನ್ನು ಬಿಟ್ಟು, ಕೇವಲ ಜಡ ನೀರಿನಲ್ಲಿ ಮುಳುಗಿ. ಬಿಸಿಲಿನಲ್ಲಿ ಒಣಗುತ್ತಾ, ವೃಥಾ ದೇಹ ದಂಡನೆ ಮಾಡುತ್ತಾ ಬೆರಳೆಣಿಸಿ, ಜಪ ಮಾಡಿದರೆ ಏನು ಪ್ರಯೋಜನ ? ಸದ್ಗುರುವಿನ ಉಪಸತ್ತಿಯಿಂದ, ಉಪದೇಶದ್ವಾರಾ ಜ್ಞಾನಿಗಳನ್ನು ಅನುಸರಿಸಿ, ತತ್ತ್ವಾರ್ಥಗಳ ರಹಸ್ಯವನ್ನು ಅರಿಯಬೇಕೆಂದು ದಾಸರಾಯರ ಹೃದ್ಗತಾಭಿಪ್ರಾಯವು.

ಮುಂದಿನ ೧೫ನೆಯ ಪದ್ಯದಿಂದ ಜೀವ ಸ್ವರೂಪದೇಹಸ್ಥ ವರ್ಣ ಸಂಖ್ಯಾ ರೂಪಗಳು ತಿಳಿಸುತ್ತಾರೆ. ಜೀವರ ಚಿದ್ದೇಹವೆಂಬ ಜ್ಞಾನಾಂದಾತ್ಮಕ ಸ್ವರೂಪ ಶರೀರದಲ್ಲಿ **ನೃಸಿಂಹ** ನಾಮಕನಾಗಿ ತಚ್ಛಬ್ದವಾಚ್ಯ ಅಕ್ಷರ ಸಾಂಕೇತದಿಂದ ೮೦,೭೨೫ ರೂಪಗಳಿಂದ (ಎಂಭತ್ತು ಸಾವಿರದೇಳನೂರಿಪ್ಪತ್ತು ಐದು) ಇದ್ದು, ಜೀವರಿಗೆ ಪ್ರತಿ ದಿವಸದಲ್ಲೂ ಒದಗುವ ಅಪಮೃತ್ಯು ಪರಿಹಾರಕನಾಗಿ ಭಕ್ತರಲ್ಲಿ ಅಪಾರ ಕರುಣಾಸಂಪನ್ನನಾದ,

ಸಮಸ್ತ ಭಯಪರಿಹಾರಕನಾಗಿ, ಜ್ಞಾನಾನಂದಾದಿಪೂರ್ಣೈಶ್ವರ್ಯ ಸಂಪನ್ನನಾದ ಶ್ರೀಹರಿಯು ಸಂರಕ್ಷಕನಾಗಿದ್ದಾನೆ.

ಜ್ವರ ನಿವಾರಕ ನೃಸಿಂಹೋಪಾಸನೆ ಅಕ್ಷರ ಸಂಖ್ಯಾ ಕ್ರಮವನ್ನು ೧೬ನೆಯ ಪದ್ಯದಲ್ಲಿ ತಿಳಿಸುತ್ತಾರೆ. ಜ್ವರವೆಂಬ ರೋಗದಲ್ಲಿ ತನ್ನಾಮಕನಾಗಿ ಅದೇ ಶಬ್ದವಾಚ್ಯನಾಗಿ ೨೪ ಅಕ್ಷರ ಸಾಂಕೇತ ರೂಪಗಳಿಂದ ಇದ್ದಾನೆ. **ಹರ** ಎಂಬ ನಾಮದಿಂದ ರೋಗ ನಿವಾರಕ ಔಷಧದಲ್ಲಿ ಅದೇ ಶಬ್ದದಿಂದ ವಾಚ್ಯನಾಗಿ ೨೮ ರೂಪದಿಂದ ವಿದ್ಯಮಾನನಾಗಿದ್ದಾನೆ. **ಜ್ವರಹರ** ಎಂಬ ನಾಮಧೇಯವಾಗಿ ೨೮೨೭ ಅಕ್ಷರ ಸಂಖ್ಯಾ ರೂಪಗಳಿಂದ (ಸಾವಿರದೆಂಟು ನೂರಿಪ್ಪತ್ತು ಏಳೆನಿಪ) ಇರುವ ಸರ್ವ ರೋಗನಿವಾರಕನಾದ **ನಾರಸಿಂಹನ** ಸ್ಮರಣೆ ಮಾತ್ರದಿಂದ ದುರಿತಗಳೆಂಬ ಸಮಸ್ತ ಪಾಪರಾಶಿಗಳು ಸೂರ್ಯನು ಉದಯಿಸಿದ ಕೂಡಲೇ ಮಂಜು ಮಾಯವಾಗುವಂತೆ ನಾಶವಾಗುವುವು.

ಮುಂದಿನ ೧೭ನೆಯ ಪದ್ಯದಿಂದ ಶ್ರೀ ನೃಸಿಂಹ ಮಂತ್ರ ಜಪದ ಮಹಿಮೆ ತಿಳಿಸುತ್ತಾರೆ. ಒಂದು ತಿಂಗಳ ಕಾಲ ಪೀಠಸ್ಥನಾಗಿ, ಕದಲದೆ, ಏಕಾಗ್ರಚಿತ್ತವೆಂಬ ದೃಢಮನಸ್ಸಿನಿಂದ ನಿಷ್ಕಲ್ಮಷನಾಗಿ. ಅಂದರೆ ತ್ರಿಕರಣ ಶುದ್ಧಾತ್ಮಕನಾಗಿ **ಶ್ರೀಮನ್ನೃಸಿಂಹನ** ಮಂಗಳ ನಾಮವನ್ನು ಬೇಸರಮಾಡಿಕ್ಕೊಳ್ಳದೆ. ಭಕ್ತಿ ಭಾವದಿಂದ ಜಪಿಸಿದರೆ, ಸರ್ವೋತ್ತಮನಾದ ಶ್ರೀಪರಮಾತ್ಮನು ಇಹದಲ್ಲಿ ಸರ್ವ ರೋಗಗಳನ್ನು ಪರಿಹರಿಸಿ (ರುಜೆ), ದೇಹ ರಕ್ಷಕನಾಗಿ ಮನೋಭೀಷ್ಟಗಳನ್ನು ಸಲ್ಲಿಸಿ, ದೇಹಾಂತದಲ್ಲಿ ಸದ್ಗತಿ ಎಂಬ ಮುಕ್ತಿಯನ್ನು ಕೊಡುವನು.

ಶಕವತ್ಸರ ಕಾಲಾಭಿಮಾನ್ಯಂತರ್ಗತ ಚತುಮೂರ್ತ್ಯುಪಾಸನೆ ತಿಳಿಸುತ್ತಾರೆ ಮುಂದಿನ ೧೮ನೆಯ ಪದ್ಯದಿಂದ. ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ-ಎಂಬ ನಾಲ್ಕು ರೂಪಗಳಿಂದ ಕ್ರಮವಾಗಿ ಭಾರತೀದೇವಿಯರಲ್ಲಿ, ಸರಸ್ವತೀದೇವಿಯರಲ್ಲಿ, ವಾಯುದೇವರಲ್ಲಿ ಮತ್ತು ಚತುರ್ಮುಖ ಬ್ರಹ್ಮದೇವರಲ್ಲಿ ಇದ್ದು ಕಾಲಮಾನಗಳಿಗನುಗುಣವಾಗಿ ಮಾಡುವ ಕಾರ್ಯವಿಶೇಷಗಳನ್ನು ನಿರೂಪಿಸುತ್ತಾರೆ.

(೧) ಭಾರತೀದೇವಿಯರಲ್ಲಿ ಅನಿರುದ್ಧನ ಕಾರ್ಯ =
ಮೊದಲನೆಯ ೧೮ ವರ್ಷಗಳು

(೨) ಸರಸ್ವತೀದೇವಿಯಲ್ಲಿ ಪ್ರದ್ಯುಮ್ನನ ಕಾರ್ಯ =
ಮುಂದಿನ ೨೫ ವರ್ಷಗಳು

(೩) ವಾಯುದೇವರಲ್ಲಿ ಸಂಕರ್ಷಣನ ಕಾರ್ಯ =
ಮುಂದಿನ ೨೭ ವರ್ಷಗಳು

(೪) ಬ್ರಹ್ಮದೇವರಲ್ಲಿ ವಾಸುದೇವನ ಕಾರ್ಯ =
ಉಳಿದ ೩೦ ವರ್ಷಗಳು

---

ಒಟ್ಟು ಆಯುರ್ಮಾನ = ೧೦೦ ವರ್ಷಗಳು

---

ಮುಂದಿನ ೧೯ ನೆಯ ಪದ್ಯದಿಂದ ಸ್ಥೂಲ ಶರೀರಗತ ೭೨,೦೦೦ ನಾಡ್ಯಂತರ್ಗತ ಭಗವದ್ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ. ಒಂದು ವರ್ಷಕ್ಕೆ ೩೬೦ ದಿವಸಗಳು. ಮಾನವನ ಆಯುಃ ಪ್ರಮಾಣ ೧೦೦ ವರ್ಷಗಳಿಗೆ ೩೬೦ × ೧೦೦ = ೩೬,೦೦೦ ದಿವಸಗಳಾಗುವುವು. ಈ ಸ್ಥೂಲ ದೇಹದಲ್ಲಿ ೭೨,೦೦೦ ನಾಡಿಗಳು ಓತಪ್ರೋತವಾಗಿ ವ್ಯಾಪಿಸಿಕೊಂಡಿವೆ. ದೇಹದ ಬಲಭಾಗದಲ್ಲಿ ೩೬,೦೦೦ ನಾಡಿಗಳು ಪುಂನಾಡಿಗಳು. ಅಷ್ಟು ಪುರುಷ ರೂಪಗಳಿಂದ ಈ ಪುಂನಾಡಿಗಳೆಂಬ ದಿವಾನಾಡಿಗಳಲ್ಲಿರುವನು. ಅಂತೆಯೇ ಶರೀರದ ಎಡಭಾಗದಲ್ಲಿರುವ ೩೬.೦೦೦ ಸ್ತ್ರೀನಾಡಿಗಳಲ್ಲಿ ಅಷ್ಟೇ ರೂಪಗಳಿಂದ ಸ್ತ್ರೀರೂಪಗಳಿಂದ ನಿಶಾ ನಾಡಿಗಳಲ್ಲಿದ್ದು, ನಾಡಿಗತ ವ್ಯಾಪಾರಗಳನ್ನು ಬಿಂಬಕ್ರಿಯಾ ದ್ವಾರಾ ತಾನು ಮಾಡಿ, ನಾಡ್ಯಭಿಮಾನಿ ದೇವತೆಗಳ ದ್ವಾರಾ ಮಾಡಿಸುತ್ತಿರುವನು. ಇಂತು ೭೨,೦೦೦ ನಾಡಿಗತನಾಗಿ ಸರ್ವದೇಶ ಮತ್ತು ಕಾಲಗಳಲ್ಲಿ ಪರಿಪೂರ್ಣನಾಗಿದ್ದು. ಹಗಲು ಮತ್ತು ರಾತ್ರಿಗಳೆಂಬ ಕಾಲಮಾನಗಳ ಕ್ರಿಯೆಗಳನ್ನು ಮಾಡಿಸುತ್ತಿರುವನೆಂದರಿತು, ಆ ಸರ್ವಾಧಾರನಾದ ಶ್ರೀಪರಮಾತ್ಮನನ್ನು ಗುಣಪರಿಪೂರ್ಣನೆಂದು ಪೂಜಿಸಬೇಕೆಂದು ತಿಳಿಸುತ್ತಾರೆ.

ಕಾಲ, ಕರ್ಮ, ಗುಣ, ಸ್ವಭಾವಗಳ ನಿಯಾಮಕ ರೂಪಸ್ಮರಣೋಪಾಸನಾಕ್ರಮ ತಿಳಿಸುತ್ತಾರೆ ಮುಂದಿನ ೨೦ನೆಯ ಪದ್ಯದಿಂದ. ಭೂತ ಭವಿಷ್ಯದ್ವರ್ತಮಾನವೆಂಬ ಪ್ರವಾಹತೋನಿತ್ಯವಾದ ಕಾಲದಲ್ಲಿ, ಸುಕರ್ಮ, ದುಷ್ಕರ್ಮ ಮತ್ತು ಮಿಶ್ರ ಕರ್ಮಗಳೆಂಬ ಕರ್ಮತ್ರಯಂಗಳಲ್ಲಿ, ಸತ್ವರಸಸ್ತಮಗಳೆಂಬ ತ್ರಿಗುಣಗಳಲ್ಲಿ ಮುಕ್ತಿಯೋಗ್ಯ, ತಮೋಯೋಗ್ಯ ಮತ್ತು ನಿತ್ಯ ಸಂಸಾರಿಗಳೆಂಬ ತ್ರಿವಿಧಜೀವರ ಸ್ವಭಾವದಲ್ಲಿ, ರಮಾಲೋಲನಾದ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದು, ತದ್ರೂಪನಾಗಿ, ತತ್ತನ್ನಾಮಕನಾಗಿ ತಚ್ಛಬ್ದವಾಚ್ಯನಾಗಿ ಕರೆಯಿಸಿಕೊಳ್ಳುತ್ತಾ. ಲೀಲಾವಿಶಿಷ್ಟನಾಗಿ, ನಿರಾಯಾಸವಾಗಿ, ತನ್ನ ಸಂಕಲ್ಪಮಾತ್ರದಿಂದಲೇ ಸಮಸ್ತ ಜೀವರಾಶಿಗಳ ಸೃಷ್ಟಿ, ಪಾಲನೆ ಮತ್ತು ಸಂಹಾರಗಳೆಂಬ ಕ್ರಿಯಾ ವಿಶೇಷಗಳನ್ನು ಲೀಲಾಜಾಲವಾಗಿ, ಮೂಲಪ್ರಕೃತಿಯ ಸಹಜ ಗುಣಗಳಾದ ಸತ್ವರಜಸ್ತಮೋಗುಣತ್ರಯಗಳ ವೈಷಮ್ಯದಿಂದ, ಪ್ರವರ್ತನದಿಂದ ಮತ್ತು ಸಾಮ್ಯದಿಂದ ಮಾಡುತ್ತಿರುವನು.

ಜೀವರ ಯೋಗ್ಯತಾನುಸಾರವಾಗಿ ಬಿಂಬನಾದ ಶ್ರೀಹರಿಯು ಕರ್ಮ ಪ್ರೇರಿಸಿ, ಅದಕ್ಕನುಗುಣವಾದ ಫಲಗನ್ನು ಕೊಡುತ್ತಾನೆ ಎಂಬ ತತ್ತ್ವವನ್ನು ಒಂದು ಸುಂದರವಾದ ಉಪಮಾನದಿಂದ ವಿವರಿಸುತ್ತಾರೆ ಜ್ಞಾನಿ ಶ್ರೇಷ್ಠದಾಸರಾಯರು. ಪ್ರಣತಿಯಲ್ಲಿರುವ ಎಣ್ಣೆ ಮತ್ತು ಭಕ್ತಿಗಳಿಗನುಗುಣವಾಗಿ ದೀಪವು ಪ್ರಜ್ವಲಿಸಿ ಪ್ರಕಾಶಿಸುವಂತೆ, ಕಮಲದಳಾಯತನೇತ್ರನಾದ ಶ್ರೀಪರಮಾತ್ಮನು ತನ್ನ ಅಂತರಂಗಭಕ್ತರ ಮನಸ್ಸೆಂಬ ಮಂದಿರದಲ್ಲಿ ಅವರ ಜ್ಞಾನ, ಭಕ್ತಿ ಮತ್ತು ಕರ್ಮಗಳಿಗನುಸಾರ ಒಲಿದು. ಪ್ರಕಾಶಿಸಿ, ಮನೋಮಂದಿರದಲ್ಲಿ ಹಬ್ಬಿರುವ ಅಜ್ಞಾನವೆಂಬ ಕತ್ತಲೆಯನ್ನು ನಿವಾರಿಸಿ. ತನ್ನ ಗುಣ ರೂಪ ಕ್ರಿಯಾದಿಗಳ ಸಂದರ್ಶನರೂಪವಾದ ಭಾಗ್ಯವನ್ನೀಯುವನು.

ಮಾನವ, ತಿರ್ಯಕ್ ಜಂತುಗಳು ಇವೇ ಮುಂತಾದ ಯಾವ ಯೋನಿಗಳಲ್ಲಿ ಸೃಷ್ಟಿಸಲಿ, ಅಂದರೆ ಯಾವ ಜನ್ಮರೂಪವಾದ ದೇಹವನ್ನು ಕೊಡಲಿ, ಈ ಭೂತಳದಲ್ಲಿ ಯಾವ ದೇಶದಲ್ಲಾದರೂ ಜನ್ಮ ಕೊಡಲಿ, ಅಥವಾ ಬ್ರಹ್ಮಾಂಡಾಂತರ್ಗತ ಯಾವ ಲೋಕದಲ್ಲಾದರೂ ಇಡಲಿ, ಬ್ರಾಹ್ಮಣಾದಿ ಯಾವ ಜಾತಿಯಲ್ಲಾದರೂ ಹುಟ್ಟಿಸಲಿ, ಅವಸ್ಥಾವಿಶೇಷಗಳು ಯಾವು

ದಾದರೂ ಪ್ರಾಪ್ತವಾಗಲಿ, ಸಮಸ್ತ ಜಡಚೇತನರಾಶಿಗಳಲ್ಲಿ ಅಕ್ಷರನಾಮಕ ರಾದ ಶ್ರೀ ಲಕ್ಷ್ಮೀದೇವಿಯರಿಗಿಂತಲೂ ಅನಂತಾನಂತಗುಣಗಳಿಂದ ಉತ್ತ ಮೋತ್ತಮನಾದ ಆ ಪರಾವರೇಶನ ಗುಣ ರೂಪ ಕ್ರಿಯಾದಿಗಳ ವ್ಯಾಪಾರ ವಿಶೇಷಗಳನ್ನು ಸರ್ವದಾ ಚಿಂತಿಸುತ್ತಾ, ಸಮೀಚೀನವಾದ ಜ್ಞಾನ ಮತ್ತು ನಿರ್ಮಲ ಹಾಗೂ ನಿಶ್ಚಲವಾದ ಭಕ್ತಿ ಭಾಗ್ಯಗಳನ್ನು ಬೇಡು ಮತ್ತು ಆ ಅಗಮ್ಯ ಮಹಿಮನ ಗುಣವಿಶೇಷಗಳನ್ನು ಕೊಂಡಾಡುತ್ತಿರು ಎಂದು ತಿಳಿಸು ತ್ತಾರೆ ಮುಂದಿನ ೨೨ನೆಯ ಪದ್ಯದಿಂದ.

ಮುಂದಿನ ೨೩ನೆಯ ಪದ್ಯದಿಂದ, ಶ್ರೀ ಪರಮಾತ್ಮನ ಅನಂತಾನಂತ ರೂಪ ಗುಣ ಕ್ರಿಯಾದಿಗಳನ್ನು ತಿಳಿಸುತ್ತಾರೆ. ಜಗದ್ಭರಿತನಾದ ಆ ಪರಾವರೇಶನ ಮಹಿಮೆ ಅಚಿಂತ್ಯ ಮತ್ತು ಪರಮಾದ್ಭುತ. ಆ ಇಂದಿರೇಶನ ಒಂದು ರೂಪದಲ್ಲಿ ಅನಂತರೂಪಗಳು ಅಡಕವಾಗಿವೆ. ಪ್ರತಿಯೊಂದು ಗುಣ ದಲ್ಲಿಯೂ ಅನಂತಾನಂತ ಗುಣ ಸಮೂಹಗಳು. ಒಂದೊಂದು ಕ್ರಿಯೆಯಲ್ಲಿ ಅನಂತಕ್ರಿಯಾ ವಿಶೇಷಗಳು ಬೆರೆದಿವೆ. ಆ ಅನಂತಾನಂತ ಗುಣ, ರೂಪ, ಕ್ರಿಯಾದಿಗಳೆಲ್ಲವೂ ಪರಿಪೂರ್ಣವೇ. ಜಗದ್ವ್ಯಾಪ್ತನಾದ ಆ ಅಚಿಂತ್ಯಮಹಿಮನ ಅನಂತಾನಂತ ಹಾಗೂ ಪರಿಪೂರ್ಣರೂಪವಾದ ರೂಪ ಗುಣ ಕ್ರಿಯಾದಿಗಳ ವಿವರಣೆಯನ್ನು ಒಂದು ಸುಂದರವಾದ ದೃಷ್ಟಾಂತದಿಂದ ನಿರೂಪಿಸುತ್ತಾರೆ. ದಾಸರಾಯರು. ಸಮುದ್ರದ ನೀರಿನಲ್ಲಿ ಬಟ್ಟೆಯಿಂದ ನಿರ್ಮಿಸಿದ ಮನೆ ಯನ್ನು ಕಲ್ಪಿಸಿಕೊಂಡರೆ, ಆ ಬಟ್ಟೆಯ ಪ್ರತಿ ನೂಲಿನ ದಾರದಲ್ಲಿಯೂ (ತಂತುವಿನಲ್ಲಿ), ಉದಕ ಬಿಂದುಗಳು ಅಸಂಖ್ಯಾತವಾಗಿ ವ್ಯಾಪ್ತವಾಗಿರು ವುವು. ಅಂತೆಯೇ ಈ ಚರಾಚರಾತ್ಮಕವಾದ ಬ್ರಹ್ಮಾಂಡದಲ್ಲಿ ಅಂತರ್ಬಹಿಶ್ಚ ಸರ್ವತ್ರ ವ್ಯಾಪ್ತನಾಗಿ, ಓತಪ್ರೋತವಾಗಿ ಜಗದಾದ್ಯಂತ ತುಂಬಿರುವನು ಎಂದು ಸಿಂಧುರಾಜನೊಳಿರುವ ಅಂಬರಾಲಯದ ದೃಷ್ಟಾಂತದಿಂದ ಹೃದ ಯಂಗಮವಾಗಿ ಚಿತ್ರಿಸಿದ್ದಾರೆ. ಶ್ರೀ ಪರಮಾತ್ಮನ ಅಚಿಂತ್ಯಾದ್ಭುತ ಮಹಿಮೆಯನ್ನು ಇನ್ನೂ ವಿಸ್ತಾರವಾಗಿ ವಿವರಿಸುತ್ತಾರೆ-ಮುಂದಿನ ೨೪ನೆಯ ಪದ್ಯದಿಂದ.

ಜಗದ್ಧಾರಕರ್ತನೂ, ಜಗತ್ತಿನ ಸೃಷ್ಟಿ, ಪಾಲನೆ ಮತ್ತು ಲಯಗಳಿಗೆ ಮುಖ್ಯ ಕಾರಣನೂ ಆದ ಶ್ರೀ ಪರಮಾತ್ಮನ ಒಂದೊಂದು ರೂಪದಲ್ಲಿಯೂ, ಕರಚರಣಾದಿ ಪ್ರತಿ ಅವಯುವಗಳಲ್ಲಿಯೂ, ಚಿದಾನಂದಾತ್ಮಕನ ದೇಹಗತ ಒಂದೊಂದು ಭಾಗದಲ್ಲಿಯೂ, ಪ್ರತಿ ರೋಮದಲ್ಲಿಯೂ, ಅನಂತಾನಂತ ಬ್ರಹ್ಮಾಂಡಗಳು ಇವೆ. ಹಿಂದೆ ಮಾರ್ಕಂಡೇಯ ಮುನಿಯು, ವಿದ್ಯಮಾನವಾಗಿರುವ ಬ್ರಹ್ಮಾಂಡ ಸ್ಥಿತಿ ಕಾಲದಲ್ಲಿಯೇ. ಪ್ರಳಯವನ್ನು ಕಾಣುವವನಾದನು, ಆ ಮಹಾ ಪ್ರಳಯೋದಕದಲ್ಲಿ ತಾನು ಸಂಚರಿಸುತ್ತಾ, ವಟಪತ್ರ ಶಯನನಾದ ಬಾಲರೂಪಿ ಶ್ರೀಮನ್ನಾರಾಯಣನನ್ನು ಕಂಡು, ಪರಮಾತ್ಮನ ಶ್ವಾಸದಿಂದ ಆಕರ್ಷಿತನಾಗಿ, ನಾಸಿಕಾದ್ವಾರಾ ಉದರಪ್ರವೇಶ ಮಾಡಿ, ಅಲ್ಲಿ ಸ್ಥಿತಿ ವ್ಯಾಪಾರವನ್ನು ಕಂಡು, ಪುನಃ ಶ್ವಾಸದಿಂದ ಅದೇ ನಾಸಿಕಾ ಮಾರ್ಗವಾಗಿ ಹೊರಗೆ ಬಂದು, ಪ್ರಳಯವನ್ನು ಕಂಡವನಾಗಿದ್ದಾನೆ. ಅಂತಹ ಶ್ರೀ ಪರಮಾತ್ಮನ ಒಂದೊಂದು ರೋಮದಲ್ಲಿ ಅನಂತಾನಂತ ಬ್ರಹ್ಮಾಂಡಗಳು ಅಡಗಿವೆ. ಅನಾದ್ಯನಂತಕಾಲಕ್ಕೂ ಆ ಇಂದಿರೇಶನ ಮಹಾ ಮಹಿಮೆಗಳನ್ನು ರಮಾಬ್ರಹ್ಮಾದಿಗಳೂ ಸಾಕಲ್ಯೇನ ಅರಿಯರು. ಅಂತಹ ಅಪ್ರಮೇಯನಲ್ಲಿ ಏಕರೂಪದಲ್ಲಿ ಸರ್ವತ್ರ ಅಡಗಿರುವ ವಿಷಯವು ಏನೇನೂ ಅಚ್ಚರಿಯಲ್ಲವೆಂದು ಆ ಭಗವಂತನ ಅಚಿಂತ್ಯ ಮಹಿಮೆಯನ್ನು ಕೊಂಡಾಡುತ್ತಾರೆ.

ಮುಂದಿನ ೨೫ನೆಯ ಪದ್ಯದಲ್ಲಿ ಶ್ರೀ ಪರಮಾತ್ಮನ ಅನಂತಾನಂತ ರೂಪ ವಿಶಿಷ್ಟವಾದ ವಿಶ್ವ ರೂಪವನ್ನು ಮತ್ತಷ್ಟು ವರ್ಣಿಸುತ್ತಾರೆ, ಅಗಮ್ಯ ಮಹಿಮಾ ಸಂಪದ್ನನಾದ ಶ್ರೀ ಪರಮಾತ್ಮನ ಒಂದೊಂದು ರೂಪದಲ್ಲಿಯೂ ಅನಂತಾನಂತ ರೂಪಗಳು ಅಡಕವಾಗಿವೆ. ಇಂತಹ ಅನಂತಾನಂತ ರೂಪಗಳು ಅವನ ಒಂದೇ ರೂಪದಲ್ಲಿರುವುವು. ಜಗದ್ವಿಲಕ್ಷಣವಾದ ಈ ಗುಣವೇ ಭಗವತ್ಸ್ವರೂಪವು, ಆ ಒಂದೊಂದು ರೂಪವೂ ಪರಿಪೂರ್ಣ ರೂಪವೇ ಆಗಿದೆ. ಏಕರೂಪದಿಂದ ಜಗತ್ತಿನ ಸೃಷ್ಟಿ, ಸ್ಥಿತಿ ಲಯಾದಿ ಅಷ್ಟಕರ್ತೃತ್ವ ರೂಪನಾದ ಸಕಲ ವ್ಯಾಪಾರಗಳನ್ನೂ, ಏಕ ಕಾಲದಲ್ಲಿ ಮಾಡಬಲ್ಲ ಈ ಅಚಿಂತ್ಯಾದ್ಭುತ ಶಕ್ತಿ ಸರ್ವೋತ್ತಮನಾದ ಶ್ರೀ ಹರಿಗಲ್ಲದೆ ಇತರ ಯಾವ

ದೇವತೆಗಳಿಗೂ ಸಾಧ್ಯವಿಲ್ಲ. ಇಷ್ಟು ಕ್ರಿಡಾ ವಿಶೇಷಗಳನ್ನು ತಾನೊಬ್ಬನೇ ಸರ್ವತಂತ್ರ ಸ್ವತಂತ್ರನಾಗಿ ನಿರಾಯಾಸವಾಗಿ ನಿರ್ವಹಿಸುತ್ತಿರುವ ಅವನ ಮಹಿಮೆಯು ಅಜ್ಞರಿಗೆ ಗೋಚರಿಸದು. ನಂದಗೋಪ ಕುವರನಾದ ಶ್ರೀಕೃಷ್ಣನು ರಣರಂಗದ ಮಧ್ಯದಲ್ಲಿ ಇಂದ್ರನಂದನನಾದ ಅರ್ಜುನನಿಗೆ ಅನಂತಾನಂತ ರೂಪ ವಿಶಿಷ್ಟವಾದ ತನ್ನ ವಿಶ್ವ ರೂಪವನ್ನು ತೋರಿಸಲಿಲ್ಲವೆ ? ಶ್ರೀಮದ್ಭಗವದ್ಗೀತಾ ಗ್ರಂಥ ಘಟಕವಾದ ಈ ಪ್ರಸಂಗ ವಿಶೇಷವು ಪೂರ್ವೋಕ್ತ ವಿವರಣೆಗೆ ದೃಷ್ಟಾಂತವಾಗಿದೆ.

" ಪಂಚನಾರೀತುರಗ " ದಂತೆ " ನವನಾರೀಕುಂಜರ " ಎಂಬುದು ಇನ್ನೊಂದು ಬಗೆಯ ಕ್ರೀಡಾ ವಿಶೇಷ. ಒಂಬತ್ತು ಮಂದಿ ಸ್ತ್ರೀಯರು, ಆನೆಯ ಬೇರೆ ಬೇರೆ ಅವಯವಗಳ ಆಕಾರದಲ್ಲಿ ಜೋಡಿಸಿಕೊಂಡಾಗ, ಉಂಟಾಗುವ ಅಖಂಡ ರೂಪವು ಒಂದೇ ಆನೆಯಂತೆ ಕಾಣಿಸುವುದು. ಇಂತಹ ಸಮುದಾಯ ವಿಶೇಷಕ್ಕೆ "ನವನಾರೀಕುಂಜರ" ಎಂದು ಹೆಸರು. ಅದರಂತೆ ಶ್ರೀ ರಮಾರಮಣನ ಬಹು ರೂಪಗಳು ಸೇರಿ ಏಕರೂಪವಾಗಿ ಕಾಣಿಸುವುದು. ನವನಾರೀಕುಂಜರದಲ್ಲಿ ಪ್ರತಿ ಸ್ತ್ರೀಯೂ ತಾನೇ ಆಗಿರುವಂತೆ. ಅವಯವಾಹ್ವಯ ಎಂಬ ಕರಚರಣಾದಿ ಅಂಗಗಳೆಂಬ ನಾಮವುಳ್ಳ ಶ್ರೀ ಪರಮಾತ್ಮನು ಅವಯವಗಳೆಂಬ ಸಂಪೂರ್ಣಾಕಾರದಲ್ಲಿ ಪೃಥಕ್ ಪೃಥಕ್ಕಾಗಿ ಕಾಣಿಸಿದಾಗ್ಯೂ, ನಿರ್ವಿಕಾರನಾಗಿ ಬ್ರಹ್ಮಾಂಡದಲ್ಲಿ ಅನಂತಾನಂತ ರೂಪ, ಗುಣ ಕ್ರಿಯಾ ವಿಶಿಷ್ಟನಾಗಿ ವಿರಾಡ್ರೂಪಿಯಾಗಿರುವನು. ಇಂತು, ಶ್ರೀ ಪರಮಾತ್ಮನ ಖಂಡಾಖಂಡ ಪರಿಪೂರ್ಣ ರೂಪೋಪಾಸನೆಯನ್ನು ತಿಳಿಸುತ್ತಾರೆ ಮುಂದಿನ ೨೬ನೆಯ ಪದ್ಯದಿಂದ.

ಮುಂದಿನ ೨೭ನೆಯ ಪದ್ಯದಿಂದ ಲಕ್ಷ್ಮೀನರಸಿಂಹನ ರೂಪ, ಗುಣಗಳು, ಕಾರಣ, ಅಂಶ, ಆವೇಶ, ವ್ಯಾಪ್ತಿ, ಅವತಾರ, ಕಾರ್ಯ, ವ್ಯಕ್ತ, ಅವ್ಯಕ್ತ ಇತ್ಯಾದಿಯಾಗಿ ಚತುರ್ವಿಂಶತಿ ತತ್ತ್ವಗಳಲ್ಲಿ ವಿಶಿಷ್ಟವಾಗಿರುವ ವಿಭೂತಿ ಮತ್ತು ಅಂತರ್ಯಾಮಿ ರೂಪಗಳ ವಿವರಣೆಗಳನ್ನು ತಿಳಿಸುತ್ತಾರೆ.

ಶ್ರೀ ಪರಮಾತ್ಮನು "ಓಂ" ಕಾರ ಪ್ರತಿಪಾದ್ಯನು. ಪ್ರಣವ ಸ್ವರೂಪಿಯಾದ ಆ ಭಗವಂತನು ಜ್ಞಾನಾನಂದಾದಿ ಸಮಸ್ತ ಮಂಗಳಪೂರ್ಣನು. ಮಣಿಗಳೊಳಗೆ ಪೋಣಿಸಿರುವ ದಾರ ಆ ಮಣಿಗಳಿಗೆ ಆಧಾರವಾಗಿರುವಂತೆ ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪ್ತನಾಗಿರುವ ಆ ಜಗತ್ಪ್ರಭುವು ಸಮಸ್ತ ವಿಶ್ವಕ್ಕೆ ಆಶ್ರಯ ಹಾಗೂ ಆಧಾರಭೂತನಾಗಿ ಸೂತ್ರ ಮಣಿಗಣಾದಂತೆ ಇದ್ದಾನೆ. ಆನಂದ ಪೂರ್ಣನಾದ ಜಗದಾಧಾರಕನು ಬ್ರಹ್ಮಾಂಡಗತ ಸಮಸ್ತ ಜಡವಸ್ತುಗಳಲ್ಲಿ ವ್ಯಾಪ್ತನಾಗಿ ಅವುಗಳ ಸಹಜ ಧರ್ಮಗಳನ್ನು ಅಭಿವ್ಯಕ್ತಿಗೊಳಿಸುವನು. ಅಂತೆಯೇ, ಸಮಸ್ತ ಜೀವರಾಶಿಗಳಲ್ಲಿ ಅಂತರ್ಯಾಮಿಯಾಗಿ ಬಿಂಬ ಕ್ರಿಯಾದ್ವಾರಾ. ಆ ಚೇತನದಲ್ಲಿ ಯೋಗ್ಯತಾನುಸಾರ ಕ್ರೀಡೆಯಾಡುವನು. ಅನಾದ್ಯಂತಕಾಲದಿಂದ ನಿತ್ಯ ಆನಂದ ಪೂರ್ಣವಾಗಿರುವುದರಿಂದ ಜಗದ್ವ್ಯಾಪಾರಗಳಲ್ಲಿ ಅವನಿಗೆ ಲೇಶ ಮಾತ್ರವೂ ಆಯಾಸವಿಲ್ಲ. ನಿರಾಯಸವಾಗಿ ಲೋಕ ಕ್ರೀಡಾವಿಶಿಷ್ಟನಾಗಿರುವನು. ಪರಮ ಕರುಣಾಶಾಲಿಯದ್ದರಿಂದ ಅಸ್ವತಂತ್ರರಾದ ಅನಂತಾನಂತ ಜೀವರಾಶಿಗಳಲ್ಲಿ ತಾನೇ ಬಿಂಬನಾಗಿದ್ದು, ಅನಂತಾಂಶ ರೂಪಗಳಿಂದ ಸರ್ವ ಜೀವರಿಗೂ ನಿಯಮಕನಾಗಿದ್ದು ಅವರವರ ನಿಜಗತಿಯನ್ನೀಯುವನು ಎಂದು ಮುಂದಿನ ೨೮ನೆಯ ಪದ್ಯದಿಂದ ತಿಳಿಸುತ್ತಾರೆ,

ಮುಂದಿನ ೨೯ನೆಯ ಪದ್ಯದಿಂದ ಜಗದ್ವಿಲಕ್ಷಣನಾದ ಸರ್ವತಂತ್ರ ಸ್ವತಂತ್ರನಾದ ಆ ಪರಾತ್ಪರ ಸ್ವರೂಪಿಯ ಮಹಿಮೆಯನ್ನು ತಿಳಿಸುತ್ತಾರೆ. ಈ ಜಗತ್ತಿನ ವಿವಿಧ ವ್ಯಾಪಾರಗಳನ್ನು ಅರಿಯಲು ಪಂಚ ಭೇದಜ್ಞಾನ ಅತ್ಯಗತ್ಯ.

(೧) ಜೀವೇಶಭೇದ (೨) ಜಡೇಶಭೇದ (೩) ಜೀವ ಜೀವ ಭೇದ (೪) ಜೀವ ಜಡ ಭೇದ ಮತ್ತು (೫) ಜಡ ಜಡ ಭೇದ - ಎಂಬ ಪಂಚ ಭೇದಗಳಿಂದ ಯುಕ್ತನಾದ ಈ "ಪ್ರಪಂಚ"ದಲ್ಲಿ ಸರ್ವತ್ರ ವ್ಯಾಪ್ತನಾಗಿದ್ಯಾಗ್ಯೂ ಜೀವ ಮತ್ತು ಜಡಗಳಿಂದ ಅತ್ಯಂತ ಭಿನ್ನನಾಗಿದ್ದಾನೆ, ಸಮಸ್ತ ಜಡವಸ್ತುಗಳೂ ಅನಿತ್ಯ, ನಿತ್ಯರಾದ ಜೀವರು ಪರಾಧೀನರು.

ಬ್ರಹ್ಮಾದಿತೃಣಾಂತ ಜೀವ ವರ್ಗ "ಕ್ಷರ" ಕೋಟಿಗೆ ಸೇರಿದವರು. ನಿತ್ಯ ಮುಕ್ತಳು, ನಿರ್ವಿಕಾರಳು ಆದ ಶ್ರೀ ಲಕ್ಷ್ಮೀದೇವಿ "ಅಕ್ಷರ"ಳು. ಇಂತಹ ಕ್ಷರ ಮತ್ತು ಅಕ್ಷರ ವರ್ಗಗಳಿಂದ ಅನಂತಾನಂತಗುಣಗಳಿಂದ ಶ್ರೀ ಪರಮಾತ್ಮನು ಉತ್ತಮೋತ್ತಮನು. ಶ್ರೀ ಲಕ್ಷ್ಮೀಯು ಜೀವ-ಜಡ-ಪರಮಾತ್ಮ ಎಂಬ ಮೂರು ವಸ್ತುಗಳಿಗೂ ಅತ್ಯಂತವೆಂಬ ಪರಮಾತ್ಮ ವಿಲಕ್ಷಣಳು. ಆದರೆ ಭಗವಧೀನಳು. ಶ್ರೀ ಪರಮಾತ್ಮನಿಗೆ ದೇಶ ಕಾಲಾದಿಗಳಲ್ಲಿ ಸಮವ್ಯಾಪ್ತಳು; ಗುಣತಃ ಅಸಮಳು. ಇದರಿಂದ "ಸಮಾ ಸಮ"ಳೆಂದು ಕರೆಯಿಸುವಳು. ಇಂತು, ಶ್ರೀ ಲಕ್ಷ್ಮೀ ಮತ್ತು ಶ್ರೀಮನ್ನಾರಾಯಣರನ್ನು ದೇಶಕಾಲ ವ್ಯಾಪ್ತಿಯಲ್ಲಿ ನಿರವಧಿಕಸಾಮ್ಯವುಳ್ಳವರೆಂದು ಉಪಾಸನೆ ಮಾಡಬೇಕೆಂದು ತಿಳಿಸುತ್ತಾರೆ.

ಪರಾವರೇಶನಾದ, ಕ್ಷರಾಕ್ಷರ ಪುರುಷ ಪೂಜಿತ ಪಾದಪದ್ಮನಾದ, ಆ ಭಗವಂತನ ಮಹಾ ಮಹಿಮೆಯನ್ನು ರಮಾ ಬ್ರಹ್ಮಾದಿಗಳಾರೂ ಸಾಕಲ್ಯೇನ ಅರಿಯರು ಎಂಬ ತತ್ತ್ವವನ್ನು ಮುಂದಿನ ೩೦ನೆಯ ಪದ್ಯದಿಂದ ವಿವರಿಸುತ್ತಾರೆ. ಆದಿತೇಯರೆಂಬ ಇಂದ್ರಾದಿ ದೇವತಾ ಸಮೂಹ ಅರಿಯದಿಹ ಶ್ರೀ ಪರಮಾತ್ಮನ ಗುಣಗಳನ್ನು, ಅವರಿಗಿಂತ ಉತ್ತಮರಾದ ರುದ್ರಾದಿಗಳು ಬಲ್ಲರು. ರುದ್ರಾದಿಗಳು ತಿಳಿಯದಿಹ ಗುಣಗಳನ್ನು ವೇದಾಭಿಮಾನಿಗಳಾದ ಭಾರತೀ ಮತ್ತು ಸರಸ್ವತಿಯರು ಬಲ್ಲರು, ಅವರು ತಿಳಿಯದ ಗುಣಗಳನ್ನು ವೇಧ ಎಂಬ ಬ್ರಹ್ಮ ವಾಯುಗಳು ಬಲ್ಲರು. ಬ್ರಹ್ಮ ವಾಯುಗಳು ಅರಿಯದ ಅಪರಿಮಿತ ಸದ್ಗುಣಗಳನ್ನು ಲಕ್ಷ್ಮೀದೇವಿಯು ಬಲ್ಲಳು. ಲಕುಮಿಗಿಂತ ಅನಂತಾನಂತಕೋಟಿ ಗುಣೋತ್ತಮನಾದ ಆ ಅಪ್ರಮೇಯನ ಗುಣಗಳನ್ನು ಲಕುಮಿಯು ಸಹ ಸಾಕಲ್ಯೇನ ಅರಿಯಳು. ಇಂತಹ ಅಪರಿಮಿತ ಗುಣಗಣಾಂಬೋಧಿಯಾದ ಆ ಪರಮನು ಶ್ರೀ ಭೂ. ದುರ್ಗಾ ರೂಪಳಾದ ಶ್ರೀ ರಮಾ ದೇವಿಯರಿಂದ ಮುಖ್ಯವಾಗಿ ಉಪಾಸ್ಯನು ಎಂದರಿತು ಭಜಿಸಬೇಕೆಂದು ಹೇಳುತ್ತಾರೆ.

2]

ಮುಂದಿನ ೩೧ನೆಯ ಪದ್ಯದಿಂದ, ಜಗನ್ಮಾತೆಯಾದ ಆ ಮಹಾ ಲಕುಮಿಯ ಮಹಿಮಾತಿಶಯಗಳನ್ನು ನಿರೂಪಿಸುತ್ತಾರೆ. ಬ್ರಹ್ಮಾದಿದೇವತೆಗಳು ಮನಗಾಣದ ಬಲ, ರೂಪ, ಸೌಂದರ್ಯ, ಔದಾರ್ಯಾದಿ ಸದ್ಗುಣಗಳನ್ನು ಅಕ್ಷರನಾಮಕಳಾದ ಈಶಕೋಟಿಪ್ರವಿಷ್ಟಳಾದ ಶ್ರೀ ಲಕ್ಷ್ಮೀದೇವಿ ಬಲ್ಲಳು. ಅದಾಗ್ಯೂ ಶ್ರೀ ಪರಮಾತ್ಮನ ಅನಂತಾನಂತ ಗುಣಗಳ ಪ್ರಾಂತ ಗಾಣದೆ, ಒಂದೊಂದು ಗುಣದಲ್ಲಿ ಅನಂತಾನಂತ ರೂಪಗಳು ಒಂದೊಂದು ರೂಪದಲ್ಲಿ, ಅನಂತಾನಂತ ರೂಪಗಳು ಇಂತು, ಅವನ ಗುಣಾತಿಶಯಗಳನ್ನು ಸಾಕಲ್ಯೇನ ಅರಿಯದೆ, ಕ್ಷಣ ಕ್ಷಣಕ್ಕೂ ನೂತನವಾಗಿ ಗೋಚರಿಸುತ್ತಿರುವ ಆ ಭಗವಂತನ ಮಹಾ ಮಹಿಮೆಯನ್ನು ಕಂಡು ಆಶ್ಚರ್ಯ ಭರಿತಳಾಗಿ. ಆ ಸದ್ಗುಣೈಶ್ವರ್ಯನಿಧಿಯಾದ ಆ ಶ್ರೀಹರಿಗೆ ಶರೀರಾದಿ ಆಭರಣಗಳು ತಾನೇ ಆಗಿ, ನಾನಾ ಆಯುಧ ರೂಪಳಾಗಿ, ಪೀತಾಂಬರಾದಿ ವಸ್ತ್ರ ರೂಪಳಾಗಿ ವೈಕುಂಠಾದಿ ಮಂದಿರ ರೂಪಳಾಗಿ, ಆ ಉತ್ತಮೋತ್ತಮನ ಅನಂತಾನಂತ ರೂಪಗಳನ್ನು ಮನಸ್ಸಿನಲ್ಲಿ ಸ್ಥಿರೀಕರಿಸಿ, ಧ್ಯಾನಿಸುತ್ತಾ. ಅನಂತ ಮಹಿಮಾಸಂಪನ್ನನಾದ ಆ ಪರಮಾತ್ಮನ ದಾಸ್ಯಕರ್ಮವೆಂಬ ಸೇವಾಕಾರ್ಯವನ್ನು ಪರಿಪರಿಯಾಗಿ ತಾನೇ ಮಾಡುತ್ತಾ, ಪ್ರಪ್ರಥಮ ದಾಸಿ ಎಂದೆನಿಸಿ, ಭಗವದಧೀನಳಾಗಿರುವಳು.

ಭಗವದಧೀನಳಾದ ಆ ಮಹಾ ಲಕುಮಿಯ ಸ್ಥಿತಿಯನ್ನೂ ಇನ್ನೂ ವಿಶದವಾಗಿ ದೃಷ್ಟಾಂತಪೂರ್ವಕ ವರ್ಣಿಸುತ್ತಾರೆ ಮುಂದಿನ ೩೨ನೆಯ ಪದ್ಯದಿಂದ. ಮಹಾ ಪ್ರಳಯಕಾಲದಲ್ಲಿ, ಆ ಪ್ರಳಯ ಜಲಧಿಯಲ್ಲಿ ಒಂದು ಹಡಗಿದ್ದರೆ. ಅದು ನೆಲೆಯನ್ನು ಕಾಣದೆ ಗಿರಗಿರನೆ ಸುತ್ತುತ್ತಿರುವುದು. ಅಂತೆಯೇಕಮಲದಳಾಯತಾಕ್ಷನಾದ ನಿರ್ದೋಷನಾದ ಆ ಪರಮಾತ್ಮನಮಂಗಳ ಗುಣ, ರೂಪ, ಕ್ರಿಯಾದಿಗಳನ್ನು ಧ್ಯಾನಿಸುತ್ತಿರುವಾಗ, ಅವುಗಳ ಕೊನೆಯನ್ನು ಕಾಣದೆ, ಮಹಾಲಕ್ಷ್ಮಿಯು ಚಂಚಲಚಿತ್ತಳಾದಳು. ಅಪಾರ ಮಹಿಮನಾದ ಅವನ ಗುಣ ರೂಪಗಳ ನೆಲೆಯನ್ನು ಇನ್ನೂ ಚಿಂತಿಸುತ್ತಲೇ ಇದ್ದಾಳೆ. ಅವನ ಅನಂತಾನಂತ ಶುಭಗುಣಸಮೂಹಗಳು ಪ್ರಳಯ ಜಲಧಿಯ ಸಾದೃಶ್ಯ. ಅದರಲ್ಲಿ ನೆಲೆಯನ್ನು ಕಾಣದೆ ತಿರುಗುತ್ತಿರುವ (ಚಂಚಲಚಿತ್ತ

ವನ್ನೈದಿರುವ) ಹಡಗಿನಂತೆ ಲಕ್ಷ್ಮೀದೇವಿಯರು. ಶ್ರೀ ಪರಮಾತ್ಮನಿಗೆ ಸಮಾಸಮಳೆನಿಸಿದ ಅಂತಹ ನಿತ್ಯಾವಿಯೋಗಿನಿಗೆ ಅವನ ಮಹಿಮೆಗಳು ಸಾಕಲ್ಯೇನ ಗೋಚರಿಸದೆಂದಮೇಲೆ, ಸಾಮಾನ್ಯ ಜನರಿಗೆ ತಿಳಿಯಲು ಸಾಧ್ಯವೆ ? ಎಂದು ಉದ್ಗಾರ ತೆಗೆದಿದ್ದಾರೆ ದಾಸರಾಯರು.

ಶ್ರೀ ಲಕ್ಷ್ಮೀದೇವಿಯನ್ನು ತನ್ನ ವಕ್ಷದಲ್ಲಿ ಧರಿಸಿರುವ ಶ್ರೀನಿಕೇತನು, ಯಾದವಕುಲಲಲಾಮನಾದ ಕೃಷ್ಣನು. ಮಹಾಬಲಯುಕ್ತ ಶರೀರಿಯಾದವನು, ಸಮೀಚೀನವಾದ ಅಂದರೆ, ಪಂಚಭೇದ, ತಾರತಮ್ಯಯುಕ್ತವಾದ ಜ್ಞಾನಮಾರ್ಗದಿಂದ ಪ್ರಾಪ್ತವಾದ ಜ್ಞಾನಗಮ್ಯನು. ಗಯ ಎಂಬ ರಾಕ್ಷಸನನ್ನು ಸಂಹರಿಸಿದವನೂ, ಜ್ಞಾನಿವರ್ಗದಿಂದಪೂಜ್ಯನೂ ಹಾಗೂ ಗೇಗೀಯಮಾನನೂ, ಕೃಷ್ಣಾವತಾರದಲ್ಲಿ ತನ್ನ ಸೋದರಮಾವನಾದ ಕಂಸನನ್ನು ಕೊಂದ, ಮಾತುಳಾರಿಯೂ, ಶರಣಾಗತರಿಗೆ ಕಲ್ಪವೃಕ್ಷಸದೃಶನೂ, ಮಧುನಾಮಕ ದೈತ್ಯನನ್ನು ಸಂಹರಿಸಿದವನೂ. ಸಕಲ ಚೇತನರಿಗೆ ಸತ್ತಾಪ್ರದನೂ, ಜಗಜ್ಚೇಷ್ಟಾಪ್ರದನೂ ಆದ ಜಗನ್ನಾಥ ವಿಠ್ಠಲನಾಮಕನಾದ ಆ ಜಗತ್ಸ್ವಾಮಿಯು, ತನ್ನನೇ ಗತಿ ಎಂದು ನಂಬಿ ಮೊರೆಹೊಕ್ಕವರನ್ನು ಸದಾ ಸಂರಕ್ಷಿಸುವನೆಂದು ಕೊನೆಯದಾದ ಈ ೩೩ನೆಯ ಪದ್ಯದಿಂದ ಪ್ರಸಕ್ತ "ಪಂಚತನ್ಮಾತ್ರಾ ಸಂಧಿ" ಯನ್ನು ಉಪಸಂಹಾರ ಮಾಡುತ್ತಾರೆ ಅಪರೋಕ್ಷೀಕೃತಶ್ರೀಶರಾದ ಶ್ರೀ ದಾಸರಾಯರು.

**" ಇಂತು ಸಂಧಿಯು ಸಾರ ಸಮಾಪ್ತಿ "**

॥ ಶ್ರೀ ಮಧ್ವೇಶಾರ್ಪಣಮಸ್ತು ॥

॥ ಶ್ರೀಃ ಹರಿಃ ಓಂ ॥

॥ ಶ್ರೀ ಗರುಡವಾಹನ ಲಕ್ಷ್ಮೀನಾರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠ್ಠಲಾಯ ನಮಃ ॥

# ಸಂಧಿ (೭)

## "ಪಂಚತನ್ಮಾತ್ರಾ ಸಂಧಿ" - ಪ್ರಾರಂಭ

❋

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ಪಲ್ಲ॥

* * *

## ಪದ್ಯ (೧)

ಮೂಲ :-

ಭೂ ಸಲಿಲ ಶಿಖಿ ಪವನ ಭೂತಾ ।
ಕಾಶದೊಳಗೈದೈದು ತನ್ಮಾ ।
ತ್ರಾ ಸಹಿತ ಒಂದಧಿಕ ಪಂಚಾಶದ್ವರಣ ವೇದ್ಯ ॥
ಈ ಶರೀರದಿ ವ್ಯಾಪಿಸಿದ್ದು ಸು ।
ರಾಸುರರಿಗೆ ನಿರಂತರದಲಿ ಸು ।
ಖಾಸುಖಪ್ರದನಾಗಿ ಆಡುವ ದ್ವೇಷಿಪರ ಬಡಿವ ॥ ॥೧॥

**ಅವತರಣಿಕೆ :-**

ಪೃಥ್ವೀ, ಉದಕ, ತೇಜಸ್ಸು, ವಾಯು ಮತ್ತು ಭೂತಾಕಾಶ- ಎಂಬ ಭೂತ ಪಂಚಕಗಳಲ್ಲಿ. ಪ್ರತಿಯೊಂದರಲ್ಲಿಯೂ ಉಳಿದ ನಾಲ್ಕೂ ತತ್ತ್ವಗಳು ಅಂತರ್ಭೂತವಾಗಿವೆ. ಅಲ್ಲಿಗೆ ಭೂತಪಂಚಕಗಳಲ್ಲಿ ೫ × ೫ = ೨೫ ಭಗವದ್ರೂಪಗಳು. (ಐದೈದು). ಈ ಪಂಚಭೂತಗಳ ತನ್ಮಾತ್ರಾ ಗುಣಗಳಾದ ಗಂಧ, ರಸ. ರೂಪ, ಸ್ಪರ್ಶ ಮತ್ತು ಶಬ್ದ ಎಂಬ ಒಂದೊಂದರಲ್ಲಿಯೂ ಉಳಿದ ನಾಲ್ಕು ಧರ್ಮಗಳು ಅಡಕವಾಗಿವೆ. ಅಲ್ಲಿಗೆ ಪಂಚ ತನ್ಮಾತ್ರಗಳಲ್ಲಿ ೫ × ೫ = ೨೫ ಭಗವದ್ರೂಪಗಳು. ಜೀವನಲ್ಲಿ "ಕ್ಷಂ" ವರ್ಣಪ್ರತಿಪಾದ್ಯ ಶ್ರೀ ಲಕ್ಷ್ಮೀನೃಸಿಂಹರೂಪ. ಹೀಗೆ ೨೫ + ೨೫ + ೧ = ೫೧ ವರ್ಣಗಳಿಂದ ಪ್ರತಿಪಾದ್ಯನಾದ ಅಜಾದಿ ಲಕ್ಷ್ಮೀನೃಸಿಂಹ ಪರ್ಯಂತ ೫೧ ವರ್ಣ ಪ್ರತಿಪಾದ್ಯಭಗವದ್ರೂಪಗಳಿಂದ ಈ ಶರೀರಾದ್ಯಂತ ವ್ಯಾಪಿಸಿದ್ದು, ತತ್ತ್ವಪತಿ ದೇವತೆಗಳಲ್ಲಿ ಮತ್ತು ಅಸುರರಲ್ಲಿ ಅಂತರ್ಯಾಮಿಯಾಗಿದ್ದು, ನಿರಂತರದಲ್ಲಿ ಆಯಾಯಾ ತತ್ತ್ವಕಾರ್ಯಗಳನ್ನು ತಾನೇ ಬಿಂಬಕ್ರಿಯಾದ್ವಾರಾ ಮಾಡಿ, ಮಾಡಿಸುತ್ತಾ, ತತ್ತ್ವಪತಿ ದೇವತೆಗಳಿಗೆ ಸುಖಪ್ರದನಾಗಿಯು ಮತ್ತು ದೈತ್ಯರಿಗೆ ದುಃಖಪ್ರದನಾಗಿಯೂ ಇದ್ದವನಾಗಿ, ತನ್ನಲ್ಲಿ ಮತ್ತು ತನ್ನ ಭಕ್ತರಲ್ಲಿ ದ್ವೇಷಿಸುವ ತಮೋಯೋಗ್ಯರನ್ನು ಮರ್ಧಿಸುವನೆಂದು ಹೇಳುತ್ತಾರೆ- ಪ್ರಸಕ್ತ ಸಂಧಿಗತ ೧ನೆಯ ಈ ಪದ್ಯದಿಂದ. ॥೧॥

**ಪ್ರತಿಪದಾರ್ಥ :-**

**ಭೂ** = ಭೂಮಿ, **ಸಲಿಲ** = ಉದಕ (ಅಪ್‌ತತ್ತ್ವ), **ಶಿಖಿ** = ಅಗ್ನಿ (ತೇಜಸ್), **ಪವನ** = ವಾಯು, **ಭೂತಾಕಾಶದ** = ಆಕಾಶ (ಅವಕಾಶಪ್ರದ) **ಒಳಗೆ** = ಈ ಭೂತಪಂಚಕಗಳಲ್ಲಿ **ಐದೈದು** = ೫ × ೫ = ಇಪ್ಪತ್ತೈದು (ಪ್ರಾಚುರ್ಯಾಪ್ರಾಚುರ್ಯದಿಂದ ಸಂಸೃಷ್ಟಗಳಾಗಿ ಒಂದರೊಳಗೊಂದು. ಅಂತರ್ಭೂತವಾಗಿ ೨೫), **ತನ್ಮಾತ್ರಾಸಹಿತ** = ಆ ಭೂತ ಪಂಚಕಗಳ ತನ್ಮಾತ್ರಾ ಗುಣಗಳಾದ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ ಇವುಗಳೊಡನೆ, ಹಿಂದಿನಂತೆಯೇ ಅಂತರ್ಭೂತಗಳಾಗಿ ೨೫,

(ಒಂದೊಂದರಲ್ಲಿ ಐದು ತನ್ಮಾತ್ರಾಗಳಂತೆ) **ಒಂದಧಿಕಪಂಚಾಶದ್ವರಣ**= ಒಂದು ಅಧಿಕವಾದ ಐವತ್ತು, ಅಂದರೆ ೧+೫೦=೫೧ ಸಂಖ್ಯಾಕವಾದ ಅಕಾರಾದಿ ಕ್ಷಕಾರಾಂತ ಇರುವ ೫೧ ವರ್ಣಗಳಿಂದ **ವೇದ್ಯ**=ಪ್ರತಿಪಾದ್ಯ ನಾಗಿ ಅಜಾದಿ "ಕ್ಷ" ವರ್ಣ ಪ್ರತಿಪಾದ್ಯ ಲಕ್ಷ್ಮೀನರಸಿಂಹ ಪರ್ಯಂತ **ಈ ಶರೀರದಿ**=ಪಾಂಚಭೌತಿಕವಾದ ಈ ಸ್ಥೂಲದೇಹದಲ್ಲಿ **ವ್ಯಾಪಿಸಿದ್ದು**= ಆಪಾದಮಸ್ತಕ ವ್ಯಾಪಕನಾಗಿದ್ದು, **ಸುರ**=ದೇಹಗತ ತತ್ವಾಭಿಮಾನಿ ದೇವತೆಗಳು, **ಅಸುರರಿಗೆ** = ಅಂತೆಯೇ ದೈತ್ಯರಿಗೆ **ನಿರಂತರದಲಿ** = ಪ್ರತಿ ದಿವಸದಲ್ಲಿಯೂ **ಸುಖ** = ದೇಹದಿಂದ ಆಗತಕ್ಕ ಸುಖಾನುಭವ ದೇವತೆಗಳಿಗೂ **ಅಸುಖ** = ದೇಹದಿಂದ ಆಗತಕ್ಕ ದುಃಖಾದಿ ಅನುಭವ ದೈತ್ಯರಿಗೂ **ಪ್ರದನಾಗಿ** = ಅವರವರ ಯೋಗ್ಯತಾನುಸಾರ ಕೊಡತಕ್ಕವ ನಾಗಿ, **ಆಡುವ** = ದೇಹಗತ ಈ ಚತುರ್ವಿಂಶತಿ ಜಡತತ್ತ್ವಗಳಲ್ಲಿಯೂ, ಅಭಿಮಾನಿ ದೇವತೆಗಳಲ್ಲಿಯೂ, ದೈತ್ಯರಲ್ಲಿಯೂ ಇದ್ದು ತತ್ತ್ವಕಾರ್ಯ ಗಳನ್ನು ಅವರ ದ್ವಾರಾ ಮಾಡಿಸುತ್ತಾ ಕ್ರೀಡಿಸುವನು. **ದ್ವೇಷಿಪರ** = ತನ್ನ ಲ್ಲಿಯೂ ಮತ್ತು ತನ್ನ ಭಕ್ತರಲ್ಲಿಯೂ ದ್ವೇಷವನ್ನು ಮಾಡುವ ತಮೋ ಯೋಗ್ಯರನ್ನು **ಬಡಿವ** = ಶಿಕ್ಷಿಸುವನು (ಸಂಹರಿಸುವನು). ॥೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಹಿಂದಿನ ಸಂಧಿಯಲ್ಲಿ ಸ್ಥೂಲದೇಹದ ಉತ್ಪತ್ತಿ ವಿಚಾರ ಹೇಳಿ, ಈ ಸಂಧಿಯಲ್ಲಿ ಪೂರ್ವೋಕ್ತ ಸ್ಥೂಲದೇಹದ ವಿಚಾರವನ್ನೇ ವಿಶದವಾಗಿ ನಿರೂ ಪಣ ಮಾಡುತಾರೆ.

ಸ್ಥೂಲದೇಹ ಎನುವುದು ಎಂಥಾದ್ದು ಎಂದರೆ, ವಿವರ :– ಭೂ–ಭೂಮಿ- ಸಲಿಲ–ಉದಕ, ಶಿಖಿ–ಅಗ್ನಿ, ಪವನ-ವಾಯು. ಆಕಾಶ-

ಅವಕಾಶಕ್ಕೆ ಆಕಾಶ ಎಂತ ಹೆಸರು. (ಇವುಗಳು), ಭೂತ-ಪಂಚಭೂತಗಳು ಒಳಗೆ- ಈ ಐದು ಭೂತಗಳೊಳಗೆ. ಐದೈದು- ಒಂದೊಂದು ಭೂತದಲ್ಲಿ ಐದೈದು ಭೂತಗಳು (ಪ್ರಾಚುರ್ಯಾಪ್ರಾಚುರ್ಯದಿಂದ ಸಂಸೃಷ್ಟಗಳಾಗಿ ಇರೋಣದರಿಂದ, ಐದೈದು ಇಪ್ಪತ್ತೈದು ಭೂತಗಳು ಎಂತ ತಿಳೀಬೇಕು). ಅಂತು, ಇಪ್ಪತ್ತೈದು ಭೂತಗಳು ಆಗೋದಾಯಿತು. ತನ್ಮಾತ್ರಾ ಸಹಿತ- ಪೂರ್ವೋಕ್ತ ಇಪ್ಪತ್ತೈದರಲ್ಲಿ ಒಂದೊಂದರಲ್ಲಿ ಒಂದೊಂದು ತನ್ಮಾತ್ರಾ ಸಹಿತ ಇರೋದಾಗಿ ಅದೆ. ಅಂತು, ತನ್ಮಾತ್ರಗಳು ಇಪ್ಪತ್ತೈದು (೨೫), ಒಂದೊಂದರಲ್ಲಿ ಐದೈದು ತನ್ಮಾತ್ರಗಳು ಇರೋದಾಗಿ ಅದೆ. ತನ್ಮಾತ್ರಗಳು ದಾವದೆಂದರೆ- ಗಂಧ, ರಸ, ರೂಪ. ಸ್ಪರ್ಶ ಮತ್ತು ಶಬ್ದ. ಒಂದೊಂದು ಭೂತದಲ್ಲಿ ಐದೈದು ಭೂತಗಳು ಐದದೈದು ತನ್ಮಾತ್ರಾಗಳು ಅವೆ. (ಗಂಧ, ಪೃಥ್ವಿಯಲ್ಲಿ. ರಸ ಉದಕದಲ್ಲಿ. ಅಂದರೆ ಅಪ್ಪಿನಲ್ಲಿ, ರೂಪ ಅಗ್ನಿಯಲ್ಲಿ. ಸ್ಪರ್ಶ ವಾಯುವಿನಲ್ಲಿ. ಶಬ್ದ ಆಕಾಶದಲ್ಲಿ) ಸಂಸೃಷ್ಟದಿಂದ ಕೂಡಿಕೊಂಡಿರುವ ಪಂಚಭೂತ ಗಳು, ಇಪ್ಪತ್ತೈದು. ಪಂಚತನ್ಮಾತ್ರಗಳು ಇಪ್ಪತ್ತೈದು, ಅಂತೂ ೫೦ ಈ ಐವತ್ತರಲ್ಲಿ ಸಹಿತ ಎಂದರೆ, ಸಹಿತವಾಗಿ ಅವೆ. ದಾವದು ಎಂದರೆ, ಒಂದಧಿಕ ಪಂಚಾಶದ್ವರ್ಣಗಳು ಸಹಿತವಾಗಿ ಅವೆ. ಈಗ ೫೧ ವರ್ಣಗಳು ಪಂಚಭೂತ. ಪಂಚತನ್ಮಾತ್ರಗಳು ಎನಿಪ ಪೂರ್ವೋಕ್ತ ಐವತ್ತರಲ್ಲಿ ಒಂದೊಂದರಲ್ಲಿ ೫೧-೫೧ ವರ್ಣಗಳಿಂದ ಯುಕ್ತವಾಗಿ ಅದೆ. ವೇದ್ಯ ಎಂದರೆ, ಪರಮಾತ್ಮನ ಅನಂತಾನಂತ ರೂಪಗಳು. ಈ ರೂಪಗಳಿಗೆ ಅನಂತಾನಂತ ನಾಮಗಳು. ಈ ಅಕ್ಷರಗಳಿಂದಲೇ ವೇದ್ಯನಾಗಿ ಇರೋಣದ ರಿಂದ. ಒಂದೊಂದರಲ್ಲಿ ಅನಂತಾನಂತ ರೂಪಗಳಿಂದ ಇರೋವನಾಗಿದ್ದಾನೆ. ಮತ್ತು ಪ್ರತಿ ಪ್ರತಿ ವರ್ಣಸಾಂಕೇತದಿಂದ, ಅಜ, ಆನಂದ ಎಂಬ ಮಾತೃ ಕಾನ್ಯಾಸಗತ ನಾಮಗಳಿಂದ ಕರೆಸಿಕೊಳ್ಳತಕ್ಕ ಶ್ರೀ ಪರಮಾತ್ಮನ. ಈ ಶರೀ ರದಿ-ಈ ವರ್ತಮಾನ ಸ್ಥೂಲಶರೀರದಲ್ಲೇನು, ಈ ಶರೀರದಲ್ಲಿ ವ್ಯಾಪಿಸಿದ್ದು. ಸುರ-ದೇವತೆಗಳ ಒಳಗೇನು, ಅಸುರ-ದೈತ್ಯರ ಒಳಗೇನು. ವ್ಯಾಪಿಸಿದ್ದು, ನಿರಂತರದಲಿ-ಪ್ರತಿ ದಿನದಲ್ಲೂ. ಸುರಾಸುರರಿಗೆ-ದೇಹದೊಳಗಿರುವ ದೇವ ದೈತ್ಯರಿಗೆ, ಸುಖಾಸುಖ-ದೇಹದಿಂದ ಆಗತಕ್ಕ ಸುಖ ದೇವತೆಗಳಿಗೆ,

ದೇಹದಿಂದ ಆಗತಕ್ಕ ದುಃಖ ದೈತರಿಗೆ, ಈ ಉಭಯವೂ ದೇಹಗತವಾದ ಜೀವನಿಗೆ, ಅವನ ಯೋಗ್ಯತಾನುಸಾರ ಅಲ್ಪವಾದ ಸುಖ ದುಃಖಗಳೆರಡೂನು, ಪ್ರದನಾಗಿ-ಕರ್ಮಾನುಸಾರ ಕೊಡೋವನಾಗಿ, ಆಡುವ-ದೇಹದಲ್ಲಿದ್ದು. ಸಂಚಾರ ಮಾಡುವ. ದ್ವೇಷಿಪರ-ತನಗೆ ದ್ವೇಷಿಗಳಾದಂಥವರ, ಬಡಿವ-ಶಿಕ್ಷಿಸುವ ತನ್ನ ಭಕ್ತರನ್ನು ತಾನು ರಕ್ಷಿಸುವ.

ಭೂಮಿಯೇ ಮೊದಲಾದ ಪಂಚಭೂತಗಳಲ್ಲಿ ಗಂಧಾದಿ ಐದು ತನ್ಮಾತ್ರಗಳು, ಒಂದೊಂದು ಭೂತದಲ್ಲಿ ಐದೈದು ತನ್ಮಾತ್ರಗಳು. ಆ ಒಂದೊಂದರಲ್ಲಿ ಐದೈದು ತತ್ವಗಳು ಸಹಿತ ಕೂಡಿರತಕ್ಕ ಈ ಸ್ಥೂಲ ಶರೀರದಲ್ಲಿ ೫೧ ವರ್ಣಗಳಿಂದಲೂ, ತದ್ಗತ ವರ್ಣಗಳಿಂದ ಕರಿಸತಕ್ಕ ಶ್ರೀ ಪರಮಾತ್ಮನು ಅನಂತಾನಂತ ರೂಪಗಳಿಂದ ಇದ್ದು, ದೇಹಗತ ತತ್ವಾಭಿಮಾನಿ ದೇವತೆಗಳ ದ್ವಾರ ಜೀವನಿಂದ ಮಾಡಿಸಲ್ಪಡುವ ಸುಖ ದುಃಖಗಳ ದೇವ ದೈತ್ಯರಿಗೆ ಕರ್ಮಾನುಸಾರ ಕೊಡತಾ ಸಂಚಾರ ಮಾಡತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :-**

ಭೂತಾಕಾಶ ಎಂದರೆ ಜಡಾಕಾಶ ಎಂತಲೂ ತಾತ್ಪರ್ಯವೆ. ಒಂದಧಿಕ ಪಂಚಾಶದ್ವರ್ಣಗಳ ವಿವರ :-

| | | | |
|---|---|---|---|
| ೧ | ಅ, ಆ ಆರಂಭ ಮಾಡಿ...... ಅಂ, ಅಃ ವರೆಗೆ | ಸ್ವರಾಕ್ಷರಗಳು | ೧೬ |
| ೨ | ಕ, ಖ, ಗ. ಘ, ಙ | ಕ ವರ್ಗ | ೦೫ |
| ೩ | ಚ, ಛ, ಜ, ಝ, ಞ | ಚ ವರ್ಗ | ೦೫ |
| ೪ | ಟ, ಠ. ಡ, ಢ, ಣ | ಟ ವರ್ಗ | ೦೫ |
| ೫ | ತ, ಥ, ದ, ಧ, ನ | ತ ವರ್ಗ | ೦೫ |
| ೬ | ಪ, ಫ, ಬ, ಭ, ಮ | ಪ ವರ್ಗ | ೦೫ |
| ೭ | ಯ ಆರಂಭಮಾಡಿ ಕ್ಷ ವರೆಗೆ | ಅವರ್ಗೀಯ ವ್ಯಂಜನು | ೧೦ |
| | | **ಒಟ್ಟು** | ೫೧ |

ಭೂ, ಸಲಿಲ...........ತನ್ಮಾತ್ರಾಸಹಿತ ಎಂದರೆ ವಿವರ :-

| ಕ್ರಮ ಸಂಖ್ಯೆ | ಭೂತಪಂಚಕ | ಅಂತರ್ಭೂತಗಳು | ಸಂಖ್ಯೆ ಒಟ್ಟು |
|---|---|---|---|
| ೧ | ಪೃಥ್ವೀ | ಗಂಧ, ಘ್ರಾಣ, ಪಾಯು, ಪ್ರಾಣವಾಯು, ಅಹಂಕಾರ | ೫ |
| ೨ | ಅಪ್ | ರಸ, ಜಿಹ್ವೆ, ಗುದೇಂದ್ರಿಯ ಅಪಾನವಾಯು, ಚಿತ್ತ | ೫ |
| ೩ | ತೇಜಸ್ಸು | ರೂಪ, ಚಕ್ಷು, ಪಾದೇಂದ್ರಿಯ, ವ್ಯಾನವಾಯು, ಬುದ್ಧಿ | ೫ |
| ೪ | ವಾಯು | ಸ್ಪರ್ಶ, ತ್ವಗಿಂದ್ರಿಯ, ಪಾಣಿ ಉದಾನವಾಯು, ಮನಸ್ಸು | ೫ |
| ೫ | ಆಕಾಶ | ಶಬ್ದ. ಶ್ರೋತ್ರೇಂದ್ರಿಯ, ವಾಗಿಂದ್ರಿಯ, ಸಮಾನವಾಯು, ಅಂತಃಕರಣ | ೫ |

ಈ ಪ್ರಕಾರ ಎಪ್ಪತ್ತೈದು ಎಂತಲೂ ತಾತ್ಪರ್ಯವೇ. ಈ ಎರಡು ಪ್ರಕಾರವೂ ಚಿಂತಿಸಬೇಕು. ಒಂದೊಂದು ಭೂತದಲ್ಲಿ ಇಂದ್ರಿಯಗಳ ಸಹಿತ ಐದೈದು ಮೇರೆಗೆ ಆದ ಸಂಖ್ಯಾ ಎಂಬುದು ಪೂರ್ವೋಕ್ತ ಇಪ್ಪತ್ತೈದು. ಪೃಥಿವ್ಯಾದಿ ಪಂಚಭೂತಗಳು ಐದು ಇಪ್ಪತ್ತು. ಇದರಲ್ಲಿ ಸೇರದೇ

ಇರೋದು ಐದು. ಒಂದೊಂದು ಭೂತದಲ್ಲಿ ಮಹತ್ತತ್ವ, ಅಹಂಕಾರ ತತ್ವ, ಅವ್ಯಕ್ತತತ್ವ-ಈ ಮೂರು. ಪ್ರಕಾರ ಈ ಹದಿನೈದು ಅಂತು ೪೫ ಸಹಿತ ಎಂದರೆ ಈ ಪ್ರಕಾರ ಪಂಚ ಭೂತಗಳಿಂದ ಸಹಿತವಾದ ೪೫ರಲ್ಲಿ, ಒಂದೊಂದರಲ್ಲಿ ೫೧ ವರ್ಣಗಳೇನು, ಆಯಾ ವರ್ಣಗಳಿಂದ ವೇದ್ಯ ಎಂದರೆ ವಾಚ್ಯನಾದ ಅಜಾದಿ ೫೧ ಭಗವದ್ರೂಪಗಳೇನು ಈ ಶರೀರದೊಳು ವ್ಯಾಪಿಸಿದ್ದು, ಸುರಾಸುರರಿಗೆ ನಿರಂತರದಲ್ಲಿ ಸುಖಾಸುಖಪ್ರದನಾಗಿ, ಎಂದರೆ ದೇಹದಿಂದ ಆಗತಕ್ಕ ಸುಖ ದೇವತೆಗಳಿಗೂ, ದೇಹದಿಂದ ಆಗತಕ್ಕ ದುಃಖಾದಿಗಳು ದೈತ್ಯರಿಗೂ, ಪ್ರದ-ಕೊಡೋವನಾಗಿ, ಆಡುವ ವಿಹಾರ ಮಾಡುವ. ದ್ವೇಷಿಪರ ಬಡವ-ದ್ವೇಷಿಗಳಾದ ದೈತ್ಯರ ಶಿಕ್ಷಾ ಮಾಡುವ ಎಂತ ತಾತ್ಪರ್ಯ.

ಈ ಸ್ಥೂಲದೇಹಕ್ಕೆ ಕಾರಣಗಳಾದ ದೇಹಗಳ ವಿವರ :-

(೧) **ಸ್ವರೂಪದೇಹ** ಒಂದು, ಅಂದರೆ ಒಂದನೇದು.

(೨) **ಲಿಂಗಶರೀರ** ಎರಡನೇದು. ಇದು ತ್ರಿಗುಣ ಸಂಬಂಧವಾದದ್ದು. ತ್ರಿಪರಿಚ್ಛೇದ ಉಳ್ಳದ್ದು. ಇದರಲ್ಲಿ ಕಾರ್ಯೋಪಯೋಗಿ ಗುಣಗಳು, ಸತ್ವ ಗುಣದಲ್ಲಿ ಸತ್ವ ೧೦, ರಜೋಗುಣದಲ್ಲಿ ರಜ ೧, ತಮೋಗುಣದಲ್ಲಿ ತಮ ೧. ಅಂತು, ೧೨. ಈ ೧೨ ಗುಣದೊಳಗೆ ರಜೋಗುಣ ಒಂದು ೧೨ ಭಾಗಮಾಡಿ. ೧೨ರ ಒಳಗೆ ೧೦ ರಜ ಸತ್ವ ಹತ್ತರಲ್ಲಿ ಸೇರಿತು. ಒಂದು ರಜ ಒಂದು ಸಂಖ್ಯಾಕವಾದ ತಮದ ತಮದಲ್ಲಿ ಸೇರಿತು. ಅಂತು. ರಜದ ಹನ್ನೆರಡರ ಒಳಗೆ ಸತ್ವದಲಿ, ತಮದಲ್ಲಿ ಸೇರಿದ್ದು ಹನ್ನೊಂದ ಹೋಗತಾ ಉಳಿದ ರಜ ಒಂದು. ಅಂತು, ೧೨ ರಜಕ್ಕೆ ಲೆಕ್ಕ ಸರಿ ಆಯಿತು. ಪುನಃ ವೃತ್ತಿ ಕಾಲಕ್ಕೆ ಹತ್ತು ರಜ. ಹತ್ತು ಸತ್ವದಿಂದ ಸಹಿತವಾಗಿ ಬಂತು. ಅಂತು ಇಪ್ಪತ್ತಾಯಿತು. ತಮದಲ್ಲಿ ಕಲಿತ ಒಂದು, ರಜ ಒಂದು ತಮದಿಂದ ಸಹಿತವಾಗಿ ಬಂತು. ಅಂತು ಇದು ಎರಡು. ಅಂತು ಎಲ್ಲಾ ಸೇರಿ ೨೨ ಆಯಿತು. ಅಮಿಶ್ರ (ಮಿಶ್ರವಾಗದೇ ಇರುವುದು) ರಜ ಗುಣ ಒಂದು. ಈ ಒಂದರ ಸಹಿತ ಸೇರಿ ೨೩ ಆಯಿತು.

(೩) **ವೈಷಯಿಕ ಶರೀರ** ಮೂರನೇದು. ಈ ೨೩ ಗುಣಗಳಿಂದ ಸಹಿತವಾದ ಲಿಂಗ ಶರೀರದ ಮೇಲೆ ವೈಷಯಿಕ ಶರೀರದ ಸೃಷ್ಟಿ. ಈ ೨೩ ಗುಣವು ಬೀಜವು. ಬೀಜದ ಹಾಂಗೆ ಅಣು ಲಿಂಗವಾಗಿ ಜೀವನ್ನ ಸಂಬಂಧಿಸಿ ಅವನ ಪ್ರಕಾಶ ತನ್ನೊಳಗೆ ಮಾಡಿಕೊಂಡದೆ. ಇದೇ ಗುಣವೈಷವ್ಯ ಶರೀರ ಎಂದು ಕರೆಸುವುದು. ಸಕಲ ಪ್ರಾಣಿಗಳಿಗೆ, ಮೋಕ್ಷಾಧಿಕಾರಿಗಳಿಗೆ ಏಕ ಪ್ರಕಾರ ಇರತದೆ. ಇದಕ್ಕೆ ವೈಷಯಿಕ ಶರೀರ ಎಂತಲೂ, ಅಣುಲಿಂಗ ಎಂತಲೂ ವ್ಯವಹಾರ ಉಂಟು. ಇಲ್ಲಿಗೆ ಜೀವನಮೇಲೆ ಇರತಕ್ಕ ಶರೀರಗಳ ವಿವರ. ಜೀವನಮೇಲೆ ಅನಾದಿ ಲಿಂಗ ಶರೀರ ಒಂದು. ವೈಷಯಿಕ ಶರೀರ ವೆಂಬ ಅಣು ಲಿಂಗ ಶರೀರ ಒಂದು, ಅಂತು ಎರಡು ಶರೀರ ಆಯಿತು.

(೪) ಅಣು ಲಿಂಗದ ಮ್ಯಾಲೆ ಮಹತ್ತತ್ವ ಶರೀರ ಒಂದು. ಪೂರ್ವೋಕ್ತ ಸತ್ವಗುಣ ಹತ್ತು ನೂರಂಶದಿಂದ ಬೆಳೆದು ಸತ್ವ ೧೦೦, ರಜ ೧೨ ಅಂಶದಿಂದ ಬೆಳೆದು ೧೨ ರಜ, ತಮ ಒಂದಂಶದಿಂದ ಬೆಳೆದು ೧ ತಮ, ಅಂತು ೧೧೩ ಗುಣದಿಂದ ಮಹತ್ತತ್ವ ಶರೀರವಾಯಿತು,

(೫) ಈ ಶರೀರದ ಮೇಲೆ ಅಹಂಕಾರ ತತ್ತ್ವ ಶರೀರ. ಮಹತ್ತತ್ವ ಗತ ಅಹಂಕಾರೋಪಾದಾನ ಸತ್ವ ಹತ್ತು, ಮಹತ್ತತ್ವಗತ ರಜ ಒಂದು, ಮಹತ್ತತ್ವಗತ ತಮ ಹತ್ತು. ಅಂತು ೨೧ ಸೇರಿ, ಅಹಂಕಾರ ತತ್ತ್ವವಾಯಿತು. ಇದೇ ಅಹಂಕಾರ ಶರೀರ. ಇದು ಅನಿರುದ್ಧ ಶರೀರದಲ್ಲಿ ಅಂತರ್ಭೂತ.

**ಅನಿರುದ್ಧ ಶರೀರ** ಅಹಂಕಾರ ಶರೀರದ ಮೇಲೆ ಆಗೋದಾಯಿತು. ಮಹತ್ತತ್ವಗತ ಸತ್ವ ನೂರಕ್ಕೆ ಒಂದೊಂದಕ್ಕೆ ಸಾವಿರ ಪ್ರಕಾರ ಬೆಳೆದು, ಒಂದು ಲಕ್ಷ ಸತ್ವ, ರಜ ಹನ್ನೆರಡಕ್ಕೆ ಒಂದೊಂದಕ್ಕೆ ನೂರು ನೂರು ಪ್ರಕಾರ ಬೆಳೆದು, ಹನ್ನೆರಡು ನೂರು ರಜ, ತಮ ಒಂದಕ್ಕೆ ಹತ್ತು ಪ್ರಕಾರ ಬೆಳೆದು, ಹತ್ತು ತಮ. ಅಂತು, ಒಂದು ಲಕ್ಷದ ಒಂದು ಸಾವಿರದ ಇನ್ನೂರ ಹತ್ತು. ಇಷ್ಟು ಗುಣದಿಂದ ಅನಿರುದ್ಧ ಶರೀರ ಆಗೋದಾಯಿತು. ಅದರ ಲೆಕ್ಕ :-

ಸತ್ವ - ೧೦೦ × ೧೦೦೦ = ೧೦೦೦೦೦ (ಒಂದು ಲಕ್ಷ)
ರಜ - ೧೨ × ೧೦೦ = ೦೦೧೨೦೦ (ಸಾವಿರದಿನ್ನೂರು)
ತಮ - ೧ × ೧೦ = ೦೦೦೦೧೦ (ಹತ್ತು)

ಒಟ್ಟು = ೧೦೧೨೧೦ ಗುಣಗಳು

(೬) ಇದರ ಮೇಲೆ ಶುಕ್ಲ ಶೋಣಿತಮಯವಾದ ಸ್ಥೂಲಶರೀರದ ಉತ್ಪತ್ತಿ, ಅಂತು, ಸ್ವರೂಪ ಶರೀರ, ಸ್ಥೂಲ ಶರೀರದ ಸಂಗಡ ಆರು ಶರೀರಗಳು. ಎಲ್ಲಾ ಶರೀರಗಳಲ್ಲಿಯೂ ೨೪ ತತ್ವಗಳಿವೆ.

ಅಹಂಕಾರ ಶರೀರದ ವೈಕಾರಿಕದಿಂದ ಮನಸ್ಸು, ತೈಜಸದಿಂದ ಪಂಚ ಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯ, ಅಂದರೆ ದಶೇಂದ್ರಿಯಗಳು, ತಾಮಸಾಹಂಕಾರದಿಂದ ಪಂಚತನ್ಮಾತ್ರಗಳು ಮತ್ತು ಪಂಚಭೂತಗಳು ಇಪ್ಪತ್ತೊಂದು: ಮಹತ್ತತ್ವಗಳು ಮೂರು ಒಂದು ಅಂಶದಿಂದ ಅನಿರುದ್ಧ ಶರೀರ ೨೪ ತತ್ತ್ವದಿಂದ ಯುಕ್ತವಾಯಿತು. ಉಪಚಯಾಪಚಯಗಳು ಸ್ಥೂಲ ಶರೀರಕ್ಕೆ ಹೊರತು ಮಿಗಿಲಾದ ಶರೀರಗಳಿಗೆ ಇಲ್ಲಾ ಎಂತ ತಾತ್ಪರ್ಯ. ಅನಾದಿ ಲಿಂಗಶರೀರದಲ್ಲಿ ರಮಾ ಮಧುಸೂದನರೇ. ತದ್ವ್ಯತಿರಿಕ್ತ ಬ್ರಹ್ಮ ವಾಯ್ವಾದಿಗಳ ಪ್ರವೇಶ ಇಲ್ಲ, ಅಣುಲಿಂಗದಲ್ಲಿ ಬ್ರಹ್ಮ ವಾಯ್ವಾದಿಗಳ ಪ್ರವೇಶ ಉಂಟು. ರುದ್ರಾದಿಗಳ ಪ್ರವೇಶ ಇಲ್ಲಾ. ಮುಖ್ಯಾಭಿಮಾನಿ ರಮಾ. ಅಮುಖ್ಯಾಭಿಮಾನಿಗಳು ಬ್ರಹ್ಮ ವಾಯುಗಳು. ಮಹತ್ತತ್ವ ಶರೀರದಲ್ಲಿ ಬ್ರಹ್ಮ ವಾಯ್ವಾದಿಗಳು ಮುಖ್ಯಾಭಿಮಾನಿಗಳು. ಇದೇ ಅವರಿಗೆ ಆವಾಸಗಳು. ಅಹಂಕಾರ ತತ್ತ್ವ ಅನಿರುದ್ಧ ಶರೀರದಲ್ಲಿ ಪ್ರಭೇದವಾಗಿ ಇದೆ. ಯಾವತ್ತೂ ದೇವತೆಗಳಿಗೂ ಅನಿರುದ್ಧ ಶರೀರದಲ್ಲಿ ಪ್ರವೇಶ ಉಂಟು. ಎಂದರೆ. ಗರುಡಾದಿಗಳು, ಷಣ್ಮಹಿಷಿಯರು. ಬ್ರಹ್ಮಾದಿಗಳು ಅಹಂಕಾರದಲ್ಲಿ ಆವಾಸ ಉಂಟು. ದೈತ್ಯರ ಪ್ರವೇಶ ಇಲ್ಲ. ಅನಿರುದ್ಧ ಶರೀರದಲ್ಲಿ ಯಾವತ್ತೂ ದೇವ ದೈತ್ಯರಿಗೆ ಪ್ರವೇಶ ಉಂಟು. ಪಿಶಾಚಾದಿಗಳಿಗೆ ಪ್ರವೇಶ ಇಲ್ಲ. ಸ್ಥೂಲದೇಹದಲ್ಲಿ ಯಾವತ್ತೂ ದೇವತೆಗಳು,

ಪಿಶಾಚಾದಿಗಳು ಪ್ರವೇಶ ಉಂಟು. ಇತ್ಯಾದಿ ಅಂತರಾಂತರ ದೇಹಸ್ಥಿತಿ ತಿಳಿಯಬೇಕು. ಯಾವತ್ತರಲ್ಲಿ ಅನಿರುದ್ಧಾದಿ ರೂಪಗಳೇ ಅನಂತಾನಂತ ರೂಪಗಳ ಧರಿಸಿ ಇದ್ದಾರೆಂತ ತಿಳಿಯಬೇಕು. ||೧||

**(೨) "ಭಾವಪ್ರಕಾಶಿಕೆ" - ವ್ಯಾಖ್ಯಾನ :-**

ಈ ಸಂಧಿಯಲ್ಲಿ ತನ್ಮಾತ್ರಾಗುಣಗಳಲ್ಲಿರುವ ಭಗವದ್ರೂಪಗಳನ್ನು ಹೇಳುತ್ತಾ, ಪ್ರಥಮ ಪದ್ಯದಿಂದ ಈ ಸಾರಾಂಶವನ್ನು ಹೇಳುತ್ತಾರೆ.

ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶವೆಂಬ ಪಂಚಭೂತಗಳು. ಇವುಗಳ ಮಾತ್ರಾಗುಣಗಳು ಗಂಧ. ರಸ. ರೂಪ, ಸ್ಪರ್ಶ ಮತ್ತು ಶಬ್ದಗಳೆಂದು ಐದು ವಿಧ. ಇವುಗಳಿಂದ ಕೂಡಿದ ಈ ಶರೀರದಲ್ಲಿ ಅಕಾರಾದಿ ೫೧ ಅಕ್ಷರ ಪ್ರತಿಪಾದ ಅಜ, ಆನಂದಾದಿ ೫೧ ರೂಪಗಳನ್ನು ಚಿಂತಿಸಬೇಕು.

ಅದೆಂತೆಂದರೆ – ಮಹಾ ಭೂತಗಳಲ್ಲಿ ಆಕಾಶಾದಿ ಒಂದೊಂದು ಭೂತದಲ್ಲಿಯೂ ವಾಯ್ವಾದಿ ೪ ಭೂತಾದಿಗಳ ಸಂಬಂಧವಿರುವುದು. ಅದರಂತೆ. ಆಕಾಶಾದಿ ತನ್ಮಾತ್ರಾಗುಣಗಳಾದ ಶಬ್ದಾದಿಗಳಲ್ಲಿ ಸ್ಪರ್ಶಾದಿಗುಣಗಳು ಕಲತೇ ಇರುವುವು. ಒಂದೊಂದು ಭೂತದಲ್ಲಿ ಅವಶಿಷ್ಟ ೪ ಭೂತಗಳ ಸಂಬಂಧವೂ, ಮಾತ್ರಾಗುಣಗಳ ಒಂದೊಂದರಲ್ಲಿ ೪ ಮಾತ್ರಾಗುಣಗಳ ಸಂಬಂಧವೂ ಇರುವುದೆಂದು ತಿಳಿಯಬೇಕು. **ಭಾಗವತ ತೃತೀಯಸ್ಕಂಧದ ೨೭ನೆಯ ಅಧ್ಯಾಯದಲ್ಲಿ ೫೧ನೆಯ ಶ್ಲೋಕ ಇಂತಿದೆ :-**

**"ಪರಸ್ಯ ದೃಶ್ಯತೇ ಧರ್ಮೋಽತ್ಯ ಪರಸ್ಮಿನ್ಯಮನ್ವಯಾತ್"**

**ವಿಜಯ ಧ್ವಜೀಯ ವ್ಯಾಖ್ಯಾನದಲ್ಲಿ :-**

**"ಪರಸ್ಯ ಪೂರ್ವಸ್ಯ ಕಾರಣಾತ್ಯಾಕಾಶಾಧೇ |**
**ಧರ್ಮಃ ಶಬ್ದಾದಿಗುಣೋ ಪರಸ್ಮಿನ್ಮಶ್ವಾತ್ತನೆಕಾರ್ಯೇ ||**
**ವಾಯ್ವಾದೌ ದೃಶ್ಯತೇ ಹಿ |**
**ಸಮನ್ವಯಾತ್ ಸಂಬಂಧಾತ್ ||**

ಅಂದರೆ, ಪರಸ್ಯ = ಪೂರ್ವಕಾರಣವಾದ ಆಕಾಶಾದಿ ಧರ್ಮವು, ಅಂದರೆ ಶಬ್ದಾದಿಗುಣಗಳು, ಅಕಿರಸ್ಮಿನ್ = ಆಮೇಲೆ ಹುಟ್ಟಿದ ಕಾರ್ಯಭೂತವಾದ ವಾಯ್ವಾದಿಗಳಲ್ಲಿ ಇರುವುವು. ಹೇಗೆಂದರೆ - ಸಮನ್ವಯಾತ್ = ಪರಸ್ಪರ ಸಂಬಂಧವಿರುವುದರಿಂದ - ಎಂದು ಹೇಳಿರುವರು.

ಈ ಆಧಾರದಿಂದ ಪಂಚಭೂತ ೫, ಒಂದೊಂದರಲ್ಲಿ ಇತರಭೂತಗಳು ೪ ಅಂದರೆ, ಭೂಮಿ ಒಂದು, ಅದರಲ್ಲಿ ಉಪಾದಿಗಳ ರಸ ಸಂಬಂಧ ಅಂತು ೫. ಹೀಗೆ ಒಂದೊಂದರಲ್ಲಿ ೫ ರಂತೆ ೨೫. ಅಂತು ೫೦. ಮನಸ್ಸೊಂದನ್ನು ಸೇರಿಸಿಕೊಂಡು ೫೧ ಆದವು. ಈ ೫೧ರಲ್ಲಿ ಅಜ, ಆನಂದ, ಮೊದಲಾದ ೫೧ ಅಕ್ಷರ ಪ್ರತಿಪಾದ್ಯರನ್ನು ತಿಳಿಯಬೇಕು, ನಮ್ಮ ಶರೀರಗಳಲ್ಲಿ ತತ್ವಾಭಿಮಾನಿ ದೇವತೆಗಳು ಎಷ್ಟು ಮಂದಿ ಇರುವರೋ ಅಷ್ಟೇ ಮಂದಿ ತತ್ವಾಭಿಮಾನಿ ದೈತ್ಯರೂ ಇರುವರು. ಪುಣ್ಯಕರ್ಮಗಳನ್ನು ಪ್ರೇರಿಸುವರು ದೇವತೆಗಳು. ಪಾಪ ಪ್ರೇರಕರು ದೈತ್ಯರು. **ಭಾಗವತ ಏಕಾದಶ ಸ್ಕಂದದಲ್ಲಿ ೨ನೆಯ ಅಧ್ಯಾಯ - ೪೯ನೆಯ ಶ್ಲೋಕದಲ್ಲಿ :-**

**"ದೇಹೇಂದ್ರಿಯ ಪ್ರಾಣಧಿಯಾಂ"** - ಎಂಬ ಭಾಗವತ ತಾತ್ಪರ್ಯವನ್ನು **" ವಿಜಯಧ್ವಜೀಯ ವ್ಯಾಖ್ಯಾನದಲ್ಲಿ "** ತೋರಿಸಿರುವರು. ಅದಾವುದೆಂದರೆ ;-

**"ದೇಹೇಂದ್ರಿಯ ಪ್ರಾಣಧಿಯಾಂ ತ್ರಿಧೈವತ್ಸಭಿಮಾನಿನಃ ।**
**ತತ್ರೋತ್ತಮಾ ದೇವತಾಸ್ತೌ ಸರ್ವದೋಷವಿವರ್ಜಿತಾಃ ॥**
**ಮಧಮಾಗುಣದೋಷತಾ ಅಧಮಾ ಅಸುರಾ ಮತಾಃ ।**
**ತೇ ಭ್ಯೋನ್ಯೋ ಮಾನುಷೋ ಜೀವಸ್ತಾಭ್ಯಂ ದೇವಾಸುರಾವಪಿ॥**
**ಜೀವಾಭಿಮಾನಿನಿಶ್ಚೈವ ತ್ರಿವಿಧಾ ಸಂಪ್ರಕೀರ್ತಿತಾಃ ।**
**ಜೀವಮಾನ್ಯುತ್ತಮೋ ಬ್ರಹ್ಮಾ ಮಧ್ಯಮಃ ಸ್ವಯಮೇವತ ॥**
**ಅಧಮಃ ಕಲಿರುದ್ದಿಷ್ಟಃ ತತ್ರ ಮಧ್ಯಮ ನೀಚಯೋಃ ।**

ಮೃತಿಜನ್ಮ ಕ್ಷುಧಾ ದುಃಖ ಪ್ರಭೃತ್ಯಖಿಲಮೇವತು ।
ನೋತ್ತಮಸ್ಯತು ಜೀವಸ್ಯ ದೇಹಾದೇಶ್ಚ ಕಥಂಚನ ॥
ಅಸುರಾಣಾಂ ಅಧರ್ಮಸ್ಯ ವೃದ್ಧ್ಯಾ ಸುಖಮುಪೇಕ್ಷ್ಯತೇ ।
ದೇವಾನಾಂ ನೈವಕೇನಾಪಿ ದುಃಖಂ ಪ್ರೀತಿಸ್ತು ಧರ್ಮತಃ ॥
ಅಧರ್ಮೋಽಪಿ ವೀತಯೇಸ್ಯಾದಸುರಾಣಾಂ ತಮೋಗತೇಃ ।
ದೇವಾನಾಂ ಪುಣ್ಯಪಾಪಾಭ್ಯಾಂ ಸುಖಮೇವೋತ್ತರೋತ್ತರಮ್ ॥
ತೇಷಾಂ ದುಃಖಾಧಿಕಂ ಕಿಂಚಿದಸುರಾವೇಶತೋ ಭವೇತ್ ।
ಪ್ರಾಣಸ್ಯನಾಸುರಾವೇಶೋ ಹರಿಣಾಚ ಸಮೋಹಿಸಃ ॥
ಸಂಪೂರ್ಣಾನುಗ್ರಹಾದ್ವಿಷ್ಣೋಃ ಪ್ರಾಣಾಃ ಪೂರ್ಣಗಣೋಮತಃ।
ಅಸುರಾಣಾಂ ಸುಖಾದ್ಯಾಶ್ಚ ದೇವಾವೇಶಾದುದೀರಿತಾಃ ॥"

ಇತ್ಯಾದಿ ದೇಹ, ಇಂದ್ರಿಯಗಳು, ಪ್ರಾಣ, ಬುದ್ಧಿ ಮೊದಲಾದವುಗಳಿಗೆ ಅಭಿಮಾನಿಗಳು ಮೂರು ವಿಧರುಂಟು, ಉತ್ತಮರು ದೇವತೆಗಳು, ಸರ್ವ ದೋಷರಹಿತರು, ಮಧ್ಯಮರು ಗುಣದೋಷಯುಕ್ತರು, ಅಧಮರು ದೈತ್ಯರು, ಇವರೆಲ್ಲರೂ ದೋಷಯುಕ್ತರು. ಈ ಮೂವರಿಂದ ಭಿನ್ನನು ಮನುಷ್ಯ ಜೀವನು. ಇವನಿಗೆ ದೇವಾಸುರರಭಿಮಾನಿಗಳು,

ಜೀವಾಭಿಮಾನಿಗಳೂ ಕೂಡ ತ್ರಿವಿಧರು. ಜೀವಾಭಿಮಾನಿಗಳಲ್ಲಿ ಉತ್ತಮರು ಬ್ರಹ್ಮದೇವರು. ಮಧ್ಯಮನು ಜೀವನೇ ಮತ್ತು ಪುರಂಜನನೆಂಬ ರಾಜರ್ಷಿಯು. ಅಧಮನು ಕಲಿಯು. ಇವರಲ್ಲಿ ಮಧ್ಯಮ ಜೀವನಿಗೂ, ಜೀವಮುನಿಯಾದ ಪುರಂಜನನಿಗೂ, ನೀಚನಾದ ಕಲಿಗೂ ಮರಣ, ಜನನ, ಹಸಿವು ಮೊದಲಾದ ದೇಹಗತ ದುಃಖಗಳುಂಟು, ಇದೇ ಪ್ರಕಾರ ದೇಹ ಗತರಾದ ತತ್ವಾಭಿಮಾನಿ ದೇವತೆಗಳಿಗೆ ದೇಹಗತ ಸುಖ ಮಾತ್ರವಾಗುವುದು, ಜೀವನಿಗೆ ಸುಖ ದುಃಖಗಳೆರಡೂ ಸಂಬಂಧವಾಗುವುವು. ಅಸುರರಿಗೆ ಅಧರ್ಮವೃದ್ಧಿಯಿಂದಲೇ ದುಃಖವೇ ಉಂಟಾಗುವುದು. ದುರ್ಯೋಧನಾದಿ

ಗಳಿಗಾದಂತೆ ಕೆಲವು ಅಧರ್ಮಗಳಿಗೆ ಫಲರೂಪವಾಗಿ ಸುಖವೇ ಆಗುವುದುಂಟು. ಅದು ಅವರಿಗೆ ಪಾಪವೃದ್ಧಿಗೇ ಆಗುವುದು, ದೇವತೆಗಳಿಗೆ ಯಾವ ಬಗೆ ಯಿಂದಲೂ ದುಃಖವಿಲ್ಲ. ಧರ್ಮವೃದ್ಧಿಯಿಂದ ಪರಮಾತ್ಮನ ಪ್ರೀತಿಯೇ ಹೆಚ್ಚಾಗುತ್ತಿರುವುದು. ಒಂದು ಕಾಲದಲ್ಲಿ ದೇವತೆಗಳು ಅಧರ್ಮವನ್ನಾ ಚರಿಸಿದರೂ ಅದು ಅಸುರರಿಗೆ ತಮಸ್ಸಾಧನಕ್ಕಾಗಿ ತಾವು ಮಾಡಿ ದೈತ್ಯರಿಗೆ ಆ ಪಾಪವನ್ನು ಹಂಚುವರು. ಆದ್ದರಿಂದ ದೇವತೆಗಳು ಪುಣ್ಯಮಾಡಲಿ, ಪಾಪಮಾಡಲಿ ಅಥವಾ ದೇಹಗತವಾಗಿದ್ದು ನಮ್ಮಿಂದಪುಣ್ಯಪಾಪಾದಿಗಳನ್ನೇನು ಮಾಡಿಸಿದರೂ, ಅವರಿಗೆ ಪುಣ್ಯಫಲವೇ ಬರುವುದು. ಪಾಪಫಲವು ತತ್ವಾ ಭಿಮಾನಿ ದೈತ್ಯರಿಗೆ ಆಗುವುದು. ಇದಲ್ಲದೆ ದೈತ್ಯಜೀವರಿಗೆ ಎಂದಿಗೂ ಸುಖವೇ ಇಲ್ಲ. ದೇವತೆಗಳಿಗೆ ಎಂದಿಗೂ ದುಃಖವಿಲ್ಲ. ಪಾಂಡವರು ಅಜ್ಞಾತವಾಸಾದಿಗಳಲ್ಲಿ ಕಷ್ಟಪಡಲಿಲ್ಲವೇ ? ದುರ್ಯೋಧನಾದಿಗಳು ರಾಜ್ಯಾ ದಿಗಳಿಂದ ಭೋಗಪಡಲಿಲ್ಲವೇ ? ಅಂದರೆ, ದೇವತೆಗಳಿಗೆ ಯತ್ಕಿಂಚಿ ದ್ದುಃಖವು ಅಸುರಾವೇಶರಿಂದ ಆಗುವುದು. ಅದೇ ದೇವತೆಗಳೊಳಗಿರುವ ದೈತ್ಯರೇ ಅದನ್ನು ಅನುಭವಿಸುವರು. ದೇವತಾ ಜೀವಕ್ಕಿಲ್ಲ. ದೈತ್ಯರಿಗೆ ಸುಖವಾದರೂ ದೇವಾವೇಶದಿಂದಲೇ ಹೊರತು ದೈತ್ಯಜೀವರಿಗಿಲ್ಲ. ಪ್ರಾಣ ದೇವರಿಗೆ ಮಾತ್ರ ಎಂದೆಂದಿಗೂ ಅಸುರಾವೇಶವಿಲ್ಲ. ಅವರು ಪರಮಾತ್ಮನ ಸ್ವರೂಪವನ್ನು ತೋರಿಸುವ ವಿಷಯದಲ್ಲಿ ಒರೆಗಲ್ಲಿನಂತಿರುವರು. ಪರಮಾ ತ್ಮನ ಸಂಪೂರ್ಣಾನುಗ್ರಹದಿಂದ ಅವರು ಪೂರ್ಣಗುಣಗಳುಳ್ಳವರೆಂದು ತಿಳಿಯ ಬೇಕು. ದೇಹಗತ ತತ್ವಾಭಿಮಾನಿ ದೇವ ದೈತ್ಯರಿಗೆ ಸುಖ ದುಃಖಗಳನ್ನು ಕೊಡುತ್ತಾ, ಇದೇ ಶರೀರದಲ್ಲಿ ಕ್ರೀಡಿಸುತ್ತಾ. ಅವರವರ ಕರ್ಮಾನುಸಾರ ವಾಗಿ ದ್ವೇಷಿಗಳನ್ನು ಶಿಕ್ಷಿಸಿ, ಪರದಲ್ಲಿ ತಮೋರೂಪವಾದ ಶಿಕ್ಷೆಯನ್ನು ಕೊಡುವನೆಂದು ತಾತ್ಪರ್ಯ; ॥೧॥

## (ಜ) "ಭಾವದರ್ಪಣಟೀಕಾ" - ವ್ಯಾಖ್ಯಾನ :-

ಶ್ರೀ ಗುರುಭ್ಯೋನಮಃ । ಶ್ರೀ ಸರ್ವಜ್ಞ ಬಂಧುವೇ ನಮಃ ॥ ಸ್ವಕೀಯದೇಹದಲ್ಲಿ ಇರತಕ್ಕ ವಿವರಗಳನ್ನು ಜ್ಞಾನಚಕ್ಷುವಿನಿಂದ ತಿಳಿದು

ಉಪಾಸನೆ ಮಾಡತಕ್ಕದೆಂದು ದಾಸಾರ್ಯರು ಪಂಚಮಾತ್ರಾ ಸಂಧಿಯನ್ನು ಉಪಕ್ರಮಿಸುತ್ತಾರೆ :- "ಹರಿಕಥೇತಿ" ॥

ಪೃಥಿವ್ಯಾದಿ ಪಂಚಭೂತಗಳು ಗಂಧಾದಿ ಪಂಚ ತನ್ಮಾತ್ರಾಗಳು ಈ ಹತ್ತರಲ್ಲಿ ಪಂಚಾಶದ್ವರ್ಣಗಳಿಂದ ಪ್ರತಿಪಾದಿತನಾದಂಥ ಶ್ರೀಹರಿಯು ನಿಂತು, ಸುರಾಸುರರಿಗೆ ಸುಖ ದುಃಖಪ್ರದನಾಗುವನೆಂದು ಹೇಳುತ್ತಾರೆ :-

"ಭೂಸಲಿಲೇತಿ" ದ್ವೇಷಿಪರ - ದ್ವೇಷವುಳ್ಳ ಶತ್ರುಗಳನ್ನು ಬಡಿವ-ಹೊಡೆಯುವ ॥೧॥

## (೪) ಶ್ರೀ ವ್ಯಾಸ ದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

ಪಂಚಭೂತ ತನ್ಮಾತ್ರಾಗತ ರೂಪ ಮಹಿಮಾನಂ ವಕ್ತುಂ ತನ್ಮಾತ್ರಾ ಸಂಧಿಂ ವಿರಚಯತಿ - "ಭೂಸಲಿಲೇತಿ" ॥ ಬಡಿವಾ - ಹೊಡೆಯುವಾ. ॥೧॥

**ಕನ್ನಡಾರ್ಥ :-**

ಪೃಥಿವ್ಯಾದಿ ಭೂತ ಪಂಚಕಗಳು. ಅವುಗಳ ತನ್ಮಾತ್ರಾಗುಣ ವಿಶೇಷಗಳು. ತದಂತರ್ಗತ ಭಗವದ್ರೂಪಗಳ ಮಹಿಮಾತಿಶಯಗಳನ್ನೂ ವಿವರಿಸಲು **ತನ್ಮಾತ್ರಾಸಂಧಿ**ಯನ್ನು ದಾಸವರ್ಯರು ಪ್ರಾರಂಭಿಸುತ್ತಾರೆ. "ಭೂಸಲಿಲ" ಎಂಬ ಪ್ರಥಮ ಪದ್ಯದಿಂದ. ॥೧॥

## (೫) "ಗುರುಹೃದಯ ಪ್ರಕಾಶಿಕೆ" - ವ್ಯಾಖ್ಯಾನ :-

ಪಂಚ ತನ್ಮಾತ್ರಾ ಪಂಚ ಭೂತಾದಿ ಸನ್ನಿಹಿತ, ಪೂರ್ವಸಂಧಿಯಲ್ಲಿ ಸಂಕ್ಷೇಪವಾಗಿ ಹೇಳಿದ ಅಜಾದ್ವೈವತ್ತೊಂದು ರೂಪ ಮುಂತಾದ್ದರ ಉಪಾಸನೆ ಈ ಏಳನೆಯ ಸಂಧಿಯಲ್ಲಿ ನಿರೂಪಿಸುತ್ತಾರೆ. ಪಂಚತನ್ಮಾತ್ರಾದಿಗತ ದೇವರ ರೂಪ ಮಹಿಮೆ ವರ್ಣಿಸುವ ಹರಿಕಥೆಯೇ ಅಮೃತಕ್ಕಿಂತ ಸಾರವಾದದ್ದನ್ನು ಗುರುಕೃಪೆಯಿಂದ ವರ್ಣಿಸುವೆ. ಅತ್ಯಂತ ಹರಿಭಕ್ತರು ಕಿವಿಗೊಟ್ಟು ಲಾಲಿಸುವುದು.

ಅಜಾದಿರೂಪ ಉಪಾಸನೆ ಮಹಿಮೆ ಸಹಿತ ಸಂಗ್ರಹಿಸಿ ನಿರೂಪಿಸುತ್ತಾರೆ :- ಭೂಮಿ, ಜಲ, ಶಿಖಿ ಎಂಬ ಅಗ್ನಿ, ಪವನ ಎಂಬ ವಾಯು, ಭೂತಾಕಾಶ, ಶಬ್ದ ಸ್ಪರ್ಶ, ರೂಪ, ರಸ, ಗಂಧವೆಂಬ ತನ್ಮಾತ್ರಾಸಹಿತ ಐದರಲ್ಲೂ, ಐದು ರೂಪನಾದ ಏಕಪಂಚಾಶದ್ವರ್ಣವೆಂಬ, ಅಕಾರಾದಿ ಕ್ಷಕಾರಾಂತ ೫೧ ಅಕ್ಷರದಿಂದ ವೇದ್ಯ, ಅಂದರೆ, ತಿಳಿಸಿಕೊಳ್ಳುವ ಶ್ರೀ ಹರಿ, ಈ ಸ್ಥೂಲ ಶರೀರದಲ್ಲಿ ವ್ಯಾಪಿಸಿದ್ದು, ದೇವತೆಗಳಿಗೆ ಮುಕ್ತಿ ಪ್ರದನಾಗಿ, ಅಸುರರಿಗೆ ನಿತ್ಯ ದುಃಖಪ್ರದನಾಗಿ ಕ್ರೀಡಿಸುವನು. ಸ್ವಭಾವ ದ್ವೇಷಿಗಳಾದ ಅಸುರರನ್ನು ಇಹದಲ್ಲೂ ಸಂಹರಿಸುವನು. ॥೧॥

## ಸರ್ವವ್ಯಾಖ್ಯಾನಸಾರ ಸಂಗ್ರಹ :

(೧) ಈ ಸ್ಥೂಲಶರೀರವು ಪಾಂಚಭೌತಿಕವಾದದ್ದು. ಅಂದರೆ ಭೂತ ಪಂಚಕಗಳಿಂದ ನಿರ್ಮಾಣವಾಗಿದೆ.

(೨) ಭೂತ ಪಂಚಕಗಳು ಕ್ರಮವಾಗಿ (೧) ಪೃಥ್ವೀ (೨) ಅಪ್ಪು (೩) ತೇಜಸ್ಸು (೪) ವಾಯು ಮತ್ತು (೫) ಆಕಾಶ ಎಂಬುದಾಗಿ ಪಂಚ ವಿಧ. ಈ ಪಂಚ ಮಹಾಭೂತಗಳನ್ನು ದಾಸರಾಯರು ಕ್ರಮವಾಗಿ ಭೂ, ಸಲಿಲ, ಶಿಖಿ, ಪವನ ಮತ್ತು ಭೂತಾಕಾಶ ಎಂದು ಪ್ರಸಕ್ತ ಪದ್ಯದಲ್ಲಿ ನಿರೂಪಿಸಿರುತ್ತಾರೆ.

(೩) ಪೂರ್ವೋಕ್ತ ಭೂತ ಪಂಚಕಗಳ ಪೈಕಿ, ಪ್ರತಿಯೊಂದರಲ್ಲಿಯೂ ಅವಶಿಷ್ಟವಾದ ನಾಲ್ಕೂ ಅಡಕವಾಗಿವೆ. ಉದಾಹರಣೆಗೆ ಆಕಾಶ ತತ್ತ್ವದಿಂದ ವಾಯುತತ್ತ್ವ, ವಾಯುವಿನಿಂದ ತೇಜಸ್ಸು, ತೇಜಸ್ಸಿನಿಂದ ಅಪ್‌ತ್ತತ್ವ, ಅಪ್‌ತ್ತತ್ವದಿಂದ ಭೂತತ್ತ್ವ ಹೀಗೆ ಜನ್ಯವಾಗಿವೆ. ಆಕಾಶ ತತ್ತ್ವದಲ್ಲಿ ಉಳಿದ ನಾಲ್ಕೂ ತತ್ತ್ವಗಳಾದ ವಾಯು, ತೇಜಸ್ಸು, ಅಪ್ಪು ಮತ್ತು ಪೃಥ್ವೀ ತತ್ತ್ವಗಳು ಪ್ರಾಚುರ್ಯಾಪ್ರಾಚುರ್ಯದಿಂದ ಅಡಕವಾಗಿವೆ. ಅಂದರೆ ಆಕಾಶ ತತ್ತ್ವವು ಪ್ರಾಚುರ್ಯವಾಗಿಯೂ, ಉಳಿದ ನಾಲ್ಕೂ ತತ್ತ್ವಗಳು

ಅಪ್ರಾಚುರ್ಯವಾಗಿಯೂ ಇವೆ. ಇದಕ್ಕೆ ಸಂಸೃಷ್ಟಿರೂಪಗಳೆಂದು ಹೆಸರು. ಅಂತೆಯೇ ಕೊನೆಯ ತತ್ತ್ವವಾದ ಪೃಥಿವೀ ತತ್ತ್ವದಲ್ಲಿ ಮೇಲಿನ ನಾಲ್ಕು ತತ್ತ್ವಗಳು ಸಂಸೃಷ್ಟಗಳಾಗಿ ಕ್ರಮವಾಗಿ ಇವೆ. ಇದರಿಂದ ಪ್ರತಿತತ್ತ್ವದಲ್ಲಿಯೂ ಐದರಂತೆ. ಭೂತ ಪಂಚಕಗಳಲ್ಲಿ ೫ × ೫ = ೨೫ ತತ್ತ್ವಗಳು ಸಂಸೃಷ್ಟವಾಗಿವೆ.

(೪) ಪೂರ್ವೋಕ್ತ ಭೂತ ಪಂಚಕಗಳ ಗುಣ ವಿಶೇಷಗಳಿಗೆ **ತನ್ಮಾತ್ರಾ**ಗಳೆಂದು ಹೆಸರು. ಇವುಗಳ ವಿವರ ಇಂತಿದೆ :-

(೧) ಭೂ ತತ್ತ್ವದ ತನ್ಮಾತ್ರಾಗುಣವು **ಗಂಧವು**
(೨) ಅಪ್‌ತತ್ತ್ವದ ತನ್ಮಾತ್ರಾಗುಣವು **ರಸವು**
(೩) ತೇಜಸ್ಸಿನ ತನ್ಮಾತ್ರಾಗುಣವು **ರೂಪವು**
(೪) ವಾಯುತತ್ತ್ವದ ತನ್ಮಾತ್ರಾಗುಣವು **ಸ್ಪರ್ಶವು**
(೫) ಆಕಾಶ ತತ್ತ್ವದ ತನ್ಮಾತ್ರಾಗುಣವು **ಶಬ್ದವು**

ಭೂತ ಪಂಚಕಗಳಂತಯೇ, ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ ಎಂಬ ಪಂಚ ತನ್ಮಾತ್ರಾಗಳಲ್ಲಿ ಒಂದೊಂದು ಗುಣದಲ್ಲಿ ಉಳಿದ ನಾಲ್ಕು ಗುಣಗಳು ಸಂಸೃಷ್ಟ ರೂಪದಲ್ಲಿ ಅಡಕವಾಗಿವೆ, ಇದರಿಂದ ಪ್ರತಿ ತನ್ಮಾತ್ರಾ ಗುಣದಲ್ಲಿಯೂ ಐದು ಗುಣಗಳಂತೆ, ೫ × ೫ = ೨೫ ಸಂಸೃಷ್ಟ ರೂಪಗಳಾಯಿತು.

(೫) ಇಂತು ಸ್ಥೂಲ ದೇಹಗತ ಭೂತಪಂಚಕ ಮತ್ತು ತನ್ಮಾತ್ರಾ ಪಂಚಕಗಳ ಪ್ರಾಚುರ್ಯಾಪ್ರಾಚುರ್ಯ ರೂಪಗಳ ಪ್ರಕಾರ :-

| | | | |
|---|---|---|---|
| (1) | ಭೂತಪಂಚಕಗಳ ಸಂಸೃಷ್ಟ ರೂಪಗಳು | = | ೨೫ |
| (2) | ಪಂಚ ತನ್ಮಾತ್ರಾಗತ ಸಂಸೃಷ್ಟ ರೂಪಗಳು | = | ೨೫ |
| | ಒಟ್ಟು | = | ೫೦ |

ಇಂತಹ ಪಾಂಚ ಭೌತಿಕವಾದ ಸ್ಥೂಲ ದೇಹದಲ್ಲಿ ಆವಾಸವಾಗಿರುವ ಜೀವಾಂತರ್ಯಾಮಿ ರೂಪ ಒಂದು. ಅಂತು ಒಟ್ಟು ೨೫ + ೨೫ + ೧ = ೫೧ ಅಧಿಷ್ಠಾನಗಳಾಯಿತು.

(೬) ಅಕ್ಷರ ಮಾಲೆಯಲ್ಲಿ ಇರುವ ಅಕ್ಷರಗಳ ಸಂಖ್ಯೆ = ೫೧. "ಅ" ಕಾರದಿಂದ ಪ್ರಾರಂಭಿಸಿ, "ಕ್ಷಂ" ಪರ್ಯಂತ ೫೧ ವರ್ಣಗಳಿವೆ. "ಅಜ" ನಾಮದಿಂದಾರಂಭಿಸಿ, "ಶ್ರೀ ಲಕ್ಷ್ಮೀನರಸಿಂಹ" ಪರ್ಯಂತ ಈ ೫೧ ವರ್ಣ ಪ್ರತಿಪಾದ್ಯನಾಗಿ ಶ್ರೀ ಪರಮಾತ್ಮನು ಈ ಸ್ಥೂಲ ದೇಹದಲ್ಲಿ ಶಿರದಿಂದ ಆರಂಭಿಸಿ, ಪಾದಾಂತದವರೆಗೂ ವ್ಯಾಪಿಸಿದ್ದಾನೆ, ಈ ವಿಷಯವು **ಮಾತೃಕಾನ್ಯಾಸ** ಪದ್ಧತಿಯಲ್ಲಿ ನಿರೂಪಿತವಾಗಿದೆ. ಇದನ್ನೇ ದಾಸರಾಯರು **"ಒಂದಧಿಕ ಪಂಚಾಶದ್ವರಣ ವೇದ್ಯ"** - ಎಂಬ ಶಬ್ದ ಪ್ರಯೋಗದಿಂದ ವಿವರಿಸುತ್ತಾರೆ. "ಪಂಚಾಶತ್" ಎಂದರೆ ೫೦, "ಒಂದಧಿಕ ಎಂದರೆ ೫೦ಕ್ಕೆ ೧ ಹೆಚ್ಚಾದ, ಅಂದರೆ, ೫೦ + ೧ = ೫೧ ಎಂದಾಗುವುದು. ಇಂತು ಏಕ ಪಂಚಾಶದ್ವರ್ಣವಾಚ್ಯನಾಗಿ, ಅಂದರೆ ೫೧ ಸಂಖ್ಯಾಕವಾದ ವರ್ಣಗಳಿಂದ ಪ್ರತಿಪಾದ್ಯನಾಗಿ (ತಿಳಿಯಲ್ಪಡುವವನಾಗಿ) ಇದ್ದಾನೆ ಎಂದು ತಾತ್ಪರ್ಯ.

(೭) ಅಕಾರಾದಿ ಕ್ಷ ಕಾರ ಪರ್ಯಂತ ಇರುವ ೫೧ ವರ್ಣಗಳು ವಿಂಗಡಣೆ ಇಂತಿದೆ :-

(1) ಅ ಕಾರದಿಂದ ಅಃ ವರೆಗೆ **ಸ್ವರಾಕ್ಷರಗಳು** = ೧೬

(2) ಕ ಕಾರದಿಂದ ಮ ವರೆಗೆ
**ವರ್ಗೀಯ ವ್ಯಂಜನಾಕ್ಷರಗಳು** = ೨೫

(3) ಯ ಕಾರದಿಂದ ಕ್ಷ ಪರ್ಯಂತ
**ಅವರ್ಗೀಯ ವ್ಯಂಜನಾಕ್ಷರಗಳು** = ೧೦

ಒಟ್ಟು = ೫೧

**ತಂತ್ರಸಾರೋಕ್ತವಾದ ಮಾತೃಕಾನ್ಯಾಸದಲ್ಲಿ** ಹೇಳಿರುವಂತೆ (೧) ಅ ಕಾರಾದಿ ಕ್ಷ ಕಾರ ಪರ್ಯಂತ ೫೧ ವರ್ಣಗಳು (೨) ತದ್ವರ್ಣ ಪ್ರತಿಪಾದ್ಯ ಭಗವದ್ರೂಪಗಳು (೩) ಈ ಸ್ಥೂಲ ಶರೀರಗತ ಸ್ಥಾನಗಳು ಮತ್ತು (೪) ಆ ಶಬ್ದಾರ್ಥಗಳ ವಿವರಣೆ - ಈ ಮುಖ್ಯ ತತ್ತ್ವಗಳ ವಿಹಂಗಮ ನೋಟವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ :-

## (೧) ಸ್ವರಾಕ್ಷರಗಳು = ೧೬

| ಕ್ರಮ ಸಂಖ್ಯೆ | ವರ್ಣ | ವರ್ಣವಾಚ್ಯರೂಪ | ಶಬ್ದಾರ್ಥ ವಿವರಣೆ | ಸ್ಥೂಲ ದೇಹಗತ ಸ್ಥಾನ |
|---|---|---|---|---|
| ೧ | ಅ | ಅಜ | ಜನನರಹಿತನು | ಶಿರಸ್ಸು |
| ೨ | ಆ | ಆನಂದ | ಆನಂದರೂಪನು | ಮುಖ |
| ೩ | ಇ | ಇಂದ್ರ | ಪರಮೈಶ್ವರ್ಯ ಸಂಪನ್ನನು | ಬಲಗಣ್ಣು |

| | | | | |
|---|---|---|---|---|
| ೪ | ಈ | ಈಶ | ಮಹಾಲಕ್ಷ್ಮಿಗೂ ಮುಖ್ಯ ನಿಯಾಮಕನು | ಎಡಗಣ್ಣು |
| ೫ | ಉ | ಉಗ್ರ | ರುದ್ರಸಂಹಾರಕ ಪಾಪಿಗಳಿಗೆ ಕ್ರೂರನು | ಬಲಗಿವಿ |
| ೬ | ಊ | ಊರ್ಜ | ನಿಸ್ಸೀಮನಾದ ಬಲ, ಕ್ರಿಯಾಶಕ್ತಿವಂತನು | ಎಡಗಿವಿ |
| ೭ | ಋ | ಋತಂಭರ | ಸತ್ಯ ಜಗದಾಧಾರ ಹಾಗೂ ಪೋಷಕ | ಬಲ ಮೂಗಿನ ಹೊಳ್ಳೆ |
| ೮ | ೠ | ೠಘ | ದಾನವರಿಗೆ ಕ್ಲೇಶದಾಯಕ | ಎಡ ಮೂಗಿನ ಹೊಳ್ಳೆ |
| ೯ | ಌ | ಌಶ | ದೇವಮಾತೆಯಾದ ಅದಿತಿಗೆ ಸುಖಪ್ರದನು | ಬಲಗೆನ್ನೆ |
| ೧೦ | ೡ | ೡಶ | ದಿತಿದೇವಿಯನ್ನು ವಿಷಾದ ಪಡಿಸುವವನು | ಎಡಗೆನ್ನೆ |

| | | | | |
|---|---|---|---|---|
| ೧೧ | ಏ | ಏಕಾತ್ಮ | ಮುಖ್ಯಪ್ರಭುವು | ಮೇಲ್ತುಟಿ |
| ೧೨ | ಐ | ಐರ | ರುದ್ರನಿಗೆ ಸುಖಪ್ರದನು | ಕೆಳತುಟಿ |
| ೧೩ | ಓ | ಓಜೋಭೃತ್ | ನಿರತಿಶಯವಾದ ಸಾಮರ್ಥ್ಯವಂತ | ಮೇಲಿನ ದಂತ ಪಂಕ್ತಿ |
| ೧೪ | ಔ | ಔರಸ | ಬ್ರಹ್ಮನನ್ನೇ ಜ್ಯೇಷ್ಠಪುತ್ರನಾಗಿ ಉಳ್ಳವನು | ಕೆಳಗಿನ ದಂತ ಪಂಕ್ತಿ |
| ೧೫ | ಅಂ | ಅಂತ | ಪ್ರಳಯ ಕಾಲದಲ್ಲಿ ಸರ್ವ ಜಗತ್ತನ್ನೂ ಸಂಹರಿಸುವವನು | ತಲೆಯು ಮೇಲ್ಭಾಗ |
| ೧೬ | ಅಃ | ಅರ್ಧಗರ್ಭ | ಬ್ರಹ್ಮಾಂಡಗಳನ್ನು ಉದರದಲ್ಲಿ ಧರಿಸಿರುವವನು | ನಾಲಿಗೆ |

(೨) ಕ-ವರ್ಗ ಪಂಚಕ - ವ್ಯಂಜನಾಕ್ಷರಗಳು = ೫

| | | | | |
|---|---|---|---|---|
| ೧೭ | ಕ | ಕಪಿಲ | ಸುಖರೂಪನು ಸರ್ವಸಾರಭೋಕ್ತ | ಬಲಗೈಯ್ಯಿನ ಕಂಕಳು |
| ೧೮ | ಖ | ಖಪತಿ | ಇಂದ್ರಿಯಗಳಿಗೆ ನಿಯಾಮಕನು ಹಾಗೂ ಪ್ರೇರಕನು | ಬಲಗೈಯ್ಯಿನ ಕೈಗಂಟು |
| ೧೯ | ಗ | ಗರುಡಾಸನ | ಗರುಡನಮೇಲೆ ಕುಳಿತಿರುವವನು | ಬಲಗೈಯ್ಯಿನ ಮಣಿಗಂಟು |
| ೨೦ | ಘ | ಘರ್ಮ | ಶತ್ರು ಸಂಹಾರಕ | ಬಲಗೈಯ್ಯಿನ ಬೆರಳು ಗಂಟು |
| ೨೧ | ಜ | ಜಸಾರ | ವಿಷಯಗಳಲ್ಲಿ ಸಾರರೂಪದಿಂದ ಇರುವವನು | ಬಲಗೈಯ್ಯಿನ ಬೆರಳು ತುದಿ |

(೩) ಚ-ವರ್ಗ ಪಂಚಕ-ವ್ಯಂಜನಾಕ್ಷರಗಳು = ೫

| | | | | |
|---|---|---|---|---|
| ೧೧ | ಚ | ಚಾರ್ವಾಂಗ | ಸುಂದರವಾದ ಅವಯವಗಳುಳ್ಳವನು | ಎಡಗೈಯ್ಯಿನ ಕಂಕಳು |
| ೧೨ | ಛ | ಛಂದೋಗಮ್ಯ | ವೇದಪ್ರತಿಪಾದ್ಯನು | ಎಡಗೈಯ್ಯಿನ ಕೈ ಗಂಟು |
| ೧೩ | ಜ | ಜನಾರ್ದನ | ಜನನರಹಿತನು ಮತ್ತು ಸಂಸಾರದಿಂದ ದಾಟಿಸುವವನು | ಎಡಗೈಯ್ಯಿನ ಮಣಿಗಂಟು |
| ೧೪ | ಝ | ಝೂಟಿತಾರಿ | ಶತ್ರುಗಳನ್ನು ಪರಾಭವಗೊಳಿಸುವವನು | ಎಡಗೈಯ್ಯಿನ ಬೆರಳು ಗಂಟು |
| ೧೫ | ಞ | ಞಮ | ವೇದಾದಿಗಳಿಂದ ಸ್ತೋತ್ರಮಾಡುವವರಿಗೆ ಮೋಕ್ಷಪ್ರದನು | ಎಡಗೈಯ್ಯಿನ ಬೆರಳು ತುದಿ |

## (೪) ಟ-ವರ್ಗ ಪಂಚಕ-ವ್ಯಂಜನಾಕ್ಷರಗಳು-೫

| | | | | |
|---|---|---|---|---|
| ೨೭ | ಟ | ಟಂಕೀ | ಟಂಕವೆಂಬ ಯುಧವನ್ನು ಧರಿಸಿರುವವನು | ಬಲಗಾಲಿನ ತೊಡೆ ಸಂಧಿ |
| ೨೮ | ಠ | ಠಲಕ | ರುದ್ರ ಮತ್ತು ಇಂದ್ರರಿಗೆ ಸುಖಪ್ರದನು | ಬಲಗಾಲಿನ ಕಾಲುಗಂಟು |
| ೨೯ | ಡ | ಡರಕ | ಚಂದ್ರ, ಅಗ್ನಿ ಇವರಿಗೆ ವಿಶೇಷ ಕಾಂತಿದಾಯಕನು | ಬಲಗಾಲಿನ ಮಣಿಗಂಟು |
| ೩೦ | ಢ | ಢರೀ | ಮುಕ್ತರಿಗೆ ಆನಂದಪ್ರದನಾದ ಬ್ರಹ್ಮನನ್ನೇ ಪುತ್ರನಾಗಿ ಉಳ್ಳವನು | ಬಲಗಾಲಿನ ಬೆರಳುಗಳು |
| ೩೧ | ಣ | ಣಾತ್ಮ | ಸುಖ ಸ್ವರೂಪನು | ಬಲಗಾಲಿನ ಬೆರಳುಗಳ ತುದಿ |

## (೫) ತ-ವರ್ಗ ಪಂಚಕ-ವ್ಯಂಜನಾಕ್ಷರಗಳು = ೫

| | | | | |
|---|---|---|---|---|
| ೩೨ | ತ | ತಾರ | ಸಂಸಾರದಿಂದ ತಾರಣ ಮಾಡಿಸುವವನು | ಎಡಗಾಲಿನ ತೊಡೆ ಸಂಧಿ |
| ೩೩ | ಥ | ಥಬ | ಗೋವರ್ಧನ ಪರ್ವತಧಾರೀ | ಎಡಗಾಲಿನ ಕಾಲು ಗಂಟು |
| ೩೪ | ದ | ದಂಡೀ | ಗೋವುಗಳನ್ನು ಆಡಿಸಲಿಕ್ಕೆ ಕೋಲನ್ನು ಹಿಡಿದಿರುವವನು | ಎಡಗಾಲಿನ ಮಣಿಗಂಟು |
| ೩೫ | ಧ | ಧನ್ವೀ | ಶಾರ್ಙವೆಂಬ ಧನುಸ್ಸನ್ನು ಹಿಡಿದಿರುವವನು | ಎಡಗಾಲಿನ ಬೆರಳುಗಳು |
| ೩೬ | ನ | ನಮ್ಯ | ಸರ್ವರಿಂದಲೂ ವಂದನೀಯನು | ಎಡಗಾಲಿನ ಬೆರಳುಗಳ ತುದಿ |

(೬) ಪ-ವರ್ಗ ಪಂಚಕ-ವ್ಯಂಜನಾಕ್ಷರಗಳು-೫

| | | | | |
|---|---|---|---|---|
| ೩೭ | ಪ | ಪರ | ಗುಣಪೂರ್ಣನು. ಸರ್ವೋತ್ತಮನು | ಬಲಹೊಟ್ಟೆಯ ಪಾರ್ಶ್ವ |
| ೩೮ | ಫ | ಫಲೀ | ಫಲದಾಯಕನು | ಎಡಹೊಟ್ಟೆಯ ಪಾರ್ಶ್ವ |
| ೩೯ | ಬ | ಬಲೀ | ಅಮಿತ ಬಲವುಳ್ಳವನು | ಪೃಷ್ಠ |
| ೪೦ | ಭ | ಭಗ | ಪೂರ್ಣಜ್ಞಾನಾದಿ ಷಡ್ಗುಣೈಶ್ವರ್ಯ ಸಂಪನ್ನನು | ಗುಹ್ಯ |
| ೪೧ | ಮ | ಮನ | ಪೂರ್ಣಜ್ಞಾನರೂಪಿಯು | ಹೊಟ್ಟೆಯ ತಲ |

(೭) ಅವರ್ಗೀಯ ವ್ಯಂಜನಾಕ್ಷರಗಳು = ೧೦

| | | | | |
|---|---|---|---|---|
| ೪೨ | ಯ | ಯಜ್ಞ | ಎಲ್ಲರಿಂದಲೂ ಪೂಜ್ಯನು | ಹೃದಯ (ಎದೆ) |
| ೪೩ | ರ | ರಾಮ | ಅಮಿತವಾದ ರಮಣವುಳ್ಳವನ್ನು (ಕ್ರೀಡಾಸುಖ) ಭಕ್ತರಿಗೆ ಸುಖ ಪ್ರದಾಯಕ | ತ್ವಗಿಂದ್ರಿಯ |
| ೪೪ | ಲ | ಲಕ್ಷ್ಮೀಪತಿ | ಶ್ರೀ ರಮಾರಮಣನು | ಚರ್ಮ |
| ೪೫ | ವ | ವರ | ಸರ್ವರಿಂದಲೂ ಮೋಕ್ಷಕ್ಕಾಗಿ ವರಿಸಲ್ಪಡುವವನು | ಮಾಂಸ |
| ೪೬ | ಶ | ಶಾಂತಸಂವಿತ್ | ಸುಖರೂಪವಾದ ಬುದ್ಧಿಯುಳ್ಳವನು | ರಕ್ತ |
| ೪೭ | ಷ | ಷಡ್ಗುಣಾತ್ಮ | ಷಡ್ಗುಣೈಶ್ವರ್ಯ ಸಂಪನ್ನನಾದ ಭಗವಂತನು | ಮೇದಸ್ಸು |

| | | | | |
|---|---|---|---|---|
| ೪೮ | ಸ | ಸಾರಾತ್ಮ | ಅಪ್ರಾಕೃತ ಚಿದಾನಂದಮಯ ದೇಹವುಳ್ಳವನು | **ಮಜ್ಜಾ** |
| ೪೯ | ಹ | ಹಂಸ | ಪ್ರಳಯಕಾಲದಲ್ಲಿ ಸರ್ವರನ್ನೂ ಸಂಹರಿಸುವವನು. ಸರ್ವಜ್ಞನು. | **ಅಸ್ಥಿ ಸಂಧಿಗಳಲ್ಲಿ** |
| ೫೦ | ಳ | ಳಾಳುಕ | ಮುಕ್ತರಿಗೂ, ಬ್ರಹ್ಮ ಮತ್ತು ರುದ್ರರಿಗೂ ಸುಖಪ್ರದನು | **ಪ್ರಾಣ** |
| ೫೧ | ಕ್ಷಂ | ಲಕ್ಷ್ಮೀನರಸಿಂಹ | ಸುಷುಮ್ನಾ ನಾಡಿಸ್ಥಿತ ಲಕ್ಷ್ಮೀನರಸಿಂಹ ದೇವರು | **ಜೀವನಲ್ಲಿ** |

ಇಂತು, ಅ ಕಾರಾದಿ ಕ್ಷ ಕಾರ ಪರ್ಯಂತ ಅಜಾದಿ ಶ್ರೀ ಲಕ್ಷ್ಮೀ ನರಸಿಂಹ ಪರ್ಯಂತ ೫೧ ಅಕ್ಷರಗಳಿಂದ ಪ್ರತಿಪಾದ್ಯನಾಗಿ, ಏಕಪಂಚಾಶದ್ವರ್ಣ ವೇದ್ಯನಾದ ಶ್ರೀ ಪರಮಾತ್ಮನು ಸಾಧನಶರೀರವಾದ ಈ ಸ್ಥೂಲ ದೇಹದಲ್ಲಿ ಶಿರಸ್ಸಿನಿಂದ ಆರಂಭಿಸಿ ಸರ್ವಾಂಗಗಳಲ್ಲಿ ವ್ಯಾಪಿಸಿದ್ದಾನೆ. ೨೪ ತತ್ತ್ವಗಳಿಂದ ನಿರ್ಮಾಣವಾಗಿರುವ ಈ ದೇಹದಲ್ಲಿ ಚತುರ್ವಿಂಶತಿ ತತ್ವಾಭಿಮಾನಿ ದೇವತೆಗಳು ಆವಾಸವಾಗಿದ್ದಾರೆ. ಈ ತತ್ವೇಶರಿಗೆ ನಿಯಾಮಕರಾಗಿ ಭಾರತೀ ರಮಣರಾದ ಶ್ರೀ ಮುಖ್ಯ ಪ್ರಾಣದೇವರು ವಿದ್ಯಮಾನರಾಗಿದ್ದಾರೆ. ಇವರಿಗೆ ಮುಖ್ಯ ನಿಯಮಕನಾಗಿ ಶ್ರೀ ಲಕ್ಷ್ಮೀಪತಿಯಾದ ಬಿಂಬರೂಪಿ ಶ್ರೀ ಪರಮಾತ್ಮನು ವಾಯುಗೋಳಕ ದ್ವಾರಾ, ತತ್ವಪತಿ ದೇವತೆಗಳ ದ್ವಾರಾ ತತ್ತ್ವ ಕಾರ್ಯಗಳನ್ನು ಮಾಡಿ, ಮಾಡಿಸುತ್ತಿರುವನು. ಅಂತಹ ತನ್ನ ಅಂತರಂಗ ಭಕ್ತರಾದ ದೇವತಾವರ್ಗಕ್ಕೆ ಅನಂದಪ್ರದನಾಗಿದ್ದಾನೆ. ಆದರೆ ಪಾಪಕಾರ್ಯಗಳೆಲ್ಲವೂ ತತ್ವಾಭಿಮಾನಿ ದೈತ್ಯರ ದ್ವಾರಾ ನಡಿಯುತ್ತಿರುವುವು. ಈ ಆಸುರರಲ್ಲಿ ತತ್ವಾಭಿಮಾನಿ ದೇವತೆಗಳು ವಿದ್ಯಮಾನರಾಗಿದ್ದು, ಜೀವನ ಯೋಗ್ಯತೆ ಹಾಗೂ ಅನಾದಿಕರ್ಮಾನುಸಾರ ವಾಯ್ವಂತರ್ಗತ ಬಿಂಬನ ಪ್ರೇರಣೆಯಿಂದ ಕಾರ್ಯನಿರ್ವಹಣೆ ಮಾಡುತ್ತಿರುವರು. ವಿಷ್ಣುವಿನಲ್ಲಿ ಹಾಗೂ ವಿಷ್ಣುಭಕ್ತರಲ್ಲಿ ದ್ವೇಷಮಾಡುವ ಅಸುರ ವರ್ಗದವರಿಗೆ ನಿರಂತರದಲ್ಲಿ ಕ್ಲೇಶಪ್ರದನಾಗಿ, ತಮೋಯೋಗ್ಯರಾದ ಆ ದೈತ್ಯರಿಗೆ ಅಂಧತಮಸ್ಸೆಂಬ ನಿತ್ಯ ದುಃಖರೂಪವಾದ ಗತಿಯನ್ನು ಕೊಡುವನು, ಅಧರ್ಮ ಪ್ರವರ್ತಕರಾದ ಅಸುರರನ್ನು ಸಂಹರಿಸಿ, ಶಿಕ್ಷೆ ಕೊಡುವನು. ಅಂದರೆ "ಬಡಿವನು" ॥೧॥

## ಪದ್ಯ (೨)

**ಮೂಲ :-**

ಪ್ರಣವಪ್ರತಿಪಾದ್ಯ ತ್ರಿನಾಮದಿ ।
ತನುವಿನೊಳು ತ್ರಿಸ್ಥಾನಗನಿರು ।
ದ್ಧನು ತ್ರಿಪಂಚಕ ಏಕವಿಂಶತಿ ಚತುರವಿಂಶತಿಗ ॥
ಎನಿಸಿ ಎಪ್ಪತ್ತೆರಡು ಸಾವಿರ ।
ವಿನಿತು ನಾಡಿಗಳೊಳು ನಿಯಾಮಿಸು ।
ತಿನಗಭಸ್ತಿಗೆ ಲೋಕದೊಳು ಸರ್ವತ್ರ ಬೆಳಗುವವಾ ॥೨॥

**ಅವತರಣಿಕೆ :-**

ಈ ಸ್ಥೂಲ ಶರೀರದಲ್ಲಿ ಮತ್ತು ಶರೀರಗತ ೭೨೦೦೦ ನಾಡೀವ್ಯೂಹದಲ್ಲಿ ಓಂಕಾರ ಪ್ರತಿಪಾದ್ಯನಾದ ಶ್ರೀ ಪರಮಾತ್ಮನ ಉಪಾಸನಾ ಕ್ರಮವನ್ನು ತಿಳಿಸುತ್ತಾರೆ. **"ಪ್ರಣವ ಪ್ರತಿಪಾದ್ಯ"** - ಎಂಬ ಪ್ರಸಕ್ತ ಸಂಧಿಗತ ಈ ೨ನೆಯ ಪದ್ಯದಿಂದ **"ಓಂ"** ಕಾರವು **ಅ, ಉ, ಮ** ಎಂಬ ಮೂರು ವರ್ಣಗಳಿಂದ ಯುಕ್ತವಾಗಿದೆ. ಅಂತಹ ಅ ಕಾರ. ಉ ಕಾರ ಮತ್ತು ಮ ಕಾರ ವರ್ಣಪ್ರತಿಪಾದ್ಯನಾದ ಶ್ರೀ ಪರಮಾತ್ಮನು ಪ್ರಣವ ಪ್ರತಿಪಾದ್ಯನು. ಓಂಕಾರ ವಾಚ್ಯನಾದ ಶ್ರೀಮನ್ನಾರಾಯಣನು ಅಕಾರ ವಾಚ್ಯ **ವಿಶ್ವ**. ಉಕಾರ ವಾಚ್ಯ **ತೈಜಸ** ಮತ್ತು ಮಕಾರ ವಾಚ್ಯ **ಪ್ರಾಜ್ಞ**ನೆಂದು ನಾಮತ್ರಯಗಳಿಂದ ವಿದ್ಯಮಾನನಾಗಿದ್ದಾನೆ (ತ್ರಿನಾಮದಿ). ಅಂತಹ ಪ್ರಣವ ಪ್ರತಿಪಾದ್ಯನು ವಿಶ್ವನಾಮಕನಾಗಿ ಸರ್ವ ಜೀವರ **ಬಲಗಣ್ಣಿ**ನಲ್ಲಿದ್ದು ಜಾಗ್ರತಾವಸ್ಥೆಗೆ ಪ್ರೇರಕನಾಗಿಯೂ, ತೈಜಸನಾಮಕನಾಗಿ **ಕಂಠ**ಗತನಾಗಿ ಸ್ವಪ್ನಾವಸ್ಥೆ

ಪ್ರೇರಕನಾಗಿಯೂ ಮತ್ತು ಪ್ರಾಜ್ಞನಾಮಕನಾದ **ಹೃದಯ** ಸ್ಥಾನದಲ್ಲಿದ್ದು ಸುಷುಪ್ತ್ಯವಸ್ಥಾ ಪ್ರೇರಕನಾಗಿಯೂ ಈ ಸ್ಥೂಲ ಶರೀರದಲ್ಲಿ ವಿದ್ಯಮಾನ ನಾಗಿದ್ದಾನೆ. (ತ್ರಿಸ್ಥಾನಗ) **ಅನಿರುದ್ಧನು** ಅ-ಕಾರ ವಾಚ್ಯ ವಿಶ್ವನಾಮಕ ನಾಗಿ ಪಂಚ ಜ್ಞಾನೇಂದ್ರಿಯಗಳಲ್ಲಿ ಅನಿರುದ್ಧಾದಿ ಪಂಚ ರೂಪಗಳಿಂದಲೂ, **ಪ್ರದ್ಯುಮ್ನನು** ಉ-ಕಾರ ವಾಚ್ಯ ತೈಜಸನಾಮಕನಾಗಿ ಪಂಚ ಕರ್ಮೇಂದ್ರಿ ಯಗಳಲ್ಲೂ ಮತ್ತು **ಸಂಕರ್ಷಣನು** ಮ-ಕಾರ ವಾಚ್ಯ ಪ್ರಾಜ್ಞನಾಮಕನಾಗಿ ಪಂಚ ಮಹಾಭೂತಗಳಲ್ಲಿಯೂ, ೩ × ೫ = ೧೫. ಅಂದರೆ ಹದಿನೈದು ರೂಪಗಳಿಂದ (ತ್ರಿಪಂಚಕ) ಈ ಸ್ಥೂಲ ಶರೀರದಲ್ಲಿ ದೇಹಗತ ಕ್ರಿಯಾವಿಶೇಷ ಗಳನ್ನು ನಡೆಯಿಸುತ್ತಿರುವನು. ಇದಲ್ಲದೆ ಶಕ್ತಿ ಪ್ರತಿಷ್ಠಾದಿ ೧೧ ರೂಪಗಳು + ಮತ್ಸ್ಯಾದಿ ೧೦ ರೂಪಗಳು = ೨೧ ರೂಪಗಳಿಂದ (ಏಕವಿಂಶತಿ) ಸ್ಥೂಲ ದೇಹಗತ ಅವಯವಗಳಲ್ಲಿದ್ದು, ಶಾರೀರಿಕ ವ್ಯಾಪಾರಗಳನ್ನು ಮಾಡಿ ಮಾಡಿಸು ತ್ತಿರುವನು. ಅವ್ಯಕ್ತ ತತ್ತ್ವದಿಂದ ಆರಂಭಿಸಿ ತನ್ಮಾತ್ರಾ ಪರ್ಯಂತ ೨೪ ತತ್ತ್ವಗಳಲ್ಲಿ ಕೇಶವಾದಿ ಚತುರ್ವಿಂಶತಿ ರೂಪಗಳಿಂದ ಈ ದೇಹಾದ್ಯಂತ ವ್ಯಾಪ್ತನಾಗಿರುವನು. ಮಾಸಕ್ಕೆ ೩೦ ದಿನಗಳಂತೆ ವರ್ಷಕ್ಕೆ ೩೦ × ೧೨ = ೩೬೦ ದಿನಗಳಾಗುವುವು. ವರ್ಷಾವಧಿಯಲ್ಲಿರುವ ಹಗಲು ರಾತ್ರಿಗಳ ಸಂಖ್ಯೆ = ೩೬೦ × ೨ = ೭೨೦. ಮಾನವನ ಆಯುಃಪ್ರಮಾಣ ೧೦೦ ವರ್ಷಗಳಂತೆ ೭೨೦ × ೧೦೦ = ೭೨,೦೦೦ ಹಗಲು ರಾತ್ರಿಗಳಾಯಿತು. ಅದರಂತೆ ದೇಹಗತ ನಾಡಿಗಳ ಸಂಖ್ಯಾ = ೭೨.೦೦೦. ಬಿಂಬರೂಪಿ ಶ್ರೀಮನ್ನಾರಾಯಣನು ವಿಶ್ವ. ತೈಜಸ ಮತ್ತು ಪ್ರಜ್ಞನಾಮಕನಾಗಿ ಅನಿರುದ್ಧ. ಪ್ರದ್ಯುಮ್ನ ಮತ್ತು ಸಂಕರ್ಷಣ ರೂಪಗಳಿಂದ ಗುಣತ್ರಯಗಳಿಗೆ ಪ್ರವರ್ತಕನಾಗಿ. ಗುಣತ್ರಯಗಳ ವೈಷಮ್ಯದಿಂದ ಸೃಷ್ಟವಾದ ೨೪ ತತ್ತ್ವಗಳಲ್ಲಿ. ೨೪ ತತ್ತ್ವಗಳು × ಗುಣತ್ರ ಯಗಳು × ವಿಶ್ವಾದಿ ಸಹಸ್ರ ರೂಪಗಳು = ೭೨.೦೦೦ ರೂಪಧಾರಕನಾಗಿ ಸೂರ್ಯನಲ್ಲಿ ರಶ್ಮಿರೂಪನಾಗಿ (ಇನಗಭಸ್ತಿಗ) ದಕ್ಷಿಣಾಯಣದಲ್ಲಿ ೩೬,೦೦೦. ಉತ್ತರಾಯಣದಲ್ಲಿ ೩೬,೦೦೦ ಒಟ್ಟಿನಲ್ಲಿ ೭೨,೦೦೦ ರೂಪ

ಗಳಿಂದ ನಿಯಾಮಕನಾಗಿ ಈ ಶರೀರಾದ್ಯಂತ ಪ್ರಕಾಶಮಾನನಾಗಿದ್ದಾನೆ ಎಂದು ಪ್ರಸಕ್ತ ಪದ್ಯದ ತಾತ್ಪರ್ಯವು. ॥೧॥

**ಪ್ರತಿಪದಾರ್ಥ :-**

**ಪ್ರಣವ** = ಅ ಕಾರ, ಉ ಕಾರ ಮತ್ತು ಮ ಕಾರಗಳೆಂಬ ಮೂರು ಅಕ್ಷರಗಳಿಂದ ಯುಕ್ತವಾದ "ಓಂ" ಕಾರದಿಂದ **ಪ್ರತಿಪಾದ್ಯ** = ಪ್ರತಿಪಾದ್ಯನಾದ, ಅಂದರೆ ಓಂ ಕಾರ ಪ್ರತಿಪಾದ್ಯನಾದ ಶ್ರೀ ಪರಮಾತ್ಮನು **ತ್ರಿನಾಮದಿ** = ಅ-ಕಾರ ವಾಚ್ಯ ವಿಶ್ವ, ಉ-ಕಾರ ವಾಚ್ಯ ತೈಜಸ ಮತ್ತು ಮ-ಕಾರ ವಾಚ್ಯ ಪ್ರಾಜ್ಞ ಎಂಬ ಮೂರು ಹೆಸರುಗಳಿಂದ ವಿದ್ಯಮಾನ್ಯನಾಗಿ **ತನುವಿನೊಳು** = ಈ ಸ್ಥೂಲ ದೇಹದಲ್ಲಿ **ತ್ರಿಸ್ಥಾನಗ** = ನೇತ್ರ. ಕಂಠ ಮತ್ತು ಹೃದಯ ಎಂಬ ಮೂರು ಸ್ಥಾನಗಳಲ್ಲಿ (ಸರ್ವ ಜೀವರ ಬಲಗಣ್ಣಿನ ತುದಿಯಲ್ಲಿ ಜಾಗ್ರತಾವಸ್ಥೆಗೆ ಪ್ರೇರಕವಾದ ವಿಶ್ವರೂಪಿಯೂ. ಕಂಠ ಸ್ಥಾನದಲ್ಲಿ ಸ್ವಪ್ನಾವಸ್ಥೆಗೆ ಪ್ರೇರಕವಾಗಿ ತೈಜಸನೂ ಮತ್ತು ಹೃದಯ ಸ್ಥಾನದಲ್ಲಿ ಸುಷುಪ್ತ್ಯವಸ್ಥಾ ಪ್ರೇರಕನಾಗಿ ಪ್ರಾಜ್ಞನೂ ಇರುವರು) **ಅನಿರುದ್ಧನು** = ಅನಿರುದ್ಧ ನಾಮಕ ಶ್ರೀ ಪರಮಾತ್ಮನು **ತ್ರಿಪಂಚಕ** = ೧೫ ರೂಪಗಳಿಂದಲೂ, **ಏಕವಿಂಶತಿ** = ೨೧ ರೂಪಗಳಿಂದಲೂ, **ಚತುರವಿಂಶತಿಗ** = ಕೇಶವಾದಿ ೨೪ ರೂಪಗಳಿಂದಲೂ ಇರುವವನೆಂದು ಪ್ರಸಿದ್ಧನಾಗಿ **(ಎನಿಸಿ) ಎಪ್ಪತ್ತೆರಡು ಸಾವಿರ** = ೭೨,೦೦೦ ಸಂಖ್ಯಾಕವಾದ **ನಾಡಿಗಳೊಳು** = ದೇಹಗತ ನಾಡಿಗಳೊಳಗೆ **ಇನಿತು** = ಪೂರ್ವೋಕ್ತ ಪ್ರಕಾರದಿಂದ **ನಿಯಾಮಿಸುತ** = ದೇಹಗತ ಇಂದ್ರಿಯ ಕಾರ್ಯಗಳನ್ನು ನಿಯಂತ್ರಿಸುತ್ತಾ **ಇನ** = ಸೂರ್ಯನ **ಗಭಸ್ತಿಗ** = ಕಾಂತಿಯುಕ್ತವಾದ ಕಿರಣಗಳಲ್ಲಿ ಇದ್ದವನಾಗಿ **ಲೋಕದೊಳು** = ಈ ಜಗತ್ತಿನಲ್ಲಿ **ಸರ್ವತ್ರ** = ಒಳ ಹೊರಗೆ ಎಲ್ಲಾ ಸ್ಥಳಗಳಲ್ಲಿಯೂ **ಬೆಳಗುವನು** = ಪ್ರಕಾಶಮಾನನಾಗಿದ್ದಾನೆ. ॥೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಪೂರ್ವೋಕ್ತ ದೇಹಗಳಲ್ಲಿ ಪರಮಾತ್ಮ ಇರತಕ್ಕ ಕ್ರಮ ಹೇಳತಾರೆ. ಪ್ರಣವ-ಓಂಕಾರದಿಂದ (ಅ, ಉ, ಮ ಎಂಬ ಮೂರು ಅಕ್ಷರಗಳಿಂದ ಯುಕ್ತವಾದದ್ದು). ಪ್ರತಿಪಾದ್ಯ ರೂಪನಾದ ಅನಿರುದ್ಧ, ತ್ರಿನಾಮದಿ-ವಿಶ್ವ (ಅ), ತೈಜಸ (ಉ), ಪ್ರಾಜ್ಞ (ಮ) ಈ ಮೂರು ರೂಪಗಳಿಂದಲೂ (ಅನಿರುದ್ಧ, ಪ್ರದ್ಯುಮ್ನ ಸಂಕರ್ಷಣ ರೂಪಗಳಿಂದಲೂ), ತನುವಿನೊಳು-ದೇಹದಲ್ಲಿ, ತ್ರಿಸ್ಥಾನಗ-ನೇತ್ರ, ಕಂಠ, ಹೃದಯ ಈ ಅವಸ್ಥಾತ್ರಯ ಮೂರು ಸ್ಥಾನದಲ್ಲಿ . ಅನಿರುದ್ಧ-ಪ್ರಣವ ಪ್ರತಿಪಾದ್ಯನಾದ ಅನಿರುದ್ಧನಾಮಕ ಶ್ರೀ ಪರಮಾತ್ಮ. ತ್ರಿ-ಮೂರು ನಾಮಗಳಿಂದ ಯುಕ್ತವಾದ ಮೂರು ರೂಪದಿಂದ ಇದ್ದಾನೆ. ಮತ್ತು ಸ್ಥಾನಾಂತರದಲ್ಲಿ. ಪಂಚಕ-ಐದು ರೂಪದಿಂದಲೂ ಇದ್ದಾನೆ. ಏಕವಿಶಂತಿ-ಇಪ್ಪತ್ತೊಂದು ರೂಪದಿಂದಲೂ ಇವ್ದಾನೆ. ಚತುರವಿಂಶತಿ-ಇಪ್ಪತ್ತಾನಾಲ್ಕು ರೂಪದಿಂದಲೂ, ಗ ಎನಿಸಿ-ಇರತಕ್ಕವನೆನಿಸಿ ಮತ್ತು ಎಪ್ಪತ್ತೆರಡುಸಾವಿರ ನಾಡಿಗಳೊಳು ಇನಿತು-೭೨,೦೦೦ ದೇಹಗತ ನಾಡಿಗಳೊಳು ಇದ್ದವನಾಗಿ, ನಿಯಾಮಿಸುತ-ಜೀವರ ಇಂದ್ರಿಯಗಳಲ್ಲಿದ್ದು, ಇಂದ್ರಿಯ ಕಾರ್ಯಗಳ ನಿಯಮಿಸುತ್ತಾ ಇದ್ದಾನೆ. ಇದ್ದ ಕಾಲಕ್ಕೂ ತಾನು ಒಂದಕ್ಕೂ ಸಂಬಂಧಪಡೋದಿಲ್ಲ. ಹ್ಯಾಗೆಂದರೆ ದೃಷ್ಟಾಂತ- ಇನಗಭಸ್ತಿ-ಇನ-ಸೂರ್ಯ. ಗಭಸ್ತಿ-ಕಾಂತಿಯಿಂದ ಯುಕ್ತವಾದ ಕಿರಣಗಳು. ಸೂರ್ಯ ತನ್ನ ಕಿರಣಗಳಿಂದ ಯುಕ್ತವಾಗಿ ಅಂಧಕಾರದಲ್ಲಿ ಪ್ರವೇಶಿಸಿದ್ದಾಗ್ಯೂ. ಅಂಧಕಾರದಿಂದ ಬಾಧಿತನಾಗದೇ ತನ್ನ ಸ್ವಪ್ರಕಾಶದಿಂದಲೇ ಲೋಕದೊಳು ಸರ್ವತ್ರ ಬೆಳಗುವನು-ಹದಿನಾಲ್ಕೂ ಲೋಕಗಳಲ್ಲಿ ಸಂಚಾರ ಮಾಡುವನು. ಪರಮಾತ್ಮನಾದರೋ ಇನ ಗಭಸ್ತಿ-ಸೂರ್ಯನಲ್ಲೇನು. ಕಾಂತಿಸಂಪನ್ನವಾದ ಕಿರಣ

ಗಳಲ್ಲೇನು, ಗ-ಇದ್ದವನಾಗಿ, ಸೂರ್ಯಗೆ ಅಂಥಾ ಸಾಮರ್ಥ್ಯಕೊಟ್ಟು ಇದ್ದಾನೆ. ಸೂರ್ಯನ ಸ್ವಸಾಮರ್ಥ್ಯದಲ್ಲಿ, ಇಂಥಾ ಪರಮಾತ್ಮ ಲೋಕ ದೊಳು-ಸರ್ವ ಪ್ರಾಣಿಗಳೊಳು, ನಿಯಮಿಸುತಾ-ಅವರವರ ಯೋಗ್ಯ ಕರ್ಮ ಗಳ ನಿಯಮಿಸುತಾ ಸೂರ್ಯನೋಪಾದಿಯಲಿ ಸರ್ವತ್ರ ಸಂಚಾರ ಮಾಡು ವನು. ತತ್ಸಂಬಂಧ ಇವಗೆ ಲೇಪವಿಲ್ಲ ಎಂತ ತಿಳಿಯತಕ್ಕದ್ದು ಎಂತ ತಾತ್ಪರ್ಯ.

**ವಿಶೇಷಾರ್ಥ :-**

ತ್ರಿಪಂಚಕ - ಮೂರು ರೂಪಗಳು ದಾವವಂದರೆ, (೧) ವಿಷ್ಣು - ಸತ್ವಗುಣದಲ್ಲಿ (೨) ಬ್ರಹ್ಮ - ರಜೋಗುಣದಲ್ಲಿ (೩) ರುದ್ರ- ತಮೋಗುಣದಲ್ಲಿ, ಅಂತೆಯೇ, ವಿಷ್ಣು - ಅವ್ಯಕ್ತ ತತ್ವದಲ್ಲಿ, ಬ್ರಹ್ಮ- ಮಹತ್ತತ್ವದಲ್ಲಿ. ರುದ್ರ - ಅಹಂಕಾರ ತತ್ತ್ವದಲ್ಲಿ, ಪಂಚ ರೂಪ ಗಳು, ಅನಿರುದ್ಧ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ -ತನ್ಮಾತ್ರಾ ಸಹಿತ ಪಂಚಭೂತಗಳಲ್ಲಿ. ಏಕವಿಂಶತಿ ದಾವವೆಂದರೆ, ಮತ್ಸ್ಯಾದಿ ದಶರೂಪಗಳು ದಶೇಂದ್ರಿಯಗಳಲ್ಲಿ, ವಿಮಲಾದಿ ಏಕಾದಶ ರೂಪಗಳಿಂದ ಏಕಾದಶೇಂದ್ರಿಯಗಳಲ್ಲಿ. ಈ ಎರಡು ಪ್ರಕಾರ ಇಂದ್ರಿಯಗಳಲ್ಲಿ ಇರೋ ದಾಗಿ ಅದೆ ಎಂತ ತಾತ್ಪರ್ಯ. ಚತುರ್ವಿಂಶತಿ ರೂಪಗಳು ದಾವವೆಂದರೆ, ಇಪ್ಪತ್ತನಾಲ್ಕು ತತ್ತ್ವಗಳಲ್ಲಿ ಕೇಶವಾದಿ ೨೪ ರೂಪಗಳು.

ಸ್ಥೂಲ ದೇಹಗತ ಅಷ್ಟದಳ ಕಮಲದಲ್ಲಿ ಕರ್ಣಿಕಾದಮೇಲೆ ಬಿಂಬಗೆ ಪೀಠರೂಪದಿಂದ ಸೂರ್ಯ ಇರೋವನಾಗಿದ್ದಾನೆ. ಈ ಸೂರ್ಯನ ಕಿರಣ ಗಳು ಸಾವಿರ ಕಿರಣಗಳು ಸಾವಿರ ಪ್ರಧಾನ ನಾಡಿಗಳಲ್ಲಿ ವ್ಯಾಪಿಸಿವೆ. ಅದ ರಲ್ಲಿ ಸಾವಿರ ರೂಪಗಳಿಂದ ಇದ್ದು, ಭಕ್ತರಿಗೆ ಜ್ಞಾನ ಪ್ರಕಾಶಕನಾಗಿ ಇರು ತ್ತಾನೆ ಎಂತ ತಾತ್ಪರ್ಯ.

"ಓಂ"-ಎಂಬ ಅಕ್ಷರದಿಂದ ಹೇಳಿಸಿಕೊಳ್ಳುವ ವ್ಯಾಪ್ತ ಉತ್ಕೃಷ್ಟ ಪೂಜ್ಯ ನಾದ್ದರಿಂದ, ಅ, ಉ. ಮ ಎಂತ ನಾಮ. ॥೨॥

(೨) "ಭಾವಪ್ರಕಾಶಿಕ" -ವ್ಯಾಖ್ಯಾನ :-

ಈ ದೇಹದಲ್ಲಿಯೂ ಮತ್ತು ನಾಡಿಗಳಲ್ಲಿಯೂ ಉಪಾಸನೆ ಮಾಡಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ.

"ಪ್ರಣವ ಪ್ರತಿಪಾದ್ಯ"-ಓಂಕಾರ ಪ್ರತಿಪಾದ್ಯನು. ತ್ರಿನಾಮದಿ ಅಂದರೆ ಅ+ಉ+ಮ-ಇವು ಮೂರಕ್ಷರಗಳು ಸೇರಿ "ಓಂ" ಎಂಬ ಅಕ್ಷರವು ಆಗಿರುವುದು. ಇದರರ್ಥ **ಛಾಂದೋಗ್ಯೋಪನಿಷದ್ಭಾಷ್ಯದಲ್ಲಿ :-**

**"ಅಕಾರೇಣಾಧಿಕಂ ಪ್ರೋಕ್ತಮುಕಾರೇಣೋಚ್ಚಮುಚ್ಯತೇ ।**
**ತಥಾಮಿತಂ ಸರ್ವವೇದೈರ್ಮಕಾರೇಣಾಭಿಧೀಯತೇ ॥**
**ಅಧಿಕೋಚ್ಚಮಿತಿಜ್ಞಾತನೋಮಿತ್ಯಸ್ಯ ಈರಿತಃ ॥"**

ಅಧಿಕನಾದುದರಿಂದ "ಅ" ನಾಮನೆಂತಲೂ (ಉತ್ಕೃಷ್ಟನಾದುದರಿಂದ), ಉಚ್ಚನಾದುದರಿಂದ "ಉ" ನಾಮನೆಂತಲೂ, ಸರ್ವ ವೇದಗಳಿಂದಲೂ "ಮಿತ"-ಎಂದರೆ, ತಿಳಿಸಿಕೊಳ್ಳಲ್ಪಡುವವನಾದ್ದರಿಂದ "ಮ" ಕಾರ ವಾಚ್ಯನೆಂತಲೂ ಒಟ್ಟು ಅಧಿಕವಾದ ಉಚ್ಚತ್ವವನ್ನು ಹೊಂದಿದವನೆಂದರ್ಥ. ಅಥವಾ

**"ಓಂನಾಮನಮುಪಾಸೀತ ತದರ್ಥಗುಣಪೂರ್ವಕಂ ।**
**ಓತತ್ವಾದವ ನಾಮ್ನಾನಾದೆಧಿಕೋಚ್ಚತ್ವಕಾರಣಾತ್ ॥**
**ಆನಂದಾದೋಜಸಶ್ಚೈವ ಭರಣಾದೋಮುದಾಹೃತಃ" ॥**

"ಓಂ" ಕಾರ ಶಬ್ದವಾಚ್ಯನಾದ ಶ್ರೀ ಪರಮಾತ್ಮನನ್ನು ಅರ್ಥಜ್ಞಾನಪೂರ್ವಕ ಉಪಾಸನೆ ಮಾಡಬೇಕು. ಪ್ರಪಂಚವೆಲ್ಲ ಪರಮಾತ್ಮನಲ್ಲಿ ವಸ್ತ್ರದ ದಾರಗಳಂತೆ ಸೇರಿರುವುದರಿಂದಲೂ, ಪ್ರಪಂಚವನ್ನೆಲ್ಲಾ ಪಾಲನೆ ಮಾಡುವುದರಿಂದಲೂ, ಎಲ್ಲರಿಂದಲೂ, ಪೂಜ್ಯನಾದುದರಿಂದಲೂ, ಅಧಿಕವಾದ ಉಚ್ಚತ್ವವನ್ನು ಹೊಂದಿರುವುದರಿಂದಲೂ, ಆನಂದ ಸ್ವರೂಪನಾದುದರಿಂದಲೂ, ಬಲಶಾಲಿ

ಯಾದುದರಿಂದಲೂ, ಜಗತ್ತನ್ನು ಭರಣ ಮಾಡುವುದರಿಂದಲೂ, "ಓಂ"- ಎಂದು ಪರಮಾತ್ಮನಿಗೆ ಹೆಸರು - ಎಂದು ಹೇಳಿರುವರು.

ಈ ಪ್ರಕಾರ ಮೂರು ನಾಮಗಳಿಂದ ಲಿಂಗ ಶರೀರದಲ್ಲಿಯೂ. ಅನಿರುದ್ಧ ಶರೀರದಲ್ಲಿಯೂ ಮತ್ತು ಸ್ಥೂಲ ಶರೀರದಲ್ಲಿಯೂ. ಈ ದೇಹಗಳೆಂಬ ಮೂರು ಸ್ಥಾನಗಳಲ್ಲಿ ಅನಿರುದ್ಧನು ವಾಸ ಮಾಡುವನು. ಅಕಾರ, ಉಕಾರ ಮತ್ತು ಮಕಾರಗಳು ಉತ್ಪತ್ತಿ ಸ್ಥಾನಗಳು ತಾಳು, ಕಂಠ ಮತ್ತು ಓಷ್ಟಪುಟಗಳೆಂಬ ಮೂರು ಸ್ಥಾನಗಳಲ್ಲಿ ವಾಸ ಮಾಡುವನು. ಇದಲ್ಲದೆ ಅನಿರುದ್ಧನು ಜ್ಞಾನೇಂದ್ರಿಯಗಳು ೫. ಕರ್ಮೇಂದ್ರಿಯಗಳು ೫, ಪಂಚ ಮಹಾಭೂತಗಳು ೫ - ಹೀಗೆ ೧೫ರಲ್ಲಿ ಅನಿರುದ್ಧನು ಅನಿರುದ್ಧಾದಿ ೫ ರೂಪಗಳಿಂದ ೩ × ೫ = ೧೫ ಸ್ಥಾನಗಳಲ್ಲಿ ೧೫ ರೂಪಗಳಿಂದ ಲಿಂಗ ದೇಹದಲ್ಲಿಯೂ, ಈ ೧೫ರೊಂದಿಗೆ ಪಂಚ ತನ್ಮಾತ್ರಾಗುಣಗಳು ೫, ಮನಸ್ಸು ೧ ಇವುಗಳನ್ನು ಅರನ್ನು ಸೇರಿಸಿ, ೨೧ರಲ್ಲಿ ಅನಿರುದ್ಧ ದೇಹದಲ್ಲಿ ಶಕ್ತಿ, ಪ್ರತಿಷ್ಠಾ ೧೧ ಮತ್ತು ದಶಾವತಾರ ರೂಪಗಳು ೧೦. ಎರಡೂ ಸೇರಿಸಿ. ೧೦ + ೧೧ = ೨೧ ರೂಪಗಳಿಂದಲೂ, ಸ್ಥೂಲ ಶರೀರದಲ್ಲಿ ಈ ೨೧ ತತ್ತ್ವಗಳೊಂದಿಗೆ ಅವ್ಯಕ್ತ. ಮಹತತ್ತ್ವ ಮತ್ತು ಅಹಂಕಾರ ತತ್ತ್ವ ಈ ಮೂರನ್ನೂ ಸೇರಿಸಿ, ೨೪ರಲ್ಲಿ ಕೇಶವಾದಿ ರೂಪಗಳಿಂದಲೂ ಇರುವನು. ಒಂದು ತಿಂಗಳಿಗೆ ೩೦ ರಾತ್ರಿಗಳಂತೆ ಒಂದು ವರ್ಷಕ್ಕೆ ೩೦X೧೨ = ೩೬೦ ರಾತ್ರಿ ಮತ್ತು ೩೬೦ ಹಗಲು ಹೀಗೆ ಮಾನವಾಯುಃಪ್ರಮಾಣ. ೧೦೦ ವರ್ಷಗಳಿಗೆ ೩೬,೦೦೦ ಹಗಲು ಮತ್ತು ೩೬,೦೦೦ ರಾತ್ರಿಗಳಾಗುವುವು. ಇವುಗಳೇ ಸೂರ್ಯನಲ್ಲಿ ರಶ್ಮಿ ರೂಪವಾಗಿ ದಕ್ಷಿಣಾಯಣದಲ್ಲಿ ೩೬,೦೦೦, ಉತ್ತರಾಯಣದಲ್ಲಿ ೩೬,೦೦೦ ರಶ್ಮಿಗಳಾಗುವುವು. ಈ ರಶ್ಮಿಗಳೇ ನಮ್ಮ ಶರೀರದಲ್ಲಿ ಎಡದಲ್ಲಿ ೩೬,೦೦೦, ಬಲದಲ್ಲಿ ೩೬,೦೦೦. ನಾಡಿಗಳಾಗಿರುವುವು. ಈ ನಾಡಿಗಳಲ್ಲಿ ಅಷ್ಟೇ ರೂಪಗಳಿಂದ ನಿಯಾಮಕನಾಗಿ ಇರುವನಲ್ಲದೆ, ಸೂರ್ಯನ ರಶ್ಮಿಗಳಲ್ಲಿಯೂ ಸಹ ಇದ್ದು, ಹೊರಗೆ ಎಲ್ಲಾ ಸ್ಥಳಗಳಲ್ಲಿ ಪ್ರಕಾಶ ಮಾಡುತ್ತಿರುವನು. ॥೨॥

(೩) **"ಭಾವದರ್ಪಣಟೀಕಾ - ವ್ಯಾಖ್ಯಾನ" :-**

ಅಧ್ಯಾತ್ಮ, ಅಧಿಭೂತ ಮತ್ತು ಅಧಿದೈವ - ಈ ಮೂರು ಅಧಿಷ್ಠಾನ ದಲ್ಲಿ ವ್ಯಾಪ್ತವಾದ ಶ್ರೀ ಹರಿ ರೂಪಕ್ಕೆ **"ತ್ರಿವೃತ್"** - ಎಂತ ಹೇಳುತ್ತಾರೆ. "ಪ್ರಣವೇತಿ"

**ಪ್ರಮಾಣ :-**

**"ತ್ರಿವಿಧೋ ಹ್ಯನಿರುದ್ಧೋऽಸಾವಧ್ಯಾತ್ಮಾದಿ ವಿಭೇದತಃ |**
**ಅತಸ್ತ್ರಿವೃದಿತಿಪ್ರೋಕ್ತ || "**

**-ಇತಿ ಶ್ರೀ ವಿಷ್ಣು ರಹಸ್ಯೋಕ್ತೇಃ**

ಅಥವಾ ಶ್ವೇತದ್ವೀಪ, ಅನಂತಾಸನ, ವೈಕುಂಠಸ್ಥಿತ ಭಗವದ್ರೂಪಕ್ಕೂ **"ತ್ರಿವೃತ್"** - ಎಂತ ಹೆಸರು.

ಅಥವಾ ಋಗ್ಯಜುಸ್ಸಾಮ ವೇದಗಳಲ್ಲಿದಂಥ ಭಗವದ್ರೂಪಕ್ಕೂ **"ತ್ರಿವೃತ್"** - ಎಂದು ಹೇಳುತ್ತಾರೆ.

**ಉಕ್ತಂಚ ಮಧ್ವಮಂತ್ರಾರ್ಥಮಂಜರ್ಯಾಂ :-**

**"ತ್ರಿಷು ಶ್ವೇತದ್ವೀಪ ಅನಂತಾಸನ ವೈಕುಂಠೇಷು ವರ್ತತೇ ತದ್ಬ್ರಹ್ಮ ತ್ರಿವೃದಿತಿ || "**

ಅಥವಾ **"ತ್ರಿಷು ವೇದೇಷು ವರ್ತಮಾನಂ ತತ್ತಾತ್ಪರ್ಯ ವಿಷಯೀ ಭೂತಂ ಚೇತಿ || "**

ಅಥವಾ ಅಕಾರ, ಉಕಾರ ಮತ್ತು ಮಕಾರ ಎಂಬೋ ತ್ರಿವರ್ಣ ಗಳಿಂದ ಪ್ರತಿಪಾದ್ಯನಾದ್ದರಿಂದ **"ತ್ರಿವೃತ್"** ಎಂಬ ನಾಮ.

**ತದುಕ್ತಂ ಚತುರ್ಥಸ್ಕಂಧ ವಿಜಯಧ್ವಜ ವ್ಯಾಖ್ಯಾನೇ :–**

**"ತ್ರಿಭಿಃ ಅಕಾರಾದಿವರ್ಣೈಃ ವೃಣೋತಿ ಪ್ರತಿಪಾದ್ಯತ ಇತಿ ತ್ರಿವೃತ್ ॥ "**

ಈ ತ್ರಿವರ್ನ್ಣಾಮದಿಂದ ತನುವಿನೊಳು ತ್ರಿಸ್ಥಾನ - ಎಂದರೆ, ನೇತ್ರ. ಕಂಠ ಮತ್ತು ಹೃದಯ - ಈ ತ್ರಿಸ್ಥಾನಗಳಲ್ಲಿದ್ದು, ವಿಶ್ವ ತೈಜಸ ಪ್ರಜ್ಞಾತ್ಮಕ ಅನಿರುದ್ಧನು ಹದಿನೈದು ರೂಪ, ಎಂದೆನಿಸಿದ್ದಾನೆ ಎಂಬರ್ಥ. "ತ್ರಿಪಂಚ ತೀತಿ" "ತಥಾ ಪಂಚದಶಾತ್ಮಕೇತಿ" **ವಿಷ್ಣುರಹಸ್ಯವಚನಾತ್** ಏಕವಿಂಶ ತೀತಿ. ದಶಕರಣ. ಪಂಚಭೂತ, ಪಂಚತನ್ಮಾತ್ರಾ, ಮನಸ್ಸು ಇವು ಸೇರಿ ಏಕವಿಂಶತಿ ಎಂಬರ್ಥ, "ಚತುರ್ವಿಂಶತೀತಿ" - ಮಹತ್ತತ್ವ, ಅಹಂಕಾರ ತತ್ತ್ವ ಮತ್ತು ಅವ್ಯಕ್ತತತ್ತ್ವ ಇವು ಮೂರು ಮತ್ತು ಹಿಂದಿಂದು ೨೧, ಅಂತು ೨೪ ತತ್ತ್ವಗಳಲ್ಲಿ "ಗ" - ಎಂದರೆ, ಇದ್ದವನೆಂದೆನಿಸಿ ಮತ್ತು ದ್ವಿಸಪ್ತತಿ ಸಹಸ್ರ ನಾಡ್ಯಭಿಮಾನಿ ದೇವತೆಗಳಿಗೂ ನಿಯಮನ ಮಾಡುತ್ತಾ "ಇನಗಭಸ್ತಿ" ಎಂದರೆ ಸೂರ್ಯನ ಕಿರಣ ಎಂಬರ್ಥ.

**"ಕಿರಣೋಽಸ್ರಮಯೂಖಾಂಶು ಗಭಸ್ತಿ ಘೃಣೀ ಘೃಷ್ಣಯ ಇತ್ಯೆಮರಃ "** – ಎಂದು ಅಮರಕೋಶರೀತ್ಯಾ.

ಇದರಲ್ಲಿ ಸಹ "ಗ" - ಎಂದರೆ. ಇದ್ದವನೆಂರ್ಥ. ಹೀಂಗೆ ವ್ಯಾಪ್ತ ನಾಗಿ ಸರ್ವತ್ರ ಪ್ರಕಾಶಿಸುವನೆಂದು ತಾತ್ಪರ್ಯ. ॥೨॥

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–**

ಮಹತರೇಯೋಪನಿಷದರ್ಥಮಾಹ - **"ಪ್ರಣವ"** - ಇತಿ॥ "ಓಂ ಯದೇ ತನ್ಮಹದುಕ್ತಂ ತದೇತತ್ ಪಂಚವಿಧಂ ತ್ರಿವೃತ್ ಪಂಚದಶಂ ಸಪ್ತ ದಶಂ ಏಕವಿಂಶಂ ಪಂಚವಿಂಶಮ್" ಇತಿ॥ ತದ್ಭಾಷ್ಯಂ ಚ– "ಅನ್ಯತ್ವಾತ್ ಸರ್ವಜೀವೇಭ್ಯಃ ಜಡೇಭ್ಯಃ ಚ ಸದ್ವೈವಹಿ॥ ಸರ್ವದೋಷೋಜ್ಝಿತತ್ವಾಚ್ಚ

ಸರ್ವತೋ ಽಪ್ಯಧಿಕತ್ವತಃ॥ ನಿರಾಸನಾಚ್ಚ ದೋಷಾಣಾಂ ಸ್ವಭಕ್ತೇಭ್ಯಃ ಸಮಂತತಃ॥ ಸರ್ವದೋಷ ವಿರುದ್ಧೋಽರು ಗುಣಪೂರ್ಣ ಸ್ವರೂಪತಃ॥ ನಾರಾಯಣಃ ಇತಿ ಪ್ರೋಕ್ತಃ ಹ್ಯಕಾರಾರ್ಥೋಽಯ ಮೇವಹಿ। ತಸ್ಮಾದ ಕಾರ ಬೀಜೇಯ ವಿಷ್ಣೋಃ ನಾರಾಯಣಾಭಿಧಾ॥ ಪ್ರಣವಶ್ಚ ತಥೋ ಕಾರಃ ಪ್ರಧಾನಂ ನಾಮ ಚಕ್ರಿಯಾಃ॥ ತ್ರಿವಿಧೋಹ್ಯನಿರುದ್ಧೋಽಸೌ ಆಧ್ಯಾ ತ್ಮಾದಿ ವಿಭೇದಗಃ ಅತಃ ತ್ರಿವೃದಿತಿ ಪ್ರೋಕ್ತಃ ತಥಾ ಪಂಚದಶಾತ್ಮಕಃ॥ ಪ್ರದ್ಯುಮ್ನಃ ಪಂಚರೂಪೇಷು ಹ್ಯದ್ಯಾತ್ಮಾದಿ ವಿಭೇದತಃ॥ ಸಪ್ತ ಧಾತುಷು ಸಂಸ್ಥಃ ಸನ್ ಅಧ್ಯಾತ್ಮಾದಿ ವಿಭೇದತಃ ॥ ಏಕವಿಂಶೋಽವಾಸು ದೇವೋ ಮನ ಆದಿ ಚತುಷ್ಟಯೇ॥ ಗುಣತ್ರಯೇ ಚ ಪ್ರಕೃತೌ ಅಧ್ಯಾ ತ್ಮಾದಿ ವಿಭೇದತಃ॥ ಮೂಲರೂಪೇಣ ಚ ಸಹ ಪಂಚವಿಂಶಾತ್ಮಕಃ ಪ್ರಭುಃ॥ ನಾರಾಯಣಃ ತ್ವ ಚಿಂತ್ಯಾತ್ಮಾ ಸ ಏಕೋಽಪಿ ಹ್ಯನಂತಧಾ॥ ಇತಿ॥ ಅಧಿ ಭೂತಂ ದೇಹಗ ಪಂಚಭೂತೇಷು. ಅಧ್ಯಾತ್ಮಂ ಜೀವ ಶರೀರಗ ಪಂಚ ಭೂತೇಷು ಅಧಿದೈವಂ ದೇವ ಶರೀರಗ ಭೂತಪಂಚಕೇ ಚತುರ್ವಿಂಶದ್ರೂಪ ಪ್ರಬಂಧೇ ಭೂತೇಷು ಅಷ್ಟಕ ಪ್ರವೇಶಃ ಕಥಂ ಚೇತ್ ? ॥ ಉಚ್ಯತೇ ತ್ರಾಮ ಷಣ್ಯಾಂಚ "ಮನೋಬುದ್ಧಿ ಅಹಂಕಾರ ಚಿತ್ತ ಗುಣತ್ರಯ ಪ್ರಕೃತ್ಯಾತ್ಮಾಷ್ಟಕಂ॥ ಪ್ರಕೃತಿಃ ಸ್ವಾತ್ಮ ಸಂಶ್ಲಿಷ್ಟಾನ್ ಗುಣಾನ್ ಸತ್ವಾದಿ ಕಾನ್ ಅಪಿ"॥ ಇತ್ಯುಕ್ತ ನ್ಯಾಯೇನ ವರ್ತತೇ॥ ಭೂತೇಷ್ವಪಿ॥ ವ್ಯಾಪ್ತಂ ಕಾರ್ಯೇಷು ಕಾರಣಮ್ ಇತ್ಯುಕ್ತನ್ಯಾಯೇನ ಭೂತಾನಾಂ ಪರಂಪರಯಾ ಗುಣತ್ರಯ ಪ್ರಕೃತಿ ಕಾರ್ಯತ್ವಾತ್ ಪ್ರಾಣಾ ಏವ ಇದಮಗ್ರ ಆಸುಃ ಇತ್ಯುಕ್ತ ನ್ಯಾಯೇನ ಮನ ಆದಿ ಕಾರ್ಯತ್ವಾತ್ ಅಧಿದೈವಂ ಮನ ಆದ್ಯಷ್ಟಕಂ ಬೋಧ್ಯಮ್॥ ಯದ್ವಾ ಆಧ್ಯಾತ್ಮಂ ಪ್ರಾಣಿ ಶರೀರಗೇಷು ದೇವೇಷು ಭೂತಾಭಿಮಾನಿಷು ಸ್ವರ್ಲೋಕ ಸ್ಥಿತೇಷು ಚ ದೇವೇಷು ಇತಿ ಸ್ಥಾನತ್ರಯೇಪಿ ಮನ ಆದ್ಯಷ್ಟಕಾವಸ್ಥಾನಂ ಸುಕರಮೇವ॥ ಇನಿತು-ಹೀಗೆ ಇನ-ಸೂರ್ಯ. (೨)

**ಕನ್ನಡಾರ್ಥ :–**

**"ಪ್ರಣವ ಪ್ರತಿಪಾದ್ಯ"** – ಎಂಬ ಪ್ರಸಕ್ತ ಪದ್ಯದಿಂದ **ಐತರೇಯ**

**ಉಪನಿಷತ್ತಿನಲ್ಲಿ** ವಿವರಿಸಲ್ಪಟ್ಟಿರುವ ರಹಸ್ಯ ಪ್ರಮೇಯಾರ್ಥಗಳನ್ನು ನಿರೂಪಿಸಿರುತ್ತಾರೆ.

ಶ್ರೀ ಐತರೇಯೋಪನಿಷತ್ತಿನ, ೨ನೆಯ ಆರಣ್ಯಕದ, ೩ನೆಯ ಅಧ್ಯಾಯದ, ೪ನೆಯ ವರ್ಗದಲ್ಲಿ ಈ ವಿವರಗಳಿವೆ.

**"ದಶಪೂರ್ಣಮಾಸ ಚಾತುರ್ಮಾಸಸ್ಯ ಪಶುಸೋಮ"** – ಎಂಬ ಪಂಚವಿಧ ಯಜ್ಞಸ್ಥ ಯಜ್ಞನಾಮಕ ಭಗವದ್ರೂಪವೇ ಬೃಹತೀ ಸಹಸ್ರ ಮಂತ್ರಗಳಲ್ಲಿ ನಿರೂಪಿತವಾಗಿದೆ. ಯಜ್ಞಸ್ಥವಾಗಿರುವ ಭಗವದ್ರೂಪಕ್ಕೆ **"ಉತ್ಥ** ಎಂದು ಹೆಸರು, ಈ ರೂಪವು ಬೃಹತೀ ಸಹಸ್ರದಲ್ಲಿ ಉಕ್ತವಾಗಿದೆ. ಪರಿಪೂರ್ಣವಾದುದರಿಂದ **"ಮಹತ್"** ಎಂದು ಹೆಸರು. ಸರ್ವ ಚೇತನರನ್ನೂ ಉತ್ಥಾಪಿಸುವನು. ಅಂದರೆ. ಮೇಲಕ್ಕೆ ಎಬ್ಬಿಸುವವನಾದ್ದರಿಂದ **"ಉತ್ಥ"** ನಾಮಕನು.

(೧) ಸಮಸ್ತ ಜೀವ ಜಡ ವರ್ಗಗಳಿಂದ ಅತ್ಯಂತ ಭಿನ್ನವಾಗಿರುವುದರಿಂದಲೂ, (೨) ಸರ್ವ ದೋಷರಹಿತನಾಗಿರುವುದರಿಂದಲೂ, (೩) ಸರ್ವರಿಂದಲೂ ಉತ್ತಮ (ಅಧಿಕ) ನಾಗಿರುವುದರಿಂದಲೂ. (೪) ಭಕ್ತರ ದೋಷ ಹಾಗೂ ಪಾಪಗಳನ್ನು ಪರಿಹರಿಸುವನಾದ್ದರಿಂದಲೂ. (೫) ನಿರಸ್ತದೋಷನಾಗಿದ್ದು ಅನಂತ ಕಲ್ಯಾಣಗುಣಪರಿಪೂರ್ಣನಾಗಿರುವುದರಿಂದಲೂ ಶ್ರೀ ಪರಮಾತ್ಮನಿಗೆ **"ನಾರಾಯಣ"** ಎಂದು ಹೆಸರು. ಆ ನಾರಾಯಣನೇ "ಅ" ಕಾರ ಶಬ್ದವಾಚ್ಯನು. "ಅ ಕಾರವು ಪರಬ್ರಹ್ಮನಾದ ನಾರಾಯಣನನ್ನೇ ಹೇಳುತ್ತದೆ" – ಎಂದು ಶ್ರೀಮದಾಚಾರ್ಯರು ನಿರೂಪಿಸಿರುತ್ತಾರೆ. ನಾರಾಯಣ ನಾಮಕ್ಕೆ ಅಕಾರವು ಬೀಜಾಕ್ಷರದಂತಿದೆ, ಅಂದರೆ, ಮೂಲವಾಗಿದೆ. "ಓಂ" ಕಾರ ರೂಪವಾದ ಪ್ರಣವವು ಇದೇ ಅರ್ಥವನ್ನು ಪ್ರತಿಪಾದಿಸುತ್ತದೆ. ಅನಿರುದ್ಧಾದಿ ಪಂಚರೂಪಗಳಿಂದ ಆ ನಾರಾಯಣನು ಬೃಹತೀಛಂದಸ್ಸಿನ ಮಂತ್ರಸ್ಥಿತನಾಗಿದ್ದಾನೆ. (೧) ಸ್ತೋಮ, (೨) ಸಾಮ, (೩) ಚಿತಿ, (೪) ಛಂದಸ್ಸು

ಮತ್ತು (೫) ಶಸ್ತ್ರ – ಇವುಗಳಲ್ಲಿ ಪಂಚರೂಪಗಳಿಂದ ಇರುತ್ತಾನೆ. (೧) ಸ್ತೋಮವೆಂಬ ಅಧಿಷ್ಠಾನದಲ್ಲಿ ಶ್ರೀ ಪರಮಾತ್ಮನ ಅನಿರುದ್ಧ ರೂಪವು "ಅಧ್ಯಾತ್ಮ-ಅಧಿದೈವ-ಅಧಿಭೂತ"ಗಳಲ್ಲಿ ಮೂರು ಪ್ರಕಾರದಿಂದ ಇರುವುದು.

(೨) ಪ್ರದ್ಯುಮ್ನವೆಂಬ ರೂಪವು ಪಂಚ ಭೂತಗಳಲ್ಲಿ ಪ್ರತ್ಯೇಕವಾಗಿ ಅಧ್ಯಾತ್ಮಮುಂತಾದುದವುಗಳಿಗನುಸಾರವಾಗಿ ರೂಪತ್ರಯಗಳಿಂದ ಇರುವುದರಿಂದ, ೩ × ೫ = ೧೫ ಪ್ರಕಾರ ಇದೆ. (೩) ಸಂಕರ್ಷಣನೆಂಬ ರೂಪವು ಷೋಡಶ ಕಲಾತ್ಮಕವಾದ ಲಿಂಗ ಶರೀಕದಲ್ಲಿಯೂ, ಷೋಡಶ (೧೬) ಕಳೆಗಳಲ್ಲಿ ಇರುವುದರಿಂದ ೧೭ ವಿಧವೆಂದು ಹೇಳಲ್ಪಡುತ್ತದೆ. (೪) ವಾಸುದೇವ ರೂಪವು ಸಪ್ತ ಧಾತುಗಳಲ್ಲಿ ಪ್ರತ್ಯೇಕವಾಗಿ ಅಧ್ಯಾತ್ಮ- ಅಧಿಭೂತ- ಅಧಿದೈವಗಳಿಗನುಸಾರವಾಗಿ ಮೂರು ರೂಪಗಳಿಂದ ಇರುವುದರಿಂದ ೭X೩ =೨೧ ಪ್ರಕಾರ ಇದೆ. ನಾರಾಯಣ ರೂಪವು (೧) ಮನಸ್ಸು (೨) ಬುದ್ಧಿ (೩) ಅಹಂಕಾರ (೪) ಚಿತ್ತ (೫) ಸತ್ವಗುಣ (೬) ರಜೋಗುಣ (೭) ತಮೋಗುಣ ಎಂಬ ಗುಣತ್ರಯಗಳು ಮತ್ತು (೮) ಪ್ರಕೃತಿ-ಹೀಗೆ ಎಂಟು ತತ್ತ್ವಗಳಲ್ಲಿ ಅಧ್ಯಾತ್ಮ ಮುಂತಾದವುಗಳಿಗನುಸಾರವಾಗಿ ಪ್ರತ್ಯೇಕವಾಗಿ ಮೂರು ರೂಪಗಳಿಂದ ಇರುವುದರಿಂದ ಇಪ್ಪತ್ತುನಾಲ್ಕು (೨೪) ವಿಧವಾಗಿ ಇರುತ್ತದೆ. ಮೂಲರೂಪದೊಡನೆ ಸೇರಿಸಿದರೆ "ಪಂಚವಿಂಶತಿ" (೨೫) ಎಂದು ಕರೆಯಲ್ಪಡುತ್ತದೆ. ಸ್ತೋಮಗಳಿಂದ ಸ್ತುತನಾಗುವುದರಿಂದ "ಸ್ತೋಮ"-ಎಂದು ಕರೆಯಲ್ಪಡುತ್ತಾನೆ. ಸ್ತೋಮದಲ್ಲಿ ಇರುವ ಅನಿರುದ್ಧನ ರೂಪಗಳಂತೆ ಸಾಮ ಚಿತಿ ಛಂದಸ್ಸು ಶಸ್ತ್ರಗಳಲ್ಲಿಯೂ ಅವಾಂತರ ವಿಧ ರೂಪಗಳನ್ನು ತಿಳಿಯಬೇಕು.

ಇನ್ನು ೨೪ ರೂಪಗಳ ಸಂಧರ್ಭದಲ್ಲಿ ಭೂತಗಳು ಮನ ಆದಿ ಅಷ್ಟಕ (ಎಂಟು) ಹೇಗೆ ಸೇರುತ್ತದೆ ? – ಎಂಬುದು ವಿಚಾರಣೀಯವೆನಿಸುತ್ತದೆ. ಆದರೆ **ಶ್ರೀ ತಾಮ್ರಪರ್ಣೀ ಆಚಾರ್ಯರು** ತಮ್ಮ ಟಿಪ್ಪಣಿಯಲ್ಲಿ ಇದಕ್ಕೆ ಸಮಾಧಾನ ಹೇಳಿರುತ್ತಾರೆ. (೧) ಮನಸ್ಸು (೨) ಬುದ್ಧಿ (೩) ಅಹಂಕಾರ (೪) ಚಿತ್ತ (೫) ಗುಣತ್ರಯ ಮೂರು (೫, ೬, ೭)

ಮತ್ತು (೮) ಪ್ರಕೃತಿ ಇದು ಅಷ್ಟಕವೆನಿಸುತ್ತದೆ. ಪ್ರಕೃತಿಯಲ್ಲಿ ತಜ್ಜನ್ಯವಾದ ಸತ್ವಗುಣಯುಕ್ತವಾಗಿದೆ. ಇದರಂತೆ ಗುಣತ್ರಯಗಳು ಮೂಲ ಪ್ರಕೃತಿಯಲ್ಲಿವೆ. "ಕಾರ್ಯವು ಕಾರಣದಲ್ಲಿ ವ್ಯಾಪ್ತವಾಗಿರುವುದು. ಕಾರ್ಯವೂ ಸಹ ಮೂಲಾಂಶದಿಂದ ಕಾರಣದಲ್ಲಿರುವುದು". ಈ ತತ್ತ್ವವು **ಗೀತಾತಾತ್ಪರ್ಯ**ದಲ್ಲಿ ಉಕ್ತವಾಗಿದೆ. ಇದರಂತೆ, ಪ್ರಕೃತಿ ಮತ್ತು ಗುಣ ತ್ರಯಗಳು ಕಾರಣಗಳು, ಅವುಗಳಲ್ಲಿ ಭೂತ ಪಂಚಕಗಳು ಪರಸ್ಪರ ಪ್ರವಿಷ್ಟವಾಗಿರುವುವು. "**ಪ್ರಾಣಾ ಏವ ಇದಮಗ್ರ ಆಸುಃ**"-ಇತ್ಯಾದಿ ಪ್ರಮಾಣಗಳಿಂದ ಮನಾದಿಗಳಿಗೂ ಮತ್ತು ಇಂದ್ರಿಯಗಳಿಗೂ ಪರಸ್ಪರ ಸಂಭಂದವಿದೆ ಎಂದು ವೇದ್ಯವಾಗುವುದು. ಪ್ರಾಣ ಶರೀರಗತ ಭೂತಾಭಿಮಾನಿ ದೇವತೆಗಳು. ಸ್ವರ್ಗಲೋಕಸ್ಥಿತ ದೇವತೆಗಳು, ಇವರನ್ನು ಸಂಗ್ರಹಿಸಲಾಗಿ, ಮನಾದಿ ಅಷ್ಟಕಗಳಲ್ಲಿ "ಅಧ್ಯಾತ್ಮ-ಅಧಿಭೂತ-ಅಧಿದೈವ" - ಎಂಬ ಮೂರು ಸಂಬಂಧಿಸುತ್ತವೆ ಎಂದು ತಾತ್ಪರ್ಯ. ॥೨॥

## (ಇ) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

"ಓಂ" ಕಾರ ಪ್ರತಿಪಾದ್ಯ ನಾಡೀಗತ ರೂಪೋಪಾಸನೆ ಸಂಗ್ರಹವಾಗಿ ಬೋಧಿಸುತ್ತಾರೆ. ಸುಗುಣಪೂರ್ಣನಾದ್ದರಿಂದ "ಓಂ" ಕಾರ ಎಂಬ ಅಕ್ಷರ ಪ್ರತಿಪಾದ್ಯ, ವ್ಯಾಪ್ತ, ಉತ್ಕೃಷ್ಟಪೂಜ್ಯನಾದ್ದರಿಂದ ಅ-ಉ-ಮ ಎಂಬ ಮೂರಕ್ಷರನಾಮಕ ಶ್ರೀ ಹರಿ, ಅನಿರುದ್ಧ ರೂಪದಿಂದ ಈ ಶರೀರದಲ್ಲಿ ಪರಿಛೇದತ್ರಯುವೆಂಬ, ಸತ್ವರಜಸ್ತಮವೆಂಬ ಮೂರಾವರಣವುಳ್ಳ ಪ್ರಕೃತ್ಯಾತ್ಮಕ ಲಿಂಗದೇಹದಲ್ಲಿ. ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚ ತನ್ಮಾತ್ರ ಸಹಿತ ೧೫ರಲ್ಲಿಯೂ, ಈ ೧೫ಕ್ಕೆ ಮನಸ್ಸು, ಪಂಚಭೂತಸಹಿತ ಸಹ ಕಿಂಚಿತ್ ಸ್ಥೂಲವಾಗಿ ಸೇರಿರುವ ಅನಿರುದ್ಧ ದೇಹರೂಪ ೨೧ ತತ್ತ್ವದಲ್ಲೂ, ಈ ೨೧ಕ್ಕೆ ಬುದ್ಧಿ, ಚಿತ್ತ, ಅಹಂಕಾರ ಸಹಾ ಸ್ಥೂಲನಾಗಿ ಸೇರಿರುವ ಸ್ಥೂಲ ದೇಹದಲ್ಲಿ ೨೪ ರೂಪನಾಗಿಯೂ, ಕರೆಸಿಕೊಂಡು, ೭೨,೦೦೦ ನಾಡಿಗಳಲ್ಲಿ ಇನ ಎಂಬ ಸೂರ್ಯನ ಗಭಸ್ತಿ ಎಂಬ ಕಿರಣಗತ, ದಕ್ಷಿಣಾಯನ ರಶ್ಮಿ, ಉತ್ತರಾಯಣ ರಶ್ಮಿ ಎಂದು ಎಡ ಬಲ ಭಾಗದಲ್ಲಿರುವ ನಾಡೀಗತ ರೂಪದಲ್ಲೂ, ಹೊರಗೂ,

ಸೂರ್ಯರಶ್ಮಿಗಳಲ್ಲೂ ಇದ್ದು, ಲೋಕಗಳನ್ನು ಪ್ರಕಾಶಿಸುವನೆಂದು ಅರ್ಥ. ॥೨॥

## ಸರ್ವವ್ಯಾಖ್ಯಾನಸಾರ ಸಂಗ್ರಹ:

(೧) "ಓಂ" ಕಾರವು **ಅ, ಉ ಮತ್ತು ಮ** ಎಂಬ ಮೂರು ಅಕ್ಷರಗಳಿಂದ ಯುಕ್ತವಾದದ್ದು. ಅ-ಕಾರ, ಉ-ಕಾರ ಮತ್ತು ಮ-ಕಾರಗಳಿಂದ ಯುಕ್ತವಾದ "**ಓಂ**" ಶಬ್ದಕ್ಕೆ **ಪ್ರಣವ** ಎಂದು ಹೆಸರು. ಈ ಬೀಜಾಕ್ಷರವು ಸರ್ವಶಾಸ್ತ್ರಗಳಿಗೂ ಮೂಲಭೂತವಾದದ್ದು. ಶ್ರೀ ಪರಮಾತ್ಮನು ಪ್ರಣವ ಪ್ರತಿಪಾದ್ಯನು. ಅಂದರೆ, ಓಂ ಕಾರವಾಚ್ಯನು.

(೨) ಇಂತಹ **ಪ್ರಣವ ಪ್ರತಿಪಾದ್ಯ**ನಾದ ಮೂಲರೂಪಿ ಶ್ರೀಮನ್ನಾರಾಯಣನು **ಅನಿರುದ್ಧ** ನಾಮಕನು. ಈ ಅನಿರುದ್ಧ ನಾಮಕನಾದ ಶ್ರೀ ಪರಮಾತ್ಮನು **(೧) ವಿಶ್ವ (೨) ತೈಜಸ ಮತ್ತು (೩) ಪ್ರಾಜ್ಞ** ಎಂಬ ಮೂರು ರೂಪಗಳಿಂದ ಪಿಂಡಾಂಡರೂಪವಾದ ಈ ಸ್ಥೂಲ ದೇಹದಲ್ಲಿ ವಿದ್ಯಮಾನನಾಗಿದ್ದಾನೆ. ಈ ವಿಷಯವನ್ನೇ ದಾಸರಾಯರು "**ಪ್ರಣವ ಪ್ರತಿಪಾದ್ಯ ತ್ರಿನಾಮದಿ ತನುವಿನೊಳು**" ಎಂದು ಪ್ರಸಕ್ತ ಪದ್ಯದಲ್ಲಿ ನಿರೂಪಿಸಿರುತ್ತಾರೆ.

(೩) ಮೇಲ್ಕಂಡ ರೂಪತ್ರಯಗಳು ವಿಶ್ವ. ತೈಜಸ ಮತ್ತು ಪ್ರಾಜ್ಞ ನಾಮಕನಾದ **(೧) ಅನಿರುದ್ಧ (೨) ಪ್ರದ್ಯುಮ್ನ ಮತ್ತು (೩) ಸಂಕರ್ಷಣ** ಎಂಬ ಮೂರು ಪ್ರಕಾರ.

(೪) ಅನಿರುದ್ಧ ರೂಪಿ ಶ್ರೀ ಪರಮಾತ್ಮನು **ಅ-ಕಾರವಾಚ್ಯ ವಿಶ್ವನಾಮಕನಾಗಿಯೂ,** ಪ್ರದ್ಯುಮ್ನರೂಪಿಯು **ಉ-ಕಾರವಾಚ್ಯ**

**ತೈಜಸನಾಮಕನಾಗಿಯೂ,** ಮತ್ತು ಸಂಕರ್ಷಣ ರೂಪಿಯು-**ಮ ಕಾರವಾಚ ಪ್ರಾಜ್ಞನಾಮಕನಾಗಿಯೂ,** ಸಾಧನ ಶರೀರವೆಂದೆನಿಸಿರುವ ಈ ದೇಹದಲ್ಲಿ (ತನುವಿನೊಳು) ವಿದ್ಯಮಾನರಾಗಿದ್ದು ಆಯಾಯಾ ದೇಹಗತ ವ್ಯಾಪಾರಗಳನ್ನು ನಡೆಯಿಸುವರು.

(೫) ಅಧಿಕ **ಅ-ಕಾರವಾಚ್ಯ**ನೆಂತಲೂ, ಉಚ್ಚನಾದುದರಿಂದ **ಉ-ಕಾರವಾಚ್ಯ**ವೆಂತಲೂ ಮತ್ತು ಸರ್ವವೇದ ಪ್ರತಿಪಾದ್ಯನಾದುದರಿಂದ (ಮಿತ) **ಮ-ಕಾರವಾಚ್ಯ**ವೆಂತಲೂ **ಛಾಂದೋಗ್ಯೋಪನಿಷದ್ಭಾಷ್ಯವು** ತಿಳಿಸುತ್ತದೆ.

**ಪ್ರಮಾಣ :–**

**ಅಕಾರೇಣಾಧಿಕಂ ಪ್ರೋಕ್ತಮುಕಾರೇಣಾಚ್ಚಮುಚ್ಯತೇ ||**

**ತಥಾಮಿತಂ ಸರ್ವವೇದೈರ್ಮಕಾರೇಣಾಭಿಧೀಯತೇ ||**

**ಅಧಿಕೋಚ್ಚಮಿತಿಜ್ಞಾತನೋಮಿತ್ಯಸ್ಯ ಈರೀತಃ ||**

ಅಂದರೆ, (೧) "ಅಕಾರೇಣ **ಅಧಿಕಂ** ಪ್ರೋಕ್ತಂ" "(ಅಧಿಕತ್ವ) (೨) "ಉಕಾರೇಣ ಉಚ್ಚಂ ಉಚ್ಯತೇ" (ಉಚ್ಯತ್ವ–ಸರ್ವೋತ್ತಮತ್ವ) ಮತ್ತು (೩) "ತಾಥಾಮಿತಂ ಸರ್ವವೇದೈಃ **ಮಕಾರೇಣ** ಅಭಿಧೀಯತೇ" (ಸರ್ವ ವೇದ ಪ್ರತಿಪಾದ್ಯತ್ವ) ಇಂತು ಅಧಿಕತ್ವ, ಉಚ್ಯತ್ವ ಮತ್ತು ಸರ್ವವೇದ ಪ್ರತಿಪಾದ್ಯತ್ವನಾಗಿರುವುದರಿಂದಲೇ ಅಕಾರ, ಉಕಾರ, ಮಕಾರ ವಾಚ್ಯವಾದ ಶ್ರೀ ಪರಮಾತ್ಮನಿಗೆ **ಓಂಕಾರವಾಚ್ಯ ಅಥವಾ ಪ್ರಣವ ಪ್ರತಿಪಾದ್ಯ**ನೆಂದು ಶಾಸ್ತ್ರಗಳಲ್ಲಿ ಉಕ್ತವಾಗಿದೆ.

(೬) ಇಂತಹ ಪ್ರಣವಸ್ವರೂಪಿಯಾದ ಶ್ರೀ ಪರಮಾತ್ಮನು ಈ ತನುವಿನಲ್ಲಿ **ತ್ರಿಸ್ಥಾನ** ದಲ್ಲಿದ್ದಾನೆ–ಎಂದು ತಿಳಿಸುತ್ತಾರೆ ದಾಸರಾಯರು,

**ತ್ರಿಸ್ಥಾನಗಳ ವಿವರ :–**

(೧) ಅನಿರುದ್ಧರೂಪಿಯು **ಅಕಾರವಾಚ್ಯ ವಿಶ್ವ** ನಾಮಕನಾಗಿ ಸರ್ವ ಚೇತನರ **ಬಲಗಣ್ಣಿನ** ತುದಿಯಲ್ಲಿದ್ದು, **ಜಾಗ್ರತಾವಸ್ಥೆಗೆ** ಪ್ರೇರಕ ನಾಗಿದ್ದಾನೆ,

(೨) ಪ್ರದ್ಯುಮ್ನ ರೂಪಿಯು **ಉಕಾರವಾಚ್ಯ ತೈಜಸ** ನಾಮಕ ನಾಗಿ **ಕಂಠ** ಪ್ರದೇಶದಲ್ಲಿದ್ದು. **ಸ್ವಪ್ನಾವಸ್ಥೆ**ತಿಗೆ ಪ್ರೇರಕನಾಗಿದ್ದಾನೆ.

(೩) ಸಂಕರ್ಷಣ ರೂಪಿಯು **ಮಕಾರವಾಚ್ಯ ಪ್ರಾಜ್ಞ** ನಾಮಕನಾಗಿ **ಹೃದಯಸ್ಥಾನ**ದಲ್ಲಿದ್ದು ಸರ್ವಚೇತನರ **ಸುಷುಪ್ತ್ಯವಸ್ಥೆಗೆ** (ಗಾಢನಿದ್ರಾ ವಸ್ಥೆ) ಪ್ರೇರಕನಾಗಿದ್ದಾನೆ.

ಈ ತ್ರಿಸ್ಥಾನಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ಸುಲಭ ವಾಗಿ ತಿಳಿಯಬಹುದು.

| ಕ್ರಮ ಸಂಖ್ಯೆ | ಭಗವದ್ರೂಪ | ನಾಮ | ವಾಚ್ಯತ್ವ | ಸ್ಥಾನ | ವ್ಯಾಪಾರ |
|---|---|---|---|---|---|
| ೧ | ಅನಿರುದ್ಧ | ವಿಶ್ವ | ಅಕಾರ | ಬಲಗಣ್ಣಿನ ತುದಿ | ಜಾಗ್ರತಾವಸ್ಥಾ ಪ್ರೇರಕ |
| ೨ | ಪ್ರದ್ಯುಮ್ನ | ತೈಜಸ | ಉಕಾರ | ಕಂಠ ಪ್ರದೇಶ | ಸ್ವಪ್ನಾವಸ್ಥಾ ಪ್ರೇರಕ |
| ೩ | ಸಂಕರ್ಷಣ | ಪ್ರಾಜ್ಞ | ಮಕಾರ | ಹೃದಯ | ಸುಷುಪ್ತ್ಯವಸ್ಥಾ ಪ್ರೇರಕ |

ಅಂದರೆ ಅನಿರುದ್ಧರೂಪಿ ಪರಮಾತ್ಮನೇ ಪ್ರದ್ಯುಮ್ನ ಮತ್ತು ಸಂಕರ್ಷಣ ರೂಪಾತ್ಮಕನಾಗಿ, ವಿಶ್ವ ತೈಜಸ ಮತ್ತು ಪ್ರಾಜ್ಞ ಎಂಬ ನಾಮ ತ್ರಯಗಳಿಂದ, ಓಂ ಕಾರವಾಚ್ಯನಾಗಿ, ಈ ಸ್ಥೂಲ ದೇಹಗತ ಕಣ್ಣು, ಕಂಠ ಮತ್ತು ಹೃದಯಗಳೆಂಬ ತ್ರಿಸ್ಥಾನಗಳಲ್ಲಿದ್ದು, ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿಗಳೆಂಬ ಅವಸ್ಥಾತ್ರಯಗಳಿಗೆ ಮುಖ್ಯ ಪ್ರೇರಕನಾಗಿದ್ದಾನೆ ಎಂದು ತಾತ್ಪರ್ಯ.

(೨) **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ**ದ ಪ್ರಕಾರ, ರೂಪ ತ್ರಯಗಳ ವಿವರಗಳು ಇಂತಿವೆ,

(೧) ವಿಷ್ಣು–ಸತ್ವಗುಣದಲ್ಲಿ. (೨) ಬ್ರಹ್ಮ–ರಜೋಗುಣದಲ್ಲಿ, ಮತ್ತು (೩) ರುದ್ರ ತಮೋಗುಣದಲ್ಲಿ

ಅಲ್ಲದೆ (೧) ವಿಷ್ಣು – ಅವ್ಯಕ್ತ ತತ್ವದಲ್ಲಿ (೨) ಬ್ರಹ್ಮ–ಮಹತ್ವದಲ್ಲಿ ಮತ್ತು (೩) ರುದ್ರ–ಅಹಂಕಾರ ತತ್ವದಲ್ಲಿ ಎಂದು ನಿರೂಪಿಸಿರುತ್ತಾರೆ.

ಅಂದರೆ. ಅನಿರುದ್ಧರೂಪಿ ಶ್ರೀ ಪರಮಾತ್ಮನು ಅಕಾರ. ಉಕಾರ ಮತ್ತು ಮಕಾರವುಳ್ಳನಾಗಿ ಅವ್ಯಕ್ತ ತತ್ವದಲ್ಲಿ ಸತ್ವಗುಣ ಪ್ರವರ್ತಕನಾಗಿ ವಿಷ್ಣು ರೂಪದಿಂದ ರಕ್ಷಣಾ ಕಾರ್ಯವನ್ನು, ಬ್ರಹ್ಮ ದೇವರಲ್ಲಿ ಬ್ರಹ್ಮ ನಾಮಕ ನಾಗಿದ್ದು ರಜೋಗುಣ ಪ್ರವರ್ತಕನಾಗಿ ಜಗತ್ತಿನ ಸೃಷ್ಟಿ ವ್ಯಾಪಾರವನ್ನು ಮತ್ತು ರುದ್ರದೇವರಲ್ಲಿ. ಸಂಕರ್ಷಣ ನಾಮಕನಾಗಿದ್ದು, ಅಹಂಕಾರ ತತ್ವ ಸ್ಥಿತನಾಗಿದ್ದು, ತಮೋಗುಣ ಪ್ರವರ್ತಕನಾಗಿ, ಲಯಕಾರ್ಯವನ್ನು ಮಾಡುವನು ಎಂದು ತಾತ್ಪರ್ಯ.

ಈ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ಸುಲಭವಾಗಿ ತಿಳಿಯ ಬಹುದು.

| ಕ್ರಮ ಸಂಖ್ಯೆ | ಭಗವದ್ರೂಪ | ಅಧಿಷ್ಠಾನ | ಗುಣ | ಸ್ಥಾನ | ವ್ಯಾಪಾರ |
| --- | --- | --- | --- | --- | --- |
| ೧ | ವಿಷ್ಣು | ಸ್ವಯಂ ವಿಷ್ಣು ರೂಪನಾಗಿ | ಸತ್ವ | ಅವ್ಯಕ್ತತತ್ವ | ಜಗತ್ತಿನ ಪಾಲನೆ |
| ೨ | ಬ್ರಹ್ಮ | ಬ್ರಹ್ಮನಲ್ಲಿ ಬ್ರಹ್ಮ ನಾಮಕನಾಗಿ | ರಜ | ಮಹತತ್ತ್ವ | ಜಗತ್ತಿನ ಸೃಷ್ಟಿ |
| ೩ | ರುದ್ರ | ರುದ್ರನಲ್ಲಿ ರುದ್ರ ನಾಮಕನಾಗಿ | ತಮ | ಅಹಂಕಾರ ತತ್ತ್ವ | ಜಗತ್ತಿನ ಲಯ |

(೮) ಅನಿರುದ್ಧನಾಮಕ ಶ್ರೀ ಪರಮಾತ್ಮನು, ಓಂಕಾರವಾಚ್ಯನಾಗಿದ್ದು, ಲಿಂಗಶರೀರ-ಅನಿರುದ್ಧ ಶರೀರ ಮತ್ತು ಸ್ಥೂಲ ಶರೀರಗಳೆಂಬ ತ್ರಿಸ್ಥಾನಗಳಲ್ಲಿ ವಿದ್ಯಮಾನನಾಗಿದ್ದು, ಆಯಾಯಾ ದೇಹಗತ ವ್ಯಾಪಾರಗಳನ್ನು ನಿರ್ವಹಿಸುವನು. ಅ-ಕಾರ, ಉ-ಕಾರ ಮತ್ತು ಮ-ಕಾರಗಳ ಉತ್ಪತ್ತಿ ಸ್ಥಾನಗಳು ತಾಳು, ಕಂಠ ಮತ್ತು ತುಟಿ (ಓಷ್ಟ ಪುಟಗಳು) ಕ್ರಮವಾಗಿ ಇರುವುದರಿಂದ, ಈ ಸ್ಥಾನತ್ರಯಗಳಲ್ಲಿ ಇದ್ದು, ಅಕ್ಷರ ಉಚ್ಚಾರಣಾ ಕಾರ್ಯವನ್ನು ಮಾಡಿ ಮಾಡಿಸುವನು. **(ಭಾವ ಪ್ರಕಾಶಿಕೆ ವ್ಯಾಖ್ಯಾನ ಪ್ರಕಾರ)** ಇಂತು, ವಿವಿಧ ಪ್ರಕಾರಗಳಿಂದ ವಿವಿಕ್ಷಾಭೇದಗಳಿಂದ ಅನಿರುದ್ಧ ರೂಪಿ ಶ್ರೀ ಪರಮಾತ್ಮನ ಭಗವದ್ರೂಪೋಪಾಸನೆಯನ್ನು ಜ್ಞಾನಾನುಸಂಧಾನ ಕ್ರಮದಿಂದ ಮಾಡಬಹುದು.

**"ಈ ತನುವಿನೊಳು"** ಎಂಬ ಶಬ್ದ ಪ್ರಯೋಗವಿರುವುದರಿಂದ ಈ ಸ್ಥೂಲ ಶರೀರಗತ ಕಣ್ಣು, ಕಂಠ ಮತ್ತು ಹೃದಯಗಳೆಂಬ ತ್ರಿಸ್ಥಾನಗಳಲ್ಲಿ

ಅನಿರುದ್ಧರೂಪಿ ಶ್ರೀ ಪರಮಾತ್ಮನು ಅ-ಕಾರ, ಉ-ಕಾರ ಮತ್ತು ಮ-ಕಾರ ವಾಚ್ಯನಾಗಿದ್ದು ಕ್ರಮವಾಗಿ ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂಬ ತ್ರಿನಾಮದಿ ವಿದ್ಯಮಾನನಾಗಿದ್ದು ಜಾಗ್ರತಾ, ಸ್ವಪ್ನ ಮತ್ತು ಸುಷುಪ್ತಿ ಎಂಬ ಅವಸ್ಥಾತ್ರಯಗಳಿಗೆ ಪ್ರೇರಕನಾಗಿದ್ದಾನೆ ಎಂಬುದು ಮುಖ್ಯ ತಾತ್ಪರ್ಯವು. ಗುಣತ್ರಯಗಳಿಂದ ಸೃಷ್ಟವಾದ ಅವ್ಯಕ್ತ, ಮಹತ್ತು ಮತ್ತು ಅಹಂಕಾರವೆಂಬ ತತ್ತ್ವತ್ರಯಗಳಲ್ಲಿ ಸ್ಥಿತನಾಗಿದ್ದು ಪೂರ್ವೋಕ್ತ ಕ್ರಿಯಾವಿಶೇಷಗಳನ್ನು ನಿರ್ವಹಿಸುತ್ತಿರುವ ಆ ಕರುಣಾಸಂಪನ್ನ ಅದೆಂತಹ ಪರಮಾದ್ಭುತಚರಿತ!

(೯) ಪ್ರವಣ ಪ್ರತಿಪಾದ್ಯನಾದ ಅನಿರುದ್ಧ ರೂಪಿಯು **ತ್ರಿಪಂಚಕ** ನೆಂದೆನಿಸಿದ್ದಾನೆ. ತ್ರಿಪಂಚಕ ಎಂದರೆ ೩ × ೫ = ೧೫ ಎಂದರ್ಥ. ಈ ಹದಿನೈದು ರೂಪಗಳ ವಿವರ ಇಂತಿದೆ :–

| | | | | |
|---|---|---|---|---|
| (೧) | ಪಂಚಜ್ಞಾನೇಂದ್ರಿಯಗಳಲ್ಲಿ ಅನಿರುದ್ಧಾದಿ | ಪಂಚರೂಪಗಳು | = | ೫ |
| (೨) | ಪಂಚಕರ್ಮೇಂದ್ರಿಯಗಳಲ್ಲಿ ” | ” | = | ೫ |
| (೩) | ಪಂಚಭೂತಗಳಲ್ಲಿ ” | ” | = | ೫ |
| | | ಒಟ್ಟು ರೂಪಗಳು | = | ೧೫ |

(೧೦) ಅದೇ ಅನಿರುದ್ಧರೂಪಿ ಶ್ರೀ ಪರಮಾತ್ಮನು **ಏಕವಿಂಶತಿಗ** ನೆನಿಸಿದ್ದಾನೆ ಎಂದು ತಿಳಿಸುತ್ತಾರೆ. "ಏಕವಿಂಶತಿ"–ಎಂದರೆ ೨೧ ಎಂದರ್ಥ.

ಈ ಏಕವಿಂಶತಿ ರೂಪಗಳ ವಿವರಗಳು ಇಂತಿವೆ ;–

| | | | |
|---|---|---|---|
| (೧) | ಪಂಚಜ್ಞಾನೇಂದ್ರಿಯಗಳಲ್ಲಿ ರೂಪಗಳು | = | ೫ |
| (೨) | ಪಂಚಕರ್ಮೇಂದ್ರಿಯಗಳಲ್ಲಿ ರೂಪಗಳು | = | ೫ |
| (೩) | ಭೂತ ಪಂಚಕಗಳಲ್ಲಿ ರೂಪಗಳು | = | ೫ |
| (೪) | ಪಂಚ ತನ್ಮಾತ್ರಾಗಳಲ್ಲಿ ರೂಪಗಳು | = | ೫ |

| | | |
|---|---|---|
| (೫) | ಮನಸ್ಸಿನಲ್ಲಿ ಭಗವದ್ರೂಪ | = ೧ |
| | ಒಟ್ಟು ರೂಪಗಳು | = ೨೧ |

| | | |
|---|---|---|
| (೧) | ಮತ್ಸ್ಯಾದಿ ದಶ ರೂಪಗಳು | = ೧೦ |
| (೨) | ಶಕ್ತಿ, ಪ್ರತಿಷ್ಠಾದಿ ರೂಪಗಳು | = ೧೧ |
| | ಒಟ್ಟು ರೂಪಗಳು | = ೨೧ |

ಅಂದರೆ ಪೂರ್ವೋಕ್ತ ದೇಹಗತ ಮನಸ್ತತ್ವದಿಂದ ಆರಂಭಿಸಿ, ಭೂತಪಂಚಕಗಳ ವರೆಗೆ ೨೧ ಅಧಿಷ್ಠಾನಗಳಲ್ಲಿ, ಮತ್ಸ್ಯಾದಿ ದಶರೂಪಗಳು ಮತ್ತು ಶಕ್ತಿ, ಪ್ರತಿಷ್ಠಾದಿ ಏಕಾದಶ ರೂಪಗಳು, ಸೇರಿ ಒಟ್ಟು ೨೧ ರೂಪಗಳಿಂದ ವಿದ್ಯಮಾನವಾಗಿದ್ದು ಆಯಾಯಾ ತತ್ತ್ವ ಕಾರ್ಯಗಳಿಗೆ ಮುಖ್ಯ ಪ್ರವರ್ತಕನಾಗಿದ್ದಾನೆ ಎಂದು ಮುಖ್ಯ ತಾತ್ಪರ್ಯವು.

(೧೧) ಇಂತಹ ಪ್ರಣವ ಪ್ರತಿಪಾದ್ಯ ಅನಿರುದ್ಧನು **ಚತುರವಿಂಶತಿಗ** ನೆನಿಸಿ ಎಂದು ವಿವರಿಸುತ್ತಾರೆ. "ಚತುರವಿಂಶತಿ"—ಎಂದರೆ ಇಪ್ಪತ್ತು ನಾಲ್ಕು ಎಂದರ್ಥ. ಸಾಧನ ಶರೀರವೆಂದೆನಿಸಿದ ಈ ಸ್ಥೂಲಶರೀರವು ೨೪ ತತ್ತ್ವಗಳಿಂದ ನಿರ್ಮಿತವಾಗಿದೆ. ಇವುಗಳ ವಿವರ ಇಂತಿದೆ :–

| | | | |
|---|---|---|---|
| (೧) | ಅವ್ಯಕ್ತ ತತ್ತ್ವ | = ೧ | ೪ ಸೂಕ್ಷ್ಮ ತತ್ತ್ವಗಳು. |
| (೨) | ಮಹತ್ತತ್ವ | = ೧ | |
| (೩) | ಅಹಂಕಾರ ತತ್ವ | = ೧ | |
| (೪) | ಮನಸ್ತತ್ವ | = ೧ | |

| | | | | |
|---|---|---|---|---|
| (೫) | ಜ್ಞಾನೇಂದ್ರಿಯಗಳು | = | ೫ | ೨೦ ಸ್ಥೂಲ ತತ್ತ್ವಗಳು |
| (೬) | ಕರ್ಮೇಂದ್ರಿಯಗಳು | = | ೫ | |
| (೭) | ಪಂಚ ಭೂತಗಳು | = | ೫ | |
| (೮) | ಪಂಚತನ್ಮಾತ್ರಾ ಗುಣಗಳು | = | ೫ | |
| | ಒಟ್ಟು | = | ೨೪ | ತತ್ತ್ವಗಳು |

ಪೂರ್ವೋಕ್ತ ೨೪ ತತ್ತ್ವಗಳಲ್ಲಿ ಅಂತರ್ಗತನಾಗಿ ಕೇಶವಾದಿ ಕೃಷ್ಣ ಪರ್ಯಂತ ಚತುರ್ವಿಂಶತಿ ನಾಮಗಳಿಂದ ವಿದ್ಯಮಾನನಾಗಿದ್ದು, ತತ್ತ್ವ ಪತಿ ದೇವತೆಗಳ ದ್ವಾರಾ ತತ್ತ್ವ ವ್ಯಾಪಾರಗಳನ್ನು ತಾನೇ ಮಾಡಿ ಮಾಡಿಸುತ್ತಿರುವನು.

(೧೨) ದೇಹಗತ ನಾಡಿಗಳ ಸಂಖ್ಯೆಯು ೭೨,೦೦೦. ಈ ನಾಡಿ ವ್ಯೂಹದಲ್ಲಿ ಹಂಚಿಕೆ ಇಂತಿದೆ :–

| | | | |
|---|---|---|---|
| (೧) | ದೇಹದ ಬಲಭಾಗದಲ್ಲಿ ಪುರುಷ ನಾಡಿಗಳು | = | ೩೬,೦೦೦ |
| (೨) | ದೇಹದ ಎಡ ಭಾಗದಲ್ಲಿ ಸ್ತ್ರೀ ನಾಡಿಗಳು | = | ೩೬,೦೦೦ |
| | ಒಟ್ಟು ನಾಡಿಗಳು | = | ೭೨,೦೦೦ |

ಕಾಲಮಾನದ ಪ್ರಕಾರ, ಒಂದು ವರ್ಷಕ್ಕೆ ೩೬೦ ದಿವಸಗಳು. ಮನುಷ್ಯನ ಆಯುರ್ಮಾನವನ್ನು ೧೦೦ ವರ್ಷಗಳೆಂದು ಪರಿಗಣಿಸಿದರೆ, ೧೦೦ ವರ್ಷಗಳಿಗೆ ೩೬೦ × ೧೦೦ = ೩೬,೦೦೦ ದಿದಸಗಳಾಗುವುವು. ಅಲ್ಲಿಗೆ ಹಗಲು ೩೬,೦೦೦ + ರಾತ್ರಿ ೩೬,೦೦೦ = ೭೨,೦೦೦ ರಾತ್ರಿ ಹಗಲುಗಳು. ಈ ೭೨,೦೦೦ ನಾಡಿಗಳಲ್ಲಿ ಶ್ರೀ ಪರಮಾತ್ಮನು ಓತಪ್ರೋತನಾಗಿ ವ್ಯಾಪಿಸಿದ್ದು, ನಾಡ್ಯಭಿಮಾನಿ ದೇವತೆಗಳ ದ್ವಾರಾ ನಾಡೀಗತ ಕ್ರಿಯಾ ವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು. ಈ ಭಗವದ್ರೂಪಗಳ ಸಂಖ್ಯಾ ವಿವರ ಇಂತಿದೆ :–

ತತ್ತ್ವಗಳು = ೨೪. ಈ ತತ್ತ್ವಗಳ ಸೃಷ್ಟಿಗೆ ಮೂಲ ತ್ರಿಗುಣಗಳು ಅಂದರೆ ೨೪ ತತ್ತ್ವಗಳು × ಗುಣತ್ರಯಗಳು × ವಿಶ್ವಾದಿ ಸಹಸ್ರ ರೂಪಗಳು =೨೪ × ೩ × ೧೦೦೦ = ೭೨,೦೦೦ ಭಗವದ್ರೂಪಗಳಾಗುವುವು.

ಇಂತು, ವಿಶ್ವಾದಿ ಸಹಸ್ರ ರೂಪಗಳಿಂದ **ಬೃಹತೀ** ವಾಚ್ಯನಾಗಿ ತಾನಿದ್ದು ನಾಡ್ಯಭಿಮಾನಿ ದೇವತೆಗಳಿಗೆ ಪ್ರಭುವಾಗಿರುವುದರಿಂದ-"**ಎಪ್ಪತ್ತೆರಡು ಸಾವಿರ ವಿನಿತು ನಾಡಿಗಳೊಳು ನಿಯಮಿಸುತ**"- ಎಂದಿದ್ದಾರೆ ಜ್ಞಾನಿ ಶ್ರೇಷ್ಠರಾದ ದಾಸವರೇಣ್ಯರು.

**(೧೩) ಇನಗಭಸ್ತಿಗ :-**

"ಇನ"–ಎಂದರೆ ಸೂರ್ಯ. "ಗಭಸ್ತಿ"–ಎಂದರೆ ಕಿರಣಗಳು. "ಗ"– ಎಂದರೆ ವಿದ್ಯಮಾನನಾಗಿದ್ದವನಾಗಿ ಎಂದರ್ಥ. ಅಂದರೆ ರಾತ್ರಿ ಮತ್ತು ಹಗಲುಗಳಿಗೆ ಸೂರ್ಯನೇ ಕಾರಣ. ಸೂರ್ಯನ ಕಿರಣಗಳ ಸಂಖ್ಯೆ ೧೦೦೦. ಸೂರ್ಯನ ಈ ಸಹಸ್ರ ಕಿರಣಗಳಲ್ಲಿ ಒಂದೊಂದು ಕಿರಣದಲ್ಲಿಯೂ ೭೨ ರೂಪಗಳಿಂದ ಸೂರ್ಯಾಂತರ್ಗತ, ಸವಿತೃನಾಮಕ "**ಘೃಣೀ**" ವಾಚ್ಯ ಶ್ರೀಮನ್ನಾರಾಯಣನು ಇದ್ದು, ಈ ಜಗತ್ತಿನಲ್ಲಿ ಸರ್ವತ್ರವ್ಯಾಪ್ತನಾಗಿದ್ದು, ಎಲ್ಲೆಡೆಯಲ್ಲಿಯೂ ಪ್ರಕಾಶಿಸುತ್ತಿರುವನು.

ಸ್ಥೂಲದೇಹಗತ ಅಷ್ಟದಳ ಕಮಲದ ಕರ್ಣಿಕಾದ ಮೇಲೆ, ಮೂಲೇಶ ನಾಮಕನಾಗಿ ಬಿಂಬರೂಪಿ ಶ್ರೀ ಪರಮಾತ್ಮನಿಗೆ ಸೂರ್ಯನು **ಪೀಠರೂಪ**ದಿಂದ ಇದ್ದಾನೆ. ಈ ಸೂರ್ಯನ ಸಹಸ್ರ ಕಿರಣಗಳಲ್ಲಿ ಸ್ಥಿತನಾಗಿರುವ ಬಿಂಬನು ಸ್ವಪ್ರಕಾಶದಿಂದ ಜ್ಞಾನಾನಂದಮಯನಾಗಿ ಬೆಳಗುತ್ತಾ ದೇಹದಲ್ಲಿ ಅಂತಸ್ಥನಾಗಿದ್ದು ಅಂತಃ ವ್ಯಾಪಾರಗಳನ್ನು ನಡಿಸುತ್ತಿರುವನು. ॥೨॥

## ಪದ್ಯ (೩)

**ಮೂಲ :-**

**ಜೀವ ಲಿಂಗಾನಿರುದ್ಧ ಸ್ಥೂಲ ಕ ।**
**ಳೇವರಗಳಲಿ ವಿಶ್ವ ತುರಗ ।**
**ಗ್ರೀವ ಮೂಲೇಶಾಚ್ಯುತತ್ರಯ ಹಂಸ ಮೂರ್ತಿಗಳ ॥**
**ಈ ವಿಧ ಚತುಃ ಸ್ಥಾನದಲಿ ಶಾಂ ।**
**ತೀ ವರನ ಈರೆರಡು ರೂಪದಿ ।**
**ಭಾವಿಸುವುದೇಕೋನವಿಂಶತಿ ಮೂರ್ತಿ ಸರ್ವತ್ರ ॥೩॥**

**ಅವತರಣಿಕೆ :-**

ಸ್ವರೂಪದೇಹ, ಲಿಂಗಶರೀರ, ಅನಿರುದ್ಧದೇಹ ಮತ್ತು ಸ್ಥೂಲಶರೀರಗಳೆಂಬ ನಾಲ್ಕು ವಿಧವಾದ ಶರೀರಗಳಲ್ಲಿ ಭಗವದ್ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ. ಪ್ರಸಕ್ತ ಸಂಧಿಗತ ೩ ನೆಯ ಈ ಪದ್ಯದಿಂದ.

ಜೀವನ ಸ್ವರೂಪ ದೇಹದಲ್ಲಿ ವಿಶ್ವನಾಮಕ ಪರಮಾತ್ಮನೂ, ಲಿಂಗ ಶರೀರದಲ್ಲಿ ಹಯಗ್ರೀವನೂ (ತುರಗಗ್ರೀವ). ಅನಿರುದ್ಧದೇಹದಲ್ಲಿ ಮೂಲೇಶ ನಾಮಕ ಶ್ರೀಮನ್ನಾರಾಯಣನೂ (ಇವನೇ ಶಾಂತೀವರನಾದ ಅನಿರುದ್ಧನು) ಮತ್ತು ಸ್ಥೂಲಶರೀರದಲ್ಲಿ ಹಂಸನಾಮಕ ಪರಮಾತ್ಮನೂ ವಿದ್ಯಮಾನನಾಗಿದ್ದಾನೆ. ಪರ್ಯಾಯವಾಗಿ ಶಾಂತೀಪತಿಯಾದ ಅನಿರುದ್ಧನೇ ಅಚ್ಯುತ, ಅನಂತ, ಗೋವಿಂದ, ಮತ್ತು ಹಂಸನಾಮಕನಾಗಿ ಪೂರ್ವೋಕ್ತ ಶರೀರ ಚತುಷ್ಟಯಗಳಲ್ಲಿ ಇದ್ದು ವ್ಯಾಪಾರ ಮಾಡುತ್ತಿರುವನೆಂದು ಉಪಾಸನೆ ಮಾಡಬೇಕು. ಇಂತು ಶಾಂತೀವರನಾದ ಅನಿರುದ್ಧ ರೂಪಿ ಶ್ರೀ ಪರಮಾತ್ಮನ ನಾಲ್ಕು ರೂಪಗಳನ್ನು (ಈರೆರಡು ರೂಪದಿ), (೧) ನೇತ್ರ, (೨) ಕಂಠ, (೩) ಹೃದಯ ಮತ್ತು (೪) ಶಿರಸ್ಸು ಎಂಬ ಶರೀರಗತ ನಾಲ್ಕು ಸ್ಥಾನ

ಗಳಲ್ಲಿ ಚಿಂತಿಸಬೇಕು. ದೇಹದ ಸಮಸ್ತ ಪ್ರದೇಶಗಳಲ್ಲಿ ಹತ್ತೊಂಭತ್ತು ಸಂಖ್ಯಾಕವಾದ ಭಗವನ್ಮೂರ್ತಿಗಳನ್ನು ಚಿಂತಿಸಬೇಕೆಂದು ಹೇಳುತ್ತಾರೆ- (ಏಕೋನವಿಂಶತಿ ಮೂರ್ತಿ ಸರ್ವತ್ರ) ಪ್ರಸಕ್ತ ೩ ನೆಯ ಈ ಪದ್ಯದಿಂದ ॥೩॥

**ಪ್ರತಿಪದಾರ್ಥ :-**

**ಜೀವ** = ಜೀವನ ಸ್ವರೂಪದೇಹದಲ್ಲಿ, **ಲಿಂಗ** = ಜೀವಗೆ ಆವರ್ಕ ರೂಪದಲ್ಲಿರುವ ಅನಾದಿ ಲಿಂಗಶರೀರದಲ್ಲಿ, **ಅನಿರುದ್ಧ** = ಲಿಂಗೋಪಾ ದಾನದಿಂದ ನಿರ್ಮಿತವಾಗಿರುವ ಅನಿರುದ್ಧ ದೇಹದಲ್ಲಿ, **ಸ್ಥೂಲ ಕಳೇ ವರಗಳೊಳು** = ಪಾಂಚ ಭೌತಿಕವಾದ ಸ್ಥೂಲಶರೀರ ಎಂಬ ಪೂರ್ವೋಕ್ತ ನಾಲ್ಕು ಶರೀರಗಳಲ್ಲಿ, **ವಿಶ್ವ** = ವಿಶ್ವರೂಪಿ ಶ್ರೀ ಪರಮಾತ್ಮನು, **ತುರಗ ಗ್ರೀವ** = ಹಯವದನ ನಾಮಕ ಶ್ರೀ ಪರಮಾತ್ಮನು (ತುರಗ = ಕುದುರೆ ಗ್ರೀವ-ಕಂಠ ಉಳ್ಳವನು ಅಂದರೆ ಹಯವದನ ದೇವರು) **ಮೂಲೇಶ** = ಮೂಲ ರೂಪಿ ಶ್ರೀಮನ್ನಾರಾಯಣ ನಾಮಕನಾದ ವಿಷ್ಣುವು (ಆದಿ ಮೂಲ ಸ್ವರೂಪಿ ಹಾಗೂ ಸರ್ವರಿಗೂ ನಿಯಮಕನಾದವನು) **ಅಚ್ಯುತತ್ರಯ** = ಅಚ್ಯುತ, ಅನಂತ ಮತ್ತು ಗೋವಿಂದ ಎಂಬ ರೂಪತ್ರಯಗಳು **ಹಂಸ ಮೂರ್ತಿಗಳ** = ಹಂಸನಾಮಕ ಶ್ರೀ ಪರಮಾತ್ಮ ಎಂಬ ಪೂರ್ವೋಕ್ತ ರೂಪ ಚತುಷ್ಟಯಗಳನ್ನು **ಈ ವಿಧ** = ಈ ರೀತಿಯಲ್ಲಿ ಹೇಳಿರುವ ಕ್ರಮದಿಂದ, **ಚತುಃ ಸ್ಥಾನದಲಿ** = ಪ್ರತಿದೇಹದ ನೇತ್ರ, ಕಂಠ, ಹೃದಯ ಮತ್ತು ಶಿರಸ್ಸು ಎಂಬ ಶರೀರಗತ ನಾಲ್ಕು ಸ್ಥಾನಗಳಲ್ಲಿ (ಅಥವಾ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲ ಎಂಬ ನಾಲ್ಕು ಶರೀರಸ್ಥಾನಗಳಲ್ಲಿ) **ಶಾಂತೀವರನ** = ಶಾಂತೀಪತಿಯಾದ ಅನಿರುದ್ಧನಾಮಕ ಶ್ರೀ ಪರಮಾತ್ಮನ **ಈರೆರಡು** = ನಾಲ್ಕು (೨X೨ = ೪) **ರೂಪದಿ** = ಭಗವದ್ರೂಪಗಳನ್ನು **ಸರ್ವತ್ರ** = ಪೂರ್ವೋಕ್ತ ಶರೀರಗತ ಎಲ್ಲಾ ಸ್ಥಾನಗಳಲ್ಲಿಯೂ **ಏಕೋನವಿಂಶತಿ ಮೂರ್ತಿ** = ಹತ್ತೊಂಬತ್ತು ಸಂಖ್ಯಾತ ವಾದ ಭಗವನ್ಮೂರ್ತಿಗಳನ್ನು (ವಿಂಶತಿ = ಇಪ್ಪತ್ತಕ್ಕೆ, ಏಕ = ಒಂದು, ಊನ = ಕಡಿಮೆ, ಅಂದರೆ, ೨೦-೧ = ೧೯ ಎಂದರ್ಥ) **ಭಾವಿಸುವುದು** =

ವಿದ್ಯಮಾನನಾಗಿದ್ದಾನೆಂದು ಚಿಂತನಾಕ್ರಮದಿಂದ ಉಪಾಸನೆ ಮಾಡಬೇಕು. ॥೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಹಿಂದಿನ ಶ್ಲೋಕದಲ್ಲಿ ಪ್ರಣವ ಪ್ರತಿಪಾದ್ಯನಾದ ಅನಿರುದ್ಧ ತ್ರಿನಾಮದಲಿ-ತನುವಿನೊಳು ತ್ರಿಸ್ಥಾನದಲ್ಲಿ ಇರತಕ್ಕವ, ಎಂತ ಹೇಳಿದರು. ಇಲ್ಲಿಗೆ ಒಂದು ದೇಹದ ವಿಚಾರವಾಯಿತು. ತದ್ವ್ಯತಿರಿಕ್ತ ದೇಹಗಳ ವಿಚಾರ ಹೇಳತಾರೆ. ಮತ್ತು ಈ ಶ್ಲೋಕದಲ್ಲಿ ಪೂರ್ವೋಕ್ತ ಸ್ಥೂಲದೇಹವನ್ನು ಆವರ್ತನ ಮಾಡಿಕೊಂಡು, ಅಂತು, ನಾಲ್ಕು ದೇಹದಲಿ ಅನಿರುದ್ಧನೇ ನಾಮಾಂತರಗಳಿಂದ ಇರುತ್ತಾನೆ ಎಂತ ಹೇಳುತಾರೆ.

ಜೀವ-ಜೀವನ ಸ್ವರೂಪದೇಹ, ಲಿಂಗ-ಜೀವಗೆ ಆವರಕವಾಗಿದ್ದ ಅನಾದಿ ಲಿಂಗಶರೀರ, ಅನಿರುದ್ಧ-ಲಿಂಗೋಪಾದಾನದಿಂದ ನಿರ್ಮಿತವಾದ ಅನಿರುದ್ಧ ಶರೀರ, ಸ್ಥೂಲಕಳೇವರಗಳಲಿ-ಅನ್ಯವಾದ ಮೂಲ ಜಡಪ್ರಕೃತಿಯಿಂದ ನಿರ್ಮಿತವಾದ, ಸ್ಥೂಲಶರೀರಗಳಲ್ಲಿ, ಈ ನಾಲ್ಕು ಶರೀರಗಳು, ವಿಶ್ವ-ವಿಶ್ವರೂಪಿ ಪರಮಾತ್ಮ ಜೀವನ ಸ್ವರೂಪ ದೇಹದಲ್ಲಿ, ತುರಗಗ್ರೀವ-ಹಯಗ್ರೀವ ರೂಪಿ ಪರಮಾತ್ಮ ಅನಾದಿ ಲಿಂಗಶರೀರದಲ್ಲಿ, ಮೂಲೇಶ-ಮೂಲೇಶನಾಮಕನು ಅನಿರುದ್ಧ ಶರೀರದಲ್ಲಿ, ಹಂಸ-ಹಂಸರೂಪಿ ಪರಮಾತ್ಮನು ಸ್ಥೂಲಶರೀರವಲ್ಲಿ, ಅಚ್ಯುತ-ಈ ನಾಲ್ಕು ಶರೀರಗಳಲ್ಲಿ ಜೀವನ ಸ್ವರೂಪದೇಹ ನಾಶರಹಿತವಾಗಿದ್ದು, ತ್ರಯ-ತದನ್ಯ ಮೂರು ಶರೀರಗಳು ನಾಶ ಐದತಕ್ಕದ್ದು, ಮೂರ್ತಿಗಳು-ಈ ವಿಶ್ವಾದಿ (ನಾಲ್ಕು ರೂಪಗಳ) ನಾಲ್ಕು ಮೂರ್ತಿಗಳ. ಈ ವಿಧ-ಈ ಉಕ್ತ ಪ್ರಕಾರ ಕ್ರಮದಿಂದ, ಚತುಃಸ್ಥಾನದಲಿ-ಜೀವಲಿಂಗಾದಿ ನಾಲ್ಕು ಸ್ಥಾನದಲ್ಲಿ, ಶಾಂತೀವರನ-ಶಾಂತೀಪತಿಯಾದ ಅನಿರುದ್ಧನ, ಈರೆರಡು ರೂಪದಿ-ನಾಲ್ಕು ರೂಪಗಳ, ಭಾವಿ

ಸುವುದು-ಪೂರ್ವೋಕ್ತ ನಾಲ್ಕು ರೂಪಗಳು ಅನಿರುದ್ಧನ ಅಂಶಗಳೆಂದು ತಿಳಿಯು ಬೇಕು (ಈ ಅನಿರುದ್ಧ ರೂಪಿಗಳಾದ), ಏಕೋನವಿಂಶತಿ ಮೂರ್ತಿ ಸರ್ವತ್ರ-ಒಂದು ಕಡಿಮೆ ಎಂದರೆ, ಹತ್ತೊಂಭತ್ತು ರೂಪಗಳಿಂದ ಪೂರ್ವೋಕ್ತ ನಾಲ್ಕು ದೇಹಗತ ಇಂದ್ರಿಯಾದಿಗಳಲ್ಲಿ ಸರ್ವ ಪ್ರಾಣಿಗಳಲ್ಲಿ ಇದ್ದಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :–**

ಪೂರ್ವೋಕ್ತ ನಾಲ್ಕು ಶರೀರಗಳಾದ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲಗಳಲ್ಲಿ, ಸ್ವರೂಪದೇಹಕ್ಕೆ ಎಂದಿಗೂ ನಾಶವಿಲ್ಲ. ಏಕೆಂದರೆ ಅಚ್ಯುತ–ನಾಶರಹಿತವಾದ ವಿಶ್ವ, ಕಡಿಮೆ ಮೂರು ಶರೀರಗಳು ಎಂಥಾ ವೆಂದರೆ, ಅಚ್ಯುತಶಬ್ದ ಆವರ್ತನಮಾಡಿಕೊಂಡರೆ, ಅಚ್ಯುತ-ನಾಶರಹಿತವಾದ ಶರೀರಗಳು ಮೂರು ಎಂತ ತಾತ್ಪರ್ಯ. ದಾವಗ್ಯೂ ನಾಶವಿಲ್ಲವಾ ಎಂದರೆ ವಿವಕ್ಷಾ ಭೇದದಿಂದ ಸ್ಥೂಲದೇಹೋಪಾದಿಯಲ್ಲಿ ನಾಶವನ್ನೈದಿ ಮತ್ತು ದೇಹಾಂತರ ಪ್ರಾಪ್ತವಾಗತಕ್ಕ ನಾಶದಿಂದ ರಹಿತವಾದದ್ದು. ಅನಿರುದ್ಧ ಲಿಂಗಶರೀರ ಎರಡೂ ಸ್ಥೂಲ ದೇಹವಿವಕ್ಷಯಾ ಎಂದಿಗೂ ನಾಶರಹಿತವಾದದ್ದು ಜೀವನ ಸ್ವರೂಪದೇಹ. ಅಂತು ಮೂರು ಶರೀರಗಳು ವಿವಕ್ಷಾ ಭೇದದಿಂದ ನಾಶರಹಿತಗಳೇವೇ. ಆದ್ದರಿಂದ ವಿಶ್ವ, ತುರುಗಗ್ರೀವ, ಮೂಲೇಶರು ಇರತಕ್ಕ ಪೂರ್ವೋಕ್ತ ಮೂರು ಶರೀರಗಳು ನಾಶರಹಿತವಾದದ್ದು ಎಂಬು ದಕ್ಕೆ ಸೂಚನೆ.

ಮೂರು ಭಗವದ್ರೂಪಗಳನ್ನು ಹೇಳಿದ ನಂತರ ಅಚ್ಯುತ ಎಂತ ಪ್ರಯೋಗ ಮಾಡಿದ್ದಾರೆ. ಅಚ್ಯುತ ಶಬ್ದ ಒಂದಾವರ್ತಿ ಆವರ್ತನ ಮಾಡಿ ಕ್ಕೊಂಡು ತ್ರಯ ದೇಹಗಳ ಪ್ರಯೋಗ ಮಾಡಿಕೋಬೇಕು. ಹಂಸಮೂರ್ತಿ ನಾಲ್ಕನೆಯದು. ಇದು ಸ್ಥೂಲದಲ್ಲಿ ಇರತಕ್ಕ ರೂಪ. ಮೂರು ದೇಹಕ್ಕೆ ನಾಶ ವಿಲ್ಲ ಎಂದ ಮ್ಯಾಲೆ ನಾಲ್ಕನೆ ದೇಹಕ್ಕೆ ಅಂದರೆ, ಸ್ಥೂಲ ದೇಹಕ್ಕೆ ನಾಶ ಎಂಬುದು ಅರ್ಥಾತ್ ಸಿದ್ಧ ಆಗತದೆ. ಅಚ್ಯುತ ಶಬ್ದ ಎರಡನೇ ಆವರ್ತಿ

ಆವರ್ತನ ಮಾಡಿಕೊಂಡು ಅಚ್ಯುತ ನಾಶರಹಿತನಾದ ಪರಮಾತ್ಮ ನಾಶರಹಿತವಾದ ಮೂರು ಶರೀರಗಳಲ್ಲಿ, ನಾಶಯುಕ್ತವಾದ ನಾಲ್ಕನೇ ಶರೀರದಲ್ಲಿ ಪೂರ್ವೋಕ್ತ ನಾಲ್ಕು ಸ್ಥಾನಗಳಲ್ಲಿ ಇದ್ದಾನೆಂದು ತಿಳಿಯಬೇಕು. ಮೂರ್ತಿಗಳ-ಈ ನಾಲ್ಕು ಮೂರ್ತಿಗಳ ಈ ವಿಧ ಎಂದರೆ, ಪೂರ್ವೋಕ್ತ ವಿಧದಿಂದ ಅಚ್ಯುತ ಸ್ಥಾನದಲ್ಲಿ ನಾಲ್ಕು ಸ್ಥಾನಗಳಲ್ಲಿ ತಿಳಿಯಬೇಕು. ಈ ನಾಲ್ಕು ರೂಪಗಳು ದಾವ ಭಗವದ್ರೂಪಗಳು ಅಂತ ಎಂದರೆ, ಶಾಂತೀಪತಿಯಾದ ಅನಿರುದ್ಧ ರೂಪಗಳು. ಪೂರ್ವೋಕ್ತ ನಾಲ್ಕು ರೂಪಗಳು ಅನಿರುದ್ಧಾಂಶಗಳೆಂದು ಅನುಸಂಧಾನ ಮಾಡು. ಈ ಅನಿರುದ್ಧನೇ ಹತ್ತೊಂಭತ್ತು ರೂಪಗಳಿಂದ ನಾಲ್ಕು ದೇಹಗಳಲ್ಲಿ ವಿದ್ಯಮಾನವಾದ ಇಂದ್ರಿಯಾದಿ ೧೯ ಸ್ಥಾನಗಳಲ್ಲಿ ಆವಾಸವಾಗಿ ಇದ್ದಾರೆ. ಇದೇ, ಪ್ರಕಾರ ಸರ್ವತ್ರ ವಿದ್ಯಮಾನವಾದ ಪ್ರಾಣಿಗಳಲ್ಲಿ ಆವಾಸನಾಗಿ ಇದ್ದಾನೆಂದು ತಿಳಿಯಬೇಕು. ೧೯ ಸ್ಥಾನ, ೧೯ ಭಗವದ್ರೂಪಗಳು ದಾವದೆಂದರೆ ;-

| | | |
|---|---|---|
| ದಶೇಂದ್ರಿಯಗಳು | = | ೧೦ |
| ತನ್ಮಾತ್ರಾ ಸಹಿತ ಪಂಚಭೂತಗಳು | = | ೫ |
| ಮನಸ್ಸು | = | ೧ |
| ಮಹತ್ತತ್ವ | = | ೧ |
| ಅಹಂಕಾರ ತತ್ತ್ವ | = | ೧ |
| ಅವ್ಯಕ್ತ ತತ್ತ್ವ | = | ೧ |
| ಅಂತು | = | ೧೯ ಇದೆ. |

| | | |
|---|---|---|
| ತ್ರಿ ಎಂದರೆ, ತ್ರಿಗುಣಾತ್ಮಕನ ಅವಸ್ಥಾತ್ರಯಗಳು | – | ೩ |
| ಪಂಚ ಎಂದರೆ ಪಂಚಭೂತಗಳು | – | ೫ |
| ಏಕವಿಂಶತಿ ಎಂದರೆ | – | ೨೧ |

| | | |
|---|---|---|
| ಅಂತೆಯೇ ದಶೇಂದ್ರಿಯಗಳು | = | ೧೦ |
| ತನ್ಮಾತ್ರಾ ಸಹಿತ ಪಂಚಭೂತಗಳು | = | ೧೦ |
| ಮನಸ್ಸು | = | ೧ |
| ಒಟ್ಟು | = | ೨೧ |

ಇದರೊಳಗೆ ಕೇಶವಾದಿ ಚತುರ್ವಿಂಶತಿ ಮೂರ್ತಿಗಳೊಳಗೆ ಹತ್ತೊಂಬತ್ತು ಮೂರ್ತಿಗಳು ಅಂತರ್ಗತವಾಗಿ ಇರೋದಾಗದೆ. ಪಂಚ ಭೂತಗಳಲ್ಲಿ ತನ್ಮಾತ್ರಾಗಳ ಸೇರಿಸಿ, ಒಂದು ಕಡೆ ತನ್ಮಾತ್ರಗಳ ಬಿಟ್ಟು ಒಂದು ಕಡೆ ಯಾಕೆ ಹೇಳಬೇಕೆಂದಲ್ಲಿ ವಿವಕ್ಷಾಭೇದವೂ ಷೋಡಷ ಕಲೆಗಳು.

ಚತುರ್ವಿಂಶತಿ ತತ್ವಕ್ಕೆ ವಿವರ :-

| | | |
|---|---|---|
| ಪೂರ್ವೋಕ್ತ | = | ೨೧ |
| ಮನಸ್ಸು | = | ೧ |
| ಅಹಂಕಾರ ತತ್ತ್ವ | = | ೧ |
| ಅವ್ಯಕ್ತ ತತ್ತ್ವ | = | ೧ |
| ಅಂತು | = | ೨೪ |

ಚತುರ್ವಿಂಶತಿ ತತ್ವಗಳು ಹೇಳೋಕಡೆ ಹ್ಯಾಂಗೆ ಸಂಭಾವನಾನೋ ತದ್ವತ್ ಇಲ್ಲೀನೂ ಸಂಭಾವನಾ ಎಂತ ತಿಳಿಯಬೇಕು. ಈ ಯಾವತ್ತರಲ್ಲಿ ಇಷ್ಟು ರೂಪದಿಂದ ಇರೋವನಾಗಿ ಇದ್ದಾನೆ. ಇದಲ್ಲದೆ ದೇಹಗತ ಎಪ್ಪತ್ತೆರಡು ಸಾವಿರ ನಾಡಿಗತನೆನಿಸಿ, ಇಷ್ಟರಲ್ಲಿ ಇದ್ದು, ನಿಯಾಮಕನಾಗಿ, ನಿರ್ಲಿಪ್ತನಾಗಿದ್ದಾನೆಂದು ತಿಳಿಯಬೇಕು. ॥೩॥

## (೨) "ಭಾವಪ್ರಕಾಶಿಕೆ" -ವ್ಯಾಖ್ಯಾನ :-

ಈ ಪದ್ಯದಿಂದ ನಾಲ್ಕು ಪ್ರಕಾರವುಳ್ಳ ದೇಹಗಳಲ್ಲಿ ಉಪಾಸನಾ ಮಾಡ

ಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ. ಜೀವನ ಸ್ವರೂಪ ದೇಹದಲ್ಲಿ ವಿಶ್ವರೂಪವನ್ನೂ, ಲಿಂಗಶರೀರದಲ್ಲಿ ಹಯಗ್ರೀವರೂಪವನ್ನೂ, ಅನಿರುದ್ಧ ಶರೀರದಲ್ಲಿ ಅನಿರುದ್ಧರೂಪವನ್ನು. ಸ್ಥೂಲದೇಹದಲ್ಲಿ ನಾರಾಯಣರೂಪ ವನ್ನೂ ಧರಿಸಿ, ಅನಿರುದ್ಧನೇ ಇರುವನು, ಅಥವಾ ಅಚ್ಯುತ, ಅನಂತ, ಗೋವಿಂದ ಮತ್ತು ಹಂಸ ಎಂಬ ನಾಲ್ಕು ರೂಪಗಳನ್ನು ಧರಿಸಿ ಮೇಲಿನ ನಾಲ್ಕು ದೇಹಗಳೊಳಗಿರುವನು. ಹೀಗೆ ಶಾಂತೀಪತಿಯಾದ ಅನಿರುದ್ಧನು ನಾಲ್ಕು ರೂಪಗಳಿಂದ ನಾಲ್ಕು ಸ್ಥಾನಗಳಲ್ಲಿರುವುದಲ್ಲದೆ ಪಂಚಭೂತ ೫ ಕರ್ಮೇಂದ್ರಿಯ ೫, ಜ್ಞಾನೇಂದ್ರಿಯ ೫, ಹೀಗೆ ೧೯ ತತ್ತ್ವಗಳಲ್ಲಿ ಅನಿರುದ್ಧಾದಿ ೫x೩=೧೫ ರೂಪಗಳಿಂದಲೂ, ಅಚ್ಯುತಾನಂತ ಗೋವಿಂದ ಗಳೆಂಬ ೩ ರೂಪಗಳನ್ನೂ ಹಂಸ ೧, ಇಂತಹ ೧೯ ರೂಪಗಳಿಂದ ದೇಹ ಚತುಷ್ಟಯಗಳಲ್ಲಿ ವಾಸಮಾಡುವನೆಂದು ಭಾವಿಸಬೇಕು. ॥೩॥

## (೩) "ಭಾವದರ್ಪಣ ಟೀಕಾ"– ವ್ಯಾಖ್ಯಾನ :–

ಈಗ ಜೀವನಸ್ವರೂಪ ಮೊದಲಾದ ತನುಚತುಷ್ಟಯಗಳಲ್ಲಿ ವಿಶ್ವಾದ್ಯಷ್ಟ ರೂಪ, ಹಯಗ್ರೀವ ೧, ಮೂಲೇಶ ಪ್ರಾದೇಶ ಅಗ್ರೇಶ ೩, ಅಚ್ಯುತಾನಂತ ಗೋವಿಂದ ೩ ಅನಿರುದ್ಧಾದಿ ವಾಸುದೇವಾನಂತ ೪, ಅಹತ್ಯ ೧೯ ಈ ರೂಪಗಳು ಹಂಸ ರೂಪಗಳು. ಎಂದರೆ, ನಿರ್ದೋಷಿಗಳು ಎಂತ ಹೇಳುತಾರೆ– "ಜೀವೇತಿ"

**"ನಿತ್ಯಂ ಹೀನೋಽಖಿಲೈ ದೋಷೈಃ ಸಾರರೂಪೋ ಯತೋ ಹರಿಃ । ಹಂಸ ಇತ್ಯುಚ್ಯತೆ ॥"**

**-ಇತಿ ಕಾಠಕಭಾಷ್ಯೋಕ್ತೇಃ ॥**

ಸರ್ವ ಜೀವರಲ್ಲಿ ಏವಂ ರೀತ್ಯಾ ಚಿಂತಿಸಬೇಕೆಂದು ತಾತ್ಪರ್ಯ. ॥ ೩ ॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):–

"ಜೀವ" ಇತಿ॥ ಅಚ್ಯುತತ್ರಯ ಅನಂತ ಗೋವಿಂದಾಭ್ಯಾಮ್॥ ಅನಿರುದ್ಧಃ ಏಕಃ ॥ ತಸ್ಮೈವ ಹಂಸಾದ್ಯಷ್ಟಾದಶಃ ಏವಮೇಕೋನ ವಿಂಶತಿಃ॥ ಸರ್ವತ್ರ ದೇಹಚತುಷ್ಟಯೇ। ಅಷ್ಟಾಂಶ ಶಬ್ದಾನ್ ಸ್ವಯಮೇವ ನಿರ್ವಕ್ತಿ ಉತ್ತರನ್ರ॥೩॥

**ಕನ್ನಡಾರ್ಥ :–**

ಜೀವನ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲದೇಹಗಳಲ್ಲಿ ಭಗವಂತನನ್ನು ಉಪಾಸಿಸಬೇಕು. ಅಚ್ಯುತತ್ರಯ ಅಂದರೆ, ಅಚ್ಯುತ, ಅನಂತ, ಗೋವಿಂದ ಈ ಮೂವರು, ಅನಿರುದ್ಧನೊಬ್ಬನು, ಹೀಗೆ ತಿಳಿಯ ಬೇಕು. ಈ ನಾಲ್ಕು ದೇಹ, ಕರ್ಮ, ಜ್ಞಾನೇಂದ್ರಿಯೇಗಳು ಮಾತ್ರ ಮನೋ ಬುದ್ಧಿ, ಅಹಂಕಾರ, ಚಿತ್ತಗಳಲ್ಲಿ ೧೯ ರೂಪಗಳನ್ನು ತಿಳಿಯ ಹೇಕು. ೧೮ರೂಪಗಳನ್ನು ಮುಂದೆ ತಾವೇ ವಿವರಿಸುತ್ತಾರೆ,

## (೫) "ಗುರುಹೃದಯ ಪ್ರಕಾಶಿಕೆ" -ವ್ಯಾಖ್ಯಾನ:-

ದೇಹಚತುಷ್ಟಯಗತ ರೂಪೋಪಾಸನೆ ತಿಳಿಸುತ್ತಾರೆ. ಜೀವ ಸ್ವರೂಪದೇಹದಲ್ಲಿ ಮೂಲೇಶನೆಂಬ ನಾರಾಯಣರೂಪ. ಲಿಂಗಶರೀರದಲ್ಲಿ ಹಯಗ್ರೀವರೂಪ, ಅನಿರುದ್ಧದೇಹದಲ್ಲಿ ಅನಿರುದ್ಧನಾಮಕರೂಪ ಮತ್ತು ಸ್ಥೂಲದೇಹದಲ್ಲಿ ವಿಶ್ವನಾಮಕಮೂರ್ತಿ. ಅಥವಾ ಜೀವಸ್ವರೂಪದೇಹದಲ್ಲಿ ಹಂಸನಾಮಕರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲದೇಹಗಳಲ್ಲಿ ಅಚ್ಯುತ ಅನಂತ ಮತ್ತು ಗೋವಿಂದ ರೂಪಗಳು. ಈ ರೀತಿ ಶಾಂತೀಪತಿ ಅನಿರುದ್ಧನನ್ನೇ ಈ ನಾಲ್ಕು ಶರೀರಗಳಲ್ಲಿಯೂ ಭಾವಿಸುವುದು. ಜ್ಞಾನ ಕರ್ಮೇಂದ್ರಿಯ ಗಳು ೧೦, ಪಂಚತನ್ಮಾತ್ರಗಳು ೫ ಮನಸ್ಸು-ಬುದ್ಧಿ ಚಿತ್ತ ಮತ್ತು ಅಹಂಕಾರ ಇವು ೪ ಸಹ ಸೇರಿ, ೧೯ರಲ್ಲಿ, ೧೯ ಭಗದ್ರೂಪಗಳನ್ನು ಸರ್ವತ್ರ ಭಾವಿಸುವುದೆಂದರ್ಥ.

**ಇದಕ್ಕೆ ಪ್ರಮಾಣ :-**

**"ತ್ರಿವಿಧೋಹ್ಯನಿರುದ್ಧೋಽಸೌ ಅಧ್ಯಾತ್ಮಾದಿ ಪ್ರಭೇದತಃ ।**
**ಆಸ್ತೆತ್ರಿವೃದಿ ಪ್ರೋಕ್ತಃ ॥**

**-ಎಂಬ ಛಾಂಧೋಗ್ಯ ಭಾಷ್ಯಾರ್ಥವು ವಿವರಿಸಲ್ಪಟ್ಟಿತು. ॥೩॥**

## ಸರ್ವವ್ಯಾಖ್ಯಾನಸಾರಸಂಗ್ರಹ

(೧) ಜೀವನಸ್ವಸೂಪ ದೇಹ, ಲಿಂಗಶರೀರ, ಅನಿರುದ್ಧ ಶರೀರ ಮತ್ತು ಸ್ಥೂಲ ಶರೀರಗಳೆಂಬ ತನುಚತುಷ್ಟಯಗತ ಭಗವದ್ರೂಪೋಸನಾ ಕ್ರಮವನ್ನು ತಿಳಿಸುತ್ತಾರೆ-ಪ್ರಸಕ್ತ ಸಂಧಿಗತ ಈ ೩ನೆಯ ಪದ್ಯದಿಂದ.

ದೇಹಗಳು ನಾಲ್ಕು ಪ್ರಕಾರ :- (೧) ಜೀವನ ಸ್ವರೂಪಶರೀರ ಇದು ನಾಶರಹಿತವಾದದ್ದು. ಅನಾದಿನಿತ್ಯ. ಚಿದಾನಂದಾತ್ಮಕವಾದ ಪರಮಾಣು ಶರೀರವು. (೨) ಲಿಂಗ ಶರೀರ ಇದು ಜೀವನ ಸ್ವರೂಪದೇಹಕ್ಕೆ ಆವರಣ ರೂಪದಲ್ಲಿರುವುದು. ತ್ರಿಗುಣಾತ್ಮಕವಾಗಿ ಷೋಡಶ ಕಲೆಗಳಿಂದ ಯುಕ್ತವಾದದ್ದು. ಅನಾದಿ ಕರ್ಮ ಬೀಜದ ಮೂಲಸ್ಥಾನವು (೨) ಅನಿರುದ್ಧ ಶರೀರ ಅನಾದಿ ಲಿಂಗದೇಹೋಪಾದಾನದಿಂದ ನಿರ್ಮಿತವಾದ ಶರೀರವು. ಜೀವನ ಜನ್ಮಾಂತರಗಳ ಪ್ರಾಪ್ತಿಗೆ ಅಂಕುರಭೂತವು, (೩) ಸ್ಥೂಲಶರೀರ ಇದು ಚತುರ್ವಿಂಶತಿ ತತ್ತ್ವಗಳಿಂದ ಯುಕ್ತವಾಗಿದ್ದು. ಪಾಂಚಭೌತಿಕ ಶರೀರವೆಂದೆನಿಸಿದೆ. ಮರಣಾವಸ್ಥೆಯಿಂದ ಸ್ಥೂಲರರೀರದ ನಾಶವು.

(೨) ಪೂರ್ವೋಕ್ತ ತನುಚತುಷ್ಟಯುಗಳಲ್ಲಿ ಭಗವದ್ರೂಪೋಪಾಸನಾ ಕ್ರಮ ಇಂತಿದೆ :-

(೧) ಜೀವನ ಸ್ವರೂಪಶರೀರದಲ್ಲಿ **ವಿಶ್ವ** ನಾಮಕ ಪರಮಾತ್ಮ.

(೨) ಅನಾದಿ ಲಿಂಗ ಶರೀರದಲ್ಲಿ **ಹಯಗ್ರೀವ** ರೂಪಿ ಪರಮಾತ್ಮ.

(೩) ಅನಿರುದ್ಧ ದೇಹದಲ್ಲಿ **ಮೂಲೇಶ** ನಾಮಕನಾದ ಶ್ರೀಮನ್ನಾರಾಯಣನು.

(೪) ಸ್ಥೂಲ ಶರೀರದಲ್ಲಿ **ಹಂಸ**ನಾಮಕ ಪರಮಾತ್ಮ.

ಶಾಂತೀಪತಿಯಾದ **ಅನಿರುದ್ಧ**ರೂಪಿ ಶ್ರೀ ಪರಮಾತ್ಮನೇ ಪೂರ್ವೋಕ್ತ ತನುಚತುಷ್ಟಯಗಳಲ್ಲಿ ವಿಶ್ವ, ಹಯಗ್ರೀವ, ಮೂಲೇಶ ಮತ್ತು ಹಂಸ ನಾಮಕನಾಗಿದ್ದಾನೆ.

(೩) **ಅನಿರುದ್ಧ** ನಾಮಕ ಪರಮಾತ್ಮನೇ ಅಚ್ಯುತ, ಅನಂತ, ಗೋವಿಂದ ಮತ್ತು ಹಂಸ ಎಂಬ ನಾಲ್ಕು ರೂಪಗಳಿಂದ ವಿದ್ಯಮಾನನಾಗಿದ್ದಾನೆ ಎಂತಲೂ ತಿಳಿಸುತ್ತಾರೆ. ಭಗವಂತನು ಸ್ವಗತಭೇದವಿವರ್ಜಿತನು. ಅಂದರೆ. ಅವನ ಅನಂತಾನಂತ ರೂಪಗಳಿಗೂ, ಗುಣಗಳಿಗೂ, ಕ್ರಿಯೆಗಳಿಗೂ, ಅವತಾರಗಳಿಗೂ ಯಾವ ಭೇದವೂ ಇಲ್ಲ. ಶಾಂತೀವರನಾದ ಅನಿರುದ್ಧನೇ ಪೂರ್ವೋಕ್ತ ರೂಪಗಳನ್ನು ಧರಿಸಿ. ದೇಹಚತುಷ್ಟಯಗಳಲ್ಲಿ ಇರುವನೆಂದು ಉಪಾಸಿಸಬೇಕು. ಆಯಾಯಾ ಅಧಿಕಾರಿಗಳಿಗೆ ಯುಕ್ತವಾಗಿ ಭಗವದ್ರೂಪೋಪಾಸನಾ ಕ್ರಮವಿದು.

(೪) ಇಂತು, ನಾಲ್ಕು ರೂಪಗಳಿಂದ ಚತುಃಸ್ಥಾನದಲ್ಲಿ ಅಂದರೆ. ಶರೀರ ಚತುಷ್ಟಯಗಳಲ್ಲಿ ಶಾಂತೀಪತಿಯಾದ ಅನಿರುದ್ಧನೇ ಇರುವನೆಂದು ತಿಳಿಸಿ, ಅವನ ೧೯ ರೂಪಗಳ ವಿವರಣೆಯನ್ನು ಮುಂದೆ ತಿಳಿಸುತ್ತಾರೆ.

ಈ ವಿಷಯವನ್ನು ಬೇರೆ ಬೇರೆ ವ್ಯಾಖ್ಯಾನಕಾರರು ತಮ್ಮ ಜ್ಞಾನಾನುಸಂಧಾನ ಪ್ರಕಾರ ವಿವರಿಸಿರುತ್ತಾರೆ. ಆ ವರ್ಗನಿರೂಪಣೆ ಇಂತಿದೆ :—

| | | | |
|---|---|---|---|
| (1) | ದಶೇಂದ್ರಿಯಗಳು | = | ೧೦ |
| (2) | ತನ್ಮಾತ್ರಾ ಸಹಿತ ಭೂತಪಂಚಕಗಳು | = | ೫ |
| (೩) | ಮನಸ್ಸು | = | ೧ |
| (೪) | ಮಹತ್ತತ್ವ | = | ೧ |
| (೫) | ಅಹಂಕಾರತತ್ವ | = | ೧ |
| (೬) | ಅವ್ಯಕ್ತ ತತ್ವ | = | ೧ |
| | ಒಟ್ಟು | = | ೧೯ ರೂಪಗಳು. |

ಇದು **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ** ಪ್ರಕಾರ ವಿವರಣೆ.

| | | | |
|---|---|---|---|
| ಪುನಃ | ತನುಚತುಷ್ಟಯಗಳು | = | ೪ |
| | ಪಂಚಭೂತ | = | ೫ |
| | ಪಂಚ ಜ್ಞಾನೇಂದ್ರಿಯಗಳು | = | ೫ |
| | ಪಂಚ ಕರ್ಮೇಂದ್ರಿಯಗಳು | = | ೫ |
| | ಅಂತು | = | ೧೯ ರೂಪಗಳು. |

ಇದು **ಭಾವಪ್ರಕಾಶಿಕಾಕಾರರ** ವಿವರಣೆ.

| | | |
|---|---|---|
| ಅಲ್ಲದೆ ವಿಶ್ವಾದಿ ಅಷ್ಟ ರೂಪಗಳು | = | ೮ |
| ಹಯಗ್ರೀವರೂಪ | = | ೧ |
| ಮೂಲೇಶ, ಪ್ರಾದೇಶ- ಆಗ್ರೇಶ | = | ೩ |
| ಅಚ್ಯುತಾನಂತ ಗೋವಿಂದ | = | ೩ |
| ಅನಿರುದ್ಧಾದಿ ವಾಸುದೇವ | = | ೪ |
| ಅಂತು | = | ೧೯ |

**(ಭಾವದರ್ಪಣ ಟೀಕಾ)**

| | | |
|---|---|---|
| ಅಲ್ಲದೆ ದಶೇಂದ್ರಿಯಗಳು | = | ೧೦ |
| ಪಂಚಭೂತಗಳು | = | ೫ |
| ಮನಸ್ಸು, ಚಿತ್ತ. ಬುದ್ಧಿ ಮತ್ತು ಅಹಂಕಾರ | = | ೪ |
| ಒಟ್ಟು | = | ೧೯ ರೂಪಗಳು. |

ತನುಚತುಷ್ಟಯಗಳಲ್ಲಿಯೂ ಇಂದ್ರಿಯಗಳಿರುವುದರಿಂದ, ಇಂದ್ರಿಯ ಗತ ಭಗವದ್ರೂಪಗಳನ್ನು ಉಪಾಸಿಸಬೇಕು.

ಕೇವಲ ಭಗವದ್ರೂಪಗಳ ಚಿಂತನಾಕ್ರಮವನ್ನು ಪರಿಗಣಿಸಿದರೆ, **ಭಾವದರ್ಪಣಟೀಕಾಪ್ರಕಾರ** ಉಪಾಸನಾಕ್ರಮವನ್ನು ತಿಳಿಯಬಹುದು.

ಸಮಸ್ತ ವಿಷಯಗಳಲ್ಲಿಯೂ ತತ್ತ್ವ ಸಮನ್ವಯ ಕ್ರಮವೇ ಮುಖ್ಯ ವಾದುದು. ಪೂರ್ವೋಕ್ತ ೧೯ ರೂಪಗಳನ್ನು **"ಏಕೋನವಿಂಶತಿಮೂರ್ತಿ"** ಎಂದು ಹೇಳಿದ್ದಾರೆ ದಾಸರಾಯರು. ಅಂದರೆ, ವಿಂಶತಿ ಎಂದರೆ ೨೦ ಏಕ ಊನ. ಎಂದರೆ, ೨೦ಕ್ಕೆ ೧ ಕಡಿಮೆ ಎಂದರ್ಥ. ಅಲ್ಲಿಗೆ ೧೯ ಭಗವದ್ರೂಪಗಳಾಯಿತು.

**"ಸರ್ವತ್ರ"** –ಎಂಬ ಪದಪ್ರಯೋಗದಿಂದ. ಎಲ್ಲಾ ನಾಲ್ಕು ದೇಹ ಗಳಿಲ್ಲಿ ಎಂದರ್ಥ. ಸ್ಥೂಲ ದೇಹದಲ್ಲಿ ಶಿರಾದಿ ಅಂಗುಷ್ಠ ಪರ್ಯಂತ ಸರ್ವ ಸ್ಥಾನಗಳಲ್ಲಿ ಎಂತಲೂ ತಿಳಿಯಬಹುದು. ॥೩॥

# ಪದ್ಯ (೪)

**ಮೂಲ :–**

**ಕಲುಷವಿಲ್ಲದ ದರ್ಪಣದಿ ಪ್ರತಿ।**
**ಫಲಿಸಿ ಸರ್ವ ಪದಾರ್ಥಗಳು ಕಂ।**
**ಗೊಳಿಸುವಂದದಿ ಬಿಂಬ ಜಡ ಚೇತನಗಳೊಳಗಿಪ್ಪ॥**
**ಪೊಳೆವ ಬಹುರೂಪದಲಿ ಸಜ್ಜನ।**
**ರೊಳಗೆ ಮನದರ್ಪಣದಿ ತಾನಿ।**
**ಶ್ಚಲ ನಿರಾಮಯ ನಿರ್ವಿಕಾರ ನಿರಾಶ್ರಯಾನಂತ॥ ॥೪॥**

**ಅವತರಣಿಕೆ :-**

ಸಕಲ ಜಡ ವಸ್ತುಗಳಲ್ಲಿ ಮತ್ತು ಸಮಸ್ತ ಚೇತನರಲ್ಲಿ ಬಿಂಬ ರೂಪ ನಾದ ಶ್ರೀ ಪರಮಾತ್ಮನ ವ್ಯಾಪ್ತಿಯನ್ನು ಕನ್ನಡಿಯ ದೃಷ್ಟಾಂತದಿಂದ ವಿವರಿಸು ತ್ತಾರೆ. ಪ್ರಸಕ್ತ ಸಂಧಿಗತ "**ಕಲುಷವಿಲ್ಲದ**" ಎಂಬ ೪ ನೆಯ ಪದ್ಯದಿಂದ.

ಸ್ವಚ್ಛವಾದ ಕನ್ನಡಿಯಲ್ಲಿ ಸಮಸ್ತ ಪದಾರ್ಥಗಳು ಪ್ರತಿಫಲಿಸಿ ಚೆನ್ನಾಗಿ ಗೋಚರವಾಗುವುವು. ಈ ದೃಷ್ಟಾಂತದಲ್ಲಿ ಕನ್ನಡಿಯು ಉಪಾಧಿ, ಪದಾರ್ಥಗಳು ಬಿಂಬ ಸದೃಶ, ಪ್ರತಿಫಲನದಿಂದ ಉತ್ಪತ್ತಿಯಾಗುವುದೇ ಆ ಪದಾರ್ಥಗಳ ಪ್ರತಿಬಿಂಬಗಳು. ಅಂತೆಯೇ ಬಿಂಬರೂಪಿ ಶ್ರೀ ಪರ ಮಾತ್ಮನು ಸಮಸ್ತ ಜಡವಸ್ತುಗಳಲ್ಲಿಯೂ ಮತ್ತು ಸರ್ವ ಚೇತನರಲ್ಲಿಯೂ ಇಂಬುಗೊಂಡಿಹನು. ಇದರಿಂದ ಜಡಗಳು ಪರಮಾತ್ಮನ ಪ್ರತೀಕಗಳು. ಚೇತನರು ಪ್ರತಿಬಿಂಬರು, ಪ್ರತಿಬಿಂಬವು ಯಾವಾಗಲೂ ಬಿಂಬಾಧೀನ ವಾದದ್ದು, ಅಂತೆಯೇ ಬಿಂಬನು ಸರ್ವತಂತ್ರ ಸ್ವತಂತ್ರನು. ಪ್ರತಿಬಿಂಬ ಭೂತರಾದ ಜೀವರು ಪರಾಧೀನ ಕರ್ತೃತ್ವ ಭಾವದಿಂದ ಬಿಂಬನ ಅಧೀನರಾಗಿ

ದ್ದಾರೆ. ಬಿಂಬನಾದ ಶ್ರೀ ಪರಮಾತ್ಮನು ಮುಕ್ತಿಯೋಗ್ಯರಾದ ಸಾತ್ವಿಕ ಚೇತನರ ಮನಸ್ಸೆಂಬ ಕನ್ನಡಿಯಲ್ಲಿ ಬಹು ಪ್ರಕಾರವಾಗಿ ಕಂಗೊಳಿಸುವನು. ಸರ್ವರ ಬಿಂಬನಾದ ಶ್ರೀ ಪರಮಾತ್ಮನು ಶಶ್ವದೇಕಪ್ರಕಾರವಾಗಿ ನಿಶ್ಚಲ ನಾಗಿದ್ದಾನೆ. ಸಮಸ್ತ ರೋಗಾದ್ಯುಪದ್ರವಗಳಿಂದ ದೂರನಾದುದರಿಂದ ನಿರಾಮಯನು. ಜಡ ಮತ್ತು ಚೇತನರಲ್ಲಿ ಅಂತರ್ಗತನಾಗಿದ್ದಾಗ್ಯೂ, ತತ್ಸಂಬಂಧವಾದ ಗುಣ ದೋಷಗಳಿಂದ ನಿರ್ಲಿಪ್ತನು. ಇದರಿಂದ ನಿರ್ವಿಕಾರನು. ಯಾರ ಆಶ್ರಯವೂ ಶ್ರೀ ಪರಮಾತ್ಮನಿಗೆ ಬೇಕಿಲ್ಲ. ಆದರೆ ಸರ್ವ ಜಗತ್ತಿಗೂ ಅವನೇ ಮುಖ್ಯಾಧಾರನು. ಜನನಮರಣಾದಿಗಳಿಂದ ರಹಿತ ನಾದುದರಿಂದ, ಅನಾದಿನಿತ್ಯನು ಮತ್ತು ಅನಂತನು. ॥೪॥

**ಪ್ರತಿಪದಾರ್ಥ :-**

**ಕಲುಷವಿಲ್ಲದ** = ನಿರ್ಮಲವಾದ (ಸ್ವಚ್ಛವಾದ) **ದರ್ಪಣದಿ** = ಕನ್ನಡಿಯಲ್ಲಿ **ಪ್ರತಿಫಲಿಸಿ** = ಪ್ರತಿಫಲನವನ್ನು ಹೊಂದಿ **ಸರ್ವ ಪದಾರ್ಥಗಳು** = ಸಮಸ್ತ ವಸ್ತುಗಳು **ಕಂಗೊಳಿಸುವಂದದಿ** = ಕಣ್ಣಿಗೆ ಗೋಚರ ವಾಗುವಂತೆ **ಬಿಂಬ** = ಬಿಂಬರೂಪಿಯಾದ ಪರಮಾತ್ಮನು **ಜಡ** = ಜಡ ವಸ್ತುಗಳಲ್ಲಿ **ಚೇತನರೊಳಗೆ** = ಜೀವರಾಶಿಗಳಲ್ಲಿ **ಇದ್ದು** = ವಿದ್ಯಮಾನ ನಾಗಿದ್ದವನಾಗಿ **ಸಜ್ಜನರೊಳಗೆ** = ಮುಕ್ತಿಯೋಗ್ಯರಾದ ಸಾತ್ವಿಕ ಜೀವರಲ್ಲಿ **ಮನದರ್ಪಣದಿ** = ಮನಸ್ಸೆಂಬ ಕನ್ನಡಿಯಲ್ಲಿ **ಬಹುರೂಪದಲಿ** = ಅನೇಕ ರೂಪಗಳಿಂದ **ಪೊಳೆವ** = ಪ್ರಕಾಶಿಸುತ್ತಾನೆ. **ತಾ** = ತಾನಾದರೋ **ನಿಶ್ಚಲ** = ಶಶ್ವದೇಕ ಪ್ರಕಾರನಾಗಿ ನಿತ್ಯನು. **ನಿರಾಮಯ** = ರೋಗಾದ್ಯುಪದ್ರವಗಳಿಂದ ರಹಿತನು (ಪೂರ್ಣಾನಂದ ಜ್ಞಾನಮಯನು) **ನಿರ್ವಿಕಾರ** = ವಿಕಾರಶೂನ್ಯನು **ನಿರಾಶ್ರಯ** = ಯಾರ ಆಶ್ರಯವನ್ನು ಅಪೇಕ್ಷಿಸದ ಸರ್ವತಂತ್ರ ಸ್ವತಂತ್ರನು. **ಅನಂತ** = ಅನಂತಾನಂತ ರೂಪ ಗುಣ ಕ್ರಿಯಾದಿ ವಿಶಿಷ್ಟನು. ॥೪॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪೂರ್ವೋಕ್ತ ಪ್ರಕಾರ ಅನುಸಂಧಾನ ಮಾಡುವವರ ಮನಸ್ಸಿಗೆ ಹೊಳೆಯುತ್ತಾನೆ ಎಂತ ಹೇಳತಾರೆ.

ದರ್ಪಣದಿ–ಪಾದರಸದಿಂದ ಸಹಿತವಾದ ಕನ್ನಡಿಯಲ್ಲಿ, ಪ್ರತಿಫಲಿಸಿ-ಸರ್ವಪದಾರ್ಥಗಳು ಪ್ರತಿಫಲಿಸತದೆ. ರಸವಿಲ್ಲದ ಕನ್ನಡಿಯಲ್ಲಿ ಪ್ರತಿಫಲಿಸೋದಿಲ್ಲ. ತದ್ವತು, ಸರ್ವ ಪದಾರ್ಥಗಳು-ರಸಯುಕ್ತವಾದ ಕನ್ನಡಿಯಲ್ಲಿ ಪ್ರತಿಫಲಿಸಿದ ಸಮಸ್ತ ಪದಾರ್ಥಗಳು, ಕಂಗೊಳಿಸುವಂದದಲಿ–ಕಣ್ಣಿಂದ ನೋಡಿದೋಪಾದಿಯಲಿ, ಕಲುಷವಿಲ್ಲದ–ಕಾಮ ಕ್ರೋಧಾದಿ ಕಲುಷವಿಲ್ಲದ ಸಜ್ಜನರೊಳಗೆ-ಜ್ಞಾನಿಗಳಲ್ಲಿ ವಿದ್ಯಮಾನ್ಯವಾದ, ಮನ ದರ್ಪಣದಿ-ಪಾದರಸ ಸದೃಶವಾದ ಜ್ಞಾನ, ಭಕುತಿ, ವೈರಾಗ್ಯಗಳು ಮನವೆಂಬ ದರ್ಪಣದಲ್ಲಿ ಲೇಪವಾಗಿ ಇರತದೆ. ಇಂಥಾ ಮನ ದರ್ಪಣದಲ್ಲಿ ಬಿಂಬರೂಪಿ ಪರಮಾತ್ಮ ತನ್ನ ದೇಹದಲ್ಲೇನು, ಅನ್ಯವಾದ, ಜಡಚೇತನರೊಳಗಿದ್ದು-ಜಡಜೀವರು, ಜಡಗಳು, ಚೇತನ ಜೀವರು ಇವರೋಳಗಿದ್ದು, ಬಹು ರೂಪದಲಿ ಅನೇಕ ರೂಪದಲಿ, ಪೊಳೆವ-ಹೊಳೆಯುವವನಾಗುತಾನೆ. ಆದ್ದರಿಂದ, ಅನಂತ-ಅಂತರಹಿತನಾದ ಮಹಿಮೋಪೇತನಾದ ಪರಮಾತ್ಮನ, ತಾ-ಅಧಿಕಾರಿಯಾದ ತಾನು, ನಿಶ್ಚಲ-ಅಚಂಚಲ ಭಕುತಿಯಿಂದ, ನಿರಾಮಯ-ಅಹಂ ಮಮತಾದಿ ರಹಿತನಾಗಿ, ನಿರ್ವಿಕಾರ-ವಿಷಯಾದಿಗಳಿಂದ ವಿಕಾರ ರಹಿತನಾಗಿ ನಿರಾಶ್ರಯ-ಜಹ್ವಾ, ಗುಹ್ಯಾದಿಗಳಿಗೆ ಅಧೀನನಾಗದೆ ಶ್ರೀ ಪರಮಾತ್ಮನ ಧ್ಯಾನಮಾಡ ತಕ್ಕವರಿಗೆ ಮನದರ್ಪಣದಿ ಹೊಳೆಯುಥಾನೆ.

ಜಡಚೇತನರೊಳಗಿದ್ದು ಬಹುರೂಪದಲಿ ಪೊಳೆವ ಎಂಬುದು ಅಧಿಕಾರಿಗಳ ಯೋಗ್ಯತಾಭೇದದಿಂದ ಹೊಳೆಯುತಾನೆ ಹೊರತು ಸರ್ವರಿಗೆ ಏಕ

ಪ್ರಕಾರವಿಲ್ಲ. ಪ್ರತೀಕಾಲಂಬನರಿಗೆ ಅವರವರ ದೇಹದಲ್ಲಿ ಮಾತ್ರ ಹೊಳೆಯುು ತಾನೆ. ಅಪ್ರತೀಕಾಲಂಬನರಿಗೆ ತಮ್ಮ ದೇಹವಲ್ಲಿ ಅನ್ಯತ್ರ ಕೂಡಾ ಹೊಳೆಯುುವವನಾಗತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :-**

ಕಲುಷವಿಲ್ಲದ ದರ್ಪಣ ಎಂದರೆ, ಕಲುಷ ಎಂದರೆ ಪಾದರಸವೆಂಬ ಕಲುಷಯುಕ್ತವಾದ ದರ್ಪಣ ಒಂದು. ಪ್ರತಿಫಲಿಸಿ ಎಂಬೋಣದರಿಂದ, ಪಾದರಸಯುಕ್ತವಾದ ದರ್ಪಣ ಒಂದರಲ್ಲೇ ಪ್ರತಿಫಲನ ಉಂಟಾಗತದೆ. ಆದ್ದರಿಂದ ಕಲುಷವೆಂಬ ಪಾದರಸದಿಂದ ಸಹಿತವಾದ ಕನ್ನಡಿ ಒಂದು. ಅಂತೂ ಈ ಎರಡರಲ್ಲಿ ಏನು ವಿಶೇಷ ಎಂದರೆ, ಕಲುಷ ಇಲ್ಲದೇ, ಅಂದರೆ, ಪಾದರಸ ವಿಲ್ಲದೇ ಇರತಕ್ಕ ದರ್ಪಣದ ಅಡಿಭಾಗದಲ್ಲಿರಕ್ಕ ಯಾವತ್ತು ಪದಾರ್ಥಗಳು ಕಾಣತದೆ. ಭಕ್ತಿಯೋಪಾದಿಯಲ್ಲಿ ದರ್ಪಣ ಅಡ್ಡವಿದ್ದ ಕಾಲಕ್ಕೂ ಪ್ರತಿ ಬಂಧಕ ಬಾಧಕವಾಗದೆ ಎಲ್ಲಾನೂ ಕಣ್ಣಿಗೆ ತೋರಾದಾಗತದೆ. ಕಲುಷ ಎಂಬ ರಸಯುಕ್ತವಾದ ಕನ್ನಡಿಯಲ್ಲಿ ಎದುರಿಸಿ ಇರತಕ್ಕ, ಅಂದರೆ, ಕನ್ನಡಿಗೆ ಹಿಂದುಗಡೆ ಇರುವ ಪದಾರ್ಥಗಳು ಕಾಣದೆ, ನಮಗೆ ಹಿಂಭಾಗದಲ್ಲಿರತಕ್ಕ ಪದಾರ್ಥವು ನೋಡೋಂಥಾ ದರ್ಪಣದಲ್ಲಿ ಪ್ರತಿಫಲಿಸಿನೋಡಾಗತದೆ. ಇದು ಉಭಯ ದರ್ಪಣಗಳಲ್ಲಿ ಕಾಣತಕ್ಕ ಕ್ರಮ. ಸರ್ವ ಪದಾರ್ಥಗಳೂ ಕಣ್ಣಿಗೆ ನೋಡೋದಂದದಿ ಬಿಂಬರೂಪಿಯಾದ ಪರಮಾತ್ಮ ಜಡ ಜೀವರು. ಚೇತನಜೀವರು (ಜಡಶಬ್ದದಿಂದ ಚೇತನ ರಹಿತವಾದ ಯಾವತ್ತೂ ಶುದ್ಧ ಜಡಗಳೂನೂ ಗ್ರಾಹ್ಯವೇ). ಈ ಎರಡು ಅಧಿಷ್ಠಾನಗಳು ಎರಡು ಪ್ರಕಾರ. ಸಾಂಶರು, ನಿರಂಶರು ಎಂತ ಎರಡು ಪ್ರಕಾರ ಜೀವಾಧಿಷ್ಠಾನಗಳು. ಇವ ರಿಗೆ ಪರಮಾತ್ಮ ಹೊಳೆಯತಕ್ಕ ಕ್ರಮ ಹ್ಯಾಗೆಂದರೆ :-

**ಸಾಂಶರ ವಿಚಾರ :-**

ಈ ಸಾಂಶರಿಗೆ ಕಲುಷ ಅಥವಾ ರಸವಿಲ್ಲದ ಕನ್ನಡಿಯಲ್ಲಿ ಪದಾರ್ಥಗಳು ಕಾಂಬೋಪಾದಿಯಲ್ಲೇನು, ಕಲುಷ ಅಥವಾ ರಸಯುಕ್ತವಾದ ದರ್ಪಣದಲ್ಲಿ

ಪದಾರ್ಥಗಳು ಕಾಂಬೋಪಾದಿಯಲ್ಲೇನು, ಉಭಯ ವಿಧದಿಂದ ಭಗವದ್ರೂಪಗಳು ಹೊಳೆಯೋದಾಗತದೆ. ನಿರಂಶಜೀವರಿಗೆ ಹ್ಯಾಂಗೆಂದರೆ• ಕಲುಷ ಅಥವಾ ರಸಯುಕ್ತವಾದ ಕನ್ನಡಿಯಲ್ಲಿ ಪದಾರ್ಥಗಳು ಕಾಣುವ ಹಾಂಗೆ ತಿಳಿಯುತಾನೆ. ತಾತ್ಪರ್ಯವೇನೆಂದರೆ, ಸಾಂಶರಿಗೆ ತಮ್ಮ ದೇಹ ಸ್ವರೂಪಗಳೇನು, ಅನಗತ್ಯ ರೂಪಗಳೇನು ಉಭಯವೂ ಹೊಳೆಯೋದಾಗತದೆ. ಯೋಗ್ಯತಾನುಸಾರ ನಿರಂಶಜೀವರಿಗೆ ತಮ್ಮ ದೇಹಸ್ವರೂಪಗಳು ಮಾತ್ರ ಹೊಳೆಯೋದಾಗತದೆ. ಅನ್ಯಗತ ರೂಪಗಳು ಹೊಳೆಯೋದಿಲ್ಲ. ಆದ್ದರಿಂದ ಕಲುಷ ದರ್ಪಣ ಆಕಲುಷ ದರ್ಪಣ ಎರಡು ದೃಷ್ಟಾಂತ. ಎರಡು ದೃಷ್ಟಾಂತಗಳು ಸಾಂಶರಿಗೆ, ನಿರಂಶರಿಗೆ ಒಂದು ದೃಷ್ಟಾಂತ. ಈ ಪ್ರಕಾರ ಬಿಂಬ ಜಡಜೀವರೊಳಗಿದ್ದು. ಅವರ ಯೋಗ್ಯತಾನುಸಾರ ಅನೇಕ ರೂಪಗಳಿಂದ ಅವರವರ ಮನದರ್ಪಣವೆಂಬ ಉಪಾಧಿ ದ್ವಾರಾ ಹೊಳೆಯುತ್ತಾನೆ. ಸಜ್ಜನರಲ್ಲದ ಮಿಥ್ಯಾಜ್ಞಾನಿಗಳಲ್ಲಿ ಪರಮಾತ್ಮ ಇದ್ದ ಕಾಲಕ್ಕೂ ಹೊಳೆಯೋದಿಲ್ಲ. ಯಾಕೆಂದರೆ. ಅವರು ಪರಮಾತ್ಮನ ಕಾಣುವುದರಿಂದ ಅಂತ ಎಂದರೆ, ಅನಂತ ಅಂತರರಹಿತವಾದವನೆಂತ, ಎಂದರೆ ಪರಮಾತ್ಮನಾದ ತಾನು ಹೊಳೆದ ಮೇಲೆ, ನಿಶ್ಚಲ ಎಂದರೆ, ಚಲಿಸದಂತೆ ಹೊಳೆಯುತಾ ಇರುತಾನೆ. ನಿಶ್ಚಲವಾದ ಮೋಕ್ಷಸ್ಥಾನವನ್ನು ಸೇರತಾನೆ. ನಿರಾಮಯ ಎಂದರೆ, ಪ್ರಾಣಿಗಳಿಗೆ ಜನನಮರಣಾದಿ ರೋಗದಿಂದ ರಹಿತರನ್ನಾಗಿ ಮಾಡುತ್ತಾನೆ. ನಿರಾಮಯ–ಅಹಂ ಮಮ ಎಂಬ ಅಜ್ಞಾನವರ ಆಶ್ರಯವನ್ನು ತಪ್ಪಿಸೋವನನಾಗುತಾನೆ. ಈ ಪ್ರಕಾರ ತನ್ನ ಭಕ್ತರಲ್ಲಿ ಅನುಗ್ರಹ ಮಾಡತಾನೆ. ಆದ್ದರಿಂದ ಪರಮಾತ್ಮನ ಸರ್ವತ್ರದಲಿ ಅನುಸಂಧಾನ ಮಾಡಬೇಕೆಂದು ತಾತ್ಪರ್ಯ. ಅನಂತ ಎಂದರೆ, ಅಂ– ಸಮ್ಯಕ್ ಪ್ರಾಣಿಗಳಿಗೆ, ಅಂತ–ಲಿಂಗಶರೀರವನ್ನು ಅಂತ ಕಾಣಿಸೋವ (ಅಂತ್ಯಕ್ಕೆ ತಂದು ಇಲ್ಲಧಾಂಗೆ ಮಾಡೋಣ; ಭಂಗ ಮಾಡೋಣ) ॥೪॥

## (೨) "ಭಾವ ಪ್ರಕಾಶಿಕೆ" – ವ್ಯಾಖ್ಯಾನ :–

ಬಿಂಬ ಪ್ರತಿಬಿಂಬ ಲಕ್ಷಣದಿಂದ ಭಗವದುಪಾಸನಾಕ್ರಮವನ್ನು ಹೇಳುತ್ತಾರೆ :–

ಸ್ವಚ್ಛವಾದ ಕನ್ನಡಿಯಲ್ಲಿ ಅದರ ಎದುರಿಗೆ ಕಾಣುವ ಪದಾರ್ಥ ಗಳೆಲ್ಲಾ ಪ್ರತಿಬಿಂಬಿತವಾಗಿ ಹೇಗೆ ಕಾಣುವುವೋ, ಹಾಗೆ ಬಿಂಬರೂಪಿ ಯಾದ ಶ್ರೀ ಪರಮಾತ್ಮನಿಗೆ ನಿತ್ಯವಾದ ಜೀವನಸ್ವರೂಪ ದೇಹವು ಕನ್ನಡಿ ಯಂತಿರುವುದು. ಆ ಸ್ವರೂಪದೇಹವೆಂಬ ಕನ್ನಡಿಯಲ್ಲಿ ನಿತ್ಯವಾದ ಬಿಂಬ ರೂಪಿಯಾದ ಪರಮಾತ್ಮನ ಪ್ರತಿಬಿಂಬವೇ ಜೀವನಾಗಿ ಪ್ರತಿಫಲಿಸಿ ಇರು ವುದು. ಬಿಂಬರೂಪಿಯು ಒಬ್ಬನೇ ಆದರೂ, ಉಪಾಧಿ ಭೇದದಿಂದ ಅನೇಕ ಪ್ರತಿಬಿಂಬಗಳಾಗಿ ಕಾಣುವನು. ಉಪಾಧಿ ಭೇದದಿಂದಲೇ ಸಾತ್ವಿ ಕಾದಿ ತ್ರಿವಿಧ ಜೀವರಾಗಿರುವರು,

ದೀಪವು ಒಂದೇ ವಿಧವಾದ ಪ್ರಕಾಶವಾಗಿದ್ದರೂ. ಮೇಲಿಡುವ ಚಿಮಣಿಗಳು ಕೆಂಪು. ಬಿಳಪು ಮತ್ತು ಕಪ್ಪು ಮೊದಲಾದ ವರ್ಣಗಳಿಂದ ಕೂಡಿದುದಾದರೆ, ಅದೇ ದೀಪವೇ ಹೀಗೆ ಕೆಂಪು, ಕಪ್ಪಾಗಿ ಕಾಣು ವುದೋ ಹಾಗೆ ಪರಮಾತ್ಮನ ರೂಪವು ನಿಶ್ಚಲವೂ, ನಿರಾಮಯವೂ, ನಿರಾಶ್ರಯವೂ ಅಗಿದ್ದರೂ, ಜೀವನ ಸ್ವರೂಪ ದೇಹವನ್ನನುಸರಿಸಿ, ಸಾತ್ವಿಕರು, ರಾಜಸರು, ತಾಮಸರು ಎಂಬ ಭೇದಗಳಾಗಿ ಕಾಣುವರು

**"ಜ್ಯೋತಿರ್ಯಥೈವೋದಕ ಪಾರ್ಥಿವೇಷ್ವದಃ ಸಮೀರ ವೇಗಾನು ಗತಂ ವಿಭಾವ್ಯತೇ"-**

**-ಎಂಬ ಭಾಗವತ ದಶಮಸ್ಕಂಧದ** ರೀತ್ಯಾ, ಉದಕದಲ್ಲಿ ಕಾಣುವ ಸೂರ್ಯನ ಪ್ರತಿಬಿಂಬವು ಭಿನ್ನ ಭಿನ್ನವಾಗಿ ಕಾಣುವುದು, ಅದೇ ಪ್ರತಿ ಬಿಂಬವು ನಿಶ್ಚಲವಾಗಿ ಸ್ಫಟಿಕ ಶಿಲಾದಿಗಳಲ್ಲಿ ಪ್ರತಿಬಿಂಬಿಸಿದರೆ, ಸೂರ್ಯನ ಪ್ರತಿಬಿಂಬವು ನಿಶ್ಚಲವಾಗಿ ಕಾಣುವುದು. ಹೀಗೆ ಸೂರ್ಯನ ಪ್ರತಿಬಿಂಬದ ವೈಲಕ್ಷಣ್ಯಕ್ಕೆ ನೀರು, ಸ್ಫಟಿಕಾದಿಗಳು ಕಾರಣವೇ ಹೊರತು, ಸೂರ್ಯನ ದೋಷವಲ್ಲವೋ, ಹಾಗೆಯೇ ಜೀವರ ಸ್ವರೂಪ ಯೋಗ್ಯತಾನುಸಾರ ಪ್ರತಿ ಬಿಂಬರಾದ ಜೀವರು ದೋಷಗಳಾಗುವರೇ ಹೊರತು ಪರಮಾತ್ಮನು ದೋಷಿ ಯಲ್ಲ. ಅದರಲ್ಲಿ ಸಾತ್ವಿಕರಾದ ಯೋಗ್ಯಜೀವರು ಮಾತ್ರ ಸ್ವಚ್ಛವಾದ, ನಿಶ್ಚಲವಾದ ತಮ್ಮ ಮನಸ್ಸೆಂಬ ದರ್ಪಣದಲ್ಲಿ ನಿಶ್ಚಲಾದಿ ಗುಣಗಳಿಂದ

ಕೂಡಿ ಪ್ರಕಾಶಿಸುವ ಬಿಂಬರೂಪಿಯಾದ ಪರಮಾತ್ಮನನ್ನು ಕಾಣುವರು. ಅಜ್ಞಾನಿಗಳು ಅಯೋಗ್ಯರು ಅಜ್ಞಾನಾವೃತರಾಗಿ. ಸೂರ್ಯನು ಯಾವಾಗಲೂ ಪ್ರಕಾಶ ರೂಪನೇ ಆದರೂ ಮೇಘಾದ್ಯಾವರಣದಲ್ಲಿ ಸೂರ್ಯನನ್ನು ಹೇಗೆ ಕಾಣರೋ. ಹಾಗೆ ಪರಮಾತ್ಮನು ಪ್ರಕಾಶರೂಪಿಯಾಗಿ ತಮ್ಮೊಳಗೆ ಬಿಂಬರೂಪದಿಂದಿದ್ದರೂ ಕಾಣುವುದಿಲ್ಲ. ಜಡದಲ್ಲಿ ಜಡರೂಪದಿಂದಲೂ, ಚೇತನರಲ್ಲಿ ಚೇತನರೂಪಿಯಾಗಿಯೂ ಎಲ್ಲರಲ್ಲಿ ಪ್ರಕಾಶಮಾನನಾಗಿ ಒಪ್ಪುವುದನ್ನು ಜ್ಞಾನಿಗಳು ಮಾತ್ರ ಬಲ್ಲರು.

ನಿಶ್ಚಲನಾಗಿರುವವನು ಪರಮಾತ್ಮನೆಂದರೆ, ಚಲನವಿಲ್ಲದೇ ಕಲ್ಲಿನಂತೆ ನಿಶ್ಚೇಷ್ಟನೆಂದರ್ಥವಲ್ಲ. ಜಡದಲ್ಲಿ ನಿಶ್ಚಲನಾಗಿರುವನು. ಜಡ ಚೇತನಾದಿಗಳಲ್ಲಿ ಚಲಿಸದೆ ಅಂದರೆ ಸ್ಥಿರವಾಗಿರುವನೆಂದರ್ಥ. ಮನುಷ್ಯಾದಿ ಶರೀರಗಳಲ್ಲಿದ್ದರೂ, ಜೀವನಿಗೆ ಕರ್ಮಾನುಸಾರ ರೋಗಗಳು ಪ್ರಾಪ್ತವಾದರೂ ತಾನು ಮಾತ್ರ ನಿರೋಗಿಯಾಗಿರುವನು. ಜೀವನು ಸುಖ ದುಃಖಗಳಿಂದ ವಿಕಾರ ಹೊಂದಿದ್ದರೂ ತಾನು ನಿರ್ವಿಕಾರನಾಗಿರುವನು. ತನ್ನನ್ನು ರಮಾ ಬ್ರಹ್ಮಾದಿ ಸಕಲ ಚೇತನರು ಜಡಗಳಿಗೂ ಸಹ ಆಶ್ರಯಿಸಿಕೊಂಡಿದ್ದರೂ ತಾನು ನಿರಾಶ್ರಯನಾಗಿರುವನು. ತಾನೊಬ್ಬನೇ ಆದರೂ ಅನಂತ ರೂಪನಾಗಿ ತೋರುವನು. ಆದ್ದರಿಂದ ದಾಸರಾಯರು ನಿಶ್ಚಲ, ನಿರಾಮಯ ನಿರ್ವಿಕಾರ, ನಿರಾಶ್ರಯ, ಅನಂತ ಎಂಬ ವಿಶೇಷಣಗಳನ್ನು ಹೇಳಿರುವರು. ಇದರಿಂದ ಜೀವ ಪರಮಾತ್ಮರ ವೈಲಕ್ಷಣ್ಯವನ್ನು ತೋರಿಸಿದಂತಾಯಿತು. ಜೀವನು ದೇಹವನ್ನು ಬಿಟ್ಟು ದೇಹಾಂತರವನ್ನು ಹೊಂದುವವನಾದುದರಿಂದ ಚಲನು, ರೋಗದಿಂದ ಪೀಡಿತನು ಜೀವನು. ಪರಮಾತ್ಮನಿಗೆ ಇವೆರೆಡೂ ಇಲ್ಲ. ಸುಖ ದುಃಖಾದಿಗಳಿಂದ ಜೀವನು ಪರಾಶ್ರಯನು. ಅಸ್ವಂತ್ರತನು. ಪರಮಾತ್ಮನು ನಿರಾಶ್ರಯನು, ಸ್ವತಂತ್ರನು. ಇಂತಹ ಅನಂತರೂಪಗಳಿಂದ ಪ್ರಕಾಶಿಸುವ ಪರಮಾತ್ಮನನ್ನು ಜ್ಞಾನಿಗಳು ಮಾತ್ರ ಕಾಣುವರು. ॥೪॥

(೩) "ಭಾವದರ್ಪಣಟೀಕಾ - ವ್ಯಾಖ್ಯಾನ" :-

ಕನ್ನಡಿಯೊಳಗೆ ಮನುಷ್ಯನ ಆಕಾರ ತೋರಿದ ಹಾಂಗೆ ಸಜ್ಜನರ

ಹೃದಯಲ್ಲಿ ಶ್ರೀಹರಿಯು ಹೊಳೆಯುವನೆಂದು ಹೇಳುತ್ತಾರೆ- "ಕಲುಷೇತಿ" ॥

ನಿಶ್ಚಲ-ಸ್ಥಿರನು. ನಿರಾಮಯ-ನಿರೋಗಿಯು. ನಿರ್ವಿಕಾರ-ವಿಕಾರ ಶೂನ್ಯನು. ನಿರಾಶ್ರಯ-ಆಶ್ರಯಶೂನ್ಯನೆಂತರ್ಥ ॥೫॥

## (೮) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

"ಕಲುಷ" ಇತಿ॥ ಕಂಗೊಳಿಸಿ-ತೋರಿ. ಪೊಳೆವ-ಪ್ರಕಾಶಿಸುವನು. ಶ್ರೀ ಹರಿಯು ನಿರ್ಮಲನು, ಅಂದರೆ ದೋಷರಹಿತನು. ಅನಂತ ಕಲ್ಯಾಣ ಗುಣಸಂಪನ್ನನು. ನಿರಾಮಯನು. ಜ್ಞಾನಾನಂದಮಯನು. ನಿರ್ವಿಕಾರನು. ಜೀವ ಜಡ ಜಗತ್ತಿನಿಂದ ಅತ್ಯಂತ ಭಿನ್ನನು. ಅಂತಹ ಶ್ರೀ ಹರಿಯೇ ಬಿಂಬ ರೂಪಿಯು, ನಿರ್ಮಲವಾದ ದರ್ಪಣದಲ್ಲಿ ವಸ್ತುಗಳು ಪ್ರತಿಬಿಂಬಿಸಿ, ಸ್ಪಷ್ಟವಾಗಿ ಗೋಚರಿಸುವಂತೆ, ಪ್ರತಿಬಿಂಬರಾದ ಜಡ ಚೇತನರಲ್ಲಿ ಅನಂತ ರೂಪಗಳಿಂದ ಪ್ರಕಾಶಿಸುವನು. ಬಿಂಬರೂಪಿ ಶ್ರೀಪರಮಾತ್ಮನು ಸಜ್ಜನರಲ್ಲಿ ವಿಶೇಷವಾಗಿ ಪ್ರಕಾಶಮಾನವಾಗಿ ಗೋಚರಿಸುವವನು ಎಂಬುದೇ ಪ್ರಸಕ್ತ ಪದ್ಯದ ಮುಖ್ಯಾಭಿಪ್ರಾಯವು. ॥೪॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ಭಾವನಾ, ಎಂದರೆ ಚಿಂತನಾ ವಿಧಾನವನ್ನು ಸದೃಷ್ಟಾಂತ ಹೇಳುತಾರೆ. ಕಲುಷವಿಲ್ಲದ ಅಂದರೆ ಕೊಳೆ ಮುಂತಾದ ದೋಷ ವಿಲ್ಲದ ಕನ್ನಡಿಯಲ್ಲಿ ಸರ್ವಪದಾರ್ಥಗಳೂ ಪ್ರತಿಬಿಂಬಿಸಿ ಕಾಣಿಸುವಂತೆ. ಬಿಂಬನಾದ ದೇವರು. ಸ್ಥಿರನೂ ಎಂದರೆ ಶಾಶ್ವತನೂ, ನಿರ್ವಿಕಾರನೆಂಬ ಸರ್ವಥಾ ಏಕಪ್ರಕಾರಕನೂ, ನಿರಾಶ್ರಯನೂ, ಎಂದರೆ, ತನಗೆ ಬೇರೆ ಆಶ್ರಯ ಬೇಕಿಲ್ಲದವನೂ, ಅನಂತನು. ಅಂದರೆ ಆದಿಮಧ್ಯಾಂತರಹಿತನಾದ ರೂಪಾನಂತನೂ, ನಿರ್ದೋಷನು, ಎಂದರೆ ದೋಷಗಳಿಂದ ಯಾವ ಕಾಲದಲ್ಲೂ ಮುಟ್ಟಲ್ಪಡದೇ ಇರುವವನೂ ಆಗಿ, ಸಜ್ಜನರ ಮನಸ್ಸೆಂಬ ಸ್ವಚ್ಛ ಕನ್ನಡಿಯಲ್ಲೂ,

ಲಿಂಗಾನಿರುದ್ಧ ಸ್ಥೂಲವೆಂಬ ಜಡದೇಹಗಳಲ್ಲೂ, ಚೇತನವಾದ ಜೀವನ ಸ್ವರೂಪ ದೇಹದಲ್ಲೂ ಸಹ ಬಹುರೂಪದಿಂದ ಪ್ರಕಾಶಿಸುವನೆಂದರ್ಥ.

ಇದರಿಂದ ಯೋಗ್ಯಸಾಧನಾನಂತರ ದೇವತೆಗಳು ತಾವು ಉಪಾಸನಾ ಮಾಡಿದ ನಾಲ್ಕು ಶರೀರಾಂತರ್ಗತ ಅನಿರುದ್ಧನ ಬಹುರೂಪಗಳನ್ನು ಅಪರೋಕ್ಷಧ್ಯಾನಕಾಲದಲ್ಲಿ ದರ್ಶನಸುಖಾನಂದಗಳನ್ನು ಹೊಂದುವರೆಂದು ಸ್ಪಷ್ಟಮಾಡಿದಂತಾಯಿತು. ॥೪॥

## ಸರ್ವವ್ಯಾಖ್ಯಾನಸಾರಸಂಗ್ರಹ :

ಸಜ್ಜನರಾದ ಸಾತ್ವಿಕ ಜೀವರ ಮನಸ್ಸಿನಲ್ಲಿ ಸ್ಪಷ್ಟವಾಗಿ ತೋರಿ, ತನ್ನ ದರ್ಶನಾನಂದ ಭಾಗ್ಯವನ್ನು ಕೊಡುವನೆಂದು ಸದೃಷ್ಟಾಂತವಾಗಿ ವಿವರಿಸುತ್ತಾರೆ- **"ಕಲುಷವಿಲ್ಲದ"** -ಎಂಬ ಪ್ರಸಕ್ತ ಸಂಧಿಗತ ಈ ನಾಲ್ಕನೆಯ ಪದ್ಯದಿಂದ.

(೧) ಕನ್ನಡಿಯ ಮುಂದೆ ಒಂದು ವಸ್ತುವನ್ನಿಟ್ಟಾಗ. ಬೆಳಕಿನ ಪ್ರತಿಫಲನದಿಂದ ಆ ವಸ್ತುವಿನ ಪ್ರತಿಬಿಂಬವು ಕನ್ನಡಿಯಲ್ಲಿ ಮೂಡುವುದು. ಕನ್ನಡಿಯು ನಿರ್ಮಲವಾಗಿದ್ದಷ್ಟು. ಪ್ರತಿಬಿಂಬವು ಅಷ್ಟು ಸ್ಪಷ್ಟವಾಗಿ ಗೋಚರಿಸುವುದು. ಕಲುಷ ಎಂದರೆ ಕೊಳೆಯಿಂದ ಯುಕ್ತವಾದ ದರ್ಪಣದಲ್ಲಿ ಮೂಡುವ ಪ್ರತಿಬಿಂಬವು ಅಸ್ಪಷ್ಟವಾಗಿರುವುದು. ಈ ದರ್ಪಣದ ದೃಷ್ಟಾಂತದಲ್ಲಿ ವಸ್ತುವು ಬಿಂಬ ಸದೃಶ. ಕನ್ನಡಿ ಪ್ರತಿಬಿಂಬಿಸುವ ಉಪಾಧಿ ಪ್ರತಿಫಲನದಿಂದ ಉಂಟಾಗುವುದು ಆ ಕನ್ನಡಿಯಲ್ಲಿ ಮೂಡುವ ವಸ್ತುವಿನ ಪ್ರತಿಬಿಂಬವು.

(೨) ಅಂತೆಯೇ ಈ ಜಗತ್ತಿನಲ್ಲಿರುವ ಸಮಸ್ತ ಜಡ ಹಾಗೂ ಚೇತನ ಪದಾರ್ಥಗಳು ಆ ಪರಮಾತ್ಮನಿಗೆ ಪ್ರತಿಬಿಂಬ ಸದೃಶವಾಗಿದೆ. ಬಿಂಬ

ಪ್ರತಿಬಿಂಬನ್ಯಾಯದಂತೆ. ಶ್ರೀ ಪರಮಾತ್ಮನು ಸರ್ವ ಜಡ ಜೀವರಿಗೆ ಬಿಂಬನು. ಜಡವಸ್ತುಗಳಲ್ಲಿ ತದಾಕಾರನಾಗಿ ತದ್ರೂಪಿಯಾಗಿ ತನ್ನಾಮಕನಾಗಿ ತಚ್ಛಬ್ದ ವಾಚ್ಯನಾಗಿದ್ದಾನೆ. ಆದರೆ ಆ ಜಡವಸ್ತುಗಳಿಂದ ಅತ್ಯಂತ ಭಿನ್ನನಾಗಿದ್ದಾನೆ. ತದ್ಭಿನ್ನನೆಂಬುವುದೇ ಪರಮ ಮುಖ್ಯ ತತ್ತ್ವವು. ಜಗತ್ತಿನಲ್ಲಿರುವ ಸಮಸ್ತ ಜಡವಸ್ತುಗಳೂ ಸರ್ವತ್ರ ವ್ಯಾಪ್ತನಾಗಿರುವ ಬಿಂಬರೂಪಿ ಶ್ರೀಪರಮಾತ್ಮನಿಗೆ ಪ್ರತೀಕವೆಂದೆಸುವ ಅಧಿಷ್ಠಾನ ವಿಶೇಷಗಳು.

(೩) ಸರ್ವಜೀವರೂ ಬಿಂಬರೂಪಿಯಾದ ಶ್ರೀಪರಮಾತ್ಮನಿಗೆ ಪ್ರತಿಬಿಂಬಸದೃಶರು, ಬಿಂಬ ಮತ್ತು ಪ್ರತಿಬಿಂಬಗಳಿಗೆ ಸಾದೃಶ್ಯಭಾವವೇ ಹೊರತು ಐಕ್ಯವಿಲ್ಲ. ಬಿಂಬರೂಪಿಯಾದ ಶ್ರೀ ಪರಮಾತ್ಮನು ತ್ರಿವಿಧಜೀವರಲ್ಲಿ ಅಂತರ್ಯಾಮಿಯಾಗಿ ಇದ್ದು ಜೀವಾಂತರ್ಗತನಾಗಿ. ಜೀವರೂಪಿಯಾಗಿ, ಜೀವಾಕಾರನಾಗಿ ಇರುವನು. ಆದರೆ ಬಿಂಬನು ಸರ್ವತಂತ್ರಸ್ವತಂತ್ರನು. ಪ್ರತಿಬಿಂಬದ ಕ್ರಿಯಾದಿಗಳೆಲ್ಲವೂ ಬಿಂಬಾಧೀನವಾದ್ದರಿಂದ, ಸಮಸ್ತ ಜೀವರೂ ಅಸ್ವತಂತ್ರರು. ಅವರ ಕರ್ತೃತ್ವಶಕ್ತಿ ಪರಾಧೀನವಾದದ್ದು. "ಪರ" ಎಂದರೆ ಶ್ರೇಷ್ಠನೆಂದರ್ಥ ಇಂತು ಪರನಾಮಕನಾದ ಬಿಂಬನ ಅಧೀನವಾಗಿ ಪ್ರತಿಬಿಂಬ ಸದೃಶರಾದ ಸಮಸ್ತ ಜೀವರ ವ್ಯಾಪಾರವಿಶೇಷಗಳು ಸರ್ವಜೀವರ ಸ್ವರೂಪ ಗತ ಲಕ್ಷಣಗಳಾದ ಜ್ಞಾನ. ಇಚ್ಛೆ ಮತ್ತು ಕ್ರಿಯಾಶಕ್ತಿಗಳು ಬಿಂಬಾಧೀನ ಮತ್ತು ಅವುಗಳಿಗೆ ಬಿಂಬನೇ ಮುಖ್ಯಪ್ರೇರಕನಾಗಿದ್ದಾನೆ. ಬಿಂಬರೂಪಿ ಶ್ರೀ ಪರಮಾತ್ಮನು ಸಮಸ್ತ ಜೀವವರ್ಗದಿಂದ ಅತ್ಯಂತ ಭಿನ್ನನು. ಇಂತು ದರ್ಪಣದ ಈ ದೃಷ್ಟಾಂತದಿಂದ ಈಶ-ಜೀವರ ಪರಸ್ಪರ ಸಂಬಂಧ ಬಿಂಬ-ಪ್ರತಿಬಿಂಬ ಭಾವ ಈಶನಿಗೂ ಜೀವ ಜಡಗಳಿಗೂ ಅನಾದಿನಿತ್ಯವಾಗಿರುವ ಈ ಪರಮ ವೈಲಕ್ಷಣ್ಯವು ಸ್ಪಷ್ಟವಾಗುವುದು. ಜಡಾಧಿಷ್ಠಾನಗಳು ಸರ್ವತ್ರ ವ್ಯಾಪ್ತನಾದ ಪರಮಾತ್ಮನಿಗೆ ಪ್ರತೀಕ ಸದೃಶ. ಸಮಸ್ತ ಜೀವರ ಸ್ವರೂಪ ದೇಹವು ಉಪಾಧಿ. ಶ್ರೀಪರಮಾತ್ಮನೇ ಸರ್ವ ಜೀವರ ಮುಖ್ಯ ಬಿಂಬನು. ಜೀವರು ಶ್ರೀ ಪರಮಾತ್ಮನಿಗೆ ಪ್ರತಿಬಿಂಬಭೂತರು.

(೪) ಮುಕ್ತಿಯೋಗ್ಯವಾದ ಸತ್ವಗುಣೋಪೇತರಾದ ಸಜ್ಜನರ

ಸ್ವರೂಪವು ನಿರ್ಮಲವಾಗಿರುವುದು. ಅಂತಹ ಸಜ್ಜನರ ಮನಸ್ಸೆಂಬ ಮನೋದರ್ಪಣದಲ್ಲಿ ಬಿಂಬನಾದ ಶ್ರೀ ಪರಮಾತ್ಮನು ಸ್ಪಷ್ಟವಾಗಿ ಹೊಳೆಯು ವನು. ತನ್ನ ದರ್ಶನಾನಂದಭಾಗ್ಯವನ್ನು ಅವರ ಅಪರೋಕ್ಷದಲ್ಲಿ ನೀಡು ವನು. ಅಪರೋಕ್ಷಪೂರ್ವದಲ್ಲಿ ಭಗವಚ್ಚಿಂತನೆ ಮಾಡುತ್ತಿರುವಾಗ, ಅವರ ಮನಸ್ಸಿನಲ್ಲಿ ಅವರ ಉಪಾಸನಾಕ್ರಮಕ್ಕೆ ಅನುಗುಣವಾಗಿ ಗೋಚರಿಸುವನು. ಅಪರೋಕ್ಷಕಾಲದಲ್ಲಿ ಬಿಂಬದರ್ಶನವಾಗುವುದು. ಮುಕ್ತಿಯಲ್ಲಿ ಬಿಂಬನ ನಿತ್ಯದರ್ಶನಭಾಗ್ಯ.

(೫) ಇಂತು, ಸಜ್ಜನರ ಮನಸ್ಸೆಂಬ ಸ್ವಚ್ಛವಾದ ಕನ್ನಡಿ ಎಂಬ ಉಪಾಧಿಯಲ್ಲಿ ಪ್ರಕಾಶಿಸುತ್ತಿರುವ ಶ್ರೀ ಪರಮಾತ್ಮನಾದರೋ **ನಿಶ್ಚಲನು.** ಅಂದರೆ ಶಾಶ್ವತನು. ಸ್ಥಿರವಾಗಿರತಕ್ಕವನು. ಶ್ರೀ ಪರಮಾತ್ಮನಂತೆಯೇ ಜೀವರ ಸ್ವರೂಪವೂ ಅನಾದಿ ನಿತ್ಯವಾದದ್ದು ಅದಕ್ಕೆ ಎಂದಿಗೂ ನಾಶವಿಲ್ಲ ಈ ಈಶ–ದಾಸಬಾವವು ಅನಾದಿ ನಿತ್ಯವಾದದ್ದು. ಇದರಿಂದಲೇ "ನಿಶ್ಚಲ" ಎಂದು ಕರೆದಿದ್ದಾರೆ ಜ್ಞಾನಿವರೇಣ್ಯರಾದ ದಾಸರಾಯರು.

(೬) ಬಿಂಬರೂಪಿ ಶ್ರೀ ಪರಮಾತ್ಮನು **ನಿರಾಮಯನು.** ಜನನ ಮರಣಾದಿ ಉಪದ್ರವಗಳಿಂದ ರಹಿತನಾದವನು. ಜೀವರಿಗಾದರೋ ರೋಗಾದಿ ಉಪದ್ರವಗಳು ಕಾಡುವುವು. ಜೀವರಿಗೆ ಲಿಂಗ. ಅನಿರುದ್ಧ ಮತ್ತು ಸ್ಥೂಲದೇಹಗಳಿಗೆ ನಾಶವಿದೆ. ಆದರೆ ಬಿಂಬನು ಆದಿಮಧ್ಯಾಂತ ರಹಿತನು. ಪೂರ್ಣ ಜ್ಞಾನಾನಂದಮಯನು. ಯಾವ ವಿಧವಾದ ಉಪ ದ್ರವಗಳಿಂದಲೂ ದೂರನು.

(೭) ಜೀವರ ಸರ್ವ ಪ್ರೇರಕನಾದ ಬಿಂಬನು **ನಿರ್ವಿಕಾರನು.** ಜೀವ ರಲ್ಲಿ ತದಾಕಾರನಾಗಿ, ಜೀವಾಂತರ್ಗತನಾಗಿದ್ದರೂ. ಜೀವರ ಗುಣದೋಷ ಗಳಿಂದ ಲಿಪ್ತನಾಗದೆ, ಸರ್ವಪ್ರಕಾರಗಳಲ್ಲಿಯೂ ನಿರ್ಲಿಪ್ತನಾಗಿದ್ದಾನೆ. ವಿಕಾರರಹಿತನಾದ ಬಿಂಬನು ಜಡಜೀವರಿಂದ ಪರಮ ವಿಲಕ್ಷಣನು.

(೮) ಬಿಂಬರೂಪಿ ಶ್ರೀ ಪರಮಾತ್ಮನು **ನಿರಾಶ್ರಯನು.** ಸರ್ವತಂತ್ರ ಸ್ವತಂತ್ರನಾದ ಆ ಜಗತ್ಪ್ರಭುವಿಗೆ ಯಾರ ಆಶ್ರಯವೂ ಬೇಕಿಲ್ಲ. ಸ್ವೇಚ್ಛೆಯಿಂದ ವ್ಯಾಪಾರಾದಿಗಳನ್ನು ಬಿಂಬಕ್ರಿಯಾದ್ವಾರ ನಿರ್ವಹಿಸುತ್ತಿರುವ ಸಾರ್ವಭೌಮನು. ಜೀವರಿಗೆ ಪರಮಾತ್ಮನ ಆಶ್ರಯ ಸರ್ವಕಾಲ, ಸರ್ವದೇಶ ಮತ್ತು ಸರ್ವಾವಸ್ಥೆಗಳಲ್ಲಿಯೂ ಅತ್ಯಗತ್ಯ. ಆದರೆ ಸ್ವತಂತ್ರನಾದ ಪರಮಾತ್ಮನಿಗೆ ಪರಾಶ್ರಯಾಪೇಕ್ಷೆ ಎಂದೆಂದಿಗೂ ಇಲ್ಲ.

(೯) ಅನಂತ ಜೀವರಲ್ಲಿ ಅನಂತರೂಪಗಳಿಂದ ವಿದ್ಯಮಾನನಾಗಿದ್ದು, ಜೀವಕೃತ ಕರ್ಮಗಳನ್ನು ತಾನೇ ಬಿಂಬಕ್ರಿಯಾದ್ವಾರದಿಂದ ಮಾಡಿ ಮಾಡಿಸುತ್ತಿರುವ ಆ ಅಪಾರಮಹಿಮಾಸಂಪನ್ನನು **ಅನಂತನು.** ಚ್ಯುತಿವಿದೂರನಾದ ಆ ಪರಮಾತ್ಮಗೆ ರೂಪ, ಕ್ರಿಯಾ, ಗುಣಾದಿಗಳೆಲ್ಲವೂ ಪೂರ್ಣ ಹಾಗೂ ಅನಂತಾನಂತ.

**ವಿಶೇಷ ವಿಚಾರ :-**

ಕನ್ನಡಿಯು ಬೆಳಕನ್ನು ಪ್ರತಿಫಲಿಸುವ ಒಂದು ಉಪಾಧಿ. ಕನ್ನಡಿಯು ಧೂಳು ಅಥವಾ ಕೊಳೆಯಿಂದ ಮುಚ್ಚಲ್ಪಟ್ಟಿದ್ದರೆ ಆ ಧೂಳನ್ನು ಒರೆಸಿದಾಗ ಅಥವಾ ಕೊಳೆಯನ್ನು ತೆಗೆದು ನಿರ್ಮಲಮಾಡಿದಾಗ ಕನ್ನಡಿಯು ಸ್ವಚ್ಛವಾಗುವುದು. ಆಗ ಪ್ರತಿಬಿಂಬ ಆ ಕನ್ನಡಿಯಲ್ಲಿ ಸ್ಪಷ್ಟವಾಗಿ ಗೋಚರಿಸುವುದು. ಅಂತೆಯೇ ಸಜ್ಜನರಿಗೆ ಕಾರಣಾಂತರಗಳಿಂದ ಒದಗುವ ಅಜ್ಞಾನ, ಸಂದೇಹ, ಮನಸ್ಸಿನ ಚಾಂಚಲ್ಯ ಮುಂತಾದ ಮಲಿನಗಳನ್ನು ಕರುಣಾಸಾಗರನಾದ ಶ್ರೀ ಪರಮಾತ್ಮನು ನಿವಾರಿಸಿ, ಅವರನ್ನು ಪಾಪರಹಿತರನ್ನಾಗಿ ಮಾಡಿ ಅವರ ಮಂಸ್ಸಿನಲ್ಲಿ ಪ್ರಕಾಶಿಸಿ ಗೋಚರಿಸುವನು. ಆದರೆ ಕನ್ನಡಿಯಲ್ಲಿಯೇ ಮೂಲಭೂತವಾದ ದೋಷಗಳಿದ್ದರೆ. ಅದು ನಿತ್ಯಪ್ರಬಂಧಕವಾಗುವುದು. ದರ್ಪಣವು ಸಮತಲವಾಗಿದ್ದರೆ. ಪ್ರತಿಬಿಂಬದ ಗೋಚರ ಸ್ಪಷ್ಟವಾಗಿರುವುದು ಆದರೆ ಆ ದರ್ಪಣದ ಮೇಲ್ಮೈ ಡೊಂಕಾಗಿದ್ದರೆ, ಅದರಲ್ಲಿ ಮೂಡುತ ಪ್ರತಿಬಿಂಬ ವಿಕಾರವಾಗಿರುವುದು. ದರ್ಪಣದ ಮುಂದೆ ಇರುವ ವಸ್ತು

ವಿನಲ್ಲಿ ಯಾವದೋಷವೂ ಇಲ್ಲದಿದ್ದರೂ, ಆ ಉಪಾಧಿರೂಪವಾದ ಕನ್ನಡಿಯಲ್ಲಿ ಮೂಲ ಭೂತವಾದ ದೋಷಗಳಿದ್ದರೆ, ಅದಕ್ಕೆ ಅನುಗುಣವಾಗಿ ಪ್ರತಿಬಿಂಬವು ದೋಷಯುಕ್ತವಾಗಿರುವುದು. ಇದು ಭೌತವಿಜ್ಞಾನದ ತತ್ತ್ವ. ಅದರಂತೆ ಸ್ವರೂಪ ಪ್ರತಿಬಂಧಕವಿರುವ ತಮೋಯೋಗ್ಯ ಜೀವರಲ್ಲಿ ಅವರ ಸ್ವರೂಪ ಲಕ್ಷಣಗನುಸಾರ ಗೋಚರಿಸುವನು. ಅವರಿಗೆ ನಿತ್ಯ ದುಃಖ ಪ್ರಾಪ್ತಿಯೇ ಅಂತ್ಯ ಫಲವು ॥೪॥

## ಪದ್ಯ (೫)

**ಮೂಲ :–**

**ಈ ಶರೀರ ಚತುಷ್ಟಯಗಳೊಳು ।**
**ಕೋಶಧಾತುಗ ಭಾರತೀಪ ಪ್ರಾ ।**
**ಣೇಶನಿಪ್ಪತ್ತೊಂದು ಸಾವಿರದಾರುನೂರೆನಿಪ ॥**
**ಶ್ವಾಸರೂಪಕ ಹಂಸ ಭಾಸ್ಕರ ।**
**ಭೇಶರೊಳಗಿದ್ದವರ ಕೈ ವಿಡಿ ।**
**ದೀ ಸರೋಜಭವಾಂಡದೊಳು ಸರ್ವತ್ರ ತುಂಬಿಹನು ॥೫॥**

**ಅವತರಣಿಕೆ :–**

ಹಂಸನಾಮಕ ಶ್ರೀ ಪರಮಾತ್ಮನೇ ಭಾರತೀ ರಮಣರಾದ ಶ್ರೀ ಮುಖ್ಯಪ್ರಾಣ ದೇವರಲ್ಲಿದ್ದು, ತನುಚತುಷ್ಟಯಗಳಲ್ಲಿ ನಿರ್ವಹಿಸುತ್ತಿರುವ ಶ್ವಾಸರೂಪವಾದ ವ್ಯಾಪಾರವನ್ನು ನಿರೂಪಿಸುತ್ತಾರೆ–ಪ್ರಸಕ್ತ ಸಂಧಿಗತ "**ಈ ಶರೀರ ಚತುಷ್ಟಯಗಳೊಳು**"–ಎಂಬ ಈ ೫ನೆಯ ಪದ್ಯದಿಂದ

ಜೀವನ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲ–ಎಂಬ ಈ ನಾಲ್ಕು ಪ್ರಕಾರವಾದ ದೇಹಗಳಲ್ಲಿ, ಸಪ್ತ ಧಾತುಗಳಲ್ಲಿ ಮತ್ತು ಪಂಚ

ಕೋಶಗಳಲ್ಲಿ ಸ್ಥಿತನಾಗಿದ್ದು. **ಹಂಸ** ನಾಮಕ ಶ್ರೀ ಪರಮಾತ್ಮನೇ ಭಾರತೀ ಪತಿಗಳಾದ ಶ್ರೀ ಮುಖ್ಯಪ್ರಾಣದೇವರಲ್ಲಿ ಅಂತರ್ಯಾಮಿತ್ವೇನ ಇದ್ದವನಾಗಿ ೨೧,೬೦೦ ಸಂಖ್ಯಾಕವಾದ ಶ್ವಾಸ ಜಪಗಳನ್ನು ಮಾಡಿ ಮಾಡಿಸುತ್ತಿರುವನು. ದೇಹದ ಬಲಪಾರ್ಶ್ವದಲ್ಲಿ ಪಿಂಗಳಾ ನಾಡಿಯ ದ್ವಾರಾ, ೩೬೦೦೦ ದಿವಾ ನಾಡಿಗಳಿಗೆ ಅಭಿಮಾನಿಯಾದ ಸೂರ್ಯಾಂತರ್ಗತನಾಗಿ (ಭಾಸ್ಕರ)· ದೇಹಗತ ಎಡಪಾರ್ಶ್ವದಲ್ಲಿ ಇಡಾ ನಾಡಿಯ ದ್ವಾರಾ ೩೬೦೦೦ ರಾತ್ರಿ ನಾಡಿಗಳಿಗೆ ಅಭಿಮಾನಿಯಾದ ನಕ್ಷತ್ರಾಧಿಪತಿಯಾದ ಚಂದ್ರನಲ್ಲಿ ಇದ್ದು (ಭೇಶ), ಮುಖ್ಯಪ್ರಾಣದೇವರ ದ್ವಾರಾ ದೇಹಗತ ಸಮಸ್ತ ವ್ಯಾಪಾರಗಳನ್ನೂ ತಾನೇ ನಿರ್ವಹಿಸುತ್ತಾ, ಈ ಬ್ರಹ್ಮಾಂಡದಲ್ಲಿ (ಸರೋಜ ಭವಾಂಡದೊಳು) ಸರ್ವತ್ರ ವ್ಯಾಪ್ತನಾಗಿದ್ದಾನೆ ಎಂದು ತಿಳಿಸುತ್ತಾರೆ. ॥೫॥

**ಪ್ರತಿಪದಾರ್ಥ :-**

**ಈ ಶರೀರಚತುಷ್ಟಯಂಗಳೊಳು** = ಪೂರ್ವೋಕ್ತ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲಗಳೆಂಬ ನಾಲ್ಕು ವಿಧವಾದ ದೇಹಗಳಲ್ಲಿ, **ಕೋಶ** = ಅನ್ನಮಯ, ಪ್ರಾಣಮಯ. ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎಂಬ ಪಂಚಕೋಶಗಳಲ್ಲಿ **ಧಾತು** = ತ್ವಕ್ಕು, ಚರ್ಮ, ಮಾಂಸ, ಮೇದಸ್ಸು, ಮಜ್ಜ, ರುಧಿರ ಮತ್ತು ಅಸ್ಥಿ ಎಂಬ ಸಪ್ತ ಧಾತುಗಳಲ್ಲಿ **ಗ** = ವಿದ್ಯಮಾನನಾಗಿದ್ದು, ವ್ಯಾಪಿಸಿ, **ಭಾರತೀಪ** = ಶ್ರೀ ಭಾರತೀ ದೇವಿಯರ ಪತಿಯಾದ **ಪ್ರಾಣೇಶನು** = ಮುಖ್ಯ ಪ್ರಾಣಾಂತರ್ಗತನಾಗಿ **ಹಂಸ** = ಹಂಸನಾಮಕ ಶ್ರೀ ಪರಮಾತ್ಮನು **ಇಪ್ಪತ್ತೊಂದು ಸಾವಿರದಾರುನೂರೆನಿಪ** = ೨೧,೬೦೦ ಸಂಖ್ಯಾಕವಾದ **ಶ್ವಾಸರೂಪಕ** = ಹಂಸಮಂತ್ರ ಜಪವೆಂದೆನಿಸುವ ಶ್ವಾಸರೂಪದಿಂದ **ಭಾಸ್ಕರ** = ದೇಹಗತ ಬಲಪಾರ್ಶ್ವದಲ್ಲಿ ಇಡಾನಾಡಿಯಿಂದ ಬರತಕ್ಕ ಶ್ವಾಸಾಭಿಮಾನಿಯಾದ ಸೂರ್ಯ **ಭೇಶ** = ದೇಹಗತ ಎಡಭಾಗದಲ್ಲಿ ಪಿಂಗಳಾ ನಾಡಿಯಿಂದ ಬರತಕ್ಕ ಶ್ವಾಸಾಭಿಮಾನಿ ನಕ್ಷತ್ರಾಧಿಪತಿಯಾದ ಚಂದ್ರ (ಭ = ನಕ್ಷತ್ರ ; ಈಶ = ಅಧಿಪತಿ, ಅಂದರೆ ನಕ್ಷತ್ರಾಧಿಪತಿ ಚಂದ್ರನೆಂದರ್ಥ) **ರೊಳ**

**ಗಿದ್ದು**=ಸೂರ್ಯ ಮತ್ತು ಚಂದ್ರರಲ್ಲಿ ಅಂತರ್ಗತ ರೂಪದಿಂದ ಇದ್ದವನಾಗಿ, **ಕೈವಿಡಿದು**=ಅವರಿಗೆ ರಕ್ಷಕನಾಗಿದ್ದು **ಈ ಸರೋಭಜವಾಂಡದೊಳು**=ಈ ಬ್ರಹ್ಮಾಂಡದಲ್ಲಿ (ಈ=ವರ್ತಮಾನ ಕಾಲದಲ್ಲಿರತಕ್ಕ, ಸರೋಜ=ಕಮಲ, ಭವ=ಅದರಲ್ಲಿ ಉತ್ಪನ್ನರಾದ, ಅಂದರೆ ಪದ್ಮನಾಭ ರೂಪಿ ಶ್ರೀ ಪರಮಾತ್ಮನ ನಾಭೀ ಕಮಲದಲ್ಲಿ ಉತ್ಪನ್ನರಾದ ವರ್ತಮಾನ ಕಲ್ಪದಲ್ಲಿರುವ ಚತುರ್ಮುಖ ಬ್ರಹ್ಮದೇವರ ಅಂಡದೋಳು=ಅವರ ಶರೀರವಾದ ಈ ಬ್ರಹ್ಮಾಂಡದಲ್ಲಿ ಎಂದರ್ಥ.) **ಸರ್ವತ್ರ**=ಎಲ್ಲಾ ಸ್ಥಳಗಳಲ್ಲಿಯೂ (ದೇಹದಲ್ಲಿ ಶಿರಃ ಮೊದಲು ಪಾದಾಂತವಾಗಿ. ಆ ಪಾದ ಮೌಳಿಪರ್ಯಂತ) **ತುಂಬಿಹನು**=ಪರಿಪೂರ್ಣ ರೂಪಗಳಿಂದ ವ್ಯಾಪ್ತನಾಗಿದ್ದಾನೆ. ॥೫॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಶ್ರೀ ವಾಯುದೇವರು ಪೂರ್ವೋಕ್ತ ನಾಲ್ಕು ದೇಹಗಳಲ್ಲಿದ್ದು ದಾವ ದೇಹದಲ್ಲಿ ಹಂಸಮಂತ್ರ ಮಾಡತಾರೆ ಎಂದರೆ ಹೇಳತಾರೆ :-

ಈ ಶರೀರ ಚತುಷ್ಟಯಗಳೊಳು-ಈ ಪೂರ್ವೋಕ್ತವಾದ. ಜೀವ, ಲಿಂಗ, ಅನಿರುದ್ಧ, ಸ್ಥೂಲ ಈ ನಾಲ್ಕು ಶರೀರಗಳೊಳಗೆ, ಧಾತುಗ-ಸಪ್ತ ಧಾತುಗಳಿಂದ ಯುಕ್ತಪಾದದ್ದು ಸ್ಥೂಲಶರೀರ ಎಂಬುದು (ವಿಶೇಷಾರ್ಥದಲ್ಲಿ ಈ ವಿಷಯ ವಿವರ ನೋಡಬೇಕು) ಕೋಶ-ಅನ್ನಮಯಾದಿ ಕೋಶಗಳು (ಇವುಗಳಿಂದ ಯುಕ್ತವಾದ) ಸ್ಥೂಲದೇಹದ ಒಳಗೆ. ಭಾರತೀಪತಿ–ಭಾರತೀದೇವಿಗೆ ಪತಿಯಾದ, ಪ್ರಾಣೇಶ–ಜೀವೋತ್ತಮರಾದ ಶ್ರೀ ವಾಯುದೇವರು. ಇಪ್ಪತ್ತೊಂದು ಸಾವಿರದಾರನೂರೆನಿಪ-೨೧,೬೦೦ ಆಗ

ತಕ್ಕ, ಶ್ವಾಸರೂಪಕ-ಶ್ವಾಸರೂಪವಾದ, ಹಂಸ-ಹಂಸಮಂತ್ರ ಎಂದರೆ– **"ಸರ್ವಸ್ಯ ದುಃಖಹಂತೃತ್ವಾದ್ಧಂಸಃ"**—ಎಂಬಂತೆ "ಹಂಸ"-ಎಂತ ಎರಡು ವರ್ಣದಿಂದ ವಿಶಿಷ್ಟವಾದ ಶ್ವಾಸಜಪವನ್ನು ಮಾಡತಾರೆ. ಆ ಮಾಡುವ ಬಗೆ– ಭಾಸ್ಕರ–ಸೂರ್ಯನು ಇಡಾನಾಡಿಯಿಂದ ಬರತಕ್ಕ ಶ್ವಾಸಾಭಿಮಾನಿಯು, ಭೇಶ–ನಕ್ಷತ್ರಗಳಿಗೆ ಸ್ವಾಮಿಯಾದ ಚಂದ್ರನು ಪಿಂಗಳಾ ನಾಡಿಯಿಂದ ಬರತಕ್ಕ ಶ್ವಾಸಾಭಿಮಾನಿಯು, ಒಳಗಿದ್ದು-ಈ ಸೂರ್ಯ ಚಂದ್ರಾದಿಗಳಂತರ್ಗತನಾಗಿದ್ದು, ಅಂದರೆ, ಶ್ವಾಸರೂಪವಾದ ವಾಯು ಅಧಿಷ್ಠಾನದಲ್ಲಿ ಸೂರ್ಯ ಚಂದ್ರಾದಿಗಳು, ತದಂತರ್ಗತ ಮುಖ್ಯಪ್ರಾಣ ದೇವರು, (ಅವರ ದ್ವಾರಾ), ಈ ಸರೋಜಭವ–ವರ್ತಮಾನಕಾಲದಲ್ಲಿರತಕ್ಕ ಬ್ರಹ್ಮದೇವರ, ಅಂಡದೊಳು-ಅಭಿಮನ್ಯವಾದ ಬ್ರಹ್ಮಾಂಡದೊಳಗೆ, ಸರ್ವತ್ರ- ಇರತಕ್ಕ ಸರ್ವ ಪ್ರಾಣಿಗಳ ಸ್ಥೂಲ ದೇಹಗಳಲ್ಲಿ ವಿದ್ಯಮಾನವಾದ ಅಷ್ಟ ದಳ ಕಮಲಗಳ ಮೂಲೇಶನ ಪಾದಮೂಲದಲ್ಲಿ ಪೊಂದಿದ್ದು, ಶ್ವಾಸ ಜಪಗಳ ಮಾಡುತ್ತಾ, ತುಂಬಿಹನು-ಚರಾಚರಗಳಲ್ಲಿ ವ್ಯಾಪ್ತನಾಗಿದ್ದಾನೆ.

**ವಿಶೇಷಾರ್ಥ :–**

ಅನ್ನಮಯಾದಿ ಕೋಶಗಳು ಐದು. (೧) ಅನ್ನಮಯ (೨) ಪ್ರಾಣಮಯ (೩) ಮನೋಮಯ (೪) ವಿಜ್ಞಾನಮಯ ಮತ್ತು (೫) ಆನಂದಮಯ. ಸಪ್ತಧಾತುಗಳು ದಾವದೆಂದರೆ :- (೧) ತ್ವಕ್ಕು (೨) ಚರ್ಮ (೩) ಮಾಂಸ (೪) ಮೇದ (೫) ಮಜ್ಜ (೬) ರುಧಿರ ಮತ್ತು (೭) ಅಸ್ಥಿ ಅಂತು ಏಳು. ಏತಾದೃಶವಾದ ಸ್ಥೂಲ ಶರೀರ ಒಂದು. ತದನ್ಯ ಶರೀರಗಳು ಮೂರು. ಅಂತು, ನಾಲ್ಕು ಶರೀರ ಗಳು. ಈ ಶ್ಲೋಕದಿಂದ ನಾಲ್ಕು ದೇಹಗಳಲ್ಲಿ ಪ್ರಾಣದೇವರು ಇದ್ದಂತೆ ತೋರುತ್ತದೆ. ತಾತ್ಪರ್ಯ ಏನೆಂದರೆ-ಮೂಲದಲ್ಲಿ "ಈ ಶರೀರ ಚತುಷ್ಟಯು ದೊಳು ಕೋಶಧಾತುಗ"-ಎಂತ ಪ್ರಯೋಗ ಇರೋಣದರಿಂದ, ನಾಲ್ಕು ಶರೀರದೊಳಗೆ ಕೋಶ ಧಾತುಗಳಿಂದ ಯುಕ್ತವಾದ ಶರೀರವನ್ನೂ, ಭಾರತೀ

ರಮಣ ಮುಖ್ಯ ಪ್ರಾಣದೇವರು "ಗ" ಎಂದರೆ ಇರತಕ್ಕವರಾಗಿ ೨೧,೬೦೦ ಶ್ವಾಸರೂಪವಾದ ಹಂಸಮಂತ್ರ ಜಪಿಸುತಾರೆ ಎಂತ ತಾತ್ಪರ್ಯ. ಕೋಶ ಧಾತುಗಳಿಂದ ಯುಕ್ತವಾಗಿ ಸೃಜ್ಯವಾದ, ಶರೀರ ಸ್ಥೂಲಶರೀರವೇ ಹೊರ್ತು ಅನ್ಯ ಶರೀರಗಳಲ್ಲ. ಆದ್ದರಿಂದ ಸ್ಥೂಲಶರೀರದಲ್ಲಿ ಮಾತ್ರ ಹಂಸಮಂತ್ರ ವಾಯುದೇವರು ಜಪಿಸತಾರೆ ಎಂತ ಶ್ಲೋಕ ತಾತ್ಪರ್ಯ. ಮತ್ತು ಪೂರ್ವೋಕ್ತ ಮೂರನೇ ನುಡಿಯಲ್ಲಿ ನಾಲ್ಕು ದೇಹಗಳು ಹೇಳಿ, ಹಂಸಮಂತ್ರ ಸ್ಥೂಲಶರೀರದಲ್ಲಿ ಮಾತ್ರ ಹೇಳಿರೋಣದರಿಂದಲೂ, ಸ್ಥೂಲ ಶರೀರದಲ್ಲಿ ಪ್ರಾಣದೇವರು ಹಂಸಮಂತ್ರ ಮಾಡತಾರೆ ಎಂತ ತಿಳೀ ಬೇಕು. ಅದ್ದರಿಂದ ಕೋಶ ಧಾತುಗ ಎಂತ ಪ್ರಯೋಗ. ಅನ್ಯ ಶರೀರ ಗಳಲ್ಲಿ ಕೋಶಗಳುಂಟು. ಧಾತುಗಳು ಹೇಳಲಿಲ್ಲ. ಸ್ವರೂಪದೇಹದಲ್ಲಿ ಕೋಶ ಧಾತುಗಳು ಎರಡೂ ಉಂಟು. ಹೀಂಗೆ ಇದ್ದಮ್ಯಾಲೆ ಸ್ವರೂಪ ದೇಹ ಯಾಕೆ ತೊಕೋಬಾರದು ಎಂದರೆ, ಸೂರ್ಯ ಚಂದ್ರಾದಿಗಳ ದ್ವಾರಾ ಶ್ವಾಸಕಾರ್ಯ ಮಾಡಿಸತಾರೆ ಎಂತ ಹೇಳಿರೋಣದರಿಂದ ಕೂಡದು. ಶ್ವಾಸಹಂಸಮಂತ್ರ ಸ್ಥೂಲ ಶರೀರದಲ್ಲೇ ಆಗತದೆ. ತತ್ಕ್ರಿಯಾ ಸ್ಥೂಲ ನಾಸಿಕಾ ದ್ವಾರಗಳ ವ್ಯಕ್ತ, ಎಡಭಾಗ ನಾಡಿ ಇಡಾನಾಡಿ ಬಲ ಭಾಗ ನಾಡಿ ಪಿಂಗಳಾನಾಡಿ. ಎಡಭಾಗ ಇಡಾನಾಡಿಗೆ ಭೇಶ ಎಂದರೆ, ಚಂದ್ರ. ಬಲಭಾಗ ನಾಡಿಗೆ ಭಾಸ್ಕರ ಎಂದರೆ ಸೂರ್ಯ. ಪ್ರಮಾಣ ರೀತ್ಯಾ "ಹಂಸ"-ಎಂತ ಎರಡು ವರ್ಣದಿಂದ ವಿಶಿಷ್ಟವಾದ ಶ್ವಾಸದ ಕೆಲಸವನ್ನು ಮಾಡತಾನೆ. ಆಯಾ ನಾಡಿಗಳಿಂದ ಹೊರಡತಕ್ಕ ಶ್ವಾಸಕೂ ಚಂದ್ರ ಸೂರ್ಯರು ಅಭಿಮಾನಿಗಳು. ಈ ಸೂರ್ಯ ಚಂದ್ರರ ಅಂತರ್ಗತ ನಾಗಿ ಮುಖ್ಯಪ್ರಾಣದೇವರು ತದಂತರ್ಗತ ಹಂಸರೂಪಿ ಪರಮಾತ್ಮ ಇದ್ದವನಾಗಿ, ಅವರ ದ್ವಾರಾ, ಸರೋಜಭವ ಬ್ರಹ್ಮದೇವರು, ಅಂಡ ಎಂದರೆ ಬ್ರಹ್ಮಾಂಡದೊಳು ಮತ್ತು ಸರೋಜಭವನಿಂದ ನಿರ್ಮಿತಾವದ ಅಂಡ ಎಂದರೆ ಪಿಂಡಾಂಡಗಳು ಎಂತ ತಾತ್ಪರ್ಯ.

ಪ್ರಾಣದೇವರು ಸ್ಥೂಲದೇಹದಲ್ಲೇವೇ ಹಂಸಮಂತ್ರ ಮಾಡ ತಕ್ಕದು. ಮಿಂಗಿಲಾದ ದೇಹಗಳಲ್ಲಿ ಜೀವನ ಇಂದ್ರಿಯಗಳು, ಲಿಂಗದೇಹ

ದಾರಭ್ಯ ಸರ್ವತ್ರ ವ್ಯಾಪ್ತಿ, ಸ್ಥೂಲ ದೇಹದಲ್ಲಿ ಕ್ರಿಯಾ. ತದ್ವತ್ ಜೀವನ ಸ್ವರೂಪತಃ ಲಿಂಗದೇಹಾರಭ್ಯ ಸ್ಥೂಲದೇಹದವರಿಗೂ ವ್ಯಾಪ್ತಿ. ಕ್ರಿಯಾ ಸ್ಥೂಲದೇಹದಲ್ಲಿ ನಡೆಯುತ್ತದೆ. ಈ ಶ್ಲೋಕದಲ್ಲಿ ನಾಲ್ಕು ಶರೀರಗಳೊಳಗ ಸ್ಥೂಲ ಶರೀರದಲ್ಲಿ ಮಾತ್ರ ಹಂಸರೂಪಿ ಪರಮಾತ್ಮ ವಾಯುದೇವರು ಶ್ವಾಸರೂಪದಿಂದ ಇರ್ತಾರೆ ಎಂತ ಹೇಳಿತೇ ಹೊರ್ತು, ವಾಯುದೇವರು ನಾಲ್ಕು ಶರೀರದಲ್ಲಿ ಇದ್ದು, ಶ್ವಾಸಜಪ ಮಾಡತಾರೆ ಎಂತ ಏನೂ ಹೇಳ ಲಿಲ್ಲ. ಹಂಸರೂಪಿ ಪರಮಾತ್ಮ ಭೇಶ ಭಾಸ್ಕರರು ಶ್ವಾಸಾಭಿಮಾನಿಗಳಾಗಿ ಇರೋಣ ಎಂಬುದು ಸ್ಥೂಲದೇಹ ಆದ್ದರಿಂದಲೂ. ಕೋಶ ಧಾತುಗಳ ಲ್ಲಿರತಕ್ಕ ಭಾರತೀಪತಿ ಪ್ರಾಣದೇವರಿಗೆ ಈಶನಾದ ಹಂಸರೂಪಿ ಪರ ಮಾತ್ಮ ೨೧,೬೦೦ ಶ್ವಾಸರೂಪದಿಂದ ಇದ್ದಾನೆಂಬೋಣರಿಂದ ಎಲ್ಲಾ ಸ್ಥೂಲದೇಹದ ವಿಚಾರವಾಯಿತು. ಸಂಧಿಗತ ಪ್ರಕರಣವೂ ಸ್ಥೂಲದೇಹದ ಪ್ರಕರಣವೇ. ನಾಲ್ಕು ದೇಹಗಳೊಳಗೆ ಸ್ಥೂಲದೇಹದಲ್ಲಿ ೨೧,೬೦೦ ಶ್ವಾಸಕಾರ್ಯ ನಡೆಯತದೆ. ತದ್ರೂಪದಿಂದ ಪರಮಾತ್ಮ ಹಂಸ ರೂಪದಿಂದ ಇದ್ದಾನೆಂತಲೇ ಆಯಿತು. ಸ್ಥೂಲದೇಹದಲ್ಲಿ ಹಂಸಮಂತ್ರ ಮಾಡತಕ್ಕವರು ವಾಯುದೇವರೇನೇ. ಸಿದ್ಧಾಂತವಾದ ಕಾಲಕ್ಕೂ ಅದು ಸಂಧ್ಯಂತರದಿಂದಲೇ ಸಿದ್ಧಿಯೇ ಹೊರತು, ಶ್ಲೋಕದಲ್ಲಿ ವಾಯುದೇವರು ಸ್ಥೂಲದೇಹದಲ್ಲಿ ಹಂಸಮಂತ್ರ ಮಾಡತಾರೆ ಎಂಬೋದು ಸ್ಪಷ್ಟವಾಗಿ ಹೇಳಲಿಲ್ಲ. ನಾಲ್ಕು ದೇಹಗಳಲ್ಲಿ ಸೂರ್ಯ ಚಂದ್ರಾದಿಗಳು ಹೇಳಲಿಕ್ಕೆ ಇಲ್ಲ, ಸೂರ್ಯಚಂದ್ರರ ದ್ವಾರಾ ತುಂಬಿಹನು ಎಂದರೆ, ಸ್ಥೂಲಕ್ಕೆ ಹೇಳಬೇಕು. ಆದ್ದರಿಂದ ಶ್ವಾಸಮಂತ್ರ ವಾಯುದೇವರು ಮಾಡತಕ್ಕದ್ದು ಸ್ಥೂಲದಲ್ಲಿ ಹೊರ್ತು ಅನ್ಯತ್ರ ಇಲ್ಲ ಎಂತ ತಿಳಿಯಬೇಕು. ॥೫॥

## (೨) "ಭಾವಪ್ರಕಾಶಿಕೆ" —ವ್ಯಾಖ್ಯಾನ :—

ಸ್ವರೂಪದೇಹ ಮೊದಲಾದ ನಾಲ್ಕು ದೇಹಗಳಲ್ಲಿ ಮುಖ್ಯಪ್ರಾಣ ದೇವರೊಳಗಿದ್ದು ಮಾಡಿಸುವ ಕೃತ್ಯವನ್ನು ಹೇಳುತ್ತಾರೆ–

ಈ ನಾಲ್ಕು ಶರೀರಗಳಲ್ಲಿ ಕೋಶಗಳು ೫. ಧಾತುಗಳು ೭. ಇವು ಗಳಲ್ಲಿ ಇರುವ ಭಾರತೀಪತಿಯಾದ ಮುಖ್ಯಪ್ರಾಣದೇವರಿಗೆ ಪತಿಯಾದ ಅಂದರೆ, ಸ್ವಾಮಿಯಾದ ಶ್ರೀ ಪರಮಾತ್ಮನು ಹಂಸರೂಪದಿಂದ ಪ್ರಾಣ ದೇವರಲ್ಲಿದ್ದು, ೨೧,೬೦೦ ಹಂಸಮಂತ್ರ ಜಪರೂಪವಾದ ಶ್ವಾಸರೂಪನಾಗಿ ಎಡಬಲ ಮೂಗುಗಳಿಂದ ಹೊರಡುವ ಶ್ವಾಸಗಳಿಗೆ ಕಾರಣರಾದ ಚಂದ್ರ ಸೂರ್ಯರ ಸಹಾಯಕನಾಗಿ, ಅವರನ್ನೂ ಪಾಲಿಸುತ್ತ. ಈ ಬ್ರಹ್ಮಾಂಡ ದಲ್ಲಿ ಸರ್ವಸ್ಥಳಗಳಲ್ಲಿಯೂ ವ್ಯಾಪ್ತನಾಗಿರುವನು. ॥೫॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ: —

"ಈ ಶರೀರೇತಿ"॥ ಪಂಚಕೋಶ, ಸಪ್ತಧಾತು ಇವುಗಳಲ್ಲಿದ್ದ ಮುಖ್ಯಪ್ರಾಣನು ಮತ್ತು ಹಂಸರೂಪಿ ಹರಿಯು ಇಬ್ಬರೂ ಇದ್ದು, ೨೧,೬೦೦ ಶ್ವಾಸಜಪ ತಾವು ಮಾಡಿ, ಜೀವರಿಂದಲೂ ಮಾಡಿಸಿ, ವಾಮ ನ್ನಾಸಾಪುಟಕ್ಕೆ ಮಾನಿಯು ಚಂದ್ರನು. ದಕ್ಷಿಣ ನಾಸಾಪುಟಕ್ಕೆ ಮಾನಿಯು ಸೂರ್ಯನು. ಇವರಿಂದಲೂ ಮಾಡಿಸುತ್ತಾರೆಂಬುದಕ್ಕೆ ಪ್ರಮಾಣ;—

**"ಸೂರ್ಯಶ್ಚ ದಕ್ಷಿಣಶ್ವಾಸೇ ವಾಮೇ ಸೋಮ ಉದಾಹೃತಃ॥"— ಎಂಬು ವಿಷ್ಣು ಪುರಾಣೋಕ್ತಿಯಿಂದ** ಚಿಂತಿಸಿದರೆ ಕೈವಿಡಿದು ಸಂರಕ್ಷಣೆ ಮಾಡುತ್ತಾ ಈ ಬ್ರಹ್ಮಾಂಡದಲ್ಲೂ, ಪಿಂಡಾಂಡದಲ್ಲೂ ವ್ಯಾಪಿಸಿದ್ದಾನೆಂಬ ತಾತ್ಪರ್ಯ ॥೫॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :—

"ಈ ಶರೀರ ಇತಿ" ॥ ಶ್ವಾಸರೂಪ ಮಂತ್ರ ಜಗಕರ್ತಾ ಹಂಸಃ। ತದ್ರೂಪಃ "ಏವಂ ವಾಯುಂ ಚ ದದೃಶುಃ ತತ್ರ ಹಂಸ ಸ್ವರೂಪಿಣಮ್॥ ಹಂಸರೂಪೌ ಚ ತೌ ದೇವೌ ಶ್ವಾಸೋಚ್ಛ್ವಾಸ ಪ್ರವರ್ತಕೌ" ॥ ಇತಿ ಚ ಐತರೇಯೇ । ಭೇಶಃ—ಇಂದುಃ ॥ ವಾಯೋಃ ಸ್ಥಿತಿಃ ಷಟ್‌ಪ್ರಶ್ನೇ ಕಥಿತಾ॥ ಹರೇಶ್ಚ । "ಪ್ರಭಾಸ್ಮಿ ಶಶಿ ಸೂರ್ಯಯೋಃ" — ಇತ್ಯನ್ಯತ್ರ ಸಿದ್ಧಾ ॥೫॥

**ಕನ್ನಡಾರ್ಥ :–**

"ಈ ಶರೀರ ಚತುಷ್ಟಯಗಳೊಳು" — ಎಂಬ ಪ್ರಸಕ್ತ ಪದ್ಯದಿಂದ ೨೧,೬೦೦ ಸಂಖ್ಯಾಕವಾದ ಶ್ವಾಸಮಂತ್ರಗಳನ್ನು ಜಪಿಸುವವನು **"ಹಂಸ"** ಎಂದು ನಿರೂಪಿಸುತ್ತಾರೆ. ಹಂಸರೂಪಿ ಶ್ರೀ ಪರಮಾತ್ಮನೇ ವಾಯುದೇವರಲ್ಲಿ ಅಂತರ್ಗತನಾಗಿದ್ದು, ಶ್ವಾಸಜಪಗಳನ್ನು ಅವರ ದ್ವಾರಾ ಮಾಡಿ ಮಾಡಿಸುತ್ತಾನೆ.

**ಐತರೇಯಭಾಷ್ಯದಲ್ಲಿ**"–ವಾಯುವನ್ನೂ, ಅಲ್ಲಿ ವಿರಾಜಮಾನನಾಗಿರುವ ಶ್ರೀ ಹಂಸರೂಪಿ ಪರಮಾತ್ಮನನ್ನೂ ನೋಡಿದರು. ಹಂಸರೂಪಿ ಶ್ರೀಹರಿಯೂ ಮತ್ತು ಅವನ ಪ್ರಥಮಾಂಗರೂಪನಾದ ಶ್ರೀ ವಾಯುದೇವರೂ "ಹಂಸ"ನೆಂದು ಕರೆಯಲ್ಪಡುತ್ತಾರೆ. ಈ ಹಂಸ ವಾಯುಗಳೀರ್ವರೂ ಶ್ವಾಸ ಪ್ರವರ್ತಕರು"- ಎಂದು ನಿರೂಪಿತವಾಗಿದೆ. ಭೇಶ=ಚಂದ್ರ. "ವಾಯುದೇವರು ಚಂದ್ರನಲ್ಲಿ ಇರುವರು"– ಎಂದು **ಷಟ್‌ಪ್ರಶ್ನೋಪನಿಷತ್ತಿನಲ್ಲಿ** ನಿರೂಪಿಸಲ್ಪಟ್ಟಿದೆ. ಹರಿಯು ಚಂದ್ರನಲ್ಲಿರುವರು ಎಂಬ ವಿಷಯವು **"ಪ್ರಭಾಸ್ಮಿ ಶಶಿ ಸೂರ್ಯಯೋಃ"– ಎಂಬ ಗೀತಾವಾಕ್ಯಗಳಲ್ಲಿ** ಸುಪ್ರಸಿದ್ಧ.

**(ಆ) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–**

ಚತುಶ್ಶರೀರಗತ ಕೋಶ ಧಾತುಸ್ಥ ಪ್ರಾಣೇಶ ರೂಪೋಪಾಸನೆ ನಿರೂಪಿಸಿರುತ್ತಾರೆ. ಉಕ್ತ ನಾಲ್ಕು ಶರೀರಗಳಲ್ಲೂ, ಪಂಚಕೋಶ, ಎಂದರೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದ ಮಯಗಳೆಂಬ ಐದು ಕೋಶಗಳಲ್ಲಿಯೂ, ಸಪ್ತ ಧಾತುಗಳಲ್ಲೂ, ಭಾರತೀ ದೇವಿಯ ಪ್ರಾಣೇಶ್ವರನಾದ, ಪ್ರಧಾನ ವಾಯುದೇವರೆಂಬ ಶ್ರೀ ಮುಖ್ಯ ಪ್ರಾಣನು **"ಹಂಸಸ್ಸೋಽಹಂ ಸ್ವಾಹಾ"** ಎಂಬ ಹಂಸಮಂತ್ರ ಶ್ವಾಸ ರೂಪ ಶ್ವಾಸಜಪಗಳನ್ನು, ಭಾಸ್ಕರನೆಂಬ ಸೂರ್ಯ, ಭೇಶನೆಂಬ ನಕ್ಷತ್ರೇಶ ಚಂದ್ರ, ಈ ಎರಡು ದೇವತೆಗಗಳನ್ನು ಅನುಗ್ರಹಿಸುವುದಕ್ಕಾಗಿ, ಬಲ

ಎಡಭಾಗ ಶ್ವಾಸಗಳಲ್ಲಿ ಸೂರ್ಯಸ್ವರ, ಚಂದ್ರ ಸ್ವರಗಳೇ ಎಂದು ಹೆಸರುಳ್ಳ ೨೧,೬೦೦ ಶ್ವಾಸಜಪಗಳನ್ನು ಈ ಬ್ರಹ್ಮಾಂಡಾಂತರ್ಗತ ಸರ್ವ ಜೀವರ ದೇಹಗಳಲ್ಲೂ ಮಾಡುತ್ತಾ, ಸೂರ್ಯಸ್ವರಗಳಿಗೆ ತಾನೇ ಅಭಿಮಾನಿಯಾಗಿಯೂ, ಚಂದ್ರಸ್ವರಗಳಿಗೆ "ರಯೀ" ಎಂಬ ಭಾರತೀದೇವಿಯು ಅಭಿಮಾನಿಯಾಗಿಯೂ ಇದ್ದು, ಭಾರತೀ ಸಮೇತ ವ್ಯಾಪ್ತನಾಗಿರುವನೆಂದು ವಿವರಿಸುತ್ತಾರೆ. ಉಪಾಸಕರು ಪ್ರಾಣದೇವರ ಮಹಿಮೆಯನ್ನು ಈ ರೀತಿ ಧ್ಯಾನಿಸಬೇಕೆಂದು ತಾತ್ಪರ್ಯ. ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯಗಳಲ್ಲಿ ಸಾಧನಶರೀರವೆಂದೆನಿಪ ಈ ಸ್ಥೂಲದೇಹದಲ್ಲಿ ಬಿಂಬರೂಪಿ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದು, ನಡೆಯಿಸುವ ಕ್ರಿಯಾ ವಿಶೇಷಗಳನ್ನು ತಿಳಿಸಿ, ಈಗ ಪ್ರಸಕ್ತ ಪದ್ಯದಿಂದ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲಶರೀರಗಳಲ್ಲಿ ಹಂಸರೂಪಿ ಶ್ರೀ ಪರಮಾತ್ಮನು ಶ್ರೀ ಮುಖ್ಯಪ್ರಾಣದೇವರ ದ್ವಾರ ಮಾಡಿ ಮಾಡಿಸುತ್ತಿರುವ ಶ್ವಾಸರೂಪವಾದ ವ್ಯಾಪಾರವನ್ನು ತಿಳಿಸುತ್ತಾರೆ.

(೧) ಶರೀರಗಳು ನಾಲ್ಕು ಪ್ರಕಾರ ಇವೆ. (1) ಜೀವನ ಸ್ವರೂಪ ದೇಹ. ಇದು ಅನಾದಿ ಮತ್ತು ನಿತ್ಯ. ಅಪ್ರಾಕೃತಗುಣಯುಕ್ತನಾಗಿ ಚಿದಾನಂದಾತ್ಮಕವಾಗಿದ್ದು. ಬಿಂಬನಾದ ಶ್ರೀಹರಿಗೆ ಸ್ವರೂಪ ದೇಹನೇ ಉಪಾಧಿಯು. (2) ಸ್ವರೂಪ ದೇಹದ ಮೇಲೆ ಆವರಣರೂಪದಲ್ಲಿರುವ ಲಿಂಗದೇಹ, ಇದು ತ್ರಿಗುಣಾತ್ಮಕವಾದದ್ದು. ಷೋಡಶಕಳಾಯುಕ್ತವಾಗಿದೆ. ಜೀವರಿಗೆ ಪ್ರತಿಬಂಧಕ ರೂಪದಲ್ಲಿರುವ ಸಂಸಾರಕ್ಕೆ, ಕಾರಣವಾದ ಅನಾದಿ ಕರ್ಮಬೀಜವು ಇರುವುದು ಈ ದೇಹದಲ್ಲಿಯೇ. (3) ಲಿಂಗದೇಹಕ್ಕೆ

ಆವರ್ಕವಾಗಿ ಅನಿರುದ್ಧ ಶರೀರವು. ಜೀವನ ಸಂಸ್ಕಾರ ರೂಪವಾದ ಪಾಪ, ಪುಣ್ಯ ಮತ್ತು ಮಿಶ್ರ ಕರ್ಮಗಳ ದೆಸೆಯಿಂದಾಗಿ, ಜೀವನ ಜನ್ಮಾಂತರಗಳಿಗೆಕಾರಣ ಭೂತವಾದದ್ದು. (4) ಚತುರ್ವಿಂಶತಿ ತತ್ತ್ವಗಳಿಂದ ಯುಕ್ತವಾದ ಸ್ಥೂಲಶರೀರ, ದೇವಮಂದಿರವೆನಿಪ ಈ ಸ್ಥೂಲಶರೀರವು ಸಾಧನ ಶರೀರವಾಗಿದೆ. ಇದರ ಮೂಲಕವೇ ದೇಹಗತ ವ್ಯಾಪಾರಗಳು ನಮಗೆ ಪ್ರತ್ಯಕ್ಷ ಗೋಚರವಾಗಿ ನಡೆಯುತ್ತಿರುವುವು.

(೨) ಪೂರ್ವೋಕ್ತ ನಾಲ್ಕು ಶರೀರಗಳಲ್ಲಿ ಪಂಚಕೋಶಗಳೂ ಮತ್ತು ಸಪ್ತಧಾತುಗಳೂ ಇವೆ. ಪಂಚಕೋಶಗಳು ಐದು ಪ್ರಕಾರ :-
(೧) ಅನ್ನಮಯ ಕೋಶ, (2) ಪ್ರಾಣಮಯ ಕೋಶ. (3) ಮನೋಮಯ ಕೋಶ. (4) ವಿಜ್ಞಾನಮಯ ಕೋಶ ಮತು (5) ಆನಂದಮಯ ಕೋಶ ಇವು ಸ್ಥೂಲದೇಹಾರಭ್ಯ ಸ್ವರೂಪ ದೇಹಪರ್ಯಂತ ಸ್ಥೂಲ, ಸೂಕ್ಷ್ಮ, ಸೂಕ್ಷತರ, ಸೂಕ್ಷ್ಮತಮವಾಗಿರುವುವು.

ದೇಹಗತಸಪ್ತ ಧಾತುಗಳು ಏಳು ಪ್ರಕಾರ :-

(1) ಚರ್ಮ (2) ತ್ವಕ್ಕು (3) ಮಾಂಸ (4) ಮೇದಸ್ಸು (5) ಮಜ್ಜಾ (6) ರುಧಿರ ಮತ್ತು (7) ಅಸ್ಥಿ. ಈ ಸಪ್ತಧಾತುಗಳು ದೇಹಕ್ಕೆ ಕ್ರಮವಾಗಿ ಆವರಣರೂಪದಲ್ಲಿವೆ.

(೩) ಪೂರ್ವೋಕ್ತ ದೇಹಗಳಲ್ಲಿ ಹಂಸರೂಪಿ ಶ್ರೀ ಪರಮಾತ್ಮನು ಮುಖ್ಯ ಪ್ರಾಣದೇವರಲ್ಲಿ ಅಂತರ್ಗತನಾಗಿದ್ದು, ಅವರ, ದ್ವಾರಾ ಶ್ವಾಸ ಕ್ರಿಯೆಯನ್ನು ಮಾಡಿ ಮಾಡಿಸುತ್ತಿರುವನು. ಶ್ರೀ ಭಾರತೀದೇವಿಯರ ಪತಿಯು ಮುಖ್ಯ ಪ್ರಾಣದೇವರು (ಭಾರತೀಪ) ಇವರಿಗೆ **ಪ್ರಾಣೇಶ** ಎಂದು ಹೆಸರು. "ಪ್ರಾಣ" ಎಂದರೆ ಜೀವವರ್ಗ. ಅವರಿಗೆ "ಈಶ" ಎಂದರೆ ನಿಯಾಮಕರು. ಅಂದರೆ ಜೀವೋತ್ತಮರು ಎಂದರ್ಥ. "ಪ್ರಾಣ" ಶಬ್ದಕ್ಕೆ ಮುಖ್ಯ ಪ್ರಾಣರಾದ ಭಾರತೀರಮಣರಾದ ಶ್ರೀ ವಾಯುದೇವರು ಎಂದು ಪರಿಗಣಿಸಿದಾಗ ಅವರಿಗೆ "ಈಶ" ಎಂದರೆ ನಿಯಾಮಕನು, ವಾಯ್ವಂತರ್ಗತ

ಹಂಸರೂಪಿ ಶ್ರೀ ಪರಮಾತ್ಮನೆಂದು ಪರಮ ಮುಖ್ಯ ವೃತ್ತಿಯಿಂದ ತಿಳಿದು ತಿಳಿದುಕೊಳ್ಳಬೇಕು.

(೪) ಪೂರ್ವೋಕ್ತ ದೇಹಗಳಲ್ಲಿ ಹಂಸರೂಪಿ ಶ್ರೀಪರಮಾತ್ಮನು ಭಾರತೀರಮಣ ಮುಖ್ಯ ಪ್ರಾಣಾಂತರ್ಗತನಾಗಿ ಇದ್ದು, ಶ್ವಾಸಕ್ರಿಯೆಗಳನ್ನು ಮಾಡಿ ಮಾಡಿಸುತ್ತಿರುವನು, ಈ ಶ್ವಾಸಕ್ರಿಯಾರೂಪವಾದ ವ್ಯಾಪಾರದ ವಿವರ ಇಂತಿದೆ.

ಶ್ವಾಸಕ್ರಿಯೆಯೇ ಜೀವರ ಪ್ರಾಣಾಧಾರರೂಪವಾದ ಕಾರ್ಯವು **"ಪರಮ ಮುಖ್ಯ ಪ್ರಾಣ ತೊಲಗಲಾದೇಹವನು ಅರಿತು ಪೆಣನೆಂದು ಪೇಳ್ವರು ಬುಧಜನ"– ಎಂದು ಶ್ರೀಪಾದರಾಜರ ವಚನ.** ಇದರಂತೆ ಎಲ್ಲಿಯವರೆವಿಗೆ ಮುಖ್ಯಪ್ರಾಣದೇವರು ಈ ಸ್ಥೂಲಶರೀರದಲ್ಲಿದ್ದು ಶ್ವಾಸಕ್ರಿಯೆಯನ್ನು ನಡೆಸುತ್ತಿರವರೋ, ಅಲ್ಲಿಯವರೆಗೆ ಈ ದೇಹಗತ ಇಂದ್ರಿಯಗಳ ವ್ಯಾಪಾರ. ಮುಖ್ಯ ಪ್ರಾಣರು ಈ ದೇಹವನ್ನು ಜೀವಸಹಿತ ಬಿಟ್ಟು ಹೊರಟಾಗ, ದೇಹವು ನಿಶ್ಚೇಷ್ಟಿತವಾಗಿ ನಿಷ್ಕ್ರಿಯವಾಗಿ ಬೀಳುವುದು. ಇದೇ ಮುಖ್ಯ ಪ್ರಾಣದೇವರ ಮಹಿಮಾ. ಹಂಸರೂಪಿ ಶ್ರೀ ಪರಮಾತ್ಮನು ಮುಖ್ಯ ಪ್ರಾಣಾಂತರ್ಗತನಾಗಿ ಇದ್ದು ಮಾಡಿ ಮಾಡಿಸುವ ಶ್ವಾಸಕ್ರಿಯೆಯಲ್ಲಿ ಮೂರು ಹಂತಗಳಿವೆ. (1) ಹೊರಗಿನ ಶುದ್ಧ ಗಾಳಿಯನ್ನು ನಾಸಿಕಾ ದ್ವಾರಾ ಒಳಗೆ ತೆಗೆದುಕೊಳ್ಳುವುದು. ಇದಕ್ಕೆ **ಪೂರಕಕ್ರಿಯೆ** ಎಂದು ಹೆಸರು. (2) ಒಳಗೆ ಸೇದಲ್ಪಟ್ಟ ಗಾಳಿಯು ಶ್ವಾಸಕೋಶದ ಸೂಕ್ಷ್ಮ ಕೋಶಗಳಲ್ಲಿ ನುಗ್ಗಿ, ರಕ್ತವನ್ನು ಪರಿಶುದ್ಧಿಗೊಳಿಸಿ ನಿರ್ಮಲೀಕರಣ ಮಾಡುವುದು. ಆಗ ಶ್ವಾಸದ ವಿರಾಮಕಾಲವು. ಇದಕ್ಕೆ **ಕುಂಭಕ** ಎನ್ನುವರು. (3) ಮಲಿನ ಗಾಳಿಯು ನಾಸಿಕ ದ್ವಾರಾ ಹೊರಗೆ ಬರುವುದು. ಇದು ನಿಶ್ವಾಸಕ್ರಿಯೆ. ಇದಕ್ಕೆ **ರೇಚಕ** ಎಂದು ಹೆಸರು.

ಇಂತು ಪೂರಕ ಕುಂಭಕ ಮತ್ತು ರೇಚಕಗಳೆಂಬ ಕ್ರಿಯೆಯು ಮೂರು ಹಂತಗಳಲ್ಲಿ ನಡೆಯುವುದಕ್ಕೆ ಒಂದು **ಆವರ್ತನ** ಎನ್ನುವರು.

ಗಣನೆಯ ಪ್ರಕಾರ ಒಂದು ಆವರ್ತನ ನಡೆಯುವುದಕ್ಕೆ ಬೇಕಾಗುವ ಕಾಲಾವಧಿ ೪ ಸೆಕೆಂಡುಗಳು. ಅಂದರೆ, ಒಂದು ನಿಮಿಷಕ್ಕೆ ೧೫ ಆವರ್ತನಗಳಾಗುವುವು. (೬೦ ಸೆಕೆಂಡುಗಳು ÷ ೪ = ೧೫) ಅಲ್ಲಿಗೆ ಒಂದು ತಾಸಿಗೆ (ಒಂದು ಘಂಟೆ) ೬೦ × ೧೫ = ೯೦೦ ಆವರ್ತನಗಳಾಗುವುವು. ಒಂದು ದಿವಸಕ್ಕೆ ೨೪ ತಾಸುಗಳು. ಅಲ್ಲಿಗೆ, ಒಂದು ದಿವಸದಲ್ಲಿ ೯೦೦ × ೨೪ = ೨೧,೬೦೦ ಇದೇ ಒಂದು ದಿನದ ಅವಧಿಯಲ್ಲಿ ನಡೆಯುತ್ತಿರುವ ಶ್ವಾಸಕ್ರಿಯೆ. ಇದರ ನಿಯಂತ್ರಣ ದಿಂದಲೇ ಮಾನವ ಆಯುಃಪ್ರಮಾಣದ ನಿರ್ಧಾರ.

**ತಂತ್ರಸಾರದಲ್ಲಿ ಇದಕ್ಕೆ ಪ್ರಮಾಣ :—**

**"ಪೂರ್ವೇದ್ಯುಃ ಪ್ರಾತಃ ಸೂರ್ಯೋದಯಮಾರಭ್ಯ ಅದ್ಯ ಸೂರ್ಯೋದಯ ಪರ್ಯಂತಂ ಮದ್ದೇಹಸ್ಥಿತ ಮುಖ್ಯ ಪ್ರಾಣಕೃತೇನ ಮುಖ್ಯ ಪ್ರಾಣ ಪ್ರೇರಿತೇನ ಮಯಾಕೃತೇನ ಚ ಷಟ್‌ಶತಾಧಿಕ ಏಕ ವಿಂಶತಿ ಸ್ಸಹಸ್ರಸಂಖ್ಯಾಕ ಶ್ವಾಸರೂಪ ಷಡಕ್ಷರ ಹಂಸಮಹಾಮಂತ್ರ ಜಪೇನ ಭಗವಾನ್ ಮುಖ್ಯ ಪ್ರಾಣಾಂತರ್ಗತ ಹಂಸರೂಪಿ ಶ್ರೀ ಲಕ್ಷ್ಮೀ ನಾರಾಯಣಃ ಪ್ರಿಯತಾಂ ಪ್ರಿಯತೋ ವರದೋ ಭವತು ||"**

ಈ ಮಂತ್ರದ ಅರ್ಥ ಹೀಗಿದೆ :–

**ಪೂರ್ವೇದ್ಯುಃ** = ಹಿಂದಿನ ದಿವಸದ **ಪ್ರಾತಃ** = ಪ್ರಾತಃ ಕಾಲದ **ಸೂರ್ಯೋದಯಮಾರಭ್ಯ** = ಸೂರ್ಯನ ಉದಯದಿಂದ ಪ್ರಾರಂಭಿಸಿ **ಅದ್ಯ** = ಇಂದಿನ ದಿನದ **ಸೂರ್ಯೋದಯ ಪರ್ಯಂತಂ** = ಸೂರ್ಯೋದಯ ದವರೆಗೆ (ಅಲ್ಲಿಗೆ ೨೪ ತಾಸುಗಳ ಒಂದು ದಿನವಾಯಿತು) **ಮದ್ದೇಹಸ್ಥಿತ** = ನನ್ನ ದೇಹದಲ್ಲಿ ಇರುವ **ಮುಖ್ಯ ಪ್ರಾಣೇನ ಕೃತೇನ** = ಮುಖ್ಯ ಪ್ರಾಣಾಂತರ್ಗತ ಹಂಸರೂಪಿ ಶ್ರೀಪರಮಾತ್ಮನಿಂದ ಮಾಡಿಸಲ್ಪಟ್ಟ **ಮುಖ್ಯ ಪ್ರಾಣ ಪ್ರೇರಿತೇನ** = ವಾಯುದೇವರ ದ್ವಾರಾ ಪ್ರೇರಿತನಾದ **ಮಯಾಕೃತೇನ** = ನನ್ನ ಸ್ಥೂಲದೇಹದಲ್ಲಿ ನಡೆಯಲ್ಪಡುತ್ತಿರುವ **ಷಟ್‌ಶತಾಧಿಕ** = ೬೦೦ ಹೆಚ್ಚಾದ (ಷಟ್ = ಆರು, ಶತ = ನೂರು ಅಂದರೆ

ಷಟ್‌ಶತ ಆರುನೂರು ಎಂದರ್ಥ) **ಏಕವಿಂಶತಿಸ್ಸಹಸ್ರ ಸಂಖ್ಯಾಕ**=ಇಪ್ಪತ್ತೊಂದುಸಾವಿರ ಸಂಖ್ಯಾಕವಾದ, ಅಂದರೆ ೨೧,೦೦೦+೬೦೦=೨೧,೬೦೦ ಸಂಖ್ಯಾಕವಾದ **ಶ್ವಾಸರೂಪ**=ಶ್ವಾಸಕ್ರಿಯಾರೂಪವಾದ **ಷಡಕ್ಷರ**=ಆರು ಅಕ್ಷರಗಳಿಂದ ಯುಕ್ತವಾದ **ಹಂಸಮಹಾಮಂತ್ರಜಪೇನ**=ಹಂಸ ಮಂತ್ರ ಜಪದ ದ್ವಾರಾ **ಭಗವಾನ್**=ಷಡ್ಗುಣೈಶ್ವರ್ಯ ಸಂಪನ್ನನಾದ **ಮುಖ್ಯ ಪ್ರಾಣಾಂತರ್ಗತ**=ಭಾರತೀರಮಣ ಮುಖ್ಯ ಪ್ರಾಣದಲ್ಲಿ ಅಂತರ್ಯಾಮಿಯಾಗಿರುವ **ಹಂಸರೂಪಿ**=ಹಂಸನಾಮಕನಾದ **ಶ್ರೀಲಕ್ಷ್ಮೀನಾರಾಯಣಃ**=ಶ್ರೀ ಲಕ್ಷ್ಮೀಪತಿಯಾದ ಮೂಲರೂಪಿ ಶ್ರೀಮನ್ನಾರಾಯಣನು ಸುಪ್ರೀತನಾಗಲಿ.

ಶ್ವಾಸಕ್ರಿಯಾರೂಪವಾದ ಜಪಕ್ಕೆ **ಹಂಸಮಂತ್ರ**ವೆಂದು ಹೆಸರು. **"ಸರ್ವಸ್ಯ ದುಃಖ ಹಂತೃತ್ವಾದ್ಧಂಸಃ"**- ಎಂಬ ಅರ್ಥವಿಶ್ಲೇಷಣೆಯಿಂದ "ಮುಕ್ತಿಯೋಗ್ಯಚೇತನರ ದುಃಖವನ್ನು ಪರಿಹಾರ ಮಾಡುವುದರಿಂದ ಶ್ರೀ ಪರಮಾತ್ಮನಿಗೆ **"ಹಂಸ"**-ಎಂದು ಹೆಸರು. ಇಂತಹ ಹಂಸರೂಪಿ ಶ್ರೀ ಪರಮಾತ್ಮನು ಮುಖ್ಯಪ್ರಾಣ ದೇವರ ದ್ವಾರಾ ಮಾಡಿ ಮಾಡಿಸುತ್ತಿರುವ ಹಂಸಮಂತ್ರವು ಷಡಕ್ಷರೀ ಮಂತ್ರವು, ಅಂದರೆ ಆರು ಅಕ್ಷರಗಳಿಂದ ಯುಕ್ತವಾಗಿದೆ "**ಹಂಸಸ್ಸೋಽಹಂಸ್ವಾಹಾ**"-ಎಂದು ಹಂಸ-ಸೋಽಹಂ-ಸ್ವಾಹಾ ಎಂಬ ಆರುವರ್ಣಗಳಿಂದ ಘಟಕವಾಗಿದೆ. ೭೨ ಮಹಾಮಂತ್ರಗಳ ಪೈಕಿ ಪೂರ್ವೋಕ್ತ ಹಂಸಮಂತ್ರವೂ ಒಂದು.

(೫) ಪೂರ್ವೋಕ್ತ ಶ್ವಾಸಕ್ರಿಯಾರೂಪವಾದ ವ್ಯಾಪಾರದಲ್ಲಿ ಸೂರ್ಯ ಮತ್ತು ಚಂದ್ರ ಇವರಿಬ್ಬರ ಪಾತ್ರವನ್ನು ತಿಳಿಸುತ್ತಾರೆ. ನಮ್ಮ ದೇಹದ ಬಲಭಾಗದಲ್ಲಿ ಪಿಂಗಳಾನಾಡಿಯಿಂದ ಬರುವ ೩೬,೦೦೦ ನಾಡಿಗಳಿವೆ. ಇವುಗಳಿಗೆ **ದಿವಾನಾಡಿ**ಗಳೆಂದು ಹೆಸರು. ಪುರುಷನಾಡಿಗಳೆನಿಪ ಈ ದಿವಾನಾಡಿಗಳಿಗೆ **ಸೂರ್ಯನು (ಭಾಸ್ಕರ)** ಶ್ವಾಸಾಭಿಮಾನಿಯು. ಹಂಸರೂಪಿ ಶ್ರೀ ಪರಮಾತ್ಮನಿಂದ ಪ್ರೇರಿತನಾಗಿ ಮುಖ್ಯಪ್ರಾಣದೇವರು ಸೂರ್ಯಾಂತರ್ಗತರಾಗಿದ್ದು, ಪಿಂಗಳಾನಾಡಿ ಪ್ರಧಾನವಾದ ೩೬,೦೦೦

ಸಂಖ್ಯಾಕವಾದ ದಿವಾನಾಡಿಗಳ ದ್ವಾರಾ ಹಗಲಿನಲ್ಲಿ ಶ್ವಾಸಕ್ರಿಯೆ ನಡೆಯಿಸುವರು.

ದೇಹಗತ ಎಡಪಾರ್ಶ್ವದಲ್ಲಿ ಇಡಾನಾಡಿಯಿಂದ ಬರುವ ೩೬,೦೦೦ ನಾಡಿಗಳಿಗೆ **ರಾತ್ರಿನಾಡಿ**ಗಳೆಂದು ಹೆಸರು. ಈ ನಾಡೀವ್ಯೂಹವನ್ನು ಸ್ತ್ರೀ ನಾಡಿಗಳೆಂದು ಕರೆಯುವರು. ಇದಕ್ಕೆ ಭೇಶ ಅಂದರೆ ಚಂದ್ರನು ಶ್ವಾಸಾಭಿಮಾನಿಯು (ಭ=ನಕ್ಷತ್ರಗಳು; ಈಶ=ಪ್ರಭು ಅಂದರೆ ನಕ್ಷತ್ರಾಧಿಪತಿಯಾದ ಚಂದ್ರನು) ಹಂಸರೂಪಿ ಶ್ರೀಪರಮಾತ್ಮನಿಂದ ಪ್ರೇರಿತರಾಗಿ ಮುಖ್ಯಪ್ರಾಣದೇವರು ಭೇಶ ನಾಮಕ ಚಂದನ್ರಲ್ಲಿ ಅಂತರ್ಗತರಾಗಿದ್ದು. ರಾತ್ರಿ ಕಾಲದಲ್ಲಿ **"ರಯೀ"** ನಾಮಕರಾದ ಶ್ರೀ ಭಾರತೀ ದೇವಿಯರ ದ್ವಾರಾ ಶ್ವಾಸಕಾರ್ಯಗಳನ್ನು ನಡೆಯಿಸುವರು. ಇಂತು ೩೬,೦೦೦ ದಿವಾನಾಡಿಗಳು (ಸೂರ್ಯ) +೩೬,೦೦೦ ರಾತ್ರಿ ನಾಡಿಗಳು (ಭೇಶ ನಾಮಕ ಚಂದ್ರ) =೭೨.೦೦೦ ಸಂಖ್ಯಾಕವಾದ ಸ್ಥೂಲದೇಹಗತ ನಾಡಿಗಳ ದ್ವಾರಾ ಹಂಸರೂಪಿ ಶ್ರೀ ಪರಮಾತ್ಮನು ಮುಖ್ಯ ಪ್ರಾಣಾಂತರ್ಗತನಾಗಿ ಸೂರ್ಯ ಮತ್ತು ಚಂದ್ರರ ದ್ವಾರಾ ದಿನಕ್ಕೆ ೨೧,೬೦೦ ಸಂಖ್ಯಾಕವಾದ ಹಂಸಮಂತ್ರ ಜಪರೂಪವಾದ ಶ್ವಾಸ ಕ್ರಿಯೆಗಳನ್ನು ನಡೆಯಿಸುತ್ತಿರುವನು.

ಈ ರೀತಿ ನಿತ್ಯಾನುಸಂಧಾನ ಮಾಡುತ್ತಿರುವ ಜೀವರಾಶಿಯನ್ನು ಕೈ ಪಿಡಿದು ಉದ್ಧರಿಸುವನು, ಇಂತಹ ಕರಾವಲಂಬನದಿಂದ ಉದ್ಧರಿಸುವ ಆ ಪರಮಕರುಣಾಳು ಭಗವಂತನು ಸ್ಥೂಲರೂಪವಾದ ಈ ಬ್ರಹ್ಮಾಂಡದಲ್ಲಿ ಮತ್ತು ಪಿಂಡಾಂಡರೂಪವಾದ ಈ ದೇಹದಲ್ಲಿ ಸರ್ವ ಸ್ಥಳಗಳಲ್ಲಿಯೂ ಸರ್ವಾಂಗಗಳಲ್ಲಿಯೂ ವ್ಯಾಪಿಸಿರುವನು ಎಂದು ತಾತ್ಪರ್ಯ. ಬ್ರಹ್ಮಾಂಡವನ್ನು ದಾಸರಾಯರು **"ಸರೋಜ ಭವಾಂಡದೊಳು"** ಎಂದಿದ್ದಾರೆ. ಅಂದರೆ ಸರೋಜ=ಪದ್ಮನಾಭರೂಪ ಶ್ರೀಪರಮಾತ್ಮನ ಅಪ್ರಾಕೃತವಾದ ನಾಭಿ ಎಂಬ ಮಡುವಿನಿಂದ ಉತ್ಪತ್ತಿಯಾದ ಸುವರ್ಣಾತ್ಮಕವಾದ ಚತುರ್ದಶ ದಳಯುಕ್ತವಾದ ಕಮಲ. ಭವ=ಇಂತಹ ನಾಭೀಕಮಲದಲ್ಲಿ ಉತ್ಪತ್ತಿಯಾದವರು ಚತುರ್ಮುಖ ಬ್ರಹ್ಮದೇವರು (ಕಮಲೋದ್ಭವರು) ಅಂಡ= ಅವರ ಶರೀರರೂಪವಾದ **ಬ್ರಹ್ಮಾಂಡವು** ॥೫॥

# ಪದ್ಯ (೬)

**ಮೂಲ :-**

**ಶಿರಗಳೈದೆರಡು ಬಾಹುಗ ।**
**ಳೆರೆಡು ಪಾದಗಳೊಂದು ಮಧ್ಯೋ ।**
**ದರದಿ ಶೋಭಿಪ ವಾಙ್ಮನೋಮಯನೆನಿಪ ನಿತ್ಯದಲಿ ॥**
**ಕರಣ ಧಾತುಗಳಲ್ಲಿ ಎಪ್ಪ ।**
**ತ್ತೆರಡು ಸಾವಿರ ನಾಡಿಗಳಲಿ ।**
**ಪ್ಪರವಿದೂರನು ಭಾರತ ಪ್ರತಿಪಾದ್ಯನೆಂದೆನಿಸಿ ॥೬॥**

**ಅವತರಣಿಕೆ :-**

ಈ ಸ್ಥೂಲಶರೀರದಲ್ಲಿ ವಾಕ್ ಮತ್ತು ಮನೋರೂಪಿಯಾದ ಶ್ರೀ ಪರಮಾತ್ಮನ ರೂಪೋಪಾಸನಕ್ರಮವನ್ನು ತಿಳಿಸುತ್ತಾರೆ. **"ಶಿರಗಳೈದೆರಡು"** ಎಂಬ ಪ್ರಸಕ್ತ ಸಂಧಿಗತ ೬ನೆಯ ಈ ಪದ್ಯದಿಂದ.

ಸರ್ವ ಚೇತನರ ಮುಖ್ಯೇಂದ್ರಿಯಗಳಾದ ವಾಕ್ಯದಲ್ಲಿಯೂ ಮತ್ತು ಮನಸ್ಸಿನಲ್ಲಿಯೂ ಇದ್ದು, ವಾಗ್ರೂಪನಾದ ಕ್ರಿಯಾದಿಗಳನ್ನು ಮತ್ತು ಮನೋವ್ಯಾಪಾರ ರೂಪವಾದ ಕಾರ್ಯಗಳನ್ನು ಮಾಡಿ, ಮಾಡಿಸುತ್ತಿರುವುದರಿಂದ ಆ ಸಕಲ ಕಾರ್ಯಪ್ರವರ್ತಕನಾದ ಶ್ರೀಪರಮಾತ್ಮನಿಗೆ **"ವಾಙ್ಮನೋಮಯ"** ನೆಂದು ಹೆಸರು ಅಂತಹ ಪರಮಾತ್ಮನಿಗ ಪಂಚಭೂತಗಳೆಂಬ ಐದು ಶಿರಗಳು. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಂಬ ಹತ್ತು ಬಾಹ್ಯಗಳು. ಪುಣ್ಯ ಪಾಪಗಳೆಂಬ ದ್ವಂದ್ವ ಕರ್ಮಗಳೇ ಆತನ ಚರಣದ್ವಯಗಳು. ಒಂದೊಂದು ವಸ್ತುವನ್ನೂ ಉದ್ದೇಶಿಸಿ, ಯೋಚಿಸಿ ನುಡಿಯುವುದೇ ಮಧು

ದೇಹವೆಂಬ ಉದರವುಳ್ಳವನು. ಇಂತು ಪರಿಶೋಭಿತನಾದ ವಾಙ್ಮನೋಮಯ ರೂಪನಾದ ಶ್ರೀಪರಮಾತ್ಮನು ದಶೇಂದ್ರಿಯಗಳಲ್ಲಿ ಮತ್ತು ಸಪ್ತ ಧಾತುಗಳಲ್ಲಿ ವಿದ್ಯಮಾನವಾಗಿದ್ದು, ಈ ದೇಹಾದ್ಯಂತ ವ್ಯಾಪಿಸಿರುವ ೭೨,೦೦೦ ನಾಡಿಗಳಲ್ಲಿದ್ದು, ನಾಡೀಗತ ವ್ಯಾಪಾರಗಳನ್ನು ನಾಡ್ಯಭಿಮಾನಿಗಳ ದ್ವಾರಾ ಮಾಡಿ ಮಾಡಿಸುತ್ತಿರುವ ಮಹಿಮಾಸಂಪನ್ನನಾದ ಆ ಪರಮಾತ್ಮನು ಸಮಸ್ತ ದೋಷವಿದೂರನು. ಪಂಚಮವೇದವೆಂದು ಪ್ರಸಿದ್ಧನಾದ ಶ್ರೀಮನ್ಮಹಾಭಾರತ ಗ್ರಂಥ ಪ್ರತಿಪಾದ್ಯನಾಗಿದ್ದಾನೆ ॥ ೬ ॥

**ಪ್ರತಿಪದಾರ್ಥ :-**

**ಶಿರಗಳೈದು** = ಪಂಚಭೂತಗಳೆಂಬ ಐದು ತಲೆಗಳು, (ಅಥವಾ ಶ್ರೀಮನ್ಮಹಾಭಾರತಸಹಿತ ಪಂಚವೇದಗಳೆಂಬ ಶಿರಗಳು) **ಐದೆರಡು ಬಾಹುಗಳು** = ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಂಬ ಹತ್ತು ಬಾಹುಗಳು (ಅಥವಾ ದಶೋಪನಿಷತ್ತುಗಳೇ ೧೦ ಬಾಹುಗಳು) (ಐದೆರಡು = ೫ × ೨ = ೧೦) **ಎರಡು ಪಾದಗಳು** = ಪುಣ್ಯಪಾಪಗಳೆಂಬ ಪಾದದ್ವಯಗಳು. ಶುಭಾಶುಭ ಕರ್ಮಗಳು) (ಅಥವಾ ೧೮ ಪುರಾಣಗಳು ಬಲಪಾದ ಮತ್ತು ೧೮ ಉಪಪುರಾಣಗಳು ಎಡಪಾದ) **ಒಂದು ಮಧ್ಯೋದರದಿ** = ಅಹಂಕಾರವೆಂಬ ಮನೋವೃತ್ತಿಗಳೆಂಬ ಮಧ್ಯದ ಹೊಟ್ಟೆ (ಅಥವಾ ಭಾರತಾದಿ ಯಾವತ್ತು ಅರ್ಥಗಳೂ ಸೇರಿ ಕಂಠ ಕಟಿ ಮಧ್ಯಗತವಾದ ಉದರ ಪ್ರದೇಶ). **ಶೋಭಿಪ** = ಪೂರ್ವೋಕ್ತ ಅವಯವ ವಿಶೇಷಗಳಿಂದ ಪರಿಶೋಭಾಯಮಾನನಾದ **ವಾಙ್ಮನೋಮಯನೆನಿಪ** = ವಾಗ್ರೂಪನಾದ ಕ್ರಿಯೆಯಲ್ಲಿದ್ದು ವಾಙ್ಮಯನೆಂತಲೂ ಮತ್ತು ಮನೋಗತ ವ್ಯಾಪಾರಗಳಲ್ಲಿದ್ದು ಮನೋಮಯನೆಂತಲೂ ಕರೆಯಿಸಲ್ಪಡುವ ಶ್ರೀಹರಿಯು **ನಿತ್ಯದಲಿ** = ನಿರಂತರದಲ್ಲಿ **ಕರಣ** = ಜ್ಞಾನ ಕರ್ಮೇಂದ್ರಿಯಗಳೆನಿಪ ದಶೇಂದ್ರಿಯಗಳಲ್ಲಿ **ಧಾತುಗಳು** = ತ್ವಗಾದಿ ಸಪ್ತ ಧಾತುಗಳಲ್ಲಿ **ಎಪ್ಪತ್ತೆರಡು ಸಾವಿರನಾಡಿಗಳಲಿ** = ೭೨,೦೦೦ ಸಂಖ್ಯಾಕವಾದ ನಾಡೀವ್ಯೂಹದಲ್ಲಿ **ಅರವಿದೂರನು** = ಸಮಸ್ತ ದೋಷವಿದೂರನಾದ ಶ್ರೀ ಪರಮಾತ್ಮನು **ಭಾರತ ಪ್ರತಿಪಾದ್ಯನೆಂದೆನಿಸಿ** = ನಾಲ್ಕು ವೇದಾರ್ಥ ಘಟಕ

ವಾದ "ಭಾರತಃ ಪಂಚಮೋವೇದಃ"-ಎಂದು ಪಂಚಮವೇದ ವೆಂದು ಪ್ರಖ್ಯಾತನಾದ ಶ್ರೀಮನ್ಮಹಾಭಾರತ ಇತಿಹಾಸ ಗ್ರಂಥದಲ್ಲಿ ಪರಮಮುಖ್ಯ ವೃತ್ತಿಯಿಂದ ತಾನೇ ಪ್ರತಿಪಾದ್ಯನಾಗಿ (ಗ್ರಂಥ ವಿಷಯನಾಗಿ) ಇಪ್ಪ= ಈ ಶರೀರದಲ್ಲಿ ವಿದ್ಯಮಾನನಾಗಿದ್ದಾನೆ. ॥೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶಾಸ್ತ್ರ ಸಂವಾದ ಮಾಡತಕ್ಕ ವಾಙ್ಮನೋಮಯ ರೂಪಗಳ ಹೇಳತಾರೆ, ಶಿರಗಳೈದು-ಐದು ಶಿರಗಳಲ್ಲಿ. ಐದೆರಡು ಬಾಹುಗಳು-ಐದೆರಡು ಹತ್ತು, ಹತ್ತು ಕರಗಳು, ಎರಡು ಪಾದಗಳು- ಪಾದಗಳು ಎರಡು. ಒಂದು ಮಧ್ಯೋದರದಿ-ಕಂಠ ಕಟಿ ಮಧ್ಯಗತವಾದ ಒಂದಾದ ಉದರ ಇಷ್ಟರಿಂದ, ಶೋಭಿಪ-ಪ್ರಕಾಶಮಾನನಾದ ಶ್ರೀಪರಮಾತ್ಮ, ವಾಙ್ಮಯ-ವಾಕ್ಯದಲ್ಲಿದ್ದು ವಾಙ್ಮಯ ಎಂತಲೂ. ಮನೋಮಯ-ಮನದಲ್ಲಿದ್ದು ಮನೋಮಯ ನೆಂತಲೂ, ಎನಿಪ-ಎನಿಸೋಳವಾಗತಾನೆ. ಇಂಥಾ ಪರಮಾತ್ಮ ನಿತ್ಯದಲಿ ಪ್ರತಿದಿನದಲ್ಲಿಯೂ, ಕರಣ-ದಶೇಂದ್ರಿಯಗಳಲ್ಲಿಯೂ, ಧಾತುಗಳಲ್ಲಿ- ಸಪ್ತ ಧಾತುಗಳಲ್ಲಿಯೂ, ಎಪ್ಪತ್ತೆರಡು ಸಾವಿರ ನಾಡಿಗಳೊಳು, ಅರ ವಿದೂರನು- ದೋಷದೂರನಾದ ಶ್ರೀ ಪರಮಾತ್ಮನು ವಾಙ್ಮನೋ ಮಯರೂಪನು, ಭಾರತ-ಏಕೈಕ ವೇದಕ್ಕಿಂತಲೂ ಅಧಿಕ ಎನಿಸತಕ್ಕ ನಾಲ್ಕು ಪದಾರ್ಥಗಳಿಂದ ಯುಕ್ತವಾದ "ಭಾರತಃ ಪಂಚಮೋವೇದಃ"-ಐದನೆಯ ವೇದ ಎಂದೆನಿಸತಕ್ಕ ಭಾರತದಿಂದ ಪ್ರತಿಪಾದ್ಯನೆಂದು-ಪ್ರತಿಪಾದ್ಯ ಎಂತ ಎನಿಸಿ-ಎನಿಸಿದವನಾಗಿ, ಇಪ್ಪ-ಪೂರ್ವೋಕ್ತ ಸ್ಥಾನಗಳಲ್ಲಿರೋವನಾಗಿದ್ದಾನೆ. ಶ್ರೀ ವಾಙ್ಮನೋಮಯ ರೂಪನಾದ ಪರಮಾತ್ಮನ ರೂಪ ಎಂಥಾದೆಂದರೆ;-

ಭಾರತ ಸಹಿತ ಐದು ವೇದಗಳು ಐದು ಶಿರಗಳು. ದಶ ಉಪನಿಷತ್ತುಗಳು ಹತ್ತು ಬಾಹುಗಳು (ಕರಗಳು). ಪಾದದ್ವಯಗಳು ದಾವವೆಂದರೆ-೧೮

ಪುರಾಣಗಳು ಸೇರಿ ಒಂದು ಪಾದ, ೧೮ ಉಪ ಪುರಾಣಗಳು ಸೇರಿ ಒಂದು ಪಾದ, ಅಂತು ಎರಡು ಪಾದಗಳು. ಭಾರತಾದಿ ಯಾವತ್ತು ಅರ್ಥಗಳು ಸೇರಿ ಒಂದು ಉದರ. ಏತಾದೃಶನಾದ ವಾಙ್ಮನೋಮಯನಾದ ಶ್ರೀಪರಮಾತ್ಮ ಇಂಥಾ ಅಧಿಷ್ಠಾನಾಂತರ್ಗತನಾಗಿ ವೇದಶಾಸ್ತ್ರಗತ ಅರ್ಥಗಳ ಮನೋದ್ವಾರ ವಾಕ್ಯಗಳಿಂದ ಉಚ್ಚಾರಮಾಡಸತಾನೆ. ಸಂವಾದ ಮಾಡಸತಾನೆ. ಮನೋ ವಾಕ್ಯಗಳಲ್ಲಿ ಸಂಚಾರ ಮಾಡತಾ ಇರತಾನೆ ಎಂತ ತಾತ್ಪರ್ಯ. ॥೬॥

**(೨) "ಭಾವಪ್ರಕಾಶಿಕೆ" —ವ್ಯಾಖ್ಯಾನ :—**

ವಾಙ್ಮನೋರೂಪಿಯಾದ ಪರಮಾತ್ಮನ ಉಪಾಸನಾ ಕ್ರಮವನ್ನು ಹೇಳುತ್ತಾರೆ;–

ಸಕಲ ಪ್ರಾಣಿಗಳ ಮುಖ್ಯೇಂದ್ರಿಯಗಳಾದ ವಾಕ್ಯದಲ್ಲಿಯೂ, ಮನಸ್ಸಿನಲ್ಲಿಯೂ ಇದ್ದು, ಸಕಲ ಕಾರ್ಯಪ್ರವರ್ತಕನಾಗಿರುವುದರಿಂದ, ವಾಙ್ಮಯನೆಂತಲೂ, ಮನೋಮಯನೆಂತಲೂ ಪರಮಾತ್ಮನಿಗೆ ಹೆಸರು. ಈ ವಾಙ್ಮನೋಮಯ ರೂಪಗಳನ್ನು ಉಪಾಸನಾ ಮಾಡುವ ಕ್ರಮ ಹೇಗೆಂದರೆ–

ಪಂಚಮಹಾಭೂತಗಳೇ ಈ ರೂಪಗಳಿಗೆ ಐದು ತಲೆಗಳಾಗಿಯೂ, ದಶೇಂದ್ರಿಯಗಳೇ ಹತ್ತು ಕೈಗಳಾಗಿಯೂ, ಪುಣ್ಯಪಾಪಗಳೆಂಬ ಎರಡು ಕರ್ಮಗಳೇ ಎರಡು ಪಾದಗಳೆಂತಲೂ' ಅಹಂಕಾರ ೧. ಬುದ್ಧಿ ೧ ಇವೆರಡು ಮಧ್ಯಪ್ರದೇಶವೆಂಬ ಉದರಗಳೆಂತಲೂ ಭಾವಿಸಬೇಕು. ಅಂತಹ ರೂಪದಿಂದ ಸರ್ವತ್ರ ಇರುತ್ತಿರುವನು. ಹೀಗೆ ನಿತ್ಯದಲ್ಲಿ ಇಂದ್ರಿಯಗಳಲ್ಲಿಯೂ, ನಾಡಿಗಳಲ್ಲಿಯೂ ಇದ್ದು ಪುಣ್ಯ ಪಾಪಾದಿ ಕರ್ಮ ಪ್ರೇರಕನಾದರೂ, ತಾನು "ಅರವಿದೂರ". ನಿರ್ಲೇಪನಾದ್ದರಿಂದ, ನಿರ್ದೋಷಿಯಾಗಿರುವನು. ವೇದಪ್ರತಿಪಾದ್ಯನೆಂದು ಸಕಲ ಶಾಸ್ತ್ರಗಳು ಕೊಂಡಾಡುತಿರಲು, ಭಾರತ ಪ್ರತಿಪಾದ್ಯನೆಂದು ದಾಸರಾಯರು ಪ್ರಯೋಗ ಮಾಡಿದ ಕಾರಣವೇನೆಂದರೆ, ವೇದಾಧ್ಯಯನ ಮಾಡುತ್ತಿದ್ದರೂ. ಯಥಾರ್ಥವಾದ ಅರ್ಥಲಾಭವು. ಕಷ್ಟವಾದುದರಿಂದಲೂ, ಸ್ತ್ರೀ ಶೂದ್ರಾದಿಗಳಿಗೆ ವೇದ

ಓದುವ ಅಧಿಕಾರವಿಲ್ಲದಿದ್ದರೂ, ವೇದಗಳಲ್ಲಿರುವ ಭಗವನ್ಮಹಿಮೆಗಳನ್ನು ಜನರೆಲ್ಲರೂ ತಿಳಿಯುವುದು ಕಷ್ಟವೆಂದು, ವೇದದಲ್ಲಿಯೂ ಹೇಳದಿರುವ ಭಗವನ್ಮಹಿಮೆಯು ಭಾರತದಲ್ಲಿ ಸೇರಿರುವುದೆಂದು ಆಚಾರ್ಯರ ವಾಕ್ಯವೇ ಇರುವುದು. ವೇದಾರ್ಥಗಳಿಂದ ಕೂಡಿದ ಭಾರತ ಪ್ರತಿಪಾದ್ಯನೆಂದ ಮೇಲೆ ವೇದಾದಿಗಳು ಅದರೊಳಗಡಗಿರುವುವುದೆಂಬ ಭಾವನೆಯಿಂದ ಹೀಗೆ ಹೇಳಿರುವರು. ವೇದಗಳನ್ನೋದಿದರೂ, ಮಧ್ವಶಾಸ್ತ್ರವನ್ನು ತಿಳಿದ ಹೊರತು, ವೇದಗಳಿಗೆ ಸರಿಯಾಗಿ ಅರ್ಥವಾಗುವುದಿಲ್ಲವೆಂದು ಭಾರತಪ್ರತಿಪಾದ್ಯನೆಂಬ ಪದದಿಂದ ಮಧ್ವಶಾಶ್ತ್ರಪ್ರತಿಪಾದ್ಯನೆಂದು ಅರ್ಥಮಾಡಬಹುದು.

**ಭಾಗವತ ಶೃತಿಗೀತೆಯಲ್ಲಿ— "ಭರತಮುತಶ್ಚಕಾಸಿ"** ಎಂದಿರುವುದರಿಂದ, ವಾಯುಮತಾವಂಬಿಗಳಿಂದಲೇ ಭೇದಜ್ಞಾನದಿಂದ ಶೋಭಿಸುವೆ ಎಂದು ಸ್ತುತಿಸುವರು. "ಭರತಮುತ" ಕ್ಕೆ ವಾಯುಮತವೆಂದು ಹೀಗೆ ಅರ್ಥವಾಯಿತೆಂದರೆ-

**"ರತತ್ವಾದ್ಭಾತ್ಮಕೇ ವಿಷ್ಣಾವಧಾವಾಪಿ ಸ್ವಯಂಭೃತೇಃ ।**
**ಭರತೋವಾಯುರುದ್ದಿಷ್ಟೋ ಭಾರತೀ ತತ್ಸರಸ್ವತೀ ॥"**

ಎಂಬ ಪದದಿಂದ, ಭ=ಪರಮಾತ್ಮ. ಅವನಲ್ಲಿ ರತರಾಗಿರುವುದರಿಂದ ಭರತ ಎಂದು ವಾಯುದೇವರಿಗೆ ಹೆಸರು, ಆದುದರಿಂದಲೇ **"ಭರತಸ್ಯ ಸತೀ ಭಾರತೀ"**—ಎಂದು ವಾಯುದೇವರ ಹೆಂಡತಿಗೆ "ಭಾರತೀ" ಎಂದು ಹೆಸರು. ಆದ್ದರಿಂದೆ ಭಾರತವೆಂದರೆ, ಭರತಸಂಬಂಧೀ ವಾಯುಪ್ರೋಕ್ತವಾದ ಗ್ರಂಥಗಳಿಗೆ "ಭಾರತ" ವೆಂದು ಹೆಸರು. ವಾಯುದೇವರೇ ಮಧ್ವಾಚಾರ್ಯರಾದ್ದರಿಂದ, ಭಾರತ ಪ್ರತಿಪಾದ್ಯನೆಂದು ಮಧ್ವಶಾಸ್ತ್ರ ಪ್ರತಿಪಾದ್ಯನೆಂದರ್ಥ. ಹಾಗಿಲ್ಲದಿದ್ದರೆ ಅನ್ಯಥಾಜ್ಞಾನದಿಂದ ಕೆಡುತ್ತಿದ್ದರೇ ಹೊರತು, ಯಥಾರ್ಥ ಜ್ಞಾನ ಹುಟ್ಟುತ್ತಿರಲಿಲ್ಲ. ಆದ್ದರಿಂದ ಆ ಅರ್ಥವೈ ಸಾಧುವೆಂದು ತಿಳಿಯಬೇಕು. ॥೬॥

## (೩) "ಭಾವದರ್ಪಣ ಟೀಕಾ"- ವ್ಯಾಖ್ಯಾನ :-

ಈಗ ವಾಗಾಭಿಮಾನಿ ಅಗ್ನಿಯು, ಈತನ ಬಿಂಬಕ್ಕೆ ಸಪ್ತಹಸ್ತಗಳು. ಮನೋಭಿಮಾನಿ ರುದ್ರನು, ಈತನ ಬಿಂಬಕ್ಕೆ ಐದು ಶಿರಸ್ಸುಗಳು. ಈ ಉಭಯತರ ಬಿಂಬಗಳು ಒಂದೇ ಬಿಂಬ ಎನಿಸಿ, ಮಧ್ಯದೇಹದಲ್ಲಿ ನಿಂತು ಇದ್ದಾನೆಂದು ಕೆಲವರು ಹೇಳುತ್ತಾರೆ. ಇಲ್ಲಿ ಆಕ್ಷೇಪ ಪ್ರತಿ ಜೀವರಿಗೆ ಬಿಂಬನು ಪ್ರತ್ಯೇಕ ಇರೋಣವೇ ಸಿದ್ಧ. ಯಾಕೆಂದರೆ, ಭಿನ್ನಜೀವರು ಭಿನ್ನ ಭಿನ್ನ ಸಾಧನಗಳಾದ್ದರಿಂದ ಉಭಯರ ಬಿಂಬವು ಏಕತ್ರ ಹೊಂದಿದೆ ಎಂಬೋ ಅರ್ಥ ಇಲ್ಲಿ ಕೂಡೋದಿಲ್ಲ. ಈ ಭಗವದ್ರೂಪ ವಿಷಯದಲ್ಲಿ ದೊಡ್ಡವರಿಂದ ಉಕ್ತವಾದ ಸುಳಾದಿ ರೀತ್ಯಾ ಅರ್ಥ ಲೇಖನ ಮಾಡುತ್ತದೆ. ಮನನಕ್ಕೆ ತರಬೇಕು. ಶಿರದಶ, ಬಾಹುದ್ವಯ ಇವುಗಳಿಂದ ಒಂದಾದಂಥ ಮದ್ಯೋದರದಿ ನಿಂತು, ವಾಙ್ಮನೋಮಯ ಎಂದೆನಿಸಿ, ಶ್ರೀಹರಿಯು ಪಂಚವೃತ್ತಿಯುಳ್ಳ ಮನಸ್ಸಿನಲ್ಲಿದ್ದಾನೆ, ಈ ಮನಸ್ಸು ಐದು ವಿಧ. ಹ್ಯಾಂಗೆಂದರೆ—

**ಉಕ್ತಂಚ ಸೂತ್ರಭಾಷ್ಯೇ :-**

**"ಓಂ ಪಂಚವೃತ್ತಿರ್ಮನೋವದ್ವ್ಯಪದಿಶ್ಯತೇ ಓಂ ।**
**ಮನೋ ಬುದ್ಧಿರಂಹಕಾರಾಶ್ಚಿತ್ತಂ ಚೇತನಂ ಚೇತಿ ॥**

ಎಂತ ಇರತದೆ, ಇದರ ವಿವರ:-

ಸಂಕಲ್ಪ ವಿಕಲ್ಪರೂಪ ಮನಸ್ಸು ೧, ನಿಶ್ಚಲರೂಪ ಬುದ್ಧಿ ೨, ಅಧೀನದಲ್ಲಿ ಸ್ವಾತಂತ್ರ್ಯ ತಿಳಿಸೋಣವೇ ಅಹಂಕಾರ ೩, ಮಥನ ಮಾಡಿ ಪೂರ್ವೋಕ್ತ ಸ್ಮರಣೆಯಿಂದ ನಿಶ್ಚಯಿಸೋದೇ ಚಿತ್ತ ೪. ಪ್ರವಾಹರೂಪವಾದ ವೃತ್ತಿಜ್ಞಾನವೇ ಚೇತನ ೫, ಹೀಗೆ ಇರತಕ್ಕ ತ್ರಿವಿಧರ ಮನ

ದಲ್ಲಿಹ ಗರುಡ, ಶೇಷ, ರುದ್ರ, ಇಂದ್ರ, ಕಾಮ ಇವರಿವರಿಗೆ ದಕ್ಷಿಣ ಪಂಚ ಮುಖದಿಂದ ಪ್ರೇರಣೆಯು. ಇವರ ಸ್ತ್ರೀಯರಿಗೆ ವಾಮ ಪಂಚ ಮುಖದಿಂದ ಪ್ರೇರಣೆಯು ಮಾಡಿ, ತ್ರಿವಿಧರಿಗೂ ಗತಿಪ್ರದನಾಗುವನೆಂದು ದೊಡ್ಡವರು ಹೇಳುತ್ತಾರೆ.

**ಉಕ್ತಂಚ ವಿಜಯ ದಾಸ್ಯೈ:–**

**"ಪರಮರಹಸ್ಯವಿದು ಕೇಳಿರಿ ಸಜ್ಜನರು**
**ಅರಹುವೇ ಶಿರಿಪತಿ ನ್ಯಾಸಾರವಾ**
**ಕರುಣಿಸಿ ನಾಕು ಮನಮುಯನೆನಿಸಿ**
**ಶಿರದಶ ತೋಳೆರಡು ಪದ**
**ವೆರಡು ಧರಿಸುತ ಸರಿ ದೇಹದಲ್ಲಿ ನಿಂತು**
**ತ್ರಿವಿಧರ ಮನದಿಪ್ಪಸುರರಿಗೆ ಬಲಭಾಗ**
**ಪಂಚಾಸ್ಯದಿ ಇವರಿವರ ಸ್ತ್ರೀಯರಿಗೆ**
**ವಾಮ ಪಂಚಾಸ್ಯದಿಂದ ಪ್ರೇರಣೆ ಮಾಡುತ್ತ**
**ಸದಾಕಾಲ ಶರಣವತ್ಸಲ ಸಿರಿ ವಿಜಯ ವಿಠಲರೇಯ**
**ಪ್ರಾಂತಕೆ ಕೊಡುತಿಪ್ಪ ಇವರ ಗತಿ ಎಂದು ||**

ಸುಳಾದಿಯಲ್ಲಿ ಹೇಳಿದ ಭಾವವನ್ನೇ ಈ ಪದ್ಯದಲ್ಲಿ ಸೂತ್ರ ಪ್ರಾಯವಾಗಿ ಹೇಳಿರೋದರಿಂದ ತಿಳಿಯತಕ್ಕದ್ದು. ||೬||

**(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ):–**

"ಶಿರ"– ಇತಿ|| ತೈತ್ತಿರೀಯ ನ್ಯಾಯೇನ ಅಂತರಂತಸ್ಥಾನಮಯಾ ದೀನಾಂ ಪಂಚ ಶಿರಾಂಸಿ. ದಶ ಬಾಹವಃ || ವಾಚಸ್ಥ ವಕ್ತೃತ್ವ ಪ್ರಾಚು ರ್ಯಾತ್ ವಾಙ್ಮಯಾಖ್ಯಃ ಏಕಃ || ಮಂತೃತ್ವ ಪ್ರಾಚುರ್ಯಾತ್ ಮನೋ ಗತ ಮನೋಮಯಾಖ್ಯಃ ತು ಅಪರಃ || ಕರಣಂ ಇಂದ್ರಿಯಂ || "ಭಾರತ ಸಿದ್ಧಂ ಚ"– ಇತ್ಯಾಹ "ಭಾರತ" ಇತಿ ||೬||

**ಕನ್ನಡಾರ್ಥ :–**

"ಈ ದೇಹದಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ ವಿಜ್ಞಾನಮಯ ಮತ್ತು ಆನಂದಮಯಗಳೆಂಬ ಪಂಚಕೋಶಗಳು ಒಂದರೊಳಗೆ ಮತ್ತೊಂದು ಅಂತಃಪ್ರವಿಷ್ಟವಾಗಿವೆ. ಈ ಕೋಶಗತ ಪಂಚರೂಪಗಳಿಗೆ ಐದು ಶಿರಸ್ಸು ಮತ್ತು ಹತ್ತು ಬಾಹುಗಳು." ಈ ವಿಷಯವು **ತೈತ್ತಿರೀಯೋಪನಿಷತ್ತಿನಲ್ಲಿ** ಉಕ್ತವಾಗಿದೆ. ವಾಗಿಂದ್ರಿಯಗಳಲ್ಲಿದ್ದು, ವಚನ ರೂಪವಾದ ವ್ಯಾಪಾರಗಳನ್ನು ನಿರ್ವಹಿಸುತ್ತಿರುವುದರಿಂದ ಶ್ರೀಹರಿಗೆ **ವಾಙ್ಮಯ** ನೆಂದು ಹೆಸರು. ಮಹಾಜ್ಞಾನವಂತನಾಗಿದ್ದು, ಮನೋಗತ ವ್ಯಾಪಾರಗಳನ್ನು ಮಾಡಿಸುತ್ತಿರುವುದರಿಂದ **ಮನೋಮಯ** ನೆಂದು ಹೆಸರು. ಪಾದವೆಂದರೆ ಒಂದು ಅಂಶ. ಕರಣ = ಇಂದ್ರಿಯ. ಭಾರತದಲ್ಲಿ ಸಿದ್ಧವಾದ ವಿಷಯವು. ॥೬॥

**(೩) "ಗುರುಹೃದಯ ಪ್ರಕಾಶಿಕೆ" -ವ್ಯಾಖ್ಯಾನ:-**

**ವಾಙ್ಮನೋಮಯ** ರೂಪೋಪಾಸನೆ ಹೇಳುತ್ತಾರೆ. ಪಂಚಭೂತಗಳೇ ಐದು ಶಿರಸ್ಸೆಂಬ ತಲೆಗಳುಳ್ಳ. ದಶೇಂದ್ರಿಯಗಳೇ ಹತ್ತು ತೋಳುಗಳುಳ್ಳ. ಶುಭಾಶುಭಗಳೆಂಬ ಎರಡು ಕರ್ಮಾಚರಣೆಗಳೇ ಪಾದಗಳಾಗಿರುವ, ಒಂದೊಂದು ವಸ್ತುವನ್ನು ಉದ್ದೇಶಿಸಿ, ಯೋಚಿಸಿ ನುಡಿಯುವುದೇ ಮಧ್ಯ ದೇಹವೆಂಬ ಉದರವುಳ್ಳ, ವಾಕ್ಕು ಮನಸ್ಸು ಎಂಬ ಬಹು ರೂಪವುಳ್ಳ ವಾಙ್ಮನೋಮಯರೂಪನಾದ ಹರಿಯು ಭಾರತವೆಂಬ ಐದನೇ ವೇದದಿಂದ ಪ್ರತಿಪಾದ್ಯನಾಗಿ, ಕರಣಗಳೆಂಬ ಕಣ್ಣು ಮೊದಲಾದ್ದರಲ್ಲೂ, ಧಾತುಗಳೆಂಬ ಚರ್ಮ ಮೊದಲಾದ್ದರಲ್ಲೂ, ೭೨,೦೦೦ ನುಡಿಗಳಲ್ಲೂ ಇರುವನು, ಎಂದು ದೋಷದೂರನಾದ ಶ್ರೀಹರಿಯು **ವಾಙ್ಮನೋಮಯ** ರೂಪವನ್ನು ವರ್ಣಿಸಿರುತ್ತಾರೆ. ॥೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸ್ಥೂಲಶರೀರಗತ ಶ್ರೀ ಪರಮಾತ್ಮನ **ವಾಙ್ಮನೋಮಯ** ರೂಪೋಪಾಸನೆಯ ಕ್ರಮವನ್ನು ತಿಳಿಸುತ್ತಾರೆ. **"ಶಿರಗಳೈದೆರಡು"**–ಎಂಬ ಪ್ರಸ್ತುತ ಸಂಧಿಗತ ೬ ನೆಯ ಈ ಪದ್ಯದಿಂದ.

(೧) ಸಾಧನಶರೀರವೆಂದೆನಿಪ ಈ ಸ್ಥೂಲದೇಹದಲ್ಲಿ ವಾಗ್ರೂಪವಾದ ವ್ಯಾಪಾರ ಒಂದು, ಮನೋರೂಪವಾದ ವ್ಯಾಪಾರ ಒಂದು, ಈ ರೀತಿ ಎರಡು ಪ್ರಕಾರ ಮುಖ್ಯವಾದ ಕ್ರಿಯಾವಿಶೇಷಗಳು. ಸಂಭಾಷಣೆ, ಪಾಠಪ್ರವಚನಗಳನ್ನು ನಡೆಯಿಸುವುದು, ನಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯಗಳನ್ನು ವಾಕ್ಯರೂಪಗಳಲ್ಲಿ ಇತರರಿಗೆ ತಿಳಿಸುವಿಕೆ. ಇತ್ಯಾದಿ ವ್ಯಾಪಾರಗಳೆಲ್ಲವೂ ವಾಗ್ರೂಪವಾದ ಕ್ರಿಯಾವಿಶೇಷಗಳು. ವಾಗಿಂದ್ರಿಯ ಕರ್ಮೇಂದ್ರಿಯಗಳಲ್ಲಿ ಒಂದು. ಇದಕ್ಕೆ ಕಾರಣವಾದ ಇಂದ್ರಿಯವು ನಾಲಿಗೆ. ನಾಲಿಗೆಯಲ್ಲಿ ಪರಶುರಾಮದೇವರು ವಿದ್ಯಮಾನರಾಗಿದ್ದಾರೆ. **ಅಗ್ನಿಯು** ವಾಗೀಂದ್ರಿಯಾಭಿಮಾನಿ ದೇವತೆಯು. ಶ್ರೀ ಪರುಶುರಾಮದೇವರು ಅಗ್ನ್ಯಂತರ್ಗತರಾಗಿ. ವಾಗ್ರೂರೂಪವಾದ ವ್ಯಾಪಾರಗಳೆನ್ನು ವಾಗಿಂದ್ರಿಯವಾದ ನಾಲಿಗೆಯ ದ್ವಾರಾ ಮಾಡಿ ಮಾಡಿಸುತ್ತಿರುವರು. ಶ್ರೀ ಪರಮಾತ್ಮನ ಈ ರೂಪಕ್ಕೆ **ವಾಙ್ಮಯರೂಪ** ಎಂದು ಹೆಸರು.

(೨) **ಮನಸ್ಸು** ಏಕಾದಶೇಂದ್ರಿಯವು. ಪಂಚಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳು ಎಂಬ ದಶ ಕರಣಗಳನ್ನು ನಿಯಂತ್ರಿಪುದು ಮನಸ್ತತ್ವವು. ವಿಷಯಸನ್ನಿಕರ್ಷದಿಂದ ಜ್ಞಾನೇಂದ್ರಿಯಗಳ ದ್ವಾರಾ. ವಿಷಯಗಳು ಮನಸ್ಸನ್ನು ಸೇರುವುವು. ವಿಷಯ ಗ್ರಹಣ ಶಕ್ತಿಯ ಕೇಂದ್ರವು ಮನಸ್ಸು **"ಮನ ಏವ ಮನುಷ್ಯಾಣಾಂ ಕರ್ಮಬಂಧಯೋಃ"**– ಎಂಬಂತೆ.

ವಿಷಯಗಳನ್ನು ಗ್ರಹಿಸಿದ ನಂತರ, ತದನುಸಾರಿಯಾಗಿ ಪಂಚಕರ್ಮೇಂದ್ರಿಯ ಗಳ ದ್ವಾರಾ ಕರ್ಮರೂಪವಾದ ವ್ಯಾಪಾರವನ್ನು ಮಾಡಿಸುವುದು ಮನಸ್ಸು. ದೇಹಗತ ವ್ಯಾಪಾರಗಳಲ್ಲಿ ಮನಸ್ಸಿನ ಪಾತ್ರ ಮಹತ್ತರವಾದದ್ದು. ಸಂಕಲ್ಪ ಮತ್ತು ವಿಕಲ್ಪರೂಪ ಮನಸ್ಸು ಎಂಬ ಇಂದ್ರಿಯವು. ಹೀಗೆ ಮನಸ್ಸೆಂಬ ಇಂದ್ರಿಯಕ್ಕೆ ಇಂದ್ರ ಮತ್ತು ಕಾಮರು ಅಭಿಮಾನಿಗಳು. ಇವರಿಗೆ ನಿಯಂತ್ರಕ ರಾಗಿ ಶ್ರೀ ರುದ್ರದೇವರು ಮನೋಭಿಮಾನಿಗಳಾಗಿದ್ದಾರೆ, ರುದ್ರಾಂತರ್ಗತ ಶ್ರೀ ಸಂಕರ್ಷಣರೂಪಿ ಶ್ರೀಹರಿಯು ಪಂಚಮನೋವೃತ್ತಿಗಳೆಂಬ ಕ್ರಿಯೆ ಗಳನ್ನು ಮನಸ್ಸಿನ ದ್ವಾರಾ ಮಾಡಿ ಮಾಡಿಸುತ್ತಿರುವನು. ಇದೇ ಶ್ರೀ ಪರ ಮಾತ್ಮನ **ಮನೋಮಯರೂಪವು.**

(೩) ಇಂತು ವಾಙ್ಮನೋಮಯರೂಪನಾದ ಶ್ರೀ ಪರಮಾತ್ಮನ ಲಕ್ಷಣಗಳು ಮತ್ತು ಆ ರೂಪದ ಉಪಾಸನಾಕ್ರಮವನ್ನು ತಿಳಿಸುತ್ತಾರೆ. ಅಂತಹ ವಾಙ್ಮನೋಮಯ ರೂಪನಾದ ಶ್ರೀ ಪರಮಾತ್ಮನಿಗೆ ಐದು ತಲೆ ಗಳು (ಶಿರಗಳೈದು). ಪಂಚತನ್ಮಾತ್ರಾಸಹಿತ ಇರುವ (೧) ಪೃಥ್ವೀ (೨) ಅಪ್ಪು (೩) ತೇಜಸ್ಸು (೪) ವಾಯು ಮತ್ತು (೫) ಆಕಾಶಗಳೆಂಬ **ಪಂಚಮಹಾಭೂತ**ಗಳೇ ಆ ಐದು ಶಿರಗಳು. ಇವುಗಳ ದ್ವಾರಾ ಭೂತ ಪಂಚಕಗಳ ಗುಣಗಳಾದ ಗಂಧ, ರಸ. ರೂಪ, ಸ್ಪರ್ಶ ಮತ್ತು ಶಬ್ದ ಎಂಬ ತನ್ಮಾತ್ರಾಗುಣಗಳಿಗೆ ಪ್ರೇರಕನಾಗಿ ಪಂಚಜ್ಞಾನೇಂದ್ರಿಯಗಳಾದ ನಾಸಿಕ, ರಸನೇಂದ್ರಿಯ, ಚಕ್ಷುರಿಂದ್ರಿಯ, ಸ್ಪರ್ಶೇಂದ್ರಿಯ ಮತ್ತು ಶ್ರವಣೇಂದ್ರಿಯಗಳಿಗೆ ವಿಷಯಸನ್ನಿಕರ್ಷ ದ್ವಾರಾ ತತ್ಸಂಬಂಧ ಇಂದ್ರಿಯ ವ್ಯಾಪಾರಗಳನ್ನು ಮಾಡಿ ಮಾಡಿಸುವನು.

(೪) ಆ ವಾಙ್ಮನೋಮಯ ರೂಪ ಶ್ರೀ ಪರಮಾತ್ಮನಿಗೆ ಹತ್ತು ಬಾಹುಗಳು (ಐದೆರಡು ಬಾಹುಗಳು). ಆ ಹತ್ತು ಬಾಹುಗಳೇ ಪಂಚ ಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳೆನಿಪ ದಶೇಂದ್ರಿಯ ಗಳು. ಕರಗಳ ಕ್ರಿಯೆ ಸ್ವೀಕಾರ ಮತ್ತು ದಾನ (ತೆಗೆದುಕೊಳ್ಳುವುದು ಮತ್ತು ಕೊಡುವ ಕ್ರಿಯೆಗಳೇ). ಪಂಚಜ್ಞಾನೇಂದ್ರಿಯಗಳ ದ್ವಾರಾ

ವಿಷಯ ಸ್ವೀಕಾಹ ಮತ್ತು ಪಂಚ ಕರ್ಮೇಂದ್ರಿಯಗಳ ದ್ವಾರಾ ತದನು ಸಾರಿಯಾದ ಕರ್ಮಾಚರಣೆ.

(೫) ಭೂತ ಪಂಚಕಗಳ ತನ್ಮಾತ್ರಾಗುಣ ವಿಶೇಷಗಳು ವಿಷಯ ಗಳು. ಇವು ಇಂದ್ರಿಯ ಸನ್ನಿಕರ್ಷದಿಂದ ಜ್ಞಾನೇಂದ್ರಿಯಗಳ ದ್ವಾರಾ ಮನಸ್ಸೆಂಬ ಕರಣವನ್ನು ಸೇರಿದಾಗ, ಅಲ್ಲಿ ಪಂಚಮನೋವೃತ್ತಿಗಳ ವ್ಯಾಪಾರವು ನಡೆಯುವುದು. ಈ ವೃತ್ತಿಗಳ ವಿವರಣೆ ಹೀಗಿದೆ :–

(೧) ವಿಷಯವನ್ನು ಗ್ರಹಿಸುವ, ಹಾಗೂ ಸಂಕಲ್ಪ ವಿಕಲ್ಪ ರೂಪ ವಾದ ವೃತ್ತಿಯೇ **ಮನಸ್ಸು** (೨) ಮನೋಗತ ವಿಷಯಗಳನ್ನು ನಿಶ್ಚಯಿಸಿ, ಇದು ಗ್ರಾಹ್ಯ, ಇದು ತಾಜ್ಯ ಎಂಬ ವಿವೇಕವನ್ನು ಮೂಡಿ ಸುವ ವೃತ್ತಿಯೇ **ಬುದ್ಧಿಯು** (೩) ಪೂರ್ವೋಕ್ತ ಸ್ಮರಣೆಯಿಂದ ನಿಶ್ಚಯಿಸುವ ಸಂಕಲ್ಪ ಶಕ್ತಿಉಳ್ಳ ವೃತ್ತಿಯೇ **ಚಿತ್ತವು.** (೪) ಅಹಂ ಮತ್ತು ಮಮತಾದಿಗಳನ್ನು (ನಾನು ಮತ್ತು ನನ್ನದು ಎಂಬ ಭಾವ) ಮನ ದಲ್ಲಿ ಮೂಡಿಸುವ ವೃತ್ತಿಯೇ **ಅಹಂಕಾರವು.** (೫) ಪ್ರವಾಹ ರೂಪ ನಾದ ವೃತ್ತಿಜ್ಞಾನವೇ (ಸಂಸ್ಕಾರ) **ಚೇತನವು.** ಇಂತು ಪಂಚ ಮನೋ ವೃತ್ತಿಗಳಿಂದ ಕೂಡಿದ ಮನಸ್ಸೆಂಬ ಅಧಿಷ್ಠಾನದಲ್ಲಿ ಒಂದೊಂದು ವಿಷಯ ವನ್ನೂ ಯೋಚಿಸಿ, ನಿರ್ಧರಿಸುವ ವ್ಯಾಪಾರವೇ ಆ ವಾಙ್ಮನೋಮಯ ರೂಪಿಯ ಮಧ್ಯಪ್ರದೇಶವೆನಿಪ ಉದರವು.

(೬) ಇಂತು ಪಂಚಭೂತಗಳೆಂಬ ಐದು ಶಿರಗಳಿಂದ, ದಶೇಂದ್ರಿಯ ಗಳೆಂಬ ಹತ್ತು ಬಾಹುಗಳಿಂದ, ಮನೋವೃತ್ತಿಗಳೆಂಬ ಮಧ್ಯೋದರದಿಂದ ಶೋಭಿಸುವ ವಾಙ್ಮನೋಮಯನಿಗೆ ಪಾದದ್ವಯಗಳು. ಅವೇ ಪಾಪ ಪುಣ್ಯಗಳೆಂಬ ಎರಡು ಪಾದಗಳು. ಶುಭ ಕರ್ಮಗಳು ದಕ್ಷಿಣಪಾದ ಮತ್ತು ಅಶುಭ ಕರ್ಮಗಳು ವಾಮಪಾದ. ಈ ರೀತಿಯಲ್ಲಿ ಪರಿಶೋಭಿಸುತ್ತಿರುವ ವಾಙ್ಮನೋಮಯ ರೂಪಿ ಶ್ರೀ ಹರಿಯನ್ನು ನಿರಂತರದಲ್ಲಿ ಈ ದೇಹ ದಲ್ಲಿ ವ್ಯಾಪ್ತನಾಗಿದ್ದಾನೆಂದು ಚಿಂತಿಸಿ, ಉಪಾಸಿಸುತ್ತಿರಬೇಕೆಂದು ಹೇಳು ತ್ತಾರೆ.

(೭) ಅಂತಹ ಅನೇಕ ಮಹಿಮಾಸಂಪನ್ನನಾದ ವಾಙ್ಮನೋಮಯರೂಪಿಯು ಈ ದೇಹಗತ ದಶೇಂದ್ರಿಯಗಳಲ್ಲಿ. ತ್ವಕ್ಕು, ಚರ್ಮ, ಮೇದಸ್ಸು, ಮಜ್ಜಾ, ಮಾಂಸ, ರಕ್ತ ಮತ್ತು ಅಸ್ಥಿಗಳೆಂಬ ದೇಹಕ್ಕೆ ಆವರಣ ರೂಪವಾಗಿರುವ ಸಪ್ತ ಧಾತುಗಳಲ್ಲಿ ಹಾಗೂ ಈ ದೇಹಾದ್ಯಂತ ಓತಪ್ರೋತವಾಗಿ ವ್ಯಾಪಿಸಿರುವ ೭೨,೦೦೦ ಸಂಖ್ಯಾಕವಾದ ನಾಡಿಗಳಲ್ಲಿ ವಿದ್ಯಮಾನನಾಗಿದ್ದಾನೆ. ಅಂತಹ ಪರಮಮುಖ್ಯ ವೃತ್ತಿಯಿಂದ ಕರಣ ನಿಯಾಮಕನಾದ ಶ್ರೀಹರಿಯು ಸಮಸ್ತ ದೋಷವಿದೂರನು. ಜೀವರಲ್ಲಿ ಕಂಡುಬರುವ ಯಾವ ದೋಷಗಳ ಲೇಪವೂ ಶ್ರೀ ಪರಮಾತ್ಮನಿಗಿಲ್ಲ. ಅನಂತಕಲ್ಯಾಣಗುಣರತ್ನಾಕರನು. ಅಪ್ರಾಕೃತ ಆನಂದೋದ್ರೇಕ ಸ್ವರೂಪನು. ಸ್ವರಮಣನು. ಜಡರಾಶಿ ಮತ್ತು ಜೀವರಾಶಿಗಳಿಂದ ಅತ್ಯಂತ ಭಿನ್ನನು, ಇಂತಹ ಅರವಿದೂರನಾದ ಜಗತ್ಪ್ರಭುವು "ಭಾರತ ಪ್ರತಿಪಾದ್ಯನು".

"**ಭಾರತಃ ಪಂಚಮೋವೇದಃ**" ಎಂದು ಶ್ರೀಮನ್ಮಹಾಭಾರತವು ಇತಿಹಾಸ ಪ್ರಸ್ಥಾನದಲ್ಲಿ ಐದನೆಯ ವೇದವೆಂದು ಪ್ರಸಿದ್ಧವಾಗಿದೆ. ನಾಲ್ಕು ವೇದಗಳ ಹಾಗೂ ಉಪನಿಷದ್ರಹಸ್ಯಗಳ ಅರ್ಥವು ಮಹಾಭಾರತದಲ್ಲಿ ಘಟಕವಾಗಿದೆ. ಇಂತು ಸಕಲ ವೇದಾರ್ಥಯುಕ್ತವಾದ ಭಾರತವೆಂಬ ಇತಿಹಾಸ ಗ್ರಂಥಕ್ಕೆ ಸಾಕ್ಷಾತ್ **ಕೃಷ್ಣರೂಪಿ** ಪರಮಾತ್ಮನೇ ವಿಷಯನು. ಆ ಗ್ರಂಥ ಪ್ರತಿಪಾದ್ಯ ದೇವತಾ. ಮಹಾಭಾರತದಲ್ಲಿ ಬರುವ ಪ್ರತಿ ಸಂದರ್ಭ ಮತು ಸನ್ನಿವೇಶಗಳ ಮುಖ್ಯ ಸೂತ್ರಧಾರನೇ ಯಾದವ ಕೃಷ್ಣನು. ಶ್ರೀಮನ್ಮಹಾಭಾರತದ ಗ್ರಂಥಕರ್ತೃಗಳು **ವಾಸಿಷ್ಠ ಕೃಷ್ಣ**ರಾದರೆ, ಅದರ ಮುಖ್ಯ ಪ್ರತಿಪಾದ್ಯನು **ಯಾದವ ಕೃಷ್ಣನು.** ನಂತರ ಅವನ ಪ್ರಥಮಾಂಗಭೂತರಾದ ವಾಯ್ವಾವತಾರ **ಶ್ರೀ ಭೀಮಸೇನ ದೇವರು** ॥೬॥

ಸರ್ವಶಾಸ್ತ್ರಗಳ ಸಾರ ರೂಪವಾದ ಶ್ರೀಮನ್ಮಹಾಭಾರತ ಗ್ರಂಥದ ವೈಶಿಷ್ಟ್ಯದ ದೃಷ್ಟಿಯಿಂದ ಶ್ರೀ ಪರಮಾತ್ಮನ ವಾಙ್ಮನೋಮಯ ರೂಪವನ್ನು ಈ ರೀತಿಯಲ್ಲಿಯೂ ಚಿಂತಿಸಬಹುದು.

(೧) ಋಗ್ವೇದ, ಯಜುರ್ವೇದ, ಸಾಮವೇದ, ಅವರ್ಥಣವೇದ ಮತ್ತು ಪಂಚಮವೇದವೆಂಬ ಭಾರತ ಇವು ಐದೂ ಆತನ ಐದು ಶಿರಗಳು. ಶಿರವು ಯಾವಾಗಲೂ ಜ್ಞಾನಸ್ಥಾನಾವನ್ನ ಕೇಂದ್ರವು. ಇದರಿಂದ ಆ ಸಾದೃಶ್ಯ.

(೨) ವೇದಗಳ ಶಿರವೆಂದು ಕರೆಯಲ್ಪಡುವ ದಶೋಪನಿಷತ್ತುಗಳು ಆತನ ಹತ್ತು ಬಾಹುಗಳು.

(೩) ೧೮ ಪುರಾಣಗಳು ಆತನ ಒಂದು ಪಾದ. ೧೮ ಉಪ ಪುರಾಣಗಳು ಇನ್ನೊಂದು ಪಾದ.

(೪) ಭಾರತೋಕ್ತ ಅರ್ಥವೇ ಆತನ ಮಧ್ಯೋದರವು. ಹೀಗೆ ಶಾಸ್ತ್ರ ವಿವಕ್ಷಯಾ ಆ ವಾಙ್ಮಮನೋಮಯ ರೂಪೋಪಾಸನೆ ಮಾಡಬಹುದೆಂದು ತಾತ್ಪರ್ಯ (**ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ**) ||೬||

## ಪದ್ಯ (೭)

**ಮೂಲ :—**

**ಈರೆರಡು ದೇಹೋರ್ಮಿಭೂತ ಗ |**
**ಳಾರಧಿಕ ದಶ ಋಗ್ವಿನುತ ಲ |**
**ಕ್ಷ್ಮೀರಮಣ ವಿಷ್ಣ್ವಾಖ್ಯ ರೂಪದಿ ಚತುಷಷ್ಟಿ ಕಲಾ ||**
**ಧಾರಕನು ತಾನಾಗಿ ಬ್ರಹ್ಮ ಪು |**
**ರಾರಿ ಮುಖ್ಯರೊಳಿದ್ದು ಸತತ ವಿ |**
**ಹಾರ ಮಾಳ್ಪನು ಚತುಷ್ಪಾದಾಹ್ವಯದಿ ಲೋಕದೊಳು ||೭||**

**ಅವತರಣಿಕೆ :—**

ಸರ್ವತ್ರ ವ್ಯಾಪ್ತನಾಗಿರುವ ವಿಷ್ಣುನಾಮಕ ಪರಮಾತ್ಮನ ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ, "**ಈರೆರಡು**" ಎಂಬ ಪ್ರಸಕ್ತ ಸಂಧಿಗತ ೭ ನೆಯ ಈ ಪದ್ಯದಿಂದ.

ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲ–ಎಂಬ ತನು ಚತುಷ್ಟಯಗಳಲ್ಲಿ (ಈರೆರಡು = ೨ × ೨ = ೪ ಶರೀರಗಳು), ದೇಹದ ವಿಕಾರಕ್ಕೆ ಕಾರಣಗಳಾದ ಜನನ, ಮರಣ. ಕ್ಷುತ್ತು, ತೃಷಾ. ಶೋಕ ಮತ್ತು ದುಃಖ ಎಂಬ ಆರು ವಿಧವಾದ ತರಂಗಗಳು (ಷಡೂರ್ಮಿಗಳು), ದಶೇಂದ್ರಿಯಗಳು, ಭೂತಪಂಚಕಗಳು ಮತ್ತು ಮನಸ್ಸು ಎಲ್ಲಾ ಸೇರಿ ೧೬ ಕಳಾಯುಕ್ತವಾದ ಸ್ಥೂಲಶರೀರ, (ಆರಧಿಕ ದಶ = ೬ + ೧೦ = ೧೬ ಕಳೆಗಳು) ಈ ಅಧಿಷ್ಠಾನಗಳಲ್ಲಿ ಶ್ರೀ ಪರಮಾತ್ಮನು **ವಿಷ್ಣು** ನಾಮಕನಾಗಿ ೬೪ ಕಲೆಗಳಿಗೆ ಆಶ್ರಯನಾಗಿದ್ದು, (ಚತುಷಷ್ಟಿ ಕಲಾ). ಚತುರ್ಮುಖ ಬ್ರಹ್ಮದೇವರು. ತ್ರಿಪುರಾಸುರ ಸಂಹಾರಿಯಾದ ಮಹರುದ್ರದೇವರು ಇವರೇ ಮುಖ್ಯರಾದ ತತ್ತ್ವದೇವತೆಗಳಲ್ಲಿ ವಿದ್ಯಮಾನನಾಗಿದ್ದು, ಋಗಾದಿ ಚತುರ್ವೇದಗಳೇ ಪಾದಗಳನ್ನಾಗಿ ಉಳ್ಳವನಾದ ಪ್ರಸಿದ್ಧನಾಮಕನಾದ ವಿಷ್ಣುನಾಮಕ ಶ್ರೀಹರಿಯು ನಿರಂತರದಲ್ಲಿ ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪ್ತನಾಗಿದ್ದು, ಕ್ರೀಡಾವಿಶಿಷ್ಟನಾಗಿರುವನು ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯವು ॥೭॥

**ಪ್ರತಿಪದಾರ್ಥ :—**

**ಈರೆರಡು ದೇಹ** = ಸ್ವರೂಪ, ಲಿಂಗ, ಅನಿರುದ್ಧ ಎಂಬ ದೇಹಗಳಿಂದ ಯುಕ್ತವಾದ ಸ್ಥೂಲಶರೀರ (ಈರೆರಡು = ೨ × ೨ = ೪. ಅಂದರೆ ನಾಲ್ಕು ದೇಹಗಳೆಂದರ್ಥ) **ಊರ್ಮಿ ಭೂತಗಳು** = ಇರುವಿಕೆ, ಹುಟ್ಟುವುದು, ಪರಿಣಾಮ ಹೊಂದುವುದು, ಬೆಳವಣಿಗೆ, ಕ್ಷೀಣಿಸುವುದು ಮತ್ತು

ನಾಶ ವೆಂಬ ಆರು ವಿಕಾರಗಳಿಗೆ **ಷಡೂರ್ಮಿ**ಗಳೆಂದು ಹೆಸರು (ಊರ್ಮಿ = ಅಲೆಗಳು, ತರಂಗಗಳು) ಸ್ಥೂಲದೇಹಾಖ್ಯವಾದ ಈ ಶರೀರವು ಷಡೂರ್ಮಿಗಳಿಂದ ಯುಕ್ತವಾದದ್ದು. **ಆರಧಿಕ ದಶ** = ಹದಿನಾರು ಸಂಖ್ಯೆ ಉಳ್ಳ (ಆರು ಅಧಿಕ = ಆರು ಹೆಚ್ಚಾದ, ದಶ = ಹತ್ತು, ಅಂದರೆ ೧೦ + ೬ = ೧೬ ಎಂದರ್ಥ) ಕಲೆಗಳಿಂದ ಕೂಡಿದ್ದು (ಪಂಚ ಭೂತಗಳು = ೫, ದಶೇಂದ್ರಿಯಗಳು = ೧೦ ಮತ್ತು ಮನಸ್ಸು = ೧, ಎಲ್ಲಾ ಸೇರಿ ೧೬ ಕಲೆಗಳು) **ಋಗ್ನಿನುತ** = ೧೬ ರೂಪಗಳಿಂದ ಯುಕ್ತವಾದ **ಪುರುಷ ಸೂಕ್ತ** ದಿಂದ ಸ್ತುತ್ಯನಾದ (ಶಾಸ್ತ್ರದ ವಿವಕ್ಷಯಾ ೧೬ ಅಂಶಗಳಿವೆ. ಋಗಾದಿ ವೇದಗಳು = ೪, ಆಯುರ್ವೇದ = ೧, ಧನುರ್ವೇದ = ೧, ಗಂಧರ್ವವೇದ = ೧, ಜ್ಯೋತಿಷ್ಯ ಕಲ್ಪಾದಿ ಷಡಂಗಗಳು = ೬, ನೀತಿ ಶಾಸ್ತ್ರ = ೧, ಪರವಿದ್ಯೆ = ೧ ಮತ್ತು ಅಪರವಿದ್ಯೆ = ೧, ಎಲ್ಲಾ ಸೇರಿ ಶಾಸ್ತ್ರಾಂಗಗಳು = ೧೬) **ಲಕ್ಷ್ಮೀರಮಣ** = ರಮಾಪತಿಯಾದ ಶ್ರೀ ಪರಮಾತ್ಮನು **ವಿಷ್ಣ್ವಾಖ್ಯರೂಪದಿ** = "ವಿಷ್ಣು" ನಾಮಕನಾಗಿ **ಚತುಷಷ್ಟಿ ಕಲಾಧಾರಕನು** = ೬೪ ಕಳಾಯುಕ್ತವಾದ ಶಾಸ್ತ್ರಗಳಿಗೆ ಆಶ್ರಯದಾತನಾಗಿ **ತಾನಾಗಿ** = ಸ್ವತಃ **ಬ್ರಹ್ಮ** = ಚತುರ್ಮುಖ ಬ್ರಹ್ಮದೇವರು, **ಪುರಾರಿ** = ತ್ರಿಪುರಾಸುರರ ಸಂಹಾರಕರಾದ ಮಹರುದ್ರದೇವರು **ಮುಖ್ಯರೊಳು** = ಇವರೇ ಮೊದಲಾದ ದೇವತಾಧಿಷ್ಠಾನಗಳಲ್ಲಿ **ಇದ್ದು** = ಅಂತರ್ಯಾಮಿತ್ವೇನ ವಿದ್ಯಮಾನನಾಗಿದ್ದವನಾಗಿ, **ಚತುಷ್ಪಾದಾಹ್ವದಿ** = ಸತ್ಯ, ಧರ್ಮ, ದಯಾ, ಮತ್ತು ದಾನಗಳೆಂಬ ನಾಲ್ಕು ಪಾದಗಳಿಂದ ಯುಕ್ತನಾಗಿ "ಚತುಷ್ಪಾತ್— ಎಂದೆನಿಸಿ, **ಲೋಕದೊಳು** ಸಕಲ ಚರಾಚರಾತ್ಮಕವಾದ ಈ ಜಗತ್ತಿನಲ್ಲಿ **ಸತತ** = ಎಡಬಿಡದೆ (ನಿರಂತರದಲ್ಲಿಯೂ) **ವಿಹಾರ ಮಾಳ್ಪನು** = ಕ್ರೀಡಾ ವಿಶಿಷ್ಟನಾಗಿ, ಲೀಲಾಮಯನಾಗಿ ವಿಹರಿಸುತ್ತಾನೆ. ॥೭॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಪೂರ್ವೋಕ್ತ ಶ್ಲೋಕದಲ್ಲಿ ಜೀವ-ಲಿಂಗ-ಅನಿರುದ್ಧ-ಸ್ಥೂಲ ಈ ನಾಲ್ಕು ದೇಹಗಳ ಹೇಳಿದರು. ಈ ಶ್ಲೋಕದಲ್ಲಿ ಆ ನಾಲ್ಕು ದೇಹಗಳೊಳಗೆ ಸ್ಥೂಲದೇಹದ ವಿಚಾರ ಮಾತ್ರ ಹೇಳತಾರೆ.

ಈ ಸ್ಥೂಲದೇಹ ಎಷ್ಟು ಪ್ರಕಾರ ಎಂದರೆ, ಈರೆರಡು ದೇಹ-ನಾಲು ದೇಹಗಳು ಪೂರ್ವೋಕ್ತ, ಜೀವ—ಲಿಂಗ—ಅನಿರುದ್ಧ—ಸ್ಥೂಲ ದೇಹ ಗಳಲ್ಲಿ (೧) ಸ್ವೇದಜ, (೨) ಉದ್ಭಿಜ, (೩) ಅಂಡಜ ಮತ್ತು (೪) ಜರಾಯುಜ ಎಂತ ನಾಲ್ಕು ವಿಧಗಳು. ಊರ್ಮಿ—ಆರು ತರಂಗಗಳಿಂದ ಯುಕ್ತವಾದದ್ದು. ದಾವದೆಂದರೆ— (೧) ಜನನ, (೨) ಮರಣ. (೩) ಕ್ಷುತ್ತು, (೪) ತೃಷಾ (ನೀರಡಿಕೆ) ಎಂದರೆ ಪಿಪಾಸಾ, (೫) ಶೋಕ, (೬) ದುಃಖ ಎಂತ ಷಡೂರ್ಮಿಗಳು. ಜೀವ—ಲಿಂಗ—ಅನಿರುದ್ಧ ಶರೀರ ಗಳಿಗೆ ಈ ತರಂಗಗಳು ಇಲ್ಲವಾದ್ದರಿಂದ, ಆ ಮೂರು ಶರೀರಗಳು ಗ್ರಾಹ್ಯ ವಲ್ಲ. ನಾಲ್ಕು ಶರೀರಗಳು ಸ್ಥೂಲ ಶರೀರಗಳೇ ಎಂತ ತಾತ್ಪರ್ಯ. ಚತುಃಷಷ್ಠಿ ಕಳಾ—೬೪ ಕಳಾಗಳು. ಒಂದೊಂದು ಸ್ಥೂಲ ಶರೀರವೂ ೧೬ ಕಳಾಗಳಿಂದ ಯುಕ್ತವಾದದ್ದು. ಆ ಕಳಾಗಳು ದಾವವೆಂದರೆ— ದಶೇಂದ್ರಿಯಗಳು = ೧೦, ಪಂಚಭೂತಗಳು—೫, ಮನಸ್ಸು = ೧, ಅಂತು ಹದಿನಾರು ಕಳಾಗಳು. ಈ ಪ್ರಕಾರ ನಾಲ್ಕು ಸ್ಥೂಲ ಶರೀರಗಳಿಗೆ ಆಗತಕ್ಕ ಕಳಾಗಳು = ೬೪. ಆರಧಿಕ ದಶ—ಹದಿನಾರು ಎಂತರ್ಥ. ಈ ೧೬ ಋಗ್ವಿ ಸುತ—ವೇದ ಋಕ್ಕುಗಳಿಂದ ವಿನುತನಾದನ. ಅಂದರೆ, ಸ್ತೋತ್ರ ಮಾಡಿಸಿ ಕೊಳ್ಳತಕ್ಕವ, ಲಕ್ಷ್ಮೀರಮಣ—ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಪುರುಷ ಸೂಕ್ತಕ್ಕೆ ಋಕ್ಕುಗಳು ಹದಿನಾರು. ಈ ಋಕ್ಕುಗಳಿಗೆ ೧೬ ಭಗವ ದ್ರೂಪಗಳು. ಈ ಹದಿನಾರು ಭಗವದ್ರೂಪಗಳು ೬೪ ರೂಪಗಳಿಂದ,

ಆಧಾರಕನು—೬೪ ಕಳಾಕ್ಕೆ ಆರಾಧಕನು. ವಿಷ್ಣ್ವಾಖ್ಯರೂಪದಿ—ವಿಷ್ಣು ರೂಪದಿಂದ, ತಾನಾಗಿ—ಆಧಾರಕನಾಗಿ ಹಾಂಗೆ, ಬ್ರಹ್ಮ—ಚತುರ್ಮುಖ ಬ್ರಹ್ಮದೇವರು, ಪುರಾರಿ—ತ್ರಿಪುರಾಸುರನಿಗೆ ಶತ್ರುವಾದ ರುದ್ರದೇವರು, ಮುಖ್ಯರೊಳಿದ್ದು—ಮುಖ್ಯರಾದ ೨೪ ತತ್ವಾಭಿಮಾನಿಗಳೊಳಗಿದ್ದು, ಸತತ-ನಿರಂತರದಲ್ಲಿಯೂ, ವಿಹಾರ ಮಾಳ್ಪನು—ಕರ್ಮವ್ಯಾಪಾರಗಳಿಂದ ಸಂಚಾರ ಮಾಳ್ಪನು. ಚತುಷ್ಪಾದ—ನಾಲ್ಕುಪಾದ— (೧) ಸ್ವೇದಜ (೨) ಉದ್ಭಿಜ್ಜ (೩) ಅಂಡಜ ಮತ್ತು (೪) ಜರಾಯುಜ. ಒಂದೊಂದಕ್ಕೆ ಒಂದೊಂದು ಪಾದ, ಅಂತು, ನಾಲ್ಕು ಪಾದಗಳೆಂತ ಸಾಂಕೇತ. ಆಹ್ವಯದಿ— ಈ ನಾಲ್ಕು ಪಾದಗಳಲ್ಲಿ ತನ್ನಾಮದಿಂದ ಇದ್ದಾನೆ. ಲೋಕದೊಳು—ಸರ್ವ ಪ್ರಾಣಿಗಳಲ್ಲಿ ಎಂತ ತಾತ್ಪರ್ಯ.

## ಚತುಃಷಷ್ಟಿ ಕಳಾ ವಿವರ

| ಕ್ರಮ ಸಂಖ್ಯೆ | ಕಲೆಗಳು | ಕ್ರಮ ಸಂಖ್ಯೆ | ಕಲೆಗಳು | ಕ್ರಮ ಸಂಖ್ಯೆ | ಕಲೆಗಳು |
|---|---|---|---|---|---|
| ೧ | ಅಕ್ಷರ ಲಕ್ಷಣ | ೨ | ಲಿಖಿತ | ೩ | ಗಣಿತ |
| ೪ | ವೈಶೇಷಿಕ | ೫ | ಸೌರ | ೬ | ಗಾಣಪತ್ಯ |
| ೭ | ವೇದ | ೮ | ವೇದಾಂತ | ೯ | ಪ್ರಾತಿಶಾಖ್ಯ |
| ೧೦ | ಪ್ರಾಥಬ್ಜ | ೧೧ | ಪ್ರಾಭಾಕರ | ೧೨ | ನ್ಯಾಯ |
| ೧೩ | ವ್ಯಾಕರಣ೧ | ೧೪ | ಛಂದಸ್ಸು | ೧೫ | ಅಲಂಕಾರ |
| ೧೬ | ನಟ | ೧೭ | ನಾಟಕ | ೧೮ | ಇತಿಹಾಸ |
| ೧೯ | ಆಗಮ | ೨೦ | ಪುರಾಣ | ೨೧ | ಸ್ತ್ರೀಲಕ್ಷಣ |
| | | | | ೨೨ | ಪುರುಷ ಲಕ್ಷಣ |

| | | | | | |
|---|---|---|---|---|---|
| ೨೩ | ಸಾಮುದ್ರಿಕ ಲಕ್ಷಣ | ೨೪ | ಶಕುನಶಾಸ್ತ್ರ | ೨೫ | ಶಿಲ್ಪಶಾಸ್ತ್ರ |
| ೨೬ | ಕಾಮಶಾಸ್ತ್ರ | ೨೭ | ನಿಸತ್ಸರ | ೨೮ | ಪ್ರಳಯ ಕಾಲ |
| ೨೯ | ಮಾಯಾವಾದ | ೩೦ | ಸಾರವಾದ | ೩೧ | ವಿವಾದ |
| ೩೨ | ಗಂಧವಾದ | ೩೩ | ರಸವಾದ | ೩೪ | ಧಾತುವಾದ |
| ೩೫ | ಸೌಗತ | ೩೬ | ಗಾರುಡ | ೩೭ | ಚಿತ್ರಕರ್ಮ |
| ೩೮ | ವೈದ್ಯವಾದ | ೩೯ | ವಾಸ್ತುಶಾಸ್ತ್ರ | ೪೦ | ಶೌತ್ರ |
| ೪೧ | ಅಚಾರ | ೪೨ | ವ್ಯವಹಾರ | ೪೩ | ಸ್ಮಾರ್ತ |
| ೪೪ | ಪರವಾದ | ೪೫ | ಪರಕಾಯಪ್ರವೇಶ | ೪೬ | ಆಶ್ವಾರೋಹಣ |
| ೪೭ | ಗಜಾರೋಹಣ | ೪೮ | ಸಂಧಿವಿಗ್ರಹ | ೪೯ | ಚರ್ಮಶಾಸ್ತ್ರ |
| ೫೦ | ಸ್ವರ್ಣಪರೀಕ್ಷೆ | ೫೧ | ರತ್ನಪರೀಕ್ಷೆ | ೫೨ | ಜ್ಯೋತಿಶಾಸ್ತ್ರ |
| ೫೩ | ಇಂದ್ರಜಾಲ | ೫೪ | ಮಹೇಂದ್ರಜಾಲ | ೫೫ | ಅಗ್ನಿಸ್ತಂಭ |
| ೫೬ | ಜಲಸ್ಥಂಭ | ೫೭ | ವಾಯುಸ್ಥಂಭ | ೫೮ | ಖಡ್ಗಸ್ಥಂಭ |
| ೫೯ | ಬಾಲಾಶನಾ | ೬೦ | ದೂರದೃಷ್ಟಿ | ೬೧ | ದೂರಶ್ರವಣ |
| ೬೨ | ಇಂಗಿತಜ್ಞ | ೬೩ | ಭಾವಬೋಧ | ೬೪ | ಪರಿಹಾಸ |

**ವಿಶೇಷಾರ್ಥ :–**

ಈ ಶ್ಲೋಕದಲ್ಲಿ ಊರ್ಮಿ ಎಂತ ಇರುವುದಕ್ಕೆ ಪ್ರಕಾರಾಂತ ಅರ್ಥ– (೧) ಶುಕ್ಲಾದಿ ರೂಪದಿಂದ ಇರುವುದು. (೨) ಗರ್ಭದಲ್ಲಿ ಜನಿಸುವುದು

(೩) ನಾನಾ ಅವಯುವದ ರೂಪವಾಗುವುದು. (೪) ಬೆಳೆಯುವುದು (೫) ವಾರ್ಧಿಕ್ಯದಲ್ಲಿ ಕುಗ್ಗುವುದು (೬) ನಷ್ಟವಾಗುವದು—ಅಂತು ಷಡೂರ್ಮಿಗಳು.

ಇನ್ನೊಂದು ಪ್ರಕಾರ— (೧) ಖೇಚರ, ಎಂದರೆ, ಆಕಾಶದಲ್ಲಿ ಸಂಚರಿಸತಕ್ಕ ದೇಹ. (೨) ಭೂಚರ, ಎಂದರೆ, ಭೂಮಿಯಲ್ಲಿ ಸಂಚರಿರ ತಕ್ಕ ದೇಹ (೩) ವಾರಿಚರ ಎಂದರೆ, ಉದಕದಲ್ಲಿ, ಸಂಚರಿಶತಕ್ಕ ದೇಹ ಅಂತು ಈ ನಾಲ್ಕು ಸ್ಥೂಲದೇಹಗಳು ಎಂತಲೂ ಹೇಳಬಹುದು. ಎಲ್ಲಾನೂ ಏಕ ವಾಕ್ಯವೇ ಆಗತದೆ ಚತುಷಷ್ಠಿ ಕಳಾಧಾರಕನು ಎಂದರೆ ಪ್ರಕಾರಾಂತರ ಅರ್ಥ.

ವೇದಗಳು ೪, ಆಯುರ್ವೇದವೆಂಬ ವೈದ್ಯಶಾಸ್ತ್ರ ೧, ಧನುರ್ವೇದ ಎಂಬ ಯುದ್ಧವಿದ್ಯಾ ೧, ಗಂಧರ್ವವೇದ ಎಂಬ ಸಂಗೀತ ಶಾಸ್ತ್ರ ೧, ಜ್ಯೋತಿಷ ಕಲ್ಪ ಎಂಬ ಷಡಂಗಗಳು ೬, ಪರವಿದ್ಯೆ ೧ ಮತ್ತು ಅಪರವಿದ್ಯೆ ೧ ಅಂತು ೧೬ ಆಗುವುವು.

ಬ್ರಹ್ಮರುದ್ರಾದಿ ದೇವತೆಗಳು, ಮನುಷ್ಯರು, ಪಿತೃಗಳು, ಪಶುಗಳು ಪಕ್ಷಿಗಳು ಎಂಬ ನಾಲ್ಕು ಜಾತಿಗೆ ಯೋಗ್ಯತಾನುಸಾರ ಜ್ಞಾನಗಳು ೧೬, ಈ ಹದಿನಾರು × ನಾಲ್ಕು = ೬೪ ವಿದ್ಯಾಧಾರನಾಗಿ ಅಥವಾ **"ಚತುಃಷಷ್ಠಿರ್ಜಾತಃ" –ಎಂಬ ವಿಷ್ಣುರಹಸ್ಯ** ರೀತ್ಯಾ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ಹುಟ್ಟಿದ ಕ್ಷತ್ರಿಯ, ವೈಶ್ಯ ಶೂದ್ರ ಸ್ತ್ರೀಯರಲ್ಲಿ ಬ್ರಾಹ್ಮಣರಿಗೆ ಮೂರ್ಧಾವಶಕ್ತ, ಅಂಬಷ್ಟ, ಪೂರಶವ (ಪಾರಶ) ಎಂದು ಮೂರು ಜಾತಿ, ಕ್ಷತ್ರಿಯಗೆ ಬ್ರಾಹ್ಮಣ, ವೈಶ್ಯ, ಶೂದ್ರಸ್ತ್ರೀಯರಲ್ಲಿ ಸೂತ, ಮಾಹಿಷ್ಮ, ಉಗ್ರ ಎಂಬ ಮೂರು ಜಾತಿ, ವೈಶ್ಯಗೆ, ಬ್ರಾಹ್ಮಣ ಕ್ಷತ್ರಿಯ ಶೂದ್ರಸ್ತ್ರೀಯರಲ್ಲಿ ವೈದೇಹ, ಮಾಹಿಕ, ಕರಣ ಎಂದು ಮೂರು ಜಾತಿ. ಶೂದ್ರಗೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಸ್ತ್ರೀಯರಲ್ಲಿ ಚಂಡಾಲ. ಕ್ಷತ್ತಾಶ, ಅಯೋಗ ಎಂಬ ಮೂರು ಜಾತಿ, ಅಂತು ೧೨

ಜಾತಿ+೪ ವರ್ಣಗಳು=೧೬ಜಾತಿಪ್ರಬೇಧಗಳು. ಅವರು ಪುನಶ್ಚ ಬ್ರಾಹ್ಮಣ ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ಜಾತಿ ಸ್ತ್ರೀಯರಲ್ಲಿ ಮಕ್ಕಳ ಪಡೆದಿದ್ದು ೧೬ ಈ ಹದಿನಾರು×ನಾಲ್ಕು=೬೪ ಜಾತಿಗೆ ಜೀವನಕರವಾದ ಶಿಲ್ಪಗಳು, ಲಿಪಿಜ್ಞಾನ, ಆರಂಭಮಾಡಿ ಕಳ್ಳತನದವರೆಗೆ ೬೪ ವಿದ್ಯೆಗಳು. ಈ ವಿದ್ಯೆಗಳಿಗೆ ಅಥವಾ (೧) ಹಸ್ತಿನಿ (೨) ಚಿತ್ತಿನಿ, (೩) ಶಂಖಿಣಿ ಮತ್ತು (೪) ಪದ್ಮಿನಿ–ಈ ನಾಲ್ಕು ಜಾತಿ ಸ್ತ್ರೀಯರು ಋತುವಾದ ದಿನ ಮೊದಲು ೧೬ ದಿವಸಗಳ ಒಳಗೆ ೬೪ ಕಳೆಗಳಿಗೆ ಆಧಾರವಾಗಿ ಎಂತಲೂ, ಪ್ರಕಾರಾಂತ ಅರ್ಥಮಾಡಬಹುದು ಎಂತ ತಾತ್ಪರ್ಯ. ॥೭॥

## (೩) "ಭಾವಪ್ರಕಾಶಿಕೆ" — ವ್ಯಾಖ್ಯಾನ :—

ಬ್ರಹ್ಮಾದಿ ದೇವತೆಗಳಲ್ಲಿ ಚತುಷ್ಪಾದ ಧರ್ಮಗಳನ್ನು ಪಾಲಿಸುತ್ತಾ, ಚತುಃಷಷ್ಟಿಕಲಾ ವಿದ್ಯಾಧಾರಕನಾಗಿರುವ ಭಗವದ್ರೂಪೋಪಾಸನೆಯನ್ನು ಹೇಳುತ್ತಾರೆ.

ಬ್ರಹ್ಮಾದಿ ಸಕಲದೇವತೆಗಳಿಗೂ ಸ್ವರೂಪ, ಲಿಂಗ, ಅನಿರುದ್ಧ ಸ್ಥೂಲಗಳೆಂಬ ನಾಲ್ಕು ದೇಹಗಳುಂಟು. ಇದರಲ್ಲಿ ಆರು ವಿಧಗಳುಂಟು. ಅದಾವುವೆಂದರೆ :— (೧) ಅಸ್ತಿತ್ವ–ಲಿಂಗಾನಿರುದ್ಧ ದೇಹಗಳಿಂದ ಕೂಡಿ ಸ್ಥೂಲದೇಹ ಹೊಂದುವುದಕ್ಕೆ ಪೂರ್ವದಲ್ಲಿರುವಿಕೆ (೨) ಜಾಯತೆ–ಸ್ಥೂಲ ದೇಹ ಹೊಂದುವುದು (೩) ಪರಿಣಮತೆ–ಶೈಶವಾವಸ್ಥೆ ದಾಟುವುದು. (೪) ವಿವರ್ಧತೆ–ವರ್ಧಮಾನವಾಗುತ್ತಾ ಯೌವ್ವನ ಹೊಂದುವುದು. (೫) ಅಪಕ್ಷೀಯತೆ–ಕ್ಷೀಣವಾಗುದು. (೬) ವಿನಶ್ಯತೇ–ನಾಶಹೊಂದುವುದೆಂಬ ೬ ತರಂಗಗಳುಂಟು. ಇವುಗಳಲ್ಲಿ ಬ್ರಹ್ಮವಾಯುಗಳಿಗೆ, ಸರಸ್ವತೀ ಭಾರತೀದೇವಿಯರಿಗೆ ಮಾತ್ರ ಗರ್ಭಪ್ರವೇಶವಿಲ್ಲ. ಬ್ರಹ್ಮದೇವರಿಗೆ ಅವತಾರವಿಲ್ಲ. ವಾಯುದೇವರ ಅವತಾರ ತ್ರಯಗಳಲ್ಲೂ, ಶುಕ್ಲಶೋಣಿತ ಸಂಪರ್ಕದಿಂದ ಜನಿಸಲಿಲ್ಲವೆಂದು, ಅವರ ಚರಿತ್ರೆಯಿಂದಲೇ ಗೊತ್ತಾಗುವುದು ಆಂಜನೇಯನ ಉತ್ಪತ್ತಿಯಲ್ಲಿ ವಾಯುದೇವರು ಫಲವನ್ನು ಕೊಟ್ಟರೆಂತಲೂ, ಅದರಿಂದಲೇ ಅಂಜನಾದೇವಿ ಗರ್ಭಧರಿಸಿದಳೆಂದು ಹೇಳಿರುವರು, ಶುಕ್ಲ

ಶೋಣಿತ ಸಂಬಂಧವಾದರೇನೇ ಸ್ಥೂಲದೇಹವು ಗರ್ಭದಲ್ಲಿ ಉತ್ಪತ್ತಿಯಾಗುವುದು. ಅದಲ್ಲದೆ ಗರ್ಭಧಾರಣೆಯು ಮತ್ತು ಜನಿಸುವುದೆಂದರೆ ತಮ್ಮಿಚ್ಛಾನುಸಾರವಾಗಿ ತಾವೇ ಲೋಕ ಮೋಹಕ್ಕಾಗಿ ತಮ್ಮ ನಿಜರೂಪದಿಂದಲೇ ಬಂದು, ಗರ್ಭದಿಂದ ಜನಿಸಿದರೆಂದು ತಿಳಿಯುವುದು. ಹಾಗಿಲ್ಲದಿದ್ದರೆ, ಸ್ತ್ರೀರಕ್ತವು ಪುರುಷ ಶುಕ್ಲವು ಒಂದು ರಾತ್ರಿಯಲ್ಲಿ ಸೇರುವುದು.

**ಕಲಿಲಂ ಏಕರಾತ್ರೇಣ ಪಾಂಚರಾತ್ರೇಣ ಬುದ್ಬುದಂ |**
**ದಶ ರಾತ್ರೇಣ ಕರ್ಕಂಧುಃ ಪೇಶ್ಯಂಡಂ ವಾತತಃ ಪರಂ |**
**ಮಾಸೇನತು ಶಿರೋದ್ವಾಭ್ಯಂ ಬಾಹ್ವಂಘ್ರ್ಯಂದ್ಯಂಗ ವಿಗ್ರಹಃ ||"**

**–ಇತ್ಯಾದಿ ಭಾಗವತ ತೃತೀಯಸ್ಕಂದ** ವಾಕ್ಯದಿಂದ ಒಂದು ರಾತ್ರಿಯಲ್ಲಿ ಶುಕ್ಲ ಶೋಣಿತಮಿಶ್ರವಾಗುವುದು. ೫ ದಿನಗಳಲ್ಲಿ ನೊರೆಗಟ್ಟುವುದು. ೧೦ ದಿವಸಗಳಲ್ಲಿ ಬೋರೇಹಣ್ಣಿನಂತೆ ಗಟ್ಟಿಯಾಗುವುದು. ತದನಂತರ ಪೇಶೀ ಎಂಬ ಚೀಲದಿಂದ ಬದ್ಧವಾಗುತ್ತಾ ಅಂಡದಂತೆ ವೃದ್ಧಿಯಾಗುವುದು. ೧ ತಿಂಗಳಿಗೆ ತಲೆ ಬುರುಡೆ ಬರುವುದು. ೨ ನೆಯ ತಿಂಗಳಿನಲ್ಲಿ ಕೈಕಾಲು ಮೊದಲಾದ ಅಂಗಗಳು ಹುಟ್ಟುತ್ತವೆ –ಎಂಬೀವೇ ವಾಕ್ಯಗಳಿಂದ ಶುಕ್ಲಶೋಣಿತ ಸಂಬಂಧದಿಂದಲೇ ಗರ್ಭೋತ್ಪತ್ತಿಯೆಂದು ಸ್ಪಷ್ಟವಾಗುವುದು. ಅದಿಲ್ಲದೆ ಆಗುವುದೆಂದರೆ ಸ್ವಮಹಿಮೆಯಿಂದಲೋ, ಋಷ್ಯಾದಿಗಳ ತಪಃಪ್ರಭಾವದಿಂದಲೋ ಆಗಬೇಕೇ ಹೊರತು ಅನ್ಯಥಾ ಇಲ್ಲ. ದ್ರುಪದಾದಿಗಳ ಉತ್ಪತ್ತಿಯು ಶುಕ್ಲಾದಿಗಳ ಸಂಬಂಧವಿಲ್ಲದೆ ಆದರೂ, ಅದು ತಮ್ಮ ಸಾಮರ್ಥ್ಯವಲ್ಲ, ತಪೋಮಹಿಮೆ ಎಂದು ತಿಳಿಯಬೇಕು.

ವಾಯುದೇವರು ಸ್ವಮಹಿಮೆಯಿಂದ ಗರ್ಭಯಾತನಾದಿಗಳಿಲ್ಲದೆ ಪೂರ್ವದಿಕ್ಕಿನಲ್ಲಿ ಸೂರ್ಯೋದಯವಾದರೆ ದಿಕ್ಕಿಗೂ ಸೂರ್ಯನಿಗೂ ಹೇಗೆ ಸಂಬಂಧವಿಲ್ಲವೊ ಹಾಗೆ ಗರ್ಭ ಸಂಬಂಧವಿಲ್ಲದೇನೇ ಹನುಮ ಭೀಮಾವತಾರಗಳು ಎತ್ತಿದರೆಂದು ತಿಳಿಯಬೇಕು. ಶ್ರೀ ಮಧ್ವಾಚಾರ್ಯರ ಜನನವು **ಶ್ರೀ ಸುಮಧ್ವ ವಿಜಯದಲ್ಲಿ "ರಾಜೀವ ಸತ್ತರವರಂ ಭುವನಾದಿ ರಾಜೋ ನಿಷ್ಕಾಸಯನ್ ಪರಮ ಭಗವಾನ್ನಿವೇಶ"–**

ಎಂದರೆ, ಮಧ್ಯಗೇಹಭಟ್ಟರ ಪತ್ನಿಯು ಪ್ರಸವವಾಗಲು ಸಂಪೂರ್ಣ ಲಕ್ಷಣದಿಂದ ಕೂಡಿದ ಆ ದೇಹದೊಳಗಿದ್ದ ಜೀವನನ್ನು ಹೊರಗೆ ಹೊರಡಿಸುತ್ತ, ಹೊರಗಿರುವ ರಾಜನು ಪಟ್ಟಣದೊಳಗಿನ ರಾಜನನ್ನು ಗೆದ್ದು, ಹೊರಗೆ ಹೊರಡಿಸುತ್ತ ಪ್ರವೇಶಮಾಡುವಂತೆ, ತಾವು ಆ ಶರೀರವನ್ನು ಪ್ರವೇಶಮಾಡಿದ ರೆಂದು ಸ್ಪಷ್ಟವಾಗಿ ವರ್ಣಿಸಿರುತ್ತಾರೆ. ದ್ರೌಪದಿಯು ಪೂರ್ವಜನ್ಮದ ಇಂದ್ರ ಶೇಷಾದ್ಯವತಾರಗಳಲ್ಲಿ ನಳರಾಜನಮಗಳೆಂದು ಹೇಳಿರುವರು. ಅಲ್ಲಿ ಭಾರತೀ ದೇವಿಯರಿಗೆ ಶುಕ್ಲಾದಿ ಸಂಪರ್ಕವನ್ನು ಚಿಂತಿಸಬೇಕಲ್ಲವೆ ಎಂದರೆ ಅಲ್ಲಿಯೂ ಭಾರತೀದೇವಿಯರು ಶಚ್ಯಾದಿಗಳಿಂದ ಪ್ರಾರ್ಥಿತರಾಗಿ, ತಾವು ಗರ್ಭಕ್ಕೆ ಬಂದವರಾದುದರಿಂದ, ತಾವೇ ಸ್ವತಂತ್ರದಿಂದ ಗರ್ಭಕ್ಕೆ ಬರುವಾಗ ಗರ್ಭದಲ್ಲಿ ನಿರ್ಲಿಪ್ತರಾಗಿದ್ದು, ಶಚ್ಯಾದಿಗಳಿಗೆ ಮಾತ್ರವೇ ಗರ್ಭಸಂಪರ್ಕ ಮಾಡಿಸಿ ದರೆಂದು ತಿಳಿಯಬೇಕು.

ಪ್ರಕೃತ, ಬ್ರಹ್ಮವಾಯುಗಳು ಸರಸ್ವತೀ ಭಾರತೀಯರು ಹೊರತು ಅವರಿಗಿಂತಲೂ ಕಮ್ಮಿಯಾದ ಎಲ್ಲರಿಗೂ ಆರು ತರಂಗಗಳುಂಟೆಂದು ಭಾವಿಸ ಬೇಕು. ಬ್ರಹ್ಮವಾಯುಗಳಿಗಾದರೂ ಸ್ವರೂಪ, ಲಿಂಗ, ಅನಿರುದ್ಧದೇಹ ಗಳಿಂದಿರುವಿಕೆ, ಸ್ಥೂಲದೇಹಪ್ರಾಪ್ತಿ ಉಂಟೇ ಉಂಟು. ಆದರೆ ಗರ್ಭ ಯಾತನಾದಿ ದುಃಖಗಳಿಲ್ಲ. ವೃದ್ಧಿಹೊಂದುವುದು, ಕ್ಷಯಹಾಗುವುದು, ಅವರ ದೇಹಕ್ಕಿಲ್ಲದಿದ್ದರೂ ೧೦೦ ವರ್ಷ ಆಯುಷ್ಯವು ಕಳೆಯುತ್ತಾ ಬರುವುದೇ ವೃದ್ಧಿಕ್ಷಯವೆಂದು ಅವರಲ್ಲಿ ಭಾವಿಸಬೇಕು. ಇಂತಹ ನಾಲ್ಕು ದೇಹಗಳು ೬ ತರಂಗಗಳಿಂದ ಕೂಡಿದ ಬ್ರಹ್ಮಾದಿ ಸಕಲ ಚೇತನರಲ್ಲಿ ಪುರುಷಸೂಕ್ತ ಪ್ರತಿ ಪಾದ್ಯನಾದ ಶ್ರೀ ಲಕ್ಷ್ಮೀರಮಣನಾದ ಶ್ರೀಪರಮಾತ್ಮನು ವಿಷ್ಣುರೂಪದಿಂದ ವ್ಯಾಪ್ತನಾಗಿದ್ದು, ೬೪ ಕಲಾವಿದ್ಯೆಗಳ ಧಾರಕನಾಗಿರುವನು. ೬೪ ವಿದ್ಯಾ ಧಾರಕನಾಗಿ ಬ್ರಹ್ಮಾದಿ ಸಕಲ ಚೇತನರಲ್ಲಿದ್ದು, ಧರ್ಮ. ಸತ್ಯ; ದಯಾ, ದಾನವೆಂಬ ನಾಲ್ಕು ಪಾದಗಳುಳ್ಳ ಧರ್ಮವನ್ನು ಸ್ಥಾಪಿಸುತ್ತಾ, ಮಾಡಿಸುತ್ತಾ ಚತುಷ್ಪಾದನಾಮಕನಾಗಿಯೂ ಅಥವಾ ಚತುಷ್ಪಾದವುಳ್ಳ ಧರ್ಮನಾಮಕನಾ ಗಿಯೂ ಇದ್ದು, ಸರ್ವಲೋಕಗಳಲ್ಲಿ ವಿಹಾರಮಾಡುತ್ತಿರುವನು. ॥೭॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

ಈರೆರಡು-ನಾಲ್ಕು ದೇಹಗಳೆಂಬರ್ಥ ಊರ್ಮಿತಿ :—

**"ಅಸ್ತಿ ಜಾಯತೇ ವರ್ಧತೇ ಪರಿಣಮತೇ ಅಪಕ್ಷೀಯತೇ ವಿನಶ್ಯತೇ"**

—ಎಂಬ ಷಡೂರ್ಮಿಗಳು, ಪಂಚಭೂತಗಳು, ಆರಧಿಕ ದಳ ಅಂದರೆ ಷೋಡಶ ಋಕ್ ಉಳ್ಳದ್ದು **ಪುರುಷಸೂಕ್ತ.** ಇದರಿಂದ ಸ್ತುತ್ಯ ಎಂಬರ್ಥ.

**"ಪುಂಸೂಕ್ತ ಪ್ರತಿಪಾದ್ಯಸ್ತು ಪುರುಷೋ ಹರಿರೀರಿತಃ ಇತಿ ||" —ಪ್ರಕಾಶಸಂಹಿತೋಕ್ತಿ.**

ಚತುಷ್ಪಾದೇತಿ- ನಾಲ್ಕು ರೂಪದಿಂದ ಬ್ರಹ್ಮರುದ್ರಾದಿಗಳಲ್ಲಿ ಕ್ರೀಡಾಮಾಡುತ್ತಾನೆಂದು ಭಾವ ॥೭॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-

"ಈರೆರಡು ಇತಿ" ॥ ಚತುಷ್ಪಾದಃ ದೇಹ ಚತುಷ್ಟಯೇ॥ ಊರ್ಮೀತರೆ, ಭೂತಪದಂ ಷೋಡಶ ಲೋಪಲಕ್ಷಣಮ್ ॥ ತತ್ರ । ಆರು-ಷೋಡಶ ಋಕ್ ಪುರುಷಸೂಕ್ತಮ್ ॥ ಸರ್ವವ್ಯಾಪ್ತೇಃ ವಿಷ್ಣುನಾಮಾ ॥ ಸರ್ವತ್ರ ಮೇಲನೇ ಚತುಃಷಷ್ಠಿಃ (ಷ್ಟಮಃ) ಭವತಿ ॥ ಪುರಾರಿಃ = ಶಿವಃ ॥೭॥

## ಕನ್ನಡಾರ್ಥ :–

ಶ್ರೀಹರಿಯು ಚತುಷ್ಪಾದ ರೂಪಿಯಾಗಿ ತನುಚತುಷ್ಟಯಗಳಲ್ಲಿ ವಿದ್ಯಮಾನನಾಗಿರುತ್ತಾನೆ. "ಭೂತ" ಎಂಬ ಪದದ ಶಬ್ದಾರ್ಥವು "೧೬ ಕಲೆಗಳಿಂದ ಯುಕ್ತವಾದದ್ದು. ಎಂಬುದಾಗಿ ಆರಧಿಕದಶವೆಂದರೆ. ಹದಿನಾರು

(ಷೋಡಶ) ಎಂದರ್ಥ. ಶ್ರೀ ವಿಷ್ಣುವು ಪುರುಷಸೂಕ್ತಪ್ರತಿಪಾದ್ಯನು. ಸರ್ವತ್ರ ಪರಿಪೂರ್ಣನಾಗಿ ವ್ಯಾಪ್ತನಾಗಿರುವುದರಿಂದ ಶ್ರೀ ಪರಮಾತ್ಮನಿಗೆ "ವಿಷ್ಣು" ಎಂದು ಹೆಸರು. ಪ್ರತಿ ದೇಹದಲ್ಲಿ ೧೬ ರೂಪಗಳಂತೆ ನಾಲ್ಕು ದೇಹಗತರೂಪಗಳ ಸಂಖ್ಯಾ = ೪ × ೧೬ = ೬೪ ರೂಪಗಳಾಗುವುದು. "ಪುರಾರಿ" –ಎಂದರೆ ತ್ರಿಪುರಾಸುರನನ್ನು ವಧಿಸಿದ ಮಹರುದ್ರದೇವರೆಂದರ್ಥ. ॥೮॥

ಚತುಃಷಷ್ಟಿ ಕಳಾಧಾರಕ ವಿಷ್ಣ್ವಾದಿರೂಪ ತಿಳಿಸುತ್ತಾರೆ :— ಉಕ್ತ ನಾಲ್ಕು ದೇಹಗಳಲ್ಲೂ ಉಂಟಾಗುವ ಷಡೂರ್ಮಿಗಳೆಂಬ ಆರುವಿಧ ವಿಕಾರಗಳು ಯಾವುವೆಂದರೆ– ಶುಕ್ಲರೂಪದಿಂದಿರುವುದು, ಗರ್ಭದಲ್ಲಿ ಜನಿಸುವುದು, ನಾನಾ ಅವಯುವರೂಪವಾಗುವುದು, ಬೆಳೆಯುವುದು, ವಾರ್ಧಿಕ್ಯದಿಂದ ತಗ್ಗುವುದು, ಮೃತಿಯಿಂದ ನಷ್ಟವಾಗುವುದು. ಈ ಸಹ ಆರು ಬಗೆ ಊರ್ಮಿಗಳೆಂಬ ದೇಹವಿಕಾರದಲ್ಲೂ, ಪಂಚಭೂತಗಳಲ್ಲೂ ಇರುವ ಆರಧಿಕ ದಶ ಋಗ್ವಿನುತ–ಎಂದರೆ **"ಉದೀತ್ಯಂ ಜಾತವೇದಸಂ"**–ಎಂಬ ಋಕ್ಕಿನಿಂದ **"ರಂಧಯನ್ಮೋಽಹಂ"**– ಎಂಬವರೆಗೆ ಹದಿನಾರು ಋಕ್ಕುಗಳಿಂದ ಸ್ತುತ್ಯನಾದ ಲಕ್ಷ್ಮೀಪತಿಯು **"ವಿಷ್ಣು"**ವೆಂಬ ರೂಪದಿಂದ ಬ್ರಹ್ಮರುದ್ರ ಮೊದಲಾದವರಲ್ಲಿದ್ದು, ಚತುಃಷಷ್ಟಿಕಳಾಧಾರನು. ಎಂದರೆ–ಋಗ್ಯಜುಸ್ಸಾಮಾಥರ್ವಣ ವೇದಗಳು ನಾಲ್ಕು, ಆಯುರ್ವೇದವೆಂಬ ವೈದ್ಯಶಾಸ್ತ್ರ ಧನುರ್ವೇದವೆಂಬ ಯುದ್ಧ ವಿದ್ಯಾ, ಗಾಂಧರ್ವವೇದವೆಂಬ ನೃತ್ಯಗೀತಶಾಸ್ತ್ರ ನೀತಿಶಾಸ್ತ್ರ ನಾಲ್ಕು ಸಹ ಸೇರಿ ನಾಲ್ಕು ಉಪವೇದಗಳು, ಶಿಕ್ಷಾ, ವ್ಯಾಕರಣ. ನಿರುಕ್ತಿ, ಛಂದಶ್ಶಾಸ್ತ್ರ, ಜೋತಿಷ್ಯ ಮತ್ತು ಕಲ್ಪ ಎಂಬ ಕರ್ಮಾಚರಣೆ ವಿಧಾನ ಹೇಳುವ ಶಾಸ್ತ್ರಸಹ ಸೇರಿ ಆರು ಅಂಗಗಳೂ ಒಟ್ಟು ೧೪ ವಿದ್ಯೆಗಳು. ಈ ವಿದ್ಯೆಗಳಿಗೆ ಪರಮಾತ್ಮನ ಪರ ಅರ್ಥಮಾಡಿದರೆ ಆಗುವ ಅಪರ ವಿದ್ಯಾ ಎರಡೂ ಸೇರಿ, ೧೬ ವಿದ್ಯೆಗಳು. ದೇವ, ಋಷಿ, ಮನುಷ್ಯೋತ್ತಮ ಮತ್ತು ಪಿತೃಗಳೆಂಬ ನಾಲ್ಕು ವಿಧ ಮುಕ್ತಿಯೋಗ್ಯರ ಯೋಗ್ಯತಾನುಸಾರ ಜ್ಞಾನಗಳು ೬೪ ವಿಭಾಗಗಳಾಗುವುದರಿಂದ, ಈ ೬೪ ವಿದ್ಯೆಗಳೆಂಬ ಕಳೆಗಳಿಗೆ ಧಾರಕನಾಗಿ, ಅಂದರೆ, ಆಶ್ರಯನಾಗಿ ಅಥವಾ **"ಚತುಶ್ಚತುಷ್ಟಿರ್ಜಾತ**

**ಯಃ**"– **ಎಂಬ ವಿಷ್ಣುರಹಸ್ಯ** ರೀತ್ಯಾ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ಜಾತಿಗಳೂ, **ಬ್ರಾಹ್ಮಣನಿಗೆ** ಕ್ಷತ್ರಿಯ. ವೈಶ್ಯ, ಶೂದ್ರ ಸ್ತ್ರೀಯರಲ್ಲಿ ಉತ್ಪನ್ನರಾದ ಮೂರ್ಧಾವಸಿಕ್ತ, ಅಂಬಷ್ಠ ಮತ್ತು ಪಾರಶವ ಎಂಬ ಮೂರು ಜಾತಿಗಳು. **ಕ್ಷತ್ರಿಯನಿಗೆ** ಬ್ರಾಹ್ಮಣ, ವೈಶ್ಯ ಶೂದ್ರಸ್ತ್ರೀಯರಲ್ಲಿ ಉತ್ಪನ್ನರಾದ ಸೂತ, ಮಾಹಿಷ, ಮತ್ತು ಉಗ್ರ ಎಂಬ ಮೂರು ಜಾತಿಗಳು. **ವೈಶ್ಯನಿಗೆ** ಬ್ರಾಹ್ಮಣ, ಕ್ಷತ್ರಿಯ ಮತ್ತು ಶೂದ್ರ ಸ್ತ್ರೀಯರಲ್ಲಿ ಉತ್ಪನ್ನರಾದ ವೈದೇಹ ಮಾಹಿಷಕ ಮತ್ತು ಕಾರಣರೆಂಬ ಮೂರು ಜಾತಿಗಳು. **ಶೂದ್ರನಿಗೆ** ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯಸ್ತ್ರೀಯರಲ್ಲಿ ಉತ್ಪನ್ನರಾದ ಚಂಡಾಲ, ಅಯೋಗ್ಯ, ವಕ್ಷತ್ತಾರ ಎಂಬ ಮೂರು ಜಾತಿಗಳು. ಇವೆಲ್ಲಾ ಸೇರಿ ೧೨ ಮಿಶ್ರಜಾತಿಗಳಾಗುವುವು. ಪುನಃ ಈ ೧೨ ಮಿಶ್ರಜಾತಿಗಳಿಗೆ ಮೂಲ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಸ್ತ್ರೀಯರುಗಳ ಸಂಬಂಧದಿಂದ ಉತ್ಪನ್ನವಾಗುವ ಜಾತಿಗಳು {೧೨ × ೪ = ೪೮ ಸೇರಿ, ಒಟ್ಟು ೬೪ ಜಾತಿ ಭೇದ ಜನರಿಗೆ ಜೀವಿಕವಾದ ಲಿಪಿಜ್ಞಾನ ಮೊದಲು ಕಳ್ಳತನದವರೆ ೬೪ ವಿದ್ಯೆಗಳಿಗೆ ಆಧಾರನಾಗಿ, ಅಂದರೆ, ಅವರವರ ಯೋಗ್ಯಕರ್ಮಮಾಡಿಸುವವನಾಗಿ,ಅಥವಾ, ಹಸ್ತಿನಿ, ಚಿತ್ತಿನಿ, ಶಂಖಿನಿ ಮತ್ತು ಪದ್ಮಿನಿ ಎಂಬ ನಾಲ್ಕು ಜಾತಿಸ್ತ್ರೀಯರು ಋತುದಿನಾರಭ್ಯ ೧೬ ಅವಸ್ಥಾಭೇದಗಳೆಂಬ ಕಳೆಗಳಿಗೆ ಆಧಾರನಾಗಿ, ಚತುಷ್ಪಾದಾಹ್ವಯದಿ– ಎಂದರೆ ಭಿನ್ನಾಂಶ ಚತುರ್ವರ್ಣರೆಂಬ ಚತುಷ್ಪಾದನಾಮ ವಹಿಸಿ, ಅಥವಾ ಭಿನ್ನಾಂಶವಾದ ಜಗತ್ತೆಂಬ ೧, ಸ್ವರೂಪಾಂಶ ೩ ಸಹ ಸೇರಿ ಚತುಷ್ಪಾದನಾಮಕನಾಗಿ, ಯಾವಾಗ್ಯೂ ಲೋಕದಲ್ಲಿ ಚೇಷ್ಟಾಪ್ರದನಾಗಿ ಕ್ರೀಡಿಸುವನು. ಇದರಿಂದ–

**"ತ್ರಿಪಾದೋರ್ಧ್ವಂ ಉದಯುತ್ ಪುರುಷಃ ||"**

**"ಪಾದೋಸ್ಯೇಹಾಭವತ್ಪುನಃ ||"**

**-ಎಂಬ ಪುರುಷಸೂಕ್ತಾರ್ಥವು** ವಿವರಿಸಲ್ಪಟ್ಟಿತು. ಪುರುಷಸೂಕ್ತವು ೧೬ ಋಕ್ಕುಗಳಿಂದ ಕೂಡಿರುವುದರಿಂದ, ಪುರುಷ ಸೂಕ್ತದಿಂದ ಸ್ತುತ್ಯನಾದ

ಶ್ರೀಹರಿಯೇ, ಈ ಚತುಃಷಷ್ಠಿ ಕಳಾದಿಗಳಿಗೆ ಆಧಾರರೂಪನೆಂದೂ ಭಾವಿಸಬಹುದು. ॥೭॥

# ಸರ್ವವ್ಯಾಖ್ಯಾನಸಾರಸಂಗ್ರಹ :

ಶ್ರೀ ಪರಮಾತ್ಮನು ಸರ್ವತ್ರವ್ಯಾಪ್ತನಾಗಿದ್ದಾನೆ. ಅಣುರೇಣುತೃಣ ಕಾಷ್ಠಾದಿಗಳಲ್ಲಿ ಸರ್ವತ್ರ ಪರಿಪೂರ್ಣರೂಪಗಳಿಂದ ವ್ಯಾಪ್ತನಾಗಿರುವ ಶ್ರೀ ಪರಮಾಪ್ತನಿಗೆ "**ವಿಷ್ಣು**" ಎಂದು ಹೆಸರು. ವಿಷ್ಣುನಾಮಕನಾದ ಶ್ರೀ ಮನ್ನಾರಾಯಣನೇ ಪರಿಪೂರ್ಣನಾದ ಪರಬ್ರಹ್ಮಸ್ವರೂಪನು. ಅಂತಹ ಸರ್ವತ್ರ ವ್ಯಾಪ್ತ ಪರಿಪೂರ್ಣ ಪರಬಹ್ಮಸ್ವರೂಪನಾದ **ವಿಷ್ಣು**ನಾಮಕ ಶ್ರೀಪರಮಾತ್ಮನ ರೂಪೋಪಾಸನಾ ಕ್ರಮವನ್ನು "**ಈರೆರಡು**"- ಎಂಬ ಪ್ರಸಕ್ತ ೭ನೆಯ ಈ ಪದ್ಯದಿಂದ ವಿವರಿಸುತ್ತಾರೆ.

"**ವಿಷ್ಲ್ ವ್ಯಾಪ್ತೌ**" ಎಂದು ವ್ಯಾಪ್ತಿಯು "**ವಿಷ್ಣು**" ಶಬ್ದದ ಅವಯವಾರ್ಥವು.

"ಈರೆರಡು"- ಎಂದರೆ, ೨×೨=೪ ಎಂದರ್ಥ, ಅಂದರೆ (೧) ಸ್ವರೂಪ (೨) ಲಿಂಗ (೩) ಅನಿರುದ್ಧ ಮತ್ತು (೪) ಸ್ಥೂಲ - ಎಂಬ ನಾಲ್ಕು ವಿಧವಾದ ದೇಹಗಳು (ತನು ಚತುಷ್ಟಯಗಳು).

ಈ ದೇಹಗಳಿಗೆ ಉಂಟಾಗುವ ವಿಕಾರಗಳು ಆರು ಪ್ರಕಾರ. ಸಮುದ್ರದಲ್ಲಿ ತರಂಗಗಳು (ಅಲೆಗಳು) ಒಂದಾದಮೇಲೆ ಮತ್ತೊಂದರಂತೆ ಬರುತ್ತಿರುವಂತೆ, ಸ್ಥೂಲದೇಹದಲ್ಲಿ ವಯೋಮಾನಕ್ಕನುಗುಣವಾಗಿ ವಿಕಾರಗಳುಂಟಾಗುವುವು. ಇವುಗಳಿಗೆ "**ಷಡೂರ್ಮಿ**"ಗಳೆಂದು ಹೆಸರು (ಷಟ್+ಊರ್ಮಿ= ಷಡೂರ್ಮಿ. ಷಟ್ ಎಂದರೆ ಆರು, ಊರ್ಮಿ = ಎಂದರೆ ತರಂಗ ಅಥವಾ ಅಲೆ)

ಈ ಷಡೂರ್ಮಿಗಳ ವಿವರ ಇಂತಿದೆ :—

(೧) **ಅಸ್ತಿ**–ಗರ್ಭದಲ್ಲಿ ಶುಕ್ಲರೂಪದಿಂದ ಇರುವುದು.
(೨) **ಜಾಯತೇ**–ಗರ್ಭದಲ್ಲಿ ಜನಿಸುವುದು.
(೩) **ಪರಿಣಮತೇ**–ನಾನಾ ಅವರೂಪಗಳನ್ನು ಹೊಂದುವುದು.
(೪) **ವಿವರ್ಧತೇ**–ಬೆಳವಣಿಗೆಯನ್ನು ಹೊಂದುವುದು.
(೫) **ಅಪಕ್ಷೀಯತೇ**–ದೇಹ ಕ್ಷೀಣಿಸುವಿಕೆ.
(೬) **ವಿನಶ್ಯತೇ**–ಕೊನೆಯಲ್ಲಿ ಮರಣದಿಂದ ನಾಶವಾಗುವುದು.

**ಪ್ರಮಾಣ**–

**"ಅಸ್ತಿ ಜಾಯತೇ ವರ್ಧತೇ ಪರಿಣಮತೇ ಅಪಕ್ಷೀಯತೇ ವಿನಶ್ಯತೇ॥"**

ಇವೇ ದೇಹದ ವಿಕಾರಗಳಿಗೆ ಕಾರಣಗಳಾದ **ಷಡೂರ್ಮಿಗಳು.** ಈ ಷಡೂರ್ಮಿಗಳ ಅರ್ಥವನ್ನು ಪ್ರಾಕಾರಾಂತವಾಗಿಯೂ ವಿವರಿಸಬಹುದು:-

(೧) ಜನನ (೨) ಕ್ಷುತ್ (೩) ತೃಷೆ (ನೀರಡಿಕೆ) (೪) ಶೋಕ (೫) ದುಃಖ ಮತ್ತು (೬) ಮರಣ–ಎಂಬ ಆರು ವಿಧವಾದ ದೇಹ ವಿಕಾರಗಳು "**ಭೂತ**"ಗಳೆಂದರೆ- ಪೃಥಿವೀ, ಅಪ್. ತೇಜಸ್ಸು. ವಾಯು ಎಂಬ ಆಕಾಶಗಳೆಂಬ ಭೂತಪಂಚಕಗಳು. ಈ ಸ್ಥೂಲದೇಹವು ಪಾಂಚಭೌತಿಕವಾದ ಶರೀರವು. ಅಂದರೆ ಪಂಚಭೂತಗಳಿಂದ ನಿರ್ಮಿತವಾದದ್ದು.

**ಆರಧಿಕದಶ**-ಎಂದರೆ ಹದಿನಾರು. ಆರಧಿಕ=ಆರು ಹೆಚ್ಚಾದ ದಶ=ಹತ್ತು, ಅಂದರೆ ೬+೧೦=೧೬ ಎಂದರ್ಥ.

**ಪುರುಷಸೂಕ್ತ**ವು ಹದಿನಾರು ಋಕ್ಕುಗಳಿಂದ ಕೂಡಿದ ಮಂತ್ರವು. "**ಉದೀತ್ಯಂ ಜಾತವೇದಸಂ**"–ಎಂಬ ಋಕ್ಕಿನಿಂದ ಪ್ರಾರಂಭಿಸಿ, "**ರಂಥಯನ್ಮ್ಯೋಽನಹಂ**" –ಪರ್ಯಂತ ಹದಿನಾರು ಋಕ್ಕುಗಳಿವೆ. ಇಂತಹ ೧೬

ಋಕ್ಕುಗಳಿಂದ ಘಟಕವಾದ ಪುರುಷಸೂಕ್ತದಿಂದ ಲಕ್ಷ್ಮೀರಮಣನು ಪ್ರತಿಪಾದ್ಯನು. ಇದನ್ನೇ ದಾಸರಾಯರು–"**ಆರಧಿಕದಶ ಋಗ್ವಿನುತ ರೂಪದಿ ಲಕ್ಷ್ಮೀರಮಣ**" ಎಂದಿದ್ದಾರೆ. ಅಂದರೆ, ಪುರುಷಸೂಕ್ತಸುಮೇಯನೆಂದರ್ಥ.

ಜ್ಞಾನೇಂದ್ರಿಯಗಳು = ೫, ಕರ್ಮೇಂದ್ರಿಯೆಗಳು = ೫, ಮಾತ್ರಾ ಸಹಿತ ಭೂತ ಪಂಚಕಗಳು = ೫ ಮತ್ತು ಮನಸ್ಸು = ೧. ಈ ತತ್ವಗಳೆಲ್ಲಾ ಸೇರಿ ೧೬. ಇಂತಹ ಷೋಡಶಕಳಾತ್ಮಕವಾದದ್ದು ಲಿಂಗದೇಹ. ಇದರ ಸ್ಥೂಲಾವರಣವೇ ಈ ಸ್ಥೂಲದೇಹವು. **(ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ)**

ಆದರೆ "ಋಗ್ವಿನುತ" ಎಂದು ಪದ ಪ್ರಯೋಗವಿರುವುದರಿಂದ ೧೬ ಋಕ್‌ಸಹಿತವಾದ ಪುರುಷಸೂಕ್ತ ಪ್ರತಿಪಾದ್ಯನೆಂದು ಅರ್ಥಮಾಡಿದರೆ ಉತ್ತಮ ಪಕ್ಷವು. ಅಂತಹ ಷೋಡಶ ಋಕ್ಕುಗಳಿಂದ ಸಂಸ್ತುತ್ಯನಾಗಿ, ಪುರುಷ ಸೂಕ್ತ ಪ್ರತಿಪಾದ್ಯನಾದ ರಮಾಪತಿಯಾದ ಶ್ರೀಪರಮಾತ್ಮನು ವಿಷ್ಣುನಾಮಕ ವಾಗಿ ಸರ್ವತ್ರ ವ್ಯಾಪ್ತನಾಗಿದ್ದಾನೆ.

ಚತುಃಷಷ್ಠಿ ಕಲೆಗಳೆಂದರೆ ೬೪ ವಿದ್ಯೆಗಳೆಂದು ತಾತ್ಪರ್ಯ. ಇದರ ವಿವರಣೆಯನ್ನು ನಾನಾ ರೀತಿಗಳಲ್ಲಿ ಕೊಟ್ಟಿರುತ್ತಾರೆ ವಿವಿಧ ವ್ಯಾಖ್ಯಾನಕಾರರು.

(೧) ನಾಲ್ಕು ದೇಹಗತ ಭಗವದ್ರೂಪಗಳು ೪ × ೧೬ ಪುರುಷಸೂಕ್ತ ಘಟಕವಾದ ವಿವರಣೆಯನ್ನು ಋಕ್ ಪ್ರತಿಪಾದ್ಯ ರೂಪಗಳು = ೧೬ ರೂಪ ಗಳು.

(೨) ಸ್ಥೂಲದೇಹಗಳು ನಾಲ್ಕು ಪ್ರಕಾರ :– (೧) ಸ್ವೇದಜ (೨) ಉದ್ಭಿಜ್ಜ (೩) ಅಂಡಜ ಮತ್ತು (೪) ಜರಾಯುಜ.

ಈ ಪ್ರತಿ ಪ್ರಕಾರದ ದೇಹಕ್ಕೂ ೧೬ ಕಳೆಗಳು. ಅಂದರೆ ಜ್ಞಾನೇಂ ದ್ರಿಯಗಳು = ೫, ಕರ್ಮೇಂದ್ರಿಯಗಳು = ೫, ತನ್ಮಾತ್ರಾಸಹಿತ ಪಂಚ

ಭೂತಗಳು = ೫ ಮತ್ತು ಮನಸ್ಸು = ೧. ಅಂತು ೪ ಪ್ರಕಾರವಾಗಿ ಸ್ಥೂಲ ದೇಹಗಳು ೪ × ೧೬ ದೇಹಗತ ಕಳೆಗಳು = ೬೪ ರೂಪಗಳು.

(೩) ಶಾಸ್ತ್ರ ವಿವಕ್ಷಯಾ, ೧೬ ಶಾಸ್ತ್ರ ವಿಭಾಗಗಳು, ಅವು ಯಾವುವೆಂದರೆ :–

(೧) ಋಗ್ವೇದ
(೨) ಯಜುರ್ವೇದ — ಚತುರ್ವೇದಗಳು = ೪
(೩) ಸಾಮವೇದ
(೪) ಅಥರ್ವಣ ವೇದ
(೫) ಆಯುರ್ವೇದವೆಂಬ ವೈದ್ಯಶಾಸ್ತ್ರ
(೬) ಧನುರ್ವೇದವೆಂಬ ಯುದ್ಧವಿದ್ಯೆ — ಉಪವೇದಗಳು = ೪
(೭) ಗಂಧರ್ವವೇದವೆಂಬ ನೃತ್ಯ ಸಂಗೀತ ಶಾಸ್ತ್ರ
(೮) ನೀತಿ ಶಾಸ್ತ್ರ
(೯) ಶಿಕ್ಷಾ
(೧೦) ವ್ಯಾಕರಣ
(೧೧) ನಿರುಕ್ತಿ — ಷಡಂಗಗಳು = ೬
(೧೨) ಛಂದಶ್ಯಾಸ್ತ್ರ
(೧೩) ಜೋತಿಷ್ಯ
(೧೪) ಕಲ್ಪ
(೧೫) ಭಗವತ್ಪರವಾದ ಪರವಿದ್ಯೆ

ಪರಾಪರವಿದ್ಯೆಗಳು = ೨

(೧೬) ಅನ್ಯದೇವತೆಗಳ ಪರವಾದ ಅಪರವಿದ್ಯೆ

---

ಒಟ್ಟು ಶಾಸ್ತ್ರಗಳು = ೧೬

---

ಅಲ್ಲದೆ ನಾಲ್ಕು ವಿಧದ ಮುಕ್ತಿಯೋಗ್ಯಜೀವರು

(೧) ದೇವತೆಗಳು.
(೨) ಋಷಿಗಳು.
(೩) ಮಾನುಷೋತ್ತಮರು.
(೪) ಪಿತೃಗಳು.

ಅಂತು, ೪ × ೧೬ = ೬೪ ಕಳಾಧಾರಕ ಭಗವದ್ರೂಪಗಳು.

(೪) ಚತುಃಷಷ್ಠಿ ಕಲೆಗಳೆಂದು ೬೪ ಸಂಖ್ಯಾಕವಾದ ವಿದ್ಯೆಗಳು. ಈ ಅರವತ್ತುನಾಲ್ಕು ವಿದ್ಯೆಗಳ ಪಟ್ಟಿಯನ್ನು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ. ಅದನ್ನು ನೋಡುವುದು.

(೫) ೬೪ ಎಂಬ ಸಂಖ್ಯಾ ವಿವರಣೆಯನ್ನು ವರ್ಣ (ಜಾತಿ) ದೃಷ್ಟಿಯಿಂದಲೂ ಕೊಡಬಹುದು.

ಚತುರ್ವರ್ಣಗಳು ನಾಲ್ಕು ಪ್ರಕಾರ :–

(೧) ಬ್ರಾಹ್ಮಣ ವರ್ಣ
(೨) ಕ್ಷತ್ರಿಯ ವರ್ಣ
(೩) ವೈಶ್ಯ ವರ್ಣ
(೪) ಶೂದ್ರವರ್ಣ

ಈ ಮೂಲ ವರ್ಣದಿಂದ ಉತ್ಪನ್ನವಾದ ಮಿಶ್ರಜಾತಿಗಳು ೬೪ ಪ್ರಕಾರ :–

## ಮಿಶ್ರಜಾತಿಗಳ ವಿವರಣೆ :-

| ಕ್ರಮ ಸಂಖ್ಯೆ | ಮೂಲವರ್ಣ | ಇತರವರ್ಣದ ಸ್ತ್ರೀಯರಲ್ಲಿ | ಉತ್ಪನ್ನರಾದ ಮಿಶ್ರಜಾತಿ |
|---|---|---|---|
| ೧ | ಬ್ರಾಹ್ಮಣನಿಗೆ | ಕ್ಷತ್ರಿಯ ಸ್ತ್ರೀಯಲ್ಲಿ | ಮೂರ್ಧಾವಸಿಕ್ತ |
| ೨ | ” | ವೈಶ್ಯ ಸ್ತ್ರೀಯಲ್ಲಿ | ಅಂಭಷ್ಠ |
| ೩ | ” | ಶೂದ್ರ ಸ್ತ್ರೀಯಲ್ಲಿ | ಪಾರಶ. |
| ೪ | ಕ್ಷತ್ರಿಯನಿಗೆ | ಬ್ರಾಹ್ಮಣ ಸ್ತ್ರೀಯಲ್ಲಿ | ಸೂತ |
| ೫ | ” | ವೈಶ್ಯ ಸ್ತ್ರೀಯಲ್ಲಿ | ಮಾಹಿಷ |
| ೬ | ” | ಶೂದ್ರ ಸ್ತ್ರೀಯಲ್ಲಿ | ಉಗ್ರ |
| ೭ | ವೈಶ್ಯನಿಗೆ | ಬ್ರಾಹ್ಮಣ ಸ್ತ್ರೀಯಲ್ಲಿ | ವೈದೇಹ |
| ೮ | ” | ಕ್ಷತ್ರಿಯ ಸ್ತ್ರೀಯಲ್ಲಿ | ಮಾಹಿಷಕ |
| ೯ | ” | ಶೂದ್ರ ಸ್ತ್ರೀಯಲ್ಲಿ | ಕಾರಣ |
| ೧೦ | ಶೂದ್ರನಿಗೆ | ಬ್ರಾಹ್ಮಣ ಸ್ತ್ರೀಯಲ್ಲಿ | ಚಂಡಾಲ |
| ೧೧ | ” | ಕ್ಷತ್ರಿಯ ಸ್ತ್ರೀಯಲ್ಲಿ | ಅಯೋಗ್ಯ |
| ೧೨ | ” | ವೈಶ್ಯ ಸ್ತ್ರೀಯಲ್ಲಿ | ವಕ್ಷತ್ತಾರ |

ಇಂತು ೧೨ **ಮಿಶ್ರಜಾತಿಗಳು.**

ಪುನಃ ಪೂರ್ವೋಕ್ತ ೧೨ ಮಿಶ್ರಜಾತಿಗಳಿಗೆ ಮೂಲವರ್ಣದವರಾದ ಬ್ರಾಹ್ಮಣ. ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಸ್ತ್ರೀಯರುಗಳ ಸಂಬಂಧ ದಿಂದ ಉತ್ಪತ್ತಿಯಾಗುವ ಸಮ್ಮಿಶ್ರ ಜಾತಿಗಳು ೧೨ × ೪ = ೪೮.

| | | |
|---|---|---|
| ಇಂತು ವರ್ಣ ಸಾಂಕರ್ಯದಿಂದ ಮಿಶ್ರಜಾತಿಗಳು | = | ೧೨ |
| ಸಮ್ಮಿಶ್ರ ಜಾತಿಗಳು | = | ೪೮ |
| ಮೂಲ ವರ್ಣಗಳು | = | ೪ |
| ಒಟ್ಟು | = | ೬೪ |

(೬) ಸ್ತ್ರೀಯರಲ್ಲಿ ನಾಲ್ಕು ಪ್ರಕಾರವಾದ ಪಂಗಡಗಳು :-

(೧) **ಹಸ್ತಿನಿ** ಜಾತಿಗೆ ಸೇರಿದ ಸ್ತ್ರೀಯರು

(೨) **ಚಿತ್ತಿನಿ** ಜಾತಿಗೆ ಸೇರಿದ ಸ್ತ್ರೀಯರು

(೩) **ಶಂಖಿನಿ** ಜಾತಿಗೆ ಸೇರಿದ ಸ್ತ್ರೀಯರು

(೪) **ಪದ್ಮಿನಿ** ಜಾತಿಗೆ ಸೇರಿದ ಸ್ತ್ರೀಯರು

ಮೇಲ್ಕಂಡ ನಾಲ್ಕು ಜಾತಿಯ ಸ್ತ್ರೀಯರು ಋತುದಿನಾರಭ್ಯ ೧೬ ದಿನಗಳಲ್ಲಿ ಅವರವರ ಸ್ವಭಾವರೀತ್ಯಾ ವ್ಯತ್ಯಸ್ತವಾಗುವ ೪ × ೧೬ = ೬೪ ಅವಸ್ಥಾ ಬೇಧಗಳು.

ಹೀಗೆ ೬೪ ಕಳಾ ಸಮೂಹವನ್ನು ಆರು ಪ್ರಕಾರ ವಿವರಿಸಬಹುದು. ಇಂತಹ ೬೪ ವಿದ್ಯೆಗಳಿಗೆ ಮುಖ್ಯ ಆಶ್ರಯನಾಗಿರುವುದರಿಂದ ಶ್ರೀ ಪರ ಮಾತ್ಮನನ್ನು "ಚತುಷಷ್ಠಿ ಕಳಾಧಾರಕ" ನೆಂದು ಕರೆದಿರುವರು. ಇಂತಹ ಚತುಷಷ್ಠಿ ಕಳಾಧಾರಕವಾದ ಶ್ರೀ ಪರಮಾತ್ಮನು ಚತುರ್ಮುಖ ಬ್ರಹ್ಮ ದೇವರು, ತ್ರಿಪುರಾಸುರನನ್ನು ಸಂಹಾರ ಮಾಡಿದ ಮಹರುದ್ರ ದೇವರು ಇವರೇ ಮೊದಲಾದ ಮುಖ್ಯ ದೇವತಾ ವರ್ಗದವರಲ್ಲಿ ಬಿಂಬರೂಪನಾಗಿದ್ದು,

ನಿರಂತರವೂ ಕ್ರೀಡಾವಿಶಿಷ್ಟನಾಗಿ ವಿಹಾರ ಮಾಡುತ್ತಿರುವನು. ಅಂತಹ ಕ್ರೀಡಾವಿಹಾರಿಯು **"ಚತುಷ್ಪಾತ್"** ಎಂಬ ಹೆಸರಿನಿಂದ ವಿಖ್ಯಾತನಾಗಿದ್ದಾನೆ. (೧) ಧರ್ಮ (೨) ಸತ್ಯ (೩) ದಯಾ ಮತ್ತು (೪) ದಾನಗಳೆಂಬ ನಾಲ್ಕು ಆ ಪುರುಷ ರೂಪಾತ್ಮಕನ ನಾಲ್ಕು ಪಾದಗಳು. ಇಂತು ಚತುಷ್ಪಾತ್ ನಾಮಕನಾಗಿ ಶ್ರೀ ಪರಮಾತ್ಮನು ಈ ಜಗತ್ತಿನಲ್ಲಿ ಸರ್ವತ್ರ ತುಂಬಿದ್ದಾನೆ ಎಂದು ಪ್ರಸಕ್ತ ಪದ್ಯಾಭಿಪ್ರಾಯವು. ॥೭॥

## ಪದ್ಯ (೮)

**ಮೂಲ :–**

**ತೃಣ ಮೊದಲು ಬ್ರಹ್ಮಾಂತ ಜೀವರ ।**
**ತನುಚತುಷ್ಟಯಗಳಲಿ ನಾರಾ ।**
**ಯಣನ ಸಾವಿರದೈದು ನೂರಿಪ್ಪತ್ತು ಮೇಲ್ಮಾರು ॥**
**ಗಣನೆ ಮಾಳ್ಪುದು ಬುಧರು ರೂಪವ ।**
**ಘ್ರಾಣಿ ಸೂರ್ಯಾದಿತ್ಯನಾಮಗ ।**
**ಳನುದಿನದಿ ಜಪಿಸುವರಿಗೀವಾರೋಗ್ಯ ಸಂಪದವ ॥೮॥**

**ಅವತರಣಿಕೆ :–**

ತೃಣಾಂತ ಜೀವರನ್ನು ಆರಂಭಮಾಡಿಕೊಂಡು, ಚತುರ್ಮುಖ ಬ್ರಹ್ಮದೇವರ ಪರ್ಯಂತ ಇರುವ ಸಮಸ್ತ ಜೀವರಾಶಿಗಳ ನಾಲ್ಕು ಪ್ರಕಾರವಾದ ದೇಹಗಳಲ್ಲಿ ಮೂಲೇಶನಾದ ಶ್ರೀಮನ್ನಾರಾಯಣನ ಅಕ್ಷರ ಸಾಂಕೇತವಾದ ೫೧೨೬ ಭಗವದ್ರೂಪಗಳ ಚಿಂತನೆಯನ್ನು ವಿವರಿಸುತ್ತಾರೆ. **"ತೃಣ ಮೊದಲು"**– ಎಂಬ ಪ್ರಸಕ್ತ ಸಂಧಿಗತ ೮ ನೆಯ ಈ ಪದ್ಯದಿಂದ.

ತೃಣ ಜೀವರಾಶಿಯಾದಿ ಜೀವೋತ್ತಮರಾದ ಬ್ರಹ್ಮದೇವರ ಪರ್ಯಂತ, ಆಯಾಯಾ ಜೀವರ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲ ಎಂಬ ನಾಲ್ಕು ಪ್ರಕಾರವಾದ ಶರೀರಗಳಲ್ಲಿ ಮೂಲರೂಪಿ ಶ್ರೀಮನ್ನಾರಾಯಣನು ವಿದ್ಯಮಾನನಾಗಿದ್ದು, ಆಯಾಯಾ ಶರೀರಗತ ವ್ಯಾಪಾರ ವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು. "ನಾರಾಯಣ" ಎಂಬ ಶಬ್ದದ ಅಕ್ಷರ ಸಾಂಕೇತ ರೂಪಗಳು. ೫೧೨೬ ಆಗುವುವು. ಹೇಗೆಂದರೆ ನ + ಆ = ೫ + ೧ = ೬ ರಾ = ೨ ಯ = ೧ ಣ = ೫. ವಾಮಾಂಕರೀತ್ಯಾ ೫೧೨೬ ಜ್ಞಾನಿಗಳು, ಪೂರ್ವೋಕ್ತ ಭಗವದ್ರೂಪಗಳನ್ನು ಚಿಂತಿಸುವರು. "ಘೃಣೀ"–ಎಂಬ ಸೂರ್ಯಮಂಡಲಾಂತರ್ಗತ ಘೃಣೀ ನಾಮಕ ನಾರಾಯಣ, "ಸೂರ್ಯ"–ಎಂದರೆ- ಸೂರ್ಯನ ಕಿರಣಗಳು, ತದಂತರ್ಗತ ಸೂರ್ಯ ಶಬ್ದವಾಚ್ಯ ನಾರಾಯಣ, "ಆದಿತ್ಯ"– ಎಂದರೆ, ಆದಿತ್ಯ ಶಬ್ದವಾಚ್ಯನಾದ ನಾರಾಯಣ. ಇಂತು ನಾರಾಯಣನ ರೂಪತ್ರಯಗಳನ್ನು ಪ್ರತಿನಿತ್ಯದಲ್ಲೂ ಜಪಿಸುವ ಬುಧರಿಗೆ ಆರೋಗ್ಯ ಭಾಗ್ಯವೆಂಬ ಸಂಪತ್ತನ್ನು ಶ್ರೀ ಪರಮಾತ್ಮನು ಕೊಡುವನು ಎಂದು ತಿಳಿಸುತ್ತಾರೆ. ॥೮॥

**ಪ್ರತಿಪದಾರ್ಥ :-**

**ತೃಣ ಮೊದಲು** = ತೃಣಾಂತ ಜೀವರುಗಳನ್ನು ಪ್ರಾರಂಭಿಸಿ **ಬ್ರಹ್ಮಾಂತ** = ಚತುರ್ಮುಖ ಬ್ರಹ್ಮದೇವರ ಪರ್ಯಂತ, **ಜೀವರ** = ಜೀವಕೋಟಿ ಪ್ರವಿಷ್ಟರಾದ ಸಮಸ್ತ ಜೀವರಾಶಿಗಳ **ತನುಚತುಷ್ಟಯಗಳಲಿ** = ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲ–ಎಂಬ ನಾಲ್ಕು ಪ್ರಕಾರವಾದ ಶರೀರಗಳಲ್ಲಿ **ನಾರಾಯಣನ** = ಮೂಲರೂಪಿ ಶ್ರೀಮನ್ನಾರಾಯಣನ **ಸಾವಿರದೈದು** = ಐದುಸಾವಿರದ **ನೂರಿಪ್ಪತ್ತು** = ನೂರು ಇಪ್ಪತ್ತು **ಮೇಲಾರು** = ಅದರ ಮೇಲೆ ಆರು, ಎಂದರೆ, ೫೦೦೦ + ೧೨೦ + ೬ = ೫೧೨೬ (ಐದುಸಾವಿರದ ನೂರ ಇಪ್ಪತ್ತಾರು) ರೂಪಗಳನ್ನು. ಇದಕೆ ವಿವರ- ನಾ = ನ + ಅ = ೫ + ೧ = ೬, ರಾ = ೨, ಯ = ೧, ಮತ್ತು

೫=೫. ವಾಮಾಂಕರೀತ್ಯಾ ೫೧೨೬ ಭಗವದ್ರೂಪಗಳು. **ಗಣನೆ ಮಾಳ್ಪದು**=ಅಕ್ಷರ ಸಾಂಕೇತವಾಗಿ ಪರಿಗಣಿಸಿ, ಚಿಂತನೆಮಾಡತಕ್ಕದ್ದು. **ಬುಧರು**=ಭಗವದನುಗ್ರಹಾಕಾಂಕ್ಷಿಗಳಾದ ಜ್ಞಾನಿಗಳು **ಘೃಣೀ**=ಸೂರ್ಯ ಮಂಡಲಾಂತರ್ಗನಾದ ಘೃಣೀ ಶಬ್ದ ವಾಚ್ಯ, **ಸೂರ್ಯ**=ಸೂರ್ಯನ ಕಿರಣಗತ ಸೂರ್ಯಶಬ್ದವಾಚ್ಯ, **ಆದಿತ್ಯ**=ಅದಿತ್ಯಶಬ್ದವಾಚ್ಯನಾದ **ನಾಮಗಳನ್ನು** = ಪೂರ್ವೋಕ್ತ ಸವಿತ್ರಮಂಡಲಮಧ್ಯವರ್ತಿಯಾದ ಶ್ರೀಮನ್ನಾರಾಯಣನ ನಾಮತ್ರಯಗಳನ್ನು **ಅನುದಿನದಿ**=ಪ್ರತಿದಿನ ದಲ್ಲಿಯೂ **ಜಪಿಸುವರಿಗೆ**=ಚಿಂತನಾಪೂರ್ವಕ ಉಪಾಸುವವರಿಗೆ **ಆರೋಗ್ಯ** =ಉತ್ತಮವಾದ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು **ಸಂಪದವ**=ಇಹದಲ್ಲಿ ಐಶ್ವರ್ಯವನ್ನೂ, ಪರದಲ್ಲಿ ಮೋಕ್ಷ ಸಾಮ್ರಾಜ್ಯ ವೆಂಬ ಸಂಪತ್ತನ್ನೂ **ಈವ**=ಕೊಡುತ್ತಾನೆ, ॥೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಆರೋಗ್ಯಭಾಗ್ಯ ಸಂಪತ್ತುಗಳ ಕೊಡತಕ್ಕ ರೂಪ ಹೇಳತಾರೆ– ಚತುಷ್ಟಯ–ನಾಲ್ಕು ಸಂಖ್ಯಾದಿಂದ ಯುಕ್ತವಾದ, ತೃಣ ಮೊದಲು–ತೃಣ ಜೀವರು ಆರಂಭಮಾಡಿ, ಬ್ರಹ್ಮಾಂತಜೀವರ–ಬ್ರಹ್ಮದೇವರ ಅಂತ್ಯದ ವರೆವಿಗೂ ಪ್ರಾಣಿಗಳ ಎಂದರೆ ವಿವರ :–

(೧) ಬ್ರಹ್ಮಾದಿ ಶತಸ್ಥರವರೆಗೆ ಮುಖ್ಯ ತಾತ್ವಿಕರು. (೨) ಆ ಮುಖ್ಯ ತಾತ್ವಿಕರಾದ ಕರ್ಮಜರು, (೩) ಅತಾತ್ವಿಕರಾದ ಅಜಾನಜರು, ಮತ್ತು (೪) ನಿರಂಶರಾದ ಮಾನುಷ, ಗಂಧರ್ವರಾರಭ್ಯ ತೃಣಾಂತ. ಈ ವಿಧವಾದ ನಾಲ್ಕು ವಿಧ ಜೀವರ, ತನುಗಳಲಿ–ನಾಲ್ಕು ವಿಧವಾದ ಸ್ಥೂಲಾದಿಗಳು ಎಂತ ಅರ್ಥ. ದೇವತಾ ದೇಹಗಳು ಕೂಡ

ಜನನಮರಣಾದಿ ಊರ್ಮಿಗಳಿಂದ ಸಹಿತವಾದದ್ದೇ. ಇಂಥಾ ಶರೀರ ಚತುಷ್ಟಯಗಳಲ್ಲಿ, ನಾರಾಯಣನ-ಮೂಲರೂಪಿ ನಾರಾಯಣನ ರೂಪಗಳು. ಸಾವಿರದೈದು–ಇದು ಸಾವಿರ, ನೂರ ಇಪ್ಪತ್ತು ಮೇಲೆ–ನೂರ ಇಪ್ಪತ್ತರ ಮೇಲೆ. ಆರು–ಆರು, ಅಂತು ೫೧೨೬. ಗಣನೆ ಮಾಳ್ಪದು ಐದುಸಾವಿರದ ಒಂದೂನೂರ ಇಪ್ಪತ್ತಾರು ಎಂತ ಸಂಖ್ಯಾ ಮಾಡೋವವರಾಗಬೇಕು. (ಸಂಧಿ ೪. ಪದ್ಯ ೧೬ ರಲ್ಲಿ ಇದರ ವಿವರ ಸೂಚಿಸಿ ಇದೆ) ಬುಧರು–ಜ್ಞಾನಿಗಳಾದವರು, ರೂಪವ– ಇದೇ ನಾರಾಯಣ ರೂಪವನ್ನು ಸ್ಥಾನತ್ರಯದಲ್ಲಿ ಜಪಿಸಿ ಚಿಂತಿಸಬೇಕು. ಘೃಣೀ–ಸೂರ್ಯಮಂಡಲ ತದಂತರ್ಗತ ಸೂರ್ಯ ಶಬ್ದವಾಚ್ಯ ನಾರಾಯಣನು–ಈ ಸೂರ್ಯನಾದವನು ದೇಹಾಂತರ್ಗತ ಕಮಲಕರ್ಣಿಕಾದ ಮೇಲೆ ಅಗ್ರೇಶನಿಗೆ ಪೀಠವಾಗಿರತಕ್ಕ ಸೂರ್ಯಾಂತರ್ಗತ ರೂಪಗಳು, ನಾಮಗಳನು–ಈ ರೂಪಗಳನ್ನೂ ನಾಮಗಳನ್ನೂ ಉಚ್ಚಾರ ರೂಪದಿಂದ ಜಪಿಸುವರಿಗೆ- ಘೃಣಿಃ. ಸೂರ್ಯ, ಆದಿತ್ಯ ಎಂತ ಜಪಿಸುವವರಿಗೆ, ಆರೋಗ್ಯ–ಸಮೀಚೀನಜ್ಞಾನ ರೂಪವಾದ ಆರೋಗ್ಯ ಘೃಣೀ ನಾಮಕ ಶ್ರೀ ಪರಮಾತ್ಮ, ಭಾಗ್ಯ–ವೈರಾಗ್ಯ ರೂಪವಾದ ಭಾಗ್ಯ ಸೂರ್ಯ ನಾಮಕ ಪರಮಾತ್ಮ, ಸಂಪದವ-ಭಕ್ತಿ ಎಂಬ ಸಂಪತ್ತು ಆದಿತ್ಯನಾಮಕ ಪರಮಾತ್ಮ, ಅನುದಿನದಿ–ಪ್ರತಿದಿನದಲ್ಲೂ ಕ್ರಮೇಣ ಅಭಿವೃದ್ಧಿ ಮಾಡಿ, ಈವ–ಕೊಡೋವವನಾಗತಾನೆ. ॥೨॥

## (೨) "ಭಾವಪ್ರಕಾಶಿಕೆ" —ವ್ಯಾಖ್ಯಾನ :—

ತೃಣ ಮೊದಲು ಬ್ರಹ್ಮಾಂತ ಜೀವರ ನಾಲ್ಕು ಶರೀರಗಳಲ್ಲಿ ಉಪಾಸನಾ ಮಾಡಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ- ತೃಣಮೊದಲು ಬ್ರಹ್ಮದೇವವರೆವಿಗೂ ಇರುವ ಜೀವರ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲವೆಂಬ ನಾಲ್ಕು ದೇಹಗಳಲ್ಲಿ ನಾರಾಯಣ ರೂಪಿಯಾದ ಶ್ರೀ ಪರಮಾತ್ಮನು ಅಕ್ಷರ ಸಂಖ್ಯೆಯಿಂದ ನ+ಆ=ನಾ=೬. ರಾ=೨, ಯ=೧ ಮತ್ತು ಣ=೫, ಇವುಗಳಿಂದ ವಾಮಾಂಕ ಮಾಡಿದರೆ ೫೧೨೬ ಆಗುವುವು. ಅಥವಾ ನಾ=೬, ರಾ=೨, ಯ=೧, ಮತ್ತು ಣ=೫

ಒಟ್ಟು ೫೧೨೫ ಆದವು. ಇಷ್ಟು ರೂಪಗಳ ಕೂಡ ನಾರಾಯಣನ ರೂಪ ಒಂದನ್ನು ಸೇರಿಸಿದರೆ ೫೧೨೬ ಆಗುವುವು, ಇಷ್ಟು ರೂಪಗಳಿಂದ ವಾಸ್ತು ಮಾಡುವನು. ಅದೇ ನಾರಾಯಣನೇ ಸೂರ್ಯಮಂಡಲದ ವರ್ತಿಯಾಗಿದ್ದು "**ಓಂ ಘೃಣೀಃ ಸೂರ್ಯ ಆದಿತ್ಯಃ**" ಎಂಬ ಸೌರಾಕ್ಷರ ಮಂತ್ರವನು **ತಂತ್ರ ಸಾರದಲ್ಲಿ** ಶ್ರೀಮದಾಚಾರ್ಯರು ಉದ್ಧರಿಸಿದ ೭೨ ಮಹಾಮಂತ್ರ ಗಳ ಪೈಕಿ ಒಂದನ್ನಾಗಿ ತೆಗೆದುಕೊಂಡಿರುವರು.

ಧರ್ಮರಾಜರು ವನವಾಸದಲ್ಲಿದ್ದಾಗ ಬ್ರಾಹ್ಮಣ ಭೋಜನ ಮಾಡಿಸಲು ಮಾರ್ಗವಿಲ್ಲದಿರಲು, ಈ ಮಂತ್ರದಿಂದ ಸೂರ್ಯನ ಆರಾಧನೆ ಮಾಡಿ ಅಕ್ಷಯ ಪಾತ್ರೆಯನ್ನು ಪಡೆದನು. ಆದುದರಿಂದಲೇ ದಾಸರಾಯರು– "**ಓಂ ಘೃಣಿಃ ಸೂರ್ಯ ಆದಿತ್ಯ**"–ಎಂಬ ಮಂತ್ರದಲ್ಲಿ ಪ್ರತಿದಿವಸದಲ್ಲಿಯೂ ಜಪ ಮಾಡುವವರಿಗೆ ಆರೋಗ್ಯವನ್ನೂ, ಸಂಪತ್ತನ್ನೂ ಕೊಡುವನೆಂದು ಹೇಳಿರುವರು. ॥೮॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :–

ತೃಣಾದಿ ಬ್ರಹ್ಮಾಂತ ಜೀವರ ಸ್ವರೂಪ, ಲಿಂಗ. ಅನಿರುದ್ಧ ಸ್ಥೂಲ ಈ ದೇಹಗಳಲ್ಲಿ ಒಂದು ಸಾವಿರದ ಐನೂರಿಪ್ಪತ್ತಾರು ರೂಪಗಳು ಇರುವವೆಂದು ತಿಳಿಯಬೇಕಂತಲೂ, ಇದೇ ಭಗವದ್ರೂಪಗಳಿಗೆ ಅಧಿಷ್ಠಾನವಾದ ಘೃಣೀ ಸೂರ್ಯಾದಿತ್ಯರ ನಾಮಗಳ ಜಪಮಾಡ ತಕ್ಕವರಿಗೆ ಆರೋಗ್ಯ ಸಂಪತ್ತು ಸಹ ಕೊಡುತ್ತಾನೆಂತಲೂ ಹೇಳುತ್ತಾರೆ– "ತೃಣೇತಿ".

**ತದುಕ್ತಂ ತಂತ್ರಸಾರೇ—**

**"ಸರ್ವವ್ಯಾಧಿಹರಃ ಶ್ರೀದೋ ವೃಷ್ಟಿದೋಽಯಂ ಮನುಃ ಸ್ಮೃತ"-** ಇತಿ ಮತ್ತು **"ನಾರಾಯಣಃ ಸೂರ್ಯಗತೋ ಗಾಯತ್ರ್ಯೋಪಾಸಕೋಽಹಿ ಸ"-ಇತಿ ಐತರೇಯ ಭಾಷ್ಯೋಕ್ತೇಃ ॥** ॥೨॥

**(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)–:**

ಶಬ್ದಾದ್ಯಾಃ ವಿಷಯಾಃ ಪಂಚ ತತ್ರಾ ವಿಷ್ಣುಸ್ತು ದೇವತಾಃ ॥ ಬಹುಧಾ ಜಾಯಮಾನೋಽಹಂ ತತ್ರಾಪಿ ಪ್ರಾವಿಶಂ ಕ್ರಮಾತ್ ॥ **ಇತಿ ವಿಷ್ಣು ರಹಸ್ಯೋಕ್ತೇಃ** ॥ ತೃಣೇತಿ ॥

"ನಾರಾಯಣ ಸಹಸ್ರಂ ತು ಷಟ್‌ಶತಂ ಷಟ್‌ಸು ಸಪ್ತತಿಂ ॥ ಭಜತೇ ತತ್ವಗಃ ಶ್ರೀಶಃ" ॥ **ಇತಿ ವೈಭವೇ** ॥

"ಕೃಪೋದಧಿಃ ಘೃಣಿಃ ಜ್ಞಾನಮೇಯಃ ಸೂರ್ಯೋಽದಿತೇಃ ಸುತಃ" ॥ ಆದಿತ್ಯ ಇತಿ ಚ ॥ ಸರ್ವವ್ಯಾಧಿಹರಃ ಇತಿ ಚ ॥ **"ತತ್ರ ತತ್ರಸ್ಥಿತೋ ವಿಷ್ಣುಃ"** ॥ ಇತಿ ಚ ॥೮॥

**ಕನ್ನಡಾರ್ಥ :–**

ಶಬ್ದಾದಿ ಪಂಚತನ್ಮಾತ್ರಾ ವಿಷಯಗಳಲ್ಲಿ ತತ್ವದೇವತೆಗಳು ಪ್ರೇರಕರಾಗಿರುತ್ತಾರೆ. "ನಾನು ನಾನಾ ರೂಪಗಳಿಂದ ಆ ವಿಷಯಗಳಲ್ಲಿ ಮತ್ತು ಆ ದೇವತೆಗಳಲ್ಲಿ ಪ್ರವೇಶಿಸಿ, ವ್ಯಾಪ್ತನಾಗಿರುತ್ತೇನೆ "– **ಎಂದು ವಿಷ್ಣು ರಹಸ್ಯದಲ್ಲಿ** ಉಕ್ತವಾಗಿದೆ.

"ತೃಣ ಮೊದಲು" ಎಂಬ ಪ್ರಸಕ್ತ ಪದ್ಯದಲ್ಲಿ ಶ್ರೀಮನ್ನಾರಾಯಣನು ಮೂರು ದೇಹಗಳಲ್ಲಿ ೧೬೭೬ ರೂಪಗಳಿಂದ ಇದ್ದಾನೆ– ಎಂದು **"ವೈಭವ"** ಎಂಬ ಗ್ರಂಥವು ತಿಳಿಸುವುದು. ಕೃಪಾಸಾಗರನಾಗಿದ್ದರಿಂದ **"ಘೃಣೀ"** ಎಂತಲೂ, ಜ್ಞಾನಗಮ್ಯನಾದ್ದರಿಂದ **"ಸೂರ್ಯ"** ನೆಂತಲೂ, ಅದಿತಿಯ ಪುತ್ರನಾದ್ದರಿಂದ **"ಆದಿತ್ಯ"** ನೆಂತಲೂ ಶ್ರೀ ಪರಮಾತ್ಮನಿಗೆ ಹೆಸರು. ಸರ್ವ ವ್ಯಾಧಿ ಪರಿಹಾರಕನಾಗಿರುವುದರಿಂದಲೂ **ಆದಿತ್ಯ** ನೆಂದು ಕರೆಯುತ್ತಾರೆ. ಆಯಾಯಾ ಸ್ಥಾನಗಳಲ್ಲಿ ವ್ಯಾಪ್ತನಾಗಿದ್ದು, ಅವರವರಲ್ಲಿರುವ ಸುಪ್ತ

ಶಕ್ತಿಗಳನ್ನು ಶ್ರೀ ವಿಷ್ಣುವು ಉದ್ಬೋಧಿಸುತ್ತಾನೆ. ಎಂದು ಶ್ರೀಮದಾಚಾರ್ಯರ ಸಂದೇಶ. ॥೮॥

### (೩) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ಉಕ್ತಶರೀರ ಚತುಷ್ಟಯಗಳಲ್ಲಿ ಅಕ್ಷರಸಂಖ್ಯಾ ನಿರೂಪಿಸುತ್ತಾ ಉದಿತ್ಯಾದಿ ಋಗ್ಜಪಫಲ ಸಹಾ ತಿಳಿಸುತ್ತಾರೆ :-

ತೃಣಮೊದಲು ಬ್ರಹ್ಮಾಂತ ಸರ್ವಜೀವರ ಚತುಶ್ಯರೀರದಲ್ಲೂ, ೧೫೨೬ ರೂಪಗಳನ್ನು ಬುಧರೆಂಬ ಜ್ಞಾನಿಗಳು ಚಿಂತಿಸಿ, **"ಹೃದ್ರೋಗಂ ಮನಸೂಯ ಹರಿಮಾಣಂ ಚ ನಾಶಾಯ-"** ಇತ್ಯಾದಿ ಋಕ್ಕುಗಳಿಂದ, ಸೂರ್ಯ ಆದಿತ್ಯಾದಿ ನಾಮಗಳನ್ನು ಜಪಿಸುವವರಿಗೆ, ಘೃಣೀ ಎಂದರೆ, ಅತ್ಯಂತ ದಯಾಳುವಾದ ದೇವರು ಆರೋಗ್ಯವನ್ನು ಕೊಡುವನು. ॥೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಘೃಣೀ, ಸೂರ್ಯ ಮತ್ತು ಆದಿತ್ಯನಾಮಕ ಶ್ರೀಮನ್ನಾರಾಯಣನ ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ. **"ತೃಣಮೊದಲು"**-ಎಂಬ ಪ್ರಸಕ್ತ ೮ ನೆಯ ಈ ಪದ್ಯದಿಂದ.

ಶ್ರೀ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಜೀವರಾಶಿಗಳು ಅಪಾರ. ಈ ಜೀವಕೋಟಿಯಲ್ಲಿ ತೃಣ ಜೀವರಿಂದ ಆರಂಭಮಾಡಿಕೊಂಡು. ಚತುರ್ಮುಖಬ್ರಹ್ಮದೇವರ ಪರ್ಯಂತ ಪ್ರವಿಷ್ಠರಾಗಿರುವ ಸಮಸ್ತ ಜೀವರ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲಗಳೆಂಬ ನಾಲ್ಕು ಪ್ರಕಾರವಾದ ದೇಹಗಳಲ್ಲಿ (ಜೀವರ ತನುಚತುಷ್ಟಯಗಳು) ಮೂಲರೂಪಿ ಶ್ರೀಮನ್ನಾರಾಯಣನು ವಿದ್ಯಮಾನನಾಗಿದ್ದಾನೆ.

ಇಂತಹ ಮೂಲೇಶ ಶ್ರೀಮನ್ನಾರಾಯಣನ ಭಗವದ್ರೂಪಗಳು ಅಕ್ಷರ ಸಂಖ್ಯಾ ಕ್ರಮದಿಂದ ೧೫೨೬ ಆಗುವುವು. ಅದರ ವಿವರ ಇಂತಿದೆ :-

(೧) ನಾ = ನ+ಅ = ೧+೫ = ೬ (ದೀರ್ಘಾಕ್ಷರ)

(೨) ರಾ = ೨ (ಅವರ್ಗೀಯ ವ್ಯಂಜನಾಕ್ಷರ)

(೩) ಯ = ೧ (ಅವರ್ಗೀಯ ವ್ಯಂಜನಾಕ್ಷರ)

(೪) ಣ = ೫ (ಟವರ್ಗ ಪಂಚಕ—ಅನುನಾಸಿಕಾಕ್ಷರ)

ಅಲ್ಲಿಗೆ ೬೨೧೫ ಆಯಿತು. ವಾಮಾಂಕ ಗತಿಯಿಂದ **೫೧೨೬** ಭಗವದ್ರೂಪಗಳಾಗುವುವು. (ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ ಮತ್ತು ಭಾವಪ್ರಕಾಶಿಕೆ ವ್ಯಾಖ್ಯಾನಕಾರರ ಪ್ರಕಾರ) ಆದರೆ ಭಾವದರ್ಪಣ ಟೀಕಾ ವ್ಯಾಖ್ಯಾನ ಮತ್ತು ಗುರುಹೃದಯ ಪ್ರಕಾಶಿಕಾ ವ್ಯಾಖ್ಯಾನಕಾರರಂತೆ ೧೫೨೬ ಎಂತಿದೆ.

ಪದ್ಯದಲ್ಲಿ "ಸಾವಿರದೈದು" ಎಂಬುದನ್ನ ೧೦೦೦ × ೫ = ೫೦೦೦ ಪರಿಗಣಿಸಿದರೆ, "ನಾರಾಯಣ" ಎಂಬ ಶಬ್ದದ ಅಕ್ಷರ ಸಾಂಕೇತರೂಪಗಳು ೫೦೦೦ + ೧೨೦ + ೬ (ಸಾವಿರದೈದು + ನೂರಿಪ್ಪತ್ತು + ಮೇಲಾರು) = ೫೧೨೬ ಎಂದಾಗುವುದು. ತೃಣಾದಿ ಬ್ರಹ್ಮಾಂತ ಜೀವರ ತನ್ಯ ಚತುಷ್ಟಯಗಳಲ್ಲಿ **"ನಾರಾಯಣ"** ನಾಮಕ ಶ್ರೀ ಪರಮಾತ್ಮನು ವಿದುಮಾನನಾಗಿರುವುದರಿಂದಲೂ. ಮುಂದೆ ಪದ್ಯದ ಉತ್ತರಾರ್ಧದಲ್ಲಿ ಸೂರ್ಯಮಂಡಲ ಮಧ್ಯವರ್ತಿ ಘೃಣೀ, ಸೂರ್ಯ ಮತ್ತು ಆದಿತ್ಯ ಎಂಬ ನಾಮಗಳುಳ್ಳ ಸೂರ್ಯಾಂತರ್ಗತ ನಾರಾಯಣನೇ ಇರುವದೆಂದು ಉಪಾಸನಾ ಬೇಕೆಂದು ದಾಸರಾಯರು ಹೇಳಿರುವುದರಿಂದ, ೫೧೨೬ ಎಂಬ ಶ್ರೀಮನ್ನಾರಾಯಣ ಶಬ್ದವಾಚಕತ್ವ ರೂಪವು ಅಸಂಗತವಾಗುವುದಿಲ್ಲ. ಅಲ್ಲದೇ, **"ಸವಿತೃ ಮಂಡಲಮಧ್ಯವರ್ತೀ ನಾರಾಯಣಃ"** – ಎಂದು ಪ್ರಮಾಣವಿರುವುದರಿಂದ **"ನಾರಾಯಣ"** ಶಬ್ದವನ್ನೇ ಗಮನದಲ್ಲಿಟ್ಟರೆ, ಅಕ್ಷರ ಸಾಂಕೇತ ರೂಪಗಳು ೫೧೨೬ ಆಗುವುವು.

ಆದರೆ, ಮುಂದಿನ ೯ ನೆಯ ಪದ್ಯದಲ್ಲಿ ಆಧಿ ಭೌತಿಕ, ಆಧ್ಯಾತ್ಮ ಮತ್ತು ಆದಿದೈವಿಕಗತ ಭಗವದ್ರೂಪಗಳ ಸಂಖ್ಯಾವಿವರ ಹೇಳಿರುತ್ತಾರೆ. ಆ ವಿಷಯವನ್ನು ಪರಿಗಣಿಸಿದರೆ :-

| | | | | |
|---|---|---|---|---|
| (1) | ಅದಿಭೂತಗತ | "ಘೃಣೀ" | = | ೫೭೪ |
| (2) | ಆಧ್ಯಾತ್ಮಗತ | "ಸೂರ್ಯ" | = | ೭೨೧ |
| (3) | ಆದಿ ದೈವಿಕಗತ | "ಆದಿತ್ಯ" | = | ೨೩೧ |
| | | ಒಟ್ಟು ರೂಪಗಳು | = | ೧೫೨೬ |

ಈ ಅಕ್ಷರ ಸಾಂಕೇತ ಭಗವದ್ರೂಪಗಳ ವಿವರಣೆಯನ್ನು ಮುಂದಿನ ಪದ್ಯದಲ್ಲಿ ಪರೀಶಿಲಿಸಲಾಗಿದೆ. ಈ ರೀತಿ ಶ್ರೀಮನ್ನಾರಾಯಣನ ಸೂರ್ಯ ಮಂಡಲಾಂತರ್ಗತ ಘೃಣೀ, ಸೂರ್ಯ ಮತ್ತು ಆದಿತ್ಯಗಳೆಂಬ ನಾಮತ್ರಯ ಗಳ ಆಧಾರದ ಮೇಲೆ ಗಣಿಸಿದರೆ, ೧೫೨೬ ಆಗುವುದು. ಇದರಿಂದ ವ್ಯಾಖ್ಯಾನಗಳಲ್ಲಿ ಯಾವ ವಿಷಯ ವ್ಯತ್ಯಾಸಗಳಾಗಲೀ ಇಲ್ಲ. ಭಿನ್ನ ವಿವಕ್ಷಯಾ ಸಮನ್ವಯ ಮಾಡಿಕೊಳ್ಳತಕ್ಕದ್ದು.

ಜಗತ್ತಿಗೇ ಪ್ರಕಾಶಪ್ರದನು ಸೂರ್ಯನು. ಸೂರ್ಯನ ಬೆಳಕಿನಿಂದಲೇ ಸಸ್ಯಗಳ ಅಭಿವೃದ್ಧಿ, ಆಹಾರೋತ್ಪತ್ತಿ, ಮೇಘಗಳ ಉತ್ಪತ್ತಿ, ತದ್ವಾರಾ ಧಾರಾರೂಪವಾದ ಮಳೆ. ಹೀಗೆ ಪ್ರಕೃತಿಯಲ್ಲಿ ಸಂಪುಟಾಕಾರವಾದ ಪ್ರಭೇದಗಳಿಗೆಲ್ಲಾ ಸೂರ್ಯನ ಗತಿಯೇ ಮುಖ್ಯ ಕಾರಣವು. ಇಂತಹ ಸೂರ್ಯಮಂಡಲದಲ್ಲಿ ಮಧ್ಯವರ್ತಿಯಾಗಿದ್ದು, ಶ್ರೀಮನ್ನಾರಾಯಣನು, ಸವಿತೃ ಶಬ್ದ ವಾಚ್ಯವಾಗಿ (೧) ಘೃಣೀ (೨) ಸೂರ್ಯ ಮತ್ತು (೩) ಆದಿತ್ಯ ಎಂಬ ನಾಮತ್ರಯಗಳಿಂದ ವಿದ್ಯಮಾನನಾಗಿದ್ದು ಪರಮ ಮುಖ್ಯ ವೃತ್ತಿಯಿಂದ ಸೂರ್ಯನ ದ್ವಾರಾ ಪ್ರಕೃತಿಗತ ಸಮಸ್ತ ವ್ಯಾಪಾರಗಳನ್ನು ನಡೆಯಿಸುತ್ತಿರುವನು.

(೧) ಶ್ರೀ ಪರಮಾತ್ಮನು ಪರಮಕರುಣಾಶಾಲಿಯಾದ್ದರಿಂದ **"ಘೃಣೀ"**-ಎಂದು ಹೆಸರು. ಇದು ಸೂರ್ಯಮಂಡಲ ಮಧ್ಯವರ್ತಿರೂಪವು.

(೨) ಸಮೀಚೀನವಾದ ಜ್ಞಾನದಿಂದ ತಿಳಿಯಲ್ಪಡುವನಾದ್ದರಿಂದ **"ಸೂರ್ಯ"** ಶಬ್ದವಾಚ್ಯನು. ಜ್ಞಾನಗಮ್ಯವಾದ ಈ ಭಗವದ್ರೂಪವನ್ನು ಸೂರ್ಯನ ಸಹಸ್ರ ಕಿರಣಗಳಲ್ಲಿ ಚಿಂತಿಸಬೇಕು.

(೩) ಅದಿತಿಯ ಪುತ್ರನಾಗಿ ಅದಿತಿ ಕಶ್ಯಪರಲ್ಲಿ ವಾಮನಾವತಾರತ್ವೇನ ಪುತ್ರನಾಗಿ ಜನಿಸಿದನು. ಇದರಿಂದ **"ಆದಿತ್ಯ"** ನೆಂದು ಶ್ರೀ ಪರಮಾತ್ಮನಿಗೆ ಹೆಸರು. ಆದಿತ್ಯರೆಂದರೆ ದೇವತೆಗಳು, ಅವರಿಗೆ ಈಶ (ನಿಯಾಮಕ) ನೆಂದರ್ಥ, ಇಂತು ಆದಿತ್ಯನಾಮಕನಾದ ಪರಮಾತ್ಮನನ್ನು ಸೂರ್ಯನಲ್ಲಿ ಅಂತರ್ಗತವಾದ ಪ್ರಕಾಶಮಯವಾದ ರೂಪವೆಂದು ಉಪಾಸಿಸಬೇಕು.

ಹೀಗೆ ಸವಿತೃಮಂಡಲಮಧ್ಯವರ್ತಿಯಾದ ಶ್ರೀಮನ್ನಾರಾಯಣನ ಘೃಣೀ, ಸೂರ್ಯ ಮತ್ತು ಆದಿತ್ಯ ಎಂಬ ರೂಪತ್ರಯಗಳನ್ನು ಜ್ಞಾನಾನುಸಂಧಾನದಿಂದ ಯಾರು ತಿಳಿದು ಚಿಂತನೆ ಮಾಡುವರೋ, ಅವರೇ **ಬುಧರು** ಅಂದರೆ ಸುಜ್ಞಾನಿಗಳು.

ಅಂತಹ ಸುಜ್ಞಾನಿಗಳಿಗೆ ಶ್ರೀಮನ್ನಾರಾಯಣನು ಉತ್ತಮವಾದ ಆರೋಗ್ಯ (ದೈಹಿಕ ಹಾಗೂ ಮಾನಸಿಕ) ಭಾಗ್ಯವನ್ನು ಕರುಣಿಸುವನು. ಅಲ್ಲದೆ ಇಹದಲ್ಲಿ ಐಶ್ವರ್ಯವನ್ನು ಮತ್ತು ಪರಕ್ಕೆ ಸಾಧನಗಳಾದ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ದೈವೀಸಂಪತ್ತನ್ನು ಕರುಣಿಸುವನೆಂದು ದಾಸರಾಯರ ಅಭಿಪ್ರಾಯವು. ॥೮॥

# ಪದ (೯)

**ಮೂಲ :-**

ಐದುನೂರೆಪ್ಪತ್ತನಾಲಕು ।
ಆಧಿ ಭೌತಿಕದಲಿ ತಿಳಿವುದು ।
ಐದೆರಡುಶತಏಕವಿಂಶತಿ ರೂಪವಧ್ಯಾತ್ಮ ॥
ಭೇದಗಳಲಿನ್ನೂರ ಮೂವ ।
ತ್ತಾದ ಮೇಲೊಂದಧಿಕ ಮೂರ್ತಿಗ ।
ಳಾದರದಲಧಿದೈವದೊಳು ಚಿಂತಿಪುದು ಭೂಸುರರು ॥೯॥

**ಅವತರಣಿಕೆ :-**

ಆಧಿ ಭೌತಿಕ, ಅಧ್ಯಾತ್ಮಿಕ ಮತ್ತು ಆಧಿ ದೈವಿಕ ಎಂಬ ಅಧಿಷ್ಠಾನ ತ್ರಯಗತ ಭಗವದ್ರೂಪಗಳ ಸಂಖ್ಯಾವಿವರ ಮತ್ತು ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ. "**ಐದುನೂರಿಪ್ಪತ್ತನಾಲಕು**" –ಎಂಬ ಪ್ರಸಕ್ತ ಸಂಧಿಗತ ೯ ನೆಯ ಈ ಪದ್ಯದಿಂದ.

ಆದಿಭೌತಿಕಗತ ಭಗವದ್ರೂಪಗಳ ಅಕ್ಷರ ಸಾಂಕೇತ ಭಗವದ್ರೂಪಗಳು ೫೭೪. ಆಧ್ಯಾತ್ಮಿಕಗತ ಭಗವದ್ರೂಪಗಳು ೭೨೧ (ಐದೆರಡು = ೫ + ೨ = ೭, ಏಕವಿಂಶತಿ = ೨೧ ಅಲ್ಲಿಗೆ ೭೨೧ ರೂಪಗಳು). ಆಧಿ ದೈವಿಕಗತ ಭಗವದ್ರೂಪಗಳ ಸಂಖ್ಯಾ ೨೩೧. ಇಂತು. ಅಧಿಷ್ಠಾನತ್ರಯಗತ ಘೃಣೀ, ಸೂರ್ಯ ಮತ್ತು ಆದಿತ್ಯ ಶಬ್ದವಾಚ್ಯ ಭಗವದ್ರೂಪಗಳ ಒಟ್ಟು ಸಂಖ್ಯಾ = ೫೭೪ + ೭೨೧ + ೨೩೧ = ೧೫೨೬ ಅಂದರೆ ಒಂದು ಸಾವಿರದ ಐನೂರ ಇಪ್ಪತ್ತಾರು ಭಗವದ್ರೂಪಗಳನ್ನು ಜ್ಞಾನಿಗಳಾದ ವಿಪ್ರೋತ್ತಮರು ಚಿಂತಿಸುವರು ॥೯॥

**ಪ್ರತಿಪದಾರ್ಥ :-**

**ಆದಿ ಭೌತಿಕದಲಿ**=ಆದಿಭೌತಿಕವೆಂಬ ಅಧಿಷ್ಟಾನಗತ ಸೂರ್ಯನ ಕಿರಣಗಳಲ್ಲಿ **ಐದುನೂರೆಪ್ಪತ್ತನಾಲಕು** =೫೭೪ ಭಗವದ್ರೂಪಗಳನ್ನು ("**ಘೃಣೀ**" ಶಬ್ದದ ಅಕ್ಷರ ಸಾಂಕೇತ ರೂಪಗಳು) **ಅಧ್ಯಾತ್ಮ**= ಅಧ್ಯಾತ್ಮ ಸಾಂಕೇತವಾದ "**ಸೂರ್ಯ**"ನಲ್ಲಿ **ಐದೆರಡುಶತ ಏಕವಿಂಶತಿ**=೭೨೧ ಅಕ್ಷರ ಸಾಂಕೇತ ರೂಪಗಳನ್ನು (ಐದೆರಡು = ೫+೨=೭ ಐದೆರಡುಶತ =೭೦೦. ಏಕವಿಂಶತಿ=೨೧, ಅಲ್ಲಿಗೆ ೭೦೦+೨೧ = ೭೨೧ ರೂಪಗಳ ಲೆಕ್ಕ) **ಅಧಿದೈವದೊಳು**= ಅಧಿದೈವಗತ ಅಧಿಷ್ಠಾನ ವಿಶೇಷ ದಲ್ಲಿ "**ಆದಿತ್ಯ**" ಶಬ್ದ ವಾಚ್ಯನಾದ ಶ್ರೀ ಪರಮಾತ್ಮನ, **ಇನ್ನೂರ ಮೂವತ್ತಾದ ಮೇಲೊಂದಧಿಕ**= ೨೩೧ ಅಕ್ಷರ ಸಾಂಕೇತ ಭಗವದ್ರೂಪಗಳನ್ನು (ಇನ್ನೂರ ಮೂವತ್ತು=೨೩೦, ಇದರ ಮೇಲೆ ಒಂದು ಅಧಿಕ=೨೩೦+೧ =೨೩೧ ರೂಪಗಳ ಲೆಕ್ಕ) **ಭೇದಗಳಲಿ**=ಇಂತು ಅಧಿಷ್ಠಾನತ್ರಯವಾದ ಪ್ರಭೇದಗಳಲ್ಲಿ **ಭೂಸುರರು** = ಬ್ರಹ್ಮಜ್ಞಾನಿಗಳಾದವರು **ಚಿಂತಿಪುದು**= ಮನಸಾ ಧ್ಯಾನಿಸುವವರಾಗಬೇಕು. ॥೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ನಾರಾಯಣನ ರೂಪಗಳಿಗೆ (ಸಂಧಿ ೪, ಪದ್ಯ ೧೬ ನೋಡುವುದು), ಘೃಣೀ ಸೂರ್ಯ ಮತ್ತು ಆದಿತ್ಯ ಸಾಂಕೇತವಾದ ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವಗತ ನಾರಾಯಣನ ರೂಪಗಳ ಹೇಳತಾರೆ.

ಆಧಿಭೌತಿಕಾದಿ ವಿಷಯಗಳು ೬ ನೆಯ ಸಂಧಿ, ೯ ನೆಯ ಪದ್ಯದಲ್ಲಿ ವಿಸ್ತಾರವಾಗಿ ಹೇಳಿಯಿದೆ.

ಆಧಿ ಭೌತಿಕದಲ್ಲಿ—ಸೂರ್ಯನ ಕಿರಣಗಳೇ ಆಧಿಭೌತಿಕ. ಕಿರಣಗಳಾಗಿ ರಶ್ಮಿಯಲ್ಲಿ ಐದುನೂರೆಪ್ಪತ್ತು ನಾಲಕು-೫೭೪ ರಶ್ಮಿ ಶಬ್ದ ವಾಚ್ಯ ರೂಪಗಳು ರ-೪, ಸಿ-೭, ಮಿ-೫. ವಾಮಾಂಕದಿಂದ ೫೭೪. ಐದೆರಡು-ಐದೆರಡು ಗಳು ಹತ್ತು ೧೦. ಶತ-೧೦೦, ಅಂದರೆ ೧೦ ನೂರುಗಳು=೧೦೦೦ ರಶ್ಮಿಗಳು ಎಂತ. ತಿಳಿಯುವುದು-ತಿಳಿಯೋವರಾಗಬೇಕು. ಅಧ್ಯಾತ್ಮ+ ಅಧ್ಯಾತ್ಮ ಸಾಂಕೇತನಾದ ಆದಿತ್ಯನು "ಅರ್ಕ" ಎಂತ ಕರೆಸಿಕೊಳ್ಳುತ್ತಾನೆ. (ಅರ್ಕ ಎಂಬ ಅಕ್ಷರವಾಚ್ಯ ಭಗವದ್ರೂಪಗಳು) ಶತ ಏಕ ವಿಂಶತಿ ರೂಪವ- ಅ-೧, ರ-೨, ಕ-೧, = ೧೨೧ ಮೂಲದಲ್ಲಿ ಶತಶಬ್ದ ಒಂದೇ ಇರೋದಾಗಿ ಅದೆ. ಅದನ್ನು ಆವರ್ತನ ಮಾಡಿಕೋಬೇಕು. ಅಧಿದೈವ ದೊಳು ಘೃಣೀ ಸಾಂಕೇತವಾದ ಸೂರ್ಯಮಂಡಲ ಇದಕ್ಕೆ "ಆದಿತ್ಯ"- ಎಂತ ಸಾಂಕೇತವು. (ಅಧಿ ದೈವದೊಳಗೆ ಅಕ್ಷರ ಸಾಂಕೇತ ರೂಪಗಳು). ಇನ್ನೂರ ಮೂವತ್ತೊಂದಾದ ಮೇಲೆ ಒಂದಧಿಕ-೨೩೧. ಅಂತು ಅ=೧, ದಿ=೩, ತ್ಯ=೨, ೨೩೧ ಮೂರ್ತಿಗಳ-ಭಗವದ್ರೂಪಗಳನ್ನು ತಿಳಿಯು ಬೇಕು. ಭೇದಗಳಲ್ಲಿ-ಪೂರ್ವೋಕ್ತ ಅಧಿಭೂತಾದಿ ಭೇದಗಳ ಸೂರ್ಯನಲ್ಲಿ ತಿಳಿದು, ತದ್ಗತ ಅಕ್ಷರ ಸಾಂಕೇತವಾದ ೫೭೪+೧೨೧+೨೩೧=೯೨೬ ಭಗವದ್ರೂಪಗಳ, ಆದರದಲಿ-ಆದರ ಪೂರ್ವಕವಾಗಿ ದೇಹಗತ ಸೂರ್ಯ ನಲ್ಲಿ, ಬಾಹ್ಯಗತ ಸೂರ್ಯನಲ್ಲಿ, ಭೂಸುರರು-ಬ್ರಹ್ಮಜ್ಞಾನಿಗಳಾದವರು, ಚಿಂತಿಪುದು-ಚಿಂತನ ಮಾಡೋವರಾಗಬೇಕು,

ಸೂರ್ಯನ ಒಂದೊಂದು ರಶ್ಮಿಯಲ್ಲಿ ೫೭೪ ರೂಪಗಳು ವ್ಯಾರಿಗೆ ೧೦೦೦ ರಶ್ಮಿಗಳಲ್ಲಿ ೫೭,೪೦೦ (ಐದು ಲಕ್ಷದ ಎಪ್ಪತ್ತುನಾಲ್ಕು ಸಾವಿರ ರೂಪಗಳು) ಅದರೆ ಎಂತ ಜ್ಞಾನಿಗಳಾದವರು ಅನುಸಂಧಾನ ಮಾಡ ಬೇಕಂತ ತಾತ್ಪರ್ಯ.

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ

ಅಧ್ಯಾತ್ಮಾಧಿಗತ, ಸೂರ್ಯ ಮಂಡಲದ ಮಧ್ಯವರ್ತಿಯಾದ ನಾರಾ ಯಣನ ರೂಪಗಳ ಉಪಾಸನಾ ಕ್ರಮವನ್ನು ಹೇಳುತ್ತಾರೆ. ಘೃಣೀ

ಸೂರ್ಯ, ಆದಿತ್ಯ ಎಂಬ ನಾಮಗಳಿಂದ ಆಧಿಭೂತಾದಿ ಮೂರರಲ್ಲಿ ಅಕ್ಷರ ಸಂಖ್ಯಾರೂಪಗಳಿಂದ ಶ್ರೀಮನ್ನಾರಾಯಣನು ವಾಸಮಾಡುವನು ಘೃಣಿ- ಘ=೪, ರ-೨, ಣಿ=೫. ವಾಮಾಂಕದಿಂದ ೫೨೪ ರೂಪಗಳಿಂದ ಅಧಿಭೂತವಾದ ಪಂಚಭೂತ ಪೃಥಿವ್ಯಾದಿ ತತ್ತ್ವಗಳಲ್ಲಿರುವನು. "ಅಧ್ಯಾತ್ಮ"-ವೆಂಬ ಮನಸ್ತತ್ವದಲ್ಲಿ "ಸೂರ್ಯ" ನಾಮಕನಾಗಿ, ಸೂ=೭, ರ=೨, ಯ=೧, ೭೨೧ ರೂಪಗಳಿಂದ ಇರುವನು. ಈ ಸಂಖ್ಯೆಯನ್ನು ವಾಮಾಂಕಮಾಡದೆ ಇರುವುದಕ್ಕೆ ಕಾರಣವೇನೆಂದರೆ :- ಈ ಮಂತ್ರದ "**ಓಂ ಘೃಣಿಃ ಸೂರ್ಯ ಆದಿತ್ಯಃ**"-ಎಂಬುದರಲ್ಲಿ "ಸೂರ್ಯ"ಶಬ್ದವು ಮಧ್ಯಗತವಾಗಿದ್ದು, ಷಡಂಗನ್ಯಾಸದಲ್ಲಿ ಕ್ರಮ ವ್ಯುತ್ಕ್ರಮವಾಗಿ ಮಂತ್ರವನ್ನುಚ್ಚರಿಸುತ್ತಾ, ನ್ಯಾಸಮಾಡುವ ಕ್ರಮದಲ್ಲೂ, ವ್ಯುತ್ಕ್ರಮದಲ್ಲೂ "ಸೂರ್ಯ" ಶಬ್ದವು ಮಧ್ಯವಾಗುವುದೆಂಬುದನ್ನು ಸೂಚಿಸುತ್ತೆ. ಹೇಗೆಂದರೆ :- **"ಓಂ ಘೃಣಿಃ ಹೃದಯಾಯ ನಮಃ, ಸೂರ್ಯಾಯ ಶಿರಸೇ ಸ್ವಾಹಾ, ಆದಿತ್ಯಾಯ ಶಿಖಾಯೈ ವೌಷಟ್, ಆದಿತ್ಯಾಯ ಕವಚಾಯ ಹುಂ, ಸೂರ್ಯಾಯ ನೇತ್ರಾಭ್ಯಾಂ ವೌಷಟ್ ಘೃಣಯೇ ಅಸ್ತ್ರಾಯ ಫಟ್ ಇತಿ ದಿಗ್ಬಂಧಃ" — ಎಂದು ತಂತ್ರಸಾರೋಕ್ತಿ.** ಇದರಿಂದ ಕ್ರಮವಾಗಿ ಎಡದಿಂದ ಬಲಕ್ಕೆ ಉಚ್ಚರಿಸುವಾಗಲೂ, ಘೃಣೀ, ಸೂರ್ಯ, ಆದಿತ್ಯ ಎಂಬಲ್ಲಿ "ಸೂರ್ಯ" ಶಬ್ದವು ಮಧ್ಯಗತವಾಗಿದೆ. ಆದಿತ್ಯ, ಸೂರ್ಯ, ಘೃಣಿ-ಎಂದು ಬಲದಿಂದ ಎಡದವರೆಗೂ ಉಚ್ಚರಿಸುವಾಗಲು, "ಸೂರ್ಯ" ಶಬ್ದವು ಮಧ್ಯಗತವಾಗಿರುವುದು. ಹೀಗೆ ಸೂರ್ಯ ಹೇಗೂ ಸಮ, ಹಾಗೂ ಸಮವೆಂಬ ಅರ್ಥವನ್ನು ಸೂಚಿಸುತ್ತಾ "ಸೂರ್ಯ"ನ ಅಕ್ಷರ ಸಂಖ್ಯಾ ಕ್ರಮವಾಗಿ ೭೨೧ ಆಗುವುದು. ಇದನ್ನು ಬಲದಿಂದ ಎಣಿಸಿದಲ್ಲಿ ೧೨೭ ಆಗಬೇಕಾಗಿತ್ತು. ಹಾಗೆ ಹೇಳದೆ ಕ್ರಮವಾಗಿಯೇ ೭೨೧ ಎಂದು ಹೇಳಿರುವರೆಂದು ನನ್ನ ಮಂದಬುದ್ಧಿಗೆ ತೋರಿದ ಸಮಾಧಾನವನ್ನು ಬರೆದಿರುತ್ತೇನೆ. ಈ ವಿಷಯದಲ್ಲಿ ಸಂಕರ್ಷಣ ಒಡೆಯರು ತಮ್ಮ ವ್ಯಾಖ್ಯಾನದಲ್ಲಿ- "ಐದು ಎರಡು ಶತ ಏಕವಿಂಶತಿ" ಎಂದು ಆವೃತ್ತಿಯಿಂದ ಪದಮಾಡಿ, ಸೂರ್ಯನ ರಶ್ಮಿಗಳು ಐದು, ಪೂರ್ವಾದಿ ದಿಕ್ಕುಗಳು ೪, ಊರ್ಧ್ವ ೧, ಹೀಗೆ

೫ ದಿಕ್ಕುಗಳಲ್ಲಿ, ದಿಕ್ಕೊಂದಕ್ಕೆ ಎರಡು ಶತ, ೨೦೦ ರಂತೆ ೫ ದಿಕ್ಕುಗಳಲ್ಲಿ ಐದೆರಡು ಶತ, ೫ × ೨ = ೧೦ ನೂರು, ಅಂದರೆ, ೧೦೦೦ ರಶ್ಮಿಗಳೆಂದೂ, ಶತ ಏಕವಿಂಶತಿ ಅಂದರೆ, ೧೨೧ ಎಂದೂ ಅರ್ಥಮಾಡಿ, ಈ ಪದ್ಯಕ್ಕೆ ಘೃಣಿ, ಸೂರ್ಯ, ಆದಿತ್ಯ-ಎಂಬ ಪರ್ಯಾಯ ಪದವನ್ನು ಕಲ್ಪಿಸಿ, ಆ = ೧ ರ = ೨, ಕ = ೧, ಅಂತು ಏಕವಿಂಶತಿ = ೧೨೧ ರೂಪಗಳು. ಅಧ್ಯಾತ್ಮದಲ್ಲಿ ತಿಳಿಯುಬೇಕೆಂದು ಅರ್ಥಮಾಡಿರುವರು. ಇದರಲ್ಲಿ ಸಾಧುಗಳು ಯಾವ ಅರ್ಥವನ್ನಾದರೂ ಗ್ರಹಿಸಬಹುದು. ಇದರಂತೆ, ಅಧಿದೈವವಾದ ತತ್ತ್ವದೇವತೆಗಳಲ್ಲಿ ಆದಿತ್ಯ, ಆ = ೧, ದಿ = ೩, ತ್ಯ = ೨, ವಾಮಾಂಕದಿಂದ ೨೩೧ ರೂಪಗಳನ್ನು ಚಿಂತಿಸಬೇಕೆಂದು ತಾತ್ಪರ್ಯವು. ॥೯॥

## (೩) "ಭಾವದರ್ಪಣ ಟೀಕಾ"- ವ್ಯಾಖ್ಯಾನ :-

"ಘೃಣೇಃ",-ಎಂಬೋದಕ್ಕೆ ವಾಮಾಂಕದಿಂದ ಆಗತಕ್ಕ ಭಗವದ್ರೂಪಗಳು = ೫೭೪

"ಸೂರ್ಯ"-ಎಂಬೋದಕ್ಕೆ ಸಂಖ್ಯಾಂಕದಿಂದ ಆಗತಕ್ಕ ಭಗವದ್ರೂಪಗಳು = ೭೨೧.

"ಆದಿತ್ಯ"-ಎಂಬೋದಕ್ಕೆ ಸಂಖ್ಯಾಂಕದಿಂದ ಆಗತಕ್ಕ ಭಗವದ್ರೂಪಗಳು = ೨೩೧.

ಏತಾದೃಶ ಭಗವದ್ರೂಪಗಳು ಅಧಿಭೌತಿಕಾದಿ ತಾಪತ್ರಯಗಳಲ್ಲಿ ಚಿಂತಿಸಬೇಕೆಂದು ಹೇಳುತ್ತಾರೆ. ॥೯॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

"ಐದು"- ಇತಿ॥ ಅಧಿಭೂತೇ ಪಂಚಯುಕ್ತ ವಿಂಶತಿಂ ಶತಪಂಚಕಂ ॥ ಹರಿಃ ಪ್ರಾಪ ಶತಾನಾಂ ತು ಸಪ್ತಕಂ ಚೈಕವಿಂಶತಿಮ್ ॥ ಅಧ್ಯಾತ್ಮ ಗತಃ ಶತದ್ವಂದ್ವಂ ಏಕತ್ರಿಂಶಚ್ಚ ದೇವಗಃ ॥೯॥

**ಕನ್ನಡಾರ್ಥ :–**

ಅಧಿಭೂತ (ಭೂತಗಳಲ್ಲಿ)ಕ್ಕೆ ೫೨೫ ರೂಗಳು, ೭೨೧ ರೂಪಗಳು ಅಧ್ಯಾತ್ಮದಲ್ಲಿ, ೨೨೧ ರೂಪಗಳು ಅಧಿದೈವದಲ್ಲಿ–ಹೀಗಿರುವ ವಚನಗಳು ಆಧಾರವಾಗಿರುತ್ತವೆ. ॥೬॥

## (೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–

ಆಧ್ಯಾತ್ಮಾಧಿಗತ ಅಕ್ಷರಸಂಖ್ಯಾರೂಪ ನಿರೂಪಿಸಿರುತ್ತಾರೆ :— ಅಧಿಭೂತ ಎಂಬ ಸೂರ್ಯನ ವಾಸಸ್ಥಾನವಾದ ಕಣ್ಣಿನ ಗುಡ್ಡೆ ಎಂಬ ಗೋಳಕದಲ್ಲಿ, "ಘೃಣೀ" ಎಂಬ ದೇವರ ಹೆಸರಿಗೆ ಅಕ್ಷರಸಂಖ್ಯಾ ಣೆ = ೫, ಋ = ೭ ಘ = ೪ ಈ ರೀತಿ ೫೭೪ ರೂಪಗಳನ್ನು, ಅಧಿದೈವವೆಂಬ ಆದಿತ್ಯದಲ್ಲಿ ತ್ಯ = ೩, ದಿ = ೩, ಆ = ೧, ಈ ರೀರಿ ೨೩೧ ರೂಪಗಳನ್ನು ಆಧ್ಯಾತ್ಮವೆಂಬ ಸೂರ್ಯನಲ್ಲಿ ಸೂ = ೭, ರಿ = ೨, ಯ = ೧ ಈರೀತಿ ೭೨೧ ರೂಪಗಳನ್ನು ಜ್ಞಾನಿಗಳು ಅನುಸಂಧಾನ ಮಾಡಿ ತಿಳಿಯುವುದು ॥೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅಧಿಭೌತಿಕ, ಆಧ್ಯಾತ್ಮಿಕ ಮತ್ತು ಆದಿದೈವಿಕ ಎಂಬ ತಾಪತ್ರಯಾಖ್ಯಾಧಿಷ್ಠಾನಗತ ಭಗವದ್ರೂಪಗಳ ಸಂಖ್ಯಾ ವಿವರಗಳು ಮತ್ತು ಉಪಾಸನಾಕ್ರಮವನ್ನು ತಿಳಿಸುತ್ತಾರೆ- "**ಐದುನೂರೆಪ್ಪತ್ತ ನಾಲಕು**" ಎಂಬ ಪ್ರಸಕ್ತ ಸಂಧಿಗತ ೬ ನೆಯ ಈ ಪದ್ಯದಿಂದ.

ನಮ್ಮ ದೇಹಕ್ಕೆ ಹಾಗೂ ಮನಸ್ಸಿಗೆ ತಾಪರೂಪವಾದ ಕ್ಲೇಶಾದಿಗಳನ್ನು ಉಂಟುಮಾಡುವುದು ಸಾಧನಗಳು ಮೂರುಪ್ರಕಾರ– (೧) ಅಧಿಭೌತಿಕ.

(೨) ಆಧ್ಯಾತ್ಮಿಕ ಮತ್ತು (೩) ಆದಿದೈವಿಕ ಎಂಬುದಾಗಿ. ಇವುಗಳಿಗೆ **ತಾಪತ್ರಯ**ಗಳೆಂದು ಹೆಸರು.

ನಮ್ಮೀಸ್ಥೂಲದೇಹವು ಪೃಥಿವ್ಯಾದಿ ಭೂತಪಂಚಕಗಳಿಂದ ನಿರ್ಮಿತವಾಗಿದೆ. ಈ ಕಾರಣದಿಂದಲೇ ಈ ಸ್ಥೂಲಶರೀರವನ್ನು "ಪಾಂಚಭೌತಿಕ ಶರೀರ" ಅಥವಾ ಪಾರ್ಥಿವಶರೀರ"–ಎಂದು ಕರೆಯುವುದು. ಅಂದರೆ ಪೃಥಿವೀ ಸಂಬಂಧವಾದ ಪಂಚಭೂತಗಳಿಂದ ಯುಕ್ತವಾದದ್ದು ಎಂದರ್ಥ.

"**ಮಣ್ಣಿಂದ ಈ ಕಾಯ ಮಣ್ಣಿಂದ**" ಎಂದು ಶ್ರೀಪುರಂದರದಾಸವರ್ಯರು ಉದ್ಗಾರತೆಗೆದಿದ್ದಾರೆ. ತಮ್ಮ ಕೀರ್ತನೆಯೊಂದರಲ್ಲಿ.

(೧) ಪಂಚತತ್ಮಾತ್ರಸಹಿತವಾದ ಆಕಾಶ. ವಾಯು. ತೇಜಸ್ಸು, ಅಪ್ಪು ಮತ್ತು ಪೃಥಿವೀ ಎಂಬ ಪಂಚಭೂತಗಳ ಅಧಿಷ್ಠಾನ ವಿಶೇಷವೇ "**ಆದಿಭೌತಿಕ**" –ವೆನಿಸುವುದು, ಈ ಅಧಿಷ್ಠಾನದಲ್ಲಿ ಸವಿತೃ ಮಂಡಲ ಮಧ್ಯವರ್ತಿಯಾದ ಮೂಲರೂಪಿ ಶ್ರೀಮನ್ನಾರಾಯಣನು "**ಘೃಣೀ**" ಶಬ್ದ ವಾಚ್ಯನಾಗಿ ವಿದ್ಯಮಾನನಾಗಿರುವನು.

"**ಘೃಣೀ**" ಶಬ್ದದಲ್ಲಿ (೧) ಘ = ಕವರ್ಗಪಂಚಕ = ೪
(೨) ಋ = ಸ್ವರಾಕ್ಷರ = ೭
(೩) ಟ-ವರ್ಗಪಂಚಕ
ಅನುನಾಸಿಕ = ೫

ವಾಮಾಂಕಗತಿಯಿಂದ ೫೭೪ ಭಗವದ್ರೂಪಗಳಾಗುವುವು.

ಇದನ್ನೇ ದಾಸರಾಯರು-"**ಐದುನೂರೆಪ್ಪತ್ತನಾಲಕು ಆದಿ ಭೌತಿಕದಲ್ಲಿ ತಿಳಿವುದು**" ಎಂದಿದ್ದಾರೆ.

ಅಂದರೆ ಆಧಿಭೌತಿಕಗತ "ಘೃಣೀ" ಶಬ್ದವಾಚ್ಯ ಶ್ರೀಮನ್ನಾರಾಯಣನ ಅಕ್ಷರ ಸಾಂಕೇತ ಭಗವದ್ರೂಪಗಳು = ೫೭೪,

(೨) "**ಅಧ್ಯಾತ್ಮ**"– ಎಂಬುದು ದ್ವಿತೀಯಾಧಿಷ್ಠಾನ ವಿಶೇಷ. ಇಲ್ಲಿಯೇ "**ಮನಸ್ತತ್ತ್ವ**"ದ ಕ್ರಿಯಾ ವಿಶೇಷಗಳು. ಈ ಅಧ್ಯಾತ್ಮವೆಂಬ ಮನಸ್ತತ್ತ್ವದಲ್ಲಿ ಸೂರ್ಯನ ಸಹಸ್ರ ಕಿರಣಗಳಂತರ್ಗನಾಗಿ ರಶ್ಮಿರೂಪದಲ್ಲಿ ಶ್ರೀಮನ್ನಾರಾಯಣನು "**ಸೂರ್ಯ**"–ಶಬ್ದ ವಾಚ್ಯನಾಗಿದ್ದಾನೆ.

"ಸೂರ್ಯ" ಶಬ್ದವಾಚ್ಯ ಅಕ್ಷರಸಾಂಕೇತ ಭಗದ್ರೂಪಗಳ ವಿವರ ಇಂತಿದೆ :—

"**ಸೂರ್ಯ**"– ಎಂಬಶಬ್ದದಲ್ಲಿ (೧) ಸೂರ್ಯ = ಅವರ್ಗೀಯ ವ್ಯಂಜನಾಕ್ಷರ = ೭

(೨) ರ = ಅವರ್ಗೀಯ ವ್ಯಂಜನಾಕ್ಷರ = ೨

(೩) ಯ = ಅವರ್ಗೀಯ ವ್ಯಂಜನಾಕ್ಷರ = ೧

ಇಲ್ಲಿ ವಾಮಾಂಕ ಮಾಡದೆ ನೇರವಾಗಿಯೇ ಗುಣಿಸಬೇಕು. ಕಾರಣವೇನೆಂದರೆ.

"**ಓಂ ಘೃಣಿಃ ಸೂರ್ಯ ಆದಿತ್ಯಃ**" ಎಂಬ **ತಂತ್ರಿನಾರೋಕ್ತ ಮಂತ್ರದಲ್ಲಿ** "ಸೂರ್ಯ" ಶಬ್ದವು ಮಧ್ಯಗತವಾಗಿದೆ. ಕ್ರಮ ಮತ್ತು ವ್ಯುತ್ಕ್ರಮಗಳಿಂದ ಎಣಿಸಿದರೂ, ಮಧ್ಯಗತವಾಗಿಯೇ ಇರುವುದು. ಶಾಸ್ತ್ರ ನಿಯಮದಂತೆ, ಮಂತ್ರೋಕ್ತಿಗಳಲ್ಲಿ ಮಧ್ಯಗತವಾದ ಶಬ್ದದ ವಾಚ್ಯರೂಪ ವಾದ ಅಕ್ಷರ ಸಂಖ್ಯಾಗತಿಯನ್ನು ವಾಮಾಂಕ ಮಾಡದೆ, ನೇರವಾದ ಕ್ರಮ ದಲ್ಲಿಯೇ ಪರಿಗಣಿಸಬೇಕು. ಇದರಿಂದ, ಸೂರ್ಯನ ರಶ್ಮ್ಯಂಗತರ್ಗತ "ಸೂರ್ಯ" ಶಬ್ದ ವಾಚ್ಯನಾದ ಮೂಲರೂಪಿ ಶ್ರೀಮನ್ನಾರಾಯಣನ ಅಕ್ಷರ ಸಾಂಕೇತ ಭಗವದ್ರೂಪಗಳ ಸಂಖ್ಯೆ = **೭೨೧** ಆಗುವುದು.

(೩) "**ಆದಿದೈವಿಕ**"ವು ಮೂರನೆಯ ಅಧಿಷ್ಠಾನವು. ಇದರಲ್ಲಿ ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳ ಕಾರ್ಯ ಕಲಾಪಗಳು ಅಧಿದೈವವೆಂಬ ದಶೇಂದ್ರಿಯಾಧಿಷ್ಠಾನದಲ್ಲಿ "**ಆದಿತ್ಯ**" ಶಬ್ದ ವಾಚ್ಯನಾಗಿ ಮೂಲರೂಪಿ ಶ್ರೀಮನ್ನಾರಾಯಣನು ಇದ್ದಾನೆ.

"ಆದಿತ್ಯ" ಶಬ್ದವಾಚ್ಯ ಅಕ್ಷರಸಾಂಕೇತ ಭಗವದ್ರೂಪಗಳ ವಿವರ ಇಂತಿದೆ:—

**"ಆದಿತ್ಯ"**—ಎಂಬ ಶಬ್ದದಲ್ಲಿ (೧) ಆ = ಸ್ವರಾಕ್ಷರ = ೧
(೨) ದಿ = ತ–ವರ್ಗಪಂಚಕ = ೩
(೩) ತ್ಯ = ತ + ಯ = ೧ + ೧ = ೨
(ಸಂಯುಕ್ತಾಕ್ಷರ)

ವಾಮಾಂಕರೀತ್ಯಾ ಭಗವದ್ರೂಪಗಳ ಸಂಖ್ಯೆ = ೨೩೧, ಈ ಸಂಖ್ಯೆಯನ್ನೆ. ದಾಸರಾಯರು **"ಇನ್ನೂರಮೂವತ್ತಾದ ಮೇಲೊಂಧಿಕ"** ಎಂದಿದ್ದಾರೆ.

| | | |
|---|---|---|
| ಅಂದರೆ ಇನ್ನೂರ ಮೂವತ್ತು | = | ೨೩೦ |
| ಮೇಲೆ ಒಂದು ಅಧಿಕ | = | ೧ |
| ಒಟ್ಟು | = | ೨೩೧ ರೂಪಗಳು. |

ಇಂತು ಪೂರ್ವೋಕ್ತ ಅಧಿಷ್ಠಾನ ತ್ರಯಗತ ಭಗವದ್ರೂಪಗಳನ್ನು ಮನಸಾ ಚಿಂತಿಸಿ, ಬ್ರಹ್ಮಜ್ಞಾನಿಗಳಾದ ಭೂಸುರರು ಉಪಾಸನೆ ಮಾಡುತ್ತಿರುವರು ಎಂದು ಪ್ರಸಕ್ತ ಪದ್ಯದ ತಾತ್ಪರ್ಯ. ಈ ವಿವರಣೆಯ ವಿಹಂಗಮ ನೋಟ ವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ:—

| ಕ್ರಮ ಸಂಖ್ಯೆ | ಅಧಿಷ್ಠಾನ | ತತ್ತ್ವಗಳು | ಶಬ್ದವಾಚ್ಯರೂಪ | | ಅಕ್ಷರ ಸ್ಥಾನ | ವಾಮಾಂಕ | ಭಗವದ್ರೂಪಗಳ ಸಂಖ್ಯೆ |
|---|---|---|---|---|---|---|---|
| ೧ | ಆದಿಭೌತಿಕ | ಪಂಚತನ್ಮಾತ್ರಾ ಸಹಿತ ಭೂತ ಪಂಚಕಗಳು | ಘೃಣೀ | ಘ | ೪ | ೫೭೪ | ೫೭೪ |
| | | | | ಋ | ೭ | | |
| | | | | ಣೀ | ೫ | | |
| ೨ | ಆಧ್ಯಾತ್ಮಿಕ | ಮನಸ್ತತ್ತ್ವ | ಸೂರ್ಯ | ಸೂ | ೭ | ವಾಮಾಂಕ ಇಲ್ಲ | ೭೨೧ |
| | | | | ರ | ೨ | | |
| | | | | ಯ | ೧ | | |
| ೩ | ಆದಿದೈವಿಕ | ದಶೇಂದ್ರಿಯಗಳು | ಆದಿತ್ಯ | ಆ | ೧ | ೨೩೧ | ೨೩೧ |
| | | | | ದಿ | ೩ | | |
| | | | | ತ್ಯ | ೨ | | |

ಒಟ್ಟು ಭಗವದ್ರೂಪಗಳ ಸಂಖ್ಯೆ = ೧೫೨೬

ಈ ಭಗವದ್ರೂಪಗಳ ಒಟ್ಟು ಸಂಖ್ಯೆಯನ್ನು ಹಿಂದಿನ ೮ನೆಯ ಪದ್ಯದಲ್ಲಿ **"ಸಾವಿರದೈದು ನೂರಿಪ್ಪತ್ತು ಮೇಲಾರು"**—ಎಂದು ವ್ಯಾಸರಾಯರು ತಿಳಿಸಿದ್ದಾರೆ.

| | | | | |
|---|---|---|---|---|
| ಅಂದರೆ, | ಸಾವಿರದೈದು ನೂರ | = | ೧೫೦೦ | |
| | ಇಪ್ಪತ್ತು | = | ೨೦ | |
| | ಮೇಲಾರು | = | ೬ | |
| | ಒಟ್ಟು ಸಂಖ್ಯಾ | = | ೧೫೨೬ | ಎಂದಾಗುವುದು. |

**ವಿಚಾರಾಂಶ:—**

ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಸೂರ್ಯನ ಕಿರಣಗಳು ಆಧಿಭೌತಿಕ. ಆ ಕಿರಣಗಳಿಗೆ ರಶ್ಮಿಯಲ್ಲಿ ಐದು ನೂರೆಪ್ಪತ್ತು ನಾಲಕು ರಶ್ಮಿ ಶಬ್ದವಾಚ್ಯ ರೂಪಗಳೆಂದು ನಿರೂಪಿಸಿರುತ್ತಾರೆ. ಅಲ್ಲಿ "ರಶ್ಮಿ" ಎಂಬ ಶಬ್ದವನ್ನೇ ಆಧಾರವಾಗಿಟ್ಟುಕೊಂಡು, ರ=೪. ಸಿ=೭ ಮತ್ತು ಮಿ=೫. ನಾಮಾಂಕಿತದಿಂದ ೫೭೪ ಎಂದು ತೆಗೆದುಕೊಂಡಿರುವುದು. ಆದರೆ **ತಂತ್ರಸಾರದಲ್ಲಿ "ಓಂ ಘೃಣಿಃ ಸೂರ್ಯ ಆದಿತ್ಯ"**–ಎಂಬ ಮಂತ್ರ ಪ್ರಯೋಗವಿದೆ. ಇಲ್ಲಿ ಮುಖ್ಯವಾಚಕತ್ವರೂಪ–"ಘೃಣೀ". ಸೂರ್ಯನ ರಶ್ಮಿ ಆ ಭಗವದ್ರೂಪದ ಅಧಿಷ್ಠಾನ ಮಾತ್ರ. ಅಧಿಷ್ಠಾನ ಮತ್ತು ತದಂತರ್ಗತ ಭಗವದ್ರೂಪಗಳ ಅಕ್ಷರ ಸಾಂಕೇತ ರೂಪವಾದ ಸಂಖ್ಯೆ ಒಂದೇ ಎಂದು ಸಮನ್ವಯ ಮಾಡಬಹುದು. ಶ್ರೀಪರಮಾತ್ಮನು ಸರ್ವಶಬ್ದ ವರ್ಣವಾಚ್ಯನು. ಆದರೂ ಪರಮ ಮುಖ್ಯ ವೃತ್ತಿಯಿಂದ ಅಧಿಷ್ಠಾನಾಂತರ್ಗತ ಭಗವದ್ರೂಪಗಳನ್ನು ಅಕ್ಷರ ಸಂಖ್ಯಾಗತಿಯಲ್ಲಿ ಪರಿಗಣಿಸುವುದು ಶಾಸ್ತ್ರ ಸಮ್ಮತವು.

ಅಂತೆಯೇ ಅಧ್ಯಾತ್ಮದಲ್ಲಿ ಆದಿತ್ಯನು "ಅರ್ಕ" ಎಂತ ಕರೆಸಿಕೊಳ್ಳುತ್ತಾನೆ ಎಂದು ಹೇಳಿ. "ಅರ್ಕ" ಶಬ್ದ ವಾಚ್ಯ ರೂಪಗಳನ್ನು ಅ=೧,

ರ=೨ ಮತ್ತು ಕ=೧, ಅಲ್ಲಿಗೆ ವಾಮಾಂಕ ರೀತಿಯಿಂದಲೂ ೧೨೧ ಎಂದು ತೆಗೆದುಕೊಂಡಿರುವರು. ಆದರೆ ಮೂಲಪದ್ಯದಲ್ಲಿ **''ಐದೆರಡು ಏಕವಿಂಶತಿ ಶತ ರೂಪವ"**-ಎಂದು ದಾಸರಾಯರ ಸ್ಪಷ್ಟೋಕ್ತಿ ಇದೆ. ಅಂದರೆ, ಐದೆರಡು ಶತ= ೫+೨= ೭×೧೦೦= ೭೦೦

| | | |
|---|---|---|
| ಏಕವಿಂಶತಿ | = | ೨೧ |
| ಅಂತು, | = | ೭೨೧ |

''ಅರ್ಕ" ಶಬ್ದ ವಾಚ್ಯ ಅಕ್ಷರ ಸಾಂಕೇತ ರೂಪಗಳು= ೧೨೧

"ಸೂರ್ಯ" ಶಬ್ದ ವಾಚ್ಯ ಅಕ್ಷರ ಸಾಂಕೇತ ರೂಪಗಳು= ೭೨೧. ಅಲ್ಲದೆ "ಐದೆರಡು" ಎಂಬುದನ್ನು ೫×೨=೧೦. ಐದೆರಡುಶತ=೧೦× ೧೦೦=೧೦೦೦. ಸೂರ್ಯನ ಸಹಸ್ರ ಕಿರಣಗಳು ಎಂದು ತೆಗೆದುಕೊಂಡಿದ್ದಾರೆ. ಮಂತ್ರೋಕ್ತಿಯಂತೆ ಪ್ರಯೋಗವಾದ ಶಬ್ದಗಳ ಆಧಾರದ ಮೇಲೆ ಪರಮಮುಖ್ಯ ವೃತ್ತಿಯಿಂದ, ಅಕ್ಷರ ಸಾಂಕೇತ ಭಗವದ್ರೂಪಗಳನ್ನು ಪರಿಗಣಿಸುವುದು ಉತ್ತಮಪಕ್ಷ, ಪ್ರಕಾರಾಂತರವಾಗಿ ಅರ್ಥಮಾಡಿ, ಸಮನ್ವಯ ಮಾಡಬಹುದು. ನೇರವಾದ ಕ್ರಮ ಸುಲಭ ಹಾಗೂ ಗ್ರಾಹ್ಯ, ಈ ಅಂಶಗಳನ್ನು ವಿಚಾರವಂತರು ಪರಿಶೀಲಿಸತಕ್ಕದ್ದು. ॥೯॥

## ಪದ್ಯ (೧೦)

**ಮೂಲ :-**

ಸುರುಚಿ ಶಾರ್ವರೀಕರನೆನಿಸಿ ಸಂ ।
ಕರುಷಣ ಪ್ರದ್ಯುಮ್ನ ಶಶಿ ಭಾ ।
ಸ್ಕರರೊಳಗೆ ಅರವತ್ತಧಿಕ ಮುನ್ನೂರು ರೂಪದಲಿ ॥
ಕರೆಸಿಕೊಂಬನು ಅಹಸ್ಸಂವ ।
ತ್ಸರನೆನಿಪನು ವಿಶಿಷ್ಟನಾಮದ ।
ಲರಿತವರಿಗಾರೋಗ್ಯಭಾಗ್ಯವನೀವಾನಂದಮಯ ॥ ॥೧೦॥

**ಅವತರಣಿಕೆ :—**

ಸೂರ್ಯ ಮತ್ತು ಚಂದ್ರಗತ ಭಗವದುಪಾಸನಾ ಕ್ರಮವನ್ನು ತಿಳಿಸುತ್ತಾರೆ. "**ಸುರುಚಿ**"—ಎಂಬ ಪ್ರಸಕ್ತ ಸಂಧಿಗತ ೧೧ನೆಯ ಈ ಪದ್ಯದಿಂದ.

ಸೂರ್ಯನಲ್ಲಿ ಸುರುಚಿ ನಾಮಕನಾಗಿ ಸಂಕರ್ಷಣರೂಪಿ ಶ್ರೀಪರಮಾತ್ಮನಿದ್ದು, ಹಗಲೆಂಬ ಕಾಲಕ್ಕೆ ಮುಖ್ಯಾಭಿಮಾನಿಯಾಗಿದ್ದಾನೆ. ಚಂದ್ರನಲ್ಲಿ ಶಾರ್ವರೀಕರನೆಂಬ ಹೆಸರಿನಿಂದ ಪ್ರದ್ಯುಮ್ನರೂಪಿ ಶ್ರೀಪರಮಾತ್ಮನು ರಾತ್ರಿ ಎಂಬ ಕಾಲಕ್ಕೆ ಮುಖ್ಯ ಪ್ರವರ್ತಕನಾಗಿದ್ದಾನೆ. ಒಂದು ವರ್ಷದ ಅವಧಿ ೩೬೦ ದಿನಗಳು. ಅಂದರೆ ೩೬೦ ಹಗಲುಗಳು ೩೬೦ ರಾತ್ರಿಗಳು. ಹಗಲಿನಲ್ಲಿ ಪ್ರವರ್ತಕ ರೂಪದಿಂದಿದ್ದು, **ಅಹಃ** ಎಂದೂ (ಇದರಿಂದ ರಾತ್ರಿಯೂ ಸಹ ಗ್ರಾಹ್ಯ) ಮತ್ತು ೩೬೦ ದಿನ ಮಾನವಾದ ಸಂವತ್ಸರದಲ್ಲಿ ಕಾಲಾಂತರ್ಗತವಾಗಿದ್ದು **ಸಂವತ್ಸರ** ನಾಮಕನಾಗಿಯೂ ಇದ್ದು, ಕಾಲಪ್ರವರ್ತಕನಾಗಿದ್ದಾನೆ. ದಿನ, ಪಕ್ಷ, ಮಾಸ, **ಋತು**, ಅಯನ, ವತ್ಸರಾದಿ ವಿಶಿಷ್ಟ ನಾಮಗಳನ್ನು ಜ್ಞಾನಾನುಸಂಧಾನದಿಂದ ತಿಳಿದು. ಕಾಲಾಂತರ್ಗತ ಭಗವದ್ರೂಪೋಪಾಸನೆ ಮಾಡುವರಿಗೆ ಜ್ಞಾನಾನಂದಮಯನಾದ ಆ ಪರಮಾತ್ಮನು ಉತ್ತಮವಾದ ಆರೋಗ್ಯವೆಂಬ ಸಂಪತ್ತನ್ನು ನೀಡಿ, ರಕ್ಷಿಸುವನು ಎಂದು ಪ್ರಸಕ್ತ ಪದ್ಯದ ಮುಖ್ಯ ತಾತ್ಪರ್ಯ ॥೧೧॥

**ಪ್ರತಿಪದಾರ್ಥ :—**

**ಭಾಸ್ಕರ** = ಸೂರ್ಯನಲ್ಲಿ **ಸುರುಚಿ** = ಸುರುಚಿ ಎಂಬ ಹೆಸರಿನಿಂದ **ಸಂಕರ್ಷಣ** = ಸಂಕರ್ಷಣ ನಾಮಕನಾದ ಶ್ರೀ ಪರಮಾತ್ಮನೂ, **ಶಶಿ** = ಚಂದ್ರನಲ್ಲಿ **ಶಾರ್ವರೀಕರ** = ಶಾರ್ವರೀಕರ ಎಂಬ ಹೆಸರಿನಿಂದ **ಪ್ರದ್ಯುಮ್ನ** = ಪ್ರದ್ಯುಮ್ನರೂಪಿ ಶ್ರೀ ಪರಮಾತ್ಮನೂ **ಅರವತ್ತಧಿಕ ಮುನ್ನೂರು ರೂಪವಲಿ** = ೩೬೦ ರೂಪಗಳಿಂದ **ಇವರೊಳಗೆ** = ಸೂರ್ಯ ಮತ್ತು ಚಂದ್ರಾಂತರ್ಗತನಾಗಿ **ಎನಿಸಿ** = ಕ್ರಮವಾಗಿ ಸುರುಚಿ ಮತ್ತು ಶಾರ್ವರೀಕರ ಎಂಬ ಹೆಸರುಗಳಿಂದ **ಕರೆಸಿಕೊಂಬನು** = ಕರೆಯಲ್ಪಡುತ್ತಾನೆ. **ವಿಶಿಷ್ಟ**

ನಾಮದಲಿ = ಕಾಲಪ್ರಭೇಧಗಳಾದ ದಿನ, ಪಕ್ಷ ಮಾಸ, ಋತು, ಅಯನ, ಸಂವತ್ಸರಗಳೆಂಬ ವಿಶೇಷವಾದ ಹೆಸರುಗಳಿಂದ ಕಾಲಶಬ್ದ ವಾಚ್ಯನಾಗಿದ್ದು ; **ಅಹಃ** = ಹಗಲೆಂಬ ಶಬ್ದವಾಚ್ಯನಾಗಿಯೂ, **ಸಂವತ್ಸರ** = ಸಂವತ್ಸರ ಶಬ್ದವಾಚ್ಯನಾಗಿಯೂ **ಎನಿಪನು** = ಎನಿಸಿಕೊಳ್ಳುವನು. **ಅರಿತವರಿಗೆ** = ಈ ಭಗವದ್ರೂಪಗಳನ್ನು ಜ್ಞಾನಾನುಸಂಧಾನ ಕ್ರಮದಿಂದ ತಿಳಿದು ಉಪಾಸನೆ ಮಾಡುವವರಿಗೆ **ಅನಂದಮಯ** = ಆನಂದ ಸ್ವರೂಪನಾದ ಶ್ರೀ ಪರಮಾತ್ಮನು **ಆರೋಗ್ಯಭಾಗ್ಯವನು** = ಉತ್ತಮವಾದ ಆರೋಗ್ಯವೆಂಬ ಐಶ್ವರ್ಯವನ್ನು **ಈವನು** = ಕೊಡುತ್ತಾನೆ, ॥೧೦॥

# ವ್ಯಾಖ್ಯಾನಗಳು

## ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಸೂರ್ಯ ಚಂದ್ರಾದಿಗಳಲ್ಲಿ ರಾತ್ರಿ ಹಗಲಿಗೆ ಅಭಿಮಾನಿಗಳಾದ ಭಗವದ್ರೂಪಗಳ ಹೇಳತಾರೆ.

ಶಶಿಭಾಸ್ಕರರೊಳಗೆ–ಸೂರ್ಯ ಚಂದ್ರರೊಳಗೆ,ಸಂಕರ್ಷಣ ಪ್ರದ್ಯುಮ್ನ –ಸೂರ್ಯನಲ್ಲಿ ಸಂಕರ್ಷಣ, ಚಂದ್ರನಲ್ಲಿ ಪ್ರದ್ಯುಮ್ನ. ಸುರುಚಿ ಶಾರ್ವರೀಕನೆನಿಸಿ–ಕ್ರಮಾಲಂಕಾರದಿಂದ ಸೂರ್ಯನಲ್ಲಿ ಸುರುಚಿ ಸಂಕರ್ಷಣನೆಂತಲೂ, ಚಂದ್ರನಲ್ಲಿ ಶಾರ್ವರೀಕರ ಪ್ರದ್ಯುಮ್ನನೆಂತಲೂ, ಕರೆಸುವವನಾಗಿ, ಅರವತ್ತಧಿಕ ಮುನ್ನೂರ ರೂಪದಲಿ ಕರೆಸಿಕೊಂಬನು–೩೬೦ ರೂಪದಿಂದ ಚಂದ್ರಸೂರ್ಯರ ಒಳಗೆ ಇದ್ದಾನೆ ಎಂತಲೂ, ಅಹಸ್ಸಂವತ್ಸರನೆನಿಪನು ಅಹಃ–ಹಗಲು, ಇದರ ಸಂಗಡ ಸೇರಿದ್ದು ರಾತ್ರಿ. ಹಗಲು ಅಭಿಮಾನಿ ಭಗವದ್ರೂಪ ಸೂರ್ಯಾಂತರ್ಗತ ಸಂಕರ್ಷಣನೆಂಬ ಸೂರ್ಯನಾಮಕ ಪರಮಾತ್ಮ, ರಾತ್ರಿಗೆ ಅಭಿಮಾನಿಯಾದ ಭಗವದ್ರೂಪ ಚಂದ್ರಾಂತರ್ಗತನಾದ ಪ್ರದ್ಯುಮ್ನನೆಂಬ ಶಾರ್ವರೀಕರ ಪರಮಾತ್ಮ, ಮುನ್ನೂರಾ

ಅರವತ್ತು, ರಾತ್ರಿ ಮುನ್ನೂರಾ ಅರವತ್ತು. ಎರಡು ಸೇರಿ ೭೨೦ ರೂಪ ಸೇರಿದ ಒಂದು ರೂಪ ಸಂವತ್ಸರ ಎಂತ ಕರೆಸಿಕೊಂಡು, ಸಂವತ್ಸರ ಶಬ್ದ ವಾಚ್ಯನಾಗಿ ಇದ್ದಾನೆ. ರಾತ್ರಿ ಹಗಲು ಸೇರಿ ಏಳನೂರಾ ಇಪ್ಪತ್ತು ಆಗಿ, ಒಂದು ವತ್ಸರ ಎಂತ ಕರಿಸತದೆ. ಪರಮಾತ್ಮನು ಸಂವತ್ಸರನೆನಿಪನು, ವಿಶಿಷ್ಟ ನಾಮದಲರಿತವರಿಗೆ-ವಿಶಿಷ್ಟ ಎಂದರೆ, ೭೨೦ ನಾಮಗಳಿಂದ ಪ್ರತ್ಯೇಕ ರೂಪಗಳನ್ನು ಇದು ವಿಶಿಷ್ಟವೂ ಸೇರಿದ ಸಂವತ್ಸರಾತ್ಮಕ ಒಂದು ರೂಪವನ್ನೂ. ಅರಿತವರಿಗೆ-ಈ ರೀತ್ಯಾ ಪರಮಾತ್ಮನ ಅರಿತವರಿಗೆ-ಆರೋಗ್ಯ ಭಾಗ್ಯವನೀವ-ಆರೋಗ್ಯ ಭಾಗ್ಯಗಳನ್ನು ಕೊಟ್ಟವನಾಗಿ. ಆನಂದ ಮಯ-ಸ್ವರೂಪಾನಂದದಿಂದ ಪ್ರಚುರನ್ನ ಮಾಡತಾನೆ ಎಂತ ತಾತ್ಪರ್ಯ. ಆದ್ದರಿಂದ ಸೂರ್ಯ ಚಂದ್ರಾಂತರ್ಗನಾಗಿ ದಿವಸ ರಾತ್ರಿಗಳ ಅಭಿಮಾನಿಗಳು ತಿಳಿಯಬೇಕು.

**ವಿಶೇಷಾರ್ಥ :—**

ವಿಶಿಷ್ಟನಾಮ ಎಂದರೆ. ರಾತ್ರಿ ಹಗಲು ವಿಶಿಷ್ಟವಾಗಿ ಸೇರಿದ ತಿಥಿಗೆ ದಾವ ನಾಮ, ಎಂದರೆ, ತಿಥಿ ಒಳಗೆ, (೧) ತಿಥಿನಾಮ, (೨) ವಾರನಾಮ, (೩) ಪಕ್ಷನಾಮ, (೪) ಮಾಸನಾಮ, (೫) ಋತು ನಾಮ. (೬) ಅಯನನಾಮ. (೭) ಸಂವತ್ಸವರನಾಮ-ಇತ್ಯಾದಿ ಇಷ್ಟು ರೂಪಗಳಿಂದ ಇರುತ್ತಾನೆ. ಒಂದು ತಿಥಿಗೆ ಲೋಕದಲ್ಲಿ ಇಷ್ಟು ನಾಮ ಗಳಿಂದ ವ್ಯವಹಾರವದೆ. ಏತಾದೃಶವಾದ ವಿಶಿಷ್ಟವಾದ ನಾಮಗಳು ಎಂತ ತಾತ್ಪರ್ಯ. ॥೧೦॥

**(೩) "ಭಾವಪ್ರಕಾಶಿಕೆ" — ವ್ಯಾಖ್ಯಾನ :—**

ಚಂದ್ರ ಸೂರ್ಯಗತ ಭಗವದ್ರೂಪೋಪಾಸದೆಯನ್ನು ಹೇಳುತ್ತಾರೆ. ಆನಂದಮಯವಾದ ಸಂಕರ್ಷಣನು ಸುರುಚಿ ನಾಮಕನಾಗಿ ಸೂರ್ಯ ನಲ್ಲಿಯೂ, ಪ್ರದ್ಯುಮ್ನನು ಶಾರ್ವರೀಕರ ನಾಮದಿಂದ ಚಂದ್ರನೊಳಗೆ

ಇದ್ದು, ೩೬೦ ಹಗಲು ವಾಚಕನಾಗಿಯೂ, ೩೬೦ ರಾತ್ರಿ ವಾಚಕ ನಾಗಿಯೂ ಮತ್ತು ಸಂವತ್ಸರ ಶಬ್ದ ವಾಚಕನಾಗಿಯೂ ಇರವನು. ಹೀಗೆ ವಿಶಿಷ್ಟವಾದ ನಾಮಗಳಿಂದ ಕೂಡಿದವನೆಂದು ತಿಳಿದು, ಉಪಾಸನೆ ಮಾಡುವವರಿಗೆ ಆರೋಗ್ಯವನ್ನೂ, ಸಂಪತ್ತನ್ನೂ ಕೊಟ್ಟುದ್ಧರಿಸು ವನು. ||೧೦||

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

ಈಗ ಷಶಿ ಎಂದರೆ, "ಶಶಿ"–ಎಂಬರ್ಥ. **"ಶಷಯೋರಭೇಧಃ"** ಎಂಬ ಉಕ್ತಿಯಿಂದ ತಿಳಿತಕ್ಕದ್ದು. ೧೯೪ – ಭಾಸ್ಕರ ಆಹತ್ಯ–೩೬೦ ರೂಪಗಳಿಂದ ಸುರುಚಿ. ಶಾರ್ವರೀ ಎಂಬ ನಾಮಕನಾಗಿ ಸಂಕರ್ಷಣ, ಪ್ರದ್ಯುಮ್ನ ಈ ಚಂದ್ರ ಸೂರ್ಯರಲ್ಲಿ "ವಿಶಿಷ್ಟ" ಎಂದರೆ, "ಶ್ರೇಷ್ಠ" ನೆಂದೆನಿಸಿಕೊಂಡು ಇದ್ದಾನೆಂದು ಹೇಳುತ್ತಾರೆ– "ಸುರುಚೇತಿ" ||

**ಸುಷ್ಟುರುಚಿರ್ಯಸ್ಯ ಸಃ ಸುರುಚಿಃ** "–ಎಂಬ ಅರ್ಥಾನುಪತ್ತಿ ಯಿಂದ ಅಧಿಕ ಕಾಂತಿಉಳ್ಳ ಸೂರ್ಯ ಎಂದರ್ಥ. ಶಾರ್ವರೀಕರ ಎಂದರೆ, ಚಂದ್ರ ಎಂಬರ್ಥ. ||೧೦||

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-

"ಸುರುಚಿ"– ಇತಿ "|| ಓಂ ಪುರಾಸಿಥ ಯೋ ವಾ ನೂನಂಹಿತೇ ಧನಂ (ನೇ) ಹವ್ಯಃ ಸುಶ್ರುಧೀ ಹವಾಂ ತಾಭಿರವದ್ಧಿರರ್ವತೋಃ ವಾಜ್ಯಾ (೧) ಇಂದ್ರ ಶ್ರವಾಯಾನ್ ಓಂ" || ಅನೇನ ರೋಚತೇ ಇತಿಸ್ತುತಿಃ || ಸು ಸಮೀಚೀನಾ ಸ್ತುತಿಃ ಯಸ್ಮಿನ್ **ಸ** ಸುರುಚಿಃ ಇತಿ || ಓಂ ನಭಂ ತಾಮನ್ಯತೇ ಸರ್ಮೇನಹಿ ವಾಂ ವವ್ರಯಾ ಮಹೇಃ ಅರ್ಥೇಂಪ್ರ ಜಿದ್ಯ ಜಾಮಹೇ ಶವಿಷ್ಟಂ ನರಂ ನೃಣಾಂ ಸನಃ ಕದಾಚಿ ದರ್ವತ ಓಂ|| ಶೃಹಿಂ ಸಾಯಾಮ್ || ಶರ್ವರೀ ಹಿಂಸಾ || ತಾಂ ಕರೋತಿ ಇತಿ ತಥೋಕ್ತಃ ಸಂಕರ್ಷಣಶ್ಚ ಪ್ರದ್ಯುಮ್ನಃ ಶಶಿ ಭಾಸ್ಕರಗೋ ಹರಿಃ || ತ್ರಿಶತೋ ತ್ತರ ಷಷ್ಟ್ಯಾತ್ಮಾ || ಇತಿ || ಓಂ ಸಸೃಜೇ ತ್ವಾಮಿನ್ವೇ (ನ್ಮೇ)

ಗೋಪತಿಂ ವಿಶ್ವ (ಶ್ವಾ) ಅಹಾನ ಇಂದ್ರಃ ಸುಮ (ಭ) ತಿಂ ಗಂತ್ವಚ್ಛಾ॥ ಅರ್ಣಾಂ ಚಿಚಿತ್ಯ ಪ್ರಧನಾ ಸುದಾಸೇ ಓಂ ॥ ಪ್ರದ್ಯುಮ್ನಃ ಪದಾರ್ಥ ಪ್ರಕಾಶ ದತ್ವಾತ್ ಅಹಮೂರ್ತಿಃ ಅತ್ರ ॥ ॥೧೦॥

**ಕನ್ನಡಾರ್ಥ :–**

"ಸುರುಚಿ". "ಶಾರ್ವರೀಕರ" ಮತ್ತು "ಅಹ–" ಈ ನಾಮತ್ರಯಗಳ **ಬೃಹತೀ ಛಂದಸ್ಸಿನ ಮಂತ್ರ**ಗಳಲ್ಲಿ ಪ್ರತಿಪಾದಿತವಾಗಿದೆ.

(೧) "ರುಚ" ಎಂದರೆ ಸ್ತುತಿ ಎಂದರ್ಥ. ಉತ್ತಮವಾದ ಸ್ತುತಿಗಳಿಗೆ ವಿಷಯನಾಗಿರುವುದರಿಂದ ಶ್ರೀ ಪರಮಾತ್ಮನಿಗೆ "ಸುರುಚಿ"–ಎಂದು ನಾಮ, ಅಂದರೆ, ಶ್ರೇಷ್ಠ ಸ್ತುತಿಗಳಿಂದ ಗೇಗೀಯಮಾನನು.

(೨) "ಶೃ"–ಎಂದರೆ ಹಿಂಸೆ ಎಂದರ್ಥ, "ಶರ್ವರೀ"-ಎಂದರೆ ಹಿಂಸೆಯನ್ನು ಉಂಟುಮಾಡುವ ಅಸುರರನ್ನು ನಾಶಮಾಡುವನೆಂದರ್ಥ. ಅಥವಾ ದುಷ್ಟರಾದ ಅಸುರರಿಗೆ ನಿತ್ಯದುಃಖ ರೂಪವಾದ ಅಂಧಃತಮಸ್ಸನ್ನು ಕೊಡುವವನು ಎಂದು ತಾತ್ಪರ್ಯ.

(೩) ಪದಾರ್ಥಗಳಿಗೆ ಪ್ರಕಾಶಪ್ರದನಾಗಿರುವುದರಿಂದ, "ಅಹ" ಎಂದು ಹೆಸರು.

ಸಂಕರ್ಷಣ ಪ್ರದ್ಯುಮ್ನರು ಚಂದ್ರಸೂರ್ಯರಲ್ಲಿ ಇರುವರು, ೩೬೦ ರೂಪಗಳಿಂದ "ಅಹಃ ಸಂವತ್ಸರ" ಎಂಬ ಹೆಸರಿನಿಂದ ಕರೆಯಲ್ಪಡುವರು. ॥೧೦॥

## (೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ

ಸಾವನಮಾನ ಸಂವತ್ಸರಗತರೂಪ ಚಿಂತನಾ ಪ್ರಕಾರ ತಿಳಿಸುತ್ತಾರೆ :– ಸುರುಚಿ ಎಂಬ ವಿಶೇಷ ಕಾಂತಿಯುಳ್ಳ ಸೂರ್ಯನಲ್ಲೂ, ಶಾರ್ವರೀಕರನೆಂಬ

ರಾತ್ರಿಕಾಲದಲ್ಲಿ ಬೆಳಕು ಕೊಡುವ ಚಂದ್ರನಲ್ಲೂ, ತತ್ತನ್ನಾಮಕನಾಗಿ. ಸಂಕರ್ಷಣ, ಪ್ರದ್ಯುಮ್ನ ಎಂಬ ಎರಡು ಹೆಸರುಳ್ಳ ದೇವರು, ೩೬೦ ದಿವಸಗಳಲ್ಲಿ ೩೬೦ ರೂಪಗಳಿಂದ "ಅಹಸ್ಸಂವತ್ಸರ"-ಎಂಬ ಉತ್ತಮ ನಾಮದಿಂದ ಆನಂದ ಪ್ರಚುರನಾದ ಸ್ವಾಮಿ, ಈ ರೀತಿ ತಿಳಿದ ಜ್ಞಾನಿಗೆ ಆರೋಗ್ಯ ಐಶ್ವರ್ಯಗಳನ್ನು ಕೊಡುವನು. ॥೧೦॥

## ಸರ್ವವ್ಯಾಖ್ಯಾನಸಾರಸಂಗ್ರಹ :

ಸೂರ್ಯ ಮತ್ತು ಚಂದ್ರಾಂತರ್ಗತ ಭಗವದ್ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ- **"ಸುರುಚಿ"**- ಎಂಬ ಪ್ರಸಕ್ತ ಸಂಧಿಗತ ೧೦ ನೆಯ ಈ ಪದ್ಯದಿಂದ.

(೧) ಸಂಕರ್ಷಣನಾಮಕ ಶ್ರೀ ಪರಮಾತ್ಮನು ಸೂರ್ಯನಲ್ಲಿ "ಸುರುಚಿ" ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದು, ಹಗಲಿನ ಕಾಲದಲ್ಲಿ ಸೂರ್ಯನ ದ್ವಾರಾ ಜಗತ್ತಿಗೆ ಪ್ರಕಾಶಪ್ರದನಾಗಿದ್ದಾನೆ. ಸೂರ್ಯನು ಹಗಲಿಗೆ ಅಭಿಮಾನಿ ದೇವತಾ, ಈ ಕಾರಣದಿಂದರೇ ಸೂರ್ಯನಿಗೆ ''ದಿವಾಕರ" ನೆಂದು ಹೆಸರು. ಪರಮಮುಖ್ಯ ವೃತ್ತಿಯಿಂದ ಶ್ರೀ ಪರಮಾತ್ಮನೇ ಸೂರ್ಯನಲ್ಲಿ ಸಂಕರ್ಷಣ ರೂಪದಿಂದ ಇದ್ದು "ಸುರುಚಿ" ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ.

**"ಸುರುಚಿ"**-ಎಂಬ ಶಬ್ದವು ಬಹ್ವರ್ಥಗರ್ಭಿತವಾದದ್ದು. ಈ ನಾಮವು **ಬೃಹತೀ ಛಂದಸ್ಸಿನ ಮಂತ್ರ**ದಲ್ಲಿ ಉಕ್ತವಾಗಿದೆ, "ಸು" ಎಂದರೆ ಸಮೀಚೀನವಾದ, ''ರುಚಿ" ಎಂದರೆ ಕಿರಣಗಳು ಎಂದರ್ಥ ಒಂದು. ಅಂದರೆ ಸೂರ್ಯಮಂಡಲವರ್ತಿಯಾಗಿದ್ದು, ಸೂರ್ಯನ ಕಿರಣಗಳ ದ್ವಾರಾ

ಕಿರಣಾಂತರ್ಗಗನಾಗಿ ಜಗತ್ತಿಗೇ ಪ್ರಕಾಶವನ್ನು ಕೊಡುತ್ತಿರುವುದರಿಂದ ಶ್ರೀ ಪರಮಾತ್ಮನಿಗೆ–"**ಸುರುಚಿ**"–ಎಂದು ಹೆಸರು.

"ರುಚಿ"– ಎಂದರೆ ಸ್ತುತಿ (ಸ್ತೋತ್ರ) ಎಂತಲೂ ಇನ್ನೊಂದು ಅರ್ಥ. ಶ್ರೇಷ್ಠವಾದ ಸ್ತುತಿಗಳಿಂದ ಗೇಗೀಯಮಾನನಾಗಿರುವುದರಿಂದ, ಶ್ರೀ ಪರಮಾತ್ಮನು, "ಸುರುಚಿ" ನಾಮಕನಾಗಿದ್ದಾನೆ.

(೨) ರಾತ್ರಿ ಕಾಲದಲ್ಲಿ ಚಂದ್ರನಲ್ಲಿ ಪ್ರದ್ಯುಮ್ನರೂಪಿ ಶ್ರೀ ಪರಮಾತ್ಮನು "**ಶಾರ್ವರೀಕರ**"–ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. ಚಂದ್ರನು ರಾತ್ರಿ ಕಾಲಕ್ಕೆ ಅಭಿಮಾನಿಯು. ಇದರಿಂದ ಚಂದ್ರನಿಗೆ "ನಿಶಾಕರ" ನೆಂದು ಹೆಸರು.

"ಶಾರ್ವರೀ"—ಎಂಬ ಪದವೂ ಸಹ ಬಹ್ವರ್ಥಯುಕ್ತವಾದದ್ದು. "ಶೃ" ಎಂದರೆ ಹಿಂಸೆ. ಹಿಂಸೆಯನ್ನು ಕೊಡುವವರು ನಿಶಾಚರರಾದ ರಾಕ್ಷಸರು.

"ಶರ್ವರೀ"—ಎಂದರೆ ರಾತ್ರಿ ಎಂದು ಇನ್ನೊಂದರ್ಥ. ಅದಕ್ಕೆ ಅಭಿಮಾನಿಯಾದ್ದರಿಂದ ಚಂದ್ರನಿಗೆ "ಶಾರ್ವರೀಕರ" ನೆಂದು ಹೆಸರು.

(೩) ಒಂದು ಸಂವತ್ಸರಕ್ಕೆ ೩೬೦ ದಿವಸಗಳು. ಅಂದರೆ, ೩೬೦ ಹಗಲು ಮತ್ತು ೩೬೦ ರಾತ್ರಿಗಳು. ಶ್ರೀಪರಮಾತ್ಮನು "ಅಹಃ" ಎಂಬ ಹೆಸರಿನಿಂದ ಕಾಲಾಭಿಮಾನಿಯಾಗಿದ್ದಾರೆ.

ಒಂದು ಸಂವತ್ಸರ ಕಾಲಮಾನದಲ್ಲಿ

(೧) ಸೂರ್ಯಾಂತರ್ಗತ ಸುರುಚಿನಾಮಕ ಸಂಕರ್ಷಣದ ರೂಪಗಳು = ೩೬೦

(೨) ಚಂದ್ರಾಂತರ್ಗತ ಶಾರ್ವರೀಕರ ನಾಮಕ ಪ್ರದ್ಯುಮ್ನನ ರೂಪಗಳು = ೩೬೦

**ಸಂವತ್ಸರ ನಾಮಕನಾದ ಶ್ರೀ ಪರಮಾತ್ಮನ ರೂಪಗಳು = ೭೨೦**

ಸೂರ್ಯನ ಒಂದು ಸಹಸ್ರ ಕಿರಣಗಳಲ್ಲಿ ವಿಶ್ವಾದಿ ಸಹಸ್ರ ರೂಪಗಳಿಂದ ವಿದ್ಯಮಾನನಾಗಿದ್ದು. ಜಗತ್ತಿಗೇ ಪ್ರಕಾಶಪ್ರದನಾಗಿದ್ದಾನೆ. ಅದರಂತೆ ಸಂವತ್ಸರನಾಮಕನ ೭೨೦ ರೂಪಗಳು × ಸೂರ್ಯನ ಕಿರಣಾಂತರ್ಗತ ವಿಶ್ವಾದಿ ಸಹಸ್ರ ರೂಪಗಳು = ೭೨,೦೦೦ ರೂಪಗಳು. ಇಷ್ಟು ರೂಪಗಳಿಂದ ಸ್ಥೂಲದೇಹಗತ ೭೨,೦೦೦ ನಾಡಿಗಳಲ್ಲಿ ಬೃಹತೀ ಸಹಸ್ರ ಛಂದಸ್ಸಿನಿಂದ ಪ್ರತಿಪಾದ್ಯನಾಗಿ ಇದ್ದು. ನಾಡೀಗತ ವ್ಯಾಪಾರಗಳನ್ನು ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, ನಾಡ್ಯಭಿಮಾನಿ ದೇವತೆಗಳ ದ್ವಾರಾ ಮಾಡಿಸುತ್ತಿರುವನು.

ಇಂತು ವಿಶಿಷ್ಟನಾಮಕನಾದ, ಅಂದರೆ ವಿಶೇಷವಾದ ರೂಪ ನಾಮಗಳಿಂದ ವಿದ್ಯಮಾನವಾಗಿರುವ, ದಿನ, ಪಕ್ಷ, ಮಾಸ, ಋತು, ಅಯನ ಮತ್ತು ಸಂವತ್ಸರಗಳೆಂಬ ಕಾಲಮಾನಗಳ ಪ್ರವರ್ತಕನಾಗಿದ್ದಾನೆಂದು ಉತ್ತಮ ಜ್ಞಾನಾನುಸಂಧಾನದಿಂದ ತಿಳಿದ ಜ್ಞಾನಿಗಳಿಗೆ ಉತ್ತಮವಾದ ಆರೋಗ್ಯ ಮತ್ತು ಐಶ್ವರ್ಯಗಳನ್ನು ಇತ್ತು ಅನುಗ್ರಹಿಸುವನು. ಆನಂದ ಉದ್ರಿಕ್ತ ವಸ್ತುವಾದ, ಆ ಆನಂದಪ್ರಚುರ ದೇಹವುಳ್ಳ ಪರಮಾತ್ಮನ ಕರುಣಾ ವಿಲಾಸವೇ ಇಂತಹುದು ಎಂದು ಪ್ರಸಕ್ತ ಪದ್ಯದ ತಾತ್ಪರ್ಯವು. ॥೧೦॥

## ಪದ್ಯ (೧೧)

ಮೂಲ :—

ಏಕ ಪಂಚಾಶದ್ವರಣಗತ ।
ನಾಕಳತ್ರನು ಸರ್ವದೊಳಗ ।
ವ್ಯಾಕೃತಾಕಾಶಾಂತ ವ್ಯಾಪಿಸಿ ನಿಗಮತತಿಗಳೆನು ॥
ವ್ಯಾಕರಣ ಭಾರತ ಮುಖಾದ್ಯ ।
ನೇಕಶಾಸ್ತ್ರ ಪುರಾಣ ಭಾಷ್ಯಾ ।
ನೀಕಗಳ ಕಲ್ಪಿಸಿ ಮನೋವಾಙ್ಮಯನೆನಿಸಿಕೊಂಬ ॥ ॥೧೧॥

**ಅವತರಣಿಕೆ:—**

ಅಕಾರಾದಿ ಕ್ಷಕಾರಪರ್ಯಂತ ಇರುವ ೫೧ ವರ್ಣಗಳಿಂದ ಪ್ರತಿಪಾದ್ಯನಾದ ಲಕ್ಷ್ಮೀಪತಿಯ ಮಹಾ ಮಹಿಮೆಗಳನ್ನು ತಿಳಿಸುತ್ತಾರೆ. "**ಏಕಪಂಚಾಶದ್ವರ್ಣಗತ**" ಎಂಬ ಪ್ರಸಕ್ತ ಸಂಧಿಗತ ೧೧ ನೆಯ ಈ ಪದ್ಯದಿಂದ.

೫೧ ವರ್ಣಪ್ರತಿಪಾದ್ಯನಾದ ಶ್ರೀ ಪರಮಾತ್ಮನು ಬ್ರಹ್ಮಾದಿ ತೃಣಾಂತ ಸಮಸ್ತ ಜೀವರಾಶಿಗಳಲ್ಲಿ ವ್ಯಾಪಿಸಿದ್ದಾನೆ. ರಮಾಭಿಮನ್ಯಮಾನವಾದ ಅವ್ಯಾಕೃತಾಕಾಶವೆಂಬ ಮಹಾಕಾಶದಾದ್ಯಂತ ವ್ಯಾಪಿಸಿದವನಾಗಿ, ಅಪೌರುಷೇಯವಾದ ವೇದರಾಶಿಗತ ಸಮಸ್ತ ವರ್ಣಕ್ಕೂ ಅಭಿವ್ಯಂಜಕಶಕ್ತಿಪ್ರದನಾಗಿದ್ದಾನೆ. ವ್ಯಾಕರಣ, ಪಂಚಮವೇದವೆಂದು ಪ್ರಸಿದ್ಧವಾದ ಶ್ರೀಮನ್ಮಹಾಭಾರತ, ವೇದಾನುಸಾರಿಯಾದ ದರ್ಶನ, ಗುಹ್ಯ, ಸಮಾಧಿ ಭಾಷೆಗಳಿಂದ ಅರ್ಥಗರ್ಭಿತವಾದ ಬ್ರಹ್ಮಸೂತ್ರಾದಿ ಶಾಸ್ತ್ರಗಳು, ಪುರಾಣ ಗ್ರಂಥಗಳನ್ನು ತಾನೇ ವೇದವ್ಯಾಸಾವತಾರತ್ವೇನ ನಿರ್ಮಾಣಮಾಡಿ, ಮನ ಇಂದ್ರಿಯದಲ್ಲಿದ್ದು ಮನೋಮಯನೆಂತಲೂ. ವಾಗಿಂದ್ರಿಯದಲ್ಲಿದ್ದು, ವಾಙ್ಮಯ ಎಂತಲೂ ಕರೆಸಿಗೂಳ್ಳುವನು. ಇಂತು, ಮನೋ ವಾಙ್ಮಯನೆಂದು ಖ್ಯಾತನಾಗಿ ಶ್ರೀ ಪರಮಾತ್ಮನು ಏಕಪಂಚಾಶದ್ವರ್ಣಗತನಾಗಿ, ವರ್ಣಗಳಿಗೆ ಪದಗಳಿಗೆ ವಾಕ್ಯಗಳಿಗೆ ಅಭಿವ್ಯಂಜಕ ಶಕ್ತಿಯನ್ನಿತ್ತು, ಶಾಸ್ತ್ರಸಮೂಹಗಳ ದ್ವಾರಾ ಅರ್ಥವನ್ನುಂಟುಮಾಡಿಸಿ, ಭಾಷ್ಯಾದಿಗಳ ಅರ್ಥವನ್ನು ಮನೋದ್ವಾರಾ ಪ್ರೇರಿಸಿ, (ಮನೋಮಯ ರೂಪ) ವಾಕ್ಯದ್ವಾರಾ ಉಚ್ಚಾರ ಮಾಡಿಸುತ್ತಾನೆ (ವಾಙ್ಮಯರೂಪ) ಇಂತು, ಶ್ರೀಪರಮಾತ್ಮನ ವಾಙ್ಮನೋಮಯರೂಪಗಳನ್ನು ಉಪಾಸಿಸುವ ತನ್ನ ಅಂತರಂಗಭಕ್ತರಿಗೆ ಸಕಲ ವೇದಶಾಸ್ತ್ರಾದಿಗಳ ರಹಸ್ಯಾರ್ಥಗಳನ್ನು ತಿಳಿಯಪಡಿಸುವನು ॥೧೧॥

**ಪ್ರತಿಪದಾರ್ಥ :-**

**ಏಕಪಂಚಾಶತ್** = ಐವತ್ತೊಂದು ಸಂಖ್ಯಾಕವಾದ **ವರ್ಣಗತ** = ಅಕಾರಾದಿ ಕ್ಷಕಾರಪರ್ಯಂತ ಇರುವ ಅಕ್ಷರಗಳಿಂದ ಪ್ರತಿಪಾದ್ಯನಾದ (ವರ್ಣವಾಚ್ಯನಾದ) **ಮಾಕಳತ್ರನು** = ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನು **ಸರ್ವರೊಳಗೆ** = ಬ್ರಹಾದಿ ತೃಣಾಂತ ಹಾಗೂ ಸಮಸ್ತ ಜೀವರಾಶಿಗಳಲ್ಲಿ

**ಅವ್ಯಾಕೃತಾಕಾಶಾಂತ** = ರಮಾಭಿಮನ್ಯಮಾನವಾದ ಅವ್ಯಾಕೃತಾಕಾಶ ಪರ್ಯಂತ **ವ್ಯಾಪಿಸಿ** = ವ್ಯಾಪ್ತನಾಗಿ **ನಿಗಮತತಿಗಳನು** = ಅಜಾದಿ ೫೧ ವರ್ಣಗಳಿಂದ ಯುಕ್ತವಾದ ಅಪೌರುಷೇಯವಾದ ಅನಂತ ವೇದಸಮೂಹ ಗಳು, **ವ್ಯಾಕರಣ** = ವ್ಯಾಕರಣಶಾಸ್ತ್ರ, **ಭಾರತ** = ಶ್ರೀ ಮನ್ಮಹಾಭಾರತ, **ಮುಖಾದಿ** = ಪಂಚರಾತ್ರ ವೈಖಾನಸ, ಸಂಹಿತಾದಿ **ಅನೇಕ** = ಬಹು ಸಂಖ್ಯಾಕವಾದ **ಶಾಸ್ತ್ರ** = ಬ್ರಹ್ಮಸೂತ್ರಾದಿ ಶಾಸ್ತ್ರಗ್ರಂಥಗಳೇನು, **ಪುರಾಣ** = ವೇದಾನುಸಾರಿಯಾದ ಅಷ್ಟಾದಶ ಪುರಾಣಗಳು, ಉಪಪುರಾಣಗಳು ಇತ್ಯಾದಿ **ಭಾಷ್ಯಾನೀಕಗಳ** = ದರ್ಶನ, ಗುಹ್ಯ ಸಮಾಧಿ ಭಾಷಾಯುಕ್ತವಾದ ಅನೇಕ ಭಾಷ್ಯಗಳ ಸಮೂಹಗಳನ್ನು **ಕಲ್ಪಿಸಿ** = ನಿರ್ಮಾಣ ಮಾಡುವವನಾಗಿ, **ಮನೋವಾಙ್ಮಯ** = ಮನಸ್ಸಿನಲ್ಲಿದ್ದು ಮನೋಮಯನೆಂತಲೂ. ವಾಗ್ರೂಪ ವಾದ ಮಾತಗಳಲ್ಲಿದ್ದು ವಾಙ್ಮಯನೆಂತಲೂ, **ಎನಿಸಿಕೊಂಬ** = ಕರೆಯಿಸಿ ಕೊಳ್ಳುವನು. ॥೧೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಐವತ್ತೊಂದು ಅಕ್ಷರದಿಂದ ಪ್ರತಿಪಾದ್ಯನಾದ ಪರಮಾತ್ಮ ಪುರಾಣಾದಿ ಗಳು ಕಟ್ಟಿಸಿದನೆಂದು ಹೇಳತಾರೆ.

ಏಕಪಂಚಾಶತ್— (೫೧) ಐವತ್ತೊಂದು ವರಣಗತ—ಅಕ್ಷರಗತವಾದ ಆಯಾ ವರ್ಣಾಕಾರ. ವರ್ಣವಾಚ್ಯನಾದ ಮಾಕಳತ್ರನು—ಲಕ್ಷ್ಮೀಪತಿ ಯಾದ ಶ್ರೀ ಪರಮಾತ್ಮನು ಎಂದರೆ. ಅಜಾದಿರೂಪಗಳಿಗೆ. ಐವತ್ತೊಂದು ಪತ್ನಿಯರಾಗಿ ಉಳ್ಳ ಪರಮಾತ್ಮನು, ಸರ್ವರೊಳಗೆ ಅಸ್ವಂತತ್ರ ಚೇತನರಾದ ರಮಾ ಬ್ರಹ್ಮಾದಿ ತ್ರಿವಿಧರಾದ ಸರ್ವರೊಳಗೆ. ಅಂದೆರೆ, ಪ್ರತಿ ಚೇತನರಲ್ಲಿ ೫೧ ರೂಪದಿಂದಲೂ ಮತ್ತು ಈ ೫೧ ರೂಪಗಳಿಗೆ ಪತ್ನೀರಾದ ಲಕ್ಷ್ಮೀರೂಪ

ಸಹಿತನಾಗಿಯೂ, ಇನ್ನೂ, ಅವ್ಯಾಕೃತಾಕಾಶಾಂತ— ರಮಾಭಿಮನ್ಯ ಮಾನವಾದ ಅವ್ಯಾಕೃತಾಕಾಶ ಎಂತರ್ಥ. ಪೃಥಿವೀ ತತ್ತ್ವ ಆರಂಭಮಾಡಿ, ಅಂತ್ಯ ಅವ್ಯಾಕೃತಾಕಾಶದವರೆವಿಗೂ, ಸರ್ವಾಧಿಷ್ಠಾನದಲ್ಲಿ ಇರತಕ್ಕ ನಾಮ ಗಳು ಅಕ್ಷರಸಾಂಕೇತದಿಂದ ಇರೋದಾಗಿ ಅವೆ, ಅಜಾದಿ ೫೧ ರೂಪಗ ಳಿಂದಲೂ ವ್ಯಾಪಿಸಿ ಇರೋವನಾಗಿ ಇದ್ದಾನೆ. ಮತ್ತು ನಿಗಮತತಿಗಳನು- ಅಜಾದಿ ೫೧ ಅಕ್ಷರಗಳಿಂದ ಯುಕ್ತವಾದದ್ದು ಯಾವತ್ತೂ ವೇದಗಳು ಅಪೌರುಷೇಯಗಳು. ಇಂಥ ವೇದಸಮೂಹಗಳ ಅಧಿಷ್ಠಾನಮಾಡಿಕೊಂಡು ತದಂತರ್ಗತ ವರ್ಣರೂಪಗಳಿಂದ ಇದ್ದಾನೆ. ವ್ಯಾಕರಣ, ಭಾರತ ಮುಖಾ ದ್ಯನೇಕ- ಅದೇ ಅಜಾದಿ ೫೧ ರೂಪಗಳಿಂದ ಅನೇಕ ವ್ಯಾಕರಣಗಳೇನು. ಭಾರತ, ಪಂಚರಾತ್ರ, ವೈಖಾನಸ. ಸಂಹಿತಾದಿ ಮೊದಲಾದ ಸಮೂಹ ಗಳನ್ನೇ ಆದಿಮಾಡಿ, ಅನೇಕಗಳಾದ ಶಾಸ್ತ್ರ-ಶಾಸ್ತ್ರಗಳ ಪುರಾಣ-ಅಷ್ಟಾದಶ ಪುರಾಣ, ಉಪಪುರಾಣ ಇತ್ಯಾದಿಗಳ ವೇದವಿರುದ್ಧಗಳಾಗಿ ವೇದೋಕ್ತಗಳ ಅರ್ಥ ಅನುಸರಿಸಿ ದರ್ಶನ, ಗುಹ್ಯ ಸಮಾಧಿ ಭಾಷೆಗಳಿಂದ ಅರ್ಥಗರ್ಭಿತ ಮಾಡಿ ಇವುಗಳೇನು, ಮತ್ತು ಭಾಷ್ಯಾನೀಕಗಳ-ಭಾಷ್ಯಸಮುದಾಯಗಳ. ಪ್ರಜರು ಮಾತಾಡತಕ್ಕ ಅನೇಕವಿಧವಾದ ಅನೇಕ ಜಾತೀಯಗಳಾದ ಮಾತುಗಳ ಇತ್ಯಾದಿ ಯಾವತ್ತರ ಕಲ್ಪಿಸಿ—ನಿರ್ಮಾಣಮಾಡೋವನಾಗಿದ್ದಾನೆ ಮನೋವಾಙ್ಮಯನೆನಿಸಿಕೊಂಬ- ಮನೋಮಯ ಎಂತಲೂ, ವಾಙ್ಮಯ ಎಂತಲೂ ಕರೆಸಿಕೊಂಬೋವನಾಗತಾನೆ.

**ವಿಶೇಷಾರ್ಥ :—**

ಈ ಸಂಧಿಯ ೬ ನೇ ಶ್ಲೋಕದಲ್ಲಿ ಹೇಳಿದ ವ್ಯಾರಿಗೆ ವೇದಶಾಸ್ತ್ರ ಪುರಾಣಸಮೂಹಾಖ್ಯ ಸಾಕಾರರೂಪಾದಿಷ್ಠಾತನಾಗಿ ತದ್ರೂಪದಿಂದ ಯುಕ್ತ ನಾಗಿ ಮನ ಇಂದ್ರಿಯದಲ್ಲಿ ಮನೋಮಯ ಎಂತಲೂ, ವಾಗಿಂದ್ರಿಯದಲ್ಲಿ ವಾಙ್ಮಯ ಎಂತಲೂ ಕರೆಸಿಕೊಂಬೋವನಾಗತಾನೆ, ವೇದಶಾಸ್ತ್ರಪುರಾಣಗಳ ಹಾಂಗೆ ಭಾಷಾದಿಗಳ ಮನೋದ್ವಾರಾ ಪ್ರೇರಿಸಿ, ವಾಕ್ಯ ದ್ವಾರಾ ಉಚ್ಚಾರ ಮಾಡಸತಾ ಇರತಾನೆ. ಪೂರ್ವೋಕ್ತ ಪುರಾಣಗಳು ವೇದವ್ಯಾಸರಿಂದ

ನಿರ್ಮಾಣ. ಹೇಗೆಂದರೆ, ವೇದವ್ಯಾಸರು ವರ್ಣಗಳ ಸಮ್ಮೇಳನ ಮಾಡಿದರು, ಆ ವರ್ಣಗಳೇ ಸರ್ವವೂ ಆಗಿ ಅದೆ. ಆದ್ದರಿಂದ ವರ್ಣ ವಾಚ್ಯ ಭಗವದ್ರೂಪಗಳಿಂದ ಸರ್ವವೂ ಕಲ್ಪನಾ ಎಂತ ತಾತ್ಪರ್ಯ. ಮನುಷ್ಯರಿಂದ ನಿರ್ಮಿತ ನಾನಾವಿಧವಾದ ವಿರುದ್ಧಾವಿರುದ್ಧ ಶಾಸ್ತ್ರಗಳು ಕೂಡ ಅಜಾದಿಭಗವದ್ರೂಪಗಳಿಂದ ನಿರ್ಮಿತವು. ಅಜಾದಿವರ್ಣಗಳಿಂದ ಮಾತೃಕಾನ್ಯಾಸರೀತ್ಯಾ ಸಾಕಾರರೂಪ ಮನೋಧಿಷ್ಠಿತವಾಗಿ ಅದೆ ಎಂತ ತಾತ್ಪರ್ಯ. ॥೧೧॥

## (೨) "ಭಾವ ಪ್ರಕಾಶಿಕೆ" – ವ್ಯಾಖ್ಯಾನ :–

ಅಕಾರಾದ್ಯಕ್ಷರ ಪ್ರತಿಪಾದ್ಯನಾಗಿ ಸರ್ವತ್ರ ವ್ಯಾಪ್ತನಾಗಿದ್ದು, ಸರ್ವ ಶಬ್ದವಾಚ್ಯನಾಗಿ ಮನೋವಾಙ್ಮಯನೆಂದು ಪ್ರಸಿದ್ಧನಾಗಿರುವನೆಂದು ಹೇಳುತ್ತಾರೆ. ಅಕಾರಾದಿ ೫೧ ಅಕ್ಷರ ಪ್ರತಿಪಾದ್ಯನಾಗಿ ಶ್ರೀಲಕ್ಷ್ಮೀರಮಣನು ಅವ್ಯಾಕೃತಾಕಾಶದವರೆವಿಗೂ ಸರ್ವತ್ರ ಸರ್ವರೊಳಗೂ ವ್ಯಾಪ್ತನಾಗಿದ್ದು. ವೇದ ಭಾರತಾದಿ ಸಕಲಶಾಸ್ತ್ರಗಳನ್ನೂ ಅವರವರ ಯೋಗ್ಯತಾನುಸಾರ ಅರ್ಥ ವಾಗುವಂತೆ ಮಾಡಿ, ಮನೋಮಯ, ವಾಙ್ಮಯನೆಂತಲೂ ಕರೆಸಿಕೊಂಬನು. ಯಾದ ಭಾಷ್ಯಗಳಾದರೂ, ಪುರಾಣಾದಿಗಳಾದರೂ, ೫೧ ಅಕಾರಾದಿ ಅಕ್ಷರ ಗಳನ್ನು ಬಿಟ್ಟಿಲ್ಲವಾದುದರಿಂದ, ಅಜಾದಿ ವಾಚಕನಾಗಿ ಸರ್ವತ್ರ ತುಂಬಿರುವ ನೆಂದು ತಾತ್ಪರ್ಯ. ॥೧೧॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :–

"ಏಕಪಂಚಾಶತೇತಿ" ॥ ಅಕಾರಾದಿ ಏಕೋತ್ತರಪಂಚಾಶದ್ವರ್ಣ ದಲ್ಲಿ ಮಾಕಳತ್ರನು ಶ್ರೀ ನಾರಾಯಣನು ಸರ್ವಜೀವರಲ್ಲಿ ಬ್ರಹ್ಮಾಂಡ ದ್ಬಹಿರ್ವಿದ್ಯಮಾನವಾದ ಅವ್ಯಾಕೃತಾಕಾಶದಲ್ಲಿ ವ್ಯಾಪಿಸಿ. ಶಾಸ್ತ್ರಾದಿಗಳನು ಕಲ್ಪನಮಾಡಿ, ವಾಙ್ಮನಸ್ಸಿನಲ್ಲಿ ಇದ್ದಾನೆಂಬ ತಾತ್ಪರ್ಯ ॥೧೧॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

"ಏಕ ಇತಿ" ॥ವರ್ಣಾನಾಂ ವ್ಯಾಪ್ತೇಃ ॥ಅನೀಕ-ಸಮೂಹ

**ಕನ್ನಡಾರ್ಥ :-**

ವರ್ಣಗಳು ವ್ಯಾಪ್ತವಾದವು. ಇದರಿಂದ ಅಕಾರಾದಿ ಕ್ಷಕಾರಪರ್ಯಂತ ೫೧ ವರ್ಣಪ್ರತಿಪಾದ್ಯನಾದ ಶ್ರೀಹರಿಯು ಅವ್ಯಾಕೃತಾಕಾಶದವರೆಗೆ ಸರ್ವತ್ರ ಸರ್ವಜೀವರಲ್ಲಿ ವ್ಯಾಪಿಸಿಕೊಂಡಿರುವನು. ವರ್ಣಗತನಾದ ಆ ಅಕ್ಷರೇಢ್ಯನೇ ನಿಗಮಗಳನ್ನು ಅಭಿವ್ಯಕ್ತಿಗೊಳಿಸುತ್ತಾನೆ ॥೧೧॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ

ಏಕಪಂಚಾಶದ್ವರ್ಣಗತ ರೂಪಚಿಂತನಾ ಕ್ರಮ ನಿರೂಪಿಸುತ್ತಾರೆ :- ಏಕ ಎಂದು, ಅಕಾರಾದಿ ಕ್ಷಕಾರಪರ್ಯಂತ ೫೧ ಅಕ್ಷರಗಳಲ್ಲಿರುವ ರಮಾಪತಿಯು, ಸರ್ವರಲ್ಲೂ, ಅವ್ಯಾಕೃತಾಕಾಶಾಂತ ಸರ್ವದೇಶದಲ್ಲೂ ವ್ಯಾಪಿಸಿ, ವೇದಸಮೂಹಗಳನ್ನು ವ್ಯಕ್ತಮಾಡಿ, ವ್ಯಾಕರಣ, ಭಾರತ ಮೊದಲಾದ ಅನೇಕ ಶಾಸ್ತ್ರಪುರಾಣಾದಿಗಳನ್ನು, ಅನೇಕ ಜಾತಿ ಭಾಷೆಗಳನ್ನು ಕಲ್ಪಿಸಿ, ಮನೋವಾಙ್ಮಯನೆಂದು ಕರೆಸುವನು ॥೧೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅಕಾರಾದಿ ಕ್ಷಕಾರ ಪರ್ಯಂತ ೫೧ ವರ್ಣಗಳಿವೆ. ಈ ವರ್ಣಮಾಲೆಗೆ **"ಏಕ ಪಂಚಾಶದ್ವರ್ಣ"**-ಎಂದಿದ್ದಾರೆ ದಾಸರಾಯರು, ಅಂದರೆ ಪಂಚಾಶತ್=೫೦, ಏಕ=ಒಂದು ಹೆಚ್ಚಾಗಿರುವುದು. ಅಲ್ಲಿಗೆ ೫೦+೧ =೫೧ ವರ್ಣಗಳೆಂದರ್ಥ.

"ಅಜ" ನಾಮಕನಾಗಿ ಅ–ಕಾರ ವರ್ಣವಾಚ್ಯನಾಗಿದ್ದಾನೆ. ಅಕಾರ ದಿಂದ ಪ್ರಾರಂಭಿಸಿಕೊಂಡು, "ಕ್ಷ"–ಕಾರ ಪ್ರತಿಪಾದ್ಯನಾದ ಶ್ರೀ ಲಕ್ಷ್ಮೀ ನರಸಿಂಹ ರೂಪದವರೆಗೆ ೫೧ ಸಂಖ್ಯಾಕವಾದ ಐವತ್ತೊಂದು ಭಗವ ದ್ರೂಪಗಳು. ಇವೇ ಏಕಪಂಚಾಶದ್ವರ್ಣವಾಚ್ಯ ಭಗವದ್ರೂಪಗಳ ಚಿಂತನೆ. **ಮಾತೃಕಾನ್ಯಾಸ**ದಲ್ಲಿ ಈ ೫೧ ಭಗವದ್ರೂಪಗಳ ಚಿಂತನೆ ಮತ್ತು ಈ ಸ್ಥೂಲ ದೇಹದಲ್ಲಿ ಶಿರಾದಿ ಪಾದಪರ್ಯಂತ ವ್ಯಾಪ್ತವಾಗಿರುವ ಸ್ಥಾನ ಗತ ರೂಪೋಪಾಸನೆಗಳ ವಿವರಗಳು ನಿರೂಪಿತವಾಗಿವೆ, ಇವುಗಳ ವಿವರಣೆಗಳನ್ನು ಪ್ರಸಕ್ತ ಸಂಧಿಗತ ಪೂರ್ವೋಕ್ತ ಪದ್ಯಗಳಲ್ಲಿ ಕೊಟ್ಟಿದೆ.

೫೧ ರೂಪಗಳಿಂದ ಈ ಸ್ಥೂಲದೇಹಗತನಾದ ಶ್ರೀ ಪರಮಾತ್ಮನ ರೂಪಗಳಿಗನುಗುಣವಾಗಿ ಶ್ರೀ ಲಕ್ಷ್ಮೀದೇವಿಯರೂ ಸಹ ೫೧ ನಾಮರೂಪ ರಾಗಿದ್ದಾರೆ. ಇದರಿಂದ **"ಮಾಕಳತ್ರನು"** ಎಂತ ಶಬ್ದಪ್ರಯೋಗ. ಇಂತು ಏಕಪಂಚಾಶದ್ವರ್ಣವಾಚ್ಯನಾದ ಇಂದಿರಾರಮಣನು ಈ ಜಗತ್ತಿ ನಲ್ಲಿ ಬ್ರಹ್ಮಾದಿ ತೃಣಜೀವರ ಪರ್ಯಂತ, ತ್ರಿವಿಧರಾಧ ಸಮಸ್ತ ಚೇತನ ರಾಶಿಯೊಳಗೆ ವಿದ್ಯಮಾನನಾಗಿದ್ದು, ಕ್ರೀಡಾವಿಶಿಷ್ಟನಾಗಿದ್ದಾನೆ. ಭೂತ ಪಂಚಕಗಳಲ್ಲಿ ಕೊನೆಯ ತತ್ತ್ವವು ಪೃಥ್ವೀ ತತ್ತ್ವವು. ಪೃಥಿವೀ ತತ್ತ್ವ ದಿಂದಾರಂಭಿಸಿ, ಅವ್ಯಾಕೃತಾಕಾಶ ಪರ್ಯಂತ. ಸಮಸ್ತ ಜೀವ, ಜಡ, ಕಾಲ, ದೇಶಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ. ಈ ಭೂತಾ ಕಾಶದಿಂದ ಭಿನ್ನವಾದ ಬ್ರಹ್ಮಾಂಡದ ಬಹಿರಾವಣದಲ್ಲಿ ಸರ್ವತ್ರ ವ್ಯಾಪ್ತ ವಾಗಿರುವ ಮಹಾಕಾಶಕ್ಕೆ **ಅವ್ಯಾಕೃತಾಕಾಶ**ವೆಂದು ಹೆಸರು. ಮಹಾ ಪ್ರಳಯ ಕಾಲದಲ್ಲಿ ಭೂತಾಕಾಶವು ಮೇಲಿನ ತತ್ತ್ವಗಳಲ್ಲಿ ಮೇಳನವನ್ನು ಹೊಂದುವುದು. ಗುಣಗಳ ವೈಷಮ್ಯ ಕಾರ್ಯವೇ ಸೃಷ್ಟಿಯು. ಇದರಿಂದ ಭೂತಾಕಾಶವು ವಿಕೃತವಾದದ್ದು, ಆದರೆ ಬ್ರಹ್ಮಾಂಡದ ಬಹಿಃವ್ಯಾಪ್ತ ವಾಗಿರುವ ಆಕಾಶವು ಅವ್ಯಾಕೃತವು. ಇದಕ್ಕೆ ಶ್ರೀ ರಮಾದೇವಿಯು ಅಭಿಮಾನಿಗಳು. ಇಂತು, ಏಕಪಂಚಾಶದ್ವರ್ಣಪ್ರತಿಪಾದ್ಯನಾದ ರಮಾ ರಮಣನು ಸರ್ವರಲ್ಲಿ ರಮಾಭಿಮನ್ಯಮಾನವಾದ ಅವ್ಯಾಕೃತಾಕಾಶ ಪರ್ಯಂತ ಸರ್ವತ್ರ ವ್ಯಾಪ್ತನಾಗಿದ್ದಾನೆ. ವೇದ ಪ್ರತಿಪಾದ್ಯನಾದ ಶ್ರೀ

ಪರಮಾತ್ಮನ ಅನಂತ ಕಲ್ಯಾಣ ಗುಣ ಸಮೂಹವನ್ನು ಪರಿಚಯ ಮಾಡಿ ಕೊಡುವ ಜ್ಞಾನಭಂಡಾರವೇ **ವೇದಗಳು.** ಈ ವೇದ ಸಮೂಹಗಳು ಅನಂತ ಹಾಗೂ ಅಪಾರ. ಅಪೌರುಷೇಯ ಶಬ್ದ ಪ್ರಪಂಚವು. ಇಂತಹ **ನಿಗಮತತಿ**ಗಳಲ್ಲಿ ಶ್ರೀ ಪರಮಾತ್ಮನು ವರ್ಣಪ್ರತಿಪಾದ್ಯನಾಗಿ ವ್ಯಾಪ್ತನಾಗಿದ್ದಾನೆ. ಶ್ರೀ ಲಕ್ಷ್ಮೀದೇವಿಯರು ವೇದಾಭಿಮಾನಿಗಳು. ಅಂತಹ ವೇದಾಭಿಮಾನಿಗಳಾದ ರಮಾಸಹಿತನಾಗಿ ಪ್ರತಿ ವರ್ಣ, ಶಬ್ದ, ಪದ, ವಾಕ್ಯಗಳಲ್ಲಿ ವ್ಯಾಪ್ತನಾಗಿದ್ದು, ಸ್ವತಏವ ಪ್ರವೃತ್ತಿ ಇಲ್ಲದ ಜಡಭೂತವಾದ ಆ ವರ್ಣಗಳಿಗೆ ಅಭಿವ್ಯಂಜಕ ಶಕ್ತಿಪ್ರದನಾಗಿ, ಜೀವರಿಂದ ಉಚ್ಚರಿಸಿ, ತನ್ಮೂಲಕ ಆ ವರ್ಣ, ವರ್ಣಗಳಿಂದ ರಚಿತ ಪದಗಳು, ಪದಗಳ ಸಮೂಹ ರೂಪವಾದ ವಾಕ್ಯಗಳ ಅರ್ಥವನ್ನು ಮನಸ್ಸಿನ ದ್ವಾರಾ ತಿಳಿಸಿಕೊಡುತ್ತಾನೆ. ಈ ಕಾರಣದಿಂದಲೇ ಸರ್ವ ಅಕ್ಷರವಾಚ್ಯನಾದ ಶ್ರೀ ಪರಮಾತ್ಮನಿಗೆ **ವಾಙ್ಮನೋಮಯ**ನೆಂದು ಹಿಂದಿನ ಪದ್ಯದಲ್ಲಿ ತಿಳಿಸಿರುತ್ತಾರೆ.

ವ್ಯಾಕರಣ ಶಾಸ್ತ್ರವು ಪದಗಳ ವ್ಯುತ್ಪತ್ತಿ, ಸಂಧಿ. ವಿಗ್ರಹವಾಕ್ಯ ರೂಪಗಳು, ಶಬ್ದಾರ್ಥ ವಿವರಣೆ ಇತ್ಯಾದಿ ವಿಷಯ ಪ್ರತಿಪಾದಕವಾದ ಮುಖ್ಯಗ್ರಂಥವು. ಈ ಶಾಸ್ತ್ರವು **ಷಡಂಗಗಳಲ್ಲಿ** ಒಂದಾಗಿದೆ.

ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥ್ಯಮಾನನಾಗಿ ಮೂಲರೂಪಿ ಶ್ರೀಮನ್ನಾರಾಯಣನು ವೇದವಾಸರೂಪದಿಂದ ಅವತರಿಸಿ, ವೇದಗಳ ವಿಭಾಗ ಗೈದು, ವೇದಗಳ ನಿಜವಾದ ಅರ್ಥವನ್ನು ನಿರ್ಣಯಿಸುವ **ಬ್ರಹ್ಮಸೂತ್ರ**ಗಳನ್ನು ರಚಿಸಿ, ಪಂಚಮ ವೇದವೆಂದು ಇತಿಹಾಸ ಪ್ರಸ್ಥಾನದಲ್ಲಿ ಸುಪ್ರಸಿದ್ಧವಾದ **ಶ್ರೀಮನ್ಮಹಾಭಾರತ**ವೆಂಬ ಇತಿಹಾಸ ಗ್ರಂಥಕರ್ತೃವಾಗಿ, **ಭಾಗವತಾದಿ** ಅಷ್ಟಾದಶ ಪುರಾಣಗಳು ಅಷ್ಟಾದಶ ಉಪಪುರಾಣಗಳನ್ನು ನಿರ್ಮಾಣಮಾಡಿ, ಅಷ್ಟೇ ಅಲ್ಲದೆ ಪಂಚರಾತ್ರ, ವೈಖಾನಸ, ಸಂಹಿತಾದಿ ಶಾಸ್ತ್ರಗಳಿಗೆ ವೇದಾನುಸಾರವಾಗಿ ಅರ್ಥಮಾಡಿ, ಜ್ಞಾನಿಗಳ ಸಂಶಯ ಜ್ಞಾನವನ್ನು ನಿವಾರಿಸಿ, ವಿದ್ವತ್ಪ್ರಪಂಚಕ್ಕೆ ಮಹೋಪಕಾರ ಮಾಡಿದ್ದಾನೆ. ಇಂತಹ ಪರಮಕರುಣಾಳುವಾದ ಶ್ರೀ ಪರಮಾತ್ಮನು ೫೧ ವರ್ಣವಾಚ

ನಾಗಿ, ವಾಗಿಂದ್ರಿಯದ್ವಾರಾ ಉಚ್ಚಾರಾಣಾರೂಪವಾದ ಕ್ರಿಯಗೆ ಪ್ರವರ್ತಕನಾಗಿ **ವಾಙ್ಮಯ**ನೆಂದು ಕರೆಸಿಕೊಳ್ಳುತ್ತಾನೆ.

ಅಂತೆಯೇ ಉಚ್ಚರಿಸಲ್ಪಟ್ಟ ಆ ವರ್ಣಗಳ ಅರ್ಥವನ್ನು ಶಬ್ದಮಾಧ್ಯಮದ ಮೂಲಕ ಮನಸ್ಸಿನಿಂದ ಗ್ರಹಿಸುವಂತೆ ಮಾಡಿ, ಶಬ್ದಾರ್ಥಗಳನ್ನು ಮನೋದ್ವಾರಾ ಬುದ್ಧಿ ತತ್ತ್ವಕ್ಕೆ ಉಂಟುಮಾಡುವನು, ಇದರಿಂದ **ಮನೋಮಯ**ನೆಂದು ಹೆಸರು.

ಇಂತು ವಾಙ್ಮಯ ಮತ್ತು ಮನೋಮಯನಾಗಿದ್ದು, ೫೧ ವರ್ಣಗಳಿಂದ ಯುಕ್ತವಾದ ಸಲಕ ಶಾಸ್ತ್ರಗಳ ಅಂತರಾರ್ಥವನ್ನು ಸುಜನರಿಗೆ ತಿಳಿಸಿಕೊಡುವನು. ರಜೋಜೀವರಿಗೆ ಅವರ ಸ್ವರೂಪ ಯೋಗ್ಯತಾನುಸಾರ ಮಿಶ್ರಜ್ಞಾನವನ್ನೂ ಮತ್ತು ತಮೋಯೋಗ್ಯರಿಗೆ ಶಾಸ್ತ್ರಗಳಲ್ಲಿ ಮೋಹಜನ್ಯ ಜ್ಞಾನವನ್ನೂ ಕೊಡುವನು. ॥೧೧॥

## ಪದ್ಯ (೧೨)

**ಮೂಲ :–**

**ಭಾರಭೃನ್ನಾಮಕ ಸಾವಿರ ।**
**ದಾರನೂರಿಪ್ಪತ್ತನಾಲಕು ।**
**ಮೂರುತಿಗಳು ಚರಾಚರದಿ ಸರ್ವತ್ರ ತುಂಬಿಹವು ॥**
**ಆರುನಾಲಕು ಜಡಗಳಲಿ ಹದಿ ।**
**ನಾರು ಚೇತನಗಳಲಿ ಚಿಂತಿಸೆ ।**
**ತೋರಿಕೊಂಬನು ತನ್ನ ರೂಪವ ಸಕಲ ಠಾವಿನಲಿ ॥೧೨॥**

**ಅವತರಣಿಕೆ :–**

"**ಭಾರಭೃತ್**"—ಎಂದು ವಿಷ್ಣು ಸಹಸ್ರನಾಮಾತ್ಮಕವಾದ ಶ್ರೀಪರಮಾತ್ಮನ ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ— "**ಭಾರ**

**ಭೃನ್ನಾಮಕನ**"— ಎಂಬ ಪ್ರಸಕ್ತ ಸಂಧಿಗತ ೧೨ ನೆಯ ಈ ಪದ್ಯದಿಂದ.

ವಿಷ್ಣು ಕೂರ್ಮರೂಪದಿಂದ ಬ್ರಹ್ಮಾಂಡದ ಹೊರಗೂ ಮತ್ತು ಒಳಗೂ ಇಡೀ ಬ್ರಹ್ಮಾಂಡವನ್ನು ತಾನು ಧಾರಣ ಮಾಡಿರುವುದರಿಂದಲೂ, ಶ್ರೀ ರಮಾದೇವಿಯರನ್ನು ತನ್ನ ವಕ್ಷಸ್ಥಲದಲ್ಲಿ ಧರಿಸಿರುವುದರಿಂದಲೂ, ಸಮಸ್ತ ಜೀವರಾಶಿಗಳ ಯೋಗಕ್ಷೇಮಧಾರಕನಾಗಿರುವುದರಿಂದಲೂ, ಬಲಗಾಲಿನ ಉಂಗುಷ್ಟದಲ್ಲಿ ವಿದ್ಯಮಾನನಾಗಿದ್ದು, ಈ ಶರೀರದ ಭಾರವನ್ನು ತಾನೇ ಧರಿಸಿರುವುದರಿಂದಲೂ ಶ್ರೀ ಪರಮಾತ್ಮನಿಗೆ "**ಭಾರಭೃತ್**"– ಎಂದು ಅಭಿದಾನ. ಈ ಶಬ್ದದ ಅಕ್ಷರ ಸಾಂಕೇತ ರೂಪಗಳು ಇಂತಿವೆ :– ಭಾ = ೪, ರ = ೨, ಭೃ = ಭ + ರ = ೪ + ೨ = ೬ ಮತ್ತು ತ್ = ೧, ಅಲ್ಲಿಗೆ ೪೨೬೧ ಆಯಿತು. ವಾಮಾಂಕಗತಿಯಿಂದ **೧೬೨೪** ರೂಪಗಳಾಗುವುವು, ಇದನ್ನೇ ದಾಸರಾಯರು– "**ಸಾವಿರದಾರನೂರಿಪ್ಪತ್ತು ನಾಲಕು**"—ಎಂದಿದ್ದಾರೆ. ಇಷ್ಟು ಸಂಖ್ಯಾಕವಾದ ಭಾರಭೃನ್ನಾಮಕನ ರೂಪಗಳು ಚರಾಚರಾತ್ಮಕದ ಈ ಬ್ರಹ್ಮಾಂಡದ ತುಂಬಾ ವ್ಯಾಪಿಸಿ. ಸರ್ವತ್ರ ತುಂಬಿವೆ. ೬ × ೪ = ೨೪ ಜಡ ತತ್ತ್ವಗಳಲ್ಲಿ ಲಿಂಗದೇಹಗತ ೧೬ ಕಳಾಭಿಮಾನಿ ದೇವತೆಗಳಲ್ಲಿ (ಜ್ಞಾನೇಂದ್ರಿಯಗಳು = ೫, ಕರ್ಮೇಂದ್ರಿಯಗಳು = ೫, ತನ್ಮಾತ್ರಸಹಿತ ಪಂಚಭೂತಗಳು = ೫ ಮತ್ತು ಮನಸ್ಸು = ೧ ಒಟ್ಟು ೧೬. ಅವ್ಯಕ್ತ, ಮಹತ್ತತ್ವ ಮತ್ತು ಅಹಂಕಾರ ಈ ತತ್ತ್ವತ್ರಯಗಳು ಮನಸ್ತತ್ವದಲ್ಲಿ ಸಮಾವೇಶವಾಗಿವೆ). ಭಾರಭೃನ್ನಾಮಕನ ರೂಪಗಳನ್ನು ಚಿಂತಿಸುತ್ತಾ, ೧೬೨೪ ರೂಪಗಳಿಂದ ಸಮಸ್ತ ಚರಾಚರಾತ್ಮಕ ಜಗತ್ತಿನ ಭಾರವನ್ನ ಧರಿಸಿರುತ್ತಾನೆಂದು ಉಪಾಸನಾ ಮಾಡುವ ಅಂತರಂಗದ ಭಕ್ತರಿಗೆ ಸಕಲ ಕಾಲ ದೇಶಗಳಲ್ಲಿ ತನ್ನ ದರ್ಶನರೂಪವಾದ ಭಾಗ್ಯವನ್ನು ಕೊಟ್ಟು ದೃಶ್ಯಮಾನನಾಗುವನು ಎಂದು ಪ್ರಸಕ್ತ ಪದ್ಯದ ತಾತ್ಪರ್ಯವು. ॥೧೨॥

**ಪ್ರತಿಪದಾರ್ಥ :–**

**ಭಾರಭೃನ್ನಾಮಕನ** = ಚರಾಚರಾತ್ಮಕವಾದ ಸಮಗ್ರ ಜಗತ್ತನ್ನು

ಕೂರ್ಮರೂಪದಿಂದ ಧಾರಣ ಮಾಡಿರುವ "ಭಾರಭೃತ್"-ನಾಮಕನಾದ ಶ್ರೀ ಪರಮಾತ್ಮನ **ಸಾವಿರದಾರನೂರಿಪ್ಪತ್ತನಾಲಕು**= "ಭಾರಭೃತ್"-ಎಂಬ ಶಬ್ದದ ಅಕ್ಷರ ಸಂಖ್ಯಾರೂಪವಾದ ೧೬೨೪, **ಮೂರುತಿಗಳು**=ಭಗವದ್ರೂಪಗಳು **ಚರಾಚರದಿ**=ಜೀವ ಹಾಗೂ ಜಡಾತ್ಮಕವಾದ ಈ ಜಗತ್ತಿನಲ್ಲಿ **ಸರ್ವತ್ರ**=ಎಲ್ಲಾ ಸ್ಥಳಗಳಲ್ಲಿಯೂ (ಕಾಲ ದೇಶಾದಿಗಳಲ್ಲಿ) **ತುಂಬಿಹವು**=ಓತಪ್ರೋತವಾಗಿ ವ್ಯಾಪ್ತವಾಗಿವೆ. **ಆರು ನಾಲಕು**=೬×೪=೨೪ ಸಂಖ್ಯಾಕವಾದ **ಜಡಗಳಲಿ**=ಜಡವಾದ ಅವ್ಯಕ್ತಾದಿ ಪೃಥಿವೀಪರ್ಯಂತ ಚತುರ್ವಿಂಶತಿ ತತ್ತ್ವಗಳಲ್ಲಿ **ಹದಿನಾರು**=ಲಿಂಗ ದೇಹಗತ ೧೬ ಕಲೆಗಳಲ್ಲಿ (ಪಂಚ ಜ್ಞಾನೇಂದ್ರಿಯಗಳು - ಪಂಚಕರ್ಮೇಂದ್ರಿಯಗಳು - ತನ್ಮಾತ್ರಸಹಿತ ಭೂತಪಂಚಕಗಳು ಮತ್ತು ಮನಸ್ಸು=ಒಟ್ಟು ೫+೫+೫+೧=೧೬) **ಚೇತನಗಳಲಿ**=ಚತುರ್ವಿಂಶತಿ ತತ್ತ್ವದೇವತೆಗಳಲ್ಲಿ ಮತ್ತು ದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಲ್ಲಿ ಜೀವಾಂತರ್ಯಾಮಿ ಯಾಗಿರುವ ಶ್ರೀ ಪರಮಾತ್ಮನ ಪೂರ್ವೋಕ್ತ ೧೬೨೪ "ಭಾರಭೃತ್" ನಾಮಕನ ಅಕ್ಷರ ಸಾಂಕೇತ ಭಗವದ್ರೂಪಗಳನ್ನು **ಚಿಂತಿಸಿ**=ಚಿಂತನಾಕ್ರಮದಿಂದ ಉಪಾಸನೆ ಮಾಡುವವರಿಗೆ **ಸಕಲ ಠಾವಿನಲಿ**=ಸರ್ವಸ್ಥಾನಗಳಲ್ಲಿ **ತನ್ನರೂಪವ**= ಅಪರೋಕ್ಷ ರೂಪವಾದ ತನ್ನ ಸಂದರ್ಶನದ ಭಾಗ್ಯದ **ತೋರಿಕೊಂಬನು**=ಬಿಂಬಾಪರೋಕ್ಷವನ್ನು ಕರುಣಿಸುವನು. ॥೧೨॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:

ಈ ಚರಾಚರ ಭಾರವನ್ನು ಹೊತ್ತುಕೊಂಡು ಇರತಕ್ಕವ ಶ್ರೀ ಪರಮಾತ್ಮನೆಂದು ಹೇಳತಾರೆ.

ಭಾರಭೃನ್ನಾಮಕನ-ಚರಾಚರಗಳ ಭಾರವನ್ನು ಕೂರ್ಮರೂಪದಿಂದ

ಅಂಡದ ಹೊರಗೆ ಅಂಡದ ಒಳಗೆ ಇದ್ದು, ಹೊತ್ತುಕೊಂಡು ಇದ್ದಾನಾದ್ದರಿಂದ ಶ್ರೀ ಪರಮಾತ್ಮ "ಭಾರಭೃತ್"-ಎಂತ ಕರಿಸೋವನಾದ. ಇಂಥಾ ಭಾರಭೃನ್ನಾಮಕನಾದ ಪರಮಾತ್ಮನ ಅಕ್ಷರ ಸಾಂಕೇತ ರೂಪಗಳು, ಸಾವಿರ ದಾರನೂರ ಇಪ್ಪತ್ತು ನಾಲ್ಕು-೧೬೨೪, ಭಾ=೪, ರ=೨, ಭೃ=೬, ತ್=೧, (ಬಲದಿಂದ ಎಡಕ್ಕೆ ಲೆಕ್ಕಮಾಡಬೇಕು.) ಈ ೧೬೨೪ ಅಕ್ಷರ ಸಾಂಕೇತಗಳಾದ ಭಗವದ್ರೂಪಗಳನ್ನು, ಆರುನಾಲಕು ಜಡಗಳಲಿ-೬×೪ =೨೪ ಜಡಭೂತಗಳಾದ ೨೪ ಎಂದರೆ, ಚತುರ್ವಿಂಶತಿ ತತ್ತ್ವಗಳಲ್ಲಿ. ಹದಿನಾರು ಸಂಖ್ಯಾಕವಾದ ಕಳಾಗಳಲ್ಲಿ ಎಂಬೋಣದರಿಂದ ಚತುರ್ವಿಂಶತಿ ತತ್ತ್ವಗಳು ಹದಿನಾರರಲ್ಲಿ ಅಂತರ್ಭೂತಗಳು, ಹ್ಯಾಂಗೆಂದರೆ, ಪಂಚ ಭೂತಗಳು (ಇದರಲ್ಲಿ ಪಂಚತನ್ಮಾತ್ರ್ಯಯಗಳು ಅಂತರ್ಭೂತಗಳು). ದಶೇಂದ್ರಿಯಗಳು, ಮನಸ್ಸು (ಇದರಲ್ಲಿ ಅಹಂಕಾರ ತತ್ತ್ವ, ಮಹತ್ತತ್ವ ಮತ್ತು ಅವ್ಯಕ್ತ ತತ್ತ್ವ ಈ ಮೂರೂ ಅಂತರ್ಭೂತ), ಈ ಪ್ರಕಾರ ಷೋಡಶ ಕಳಾದಲ್ಲಿ ಚತುರ್ವಿಂಶತಿ ತತ್ತ್ವಗಳು ಅಂತರ್ಭೂತಗಳು, ಅಂತು, ಚತುರ್ವಿಂಶತಿ ತತ್ತ್ವಗಳು ಎರಡು ಪ್ರಕಾರವಾಯಿತು. ಒಂದು ಚತುರ್ವಿಂಶತಿ ತತ್ತ್ವಗಳ ಗೋಳಕಗಳು. ಒಂದು ಚತುರ್ವಿಂಶತಿ ತತ್ತ್ವಗಳು. ತತ್ತ್ವಗಳ ಗೋಳಕಗಳು ಎಂಬುದು ಸ್ಥೂಲದೇಹಕ್ಕೆ ಸಂಬಂಧಿಸಿದ್ದು, ದೇಹದ ಸಂಗಡ ನಾಶವಾಗತಕ್ಕದ್ದು. ಅನಿರುದ್ಧ ಶರೀರ ಅನಾದಿಲಿಂಗೋಪಾನದಿಂದ ಆದದ್ದು. ಈ ಶರೀರ ಸ್ಥೂಲಶರೀರದ ಸಂಗಡ ನಾಶವಾಗತಕ್ಕದ್ದಲ್ಲ, ಈ ಶರೀರ ಸಂಬಂಧ ಚತುರ್ವಿಂಶತಿ ತತ್ತ್ವಗಳು ಸ್ಥೂಲದೇಹಗತ ಚತುರ್ವಿಂಶತಿ ಗೋಳಕದಲ್ಲಿ ವ್ಯಾಪಿಸಿ ಅದೆ, ಏತಾದೃಶವಾದ ಉಭಯವಿಧ ಚತುರ್ವಿಂಶತಿ ತತ್ತ್ವಗಳಲ್ಲಿ, ಚೇತನಗಳಲಿ—ಆಯಾ ಸ್ಥೂಲದೇಹಗತ ಚತುರ್ವಿಂಶತಿ ತತ್ತ್ವಗಳಲ್ಲಿ. ಪ್ರಕಾಶತೋವ್ಯಾಪ್ತನಾದ ಜೀವನ ಚತುರ್ವಿಂಶತಿ ತತ್ತ್ವಗಳಲ್ಲಿ, ಚರಾಚರದಿ ಸರ್ವತ್ರ — ಚರಾಚರಾಖ್ಯ ಸರ್ವಪ್ರಪಂಚದಲ್ಲಿ ವಿದ್ಯಮಾನನಾದ ಅಣು ಸ್ಥೂಲ ರರ್ವ ಪದಾರ್ಥಗಳಲ್ಲೂ, ಒಂದೊಂದರಲ್ಲಿ "ಭಾರಭೃತ್" ನಾಮಕ ಅಕ್ಷರ ಸಾಂಕೇತವಾದ ಭಗವದ್ರೂಪಗಳು ೧೬೨೪, ತುಂಬಿಹವು-ತುಂಬಿ ಇರೋದಾಗಿ ಅದೆ. ಚಿಂತಿಸೆ-ಈ ಪ್ರಕಾರ ಇರತಕ್ಕ ರೂಪಗಳಲ್ಲಿ ತನ್ನ ಬಿಂಬನ ಐಕ್ಯಚಿಂತನೆ ಮಾಡಿ, ಅನುಸಂಧಾನ

ದಿಂದ ಚಿಂತನಾ ಮಾಡಿದರೆ, ತನ್ನ ರೂಪವ-ಪರಮಾತ್ಮ ತನ್ನ ರೂಪ ವನ್ನು, ಸಕಲ ಠಾವಿನಲಿ-ಸರ್ವ ಪ್ರದೇಶಗಳಲ್ಲಿ, ಚಿಂತನಾ ಮಾಡಿದ ಪುಣ್ಯ ಬಲದಿಂದ, ತೋರಿಕೊಂಬನು-ಮನಸ್ಸಿಗೆ ಪ್ರತ್ಯಕ್ಷವಾಗುವನು, ಎಂದರೆ, ತನ್ನ ಬಿಂಬನ ಅಪರೋಕ್ಷವಾಗತದೆ ಎಂತ ತಾತ್ಪರ್ಯ.

**ವಿಶೇಷಾರ್ಥ :-**

ಸರ್ವತ್ರ ಬಿಂಬರೂಪಿ ಪರಮಾತ್ಮನನ್ನು ಚಿಂತಿಸಬೇಕು. ಚತುರ್ವಿಂಶತಿ ತತ್ತ್ವದಲ್ಲಿ ಷೋಡಶಕಲೆಗಳು ಸೇರಿತು. ಪ್ರತ್ಯೇಕ ಷೋಡಶಕಳೆಗಳನ್ನು ಯಾಕೆ ಹೇಳಬೇಕೆಂದರೆ, ಚತುರ್ವಿಂಶತಿ ತತ್ತ್ವ ಹೇಳೋಣದರಿಂದ ಸ್ಥೂಲ ದೇಹ ಎಂತಲೂ, ಹದಿನಾರು ಕಳಾ ಹೇಳೋಣದರಿಂವ ಅನಾದಿ ಲಿಂಗ ಎಂತಲೂ, ಚೇತನ ಎಂದರೆ, ಪ್ರಾಣಿಗಳು ಎಂತಲೂ ತಾತ್ಪರ್ಯ. ಲಿಂಗ ದೇಹಾರಭ್ಯ ಸ್ಥೂಲದೇಹದವರೆವಿಗೂ ಮಧ್ಯದಲ್ಲಿ ಇರತಕ್ಕ ದೇಹಗಳು ಯಾವತ್ತೂ ಬಂದಂತಾಯಿತು. ಇಷ್ಟರಲ್ಲೇ ಅನುಸಂಧಾನ ಮಾಡಬೇಕು. ॥೧೨॥

## (೨) "ಭಾವಪ್ರಕಾಶಿಕೆ" —ವ್ಯಾಖ್ಯಾನ :—

ಭಾರಭೃನ್ನಾಮಕ ಉಪಾಸನಾ ಕ್ರಮವನ್ನು ಹೇಳುತ್ತಾರೆ, "ಭಾರ ಭೃತ್"- ಎಂಬ ಹೆಸರುಳ್ಳ ಶ್ರೀ ಪರಮಾತ್ಮ ಅಕ್ಷರ ಸಂಖ್ಯಾಕ್ರಮದಿಂವ ಭಾ=೪, ರ=೨, ಭೃ=೬, ತ್=೧, ಇದನ್ನು ವಾಮಾಂಕ ಮಾಡಿ ದರೆ, ೧೬೨೪ ಆಗುವುದು, ಇಷ್ಟು ಮೂರ್ತಿಗಳು ಚರಾಚರಾಖ್ಯ ಸರ್ವ ಪ್ರಪಂಚದಲ್ಲಿಯೂ ತುಂಬಿರುವುವು. ಪ್ರಪಂಚವನ್ನೆಲ್ಲ ಧರಿಸಿ ಇರುವುದ ರಿಂದಲೂ, ಭಾರ ವಹಿಸುವುದೆಂದರೆ ಪ್ರಪಂಚದಲ್ಲಿ ಸರ್ವಪ್ರಾಣಿಗಳ ಯೋಗಕ್ಷೇಮ ಭಾರವನ್ನು ವಹಿಸಿರುವನೆಂದರ್ಥ, ಆದ್ದರಿಂದಲೇ ಶ್ರೀ ಪರಮಾತ್ಮನಿಗೆ "ಭಾರಭೃತ್"-ಎಂದು ಹೆಸರು ಮತ್ತು ಸ್ಥೂಲಶರೀರಗಳಲ್ಲಿ ಇರುವ ೨೪ ತತ್ತ್ವಗಳು ಪೃಥಿವ್ಯಾದಿ ಜಡವಾದುದರಿಂದ, ಅವುಗಳಲ್ಲಿ

ತದ್ರೂಪಿಯಾಗಿರುವನು. ಷೋಡಶಕಲೋಪೇತ ಲಿಂಗಶರೀರದಲ್ಲಿಯೂ, ಸ್ಥೂಲಶರೀರದಲ್ಲಿಯೂ ಸಹ ಜ್ಞಾನೇಂದ್ರಿಯಗಳು ೫, ಕರ್ಮೇಂದ್ರಿಯಗಳು ೫, ಮಹಾಭೂತಗಳು ೫, ಮನಸ್ಸು ೧- ಇವುಗಳ ಅಭಿಮಾನಿಗಳು ಚೇತನರಾದುದರಿಂದ ಹದಿನಾರು ಚೇತನಗಳಲಿ ಎಂದು ಹೇಳಿರುವರು. ೨೪ ರಲ್ಲಿ ೧೬ ಚೇತನರನ್ನೂ ಮಾತ್ರ ಏಕೆ ತೆಗೆದುಕೊಂಡರೆಂದರೆ, ಪಂಚಮಹಾಭೂತಗಳನ್ನು ತೆಗೆದುಕೊಂಡರೆ, ಸೂರ್ಯನನ್ನು ಬಿಟ್ಟು ಕಿರಣಗಳು ಹೇಗೆ ಬೇರೆಯಾಗುವುದಿಲ್ಲವೋ ಹಾಗೆ ತನ್ಮಾತ್ರಾಗುಣಗಳು ಪೃಥಿವ್ಯಾದಿಗಳನ್ನು ಬಿಟ್ಟು ಬೇರೆ ಇರದೆ ಪೃಥಿವೀ ಗುಣ ಗಂಧ, ಉದಕದ ಗುಣ ರಸ. ಹೀಗೆ ಇವುಗಳು ಒಂದಕ್ಕೊಂದು ಸಂಬಂಧಿಸಿಯೇ ಇರುವುವು. ಇವುಗಳಿಗೆ ಸ್ಥಾನವು ಬೇರೆಯಿಲ್ಲದೆ ಜ್ಞಾನೇಂದ್ರಿಯಗಳೇ ಆವಾಸಸ್ಥಾನವಾಗಿರುವುವು, ಆಂದರೆ. ಮೂಗು ಗಂಧ ಗುಣದಿಂದ ಕೂಡಿದ ಭೂತತ್ತ್ವಕ್ಕೆ ಸ್ಥಾನವಾಗಿಯೂ, ಕಣ್ಣು ರೂಪ ವಿಶಿಷ್ಟವಾದ ತೇಜಸತ್ತ್ವಕ್ಕೂ, ಹೀಗೆ ಒಂದರೊಲ್ಲೊಂದು ಸೇರಿರುವುದರಿಂದಲೂ, ಜ್ಞಾನೇಂದ್ರಿಯಾಭಿಮಾನಿಗಳೇ ಇವುಗಳಿಗೂ ಅಭಿಮಾನಿಗಳಾಗಿರುವುದರಿಂದಲೂ, ತನ್ಮಾತ್ರಾ ಗುಣಗಳನ್ನು ಬಿಟ್ಟರು. ಚಿತ್ತ. ಬುದ್ಧಿ, ಅಹಂಕಾರಗಳು ಮನಸ್ಸಿನ ಪ್ರಭೇದವೇ ಆದುದರಿಂದ ಮನಸ್ತತ್ತ್ವವನ್ನೂ ಮಾತ್ರ, ತೆಗೆದುಕೊಂಡರು, ಪ್ರಾಯಶಃ ಷೋಡಶ ಕಲೋಪೇತವು ಪುರುಷ ಶರೀರವೆಂತಲೂ, ಆದುದರಿಂದಲೇ ಪರಮಾತ್ಮನಿಗೆ "ಷೋಡಶಾತ್ಮಕ" ನೆಂದು, ಹೆಸರೆಂಬ ಭಗವತ್ ವಚನಾದಿಗಳನ್ನನುಸರಿಸಿ ದಾಸರಾಯರು "ಹದಿನಾರು ಚೇತನಗಳಲಿ" ಎಂದು ಹೇಳಿರುವರು. ಹೀಗೆ ಸರ್ವತ್ರ ಇದ್ದು, ನಮ್ಮ ಸಕಲ ಯೋಗಕ್ಷೇಮ ಭಾರವನ್ನು ವಹಿಸಿ ರಕ್ಷಿಪನೆಂದು ಭಾವಿಸಿ, ಸ್ವಕರ್ತೃತ್ವಾಭಿಮಾನವನ್ನು ಬಿಟ್ಟು, ಪರಮಾತ್ಮನನ್ನು ಧ್ಯಾನಮಾಡಬೇಕು. ಮನೆ ಮನವೆಂಬ ಸ್ಥಳಭೇದವಿಲ್ಲದೆ, ಅಥವಾ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಎಂಬ ಭೇದವಿಲ್ಲದೆ, ಯಾವ ರೀತಿಯಲ್ಲಾದರೂ ಭಕ್ತಿಯಿಂದ ಭಜನೆಮಾಡುವವರಿಗೆ ಅಪರೋಕ್ಷದಲ್ಲಿ ತನ್ನ ರೂಪವನ್ನು ತೋರಿಸುವನು. ॥೧೨॥

## (೩) "ಭಾವದರ್ಪಣ ಟೀಕಾ"- ವ್ಯಾಖ್ಯಾನ :-

ಭಾರಭೃನ್ನಾಮಕೇತಿ॥ 'ಭಾರಭೃತ್" ಎಂಬ ಪದ್ಯೋಕ್ತರೂಪಗಳು ೧೬೨೪ ವಾಮಾಂಕರಿಂದ ತಿಳಿಯಕ್ಕದ್ದು. ॥೧೨॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :-

"ಭಾರಭೃತ್"-ಇತಿ॥ ಓಮ್‌ವೃದ್ಧೋ ಅಜಾಯಥಾಃ ಇಂದ್ರ ಜ್ಯೈಷ್ಠ್ಯಾಯ ಸುಕ್ರತೋ ಆ ತ್ವಾ ವಿಶಂತ್ವಾಶವತಃ ॥ ಸೋಮಾಸ ಇಂದ್ರ ಗೀರ್ವಾಣಃ ಶಂತೇಸಂತು ಪ್ರಚೇತಸೇ ಓಮ್ ॥

ಭ್ರಿಯತೇ ಇತಿ ಭಾರಃ ರಮಾ । ತಾಂ ಬಿಭರ್ತಿ ಇತಿ ಭಾರಭೃತ್ । ಸಹಸ್ರಂ ಷಟ್‌ಶತಂ ವಿಷ್ಣೋಃ ಚತುರ್ವಿಂಶತಿ ಸರ್ವಗಃ ॥ ಜಡೇಷು ದಶ ರೂಪಾಣಿ ಚೇತನೇಷು ಷೋಡಶ ॥೧೨॥

## ಕನ್ನಡಾರ್ಥ :-

"ಭಾರಭೃತ್" ಎಂಬ ನಾಮವು ವಿಷ್ಣುಸಹಸ್ರನಾಮಗಳಲ್ಲಿ ಒಂದು. ಈ ಶಬ್ದದ ಅರ್ಥವನ್ನು ಬೃಹತೀ ಮಂತ್ರವು ಪ್ರತಿಪಾದಿಸುವುದು. ಭಾರ ವೆಂದರೆ "ರಮಾದೇವಿ" ಎಂದರ್ಥ. ಅಂತಹ ರಮಾದೇವಿಯನ್ನು ಧರಿಸಿ ಪೋಷಿಸಿ ಸುಖಪಡಿಸುವುದರಿಂದ ಶ್ರೀ ಪರಮಾತ್ಮನಿಗೆ- "ಭಾರಭೃತ್"-ಎಂದು ಹೆಸರು

ಚರಾಚರವಸ್ತುಗಳಲ್ಲಿ ಸರ್ವತ್ರ ೧೬೨೪ ರೂಪಗಳಿಂದ ಇರುತ್ತಾನೆ. ಜಡಗಳಲ್ಲಿ ೧೦ ರೂಪಗಳೂ,ಚೇತನರಲ್ಲಿ ೧೬ ರೂಪಗಳೂ ಇರುತ್ತವೆ. ॥೧೨॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

**ಭಾರಭೃದ್ರೂಪ** ಅಕ್ಷರಸಂಖ್ಯಾ ತಿಳಿಸಿ- ಜಡ ಚೇತನಗತರೂಪ ಪ್ರಕಾರಾಂತರ ಚಿಂತನಾ ನಿರೂಪಿಸುತ್ತಾರೆ.

ಬಲಗಾಲ ಅಂಗುಷ್ಠದಲ್ಲಿ ದೇವರು ಭಾರಭೃನ್ನಾಮಕನಾಗಿ; ತ್=೧, ಭೃ=೬, ರ=೨ ಭಾ=೪ ಈ ರೀತಿ ೧೬೨೪ ರೂಪಗಳಿಂದ ಚರಾಚರದಲ್ಲಿ ಸರ್ವತ್ರ ತುಂಬಿರುವನು. ಪಂಚಜ್ಞಾನೇಂದ್ರಿಯ, ಪಂಚಭೂತ ಸಹ ಹತ್ತರಲ್ಲಿರುವ ಭಗವದ್ರೂಪಗಳು ಹತ್ತನ್ನು ಜಡಗಳಲ್ಲೂ, ಪಂಚಜ್ಞಾನ ಪಂಚಕರ್ಮೇಂದ್ರಿಯಗಳು, ಪಂಚಭೂತ ಮನಸ್ಸು ಸಹ ೧೬ ರಲ್ಲಿರುವ ದೇವರರೂಪ, ಚೇತನಗಳಲ್ಲೂ, ಚಿಂತಿಸಲು, ಅಂದರೆ, ಧ್ಯಾನ ಮಾಡಿದರೆ, ಸರ್ವಸ್ಥಳಗಳಲ್ಲೂ ತನ್ನ ರೂಪದರ್ಶನ ಕೊಡುವನು. ವೃಕ್ಷಾದಿಜಡಗಳಲ್ಲಿ, ಆಲೋಚನಾತ್ಮಕ ಮನಸ್ಸಿಗೂ. ಪಾದಾದಿ ಕರ್ಮೇಂದ್ರಿಯಗಳಿಗೂ ಅತ್ಯಂತ ಸೂಕ್ಷ್ಮಸ್ಥಿತಿ ಇರುವುದರೀದ ೧೦ ರೂಪಗಳೇ ಹೇಳಿದ್ದಾರೆಂದು ತಿಳಿಯಬೇಕು. ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹ

"**ಭಾರಭೃತ್**" ನಾಮಕನಾದ ಶ್ರೀ ಪರಮಾತ್ಮನ ಭಗವದ್ರೂಪೋಸನಾ ಕ್ರಮವನ್ನು ವಿವರಿಸುತ್ತಾರೆ– "**ಭಾರಭೃನ್ನಾಮಕನ**" ಎಂಬ ಪ್ರಸಕ್ತ ೧೨ ನೆಯ ಪದ್ಯದಿಂದ.

(೧) ಕೂರ್ಮರೂಪದಿಂದ ಶ್ರೀಮನ್ನಾರಾಯಣನು ಬ್ರಹ್ಮಾಂಡದ ಒಳಗೂ ಮತ್ತು ಹೊರಗೂ ಈ ಚರಾಚರಾತ್ಮಕವಾದ ಜಗತ್ತನ್ನು ಹೊತ್ತಿರುವುದರಿಂದ ಆವನಿಗೆ "**ಭಾರಭೃತ್**"– ಎಂದು ಹೆಸರು.

(೨) ಇದು ವಿಷ್ಣುಸಹಸ್ರನಾಮಗಳಲ್ಲಿ ಒಂದಾದ ಹೆಸರು.

**ಪ್ರಮಾಣ :—**

**ಭಾರಭೃತ್ ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।**
**ಆಶ್ರಮಃ ಶ್ರವಣಃ ಕ್ಷಾಮಃ ಸುಪರ್ಣೋ ವಾಯು ವಾಹನಃ ॥೯೧॥**

(೩) **ಬೃಹತೀಮಂತ್ರ** ಪ್ರತಿಪಾದ್ಯ ಭಗವದ್ರೂಪವು.
**ಬ್ರಹ್ಮಾಂಡಂ ಭಾರಂ ಬಿಭರ್ತೀತಿ ಭಾರಭೃತ್** ಎಂಬ ಶಬ್ದಾರ್ಥದಂತೆ ಬ್ರಹ್ಮಾಂಡ ಭಾರ ಧಾರಕನಾಗಿರುವುದರಿಂದ "ಭಾರಭೃತ್"- ಎಂದು ಹೆಸರು.

(೪) **ಭಾರ**=ರಮಾದೇವಿಯರನ್ನು **ಭೃತ್**=ವಕ್ಷಸ್ಥಳದಲ್ಲಿ ಧರಿಸಿರುವವನಾದ್ದರಿಂದ, "ಭಾರಭೃತ್" ಎಂದು ಹೆಸರು.

(೫) ಬಲಗಾಲಿನ ಉಂಗುಷ್ಟದಲ್ಲಿದ್ದು. ಇಡೀ ಶರೀರದ ಭಾರವನ್ನು ತಾನೇ ಹೊತ್ತಿರುವುದರಿಂದ, "ಭಾರಭೃತ್"-ಎಂದು ಹೆಸರು,

ಹೀಗೆ ಭಾರಭೃನ್ನಾಮಕನಾದ ಶ್ರೀಪರಮಾತ್ಮನ ಅಕ್ಷರಸಾಂಕೇತ ಸಂಖ್ಯಾ ರೂಪಗಳು=೧೬೨೪. ಇದರ ವಿವರ ಹೀಗಿದೆ :-

(೧) ಭಾ=ಪ-ವರ್ಗ ಪಂಚಕ =೪
(೨) ರ=ಅವರ್ಗೀಯ ವ್ಯಂಜನಾಕ್ಷರ =೨
(೩) ಭೃ=ಭ+ರ = ೪+೨ =೬
(೪) ತ್=ತ-ವರ್ಗಪಂಚಕ =೧

ಅಲ್ಲಿಗೆ ೪೨೬೧ ಆಯಿತು. ವಾಮಾಂಕರೀತ್ಯಾ, **೧೬೨೪** ಭಗವದ್ರೂಪಗಳು. ಇಂತು ಭಾರಭೃನ್ನಾಮಕನಾದ ೧೬೨೪ ಅಕ್ಷರ ಸಾಂಕೇತ ವಾಚ್ಯನಾಗಿ ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಓತಪ್ರೋತನಾಗಿ ಸರ್ವತ್ರ. ಸರ್ವದೇಶ ಕಾಲಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪಿಸಿರುವನು.

(೬) ತತ್ತ್ವಗಳು ಇಪ್ಪತ್ತುನಾಲ್ಕು. ಇವು ಜಡಭೂತವಾದದ್ದು, ಅವುಗಳಿಗೆ ಸ್ವತಃ ಪ್ರವೃತ್ತಿ ಇಲ್ಲ. ಈ ಚತುರ್ವಿಂಶತಿ ತತ್ತ್ವಗಳ ಸಂಖ್ಯೆಯನ್ನು ದಾಸರಾಯರು "ಆರುನಾಲಕು"—ಎಂದಿದ್ದಾರೆ. ಅಂದರೆ, ೬×೪ =೨೪ ತತ್ತ್ವಗಳೆಂದು ತಾತ್ಪರ್ಯ. ಈ ಚತುರ್ವಿಂಶತಿ ತತ್ತ್ವಗಳ ವಿವರ ಇಂತಿದೆ :-

| | | | | |
|---|---|---|---|---|
| (೧) | ಅವ್ಯಕ್ತ ತತ್ತ್ವ | = | ೧ | ಇವು ನಾಲ್ಕು ಸೂಕ್ಷ್ಮ ತತ್ತ್ವಗಳು |
| (೨) | ಮಹತ್ತತ್ತ್ವ | = | ೧ | |
| (೩) | ಅಹಂಕಾರ ತತ್ತ್ವ | = | ೧ | |
| (೪) | ಮನಸ್ತತ್ತ್ವ | = | ೧ | |
| (೫) | ಜ್ಞಾನೇಂದ್ರಿಯಗಳು | = | ೫ | ಇವು ಇಪ್ಪತ್ತು ಸ್ಥೂಲ ತತ್ತ್ವಗಳು |
| (೬) | ಕರ್ಮೇಂದ್ರಿಯಗಳು | = | ೫ | |
| (೭) | ತನ್ಮಾತ್ರಾಗುಣಗಳು | = | ೫ | |
| (೮) | ಮಹಾ ಭೂತಗಳು | = | ೫ | |
| | ಒಟ್ಟು | = | ೨೪ | ತತ್ತ್ವಗಳು |

## (೭) ಹದಿನಾರು ಚೇತನಗಳ ವಿವರ :–

ಅನಾದಿ ಲಿಂಗದೇಹವು ತ್ರಿಗುಣಾತ್ಮಕವಾದದ್ದು. ಈ ಗುಣತ್ರಯಗಳ ವ್ಯಾಪಾರವೇ ಜನನ ಮರಣಾಖ್ಯವಾದ ಭವವೆಂಬ ಮಹಾಸಾಗರಕೆ ಕಾರಣ ಭೂತವಾದ ಅನಾದಿ ಕರ್ಮವು. ಈ ಪ್ರಾರಬ್ಧ ಕರ್ಮಬೀಜವು ಲಿಂಗಶರೀರಗತವಾಗಿದೆ. ಈ ಕರ್ಮ ಪ್ರವಾಹವು ಪ್ರವಾಹತೋನಿತ್ಯವಾದದ್ದು. ೧೬ ತತ್ತ್ವಗಳೆಂಬ ಕಳೆಗಳ ದ್ವಾರಾ ಕರ್ಮದ ವ್ಯಾಪಾರವು ಅಭಿವ್ಯಕ್ತವಾಗುವುದು.

ಈ ಷೋಡಶ ಕಲೆಗಳು ಯಾವುವೆಂದರ :-

| | | | |
|---|---|---|---|
| (೧) | ಪಂಚ ಜ್ಞಾನೇಂದ್ರಿಯಗಳು | = | ೫ |
| (೨) | ಪಂಚ ಕರ್ಮೇಂದ್ರಿಯಗಳು | = | ೫ |
| (೩) | ಪಂಚ ಭೂತಗಳು | = | ೫ |
| (೪) | ಮನಸ್ಸು | = | ೧ |
| | ಒಟ್ಟು | = | ೧೬ ಕಳೆಗಳು |

ಈ ಹದಿನಾರು ತತ್ತ್ವಗಳಿಗೆ ಅಭಿಮಾನಿಗಳಾದ ದೇವತೆಗಳೇ ಚೇತನರು ಲಿಂಗದೇಹದಿಂದ ಮೂಲವಾಗಿ ಹೊರಟ ಈ ಷೋಡಶ ಕಳೆಗಳ ದ್ವಾರಾ ಸ್ಥೂಲದೇಹದಲ್ಲಿ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಭೂತ ಪಂಚಕಗಳು ಮತ್ತು ಮನಸ್ಸಿನ ವ್ಯಾಪಾರ ರೂಪವಾದ ಕರ್ಮ ವಿಶೇಷಗಳ ಕ್ರಿಯಾಭಿವ್ಯಕ್ತಿ,

(೮) ಇಂತು ಲಿಂಗದೇಹಗತ ಹದಿನಾರು ಚೇತನಗಳಲ್ಲಿ ಮತ್ತು ಸ್ಥೂಲದೇಹಗತ ೨೪ ತತ್ತ್ವಗಳಲ್ಲಿ ಹಬ್ಬಿ ಹರಡಿಕೊಂಡಿರುವ ಭಾರಭೃನ್ನಾಮಕನಾದ ಶ್ರೀ ಪರಮಾತ್ಮನ ೧೬೨೪ ಭಗವದ್ರೂಪಗಳನ್ನು (೧೬ ಕಳೆಗಳು ಮತ್ತು ೨೪ ತತ್ತ್ವಗಳು ಎಂದೂ ಈ ಸಂಖ್ಯೆಯನ್ನು ಜೋಡಿಸಬಹುದು) ಚಿಂತಿಸುತ್ತಾ, ಧ್ಯಾನೋಪಾಸನೆ ಮಾಡತಕ್ಕ ಏಕಾಂತಭಕರಿಗೆ ಸರ್ವತ್ರ ಅಪರೋಕ್ಷರೂಪವಾದ ತನ್ನ ಸಂದರ್ಶನ ಭಾಗ್ಯವನ್ನಿತ್ತು, ಅವರ ಮನೋಮಂದಿರದಲ್ಲಿ ಗೋಚರಿಸುವನೆಂದು ಪ್ರಸಕ್ತ ಪದ್ಯದ ತಾತ್ಪರ್ಯ. ಇದರ ಭಾವವನ್ನೇ ಶ್ರೀ ಜಗನ್ನಾಥ ದಾಸವರ್ಯರು **"ಕಂಡಕಂಡಲ್ಲಿ" ವಿಶ್ವರೂಪ ಕಾಂಬೋರೋ"**- ಎಂದಿದ್ದಾರೆ ತಮ್ಮ ಸುಪ್ರಸಿದ್ಧ ಕೀರ್ತನೆ ಒಂದರಲ್ಲಿ, ॥೧೨॥

## ಪದ್ಯ (೧೩)

**ಮೂಲ :-**

**ಮಿಸುನಿ ಮೇಲಿನ ಮಣಿಯವೋಲ್ ರಾ ।**
**ಜಿಸುವ ಬ್ರಹ್ಮಾದಿಗಳ ಮನದಲಿ ।**
**ಬಿಸಜಜಾಂಡಾಧಾರಕನು ಆಧೇಯನೆಂದೆನಿಸಿ ॥**
**ದ್ವಿಶತ ನಾಲ್ವತ್ತೆರಡು ರೂಪದಿ ।**
**ಶಶಿಯೊಳಿಪ್ಪನು ಶಶದೊಳಗೆ ಶೋ ।**
**ಭಿಸುವ ನಾಲ್ವತ್ತೆರೆಡಧಿಕ ಶತರೂಪದಲಿ ಬಿಡದೆ ॥೧೩॥**

**ಅವತರಣಿಕೆ :-**

ಶ್ರೀ ಪರಮಾತ್ಮನ ಆಧಾರ ಆಧೇಯ ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ- **"ಮಿಸುನಿ ಮೇಲಿನ"**-ಎಂಬ ಪ್ರಸಕ್ತ ಸಂಧಿಗತ ೧೩ ನೆಯ ಈ ಪದ್ಯದಿಂದ,

ಚಿನ್ನದ ಗೂಡಿನಲ್ಲಿ ರತ್ನಮಣಿ ಇರುವಂತೆ. ಶ್ರೀ ಪರಮಾತ್ಮನು ಆಧಾರ ಮತ್ತು ಆಧೇಯ ರೂಪದಿಂದ ಈ ಬ್ರಹ್ಮಾಂಡದ ಭಾರವನ್ನು ಹೊತ್ತಿರುವನು. ರತ್ನವು ಕುಂದಣದಿಂದ ಯುಕ್ತವಾದಾಗಲೇ, ಅದು ಪರಿಶೋಭಿಸುವುದು, ಅಂತೆಯೇ ಈ ದೃಷ್ಟಾಂತದಿಂದ ಚಿನ್ನದ ಗೂಡು **ಆಧಾರ.** ಅದರಲ್ಲಿ ಹುದುಗಿಸಲ್ಪಟ್ಟ ರತ್ನವು **ಆಧೇಯವು.** ಅಂತೆಯೇ ಬ್ರಹ್ಮಾದಿಗಳ ಮನೋಮಂದಿರವೇ ಆಧಾರವು. ಅಕ್ಷರ ಸಾಂಕೇತ ರೂಪದಿಂದ ಆ=೨, ಧಾ—೪, ರ=೨, ವಾಮಾಂಕ ಗತಿಯಿಂದ ೨೪೨ ರೂಪಗಳಿಂದ (ದ್ವಿಶತ ನಾಲ್ವತ್ತೆರಡು ರೂಪದಿ) ಬ್ರಹ್ಮಾದಿ ದೇವತೆಗಳ ಮನಸ್ಸೆಂಬ ಆಧಾರಭೂತವಾದ ಅಧಿಷ್ಠಾನದಲ್ಲಿ **ಆಧಾರ** ಶಬ್ದವಾಚ್ಯನಾಗಿ ಪರಿಶೋಭಿಸುತ್ತಿರುವನು. **ಆಧೇಯ** ಶಬ್ದದ ಅಕ್ಷರ ಸಾಂಕೇತ ಭಗವದ್ರೂಪಗಳು ಆ=೨, ಧೇ=೪, ಯ=೧, ವಾಮಾಂಕ ರೀತ್ಯಾ ೧೪೨ ರೂಪಗಳಿಂದ (ನಾಲ್ವತ್ತೆರಡಧಿಕ ಶತರೂಪದಲಿ) ಚಂದ್ರನಲ್ಲಿ **ಆಧೇಯ** ಶಬ್ದವಾಚ್ಯನಾಗಿ ವಿದ್ಯಮಾನನಾಗಿದ್ದಾನೆ. ಬ್ರಹ್ಮಾಂಡಕ್ಕೆ ಆಧಾರನಾಗಿ ಅಂತರ್ಬಹಿಶ್ಚ ವ್ಯಾಪ್ತನಾಗಿದ್ದು, ಆಧಾರ ಆಧೇಯ ರೂಪಧಾರಕನಾಗಿ ಪರಿಶೋಭಿಸುತ್ತಿರುವನು, **ಶಶ** ಎಂದರೆ "ಮೊಲ" ಎಂದರ್ಥ, ಚಂದ್ರನಲ್ಲಿ ಮೊದಲ ಆಕಾರದಲ್ಲಿರುವ ಕಳಂಕವೇ ಶಶವು. ಇದನ್ನು ಹೊಂದಿರುವುದರಿಂದ ಚಂದ್ರನಿಗೆ **ಶಶಿ** ಎಂದು ಹೆಸರು. ಶಶಿ ಆಧೇಯ ರೂಪ. ಶಶ ಆಧಾರ ರೂಪವು. ॥೧೩॥

**ಪ್ರತಿಪದಾರ್ಥ :-**

**ಮಿಸುನಿ**=ಭಂಗಾರದ **ಮೇಲಿನ**=ಮೇಲೆ ಕೆತ್ತಲ್ಪಟ್ಟಿರುವ ಗೂಡಿ

ನಲ್ಲಿರುವ **ಮಣಿಯುವೋಲ್** = ಮಾಣಿಕ್ಯದಂತೆ (ರತ್ನದ ಹರಳು) **ಬ್ರಹ್ಮಾದಿಗಳ ಮನದಲಿ** = ಬ್ರಹ್ಮದೇವರೇ ಮೊದಲಾದ ದೇವತೆಗಳ ಮನಸ್ಸಿನಲ್ಲಿ **ರಾಜಿಸುವ** = ಶೋಭಿಸುತ್ತಿರುವ **ಬಿಸಜಜಾಂಡ** = ಬ್ರಹ್ಮಾಂಡಕ್ಕೆ (ಬಿಸಜ = ಕಮಲ; ಬಿಸಜಜ = ಕಮಲೋದ್ಭವರಾದ ಚತುರ್ಮುಖ ಬ್ರಹ್ಮದೇವರ; ಅಂಡ = ಶರೀರ ರೂಪವಾದ ಬ್ರಹ್ಮಾಂಡವು) **ಆಧಾರಕನು** = ಆಧಾರಭೂತನಾದವನಾಗಿ (ವಿಷ್ಣು ಕೂರ್ಮ ರೂಪದಿಂದ) **ಆಧೇಯನೆಂದೆನಿಸಿ** = ಸಮಸ್ತ ಚೇತನ ರಾಶಿಯಲ್ಲಿ ಆವಾಸನಾಗಿ, "ಆಧೇಯ" ನಾಮಕನಾಗಿ **ದ್ವಿಶತ ನಾಲ್ವತ್ತೆರಡು ರೂಪದಿ** = ೨೪೨ ಅಕ್ಷರಸಾಂಕೇತ ರೂಪಗಳಿಂದ (ದ್ವಿಶತ = ೨ × ೧೦೦ = ೨೦೦, ನಾಲ್ವತ್ತೆರಡು = ಅದರ ಮೇಲೆ ೪೨, ಅಂದರೆ ೨೦೦ + ೪೨ = ೨೪೨ ಆಧಾರ ಶಬ್ದವಾಚ್ಯ ರೂಪಗಳು ಆ = ೨, ಧಾ = ೪, ರ = ೨, ವಾಮಾಂಕರೀತ್ಯಾ ೨೪೨ ರೂಪಗಳು) **ಶಶಿಯೊಳಿಪ್ಪನು** = ಚಂದ್ರನಲ್ಲಿ ವಿದ್ಯಮಾನನಾಗಿದ್ದಾನೆ. **ಶಶದೊಳಗೆ** = ಚಂದ್ರಗತ ಮೊಲದ ಆಕಾರದಲ್ಲಿರುವ ಚಿಹ್ನೆಯ ರೂಪವಾದ ಕಳಂಕದಲ್ಲಿ **ನಾಲ್ವತ್ತೆರಡಧಿಕ ಶತ ರೂಪದಲಿ** = ೧೪೨ ಅಕ್ಷರ ಸಾಂಕೇತ ಭಗವದ್ರೂಪಗಳಿಂದ (ಶತ = ೧೦೦ ; ನಾಲ್ವತ್ತೆರಡಧಿಕ = ಇದರ ಮೇಲೆ ೪೨ ಹೆಚ್ಚಾದ, ಅಂದರೆ, ೧೦೦ + ೪೨ = ೧೪೨ ರೂಪಗಳು) (**ಆಧೇಯ** ಶಬ್ದವಾಚ್ಯ ರೂಪಗಳು— ಆ = ೨, ಧೇ = ೪, ಯ = ೧, ವಾಮಾಂಕಗತಿಯಿಂದ ೧೪೨ ವರ್ಣಸಂಖ್ಯಾ ರೂಪಗಳು) **ಬಿಡದೆ** = ಸರ್ವಕಾಲದಲ್ಲಿಯೂ **ಶೋಭಿಸುವ** = ಪರಿಶೋಭಮಾನನಾಗಿದ್ದಾನೆ. ಈ ದೃಷ್ಟಾಂತದಲ್ಲಿ (೧) ಬ್ರಹ್ಮಾದಿಗಳು ಆಧಾರ. (ಮಿಸುನಿ = ಭಂಗಾರ) (೨) ಅವರ ಮನಸ್ಸು—ಆಧೇಯ (ಕೆತ್ತಿದ ರತ್ನದಂತೆ) ಅಂತೆಯೇ, (೧) ಶಶಿ (ಚಂದ್ರ)—ಆಧಾರ. (೨) ಶಶ (ಕಳಂಕ)—ಆಧೇಯ ॥೧೩॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಜಗತ್ತಿಗೆ ಪರಮಾತ್ಮ ಆಧಾರ ಎಂತಲೂ, ಜೀವರು ಆಧೇಯ ಎಂತಲೂ ಹೇಳತಾರೆ. ಆಧಾರಾಧೇಯ ರೂಪೋಪಾಸನ ಹೇಳತಾರೆ.

ಮಿಸುನಿ ಮೇಲಿನ—ಮಿಸುನಿ ಎಂದರೆ ಭಂಗಾರ. ಅದರ ಮ್ಯಾಲಿರ ತಕ್ಕ, ಮಣಿಯ ವೋಲ್—ಮಣಿಯೋಪಾದಿಯಲ್ಲಿ ಎಂದರೆ, ಭಂಗಾರ ದಿಂದ ನಿರ್ಮಿತವಾದ ಉಂಗುರದ ಮ್ಯಾಲೆ ವಿದ್ಯಮಾನವಾದ ಮಣಿ ಎಂದರೆ, ರತ್ನವೋಲ್–ಇದರೋಪಾದಿಯಲಿ, ಬ್ರಹ್ಮಾದಿಗಳ ಮನದಲಿ–ಬ್ರಹ್ಮಾದಿ ಗಳ ಮನಸ್ಸಿನಲ್ಲಿ, ಬಿಸಜಾಂಡ–ಬ್ರಹ್ಮಾಂಡಕ್ಕೇನು, ಈ ಬ್ರಹ್ಮಾಂಡಗತ ಜೀವರಿಗೇನು, ಆಧಾರಕನು ಆಧೇಯನು–ಆಧೇಯನು ಎಂದರೆ, ಆ– ಸಮ್ಯಕ್‌ಧ್ಯೇಯ–ಧ್ಯಾನಕ್ಕೆ ಯೋಗ್ಯನಾದವನು, ಜೀವರ ಒಳಗೆ ಆಧಾರ ಮಾಡಿಕೊಂಡು ಆಧೇಯನಾಗಿ ಇರತಕ್ಕವನು ಎಂತಲೂ ತಾತ್ಪರ್ಯವೇ, ಎಂದೆನಿಸಿ–ಈ ಪ್ರಕಾರ ಇದ್ದಾನೆ ಎಂತ ಅನಿಸಿಕೊಂಡು, ರಾಜಿಸುವ– ಪ್ರಕಾಶಮಾನನಾಗಿದ್ದಾನೆ. ದ್ವಿಶತ ನಾಲ್ವತ್ತೆರೆಡು–ಆಧಾರ ಆಧೇಯನಾಮಕ ಭಗವದ್ರೂಪಗಳು ಅಕ್ಷರ ಸಾಂಕೇತದಿಂದ ತಿಳಿಯತಕ್ಕದ್ದು. ದ್ವಿಶತ–ದ್ವಿ ಎಂದರೆ ಎರಡು, ಶತ ಎಂದರೆ ನೂರು ಅಂತು ೨೦೦. ಶತಶಬ್ದ ಆವ ರ್ತನ ಮಾಡಿದರೆ ೧೦೦, ದ್ವಿಶತ ಎಂಬುದನ್ನು ಆವರ್ತನ ಮಾಡಿಕೊಂಡು ಎರಡು ನಾಲ್ವತ್ತೆರಡುಗಳು–ಎಂಭತ್ತನಾಲ್ಕು ಎಂತ ಸಂಖ್ಯಾ ಮಾಡಿಕೋ ಬೇಕು. ಬಲದಿಂದ ಎಡಕ್ಕೆ ಲೆಕ್ಕ - ಆ=೨, ಧಾ=೪, ರ=೨. ಅಂದರೆ ೨೪೨ ಆ=೨, ಧೇ=೪, ಯ=೧, ಅಂದರೆ. ೧೪೨. ಅಂತೂ ಎರಡೂ ಸೇರಿದರೆ, ಮುನ್ನೂರ ಎಂಭತ್ತನಾಲ್ಕು ಸರಿಯಾಗತದೆ. ಈ ಪ್ರಕಾರವಾಗಿ, ರೂಪದಿ-೩೮೪ ರೂಪದಿಂದ ಅಣುರೇಣುತೃಣಕಾಷ್ಠದಲ್ಲಿ,

ಪ್ರತಿಪ್ರತಿಯಲ್ಲೂ ಇಷ್ಟು ರೂಪಗಳಿಂದ ಇದ್ದಾನೆ, ಪ್ರತಿ ಅಧಿಷ್ಠಾನದಲ್ಲೂ ಅಂತರ್ಗತ ರೂಪ ಒಂದು, ಬ್ಯಾಹ್ಯರೂಪ ಒಂದು ಈ ಆಧಾರ ಆಧೇಯ ರೂಪಗಳು ಎಂತ ತಿಳಿಯೋವರಾಗಬೇಕು. ಶಶಿಯೊಳಿಪ್ಪನು-ಚಂದ್ರನ ಒಳಗೆ ೨೪೨ ರೂಪದಿಂದ, ಸಸ್ಯಾದಿಗಳಿಗೆ ಆಧಾರಭೂತನಾದವ ಚಂದ್ರನಾದ್ದರಿಂದ, ಅವನಲ್ಲಿ ಅಧಾರ ಶಬ್ದವಾಚ್ಯ ರೂಪಗಳು ೨೪೨. ಶರದೊಳಗೆ-ಪೈರುಗಳೊಳಗೆ. ನಾಲ್ವತ್ತೆರಡಧಿಕ ಶತರೂಪದಲಿ-೧೪೨ ರೂಪಗಳಿಂದ, ಶಶಿ ಒಳಗೆ ರೂಪಗಳು ಹೇಳಲಿಲ್ಲ. ಆದರೂ ಈ ಸಂಖ್ಯಾದಿಂದ ಶರದೊಳಗೆ ಎಂತ ಹೇಳಿ ದಿಕ್ಪ್ರದರ್ಶನದಿಂದ ದ್ವಿಶತ ನಾಲ್ವತ್ತೆರಡು ಆವರ್ತನ ಅವಶಿಷ್ಟ ಚಂದ್ರನಲ್ಲೇ ಎಂತ ಅರ್ಥಾತ್ ಸಿದ್ಧಿಯು ಪೈರುಗಳಲ್ಲಿ ಆಧೇಯ ರೂಪವು. ಆಧೇಯವು ಆಧಾರಾಧೀನವು. ಬಿಡದೆ-ಈ ಪ್ರಕಾರ ಪ್ರಳಯಕಾಲದವರೆಗೂ ಬಿಡದೆ, ಶೋಭಿಸುವ - ಪ್ರಕಾಶಮಾನನಾಗಿ ಇದ್ದಾನೆ. ಸರ್ವಪ್ರಾಣಿಗಳಿಗೆ ಜೀವನೋಪಾಯಕ್ಕೆ ಕಾರಣಗಳು ಪೈರು. ಅದ್ದರಿಂದ, ಚಂದ್ರನಲ್ಲಿ ಪೈರುಗಳಲ್ಲಿ ಆಧಾರ ಆಧೇಯ ರೂಪಗಳು ಆವರ್ತನವೂ ಕಾರ್ಯ ಭೇದದಿಂದ ಎಂತ ತಾತ್ಪರ್ಯ.

**ವಿಶೇಷಾರ್ಥ :-**

ಮಿಸುನಿಯ ಮೇಲಿನ ಮಣಿಯವೋಲ್ ಎಂದರೆ ಭಂಗಾರದಿಂದ ನಿರ್ಮಿತವಾದ ಉಂಗುರದ ಮ್ಯಾಲೆ ವಿದ್ಯಮಾನವಾದ ಮಣಿ ಎಂದರೆ, ರತ್ನದೋಪಾದಿಯಲ್ಲಿ. ಉಂಗುರ ಮೂರರಿಂದ ಯುಕ್ತವಾಗಿ ಇದೆ. (೧) ಉಂಗುರ. (೨) ಉಂಗುರದ ಗೂಡು, (೩) ಗೂಡಿನ ಮ್ಯಾಲಿರ ತಕ್ಕ ಮಣಿ. ಅಂತು ಮೂರು. ಗೂಡಿನ ಕೆಳಗೆ ಇರತಕ್ಕ ಉಂಗುರದ ಗೂಡಿಗೆ ಆಧಾರ ಎಂತಲೂ, ಗೂಡಿನ ಒಳಗೆ ಇರತಕ್ಕ ರತ್ನ ಗೂಡಿಗೆ ಆಧೇಯ ಎಂತಲೂ ಕರಿಸೋದಾಗತದೆ. ಇದರೋಪಾದಿಯಲಿ ಬ್ರಹ್ಮಾದಿಗಳ ಸ್ಥೂಲ ದೇಹಗಳೇ ಒಂದು ಉಂಗುರದ ಸಾಮ್ಯ. ತದ್ಗತ ಶ್ರೀ ಪರಮಾತ್ಮನೇ ಉಂಗುರಗತ ರತ್ನಕ್ಕೆ ಸಾಮ್ಯ. ಈ ಪರಮಾತ್ಮನು ಆಧಾರನೂ, ಆಧೇಯನೂ ಎರಡೂ ಆಗಿದ್ದಾನೆ, ಉಂಗುರದ ದೃಷ್ಟಾಂತದಿಂದ ಸಮನ್ವಯ ಮಾಡಿ ಹೇಳಬೇಕು, ಆದಿಯಲ್ಲಿ ಬ್ರಹ್ಮಾಂಡಕ್ಕೆ ಮೊದಲು ಹೇಳತಾರೆ.

(೧) ಬ್ರಹ್ಮಾಂಡದ ಹೊರಗೆ ಬ್ರಹ್ಮಾಂಡವನ್ನು ಹೊತ್ತುಕೊಂಡು ಇರತಕ್ಕ ಕೂರ್ಮರೂಪ. ಇದು ಉಂಗುರಕ್ಕೆ ಸದೃಶ. ಬ್ರಹ್ಮಾಂಡಕ್ಕೆ ಆಧಾರರೂಪ. (೨) ಬ್ರಹ್ಮಾಂಡವೇ ಉಂಗುರದ ಗೂಡು ಸದೃಶ. (೩) ಬ್ರಹ್ಮಾಂಡದ ಒಳಗೆ ಇರತಕ್ಕ ಕೂರ್ಮ ರೂಪ ಆಧೇಯ ರೂಪ ಗೂಡುಗತ ರತ್ನ ಸದೃಶ. ಈ ಪ್ರಕಾರ ಬ್ರಹ್ಮಾಂಡವನ್ನ ಆಧಾರ ಆಧೇಯ ರೂಪದಿಂದ ಧರಿಸಿದ್ದಾನೆ. ಬ್ರಹ್ಮಾದಿಜೀವರಲ್ಲಿ ಆಧಾರ ಆಧೇಯ ರೂಪಗಳು ಸ್ಥೂಲದೇಹಗತ ಆಧಾರರೂಪ. ಮನೋಗತ ರೂಪವೇ ಆಧೇಯರೂಪ, ಈ ಎರಡು ರೂಪಗಳಿಂದ ಮನಸ್ಸಿಗೆ ಆಧಾರ ಆಧೇಯನಾಗಿ ಇದ್ದಾನೆ ಎಂತ ತಿಳಿಯಬೇಕು. ಆಧೇಯ ಎಂದರೆ ಇನ್ನೊಂದು ಅರ್ಥ. ಪರಮಾತ್ಮನ ವ್ಯತಿರಿಕ್ತಮಾಡಿ, ಸರ್ವವೂ ಪರಮಾತ್ಮಗೆ ಆಧೇಯಗಳಾವೇ ಎಂತ ತಾತ್ಪರ್ಯ. ಶಶಿ ಎಂತಲೂ ಪಾಠವೇ. ಶಶಿ ಎಂದರೆ ಚಂದ್ರಗತ ಕಳಂಕ. ॥೧೩॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ:-

ಆಧಾರ, ಆಧೇಯ ರೂಪಗಳಿಂದ ಪರಮಾತ್ಮನ ವ್ಯಾಪ್ತಿಯನ್ನು ಹೇಳುತ್ತಾರೆ. ಪ್ರಕಾಶಮಾನವಾದ ಕುಂದಣದ ಮಧ್ಯದಲ್ಲಿ ಶೋಭಿಸುವ ಮಾಣಿಕ್ಯದಂತೆ ಆಧಾರ, ಆಧೇಯ ರೂಪಗಳಿಂದ ಬ್ರಹ್ಮಾದಿಗಳ ಮನಸ್ಸಿನಲ್ಲಿ ಶೋಭಿಸುವನು. ಚಿನ್ನ ಮಧ್ಯಗತ ಮಾಣಿಕ್ಯೋಪಮಾನದಿಂದ ಚಿನ್ನಪ್ರಾಯನಾಗಿ ಬ್ರಹ್ಮಾಂಡಕ್ಕೆ ಆಧಾರನಾಗಿರುವನು. ವಿಶ್ವರೂಪದಿಂದ ಮಾಣಿಕ್ಯದಂತೆ ಅದರೊಳಗೆ ಶೋಭಿಸುವನು. ಈ ರೂಪವನ್ನು ಬ್ರಹ್ಮಾದಿಗಳು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಅಪರೋಕ್ಷದಲ್ಲಿ ಕಾಣುತ್ತಿರುವರು, ಆಧಾರಾಧೇಯ ವಿಷಯದಲ್ಲಿ ಮತ್ತೊಂದು ಉಪಮಾನವನ್ನು ಹೇಳುತ್ತಾರೆ. ಚಂದ್ರನ ಆಧಾರದ ಮೇಲೆ ಆಧೇಯವಾಗಿ "ಶಶ" -ವೆಂಬ ಕಳಂಕವು ಶೋಭಿಸುವುದು, ಜನಗಳು ಅದನ್ನು ಜಿಂಕೆ ಎಂದು ಹೇಳುವರು. ಅದಕ್ಕೆ "ಶಶ" ವೆಂದು ಸಂಸ್ಕೃತದಲ್ಲಿ ಹೆಸರು. "ಶಶ"- ಎಂದರೆ ಮೊಲ. ಪ್ರಕೃತ ಚಂದ್ರನ ಕಳಂಕಕ್ಕೆ "ಶಶ"- ಎಂಬ ಹೆಸರು

ಬಂದಿರುವುದರಿಂದ, ಶಶ ವುಳ್ಳವನು "ಶಶಿ"-ಎಂದು ಚಂದ್ರನಿಗೆ ಹೆಸರಾಯಿತು. ಹೀಗೆ ಆಧಾರನಾಮಕನಾಗಿ ಅಕ್ಷರ ಕ್ರಮದಿಂದ, ಅ=೨, ಧಾ=೪, ರ=೨, ವಾಮಾಂಕ ಸಂಖ್ಯೆ=೨೪೨. ರೂಪಗಳಿಂದ, ಚಂದ್ರನಲ್ಲಿ ಮತ್ತು ಚಂದ್ರನ ಕಳಂಕಾದಿಗಳಲ್ಲಿ ಆಧಾರ ರೂಪನಾಗಿ ಬ್ರಹ್ಮಾಂಡದಲ್ಲಿ ಆಧೇಯನಾಮಕನಾಗಿ, ಆ=೨, ಧೇ=೪, ಯ=೧, ಇದರ ವಾಮಾಂಕ ಸಂಖ್ಯೆ ೧೪೨ ರೂಪಗಳಿಂದಲೂ, ಆಧೇಯ ರೂಪದಿಂದ ಲೋಕಗಳಲ್ಲಿಯೂ, ಇದರಂತೆಯೇ, ಯಾವ ವಸ್ತುವಿನ ಅಧಾರದ ಮೇಲೆ ಯಾವ ವಸ್ತು ಇರುವುದೋ, ಅವುಗಳಲ್ಲೆಲ್ಲಾ ಆಧಾರ, ಆಧೇಯ ರೂಪಗಳಿಂದ ಪರಮಾತ್ಮನು ಸರ್ವದಾ ಶೋಭಿಸುತ್ತಿರುವನೆಂದು ಚಿಂತನೆ ಮಾಡಬೇಕು. ॥೧೩॥

## (೩) "ಭಾವ ದರ್ಪಣ ಟೀಕಾ" – ವ್ಯಾಖ್ಯಾನ :-

"ಮಿಸುನಿ"—ಭಂಗಾರ ಎಂದರ್ಥ. ಶಶಿಯಲ್ಲಿ ಆಧಾರನಾಮಕ ರೂಪ ೨೪೨. "ಶಶ"—ಎಂದರೆ, ಚಂದ್ರಿಕಾ. ಇದರಲ್ಲಿ ಅಧೇಯ ನಾಮಕ ರೂಪ ೧೪೨. ಅಂತು ೩೮೪ ರೂಪಗಳೆಂದು ತಾತ್ಪರ್ಯ. ॥೧೩॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-

"ಮಿಸುಣಿ"–ಇತಿ॥ ಭಂಗಾರ । ಬಿಸಜಂ—ಪದ್ಮಂ ॥ ದ್ವಿಚತ್ವಾರಿಂಶದಧಿಕ ದ್ವಿಶತಂ ಶಶಿಗಃ ಪ್ರಭುಃ ॥ ದ್ವಿಚತ್ವಾರಿಂಶತಧಿಕ ಶಶಾತ್ಮಾ ಶಶ ಸಂಸ್ಥಿತಃ ॥೧೩॥

**ಕನ್ನಡಾರ್ಥ :–**

"ಮಿಸುಣಿ"–ಎಂಬ ಶಬ್ದಕ್ಕೆ "ಭಂಗಾರ"-ಎಂದರ್ಥ, ಶ್ರೀ ಪರಮಾತ್ಮನು ಚಂದ್ರನಲ್ಲಿ (ಶಶಿ) ೨೪೨ ರೂಪಗಳಿಂದ ಆಧಾರನಾಮಕನಾಗಿ

ದ್ದಾನೆ. ಚಂದ್ರನಲ್ಲಿರುವ ಮೊಲವೆಂಬ ಚಿಹ್ನೆಯನ್ನು (ಶಶಿ) ೧೪೨ ರೂಪಗಳಿಂದ ಆಧೇಯನಾಮಕನಾಗಿದ್ದಾನೆ. ॥೧೩॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ಆಧಾರಾಧೇಯ ರೂಪೋಪಾಸನೆ ತಿಳಿಸುತ್ತಾರೆ :-

ಬ್ರಹ್ಮಾದಿಗಳ ಮನಸ್ಸಿನಲ್ಲಿ ಹೊಳೆಯುವುದರಿಂದ "ಮಿಸುಣಿ"-ಎಂಬ ಹೆಸರುಳ್ಳ, ಚಿನ್ನದ ಮೇಲೆ ಕೆತ್ತಿದ ರತ್ನದ ಹಾಗೆ ಪ್ರಕಾಶಿಸುವ, ಬ್ರಹ್ಮಾಂಡಾಧಾರನಾದ ಶ್ರೀ ವಾಸುದೇವನೇ, ಉಕ್ತಬ್ರಹ್ಮಾದಿಗಳ ಮನಸ್ಸಿಗೆ ಆಧಾರವಾಗಿಯೂ, ಮನೋವೃತ್ತಿ ಅನುಸರಿಸಿ ಪ್ರೇರಿಸುವುದರಿಂದ ಮನಸ್ಸಾಶ್ರೈಸಿದವನೋಪಾದಿಯಲ್ಲಿ ಆಧೇಯನೆಂತಲೂ ಕರೆಸುವನು. ಶಶಿ ಎಂಬ ಚಂದ್ರಮಂಡಲಗತ ಆಧಾರ ರೂಪಗಳು ರ=೨, ಧಾ=೪ ಆ=೨, ಈ ರೀತಿ ೨೪೨. ಶಶಿ ಎಂಬ ಚಂದ್ರಗತ ಕಳಂಕ ಮೊಲದ ಹಾಗಿರುವುದರಲ್ಲಿ "ಆಧೇಯ"-ಎಂಬ, ಯ=೧, ಧೇ=೪, ಆ=೨, ಈ ರೀತಿ ೧೪೨ ರೂಪಗಳಿಂದಿರುವನೆಂದು ನಿರೂಪಿಸುತ್ತಾರೆ. ॥೧೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತ್ರವ್ಯಾಪ್ತನಾದ ಶ್ರೀಹರಿಯು **ಆಧಾರ ಆಧೇಯ** ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ. ೧೩ ನೆಯ ಈ ಪ್ರಸಕ್ತ ಪದದಿಂದ.

ಚರಾಚರಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಸಮಗ್ರ ವ್ಯಾಪ್ತನಾಗಿರುವ ಪರಮಾತ್ಮನ ರೂಪಗಳು ಎರಡು ಪ್ರಕಾರ :-

**(೧) ಆಧಾರ ರೂಪ ಮತ್ತು (೨) ಆಧೇಯ ರೂಪ.**

ಪೂರ್ವೋಕ್ತ ರೂಪೋಪಾಸನೆಯ ವಿಧಾನವನ್ನು ವಿವರಿಸುತ್ತಾ, ಪರಮಜ್ಞಾನಿ ಶ್ರೇಷ್ಠರಾದ ದಾಸರಾಯರು ಎರಡು ಸುಂದರವಾದ ದೃಷ್ಟಾಂತಗಳನ್ನು ಉದಹರಿಸಿರುತ್ತಾರೆ,

(೧) "ಮಿಸುನಿ"–ಎಂದರೆ "ಭಂಗಾರ"- ಎಂದರ್ಥ. ಚಿನ್ನದಿಂದ ಮಾಡಿದ ಒಡವೆಗಳ ಮೇಲೆ ಕೆತ್ತನೆಯ ಕೆಲಸ ಮಾಡಿರುತ್ತಾರೆ. ಕೆತ್ತಿರುವ ಗೂಡಿನಲ್ಲಿ ಪ್ರಕಾಶಮಾನವಾದ ರತ್ನದಂತಹ ಮಣಿಗಳನ್ನು ಅಳವಡಿಸಿರುತ್ತಾರೆ. ಈ ದೃಷ್ಟಾಂತದಲ್ಲಿ (೧) ಭಂಗಾರವು ಮಣಿಗೆ **ಆಧಾರವು.** (೨) ಅದರಲ್ಲಿ ಕೆತ್ತಿರುವ ಗೂಡು **ಸ್ಥಾನ ವಿಶೇಷವು.** (೩) ಕುಂದಣಗತ ರತ್ನದ **ಆಧೇಯವು.**

ಇದರಂತೆ, ಬ್ರಹ್ಮದೇವರಾದಿಯಾಗಿ ತೃಣಾಂತ ಮುಕ್ತಿಯೋಗ್ಯರಾದ ಸಾತ್ವಿಕ ಚೇತನರ ಮನಸ್ಸಿನಲ್ಲಿ ಪರಮಾತ್ಮನು **ವಿಷ್ಣು ಕೂರ್ಮ ರೂಪದಿಂದ** ಹೊತ್ತುಕೊಂಡು, ಈ ಬಿಸಜಜಾಂಡಕ್ಕೆ **ಆಧಾರ ರೂಪನಾಗಿದ್ದಾನೆ.**

ಈ ಅಕ್ಷರ ಸಾಂಕೇತ ಭಗವದ್ರೂಪಗಳ ವಿವರ :–

(೧) ಆ = ಸ್ವರಾಕ್ಷರ = ೨
ಧಾ = ತವರ್ಗ ಪಂಚಕ
ವ್ಯಂಜನಾಕ್ಷರ = ೪
ರ = ಅವರ್ಗೀಯ
ವ್ಯಂಜನಾಕ್ಷರ = ೨

ಅಕ್ಷರ ಜೋಡಣೆಯು ೨೪೨ ಆಗುವುದು. ವಾಮಾಂಕಗತಿಯಿಂದ **ಆಧಾರ** ಶಬ್ದವಾಚ್ಯ ಭಗವದ್ರೂಪಗಳ ಸಂಖ್ಯೆ=೨೪೨.

ಈ ಸಂಖ್ಯೆಯನ್ನು ದಾಸರಾಯರು "ದ್ವಿಶತ ನಾಲ್ವತ್ತೆರಡು" ರೂಪದಿ ಎಂದು ತಿಳಿಸಿದ್ದಾರೆ.

| | | | |
|---|---|---|---|
| ಅಂದರೆ, ದ್ವಿಶತ | = ೨ × ೧೦೦ | = | ೨೦೦ |
| ನಾಲ್ವತ್ತೆರಡು | | = | ೪೨ |
| ಒಟ್ಟು | | = | ೨೪೨ |

ಆಧಾರ ರೂಪವಾದ ಚಿನ್ನದ ಗೂಡಿನಲ್ಲಿ ಪ್ರಕಾಶಿಸುವ ಆಧೇಯವಾದ ರತ್ನದೋಪಾದಿಯಲ್ಲಿ, ಬ್ರಹ್ಮಾದಿಗಳ ಮನಸ್ಸಿನಲ್ಲಿ **ಆಧೇಯ ರೂಪನಾಗಿ** ದಿವ್ಯ ಪ್ರಕಾಶದಿಂದ ಬೆಳಗುತ್ತಿದ್ದಾನೆ.

**ಆಧೇಯ** ಶಬ್ದವಾಚ್ಯ ಶ್ರೀ ಪರಮಾತ್ಮನ ಅಕ್ಷರ ಸಾಂಕೇತ ಭಗವದ್ರೂಪಗಳ ಸಂಖ್ಯಾವಿವರ ಇಂತಿದೆ :-

| | | | | |
|---|---|---|---|---|
| (೧) | ಆ | = ಸ್ವರಾಕ್ಷರ | = | ೨ |
| (೨) | ಧೇ | ತ-ವರ್ಗ ಪಂಚಕ ವ್ಯಂಜನಾಕ್ಷರ | = | ೪ |
| (೩) | ಯ | = ಅವರ್ಗೀಯ ವ್ಯಂಜನಾಕ್ಷರ | = | ೧ |

ಅಲ್ಲಿಗೆ ಸಂಖ್ಯಾಕ್ರಮವು ೨೪೧ ಆಯಿತು. ವಾಮಾಂಕರೀತ್ಯಾ, **ಆಧೇಯ** ಶಬ್ದವಾಚ್ಯ ಭಗವದ್ರೂಪಗಳ ಸಂಖ್ಯೆ =೧೪೨.

| | | |
|---|---|---|
| ಈಗ **ಆಧಾರ** ಶಬ್ದವಾಚ್ಯ ಭಗವದ್ರೂಪಗಳು | = | ೨೪೨ |
| ಮತ್ತು **ಆಧೇಯ** ಶಬ್ದವಾಚ್ಯ ಭಗವದ್ರೂಪಗಳು | = | ೧೪೨ |
| **ಆಧಾರಾಧೇಯ** ಶಬ್ದವಾಚ್ಯ ಭಗವದ್ರೂಪಗಳು ಒಟ್ಟು | = | **೩೮೪** |

ಈ ಭಗವದ್ರೂಪಗಳ ವಿವರಣೆಯನ್ನು ಎರಡನೆಯ ದೃಷ್ಟಾಂತದಿಂದ ತಿಳಿಸುತ್ತಾರೆ.

"**ಶಶಿ**"–ಎಂದರೆ ಚಂದ್ರನೆಂದರ್ಥ. "**ಶಶ**"–ಎಂದರೆ, ಚಂದ್ರಮಂಡಲ ಗತ ಮೊಲದ ಆಕಾರದಲ್ಲಿರುವ ಚಿಹ್ನೆ (ಕಳಂಕ).

ಚಂದ್ರನಲ್ಲಿ **ಆಧಾರ** ನಾಮಕನಾಗಿಯೂ ಮತ್ತು ಚಂದ್ರಮಂಡಲಗತ ಶಶ ವೆಂಬ ಕಳಂಕದಲ್ಲಿ **ಆಧೇಯ** ರೂಪನಾಗಿಯೂ ಇದ್ದಾನೆ.

**ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ** "ಶಶ" ಎಂಬ ಶಬ್ದದ ಬದಲು "**ಶರ**" ಎಂದು ಪ್ರಯೋಗಿಸಿದ್ದಾರೆ. "ಶರ" ಶಬ್ದಾರ್ಥವು ಪೈರು ಎಂದು ಹೇಳಿರುತ್ತಾರೆ. ಚಂದ್ರನ ಕಿರಣಗಳು ಪೈರುಗಳ ಬೆಳವಣಿಗೆ ಮತ್ತು ರಸಪುಷ್ಟಿಗೆ ಆಧಾರವಾಗಿವೆ. ಶರ (ಪೈರು) ಆಧೇಯರೂಪವು.

ಆದರೆ ಶಶಿ ಮತ್ತು ಶಶಗಳಿಗೆ ಏಕಾಧಿಷ್ಠಾನದಲ್ಲಿ ಅನ್ಯೋನ್ಯ ಸಂಬಂಧ ವಿದೆ. (ವಿಶೇಷ ರೀತ್ಯಾ). ಇದರಿಂದ ಆಧಾರ ಆಧೇಯ ರೂಪಗಳನ್ನು ಚಿಂತಿಸುವುದು ಹೆಚ್ಚು ಸೂಕ್ತವಾಗಿದೆ. ॥೧೩॥

## ಪದ್ಯ (೧೪)

**ಮೂಲ :—**

**ಎರಡು ಸಾವಿರದೆಂಟು ರೂಪವ ।**
**ನರಿತು ಸರ್ವಪದಾರ್ಥದಲಿ ಸಿರಿ ।**
**ವರನ ಪೂಜೆಯ ಮಾಡು ವರಗಳ ಬೇಡು ಕೊಂಡಾಡು ॥**
**ಬರಿದೆ ಜಲದಲಿ ಮುಣುಗಿ ಬಿಸಿಲೊಳು ।**
**ಬೆರಳನೆಣಿಸಿದರೇನು ಸದ್ಗುರು ।**
**ಹಿರಿಯರನನುಸರಿಸಿರದೆ ಮರ್ಮವನರಿಯದಿಹ ನರನು ॥ ॥೧೪॥**

**ಅವತರಣಿಕೆ:—**

**"ಭಾರಭೃತ್"** ನಾಮಕನಾದ ಶ್ರೀಹರಿಯ ಅಕ್ಷರ ಸಾಂಕೇತ ಭಗವದ್ರೂಪಗಳು = ೧೬೨೪ (೧೩ ನೆಯ ಪದ್ಯದ ವಿವರಣೆ ನೋಡಿ) + **ಆಧಾರ** ಶಬ್ದವಾಚ್ಯ ಭಗವದ್ರೂಪಗಳು = ೨೪೨ + **ಅಧೇಯ** ಶಬ್ದವಾಚ್ಯ ಭಗವದ್ರೂಪಗಳು = ೧೪೨. ಇವುಗಳ ಒಟ್ಟು ಸಂಖ್ಯೆ = ೧೬೨೪+೨೪೨+೧೪೨=೨೦೦೮ (ಎರಡು ಸಾವಿರದ ಎಂಟು ರೂಪಗಳು) ಇಷ್ಟು ಅಖಂಡ ರೂಪಗಳಿಂದ ಬ್ರಹ್ಮಾಂಡಗತ ಸಮಸ್ತ ಚರಾಚರ ವಸ್ತುಗಳಲ್ಲಿ ಆಧಾರ ಆಧೇಯ ರೂಪಗಳಿಂದ ಭಾರಭೃನ್ನಾಮಕನಾಗಿ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದಾನೆ. ಈ ರೂಪಗಳನ್ನು ಜ್ಞಾನಾನುಸಂಧಾನದಿಂದ ತಿಳಿದು, ಸರ್ವತ್ರ ಆ ಸಿರಿರಮಣನ ರೂಪೋಪಾಸನೆ ಮಾಡುತ್ತಾ, ಅವನನ್ನು ಸಕಲ ಠಾವಿನಲಿ ಪೂಜಿಸುತ್ತಾ, ವರಗಳನ್ನು ಬೇಡುತ್ತಾ, ಹಿಗ್ಗುತ್ತಿರು ಎಂದು ತಿಳಿಸುತ್ತಾರೆ. ಈ ಉತ್ತಮ ಜ್ಞಾನಾನುಸಂಧಾನ ಮಾರ್ಗವನ್ನು ಬಿಟ್ಟು, ಸುಮ್ಮನೆ ಅನುಸಂಧಾನ ರಹಿತನಾಗಿ ಜಡ ನೀರಿನಲ್ಲಿ ಮುಳುಗಿ, ಬಿಸಿಲಿನಲ್ಲಿ ಒಣಗುತ್ತಾ, ಬೆರಳುಗಳನ್ನೆಣಿಸಿ, ಜಪಮಾಡಿ, ಒಣ ಜಡ ಕರ್ಮಗಳನ್ನು ಮಾಡಿದರೆ ಏನು ಫಲ ? ಎಂದು ಉದ್ಗಾರ ತೆಗೆದಿದ್ದಾರೆ ಜ್ಞಾನಮಣಿಗಳಾದ ದಾಸವರ್ಯರು. ಸದ್ಗುರುಗಳನ್ನು ಉಪಸತ್ತಿ ಮಾಡಿ, ಜ್ಞಾನಿಗಳಾದ ಹಿರಿಯರಿಗೆ ಎರಗಿ, ತನ್ಮೂಲಕ ತತ್ವಾರ್ಥಗಳ ರಹಸ್ಯವನ್ನು ತಿಳಿಯದ ಮಾನವರು ಮಾಡುವ ಜ್ಞಾನಾನುಸಂಧಾನರಹಿತವಾದ ಒಣ ಹಾಗೂ ಜಡ ಕರ್ಮಗಳಿಂದ ಪ್ರಯೋಜನವೇನೂ ಇಲ್ಲವೆಂದು ತಿಳಿಸುತ್ತಾರೆ. **"ಎರಡು ಸಾವಿರದೆಂಟು ರೂಪವ"**–ಎಂಬ ಪ್ರಸಕ್ತ ಸಂಧಿಗತ ಈ ೧೪ ನೆಯ ಪದ್ಯದಿಂದ ॥೧೪॥

**ಪ್ರತಿಪಧಾರ್ಥ :—**

**ಸರ್ವಪದಾರ್ಥಗಳಲಿ** = ಚರಾಚರಾತ್ಮಕವಾದ ಸಮಸ್ತ ವಸ್ತುಗಳಲ್ಲಿ, **ಎರಡು ಸಾವಿರದೆಂಟು ರೂಪವನರಿತು** = ೨೦೦೮ ಸಂಖ್ಯಾಕವಾದ ಅಕ್ಷರ ಸಾಂಕೇತ ಭಗವದ್ರೂಪಗಳನ್ನು ಜ್ಞಾನಾನುಸಂಧಾನದಿಂದ ತಿಳಿದು, (ಭಾರ

ಭೃತ್ ನಾಮಕ ೧೬೨೪+ಆಧಾರನಾಮಕ—೨೪೨+ಆಧೇಯನಾಮಕ— ೧೪೨=೨೦೦೮ ಭಗವದ್ರೂಪಗಳು) **ಸಿರಿವರನ** = ಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನ **ಪೂಜೆಯ ಮಾಡು**=ಸರ್ವವಸ್ತುಗತ ಭಗವದ್ರೂಪ ಗಳಿಗೂ ನಿನ್ನ ಬಿಂಬರೂಪಕ್ಕೂ ಐಕ್ಯ ಚಿಂತನಾ ಕ್ರಮದಿಂದ ಪೂಜೆಯನ್ನು ಮಾಡು, **ವರಗಳ ಬೇಡು**=ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀ ಸಂಪತ್ಸ್ವರೂಪವಾದ ಇಷ್ಟಾರ್ಥಗಳನ್ನು ಪ್ರಾರ್ಥಿಸು. **ಕೊಂಡಾಡು**= ಪೂರ್ವೋಕ್ತ ಭಗವದ್ರೂಪೋಪಾಸನೆ ದ್ವಾರಾ ಪರಮಾತ್ಮನ ಮಹಿಮಾತಿ ಶಯಗಳನ್ನು ಸ್ತೋತ್ರಮಾಡು. **ಬರಿದೆ**=ಇಂತಹ ಜ್ಞಾನಾನುಸಂಧಾನ ಕ್ರಮವನ್ನು ಬಿಟ್ಟು ಸುಮ್ಮನೆ ಯಾಂತ್ರಿಕವಾಗಿ, **ಜಲದಲಿ ಮುಳುಗಿ**= ಕಂಡ ಕಂಡ ತೀರ್ಥದಲ್ಲಿ ಮುಳುಗಿ, ಈ ಜಡ ದೇಹವನ್ನು ತೋಯಿಸಿ. (ಕಾಗೆ, ಕಪ್ಪೆ, ಮೀನುಗಳಂತೆ) **ಬಿಸಿಲೊಳು**=ಬಿಸಿಲಿನ ತಾಪದಲಿ ಕುಳಿತು ಕೊಂಡು, **ಬೆರಳೆಣಿಸಿದರೇನು**=ಬೆರಳುಗಳನ್ನು ಎಣಿಸುತ್ತಾ ಜಪಮಾಡಿದರೆ ಏನೂ ಫಲವಾಗುವುದಿಲ್ಲವೆಂದು ತಾತ್ಪರ್ಯ. **ಸದ್ಗುರು**=ವಾಯುಮತಾವ ಲಂಬಿಗಳಾದ ಜ್ಞಾನಸಂಪನ್ನರಾದ ಗುರುಗಳನ್ನು **ಹಿರಿಯರನು** = ಸ್ತೋತ್ತಮರಾದರವರನ್ನು **ಅನುಸರಿಸದೆ**=ಅಂತಹ ಗುರುಹಿರಿಯರನ್ನು ಅನು ಸರಿಸಿ, ಉಪಸತ್ತಿಮಾಡಿ, ಅವರಿಂದ ಉಪದೇಶ ರೂಪವಾದ ಅನುಗ್ರಹ ವನ್ನು ಪಡೆಯದೆ, **ಮರ್ಮವನರಿಯದ**=ತತ್ತ್ವ ರಹಸ್ಯಗಳನ್ನು ತಿಳಿಯದ **ನರನು**=ಮಾನವನು ಬರಿದೆ ಜಡ ಕರ್ಮಗಳ ಮಾಡಿ ಫಲವಿಲ್ಲೆಂದು ತಾತ್ಪರ್ಯ. ಸದಾಚಾರ ಮತ್ತು ಸತ್ಕರ್ಮಗಳು ಜ್ಞಾನಕ್ಕೆ ಸಾಧನವಾಗ ಬೇಕೇ ಹೊರತು, ಅದೇ ತಾರಕವಲ್ಲ. ॥೧೪॥

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಜ್ಞಾನಶೂನ್ಯನಾಗಿ ಮಾಡಿದ ಕರ್ಮ ಪರಲೋಕ ಸಾಧನಿಗೆ ಕಾರಣ ವಾಗೋದಿಲ್ಲ ಎಂತ ಹೇಳತಾರೆ.

ಎರಡು ಸಾವಿರದೆಂಟು ರೂಪವನರಿತು–೨೦೦೮ ರೂಪಗಳ ತಿಳಿದು (೧೨ ನೇ ಶ್ಲೋಕದಲ್ಲಿ ಹೇಳಿದ ಭಗವದ್ರೂಪಗಳು–೧೬೨೪. ೧೩ ನೇ ಶ್ಲೋಕಗತ ಭಗವದ್ರೂಪಗಳು ೩೮೪. ಅಂತು, ೨೦೦೮.. ಆಧಾರ ರೂಪ ಗಳು–೨೪೨. ಆಧೇಯ ರೂಪಗಳು–೧೪೨) ಈ ಪ್ರಕಾರ ಆವರ್ತನಾಗಿ ಸರ್ವ ಪದಾರ್ಥದಲಿ–ಚರಾಚರ ಸರ್ವ ಪದಾರ್ಥದಲ್ಲಿ, ಸಿರಿವರನ–ಲಕ್ಷ್ಮೀ ಪತಿ ನಾರಾಯಣನ ರೂಪಗಳ ಅನುಸಂಧಾನ ಮಾಡಿ, ಪೂಜೆಯ ಮಾಡು– ನಿನ್ನ ಬಿಂಬನ್ನ ಸರ್ವತ್ರ ಐಕ್ಯ ಚಿಂತನಮಾಡಿ, ಪರಸ್ಪರ ಭಗವದ್ರೂಪಗಳಿಗೆ ಅಭೇದ ಎಂತ ಅನುಸಂಧಾನ ಮಾಡಿ, ಭಗವದ್ರೂಪಗಳಿಂದ ಭಗವದ್ರೂಪ ಗಳಿಗೆ ಐಕ್ಯ ಚಿಂತನ ರೂಪವಾದ ಪೂಜೆಮಾಡು, ವರಗಳ ಬೇಡು–ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ವರಗಳ ಬೇಡು. ಕೊಂಡಾಡು–ಪರಮಾತ್ಮನ ಸ್ತೋತ್ರ ಮಾಡು. ಜಲದಲಿ ಮುಣುಗಿ–ಕಾಗೆ, ಕಪ್ಪೆಗಳಂತೆ ಜಲದಲ್ಲಿ ಮುಣುಗಿ, ಬೆರಳನೆಣಿಸಿದರೇನು–ಬೊಟ್ಟುಗಳ ಎಣಿಸುತ ಜಪಮಾಡಿದರೆ ಅದರಿಂದ ಆಗತಕ್ಕ ಫಲ ಏನು ಎಂದರೆ, ಬರಿದೆ–ಶುದ್ಧವಾಗಿ ಫಲವಾಗೋ ದಿಲ್ಲ ಎಂತ ತಾತ್ಪರ್ಯ. ಸದ್ಗುರು ಹಿರಿಯನನುಸರಿಸಿ ಹಿರಿಯ–ಜೀವೋ ತ್ತಮರಾದ ವಾಯುದೇವರ ಪಾದಾವಲಂಬಿಗಳಾದ, ಅನುಸಂಧಾನ ಮರ್ಮವ ತಿಳಿದು, ಸದ್ಗುರು–ನಿಸ್ಪೃಹರಾದ ಗುರುಗಳ ಆಶ್ರಯಮಾಡಿ, ಇರದೆ– ಅವರ ಸೇವಾ ಮಾಡಿ, ಅವರ ಅನುಗ್ರಹ ಸಂಪಾದಿಸಿ, ಉಪದೇಶವಾಗೋ ವರೆವಿಗೂ ಇರದೇ ಇರೋಣದರಿಂದ, ಮರ್ಮವನರಿಯದಿಹನ ನರನು– ಅಧ್ಯಾತ್ಮ ಮರ್ಮಗಳ ಅಧಿಕಾರಿಯಾದವ ತಿಳಿಯದೇ ಇರತಾನೆ. ಆದ್ದ ರಿಂದ ಗುರುಸೇವಾ ಮಾಡಿ ಅಧ್ಯಾತ್ಮ ಮರ್ಮಗಳ ತಿಳಿಯೋವನಾಗಬೇಕು ಎಂತ ತಾತ್ಪರ್ಯ ॥೧೪॥

## (೨) "ಭಾವಪ್ರಕಾಶಿಕೆ" — ವ್ಯಾಖ್ಯಾನ :—

ಮೇಲಿನ ಎರಡು ಪದ್ಯಗಳಲ್ಲಿ ಹೇಳಿದ ಒಟ್ಟು ಭಗವದ್ರೂಪಗಳನ್ನು ಹೇಳುತ್ತಾ, ಸದ್ಗುರುವಿನ ಉಪದೇಶವಿಲ್ಲದವರಿಗೆ ಈ ಉಪಾಸನೆಯು ಗೋಚರವಿಲ್ಲವೆಂದೂ ಹೇಳುತ್ತಾರೆ.

೧೨ ನೆಯ ಪದ್ಯದಲ್ಲಿ ಹೇಳಿದ **"ಭಾರಭೃತ್"** ರೂಪಗಳ ಸಂಖ್ಯಾ = ೧೬೨೪. **ಆಧಾರ** ರೂಪಗಳು = ೨೪೨. **ಆಧೇಯ** ರೂಪಗಳು—೧೪೨. ಒಟ್ಟು ರೂಪಗಳ ಸಂಖ್ಯೆ ೨೦೦೮. ಇಷ್ಟು ಭಗವದ್ರೂಪಗಳನ್ನು ಸರ್ವ ಪದಾರ್ಥಗಳಲ್ಲಿ ತಿಳಿದು, ಲಕ್ಷ್ಮೀಪತಿಯನ್ನು ಯಾರು ಪೂಜಿಸುವರೋ ಅವರು ಧನ್ಯರು. ಮಾನ್ಯರು. ಅವರನ್ನು ಪ್ರಾರ್ಥಿಸಿ, ಮರ್ಮವನ್ನು ತಿಳಿದು ಕೊಳ್ಳಬೇಕು. ಅವರನ್ನು ಸ್ತುತಿಸಬೇಕು. ಸದ್ಗುರುಗಳ ಸೇವಾಮಾಡಿ, ಅವರ ಉಪದೇಶದಿಂದ ಈ ಮರ್ಮಗಳನ್ನು ಅರಿಯದೆ ಇರುವ ಮನುಷ್ಯನು ದೊಡ್ಡ ಆಚಾರ್ಯನೆಂಬ ವೇಷಧಾರಿಯಾಗಿ, ಚಳಿಯಲ್ಲಿ ಹೋಗಿ ಹೊಳೆ ಯಲ್ಲಿ ಮುಳುಗಿ, ಬಿಸಿಲಿನಲ್ಲಿ ಕೂತು, ಕಣ್ಣು ಮುಚ್ಚುತ್ತಾ ತೆರೆಯುತ್ತಾ ಬೆರಳೆಣಿಸಿದರೆ, ಫಲವೇನು ? ಯಾವ ಪ್ರಯೋಜನವೂ ಇಲ್ಲವು. ||೧೪||

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

ಈ ಉಭಯ ಪದ್ಯದಲ್ಲಿ ಉಕ್ತವಾದದ್ದು ಅಹತ್ಯರೂಪಗಳು ೨೦೦೮ ಎರಡುಸಾವಿರದ ಎಂಟು ರೂಪಗಳು ಸರ್ವ ಪದಾರ್ಥದಿ ತಿಳಿದು ಪೂಜೆಮಾಡು ಎಂಬರ್ಥ. ಕಿಂಚ ವಿಶ್ವಾದ್ಯಂಟು ರೂಪಗಳನ್ನು ಸರ್ವಪದಾರ್ಥದಿ ತಿಳಿದು, ಉಪಾಸನೆ ಮಾಡತಕ್ಕ ಪುರುಷಗೆ ಸಾವು ಇರದು. ಅಂದರೆ. ಕಾಲಮೃತ್ಯು, ಅಕಾಲಮೃತ್ಯು ಕೂಡಾ ಇರದು ಎಂಬ ತಾತ್ಪರ್ಯ. ಮುಕ್ತನಾಗತ್ತಾನೆಂದು ಫಲಿತಾರ್ಥ ||೧೪||

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-

"ಎರಡು" ಇತಿ || ಮಿಲಿತ್ವಾ ದ್ವಿ ಸಹಸ್ರಂ ರೂಪಾಷ್ಟಕ ಮನ್ವೈಹಿ ಭೋ ! || ಬರಿದೆ-ಸುಮ್ಮನೆ. ಮರ್ಮ-ರಹಸ್ಯ ||೧೪||

## ಕನ್ನಡಾರ್ಥ :-

"ಭಾರಭೃತ್", "ಆಧಾರಾಧೇಯ" ರೂಪಗಳನ್ನು ಒಟ್ಟಿಗೆ ಸಮ್ಮೇ ಳನ ಮಾಡಿ, ಲೆಕ್ಕ ಮಾಡಿದಾಗ ಬ್ರಹ್ಮಾಂಡಾಂತರ್ಗತ ಸಮಸ್ತ ವಸ್ತುಗಳಲ್ಲಿ

೨೦೦೮ ರೂವಗಳಾಗುವುವು. ಈ ರೂಪಗಳನ್ನು ಜಾನ್ಯಾನುಸಂಧಾನದಿಂದ ತಿಳಿದು ರೂಪೋಪಾಸನೆ ಮಾಡಬೇಕು–ಎಂದು ಪ್ರಮಾಣ ವಚನಗಳ ತಾತ್ಪರ್ಯ ॥೧೪॥

## (೫) "ಗುರುಹೃದಯ ಪ್ರಕಾಶಿಕೆ"– ವ್ಯಾಖ್ಯಾನ :–

ಸರ್ವಪದಾರ್ಥಗತ ಸಂಖ್ಯಾರೂಪ, ಒಟ್ಟು ತಿಳಿಸಿ, ಗುರು ಉಪದೇಶದಿಂದ ಶಾಸ್ತ್ರಾರ್ಥಗಳ ಮರ್ಮವೆಂಬ ರಹಸ್ಯಗಳನ್ನು ತಿಳಿಯದವರು, ಬರಿದೆ ಅಂದರೆ ಮಂತ್ರಾರ್ಥಗಳನ್ನು ತಿಳಿಯದೆ ಸುಮ್ಮನೆ ನೀರಿನಲ್ಲಿ ಮುಳುಗಿ, ಅಂದರೆ ಸ್ನಾನ ಮಾಡಿ, ಬಿಸಿಲಿನಲ್ಲಿ ಕುಳಿತು, ಜಪವೆಂದು ಬೆರಳು ಮಾತ್ರ ಎಣಿಸಿದರೆ ಏನು ? ಅಂದರೆ. ಅಲ್ಪ ಪ್ರಯೋಜನವೇ ಹೊರತು ಮಹಾ ಫಲವಿಲ್ಲದ್ದರಿಂದ, ಸರ್ವತ್ರದಲ್ಲಿರುವ ಭಾರಭೃತ್‌ನಾಮಕ – ತ್–೧, ಭೃ–೬, ರ–೨, ಭಾ–೪. ಈ ರೀತಿ ೧೬೨೪ ರೂಪಗಳನ್ನು, ಆಧಾರ ಎಂಬ ನಾಮದಲ್ಲಿ ೨೪೨ ರೂಪಗಳೂ, ಆಧೇಯ ಎಂಬ ಹೆಸರಿನಲ್ಲಿ ೧೪೨ ರೂಪಗಳೂ ಒಟ್ಟು ಸೇರಿದರೆ ಆಗುವ ೨೦೦೮ ದೇವರ ರೂಪಗಳನ್ನು ಉಕ್ತ ಸರ್ವ ಪದಾರ್ಥಗಳಲ್ಲೂ ತಿಳಿದು, ಸಿರಿವರನೆಂಬ ಲಕ್ಷ್ಮೀಪತಿಯನ್ನು, ಸಾಧು ಉಪದೇಶಕ ಗುರುಗಳು, ಜ್ಞಾನವೃದ್ಧ ಹಿರಿಯರು ಇವರುಗಳನ್ನು ಅನುಸರಿಸಿ, ಮನಸಾ ಪೂಜಿಸಿ, ಜ್ಞಾನ ಭಕ್ತ್ಯಾದಿ ವರಗಳನ್ನು ಅಪೇಕ್ಷಿಸಿ ಸ್ತುತಿಸು. ॥೧೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯಗಳಲ್ಲಿ ವಿವರಿಸುವ ಭಗವದ್ರೂಪಗಳ ಒಟ್ಟು ಸಂಖ್ಯೆ ಹಾಗೂ ಸರ್ವ ವಸ್ತುಗತ ಭಗವದ್ರೂಪಗಳ ಅಖಂಡ ಉಪಾಸನಾ ಕ್ರಮವನ್ನು ತಿಳಿಸುತ್ತಾರೆ–ಪ್ರಸಕ್ತ ೧೪ ನೆಯ ಈ ಪದ್ಯದಿಂದ.

(೧) ಸರ್ವ ಜಗತ್ತಿನ ಯೋಗಕ್ಷೇಮ ಭಾರವನ್ನು ಹೊತ್ತಿರುವ ಶ್ರೀ ಪರಮಾತ್ಮನಿಗೆ **"ಭಾರಭೃತ್"**–ಎಂದು ಹೆಸರು.

ಭಾರಭೃನ್ನಾಮಕನಾದ ಶ್ರೀ ಪರಮಾತ್ಮನ ಅಕ್ಷರ ಸಾಂಕೇತ ಭಗವದ್ರೂಪಗಳ ವಿವರ ಇಂತಿದೆ.

(1) ಭಾ = ಪ-ವರ್ಗ ಪಂಚಕ-ವ್ಯಂಜನಾಕ್ಷರ = ೪
(2) ರ = ಅವರ್ಗೀಯ ವ್ಯಂಜನಾಕ್ಷರ = ೨
(3) ಭೃ = ಭ+ರ ೪+೨ = ೬
(4) ತ್ = ತ-ವರ್ಗ ಪಂಚಕ-ವ್ಯಂಜನಾಕ್ಷರ = ೧

ವಾಮಾಂಕ ಗತಿಯಿಂದ **ಭಾರಭೃತ್** ಶಬ್ದವಾಚ್ಯ ರೂಪಗಳು = ೧೬೨೪

(೨) "**ಆಧಾರ**"-ಶಬ್ದವಾಚ್ಯ ಅಕ್ಷರ ಸಾಂಕೇತ ಭಗವದ್ರೂಪಗಳ ವಿವರ.

(1) ಆ = ಸ್ವರಾಕ್ಷರ = ೨
(2) ಧಾ = ತ-ವರ್ಗ ಪಂಚಕ-ವ್ಯಂಜನಾಕ್ಷರ = ೪
(3) ರ = ಅವರ್ಗೀಯ ವ್ಯಂಜನಾಕ್ಷರ = ೨

ವಾಮಾಂಕ ರೀತ್ಯಾ **ಆಧಾರ** ಶಬ್ದವಾಚ್ಯ ರೂಪಗಳು = ೨೪೨.

(೩) "**ಆಧೇಯ**" ಶಬ್ದವಾಚ್ಯ ಅಕ್ಷರ ಸಾಂಕೆತ ಭಗವದ್ರೂಪಗಳ ವಿವರ.

(1) ಆ = ಸ್ವರಾಕ್ಷರ = ೨
(2) ಧೇ = ತ-ವರ್ಗ ಪಂಚಕ-ವ್ಯಂಜನಾಕ್ಷರ = ೪
(3) ಯ = ಅವರ್ಗೀಯ ವ್ಯಂಜನಾಕ್ಷರ = ೧

ವಾಮಾಂಕ ಗತಿಯಿಂದ **ಆಧೇಯ** ಶಬ್ದವಾಚ್ಯ ಭಗವದ್ರೂಪಗಳು = ೧೪೨

(೪) ಅಂತು. **ಭಾರಭೃತ್** ಶಬ್ದವಾಚ್ಯ ಭಗವದ್ರೂಪಗಳು = ೧೬೨೪
**ಆಧಾರ** ಶಬ್ದವಾಚ್ಯ ಭಗವದ್ರೂಪಗಳು = ೨೪೨
**ಆಧೇಯ** ಶಬ್ದವಾಚ್ಯ ಭಗವದ್ರೂಪಗಳು = ೧೪೨

---

**ಒಟ್ಟು ಭಗವದ್ರೂಪಗಳ ಸಂಖ್ಯೆ = ೨೦೦೮**

---

ಅಂದರೆ ಎರಡು ಸಾವಿರದ ಎಂಟು ಭಗವದ್ರೂಪಗಳಾವುವು. ಇಷ್ಟು ಅಖಂಡ ಭಗವದ್ರೂಪಗಳನ್ನು ಚರಾಚರಾತ್ಮಕವಾದ ಈ ಬ್ರಹ್ಮಾಂಡಾಂತರ್ಗತ ಸಮಸ್ತ ಪದಾರ್ಥಗಳಲ್ಲಿ ಜ್ಞಾನಾನುಸಂಧಾನದಿಂದ ತಿಳಿಯಬೇಕು, ಆ ಅನುಸಂಧಾನ ಕ್ರಮದಿಂದ ರೂಪೋಪಾಸನೆ ಮಾಡುತ್ತಾ, ಜಗದ್ವಿಲಕ್ಷಣನಾದ ಆ ಪರಮಾತ್ಮನನ್ನು ಪೂಜೆಮಾಡಬೇಕು. ಸಮಸ್ತ ವಸ್ತುಗತ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಲಯ ಹೊಂದಿಸಿ, ಐಕ್ಯಚಿಂತನಾ ಕ್ರಮದಿಂದ ಪೂಜಿಸಬೇಕು. ಭಗವದನುಗ್ರಹಕ್ಕೆ ಕಾರಣ ಸಾಮಗ್ರಿಗಳಾದ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ವರಗಳನ್ನು ಬೇಡಬೇಕು. ಬಿಂಬಕ್ರಿಯಾ ದ್ವಾರಾ ಈ ಜಗತ್ತಿನ ಸಮಸ್ತ ವ್ಯಾಪಾರವಿಶೇಷಗಳನ್ನು ತಾನೇ ತಾನಾಗಿ ಸರ್ವತಂತ್ರ ಸ್ವತಂತ್ರನಾಗಿ ನಿರ್ವಹಿಸುತ್ತಿರುವ ಆ ಪರಮನ ಮಹಿಮಾತಿಶಯಗಳನ್ನು ಸ್ತೋತ್ರ ಮಾಡುತ್ತಾ ಕೊಂಡಾಡುತ್ತಿರಬೇಕು.

ಸದಾಚಾರ ಅಥವಾ ಸತ್ಕರ್ಮವು ಭಗವತ್ಸಂಬಂದವಾದ ಜ್ಞಾನಕ್ಕೆ ಸಾಧನ. ಜ್ಞಾನವು ಭಕ್ತಿಗೆ ಸಾಧನ. ಭಕ್ತಿಯು ವೈರಾಗ್ಯಕ್ಕೆ ಸಾಧನ ಸತ್ಕರ್ಮ, ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳು ಭಗವತ್ಪ್ರಸಾರಕ್ಕೆ ಕಾರಣ. ಭಗವದನುಗ್ರಹವು ಪರಮ ಪುರುಷಾರ್ಥ ರೂಪವಾದ ಸ್ವರೂಪಾನಂದಾವಿರ್ಭಾವಕ್ಕೆ ಕಾರಣ. ನಾವು ಮಾಡುವ ಕರ್ಮಗಳೆಲ್ಲವೂ ಹಂತ ಹಂತವಾಗಿ ಭಗವದನುಗ್ರಹಕ್ಕೆ ಕಾರಣಭೂತವಾದ ಸಾಧನವಾಗಬೇಕೇ ಹೊರತು, ಜ್ಞಾನರಹಿತನಾಗಿ ಕೇವಲ ಜಡಕರ್ಮನಿರತನಾಗಿ, ಕಾಗೆ ಗುಬ್ಬಿಗಳಂತೆ ನೀರಿನಲ್ಲಿ ಮುಳುಗಿ, ಬಿಸಿಲಿನಲ್ಲಿ ಕೂತು, ಬೆರಳೆಣಿಸುತ್ತಾ ಜಪಗಳನ್ನು ಮಾಡಿದರೆ ಬಂದ ಫಲವೇನು ? ಅವೆಲ್ಲವೂ ನಿಷ್ಪ್ರಯೋಜಕವೇ ಸರಿ. ಸ್ವೋತ್ತಮರಾದ ಜ್ಞಾನಿಗಳ ದ್ವಾರಾ ಗುರೂಪಸತ್ತಿ ಮಾಡುತ್ತ. ಗುರುಹಿರಿಯರಿಂದ ಶಾಸ್ತ್ರಾರ್ಥಗಳ ಮರ್ಮವನ್ನು ತಿಳಿದು, ಆ ತತ್ತ್ವ ರಹಸ್ಯಗಳನ್ನು ತನ್ನ ನಿತ್ಯಾನುಷ್ಠಾನದಲ್ಲಿ ಅಳವಡಿಸಿಕೊಂಡು, ಜ್ಞಾನಾನುಸಂಧಾನ ಯುಕ್ತವಾಗಿ, ಧ್ಯಾನೋಪಾಸನೆ ಮಾಡಿದವನಿಗೆ ಮಾತ್ರ ಶ್ರೀ ಹರಿಯು ಪ್ರಸನ್ನನಾಗುವನು ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು. ॥೧೪॥

## ಪದ್ಯ (೧೫)

**ಮೂಲ :-**

**ಮತ್ತೆ ಚಿದ್ದೇಹದ ಒಳಗೆ ಎಂ ।**
**ಭತ್ತು ಸಾವಿರದೇಳು ನೂರಿ ।**
**ಪ್ಪತ್ತೆ ಐದು ನೃಸಿಂಹ ರೂಪದಲಿದ್ದು ಜೀವರಿಗೆ ॥**
**ನಿತ್ಯದಲಿ ಹಗಲಿರುಳು ಬಪ್ಪಪ ।**
**ಮೃತ್ಯುವಿಗೆ ತಾ ಮೃತ್ಯುವೆನಿಸುವ ।**
**ಭೃತ್ಯವತ್ಸಲ ಭಯವಿನಾಶನ ಭಾಗ್ಯಸಂಪನ್ನ ॥೧೫॥**

**ಅವತರಣಿಕೆ :—**

ಕ್ಷಕಾರ ವರ್ಣವಾಚ್ಯನಾದ ಶ್ರೀ ಲಕ್ಷ್ಮೀನರಸಿಂಹ ದೇವರ ಅಕ್ಷರ ಸಾಂಕೇತ ಭಗವದ್ರೂಪಗಳು ಮತ್ತು ಅಪಮೃತ್ಯು ಪರಿಹಾರತ್ವ ಮಹಿಮಾತಿಶಯವನ್ನು ತಿಳಿಸುತ್ತಾರೆ ಪ್ರಸಕ್ತ ಸಂಧಿಗತ ೧೫ ನೆಯ ಈ ಪದ್ಯದಿಂದ.

ಸಂಸ್ಕೃತ ವರ್ಣಮಾಲಿಕೆಯಲ್ಲಿ ಕೊನೆಯ ಅಕ್ಷರವು (೫೧ ನೆಯ ವರ್ಣ) **"ಕ್ಷ" ಮಾತೃಕಾನ್ಯಾಸ** ರೀತ್ಯಾ **"ಕ್ಷಂ" – ಲಕ್ಷ್ಮೀನರಸಿಂಹಾಯನಮಃ** ಎಂತಿರುವುದರಿಂದ ಜೀವಾಂತರ್ಗತ ರೂಪವು ಶ್ರೀ ಲಕ್ಷ್ಮೀನರಸಿಂಹ ರೂಪವಾಗಿರುವುದು. **"ನರಸಿಂಹ"** (ನ=೫, ರ=೨, ಸಿ=೭, ಂ=೦, ಹ=೮. ವಾಮಾಂಕ ಕ್ರಮದಿಂದ ೮೦೭೨೫) ಶಬ್ದವಾಚ್ಯ ಅಕ್ಷರ ಸಾಂಕೇತ ಭಗವದ್ರೂಪಗಳು ಎಂಭತ್ತು ಸಾವಿರದ ಏಳುನೂರಿಪ್ಪತ್ತೈದು ರೂಪಗಳು. ಇಷ್ಟು ರೂಪಗಳಿಂದ ಜೀವರ ಸ್ವರೂಪ ದೇಹದಲ್ಲಿದ್ದು

(ಚಿದ್ದೇಹದ ಒಳಗೆ) ಪ್ರತಿನಿತ್ಯವು ಜೀವರಿಗೆ ಬರುತ್ತಿರುವ ದುರಿತಗಳನ್ನು ಪರಿಹರಿಸುವನು. ಇಂತಹ ದುರಿತ ಪರಿಹಾರಕವಾದ "ಕ್ಷಂ" ವರ್ಣ ಪ್ರತಿಪಾದ್ಯನಾದ ಶ್ರೀ ಲಕ್ಷ್ಮೀನರಸಿಂಹ ದೇವರು ಮೃತ್ಯುವಿಗೆ ಮೃತ್ಯುವೆಂದೆನಿಸಿ, ಜ್ವರಹರನಾಗಿದ್ದು, ಜೀವರಿಗೆ ಬರುತ್ತಿರುವ ಸಮಸ್ತಭಯವಿನಾಶಕನಾಗಿದ್ದು, ಶರಣಾಗತವತ್ಸಲನೆಂದೆನಿಸಿದ್ದಾನೆ, ಆ ಭಾಗ್ಯನಿಧಿ ! ॥೧೫॥

**ಪ್ರತಿಪದಾರ್ಥ** —

**ಮತ್ತೆ** = ಪೂರ್ವದಲ್ಲಿ ಹೇಳಿದ್ದಲ್ಲದೆ. ಪುನಃ **ಚಿದ್ದೇಹದೊಳಗೆ** = ಜೀವನ ಸ್ವರೂಪ = ದೇಹದಲ್ಲಿ **ಎಂಭತ್ತು ಸಾವಿರದ ಏಳನೂರ ಇಪ್ಪತ್ತೈದು** = ೮೦,೭೨೫ ಸಂಖ್ಯಾಕವಾದ **ನೃಸಿಂಹ ರೂಪದೊಳಿದ್ದು** "ನರಸಿಂಹ" ಶಬ್ದವಾಚ್ಯನಾಗಿ ತದ್ರೂಪನಾಗಿ ವಿದ್ಯಮಾನನಾಗಿದ್ದು (ನ = ೩, ರ = ೨, ಸಿ = ೭, ಂ = ೦, ಹ = ೮. ವಾಮಾಂಕದಿಂದ **೮೦.೭೨೫** ರೂಪಗಳಾಗುವುವು) **ಜೀವರಿಗೆ** = ಚೇತನರಿಗೆ **ನಿತ್ಯದಲಿ** = ಪ್ರತಿದಿವಸದಲ್ಲೂ **ಹಗಲಿರುಳು** = ಹಗಲು ಮತ್ತು ರಾತ್ರಿ ಕಾಲಗಳಲ್ಲಿ **ಬಪ್ಪ** = ಪೂರ್ವಜನ್ಮ ಕೃತ ಪಾಪ ಕರ್ಮಗಳ ಫಲ ರೂಪವಾಗಿ ಬಂದು ಒದಗುವ **ಅಪಮೃತ್ಯುವಿಗೆ** = ಅಕಾಲಮರಣಕ್ಕೆ **ಮೃತ್ಯುವೆನಿಸುವ** = ಆ ರೋಗಾದಿ ಉಪದ್ರವಗಳನ್ನು ಪರಿಹಾರ ಮಾಡತಕ್ಕವನಾಗಿ (ಶ್ರೀ ಲಕ್ಷ್ಮೀನರಸಿಂಹ ರೂಪವು ಸಮಸ್ತ ದುರಿತ ಹಾಗೂ ಅಪಮೃತ್ಯು ಪರಿಹಾರಕ ರೂಪವು) **ಭೃತ್ಯವತ್ಸಲ** = ಭಕ್ತವತ್ಸಲನೆಂದೆನಿಸಿ (ಶರಣಾಗತ ರಕ್ಷಾಮಣಿ) **ಭಯವಿನಾಶನ** = ರೋಗಾದ್ಯುಪದ್ರವಗಳಿಂದ ಒದಗತಕ್ಕ ಅಪಮೃತ್ಯು ಪರಿಹಾರಕನಾಗಿ **ಭಾಗ್ಯಸಂಪನ್ನ** = ತನ್ನ ಭಕ್ತರಿಗೆ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ದೈವೀ ಸಂಪತ್ತನ್ನು ಅನುಗ್ರಹಿಸುವ ಪರಮ ಮಂಗಳಮೂರ್ತಿಯಾದ ನರಸಿಂಹ ನಾಮಕ ಶ್ರೀ ಪರಮಾತ್ಮನು (ಭಾಗ್ಯ = ಷಡ್ಗುಣೈಶ್ವರ್ಯ; ಸಂಪನ್ನ = ಪೂರ್ಣನಾದವ) ॥೧೫॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸ್ಥೂಲದೇಹಕ್ಕೆ ಪ್ರಾಪ್ತವಾಗತಕ್ಕ ಸಾಧನಿಗೆ ಪ್ರತಿಬಂಧಕಳಾದ ರೋಗಗಳೆಂಬೋ ಅಪಮೃತ್ಯು ಪರಿಹಾರ ಮಾಡತಕ್ಕ ರೂಪವನ್ನು ಹೇಳತಾರೆ.

ಮತ್ತೆ–ಸೂಕ್ಷ್ಮದೇಹದ ವಿಚಾರ ಪೂರ್ವದಲ್ಲಿ ಹೇಳಿದಲ್ಲದೆ, ಮತ್ತು, ಚಿದ್ದೇಹದ ಒಳಗೆ, ಎಂಭತ್ತು ಸಾವಿರದ–೮೦,೦೦೦, ಏಳನೂರ ಇಪ್ಪತ್ತೈದು–೭೨೫, ಅಂತು, ೮೦, ೭೨೫. ನೃಸಿಂಹ ರೂಪಗಳಿಂದ ಇದ್ದು, ಎಂದರೆ, ಅಕ್ಷರ ಸಾಂಕೇತದಿಂದ ಆಗತಕ್ಕ ರೂಪಗಳಿಂದ ತಾ ಇದ್ದು. ನ–೫. ರ–೨, ಸಿಂ–೭೦, ಹ–೮. ಒಲದಿಂದ ಎಡಕ್ಕೆ ಲೆಕ್ಕ ೮೦,೭೨೫ ಆಯಿತು. ಜೀವರಿಗೆ ನಿತ್ಯದಲಿ–ಪ್ರಾಣಿಗಳಿಗೆ ಪ್ರತಿದಿವಸದಲ್ಲಿ. ಹಗಲಿರುಳು–ರಾತ್ರಿ ಹಗಲುಗಳ ಒಳಗೆ, ಬಪ್ಪ–ಪೂರ್ವ ಜನ್ಮದಲ್ಲಿ ಮಾಡಿದ ಪಾಪಾನುಸಾರ ಬರತಕ್ಕ, ಅಪಮೃತ್ಯುವಿಗೆ–ಮೃತಿಗೆ ಆಸ್ಪದವಿಲ್ಲದ ಆಯುರ್ಮಾನ ಇರೋ ಕಾಲಕ್ಕೆ ಪ್ರಾಪ್ತವಾಗತಕ್ಕ ಮೃತಿಸದೃಶ ಶವದ ಚಿಹ್ನೆಗಳು ಉಂಟುಮಾಡತಕ್ಕ ರೋಗಾದಿ ಉಪದ್ರವಗಳು ಇಂಥಾ ಅಪಮೃತ್ಯುವಿಗೆ, ತಾ–ಉಕ್ತನಾದ ಜೀವಾಂತರ್ಗತನಾದ ನರಸಿಂಹರೂಪಿಯಾದ ಶ್ರೀ ಪರಮಾತ್ಮನು ತಾನು, ಮೃತ್ಯುವೆನಿಸುವ–ಆ ರೋಗಾದಿ ಉಪದ್ರವಗಳ ನಾಶಮಾಡತಾನೆ. ಭೃತ್ಯವತ್ಸಲ–ಸ್ವಾಮಿ– ಭೃತ್ಯನ್ಯಾಯ ಉಳ್ಳವನಾಗಿ ತನ್ನಲ್ಲಿ ಭಕ್ತಿಮಾಡಿ ಈ ಅನುಸಂಧಾನ ತಿಳಿದು, ತನ್ನ ಭಜಿಸಿ, ಪ್ರಾರ್ಥಿಸತಕ್ಕ ಭೃತ್ಯರಲ್ಲಿ ವಾತ್ಸಲ್ಯ ಉಳ್ಳವನಾಗಿ, ಭಯ ವಿನಾಶನ–ಅಪಮೃತ್ಯು ಭಯ ನಾಶನ ಮಾಡಿ, ಭಾಗ್ಯಸಂಪನ್ನ–ಅಜ್ಞಾನವೆಂಬ ದುರಿತವನ್ನ ನಾಶ ಮಾಡಿ, ಜ್ಞಾನ, ಭಕುತಿ, ವೈರಾಗ್ಯಗಳೆಂಬ ಸೌಭಾಗ್ಯದಿಂದ ಸಂಪನ್ನನ್ನನಾಗಿ ಮಾಡಿ, ಇನ್ನೂ ಐಹಿಕದಲ್ಲಿ ದಾರಿದ್ರ್ಯವೆಂಬ ದುರಿತವನ್ನ ನಾಶ

ಮಾಡಿ, ಮಹದೈಶ್ವರ್ಯಭಾಗ್ಯವನ್ನು ಕೊಟ್ಟು, ಸಂರಕ್ಷಣೆ ಮಾಡತಾನೆ ಎಂತಲೂ ತಾತ್ಪರ್ಯ. ॥೧೫॥

**(೨) "ಭಾವ ಪ್ರಕಾಶಿಕೆ" – ವ್ಯಾಖ್ಯಾನ :–**

ಸ್ವರೂಪ ದೇಹದೊಳಗಿನ ಭಗವದ್ರೂಪಗಳನ್ನು ಹೇಳುತ್ತಾರೆ. "ನರಸಿಂಹ"–ಎಂಬ ರೂಪದ ಅಕ್ಷರ ಸಂಖ್ಯೆಮಾಡಿದರೆ– ನ=೫, ರ=೨, ಸಿ=೭, ಂ=೦, ಹ=೮. ವಾಮಾಂಕ ಮಾಡಿದರೆ, ೮೦೭೨೫ ರೂಪಗಳಿಂದ ನರಸಿಂಹನು ಜೀವನ ಸ್ವರೂಪ ದೇಹದಲ್ಲಿದ್ದು, ಜೀವರಿಗೆ ಪ್ರತಿದಿವಸದಲ್ಲಿಯೂ, ಹಗಲು ರಾತ್ರಿಗಳಲ್ಲಿ ಬರುವ ಅಪಮೃತ್ಯುಗಳಿಗೆ ಮೃತ್ಯುವೆನಿಸುವನು. ಅಂದರೆ, ಅಪಮೃತ್ಯುವನ್ನು ಪರಿಹರಿಸುವನೆಂದರ್ಥ. ತನ್ನ ಭೃತ್ಯರಲ್ಲಿ ಪರಮವಾತ್ಸಲ್ಯವುಳ್ಳವನೂ, ಭಕ್ತರ ಭಯವನ್ನು ಪರಿಹರಿಸುವವನೂ, ಷಡ್ಗುಣೈಶ್ವರ್ಯಪೂರ್ಣನೂ ಆದುದರಿಂದಲೇ, ಅಪಮೃತ್ಯುಹರಣ ಮಾಡುವನೆಂದರ್ಥ. ॥೧೫॥

**(೩) ಭಾವದರ್ಪಣ ಟೀಕಾ ವ್ಯಾಖ್ಯಾನ :–**

ಜೀವನ ಸ್ವರೂಪದೇಹದಲ್ಲಿಹ ಭಗವದ್ರೂಪಗಳನ್ನು ಹೇಳುತ್ತಾರೆ— "ಮತ್ತೆ ಚಿದ್ದೇಹೇತಿ," ೮೦,೭೨೫ ರೂಪಗಳು ನರಸಿಂಹ ಶಬ್ದಕ್ಕೆ ವಾಮಾಂಕದಿಂದ ಗಣನೆ ಮಾಡಬೇಕು ಎಂಬರ್ಥ. ಮೃತ್ಯುವಿಗೆ ತಾನೇ ಮೃತ್ಯು. **"ಮೃತ್ಯೋರ್ಮೃತ್ಯುರ್ನವಾಮ್ಯಹಮಿತಿ"– ತಂತ್ರಸಾರೋಕ್ತೇಃ** ॥೧೫॥

**(೮) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):–**

"ಮತ್ತು"–ಇತಿ ॥ ಸಹಸ್ರಾಶೀತಿ ಸಪ್ತೋರ್ಧ್ವ ಶತಪಂಚ ಸುವಿಂಶತಿ ॥ ಮೃತ್ಯು ಮೃತ್ಯುಃ ನೃಸಿಂಹೋಽಸ್ತಿ ಚಿದ್ದೇಹೇ ಭಾಗ್ಯವಾರಿಧಿಃ ॥೧೫॥

**ಕನ್ನಡಾರ್ಥ :–**

"ಮತ್ತೆ ಚಿದ್ದೇಹದಲಿ"–ಎಂಬ ಪದ್ಯದಲ್ಲಿ ಉಕ್ತವಾಗಿರುವ ಸ್ವರೂಪ ದೇಹದಲ್ಲಿರುವ (ಚಿದ್ದೇಹ) ೮೦,೭೨೫ ಭಗವದ್ರೂಪಗಳ ವಿಚಾರವಾಗಿ "ಸಹಸ್ರಾಶೀತಿ"–ಎಂಬ ಪ್ರಮಾಣವು ಆಧಾರವಾಗಿದೆ.

### (೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ

ಜೀವಸ್ವರೂಪ ದೇಹಸ್ಥ ವರ್ಣಸಂಖ್ಯಾ ರೂಪಗಳ ತಿಳಿಸುತ್ತಾರೆ :– ಮತ್ತೆ ಅಂದರೆ, ಅನಂತರ, ಜೀವರ ಚಿದ್ದೇಹವೆಂಬ ಜ್ಞಾನಾನಂದಾತ್ಮಕ ಸ್ವರೂಪದೇಹದಲ್ಲಿ ದೇವರು ನೃಸಿಂಹಾಖ್ಯ ಅಕ್ಷರಸಂಖ್ಯಾ ರೀತ್ಯಾ, ಹ=೮, ಂ=೦, ಸಿ=೭, ರ=೨, ನ=೫. ಒಟ್ಟು ೮೦,೭೨೫ ರೂಪಗಳಿಂದ ಇದ್ದು, ನಿತ್ಯದಲ್ಲೂ, ಎಂದರೆ, ಪ್ರತಿದಿನವೂ ಜೀವರಿಗೆ ಬರುವ ಅಪಮೃತ್ಯುವಿಗೆ ಅಂದರೆ, ನಿವೃತ್ತಿಯಾಗತಕ್ಕ ಮರಣಕ್ಲೇಶಕ್ಕ ತಾನು ಮೃತ್ಯು ಎಂಬ ನಾಶಕನಾಗಿ, ಭೃತ್ಯವತ್ಸಲ, ಎಂದರೆ ಭಕ್ತರಾದ ಸೇವಕರ ಪ್ರಿಯನಾದ, ಭಯಹರ ಎಂದರೆ, ಆಪನ್ನಿವಾರಕನಾದ, ಭಾಗ್ಯ ಸಂಪನ್ನ ಅಂದರೆ, ಪೂರ್ಣೈಶ್ವರ್ಯಸ್ವರೂಪನಾದ ಶ್ರೀಹರಿಯು ಕಾದು ಕೊಂಡಿರುವನು. ॥೧೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಇದುವರೆಗೂ ಪೂರ್ವೋಕ್ತ ಪದ್ಯಗಳಲ್ಲಿ ಸ್ಥೂಲದೇಹ, ಅನಿರುದ್ಧ ದೇಹ ಮತ್ತು ಲಿಂಗಶರೀರಗತ ಭಗವದ್ರೂಪಗಳು. ಆ ಶರೀರಗಳಲ್ಲಿ ದೇಹಗತ ಭಗವದ್ವ್ಯಾಪಾರಾದಿ ವಿಶೇಷಗಳು ಇತ್ಯಾದಿ ವಿವರಗಳನ್ನು ತಿಳಿಸಿ, ಪ್ರಸಕ್ತ ಪದ್ಯದಿಂದ ಜೀವರ ಸ್ವರೂಪ ದೇಹಗತ ಭಗವದ್ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ.

ಜೀವರ ಸ್ವರೂಪದೇಹವು ಚಿದಾನಂದಾತ್ಮಕವಾದದ್ದು. ಅಪ್ರಾಕೃತ ಗುಣ ವಿಶಿಷ್ಟವು. ಅನಾದಿನಿತ್ಯವಾದ ಸ್ವರೂಪ ದೇಹಕ್ಕೆ ಎಂದೆಂದಿಗೂ ನಾಶವಿಲ್ಲ.

ಇಂತಹ ಚಿದ್ದೇಹದೊಳಗೆ "**ನರಸಿಂಹ**" ರೂಪವನ್ನು ಚಿಂತಿಸಿ, ಧ್ಯಾನೋಪಾಸನೆ ಮಾಡಬೇಕು. **ಮಾತೃಕಾನ್ಯಾಸದಂತೆ "ಕ್ಷಂ"—ಶ್ರೀ ಲಕ್ಷ್ಮೀನರಸಿಂಹಾಯ ನಮಃ** ಎಂದು ೫೧ ವರ್ಣಕ್ಷ-ಕಾರ ವಾಚ್ಯರೂಪವು **ನರಸಿಂಹ ರೂಪವು.** ಜೀವನ ಸ್ವರೂಪ ಶರೀರಸ್ಥಿತ ರೂಪವೇ **ನರಸಿಂಹ ರೂಪವು.**

"**ನರಸಿಂಹ**"-ಎಂಬ ಶಬ್ದದ ಅಕ್ಷರಸಾಂಕೇತ ಭಗವದ್ರೂಪಗಳ ವಿವರ ಇಂತಿದೆ :-

| | | | | | |
|---|---|---|---|---|---|
| (1) | **ನ** | = | ತ-ವರ್ಗಪಂಚಕ ವ್ಯಂಜನಾಕ್ಷರ | = | ೫ |
| (2) | **ರ** | = | ಅವರ್ಗೀಯ ವ್ಯಂಜನಾಕ್ಷರ | = | ೨ |
| (3) | **ಸಿ** | = | ಅವರ್ಗೀಯ ವ್ಯಂಜನಾಕ್ಷರ | = | ೭ |
| (4) | **ಂ** | = | ಅನುಸ್ವಾರ | = | ೦ |
| (5) | **ಹ** | = | ಅವರ್ಗೀಯ ವ್ಯಂಜನಾಕ್ಷರ | = | ೮ |

ಅಲ್ಲಿಗೆ ಸಂಖ್ಯಾಕ್ರಮವು ೫೨೭೦೮ ಆಗುವುದು.

ವಾಮಾಂಕ ಗತಿಯಿಂದ **ನರಸಿಂಹ ವಾಚ್ಯ ಭಗವದ್ರೂಪಗಳ ಸಂಖ್ಯೆ = ೮೦,೭೨೫.**

ಈ ಸಂಖ್ಯೆಯನ್ನೇ ದಾಸರಾಯರು, ಪ್ರಸಕ್ತ ಪದ್ಯದಲ್ಲಿ- "**ಎಂಭತ್ತು ಸಾವಿರದೇಳು ನೂರಿಪ್ಪತ್ತು ಐದು ನೃಸಿಂಹ ರೂಪದಲ್ಲಿದ್ದು ಜೀವರಿಗೆ**"- ಎಂದು ತಿಳಿಸಿರುತ್ತಾರೆ.

ಇಂತು, ಜೀವರ ಸ್ವರೂಪದೇಹಸ್ಥಿತ ನರಸಿಂಹ ದೇವರ ೮೦,೭೨೫ ವರ್ಣವಾಚ್ಯ ಭಗವದ್ರೂಪಗಳನ್ನು ಪ್ರತಿದಿನದಲ್ಲಿಯೂ, ಹಗಲು ರಾತ್ರಿ ಎಡಬಿಡದೆ ಚಿಂತಿಸುತ್ತಿರಬೇಕು. ಆಗ ನಮ್ಮ ದಿನಚರಿಯ ಜೀವನದಲ್ಲಿ ನಮ್ಮ ಕರ್ಮ ಪರಂಪರಾನುಸಾರವಾಗಿ ಒದಗಿ ಬರುತ್ತಿರುವ **ಅಪಮೃತ್ಯು**ವನ್ನು ನರಸಿಂಹ ಭಗವದ್ರೂಪೋಪಾಸನೆಯು ಪರಿಹರಿಸುವುದು.

ಇದೇ ಅಭಿಪ್ರಾಯವನ್ನೇ ಶ್ರೀ ಜಗನ್ನಾಥ ದಾಸವರ್ಯರ ಗುರುಗಳಾದ **ಶ್ರೀ ಗೋಪಾಲ ದಾಸವರೇಣ್ಯರು** ನರಸಿಂಹ ದೇವರ ಪರವಾದ ತಮ್ಮ ಕೀರ್ತನೆಯೊಂದರಲ್ಲಿ—

**ಘೋರ ಅಕಾಲಮೃತ್ಯು ಮೀರಿ ಬರಲು ಕಂಡು ।**
**ಧೀರ ನೀ ಬಿಡಿಸದಿನ್ನಾರೋ ಶ್ರೀ ನಾರಸಿಂಹ ॥೧॥**

**ಧಿಷಣನೆ ಸುಭದ್ರ ದೋಷ ಮೃತ್ಯುಗೆ ಮೃತ್ಯು ।**
**ಸುಷುಮ್ನಾನಾಡಿಸ್ಥಿತ ವಿಭುವೆ ಶ್ರೀ ನಾರಸಿಂಹ ॥೨॥**

—ಎಂದು ಸ್ತೋತ್ರ ಮಾಡಿರುತ್ತಾರೆ.

ನಿಜಮೃತ್ಯುವಲ್ಲದ ಮರಣಕ್ಕೆ ಸದೃಶವಾದ ಘೋರವ್ಯಾಧಿ ಉಪದ್ರವ ಇತ್ಯಾದಿ ರೂಪವಾದ ಶರೀರಕ್ಕೆ ಒದಗುವ ಆಘಾತಗಳಿಗೆ **ಅಪಮೃತ್ಯು** ಎನ್ನುವರು. ಇಂತಹ ಆಕಸ್ಮಿಕ ಘಟನೆಗಳು ನಮ್ಮ ನಿತ್ಯ ಜೀವನದಲ್ಲಿ ಅಡಿಗಡಿಗೆ ಬರುತ್ತಿರುವುವು. ಅಗ್ನಿ ಜಲ, ವಾಯು, ವಾಹನ ಇತ್ಯಾದಿ ಕಾರಣಗಳಿಂದ ಅಪಮೃತ್ಯು ಪರಂಪರೆಗಳಿಗೆ ನರಸಿಂಹಮಂತ್ರವು ಮೃತ್ಯುರೂಪವಾಗಿದೆ. ಅಂದರೆ ಕ್ಷ—ಕಾರ ವಾಚ್ಯನಾದ ಶ್ರೀ ಲಕ್ಷ್ಮೀನರಸಿಂಹ ಭಗವದ್ರೂಪೋಪಾಸನೆಯು ಅಪಮೃತ್ಯು ಪರಿಹಾರಕವಾಗಿದೆ. ಇದಕ್ಕೆ ಪ್ರಮಾಣ:—

**"ಮೃತ್ಯೋರ್ಮೃತ್ಯುರ್ನಮಾಮ್ಯಹಮಿತಿ"**—ಎಂದು **ತಂತ್ರಸಾರ** ಗ್ರಂಥದ ಪ್ರಮಾಣವಿದೆ. ಅಂದರೆ "ಮೃತ್ಯುವಿಗೆ ಮೃತ್ಯುವೆಂದೆನಿಪ ನರಸಿಂಹ ರೂಪವನ್ನು ನಾನು ನಮಸ್ಕರಿಸುತ್ತೇನೆ"—ಎಂದು ತಾತ್ಪರ್ಯಾರ್ಥವು.

ಇಂತಹ ಅಪಮೃತ್ಯುನಿವಾರಕನಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯು ಭೃತ್ಯವತ್ಸಲನು, ಶರಣಾಗತ ವತ್ಸಲನಾದ್ದರಿಂದಲೇ ಭಾಗವತೋತ್ತಮರಾದ ನಿಜಭೃತ್ಯ ಶ್ರೀ ಪ್ರಹ್ಲಾದ ರಾಜರ ವಚನವನ್ನು ಸತ್ಯಮಾಡಲು, ಕಂಭದಿಂದ ಜಿಗಿದು ಬಂದು, ಭೃತ್ಯನಿಗೆ ಒದಗಿದ ಅಪಮೃತ್ಯುವನ್ನು ಪರಿಹರಿ

ಸಿದ ಪರಮ ಕರುಣಾನಿಧಿ! ಭಕ್ತವತ್ಸಲನಾದ ಶ್ರೀಪರಮಾತ್ಮನು ಜೀವರಿಗೆ ಒದಗಿಸುತ್ತಿರುವ ಸಮಸ್ತ ಭಯಗಳನ್ನೂ ನಿವಾರಿಸಿ, ಸದಾ ಸಂರಕ್ಷಕನಾಗಿರುವನು. ಅಂತಹ ಭಯವಿನಾಶನನಾದ ಪರಮಾತ್ಮನು ಷಡ್ಗುಣೈಶ್ವರ್ಯ ಪರಿಪೂರ್ಣನಾದ ಭಾಗ್ಯನಿಧಿಯು. ಆ ಭಾಗ್ಯಸಂಪನ್ನನ ಕರುಣೆಯಿಂದ ಜೀವರಿಗೆ ಭಗವದನುಗ್ರಹಕ್ಕೆ ಕಾರಣ ಸಾಮಗ್ರಿಗಳಾದ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ದೈವೀಸಂಪತ್ತುಗಳು ಒದಗುವುವು. ॥೦೫॥

## ಪದ್ಯ (೧೬)

**ಮೂಲ :–**

**ಜ್ವರನೊಳಿಪ್ಪತ್ತೇಳು ಹರನೊಳ ।**
**ಗಿರುವನಿಪ್ಪತೆಂಟು ರೂಪದಿ ।**
**ಎರಡುಸಾವಿರದೆಂಟುನೂರಿಪ್ಪತ್ತರೇಳಿನಿಪ ॥**
**ಜ್ವರಹರಾಹ್ವಯ ನಾರಸಿಂಹನ ।**
**ಸ್ಮರಣೆಮಾತ್ರದಿದುರಿತ ರಾಶಿಗ ।**
**ಳಿರದೆ ಪೋಪವು ತರಣಿ ಬಿಂಬವ ಕಂಡ ಹಿಮದಂತೆ ॥೧೬॥**

**ಅವತರಣಿಕೆ :–**

ಜ್ವರಹರನಾಮಕನಾದ ನಾರಸಿಂಹನ ನಾಮೋಚ್ಚರಣೆಯ ಮಹಿಮೆಯನ್ನು ಮತ್ತು ಜ್ವರಹರ ಶಬ್ದವಾಚ್ಯನಾದ ಶ್ರೀಪರಮಾತ್ಮನ ಅಕ್ಷರ ಸಾಂಕೇತ ಭಗವದ್ರೂಪಗಳನ್ನು ತಿಳಿಸುತ್ತಾರೆ—"**ಜ್ವರದೊಳಿಪ್ಪತ್ತೇಳು**"— ಎಂಬ ಪ್ರಸಕ್ತ ಸಂಧಿಗತ ೧೬ನೆಯ ಈ ಪದ್ಯದಿಂದ.

"ಜ್ವರ"ದಲ್ಲಿ ಅಕ್ಷರ ಸಾಂಕೇತ ೨೭ ರೂಪಗಳಿಂದ ಇದ್ದಾನೆ (ಜ್ವ= ಜ+ವ=೩+೪=೭. ರ=೨. ವಾಮಾಂಕದಿಂದ ೨೭). "ಹರ" ಶಬ್ದವಾಚ್ಯನಾಗಿ ೨೮ ಭಗವದ್ರೂಪಗಳು (ಹ=೮, ರ=೨. ವಾಮಾಂಕ ದಿಂದ ೨೮) ಇವೆರಡನ್ನೂ ಕೂಡಿಸಿದಾಗ "ಜ್ವರಹರ" ಶಬ್ದವಾಚ್ಯ ವರ್ಣ ಸಾಂಕೇತ ರೂಪಗಳು ೨೮೨೭. (ಜ್ವ=೭, ರ=೨, ಹ=೮, ರ=೨. ವಾಮಾಂಕಗತಿಯಿಂದ ೨೮೨೭). ಇಷ್ಟು ರೂಪಗಳಿಂದ ವಿದ್ಯಮಾನನಾಗಿ ಶ್ರೀಲಕ್ಷ್ಮೀನರಸಿಂಹದೇವರು "**ಜ್ವರಹರ**" ನಾಮಕನಾಗಿದ್ದಾರೆ. ಏತಾದೃಶಮಹಿಮೋಪೇತನಾದ ನಾರಸಿಂಹನ ಸ್ಮರಣೆ ಮಾತ್ರದಿಂದ ಸಮಸ್ತದುರಿತ ರಾಶಿಗಳು. ಬಿಸಿಲಿನ ತಾಪಕ್ಕೆ ಕರಗುವ ಹಿಮದಂತೆ ಪರಿಹಾರವಾಗುವುವು ಎಂದು ತಿಳಿಸುತ್ತಾರೆ. ‖೧೯‖

**ಪ್ರತಿಪದಾರ್ಥ :-**

**ಜ್ವರನೊಳು** = ಮಹೇಶ್ವರನಿಂದ ಉತ್ಪನ್ನವಾದ ಜ್ವರದೊಳಗೆ, ಅಂದರೆ, ಜ್ವರಾಭಿಮಾನಿ ದೇವತೆಯಲ್ಲಿ **ಇಪ್ಪತ್ತೇಳು** = ೨೭ ಅಕ್ಷರ ಸಾಂಕೇತ ರೂಪಗಳಿಂದಲೂ (ಜ್ವ=ಜ+ವ=೩+೪=೭, ರ=೨. ವಾಮಾಂಕ ದಿಂದ ೨೭ರೂಪಗಳು) **ಹರನೊಳಗೆ** = ಜ್ವರವನ್ನು ಸೃಷ್ಟಿಸಿದ ಹರನಲ್ಲಿ, ಅಥವಾ ಜ್ವರ ಪರಿಹಾರ ಮಾಡತಕ್ಕ ದೇವತೆಗಳಲ್ಲಿ **ಇಪ್ಪತ್ತೆಂಟು ರೂಪದಿ** = "ಹರ" ಶಬ್ದವಾಚ್ಯನಾಗಿ ೨೮ ವರ್ಣಸಾಂಕೇತ ರೂಪಗಳಿಂದಲೂ (ಹ=೮, ರ=೨. ವಾಮಾಂಕದಿಂದ ೨೮ ರೂಪಗಳು) ವಿದ್ಯಮಾನ ನಾಗಿದ್ದಾನೆ. **ಎರಡುಸಾವಿರದೆಂಟುನೂರಿಪ್ಪತ್ತರೇಳೆನಿಪ** = ೨೮೨೭ ರೂಪ ಗಳಿಂದ **ಜ್ವರಹರಾಯ್ನುಯು** = "ಜ್ವರಹರ"-ನೆಂಬ ಹೆಸರುಳ್ಳ (ಜ್ವ=೭, ರ=೨, ಹ=೮, ರ=೨. ವಾಮಾಂಕದಿಂದ ಜ್ವರಹರ ಶಬ್ದವಾಚ್ಯ ರೂಪಗಳು ೨೮೨೭) **ನಾರಸಿಂಹನ** = ಶ್ರೀಲಕ್ಷ್ಮೀನರಸಿಂಹ ನಾಮಕ ಶ್ರೀಪರಮಾತ್ಮನ **ಸ್ಮರಣೆಮಾತ್ರದಿ** = ಭಕ್ತಿಪೂರ್ವಕ ಸ್ಮರಣೆಮಾಡಿದ ಮಾತ್ರಕ್ಕೆ **ದುರಿತರಾಶಿಗಳು** = ಪಾಪ ಸಮೂಹಗಳು **ತರಣಿಬಿಂಬವ** = ಸೂರ್ಯಮಂಡಲವನ್ನು **ಕಂಡ** = ನೋಡಿದ **ಹಿಮದಂತೆ** = ಮಂಜಿನೋ

ಪಾದಿಯಲ್ಲಿ **ಇರದೆ ಪೋಪವು**=ಅಲ್ಲಿ ನಿಲ್ಲದೆ ಓಡಿಹೋಗುವುವು, ಅಂದರೆ ಸಮಸ್ತ ದುರಿತ ಪರಿಹಾರಕ ನರಸಿಂಹನ ನಾಮಸ್ಮರಣೆ ಎಂದು ತಾತ್ಪರ್ಯ. ॥೧೬॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:

ಜ್ವರಹರಾದಿ ರೂಪ ಹೇಳುತಾರೆ.

ಜ್ವರನ—ಜ್ವರ ಎಂಬುದು ಸಕಲ ವ್ಯಾಧಿಗಳಿಗೆ ರಾಜ. ಸನ್ನಿದೋಷ ಶ್ಲೋೀಭಾಧಿಗಳು ಜ್ವರದಿಂದ ಉತ್ಪತ್ತಿ. ಆದ್ದರಿಂದ ಇಂಥಾ ಜ್ವರದಲ್ಲಿ ಜ್ವರಾಭಿಮಾನಿಯಾದ "ಜ್ವರ" ಶಬ್ದವಾಚ್ಯನಾದ ದೇವತಾ ಇರೋವನಾಗಿ ಇದ್ದಾನೆ. ಇದು ಶಿವಜ್ವರ, ಒಳು—ಈ ಜ್ವರಸಾಂಕೇತವಾದ ದೇವತೆ ಯಲ್ಲಿ. ಇಪ್ಪತ್ತೇಳು—ಜ್ವರ ಶಬ್ದವಾಚ್ಯ ಭಗವದ್ರೂಪಗಳು ೨೭. ಜ್ವ—೭, ರ—೨, ಬಲದಿಂದ ಎಡಕ್ಕೆ ಲೆಕ್ಕ. ಹರನೊಳಗೆ—ಹರ ಎಂದರೆ ಜ್ವರ ಪರಿಹಾರ ಮಾಡತಕ್ಕ ದೇವತೆಗೆ "ಹರ" ಎಂದು ಹೆಸರು. "ಹರ"—ಎಂಬುದಕ್ಕೆ ಅಭಿಮಾನಿಯಾದ ಹರ ಶಬ್ದವಾಚ್ಯ ದೇವತೆಯಲ್ಲಿ ಶ್ರೀಪರಮಾತ್ಮ ಹರ ಶಬ್ದವಾಚ್ಯನಾಗಿ "ಹರ"—ಎಂಬ ಹೆಸರಿನ ಅಕ್ಷರ ಸಾಂಕೇತದಿಂದ ಆಗತಕ್ಕ ಇಪ್ಪತ್ತೆಂಟು ರೂಪದಿ—೨೮ ರೂಪದಿಂದ ಎಂದರೆ, ಹ—೮. ರ—೨. ಬಲದಿಂದ ಎಡಕ್ಕೆ ಲೆಖ್ಖ ಮಾಡಿದರೆ ೨೮ ರೂಪದಿಂದ, ಇರುವ—ಇರೋವನಾಗಿದ್ದಾನೆ. ರೂಪದಿ—ಉಕ್ತ ರೂಪ ದಿಂದ ಉಭಯ ದೇವತೆಗಳಲ್ಲಿ ಇದ್ದಾನೆ ಎಂದರ್ಥ. "ಹರ"—ಎಂದರೆ "ವಿಷ್ಣುಜ್ವರ"—ಎಂದು ತಾತ್ಪರ್ಯ. ಈ ಪ್ರಕಾರ ಜ್ವರ ಹರಾಹ್ವಯ—ಜ್ವರ—ಜ್ವರಕ್ಕೆ ಕಾರಣವಾದ ದುರಿತ ಹರ—ಇಂತಹ ದುರಿತಗಳ ಪರಿಹಾರಕ್ಕೆ "ಹರ"—ಎಂತ ನಾಮ, ಆಹ್ವಯ—ಇಂಥಾ ಜ್ವರಹರ ನಾಮದಿಂದ ಕರಿಸು

ತಕ್ಕ ಶ್ರೀಪರಮಾತ್ಮನ ರೂಪಗಳು ಅಕ್ಷರ ಸಾಂಕೇತದಿಂದ ಆಗತಕ್ಕದ್ದು. ಎರಡು ಸಾವಿರದ ಎಂಟುನೂರಿಪ್ಪತೇಳೆನಿಪ—೨೮೨೭ ಎಂತ. ಜ್ವ–೭ ರ–೨, ಹ–೮, ರ–೨. ಅಂದರೆ ೨೮೨೭. ಇಷ್ಟು ರೂಪದಿಂದ "ಜ್ವರ"– ಎಂಬ ಅಧಿಷ್ಠಾನದಲ್ಲಿ ನಾರಸಿಂಹನ—ಇರುವಂಥಾ ಶ್ರೀನೃಸಿಂಹದೇವರನ್ನು, ಸ್ಮರಣೆ ಮಾತ್ರದಿ–ಭಕ್ತಿಯಿಂದ ಸ್ಮರಣೆ ಮಾಡಿದ ಮಾತ್ರದಿಂದ. ದುರಿತ ರಾಶಿಗಳು—ಜ್ವರಾದಿ ರೋಗಗಳಿಗೆ ಕಾರಣವಾದ ಪಾಪಗಳು. ತದಭಿಮಾನಿ ಗಳು. ಇರದೆ ಪೋಪವು–ದೇಹದಲ್ಲಿ ಇಲ್ಲದೆ ಹೊರಟು ಹೋಗಾದಾಗತದೆ. ಎಂದರೆ, ಭಗವದ್ವೇಷಿಗಳಾದವರ ದೇಹದಲ್ಲಿ ಪ್ರವೇಶ ಮಾಡತದೆ. ಅದು ಹ್ಯಾಗೆಂದರೆ ದೃಷ್ಟಾಂತ ಹೇಳತಾರೆ. ತರಣಿ ಬಿಂಬವ ಕಂಡ–ಸೂರ್ಯನ ಮಂಡಲವನ್ನು ನೋಡಿದಂಥ ಹಿಮದಂತೆ–ಮಂಜಿನೋಪಾದಿಯಲ್ಲಿ ಹೊರಟು ಹೋಗುವುವು.

**"ವಿಲಯಂ ಯಾಂತಿ ಪಾಪಾನಿ ಹಿಮವದ್ಭಾಸ್ಕರೋದಯಂ"**— ಎಂತ ಇರುವುದರಿಂದ ಶ್ರೀ ನೃಸಿಂಹದೇವರ ಸ್ಮರಣೆ ಮಾಡೋಣದರಿಂದ, ಸರ್ವಪಾಪಗಳು ಸಂಹಾರವಾಗತವೆ. ಮಹಾರೋಗಾದ್ಯುಪದ್ರವಗಳು ಪರಿ ಹಾರವಾಗುತ್ತವೆ ಎಂತ ತಾತ್ಪರ್ಯ. ಜ್ವರದೊಳಗೆ ವಿಷ್ಣುಜ್ವರ ಮತ್ತು ಶಿವಜ್ವರ ಎಂತ ಎರಡು ಪ್ರಕಾರ. ಇದರ ವಿವರ **ಶ್ರೀ ಹರಿವಂಶದಲ್ಲೂ ಮತ್ತು ಶ್ರೀಮದ್ಭಾಗವತ ದಶಮಸ್ಕಂಧ**ದಲ್ಲೂ ಅದೆ. ॥೧೬॥

## (೨). "ಭಾವಪ್ರಕಾಶಿಕೆ" ವ್ಯಾಖ್ಯಾನ:–

ಎರಡು ಪದ್ಯಗಳಿಂದ ನರಸಿಂಹದೇವರ ಮಹಿಮೆಯನ್ನು ವರ್ಣಿಸು ತ್ತಾರೆ. ರುದ್ರದೇವರಿಂದ ಸೃಷ್ಟವಾದುದು ಮಹೇಶ್ವರಜ್ವರವು. ಈ ಕಥೆಯು **ಹರಿವಂಶದಲ್ಲಿ** ಉಪಾಹರಣ ಕಥೆಯಲ್ಲಿ ಶ್ರೀಕೃಷ್ಣನಿಗೂ ಮತ್ತು ರುದ್ರ ದೇವರಿಗೂ ಯುದ್ಧ ನೆಡೆದ ಸಂದರ್ಭದಲ್ಲಿ ಹೇಳಿರುವರು. ಇದೇ ಕಥೆಯನ್ನು **ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ–೨೨ ನೆಯ ಅಧ್ಯಾಯ – ೨೫೫ ನೆಯ ಶ್ಲೋಕ ಮೊದಲು ೨೬೫ ನೆಯ ಶ್ಲೋಕ ಪರ್ಯಂತ** ಹೇಳಿರುವರು :–

ಅಥ ಕೃಷ್ಣಃ ಸಮಾರುಹ್ಯ ಗರುಡಂ ರಾಮಸಂಯುತಃ ।
ಪ್ರದ್ಯುಮ್ನೇನ ಚ ತತ್ರಾಗತ್ ಪ್ರಥಮಂ ತತ್ರ ವಹ್ನಿಭಿಃ ॥
ಯದ್ವೇವಾಂಗೀರಸಾ ಚೈವ ಕ್ಷಣಾದ್ವಿದ್ರಾವ್ಯತಾತ್ ಹರಿಃ ॥೨೫೯॥

ವಿದ್ರಾವ್ಯ ಶರ್ವ ಪ್ರಮಥಾನಾಸಸಾದ ಜ್ವರಂ ತತಃ ।
ತೇನ ಭಸ್ಮ ಪ್ರಹಾರೇಣ ಜ್ವರಿತಂ ರೋಹಿಣೀ ಸುತಂ ॥೨೬೦॥

ಆಶ್ಲಿಷ್ಯ ವಿಜ್ವರಂ ಚಕ್ರೇ ವಾಸುದೇವೋ ಜಗತ್ಪ್ರಭುಃ ।
ಸ್ವಯಂ ವಿಕ್ರೀಡ್ಯತೇ ನಾಥ ಕಿಂಚಿತ್ಕಾಲಂ ಜನಾರ್ದನಃ ॥೨೬೧॥

ನಿಷ್ಪಿಷ್ಯ ಮುಷ್ಟಿಭಿಶ್ಚಾನ್ಯಂ ಸಸರ್ಜ ಜ್ವರಮಚ್ಯುತಃ ।
ಸ್ವಯಂ ಚಿತ್ವಾಪಿ ಗಿರಿಶ ಭೃತ್ಯಂ ನಾಲಮಿತಿ ಪ್ರಭುಃ ॥೨೬೨॥

ಸ್ವ ಭೃತ್ಯೇನ ಜೇತವ್ಯ ಯುತ್ಯನ್ಯಂ ಸಸೃಜೇತರಾಜ್ವರೇಣ ।
ವೈಷ್ಣವೇನಾ ಸೌಸುಭೃತಂ ಪೀಡಿತಸ್ತದಾ ॥೨೬೩॥

ಗ್ರಾಸಾರ್ಥಮುಪನೀತಶ್ಚ ಜಗಾಮ ಶರಣಂ ಹರಿಂ ।
ತೇನಸ್ತು ತಸ್ಸ ಭಗವಾನ್ ಮೋಚಯಾಮಾಸ ತಂ ಪ್ರಭುಃ ॥೨೬೪॥

ಬಾಣಾಸುರನು ತನ್ನ ಮಗಳಾದ ಉಷೆಯನ್ನು ರಹಸ್ಯವಾಗಿ ಗಾಂಧರ್ವ ವಿಧಿಯಿಂದ ವಿವಾಹ ಮಾಡಿಕೊಂಡ ಅಂತಃಪುರದಲ್ಲಿರುವ ಅನಿರುದ್ಧನನ್ನು ಜಯಿಸಿ ನಾಗಾಸ್ತ್ರದಿಂದ ಕಟ್ಟಿಬಿಟ್ಟಿದ್ದನು. ಈ ವೃತ್ತಾಂತವನ್ನು ಶ್ರೀಕೃಷ್ಣನು ನಾರದರ ಮುಖದಿಂದ ತಿಳಿದು, ಬಲರಾಮ ಪ್ರದ್ಯುಮ್ನರೊಂದಿಗೆ ಗರುಡಾ ರೂಢನಾಗಿ ಬಾಣಾಸುರನ ಪಟ್ಟಣಕ್ಕೆ ಬಂದನು. ಅಲ್ಲಿ ಆಂಗೀರಸ ಮೊದಲಾದ ಪ್ರಧಾನಾಗ್ನಿಗಳೊಂದಿಗೆ ಮೊದಲು ಯುದ್ಧವನ್ನು ಮಾಡಿ ಕ್ಷಣಮಾತ್ರದಿಂದ ಅವರೆಲ್ಲರನ್ನು ಓಡಿಸಿದನು. ಆಗ ರುದ್ರದೇವರು ಬಾಣಾಸುರನಿಗೆ ಸಹಾಯ ಮಾಡುವುದಕ್ಕಾಗಿ ಒಂದು ಜ್ವರವನ್ನು ಸೃಷ್ಟಿಮಾಡಿ, ಕೃಷ್ಣನೊಡನೆ ಯುದ್ಧಕ್ಕೆ ಕಳುಹಿಸಿದರು. ಆ ಜ್ವರವು ಮೊದಲು ಬಲರಾಮನ

ಮೇಲೆ ಚೆಲ್ಲಲು, ಭಸ್ಮಪ್ರಹಾರದಿಂದ ಬಲರಾಮನಿಗೆ ಬಲವತ್ತರವಾದ ಜ್ವರವು ದೇಹದಲ್ಲಿ ವ್ಯಾಪಿಸಿ, ಬಹಳ ಪೀಡಿತನಾಗಲು ಶ್ರೀಕೃಷ್ಣನು ಬಲರಾಮನನ್ನು ಆಲಿಂಗನಮಾಡಿಕೊಂಡು, ಆ ಜ್ವರವನ್ನು ಪರಿಹರಿಸಿದನು. ಆಗ ಮಹೇಶ್ವರನ ಜ್ವರವು ಬಲರಾಮನನ್ನು ಬಿಟ್ಟು, ಕೃಷ್ಣನಲ್ಲಿ ಪ್ರವೇಶ ಮಾಡಿತು. ಶ್ರೀಕೃಷ್ಣನು ಸ್ವಲ್ಪಹೊತ್ತು ವ್ಯಸನಪಟ್ಟವನಂತೆ ಕಾಣಿಸಿಕೊಂಡು, ತದನಂತರ ತನ್ನ ಮುಷ್ಟಿಪ್ರಹಾರದಿಂದ ಈ ಜ್ವರವನ್ನು ಜಯಿಸಿದನು. ಭೃತ್ಯನನ್ನು ತನ್ನ ಭೃತ್ಯದಿಂದಲೇ ಸೋಲಿಸಬೇಕೆಂದು ತಾನು ಒಂದು ಜ್ವರವನ್ನು ಸೃಷ್ಟಿಸಿದನು. ಆಗ ವೈಷ್ಣವಜ್ವರವು ಹೊರಟು ಆ ಮಹೇಶ್ವರನ ಜ್ವರವನ್ನು ಹೊರಗೆ ಸೆಳೆದು ಬಹಳವಾಗಿ ಪೀಡಿಸಿ, ಕಡೆಗೆ ಆ ಜ್ವರವನ್ನೇ ಭಕ್ಷಿಸಬೇಕೆಂದು ಪ್ರಯತ್ನಿಸಲು, ಮಹೇಶ್ವರನ ಜ್ವರವು ಶ್ರೀಕೃಷ್ಣನನ್ನು ಪ್ರಾಣದಾನ ಮಾಡಬೇಕೆಂದು ಮೊರೆಹೊಕ್ಕಿತು. ಆ ಜ್ವರದಿಂದ ಸ್ತುತ್ಯನಾಗಿ, ತನ್ನ ಜ್ವರವನ್ನು ಉಪಸಂಹಾರ ಮಾಡಿಕೊಂಡು, ಪರಮೇಶ್ವರನ ಜ್ವರವೊಂದೇ ಭೂಮಿಯಲ್ಲಿರುವಂತೆ ವರವನ್ನು ಕೊಟ್ಟು-"ನೀನು ಇಷ್ಟು ಭಾಗದಿಂದ ಮನುಷ್ಯರಲ್ಲಿಯೂ, ಮೃಗಾದಿಗಳಲ್ಲಿ, ವೃಕ್ಷಾದಿಗಳಲ್ಲಿ ಇನ್ನಿಷ್ಟು ಭಾಗಗಳಿಂದ ವಾಸಮಾಡಬೇಕೆಂತಲೂ. ಜ್ವರದಿಂದ ಪೀಡಿತನಾದ ಮಾನವನು ನಿನ್ನನ್ನು ನಾನು ಜಯಿಸಿದ ಈ ಕಥೆಯನ್ನು ಶ್ರವಣ ಪಠಣಾದಿಗಳನ್ನು ಮಾಡಿದರೆ, ತಕ್ಷಣ ಅವರಿಗೆ ಜ್ವರದ ಪೀಡಾಪರಿಹಾರವಾಗಬೇಕೆಂತಲೂ"-ವರಗಳನ್ನು ಕೊಟ್ಟು ಕಳುಹಿಸಿದನು. ಜ್ವರವನ್ನು ಜಯಿಸಿದ ಮೇಲೆ ಸ್ವಯಂ ರುದ್ರದೇವರೇ ಕೃಷ್ಣನೊಂದಿಗೆ ಯುದ್ಧದಲ್ಲಿ ಸೋತರು. ಆಗ ಬಾಣಾಸುರನು ಯುದ್ಧಕ್ಕೆ ಬರಲು ಅವನನ್ನು ಜಯಿಸಿದ್ದಲ್ಲದೆ, ಅವನನ್ನು ಕೊಲ್ಲಲು ಆಯುಧವನ್ನು ತೆಗೆದುದದನ್ನು ರುದ್ರದೇವರು ನೋಡಿ, ಕೃಷ್ಣನನ್ನು ಬೇಡಿಕೊಂಡರು. ಆಗ ಕೃಷ್ಣನು ರುದ್ರದೇವರಿಗೋಸ್ಕರ ಅವನನ್ನು ಕೊಲ್ಲದೆ, ಅವನ ಸಹಸ್ರ ಕೈಗಳ ಪೈಕಿ ಎರಡನ್ನ ಮಾತ್ರ ಬಿಟ್ಟು, ಮಿಕ್ಕವುಗಳನ್ನು ಕತ್ತರಿಸಿಬಿಟ್ಟನು. ರುದ್ರದೇವರು ಬಾಣಾಸುರನನ್ನು ಸಮಾಧಾನ ಪಡಿಸಿ ಹೊರಟುಹೋದರು. ಶ್ರೀಕೃಷ್ಣನು ಅನಿರುದ್ಧನನ್ನು ಬಿಡಿಸಿಕೊಂಡು, ಉಷಾದೇವಿ ಸಹಿತನಾಗಿ, ಯಥಾಪ್ರಕಾರ ದ್ವಾರಾವತಿಗೆ ಹೋದನು.

ಇಂತಹ ಜ್ವರದಲ್ಲಿ ಅಕ್ಷರ ಸಂಖ್ಯೆಯಿಂದ ಜ್ವ=೭. ರ=೨. ಅಂತು ವಾಮಾಂಕದಿಂದ ೨೭. ಇಷ್ಟು ರೂಪಗಳಿಂದ ಇರುವನು. ಇದನ್ನು ಸೃಷ್ಟಿಸಿದ ಹರನಲ್ಲಿ ಹ=೮, ರ=೨. ಅಂತು ೨೮ ರೂಪಗಳಿಂದ ಇರುವನು. ಶ್ರೀನರಸಿಂಹನು "ಜ್ವರಹರ" ಎಂಬ ಹೆಸರಿನಿಂದ ಜ್ವ=೭, ರ=೨, ಹ=೮, ರ=೨. ಹೀಗೆ ೨೮೨೭ ರೂಪಗಳಿಂದ ತನ್ನನ್ನು ಸ್ಮರಣೆ ಮಾಡುವ ಮಾತ್ರದಿಂದಲೇ, ಸೂರ್ಯನು ಮಂಜುಗಳನ್ನು ಹೇಗೆ ಪರಿಹರಿಸುವನೋ, ಅಥವಾ ಛಳಿಯನ್ನು ಹೇಗೆ ಓಡಿಸುವನೋ, ಹಾಗೇ ತನ್ನ ಭಕ್ತರಿಗೆ ಬರುವ ದುರಿತಗಳನ್ನು ದೂರ ಅಟ್ಟುವನು. ॥೧೬॥

## (೩) "ಭಾವದರ್ಪಣ ಟೀಕಾ"– ವ್ಯಾಖ್ಯಾನ :–

ಜ್ವರದೊಳಗೆ ೨೭ ರೂಪಗಳಿಂದಲೂ, ಹರನಲ್ಲಿ ೨೮ ರೂಪಗಳಿಂದಲೂ, ಮತ್ತು ಜ್ವರಹರರಲ್ಲಿ ಅಹತ್ಯ ೨೮೨೭ ಭಗವದ್ರೂಪಗಳಿಂದು ಹೇಳುತ್ತಾರೆ । ಜ್ವರೇತಿ ॥೧೬॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–

"ಜ್ವರನೊಳು"—ಇತಿ॥ ಅಷ್ಟವಿಂಶತಿ ರುದ್ರೇऽಸ್ತಿ ಜ್ವರೇ ವೈಸಪ್ತವಿಂಶತಿಃ । ಸಪ್ತವಿಂಶಿತ್ಯ ಸಪ್ತತ್ಯಷ್ಟ ಶತ ದ್ವಿಸಹಸ್ರಂ ಹಿ ಮೇಲನೇ ॥ ಪೋಪವು—ಹೋಗುವುವು' ಅತಏವ—"ಭಯ ವಿನಾಶನ"—ಇತ್ಯುಕ್ತಂ ಪ್ರಾಕ್ ॥ ಓಂ. ಸ್ವರೂಪ ಕೃತ್ಸ್ನಮೂರ್ತಯೇ ಸುದುಘಾಮಿವ ಗೋದುಹೇ॥ ಜಹೂಮಸಿ ದ್ಯವಿದ್ಯವಿ ॥ ಉಪನಃ ಸವನಾಗಾಹಿ ಸೋಮಸ್ಯ ॥ ಓಂ ಭೀ ಭಯೇ ಬಿಭೇತಿ ಅಸ್ಮಾತ್ ಇತಿ ಭಯಂ ಶರೀರೇಂದ್ರಿಯಾದಿ। ತತ್ಸಂಬಂಧಾದಿ ಭಯಂ ಜೀವಸ್ಯ ಕರೋತಿ ಇತಿ ಭಯಕೃತ್॥ ಭಯಂ ಶರೀರಾಭಿಮಾನಾದಿ ಕೃತಂ. ನಾಶಯತಿ ಇತಿ ಭಯನಾಶನಃ ॥ ಸಚೌಸೌಸಃ ಇತಿ ತಥೋಕ್ತಃ ॥ ಸ್ವಯಮೇವ ಭಕ್ತಾನಾಂ ವಿವಿಧ ಸಾಂಸಾರಿಕ ದುಃಖಾನುಭವ ಸಿದ್ಧ್ಯರ್ಥಂ ಬ್ರಾಹ್ಮಣಾದಿ ಶರೀರಾಧಿತ್ರೃತಂ ಉತ್ಪಾದ್ಯ ತತ್ರ ವೈರಾಗ್ಯಾಧಿಕಂ ಉತ್ಪಾದ್ಯ ಜ್ಞಾನದ್ವಾರಾ ನಾಶಯತಿ ಇತಿ ಯಾವತ್ ॥೧೬॥

## (೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–

"ಜ್ವರಹರ" ನೃಸಿಂಹೋಪಾಸನೆ ಅಕ್ಷರ ಸಂಖ್ಯಾದಿಂದ ತಿಳಿಸುತ್ತಾರೆ– "ಜ್ವರ"–ವೆಂಬ ರೋಗದಲ್ಲಿ ಜ್ವರನಾಮಕ ರ=೨, ಜ್ವ=೭, ಈ ರೀತಿ ೨೭ ಭಗವದ್ರೂಪಗಳು, "ಹರ"–ಎಂಬ ರೋಗ ನಿವಾರಕ ಔಷಧದಲ್ಲಿ ಹರ ನಾಮಕ ರ=೨, ಹ=೮, ಈ ರೀತಿ ೨೮ ರೂಪಗಳಿಂದಲೂ ಮತ್ತು "ಜ್ವರಹರ"-ಎಂಬ ನಾಮದಿಂದ ರ=೨, ಹ=೮, ರ=೨, ಜ್ವ=೭ ಹೀಗೆ ೨೮೨೭ ರೂಪಗಳಿಂದಿರುವ ಶ್ರೀನೃಸಿಂಹ ದೇವರ ಸ್ಮರಣೆಮಾತ ದಿಂದ, ಎಂದರೆ, ಮನಸ್ಸಿನಲ್ಲಿ ನೆನೆದ ಕೂಡಲೇ, ದುರಿತಗಳೆಂಬ ಪಾಪ ರಾಶಿಗಳು, ಸೂರ್ಯಬಿಂಬವನ್ನು ಕಂಡರೆ ಮಂಜು ನಾಶವಾಗುವಂತೆ ನಾಶ ವಾಗುವುವು. ॥೧೬॥

# ಸರ್ವವ್ಯಾಖ್ಯಾನಸಾರಸಂಗ್ರಹ

**"ಜ್ವರಹರ"** ನಾಮಕನಾದ ಶ್ರೀ ನರಸಿಂಹದೇವರ ಭಗವದ್ರೂಪೋ ಪಾಸನಾ ವಿಧಾನವನ್ನು ತಿಳಿಸುತ್ತಾರೆ ಪ್ರಸಕ್ತ ಈ ೧೬ ನೆಯ ಪದ್ಯ ದಿಂದ.

**"ಜ್ವರ"**ವು ಸರ್ವವ್ಯಾಧಿಗಳಗೂ ಮೂಲ. ಪಾಂಚಭೌತಿಕವಾದ ಈ ಸ್ಥೂಲದೇಹದಲ್ಲಿ ಋತಧರ್ಮ ಮತ್ತು ದೇಹಧರ್ಮಗಳಿಗನುಸಾರವಾಗಿ ಆರೋಗ್ಯ ಸ್ಥಿತಿಯಲ್ಲಿ ಏರು ಪೇರುಗಳು ಒದಗುತ್ತಿರುವುದು ಸ್ವಾಭಾವಿಕ. ದೇಹದ ಲಕ್ಷಣವೇ ಅದು. ರೋಗಾದ್ಯುಪದ್ರವಗಳು ಮೊದಲು "ಜ್ವರ"ದ ರೂಪದಲ್ಲಿ ಕಾಣಿಸಿಕೊಂಡು, ದೇಹಕ್ಕೆ ಭಾದೆಯನ್ನುಂಟುಮಾಡುವುವು. ಜ್ವರಾಭಿಮಾನಿ ದೇವತೆಗಳಲ್ಲಿ ಅಂತರ್ಗತನಾಗಿ ಜ್ವರಶಬ್ದ ವಾಚ್ಯನಾಗಿ ಶ್ರೀ ಪರಮಾತ್ಮನು ಕಾರಣನಾಗಿದ್ದಾನೆ. **"ಜ್ವರ"**–ಎಂಬ ಶಬ್ದವಾಚ್ಯ ಅಕ್ಷರ ಸಾಂಕೇತ ಭಗವದ್ರೂಪಗಳ ವಿವರ ಇಂತಿದೆ :–

(1) ಜ್ವರ = ಜ + ವ = ೩ + ೪ (ಸಂಯುಕ್ತಾಕ್ಷರ) = ೭
(2) ರ = ಅವರ್ಗೀಯ ವ್ಯಂಜನಾಕ್ಷರ = ೨

ವಾಮಾಂಕ ರೀತ್ಯಾ ೨೭ ರೂಪಗಳಾಗುವುವು, ಇಂತು ಶ್ರೀಹರಿಯು ೨೭ ರೂಪಗಳಿಂದ ಜ್ವರಶಬ್ದವಾಚ್ಯನಾಗಿ ಜ್ವರವೆಂಬ ರೋಗಕ್ಕೆ ಕಾರಣನಾಗಿದ್ದಾನೆ.

(೨) ಆರೋಗಾದ್ಯುಪದ್ರವಗಳಿಗೆ ಮೂಲವಾದ ಜ್ವರವನ್ನು ನಿವಾರಣೆಮಾಡಿ, ದೇಹಕ್ಕೆ ಆರೋಗ್ಯಭಾಗ್ಯವನ್ನು ಕೊಡುವವನು **"ಹರ"** ನಾಮಕನಾದ ಆ ಪರಮಾತ್ಮನೇ. ಜ್ವರಪರಿಹಾರಕವಾದ ಔಷಧಿಗಳಲ್ಲಿ "ಹರ" ಶಬ್ದವಾಚ್ಯನಾಗಿದ್ದು, ಜ್ವರಹರನಾಗಿದ್ದಾನೆ. "ಹರ" ಶಬ್ದವಾಚ್ಯಭಗವದ್ರೂಪಗಳ ಅಕ್ಷರಸಾಂಕೇತದ ವಿವರ ಇಂತಿದೆ:-

(1) ಹ = ಅವರ್ಗೀಯ ವ್ಯಂಜನಾಕ್ಷರ = ೮
(2) ರ = ಅವರ್ಗೀಯ ವ್ಯಂಜನಾಕ್ಷರ = ೨

ವಾಮಾಂಕಗತಿಯಿಂದ ೨೮ ರೂಪಗಳಾಯಿತು. ಹೀಗೆ ೨೮ ರೂಪಗಳಿಂದ "ಹರ" ಶಬ್ದವಾಚ್ಯನಾಗಿ ಶ್ರೀಪರಮಾತ್ಮನು ರೋಗಪರಿಹಾರಕನಾಗಿದ್ದಾನೆ.

(೩) ಕರುಣಾಸಮುದ್ರನಾದ ಶ್ರೀಪರಮಾತ್ಮನಿಗೆ **"ಭಯಕೃತ್ ಭಯನಾಶನ"**—ಎಂಬ ಬಿರುದು. ಇದು ಅನ್ವರ್ಥನಾಮ ಶ್ರೀಹರಿಗೆ. ವಿಪತ್ತು, ರೋಗ ಮುಂತಾದವುಗಳಿಗೆ ಕಾರಣನೂ ಅವನೇ; ಅವುಗಳ ಪರಿಹಾರಕನೂ ಅವನೇ. ಅನಾದಿಲಿಂಗಗತ ತ್ರಿಗುಣಗಳ ಸಂಬಂಧದ ಫಲರೂಪವಾದ ಕರ್ಮಪರಂಪರೆಯಿಂದಾಗಿ, ಸ್ಥೂಲದೇಹಕ್ಕೆ ರೋಗಾದ್ಯುಪದ್ರವಗಳು ಉಂಟಾಗುತ್ತಿರುವುವು. ದೇಹಗತ ಜೀವನಿಗೆ ಇದರಿಂದಾಗಿ ದುಃಖಾದಿಗಳ ಅನುಭವ. ಇಂತಹ "ಭಯಕೃದ್ಭಯನಾಶನ"ನಾದ ಶ್ರೀಪರಮಾತ್ಮನಿಗೆ **"ಜ್ವರಹರ"** ನೆಂದು ಪ್ರಸಿದ್ಧನಾಮ. "ಜ್ವರಹರ" ನಾಮಕ ಭಗವದ್ರೂಪವು ಕ್ಷ-ಕಾರ ಪ್ರತಿಪಾದ್ಯನಾದ **ಶ್ರೀನೃಸಿಂಹ**

**ದೇವರು.** ಚಿದ್ದೇಹವಾದ ಸ್ವರೂಪದೇಹದಲ್ಲಿ ವಿದ್ಯಮಾನನಾಗಿರುವ ಜೀವಸ್ಥಿತ ಶ್ರೀನರಸಿಂಹನಾಮಕ ಶ್ರೀಪರಮಾತ್ಮನು "**ಜ್ವರಹರ**" ಶಬ್ದ ವಾಚ್ಯನಾಗಿದ್ದಾನೆ. ಅದರ ಅಕ್ಷರಸಾಂಕೇತ ಭಗವದ್ರೂಪಗಳ ವಿವರ ಇಂತಿದೆ:—

(1) **ಜ್ವ** = ಜ + ವ = ೩ + ೪ (ಸಂಯುಕ್ತಾಕ್ಷರ) = ೭
(2) **ರ** = ಅವರ್ಗೀಯ ವ್ಯಂಜನಾಕ್ಷರ = ೨
(3) **ಹ** = ಅವರ್ಗೀಯ ವ್ಯಂಜನಾಕ್ಷರ = ೮
(4) **ರ** = ಅವರ್ಗೀಯ ವ್ಯಂಜನಾಕ್ಷರ = ೨

ವಾಮಾಂಕ ರೀತ್ಯಾ ೨೮೨೭ ರೂಪಗಳಾಗುವುವು. ಇಂತು ಶ್ರೀಲಕ್ಷ್ಮೀ ನರಸಿಂಹಮೂರ್ತಿಯು "ಜ್ವರಹರ" ಶಬ್ದವಾಚ್ಯನಾಗಿ ೨೮೨೭ ರೂಪಗಳಿಂದ ಇದ್ದು, ರೋಗಾದ್ಯುಪದ್ರವಗಳನ್ನು ಪರಿಹಾರ ಮಾಡುತ್ತಿರುವನು.

(೪) ಈ ವಿಚಾರದಲ್ಲಿ ಪುರಾಣ ಪ್ರಸಿದ್ಧವಾದ ಆಖ್ಯಾನ ಉಂಟು. ಅನಿರುದ್ಧನು ರುಕ್ಮಿಣಿ ಕೃಷ್ಣನ ಪುತ್ರನಾದ ಪ್ರದ್ಯುಮ್ನನನ ಮಗನು. ಬಾಣಾಸುರನ ಮಗಳು ಉಷೆ. ಉಷೆಯು ಅನಿರುದ್ಧನಲ್ಲಿ ಅನುರಕ್ತಳಾಗಿ, ಅವನನ್ನು ರಹಸ್ಯವಾಗಿ ಕರೆಸಿಕೊಂಡು, ಅಂತಃಪುರದಲ್ಲಿ ಅವನೊಡನೆ ಸುಖದಿಂದ ಕಾಲಕಳೆಯುತ್ತಿದ್ದಳು. ಇದು ಬಾಣಾಸುರನಿಗೆ ಗೊತ್ತಾಗಿ ಕೋಪದಿಂದ ಅನಿರುದ್ಧನನ್ನು ಹಿಡಿದು, ಸೆರೆಯಲ್ಲಿಟ್ಟನು. ಆಗ ಶ್ರೀಕೃಷ್ಣನು ಅನಿರುದ್ಧನನ್ನು ಸೆರೆಯಿಂದ ಬಿಡಿಸಲು ಉದ್ಯುಕ್ತನಾಗಿ ಬಾಣಾಸುರನೊಡನೆ ಯುದ್ಧಕ್ಕೆ ನಿಂತನು. ಬಾಣಾಸುರನು ಶಿವನ ಅಂತರಂಗಭಕ್ತ. ಅವನು ಮಹೇಶ್ವರನನ್ನು ಮೊರೆಹೋಗಲು, ರುದ್ರದೇವರು "ಶಿವಜ್ವರ"ವನ್ನು ಸೃಷ್ಟಿಸಿ, ಅದನ್ನು ಪ್ರಯೋಗಿಸಿದರು. ಬಲರಾಮನು ಆ ಜ್ವರದಿಂದ ಬಾಧಿತನಾಗಲು, ಶ್ರೀಕೃಷ್ಣನು ಬಲರಾಮನನ್ನು ಆಲಂಗಿಸಿಕೊಂಡನು. ಆಗ ಆ ಉಗ್ರಜ್ವರವು ಶ್ರೀಕೃಷ್ಣನ ದೇಹವನ್ನು ಪ್ರವೇಶಿಸಿತು. ಅದರಿಂದ ಬಾಧಿತನಾದಂತೆ ಅಭಿನಯಿಸಿ, ಶ್ರೀಕೃಷ್ಣನು ಆ ಜ್ವರಾಭಿಮಾನಿಯನ್ನು

ತನ್ನ ಮುಷ್ಟಿಪ್ರಹಾರದಿಂದಲೇ ಪರಾಭವಗೊಳಿಸಿ, "ವಿಷ್ಣುಜ್ವರ"ವನ್ನು ತನ್ನ ಸಂಕಲ್ಪಮಾತ್ರದಿಂದಲೇ ಸೃಷ್ಟಿಸಿ, ರುದ್ರನಲ್ಲಿಗೆ ಕಳುಹಿಸಿದನು. ಆ ವಿಷ್ಣುಜ್ವರದ ಆವೇಶವನ್ನು ತಾಳಲಾರದೆ, ತನ್ನೊಡನೆ ಯುದ್ಧಕ್ಕಾಗಿ ಬಂದಿದ್ದ ರುದ್ರದೇವರು ಕೃಷ್ಣನಿಗೆ ಶರಣಾಗತರಾಗಲು, ಕರುಣಾಮಯನಾದ ಶ್ರೀಕೃಷ್ಣನು ವಿಷ್ಣುಜ್ವರವನ್ನು ಉಪಸಂಹರಿಸಿ, ಶಿವಜ್ವರವು ಮಾತ್ರ ಭೂಮಿಯಲ್ಲಿರುವಂತೆ ಅನುಗ್ರಹಿಸಿದನು. ಈ ಜ್ವರವು ಹರಸಂಬಂಧವಾದುದರಿಂದ "ಹರ" ಶಬ್ದಪ್ರಯೋಗ. ಅಂತಹ ಶಿವಜ್ವರದಲ್ಲಿ "ಜ್ವರ"ನಾಮಕನಾಗಿಯೂ, ಅದನ್ನು ಸೃಷ್ಟಿಸಿದ ಹರನಲ್ಲಿ "ಹರ" ನಾಮಕನಾಗಿಯೂ ಶ್ರೀರುದ್ರದೇವರ ಬಿಂಬನಾದ ಶ್ರೀಸಂಕರ್ಷಣಾಭಿನ್ನ ಲಕ್ಷ್ಮೀನರಸಿಂಹದೇವರು "ಜ್ವರಹರ" ನಾಮಕನಾಗಿದ್ದಾರೆ ಎಂಬುದೇ ಈ ಪ್ರಮೇಯಾರ್ಥವು.

(೫) ಅಂತಹ "ಜ್ವರಹರ" ನಾಮಕನಾದ ನೃಸಿಂಹನನ್ನು ನಿರಂತರದಲ್ಲಿಯೂ ಧ್ಯಾನೋಪಾಸನೆ ಮಾಡುತ್ತಿರಬೇಕು. ಶ್ರೀಲಕ್ಷ್ಮೀನರಸಿಂಹದೇವರ ಸ್ಮರಣೆ ಮಾತ್ರದಿಂದ ಸಮಸ್ತ ದುರಿತಗಳು ಪರಿಹಾರವಾಗುವುವು. ಇದಕ್ಕೆ ಸುಂದರವಾದ ದೃಷ್ಟಾಂತವನ್ನು ದಾಸರಾಯರು ಕೊಟ್ಟಿರುತ್ತಾರೆ. ಸೂರ್ಯನ ಕಿರಣಗಳು ಬಿದ್ದೊಡನೆ, ಮುಸುಕಿರುವ ಮಂಜು ಮಾಯವಾಗುವುದು. ಅಂತೆಯೇ ದೇಹಕ್ಕೆ ಬಾಧಾರೂಪವಾದ ರೋಗಾದ್ಯುಪದ್ರವ್ಯಗಳು, ನರಸಿಂಹನ ಸ್ಮರಣೆ ಮಾತ್ರದಿಂದ ಪರಿಹಾರವಾಗುವುವು ಎಂದು ಪದ್ಯದ ತಾತ್ಪರ್ಯಾರ್ಥ ||೧೬||

# ಪದ್ಯ (೧೭)

**ಮೂಲ :-**

**ಮಾಸಪರಿಯಂತರವು ಬಿಡದೆ ನೃ ।**
**ಕೇಸರಿಯ ಶುಭನಾಮ ಮಂತ್ರ ಜಿ ।**
**ತಾಸನದಲೇಕಾಗ್ರಚಿತ್ತದಿ ನಿಷ್ಕಪಟದಿಂದ ॥**
**ಬೇಸರದೆ ಜಪಿಸಲು ವೃಜಿನಗಳ ।**
**ನಾಶಗೈಸಿ ಮನೋರಥಗಳ ಪ ।**
**ರೇಶ ಪೂರ್ತಿಯ ಮಾಡಿಕೊಡುವನು ಕಡೆಗೆ ಪರಗತಿಯ ॥೧೭॥**

**ಅವತರಣಿಕೆ :-**

ಒಂದು ತಿಂಗಳ ಕಾಲ ಎಡಬಿಡದೆ ಶ್ರೀಲಕ್ಷ್ಮೀನರಸಿಂಹದೇವರ "ಜಯ ಜಯ ನರಸಿಂಹಾಯ ಸರ್ವಜ್ಞಾಯ ಮಹಾತೇಜೋಬಲ ವೀರ್ಯಾಯ"— ಎಂಬ ೨೪ ಮಂತ್ರಾಕ್ಷರ ಗಾಯತ್ರೀ ಛಂದಸ್ಸಿನ ಮಂತ್ರ ಮತ್ತು "ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಂ । ನೃಸಿಂಹಂ ಭೀಷಣಂ ಭದ್ರಂ ಮೃತ್ಯೋರ್ಮೃತ್ಯುಂ ನಮಾಮ್ಯಹಂ"—ಎಂಬ ಮಂತ್ರ ವನ್ನು ಏಕಾಗ್ರಚಿತ್ತನಾಗಿ ಕುಳಿತು, ಜಿತಕರಣನಾಗಿ ಅಹಂ ಮದುತಾ ರಹಿತ ನಾಗಿ ನಿರ್ವಂಚನೆಯಿಂದ ಕೇವಲ ವಿಷ್ಣುಪ್ರೀತ್ಯರ್ಥವಾಗಿ ಜಪಿಸಿದರೆ, ಸಮಸ್ತಪಾಪಗಳನ್ನು ಕ್ಷಾಳನಗೈಸಿ, ಸರ್ವೋತ್ತಮನಾದ ಶ್ರೀನರಸಿಂಹ ನಾಮಕ ಪರಮಾತ್ಮನು ನಮ್ಮ ಮನದ ಇಷ್ಟಾರ್ಥಗಳನ್ನು ಪೂರೈಸಿ, ಕೊನೆ ಯಲ್ಲಿ ಲಿಂಗಭಂಗಾನಂತರ, ಸ್ವಸ್ವರೂಪಾನಂದಾವಿರ್ಭಾವರೂಪವಾದ ಪರಮಪುರುಷಾರ್ಥ ರೂಪವಾದ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸು ವನು—ಎಂದು ತಿಳಿಸುತ್ತಾರೆ ಶ್ರೀನರಸಿಂಹಮಂತ್ರ ಮಹಾತ್ಮ್ಯೆಯನ್ನು—

**"ಮಾಸಪರಿಯಂತರವು"**—ಎಂಬ ಪ್ರಸಕ್ತ ಸಂಧಿಗತ ೧೭ನೆಯ ಈ ಪದ್ಯದಿಂದ. ॥೧೭॥

**ಪ್ರತಿಪದಾರ್ಥ :–**

**ಮಾಸಪರಿಯಂತರವು**= ಒಂದು ತಿಂಗಳು ಪೂರ್ತಿಯಾಗಿ, **ಬಿಡದೆ**= ಅವಿಚ್ಛಿನ್ನವಾಗಿ, **ನೃಕೇಸರಿಯ**= ಶ್ರೀ ನರಸಿಂಹರೂಪಿ ಪರಮಾತ್ಮನ **ಶುಭನಾಮ**= ಮಂಗಳಕರವಾದ ನರಸಿಂಹಮಂತ್ರವನ್ನು, ಅಂದರೆ–"**ಉಗ್ರ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಂ । ನೃಸಿಂಹಂ ಭೀಷಣಂ ಭದ್ರಂ ಮೃತ್ಯೋರ್ಮೃತ್ಯುಂ ನಮಾಮ್ಯಹಂ**"– ಎಂಬ ೩೨ ಅಕ್ಷರಗಳುಳ್ಳ ಮಹಾಮಂತ್ರವನ್ನು ತನ್ನ" **ಜಿತಾಸನದಲಿ**= ನಿಶ್ಚಂಚಲತೆಯಿಂದ ಜಿತಚಿತ್ತನಾಗಿ ಸ್ಥಿರವಾದ ಆಸನದಲ್ಲಿ ಕುಳಿತು **ಏಕಾಗ್ರ ಚಿತ್ತದಿ** = ತದೇಕ ಮನಸ್ಕನಾಗಿ, **ನಿಷ್ಕಪಟಲದಿಂದ**=ಅಹಂ ಮಮತಾದಿ ರಹಿತನಾಗಿ ಕೇವಲ ವಿಷ್ಣುಪ್ರೇರಣಯಾ, ವಿಷ್ಣುಪ್ರೀತ್ಯರ್ಥವಾಗಿ **ಬೇಸರದೆ** = ಬೇಸರಪಟ್ಟುಕೊಳ್ಳದೆ, **ಜಪಿಸಲು** ಜಪಮಾಡಲು **ವೃಜಿನಗಳ**= ಸತ್ಸಾಧನೆಗೆ ಪ್ರತಿಬಂಧಕಗಳಾದ ಪಾಪಗಳನ್ನು **ನಾಶಗೈಸಿ**=ಪರಿಹರಿಸಿ (ಹತ್ತಿರಕ್ಕೆ ಸುಳಿಯದಂತೆ ಮಾಡಿ) **ಮನೋರಥಗಳ**= ಮನಸ್ಸಿನ ಅಭಿಲಾಷೆಗಳನ್ನು, ಮುಖ್ಯವಾಗಿ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ಸಾಧನ ಸಾಮಗ್ರಿಗಳನ್ನು **ಪೂರ್ತಿಯ ಮಾಡಿ**= ಸಲ್ಲಿಸಿ, **ಕಡೆಗೆ**= ಪರದಲ್ಲಿ **ಪರೇಶ**=ಪರನಾಮಕಳಾದ ಶ್ರೀಲಕ್ಷ್ಮೀದೇವಿಯರಿಗಿಂತಲೂ ಶ್ರೇಷ್ಠನಾದ ಸರ್ವೋತ್ತಮನಾದ ಶ್ರೀ ಪರಮಾತ್ಮನು **ಪರಗತಿಯ**=ಪರಮ ಪುರುಷಾರ್ಥ ರೂಪವಾದ ಮುಕ್ತಿಯನ್ನು **ಕೊಡುವನು**=ಕೊಡುತ್ತಾನೆ. ॥೧೭॥

## ವ್ಯಾಖ್ಯಾನಗಳು

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–**

ಪೂರ್ವೋಕ್ತ ನೃಸಿಂಹ ಮಂತ್ರವನ್ನು ಜಪಿಸಿ ಉದ್ಧಾರವಾಗಬೇಕೆಂದು ಹೇಳತಾರೆ.

ಮಾಸ ಪರಿಯಂತರವು—ಒಂದು ತಿಂಗಳು ಪೂರ್ತಿಯಾಗಿ, ಬಿಡದೆ– ಅವಿಚ್ಛಿನ್ನವಾಗಿ ಬಿಡದೇ, ನೃಕೇಸರಿಯ–ಶ್ರೀನೃಸಿಂಹರೂಪಿ ಪರಮಾತ್ಮನ ಹೃದಯಾಕಾಶದಲ್ಲಿ ನಿಲ್ಲಿಸಿ, ಆ ರೂಪವನ್ನು ಧ್ಯಾನಮಾಡುತ್ತ, ಶುಭನಾಮ– ಮಾಂಗಳಕರವಾದ– "ಶ್ರೀನೃಸಿಂಹಾಯ ನಮಃ"– ಎಂತಲೂ, ಮಂತ್ರ– "ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಂ । ನೃಸಿಂಹಂ ಭೀಷಣಂ ಭದ್ರಂ ಮೃತ್ಯೋರ್ಮೃತ್ಯುಂ ನಮಾಮ್ಯಹಮ್" ॥ ಎಂಬ ಮಂತ್ರವನ್ನು ಪ್ರಾಣಾಯಾಮಪೂರ್ವಕ ನ್ಯಾಸ ಧ್ಯಾನಶ್ಲೋಕಗಳಿಂದ ಸಹಿತ ಜಿತಾಸನದಲಿ– ಅಚಂಚಲವಾದ ಜಿತ ಚಿತ್ತದಿಂದ ಕೃಷ್ಣಾಜಿನಾದಿ ಯೋಗ್ಯ ವಾದ ಆಸನದಲ್ಲಿ ವಿಧ್ಯುಕ್ತ ಪ್ರಕಾರ ಕೂತವನಾಗಿ, ಏಕಾಗ್ರಚಿತ್ತದಿ–ಒಂದೇ ಮನಸ್ಸಿನಿಂದ ಯುಕ್ತನಾಗಿ, ನಿಷ್ಕಪಟದಿಂದ–ಅಹಂಮಮರಹಿತನಾಗಿ ಕೇವಲ ಶ್ರೀವಿಷ್ಣು ಪ್ರೀತಿಕರವಾಗಿ. ಜಪಿಸಲು–ಸಂತೋಷದಿಂದ ಆದರಪೂರ್ವಕ ಜಪಿಸಲು, ವೃಜಿನಗಳ–ಸತ್ಸಾಧನೆಗೆ ಪ್ರತಿಬಂಧಕಗಳ, ನಾಶಗೈಸಿ–ದೂರ ಓಡಿಸಿ ಮತ್ತೂ ಪ್ರವೇಶ ಮಾಡಧಾಂಗೆ ಮತ್ತು ಬಾರದಾಂಗೆ ಅದರನ್ನ ಬೆನ್ನು ಹತ್ತಿ ಓಡಿಸಿ. ಮನೋರಥಗಳ– ಮುಖ್ಯವಾಗಿ ಅಧಿಕಾರಿಗೆ ಬೇಕಾದದ್ದು ಜ್ಞಾನ, ಭಕ್ತಿ. ವೈರಾಗ್ಯಗಳು. ಇದಕ್ಕೆ ಅನುಸಾರಿಯಾದ ಐಶ್ವರ್ಯ ಗಳ, ಪೂರ್ತಿಯ ಮಾಡಿ– ಯೋಗ್ಯತಾನುಸಾರ ಪೂರ್ತಿಯಾಗಿ, ಪರೇಶ– ಸರ್ವೋತ್ತಮನಾದ ಶ್ರೀನೃಸಿಂಹ ದೇವರು, ಕಡೆಗೆ–ಇಹದಲ್ಲಿ ಕೊಟ್ಟು, ಅಧಿಕಾರಿ ಮೃತನಾದನಂತರ, ಪರಗತಿಯ– ಉತ್ತಮವಾದ ಮಹರಾದಿ ಲೋಕಗಳಲ್ಲಿ ಇಟ್ಟು, ಬ್ರಹ್ಮಣಾಸಹ ಮುಕ್ತಿಯನ್ನು ಕೊಡತಾನೆ. ಕೊಡು ವವನು– ಇನ್ನೂ ಇಹದಲ್ಲಿ ದಿವ್ಯ ಅಪರೋಕ್ಷಜ್ಞಾನವನ್ನು ಕೊಡತಾನೆ ಎಂತ ತಾತ್ಪರ್ಯ ॥೧೭॥

**(೨) "ಭಾವಪ್ರಕಾಶಿಕೆ" —ವ್ಯಾಖ್ಯಾನ :—**

ಈ ಪದ್ಯದಿಂದ ನರಸಿಂಹದೇವರ ಮಂತ್ರೋಪಾಸನೆಯ ಫಲದನ್ನು ಹೇಳುತ್ತಾರೆ– ಒಂದು ತಿಂಗಳವರೆಗೂ ಅವಿಚ್ಛಿನ್ನವಾಗಿ ಶುಭಕರವಾದ

ನರಸಿಂಹ ನಾಮುಗಳಿಂದ ಕೂಡಿದ ಮಂತ್ರವನ್ನು ಜಪಿಸಬೇಕು. ಆ ಮಂತ್ರವನ್ನು ಅದನ್ನು ಜಪಿಸುವ ಕ್ರಮವನ್ನು **ತಂತ್ರಸಾರ**ದಲ್ಲಿ ಹೇಳಿರುವರು.

"ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಮ್ ।
ನೃಸಿಹಂ ಭೀಷಣಂ ಭದ್ರಂ ಮೃತ್ಯೋರ್ಮ್ಯೇ ರ್ಮೃತ್ಯುಂ ನಮಾಮ್ಯಹ್ಯಮ್॥"
–ಎಂಬ ೩೨ ಅಕ್ಷರಗಳುಳ್ಳ ಮಹಾಮಂತ್ರವನ್ನು ಚಲಿಸದೆ ಆಸನದಲ್ಲಿ ಕೂತು. ಏಕಾಗ್ರಚಿತ್ತನಾಗಿ ಜಪಿಸಬೇಕು. ಮಸ್ಸಿನಲ್ಲಿ ಭಕ್ತಿಯಿಲ್ಲದೆ ಜನರು ಮೆಚ್ಚುವುದಕ್ಕಾಗಿ ಮಾಡುವುದು ಕಪಟವೆನಿಸುವುದು. ಹಾಗಲ್ಲದೆ ಭಕ್ತಿಯಿಂದ ಆಲಸ್ಯ ಬಿಟ್ಟು. ಜಪಿಸಿದರೆ, ಸಕಲಪಾಪಗಳನ್ನೂ ಪರಿಹರಿಸಿ, ಸರ್ವೇಶನಾದ ಶ್ರೀ ಹರಿಯು ಅವರ ಮನೋಭೀಷ್ಟವನ್ನು ಪೂರೈಸಿ. ಕಡೆಗೆ ಉತ್ತಮವಾದ ಗತಿಯನ್ನು ಕೊಡುವನು. ॥೧೭॥

**(೩) "ಭಾವ ದರ್ಪಣ ಟೀಕಾ" – ವ್ಯಾಖ್ಯಾನ –**

**"ಚತುರ್ವಿಂಶಾಕ್ಷರೋಮಂತ್ರೋ ನಿಖಿಲೇಷ್ಟಪ್ರದಾಯಕ"–** ಇತಿ ವಚನಾತ್ । ನೃಸಿಂಹ ಮಂತ್ರ ಏಕಾಗ್ರಬಿತ್ತನಾಗಿ ಜಪಿಸಬೇಕೆಂದು ಹೇಳುತ್ತಾರೆ– "ಮಾಸಪರಿಯಂತೇತಿ" ॥೧೭॥

**(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–**

"ಮಾಸ"– ಇತಿ॥ ಏಕಾಗ್ರೇತ್ಯುಪಲಕ್ಷಣಮ್ ॥ ಶೌಚಮಾಚನಂ ಸ್ನಾನಂ ಮೌನಮಾತ್ಮ ವಿನಿಗ್ರಹಃ ॥ ಅವ್ಯಗ್ರತ್ವಂ ಅನಿರ್ವೇದಃ ಉಪಸಂಪತ್ತಿ ಹೇತವೇ ॥ ಅನ್ಯೇ ಅನ್ಯತ್ರ ಪ್ರೋಕ್ತಾಧಿಕಾಂ ಗುಣಾಃ ಗ್ರಾಹ್ಯಾಃ ॥ ಸ್ವಸ್ವವರ್ಣಾಶ್ರಮಾಚಾರ್ಯೈಃ ದುರಾಚಾರ ವಿವರ್ಜತ್ಯೈಃ ॥ ಏತೇ ಮಂತ್ರಾಃ ಉಪಾಸ್ಯಾಃ ಸ್ಯುಃ ಅನ್ಯಥಾ ಫಲಪ್ರದಾಃ ॥ ನರಸಿಂಹ ಹಯಗ್ರೀವ ಹಂಸ ವಾರಾಹ ಭಾರ್ಗವಾಃ । ಕಪಿಲ ವ್ಯಾಸ ದತ್ತಾದ್ಯಾಃ ದ್ವಿಜಾನಾಮೇವ ಕೀರ್ತಿತಾಃ ॥ ಪರದಾರ ಪರದ್ರವ್ಯ ದುಷ್ಪ್ರತಿಗ್ರಹ ವರ್ಜಿತ್ಯೈಃ ॥ ಏತೇ ಮಂತ್ರಾಃ ಉಪಾಸ್ಯಾಃ ಸ್ಯುಃ ಅನ್ಯಥಾ ನ ಫಲಪ್ರದಾಃ । ಹಿಂಸಾಯಾದಿ ವಿಮುಖಾಯೇತು ಜಿತಶ್ವಾಸಾಃ ಜಿತೇಂದ್ರಿಯಾಃ । ಮಂತ್ರಾಃ ಉಪಾಸ್ಯಾಃ ಸ್ಯುಃ ॥

ವಿಷ್ಣುಭಕ್ತಿಃ ದೃಢಾ ಯೇಷಾಂ ದಾನೇ ಚಿತ್ತಂ ಸ ದೈವತು । ಏತೇ ಮಂತ್ರಾಃ ಉಪಾಸ್ಯಾಃ ಸ್ಯುಃ । ಈಶ್ವರಾರ್ಪಿತ ಸರ್ವಸ್ವಾಃ ನ್ಯಾಯಾಗತ ಧನಾಶ್ಚರ್ಯೇ। ಏತೇ ಮಂತ್ರಾಣಿ ಉಪಾಸ್ಯಾಃ ಸ್ವಸ್ಥ ಚಿತ್ತೈಃ ಧ್ಯಾನಪರೈಃ ಅಕ್ರೋಧೈಃ ಅತಿಥಿಪ್ರಿಯೈಃ ॥ ತತ್ರಾಪಿ ಚ ಹಯಗ್ರೀವ ನರಸಿಂಹ ವರಾಹತಾಃ ॥ ಭಾರ್ಗವಾಶ್ಚ ದುರಾಚಾರೈಃ ನೈವ ಸೇವ್ಯಾಃ ಕಥಂಚನ॥ ಏತನ್ಮಂತ್ರೋಪಾಸಕಾಃ ಯೇ ಯದಿಸ್ಯುಃ ಪಿಶಾಚಕಾಃ ॥ ರಾಮ ಗೋಪಾಲ ಕೃಷ್ಣಾದ್ಯಾಃ ಹರಿ ದಾಮೋದರಾಚ್ಯುತಾಃ ॥ ಮತ್ಸ್ಯ ವಾಮನ ಕೂರ್ಮಾದ್ಯಾಃ ಸರ್ವೇ ಸ್ಯುಃ ಸೌಮ್ಯ ರೂಪಿಣಃ । ನ ಕುಪ್ಯಂತಿ ದುರಾಚಾರೈಃ ಸದಾಚಾರೈಃ ಫಲಾಧಿಕಮ್। **ಇತಿ ವಿಷ್ಣುರಹಸ್ಯೇ ॥೧೭॥**

**ಕನ್ನಡಾರ್ಥ :–**

"ಏಕಾಗ್ರಚಿತ್ತ"ದಿಂದ ಮಂತ್ರೋಪಾಸನೆ ಮಾಡಬೇಕು. ಆ ಉಪಾಸನೆಯು ಫಲಪ್ರದವಾಗಲು ಉಪಯುಕ್ತವಾದ ನಿಯಮಾನುಷ್ಠಾನದಿಳು ಅತ್ಯಗತ್ಯ.

ಶೌಚ-ಶುಚಿತ್ವ-ಸ್ನಾನ-ಸ್ಥಿರಾಸನ-ಮೌನ-ದೇಹ ಇಂದ್ರಿಯ ಮನಸ್ಸು ಮತ್ತು ಬುದ್ಧಿಗಳ ಸಂಯಮ-ಚಿತ್ತಪ್ರಸನ್ನತೆ-ಸಾಧನಾನುಷ್ಠಾನದಲ್ಲಿ ನಿರತಿಶಯ ಪ್ರಯತ್ನ ಇತ್ಯಾದಿ ಅತ್ಯಗತ್ಯ. ತಮ್ಮ ತಮ್ಮ ವರ್ಣಾಶ್ರಮೋಚಿತವಾದ ಧರ್ಮ ಕರ್ಮಾನುಷ್ಠಾನ ಮಾಡುತ್ತಾ, ದುರಾಚರಣೆ ತ್ಯಜಿಸಿದವರಿಗೆ ಮಾತ್ರ ನರಸಿಂಹ ಮಂತ್ರೋಪಾಸನೆಗೆ ಅಧಿಕಾರ. ಅವರಿಗೆ ಮಾತ್ರ ಮಂತ್ರ ಫಲಸಿದ್ಧಿ. ಅನಧಿಕಾರಿಗಳಿಗೆ ಫಲಪ್ರಾಪ್ತಿ ಇಲ್ಲ. ನರಸಿಂಹ, ಹಯಗ್ರೀವ, ಹಂಸ, ವರಾಹ, ಭಾರ್ಗವ, ಕಪಿಲ, ವ್ಯಾಸ, ದತ್ತ ಇವೇ ಮುಂತಾದ ಮಂತ್ರೋಪಾನೆಗೆ ದ್ವಿಜರೇ ಅಧಿಕಾರಿಗಳು. ನರಸಿಂಹ ಮಂತ್ರೋಪಾಸನೆಗೆ ಈ ಅಧಿಕಾರಿಗಳಿರಬೇಕು. ಪರಸ್ತ್ರೀ, ಪರಧನ ಇವುಗಳಿಂದ ದೂರವಾಗಿರುವುದು, ದುಷ್ಟರಿಂದ ದಾನಸ್ವೀಕಾರ ಕೂಡದು. ಹಿಂಸಾಚಾರ ವಿವರ್ಜಿತರಾಗಿರಬೇಕು. ಶ್ವಾಸೇಂದ್ರಿಯ ನಿಗ್ರಹಬೇಕು. ದೃಢವಾದ ವಿಷ್ಣುಭಕ್ತಿವುಳ್ಳವರಾಗಿರಬೇಕು, ದಾನದಲ್ಲಿ ಸದಾ ಮನಸ್ಸುಳ್ಳವರಾ

ಗಿರಬೇಕು, ಸಮಸ್ತವನ್ನೂ ಭಗವದರ್ಪಣ ಮಾಡಬೇಕು. ನ್ಯಾಯಮಾರ್ಗದಿಂದ ದ್ರವ್ಯದ ಗಳಿಕೆ, ಸ್ವಾಸ್ಥ್ಯಚಿತ್ತ, ಧ್ಯಾನಪರರು, ಕ್ರೋಧವಿರಹಿತರೂ ಅತಿಥಿ ಸತ್ಕಾರನಿರತರೂ ಆಗಿರಬೇಕು. ಅಂತಹ ಅಧಿಕಾರಿಗಳಿಗೇ ಈ ಮಂತ್ರವು ಸಿದ್ಧಿಸುವುದು. ಫಲದಾಯಕವಾಗುವುದು, ಅದರಲ್ಲೂ ಹಯಗ್ರೀವ, ನರಸಿಂಹ, ವರಾಹ, ಭಾರ್ಗವ ಮುಂತಾದ ಮಂತ್ರಗಳನ್ನು ಸದಾಚಾರ ರಹಿತ ಜಪಿಸಲೇ ಕೂಡದು, ಈ ಮಂತ್ರಜಾಪಕರು ಪರದಾರಾಗಮನದಲ್ಲಿ ಆಸಕ್ತರಾದರೆ, ಅವರು ಆ ಮಂತ್ರ ದೇವತೆಯ ಕ್ಷೋಭೆಗೆ ಒಳಗಾಗುವರು. ಅದರಿಂದ ಮಹಾನರ್ಥವುಂಟಾಗುವುದು. ತಕ್ಷಣ ಅವರಿಗೆ ಪಿಶಾಚ ಜನ್ಮ ಪ್ರಾಪ್ತಿ. ರಾಮ, ಗೋಪಾಲಕೃಷ್ಣ, ಹರಿ, ದಾಮೋದರ, ಅಚ್ಯುತ, ಮತ್ಸ್ಯ, ಕೂರ್ಮ, ವಾಮನ ಮುಂತಾದವು ಶ್ರೀ ಪರಮಾತ್ಮನ ಸೌಮ್ಯ ರೂಪಗಳು, ಅಚಾರ ವಿಚಾರಗತಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಕುಪಿತ ರಾಗುವುದಿಲ್ಲ. ವಿಶೇಷ ಸದಾಚಾರಸಂಪನ್ನತೆ—ಶ್ರದ್ಧಾ ಸಕ್ತಿಗಳಿರುವುದು– ಹೀಗಿದ್ದರೆ, ಫಲ ಅತ್ಯಧಿಕ– ಈ ವಿವರಗಳು **ವಿಷ್ಣುರಹಸ್ಯದಲ್ಲಿ** ಉಕ್ತವಾಗಿವೆ. ॥೧೭॥

## (೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ

ಒಂದು ಮಾಸ ಶ್ರೀನೃಸಿಂಹ ಮಂತ್ರಜಪದ ಮಹಿಮಾ ಹೇಳುತ್ತಾರೆ– ಒಂದು ತಿಂಗಳ ಕಾಲ ಶಕ್ತ್ಯಾನುಸಾರ ಕಾಲಕ್ಲುಪ್ತಿ ಇಟ್ಟುಕೊಂಡು. ಜಿತಾಸನದಲಿ ಅಂದರೆ, ಕೂತಿರುವ ಸ್ವಾಸ್ತಿಕ, ಪದ್ಮಪೀಠಾದಿಗಳ ಕದಲದೆ, ಏಕಾಗ್ರಚಿತ್ತವೆಂಬ ದೃಢಮನಸ್ಸಿನಿಂದ, ನಿಷ್ಕಪಟದಿಂದ ಅಂದರೆ– (೧) ಜೀವ ಜೀವಗಳಿಗೆ ದೇವರಿಗೂ ಸಹ ಅಭೇದ ತಿಳವುದು. (೨) ದೇವರು ಅಪ್ರಾಕೃತ ಗುಣರಹಿತನೆಂದು ತಿಳಿಯುವುದು. (೩) ತಾರ್ಕಿಕರಂತೆ ದೇವರಿಗೆ ವಿಭುತ್ವಾದಿ ಎಂಟೇ ಗುಣವೆಂದು ಚಿಂತಿಸುವುದು. (೪) ವಿಷ್ಣುಸಮರು ಅಥವಾ ಅಧಿಕರೆಂದು ಸಹ ಶಿವಾದಿ ದೇವತೆಗಳನ್ನು ತಿಳಿಯುವುದು. (೫) ವಿಷ್ಣುರೂಪ ನೃಸಿಂಹ, ರಾಮಕೃಷ್ಣಾದಿ ರೂಪಗಳಿಗೆ ತಾರತಮ್ಯ ಭೇದಗಳನ್ನು ತಿಳಿಯುವುದು. (೬) ಪೃಥು ನಾರಾದಾದಿಗಳನ್ನು ವಿಷ್ಣು

ರೂಪವೆಂದು ತಿಳಿಯುವುದು. (೭) ಕಪಿಲ, ವ್ಯಾಸ. ಪರಶುರಾಮಾದಿ ಸಾಕ್ಷಾದ್ರೂಪಗಗಳನ್ನು ಕಶ್ಚಿದೃಷಿಗಳೆಂದು ಭಾವಿಸುವುದು (೮) ನಿರ್ದೋಷ ರಾದ ವಿಷ್ಣುಭಕ್ತರ ದ್ವೇಷ (೯) ದೇವರ ವಿಚಾರ ಸರಿಯಾಗಿ ಹೇಳುವ ಗ್ರಂಥಗಳನ್ನು ಕಲ್ಪಿತವೆಂದು ನಿಂದಿಸುವುದು (೯) ನವವಿಧ ಹರಿದ್ವೇಷಕ್ಕೆ ಒಳಪಡದೆ, ಬೇಸರವೆಂಬ ಮನಃ ಕ್ಲೇಶ ಬಿಟ್ಟು, ಶ್ರೀಮನ್ನೃಸಿಂಹ ಎಂಬ ಶುಭನಾಮ ಮಂತ್ರ ಜಪಿಸಿದರೆ, ಪರೇಶನೆಂಬ ಸರ್ವೋತ್ತಮ ಸ್ವಾಮಿ, ಕಡೆಗೆ ಎಂದರೆ ದೇಹಾಂತದಲ್ಲಿ, ಸದ್ಗತಿ ಎಂಬ ಮುಕ್ತಿಯನ್ನು ರುಜೆಗಳೆಂಬ ರೋಗಗಳ ಪರಿಹಾರ ಮಾಡಿಯೂ. ಮನಸ್ಸಿನ ಅಪೇಕ್ಷೆಗಳನ್ನು ತತ್ತತ್ಕಾಲ ದಲ್ಲಿ ಸಲ್ಲಿಸಿಯೂ. ಕೊನೆಗೆ ಕೊಡುವನು. ||೧೭||

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀ ನರಸಿಂಹ ಮಂತ್ರೋಪಾಸನೆಯ ಮಹಿಮೆಯನ್ನು ವಿವರಿಸುತ್ತಾರೆ- **"ಮಾಸಪರಿಯಂತರವು"**-ಎಂಬ ಪ್ರಸಕ್ತ ೧೭ನೆಯ ಈ ಪದ್ಯದಿಂದ.

ಒಂದು ತಿಂಗಳಕಾಲ ಎಡಬಿಡದೆ ಶ್ರೀ ನರಸಿಂಹಮಹಾಮಂತ್ರವನ್ನು ಜಪಿಸಬೇಕೆಂದು ಹೇಳುತ್ತಾರೆ.

ಶ್ರೀ ನರಸಿಂಹಮಹಾಮಂತ್ರವು ಪರಮ ಮಂಗಳಕರವಾದದ್ದು. ಶುಭ ಫಲಪ್ರದಾಯಕವಾದದ್ದು.

(೧) **ಶ್ರೀ ನೃಸಿಂಹಾಯ ನಮಃ"** –ಎಂದು ಸಂಕ್ಷೇಪ ಸರಳ ರೂಪವು.

(೨) **"ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋ ಮುಖಂ । ನೃಸಿಂಹಂ ಭೀಷಣಂ ಭದ್ರಂ ಮೃತ್ಯೋರ್ಮೃತ್ಯುಂ ನಮಾಮ್ಯಹಮ್"** ||

—ಎಂಬ ೩೨ ಅಕ್ಷರಯುಕ್ತವಾದ ಮಹಾಮಂತ್ರವು **ತಂತ್ರಸಾರೋಕ್ತವು.**

ಪೂರ್ವೋಕ್ತ ಶ್ರೀ ನೃಸಿಂಹ ಮಹಾಮಂತ್ರವನ್ನು ಜಿತೇಂದ್ರಿಯನಾಗಿ ಪದ್ಮಾಸನದಲ್ಲಿ ಚಲಿಸದೇ ಕುಳಿತು, ದೃಢಚಿತ್ತದಿಂದ ಜಪಿಸಬೇಕು. ಸಂಯಮಿಯೂ ಜಿತೇಂದ್ರಿಯನೂ ಸದಾಚಾರನಿಷ್ಠನೂ ಆದವನೇ ಈ ಮಂತ್ರೋಪಾಸನೆಗೆ ಅಧಿಕಾರಿಯು. ಹಿಂಸಾಚಾರಿಯೂ, ಪರಸ್ತ್ರೀ ಮತ್ತು ಪರ ದ್ರವ್ಯಾಪೇಕ್ಷೆಯುಳ್ಳವನು. ಈ ಮಂತ್ರವನ್ನು ಜಪಿಸಲು ಅರ್ಹನಲ್ಲ. ಅನಧಿಕಾರಿಯು ಜಪಿಸಲುದ್ಯುಕ್ತನಾದರೆ. ಅವನಿಗೆ ಆನರ್ಥ ಪರಂಪರೆಗಳೇ ಸಂಭವಿಸುವುವು.

ತದೇಕಚಿತ್ತನಾಗಿ ಜಿತಾಸನದಲ್ಲಿ ಕುಳಿತು, ಶ್ರೀನೃಸಿಂಹ ಮಹಾಮಂತ್ರವನ್ನು ಜಪಿಸಬೇಕು. ಜಪಮಾಡುತ್ತಿರುವಾಗ ಸ್ವಲ್ಪವೂ ಬೇಸರವಿರಬಾರದು, ಮನಸ್ಸಿನ ಅಲಸ್ಯ, ಜಪಾನುಷ್ಠಾನದಲ್ಲಿ ಶ್ರದ್ಧಾ ಮತ್ತು ಭಕ್ತಿರಾಹಿತ್ಯ ಇವು ಕೂಡದು, ಅಲಸ್ಯರಹಿತನಾಗಿ ಶ್ರದ್ಧಾ ಭಕ್ತಿಗಳಿಂದ ಸ್ವಲ್ಪವೂ ಬೇಸರಪಟ್ಟು ಕೊಳ್ಳದೆ, ಆ ನರಸಿಂಹ ಮಂತ್ರವನ್ನು ಜಪಿಸುವವರ ಸಮಸ್ತ ಪಾಪಗಳನ್ನೂ ಜ್ವರಹರ ನಾಮಕನಾದ ಆ ಶ್ರೀ ನರಸಿಂಹನ ಶುಭನಾಮ ಪರಿಹರಿಸುವುದು. ಸತ್ಸಾಧನೆಗೆ ದುರಿತ ರಾಶಿಗಳು ಪ್ರತಿಬಂಧಕ, ಇಂತು, ದುರಿತರೂಪದಲ್ಲಿರತಕ್ಕ ಸಮಸ್ತ ಪಾಪಗಳನ್ನೂ ಕ್ಷಾಳನಗೈದು. ನಮ್ಮ ಮನಸ್ಸಿನ ಸಕಲ ಇಷ್ಟಾರ್ಥಗಳನ್ನೂ ಆ ನೃಸಿಂಹ ಮಂತ್ರವು ಈಡೇರಿಸುವುದು, ಮನೋರಥಗಳನ್ನು ಪೂರೈಸುವ ಆ ಕೈವಲ್ಯದಾಯಕನಾದ ಶ್ರೀ ನಾರಸಿಂಹನೇ **ಪರೇಶನು.** ಕ್ಷರವರ್ಗಕ್ಕೆ ಸೇರಿದ ಚತುರ್ಮುಖಬ್ರಹ್ಮದೇವರಿಂದ ಆದಿಯಾಗಿ ಸಮಸ್ತ ತೃಣಾಂತಜೀವರ ಪರ್ಯಂತ ಇರುವ ಜೀವಕೋಟಿಗಳಿಂದ ಉತ್ತಮಳಾದ ಈಶ ಕೋಟಿ ಪ್ರವಿಷ್ಟಳಾದ, ತ್ರಿಗುಣಾಭಿಮಾನಿಯಾದ,ಅಧೋಕ್ಷಜನ ವಕ್ಷಸ್ಥಳ ನಿವಾಸಿನಿಯಾದ ನಿತ್ಯಮುಕ್ತಳೂ, ನಿರ್ವಿಕಾರಳೂ ಆದ, ಶ್ರೀರಮಾದೇವಿಯರು **ಪರ** ನಾಮಕಗಳು, ಅಕ್ಷರವರ್ಗಕ್ಕೆ ಸೇರಿದ ಪರನಾಮಕಳಾದ ಲಕ್ಷ್ಮೀದೇವಿಗೆ ನಿಯಾಮಕನಾದ ಜಗತ್ಪ್ರಭು ಇಂದಿರೇಶನಾದ ಶ್ರೀಮ

ನ್ನಾರಾಯಣನು, ಇದಕ್ಕೆ **ಪರೇಶ** ಎಂದು ಪದಪ್ರಯೋಗ, ಅಂತಹ ಪರೇಶ ನಾಮಕನಾದ ಶ್ರೀ ಪರಮಾತ್ಮನು ಜನನ ಮರಣಾಖ್ಯವಾದ ಭವವೆಂಬ ಈ ಅಗಾಧವಾದ ಸಾಗರವನ್ನು ದಾಟಿಸಿ. ಲಿಂಗಭಂಗದ ದ್ವಾರಾ ಕರ್ಮವಿಮೋಚನೆ ಗೈದು, ಸ್ವಸ್ವರೂಪಾನಂದಾವಿರ್ಭಾವರೂಪವಾದ ಪರಮಪುರುಷಾರ್ಥರೂಪ ವಾದ ಮುಕ್ತಿಯನ್ನು ಅನುಗ್ರಹಿಸುವನು, ಇಂತು, **ಕಡೆಗೆ ಪರಗತಿಯನ್ನು** ಕೊಡುವುದೇ ಈ ನರಸಿಂಹಮಂತ್ರ ಜಪಾನುಷ್ಠಾನದ ಪರಮ ಫಲವು. ॥೧೭॥

## ಪದ್ಯ (೧೮)

**ಮೂಲ :—**

**ಚತುರವಮೂರ್ತ್ಯಾತ್ಮಕ ಹರಿಯು ತ್ರಿಂ ।**
**ಶತಿ ಸ್ವರೂಪದಿ ಬ್ರಹ್ಮನೊಳು ವಾ ।**
**ರುತನೊಳಿಪ್ಪತ್ತೇಳು ರೂಪದೊಳಿಪ್ಪ ಪ್ರದ್ಯುಮ್ನ ॥**
**ಸುತರೊಳಿಪ್ಪತ್ತೈದು ಹದಿನೆಂ ।**
**ಟೆತುಳ ರೂಪಗಳರಿತು ವತ್ಸರ ।**
**ಶತಗಳಲಿ ಪೂಜಿಸುತಲಿರು ಚತುರಾತ್ಮಕನ ಪದವ ॥೧೮॥**

**ಅವತರಣಿಕೆ:—**

ಮಾನವರ ಆಯುಃಪ್ರಮಾಣವು ೧೦೦ ವರ್ಷಗಳು, ಈ ಆಯು ರ್ಮಾನದಲ್ಲಿ ಅಂತಸ್ಥನಾಗಿದ್ದು, ಕಾಲನಿಯಾಮಕನಾದ ಮೂಲರೂಪಿ ಶ್ರೀ ಮನ್ನಾರಾಯಣನ ಚತುರಮೂರ್ತ್ಯಾತ್ಮಕ ರೂಪಗಳನ್ನು ತಿಳಿಸುತ್ತಾರೆ. "**ಚತುರವಮೂರ್ತ್ಯಾತ್ಮಕ**"- ಎಂಬ ಪ್ರಸಕ್ತ ಸಂಧಿಗತ ೧೮ ನೆಯ ಈ ಪದ್ಯದಿಂದ.

(೧) ಬ್ರಹ್ಮದೇವರಲ್ಲಿ ವಾಸುದೇವನು–
೩೦ ರೂಪಗಳಿಂದ = ೩೦ ವರ್ಷಗಳು.

(೨) ಮುಖ್ಯ ಪ್ರಾಣದಲ್ಲಿ ಸಂಕರ್ಷಣನು–
೨೭ ರೂಪಗಳಿಂ೦ = ೨೭ ವರ್ಷಗಳು.

(೩) ಕೃತಿರಮಣ ಪ್ರದ್ಯುಮ್ನನಂದನೆಯಾದ ಸರಸ್ವತೀ
ದೇವಿಯರಲ್ಲಿ ಪ್ರದ್ಯುಮ್ನನು ೨೫ ರೂಗಗಳಿಂದ = ೨೫ ವರ್ಷಗಳು.

(೪) ಭಾರತೀದೇವಿಯರಲ್ಲಿ ಅನಿರುದ್ಧನು -
ಅವಶಿಷ್ಟರೂಪಗಳಿಂದ = ೧೮ ವರ್ಷಗಳು

---

ಒಟ್ಟು ಆಯುರ್ಮಾನ = ೧೦೦ ವರ್ಷಗಳು

---

ಇಂತು ವತ್ಸರಶತಗಳಲ್ಲಿ (ಅಂದರೆ ಮಾನವನ ೧೦೦ ವರ್ಷಗಳಲ್ಲಿ) ಪೂರ್ವೋಕ್ತ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ನಾಮಕನಾದ ಹರಿಯ ರೂಪಚತುಷ್ಟಯಗಳ ಕಾಲಾಂತರ್ಗತ ರೂಪೋಪಾಸನೆಯು ಕ್ರಮ ವನ್ನು ತಿಳಿಸುತ್ತಾರೆ.

"ಸುತೆ" —ಎಂದು ತೆಗೆದುಕೊಂಡರೆ. ಸರಸ್ವತೀ ಮತ್ತು ಭಾರತೀ ದೇವಿಯರೆಂದು ಅರ್ಥಮಾಡಬೇಕು. "ಸುತ" ಶಬ್ದದಿಂದ ಗರುಡ ಶೇಷ, ರುದ್ರರಲ್ಲಿ ೨೫+೧೮=೪೩ ವರ್ಷಗಳು ಪ್ರದ್ಯುಮ್ನ ಮತ್ತು ಅನಿ ರುದ್ಧದ ಚಿಂತನೆ ಮಾಡಬೇಕೆಂದು ತಾತ್ಪರ್ಯ. ವ್ಯಾಖ್ಯಾನಗಳ ಪ್ರಕಾರ ಎರಡೂ ಗ್ರಾಹ್ಯ ॥೧೮॥

**ಪ್ರತಿಪದಾರ್ಥ :–**

**ಚತುರಮೂರ್ತ್ಯಾತ್ಮಕ** = ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ–ಎಂಬ ನಾಲ್ಕು ರೂಪಗಳಿಂದ ಪ್ರಚುರನಾದ **ಹರಿಯು** =

ಮೂಲರೂಪಿ ಶ್ರೀಮನ್ನಾರಾಯಣನು **ಬ್ರಹ್ಮನೊಳು** = ಚತುರ್ಮುಖ ಬ್ರಹ್ಮದೇವರಲ್ಲಿ **ತ್ರಿಶಂತಿ ಸ್ವರೂಪದಿ** = ಮೂವತ್ತು ವಾಸುದೇವನಾಮಕ ರೂಪಗಳಿಂದಲೂ, **ಮಾರುತನೊಳು** = ಮುಖ್ಯ ಪ್ರಾಣದೇವರಲ್ಲಿ **ಇಪ್ಪತ್ತೇಳು ರೂಪದೊಳು** = ೨೭ ಸಂಕರ್ಷಣ ನಾಮಕ ರೂಪಗಳಿಂದಲೂ. **ಇಪ್ಪ** = ವಿದ್ಯಮಾನನಾಗಿದ್ದಾನೆ. **ಪ್ರದ್ಯುಮ್ನ** = ಪ್ರದ್ಯುಮ್ನನಾಮಕನು **ಸುತರೊಳು** = ಕೃತಿರಮಣ ಪ್ರದ್ಯುಮ್ನ ಸುತೆಯಾದ ಶ್ರೀ ಸರಸ್ವತೀದೇವಿಯರಲ್ಲಿ **ಇಪ್ಪತ್ತೈದು** = ೨೫ ರೂಪಗಳಿಂದಲೂ **ಹದಿನೆಂಟು** = ಅನಿರುದ್ಧ ನಾಮಕನು ಭಾರತೀದೇವಿಯರಲ್ಲಿ ೧೮ ರೂಪಗಳಿಂದಲೂ (ಅಥವಾ ಗರುಡ ಶೇಷಾಂತರ್ಗತ ೨೫ ರೂಪಗಳು + ರುದ್ರಾಂತರ್ಗತ ೧೮ ರೂಪಗಳು) **ಅತುಳ ರೂಪಗಳರಿತು** = ಇಂತು ಮಹಿಮೋಪೇತವಾದ ೧೦೦ ರೂಪಗಳನ್ನು ಜ್ಞಾನಾನುಸಂಧಾನದಿಂದ ತಿಳಿದು. **ವತ್ಸರ ಶತಗಳಲಿ** = ಮಾನವನ ಆಯುಃ ಪ್ರಮಾಣವಾದ ೧೦೦ ವರ್ಷಗಳಲ್ಲಿ **ಚತುರಾತ್ಮಕನ** = ಮೂಲರೂಪಿ ಶ್ರೀಮನ್ನಾರಯಣನ ಸ್ವಾಭಿನ್ನಗಳಾದ ವಾಸುದೇವ. ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ನಾಲ್ಕು ರೂಪಾತ್ಮಕನ **ಪದವ** = ಪಾದಾರವಿಂದಗಳನ್ನು **ಪೂಜಿಸುತಲಿರು** = ಆಯುರ್ಮಾನರೂಪವಾದ ಆ ಕಾಲಾಂತರ್ಗತ ಶ್ರೀಪರಮಾತ್ಮನನ್ನು ಅರ್ಚನೆಮಾಡುತ್ತಿರು ॥೧೮॥

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಆಯುರ್ಮಾನ ನೂರು ವರುಷವರಿಗೂ ಪೂಜಾಕ್ರಮವನ್ನು ಹೇಳುತ್ತಾರೆ. ಚತುರಮೂರ್ತ್ಯಾತ್ಮಕ– ನಾಲ್ಕು ರೂಪಗಳಿಂದ ಪ್ರಚುರನಾದ, ಹರಿಯು– ಶ್ರೀ ಪರಮಾತ್ಮನು ಅನಿರುದ್ಧಾದಿ ನಾಲ್ಕುರೂಪಗಳಿಂದ ಯುಕ್ತನಾದ ಶ್ರೀ ನಾರಾಯಣದೇವರು, ಬ್ರಹ್ಮನೊಳು–ಬ್ರಹ್ಮದೇವರಲ್ಲಿ. ತ್ರಿಂಶತಿ ಸ್ವರೂಪದಿ– ೩೦ ಅನಿರುದ್ಧರೂಪಗಳಿಂದಲೂ. ಮಾರುತನೊಳು – ಪ್ರಧಾನ

ವಾಯುದೇವರಲ್ಲಿ, ಪ್ರದ್ಯುಮ್ನ —ಪ್ರದ್ಯುಮ್ನರೂಪಿ ಶ್ರೀ ಪರಮಾತ್ಮ, ಇಪ್ಪತ್ತೇಳು ರೂಪದೊಳಿಪ್ಪ– ೨೭ ರೂಪದಿಂದಲೂ ಇರೋವನಾಗಿದ್ದಾನೆ. ಸುತರೊಳು– ಈ ಬ್ರಹ್ಮವಾಯುಗಳಿಗೆ ಪುತ್ರರಾದ ಗರುಡ, ಶೇಷ. ರುದ್ರ ಈ ಮೂರು ಮುಂದಿಗಳಲ್ಲಿ ಇಪ್ಪತ್ತೈದು– ೨೫ ರೂಪಗಳಿಂದ ಸಂಕರ್ಷಣ ಇರೋವನಾಗಿದ್ದಾನೆ. ಹದಿನೆಂಟು–೧೮ ರೂಪಗಳಿಂದ ವಾಸುದೇವ ಇದ್ದಾನೆ. ರುದ್ರದೇವರಲ್ಲಿ. ಅಂತು ರೂಪಗಳು ೧೦೦. ವತ್ಸರ ಶತಗಳಲಿ– ಆಯುರ್ಮಾನ ವರುಷಗಳ ನೂರರಲ್ಲಿ, ಅಂತು, ಪೂರ್ವೋಕ್ತ ಪ್ರಕಾರ ಇರುವ ವರುಷ ಒಂದು, ರೂಪ ಒಂದು ಪ್ರಕಾರ. ಅತುಳ ರೂಪಗಳ– ಅಸದೃಶವಾದ ಅನಿರುದ್ಧಾದಿ ನಾಲ್ಕು ರೂಪಗಳ ಪೂಜಿಸುತಲಿರು–ಆಯುರ್ಮಾನ ಸರ್ವಾಧಿಷ್ಠಾನಗಳಲ್ಲಿ ಅನುಸಂಧಾನದಿಂದ, ತಿಳಿದು–ಪೂಜೆಯ ಮಾಡು. (ಅಂದರೆ, ಸಂವತ್ಸರಕ್ಕೆ ಅಂಗಗಳಾದ ಮಾಸ, ಪಕ್ಷ, ಋತು, ಮೊದಲಾದವುಗಳ ಅಂತರ್ಗತನಾದ ಶ್ರೀ ಕಾಲನಾಮಕ ಪರಮಾತ್ಮನ) ಚತುರಾತ್ಮಕನ– ಚತುರ್ವ್ಯೂಹನಾದ ಶ್ರೀ ಪರಮಾತ್ಮನ, ಪದವ–ಪಾದಗಳನ್ನು ಸ್ಮರಿಸುತ್ತಾ, ಈ ಆಯುರ್ಮಾನವನ್ನು ಆಯಾ ದೇವತಾಂತರ್ಗತ ಶ್ರೀ ಪರಮಾತ್ಮನಿಗೆ ಸಮರ್ಪಣೆಮಾಡಬೇಕು ಎಂತ ತಾತ್ಪರ್ಯ.

ಪೂರ್ವೋಕ್ತ ರುದ್ರದೇವರಲ್ಲಿ ೧೦೦ ರೂಪಗಳು ಹ್ಯಾಂಗೆಂದರೆ:–

೩೦ ಅನಿರುದ್ಧ ರೂಪಗಳು–ಪ್ರಥಮ ೩೦ವರ್ಷಗಳಿಗೆ– ಬ್ರಹ್ಮಾಂತರ್ಗತ

೨೭ ಪ್ರದ್ಯುಮ್ನರೂಪಗಳು-ದ್ವಿತೀಯ ೨೭ ವರ್ಷಗಳಿಗೆ- ವಾಯ್ವಂತರ್ಗತ

೨೫ ಸಂಕರ್ಷಣ ರೂಪಗಳು–ತೃತೀಯ ೨೫ ವರ್ಷಗಳಿಗೆ- ಗರುಡ ಶೇಷಾಂತರ್ಗತ

೧೮ ವಾಸುದೇವ ರೂಪಗಳು-ಚತುರ್ಥ ೧೮ ವರ್ಷಗಳಿಗೆ– ರುದ್ರಾಂತರ್ಗತ

೧೦೦-ಅಂತು, ನೂರುರೂಪಗಳು-ನೂರು ವರ್ಷಗಳ ಆಯುರ್ಮಾನದಲ್ಲಿ.

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ:–

ಮನುಷ್ಯರಿಗೆ ಇರುವ ೧೦೦ ವರ್ಷಗಳ ಆಯುಷ್ಮಾನದಲ್ಲಿ ಚಿಂತಿಸ ಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ :—

ಅನಿರುದ್ಧ, ಪ್ರದ್ಯುಮ್ನ ಸಂಕರ್ಷಣ, ಮತ್ತು ವಾಸುದೇವ ಎಂಬ ನಾಲ್ಕು ವ್ಯೂಹಾತ್ಮಕನಾದ ಶ್ರೀ ಪರಮಾತ್ಮನು ಮನುಷ್ಯರ ಆಯುಷ್ಯದಲ್ಲಿ ಮೊದಲು ೩೦ ವರ್ಷಗಳವರೆಗೆ ಬ್ರಹ್ಮದೇವರ ಅಂತರ್ಯಾಮಿಯಾಗಿ ಅಧಿಪತಿ ಯಾಗಿರುವನು. ವಾಸುದೇವನು ೩೦ ರೂಪಗಳಿಂದ ೩೦ ವರ್ಷಗಳವರೆಗೂ ಬ್ರಹ್ಮದೇವರ ಅಂತರ್ಯಾಮಿಯಾಗಿದ್ದು, ಶರೀರವನ್ನು ರಕ್ಷಿಸುವನು. ತದನಂತರ ೨೭ ವರ್ಷಗಳವರೆಗೆ ಅಂದರೆ, ೩೧ನೆಯ ವರ್ಷದಿಂದ. ೫೭ ವರ್ಷಗಳವರೆಗೆ ವಾಯುದೇವರು ಅಭಿಮಾನಿಗಳಾಗಿರವರು. ಅಗ ಪ್ರದ್ಯು ಮ್ನನು ೨೭ ರೂಪಗಳಿಂದ ಆ ೨೭ ವರ್ಷಗಳವರೆಗೂ ವಾಯ್ವಂತರ್ಯಾಮಿಯಾ ಗಿದ್ದು, ಶರೀರವನ್ನು ರಕ್ಷಿಸುವನು. ತದನಂತರ, ೨೫ ವರ್ಷಗಳು ಎಂದರೆ, ೫೮ನೆಯ ವರ್ಷದಿಂದ ೮೨ನೆಯ ವರ್ಷದವರೆಗೆ ಗರುಡ ಶೇಷ ರುದ್ರರು ಅಧಿ ಪತಿಗಳಾಗಿರುವರು, ಅವರಂತರ್ಯಾಮಿಯಾಗಿ ಸಂಕರ್ಷಣನು ೨೫ ವರ್ಷ ಗಳವರೆವಿಗೂ ೨೫ ರೂಪಗಳಿಂದ ಇದ್ದು, ಪಾಲಿಸುವನು. ಉಳಿದ ೧೮ ವರ್ಷಗಳು ಶ್ರೀ ಅನಿರುದ್ಧರೂಪಿ ಶ್ರೀ ಪರಮಾತ್ಮನು ತಾನೇ ೧೮ ರೂಪ ಗಳಿಂದ ಪಾಲಿಸುವನು. ಹೀಗೆ ನಾಲ್ಕು ರೂಪಗಳುಳ್ಳ ಶ್ರೀ ಪರಮಾತ್ಮನು ೧೦೦ ವರ್ಷಗಳವರೆಗೂ ನಾಲ್ಕು ರೂಪಗಳಿಂದ ನಮ್ಮನ್ನು ರಕ್ಷಿಸುತ್ತಿರುವ ನೆಂದರಿತು, ಶ್ರೀ ನಾರಾಯಣಮೂರ್ತಿಯನ್ನು ಪೂಜಿಸಬೇಕೆಂದು ಅರ್ಥಃ ॥೧೮॥

## (೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :–

"ಚತುರ ಮೂರ್ತ್ಯಾತ್ಮಕೇತಿ"॥ ವಾಸುದೇವನು ಬ್ರಹ್ಮನಲ್ಲಿ ೩೦ ರೂಪಗಳಿಂದ, ಸಂಕರ್ಷಣನು ವಾಯುದೇವರಲ್ಲಿ ೨೭ ರೂಪದಿಂದ,

ಪ್ರದ್ಯುಮ್ನನು ಸರಸ್ವತಿಯಲ್ಲಿ ೨೫ ರೂಪದಿಂದ, ಅನಿರುದ್ಧನು ಭಾರತಿಯಲ್ಲಿ ೧೮ ರೂಪದಿಂದ ಇದ್ದಾನೆಂದು ತಿಳಿಯತಕ್ಕದ್ದು. ಸುತರೊಳು-ಸರಸ್ವತೀ ಭಾರತೀ ಪ್ರದ್ಯುಮ್ನನ ಮಕ್ಕಳೆಂಬೋ ವಿಷಯದಲ್ಲಿ ಪ್ರಮಾಣ:-

**"ಪ್ರದ್ಯುಮ್ನತಃ ಕೃತೌ ಜಜ್ಞೇ ಕನ್ಯಾನಾಂತು ಚತುಷ್ಟಯಂ ।**
**ಗಾಯತ್ರೀ ಚೈವ ಸಾವಿತ್ರೀ ಶ್ರದ್ಧಾ ಚೈವ ಸರಸ್ವತೀತಿ" ॥**
**-ವರಾಹಪುರಾಣೋಕ್ತೇಃ ॥**

ವತ್ಸರಶತೇತಿ- ಮನುಷ್ಯರು ನರದೇಹದಲ್ಲಿ ನೂರುವರ್ಷ ಇರೋಣವೇ ಪರಮ ದುರ್ಲಭತರ. ಇಂಥಾದ್ದರಲ್ಲಿ ಶತಸಂತ್ಸರ ಉಪಾಸನೆ ಮಾಡೆಂದು ದಾಸಾರ್ಯರು ಹ್ಯಾಗೆ ಹೇಳಿದರು ಅಂದರೆ-ಉಪಾಸನೆಯ ಉಪಾಯವನ್ನು ಇದರ ಮುಂದಿನ ಪದ್ಯದಲ್ಲಿ ಸುಲಭವಾಗಿ ತೋರಿಸುತ್ತಾರೆ- ಅವಲೋಕನ ಮಾಡತಕ್ಕದ್ದು. ॥೧೮॥

**(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-**

"ಚತುರ"-ಇತಿ ॥ ತ್ರಿಂಶದಾತ್ಮಾಽ ವಿರುದ್ಧೋಽ ಜೇ ಸಪ್ತವಿಂಶತಿ ಮಾರುತೇ ॥ ಕೃತೀಶ ಪುತ್ರ್ಯಾಂ ಬ್ರಹ್ಮಣ್ಯಾಂ ಭಾರತ್ಯಾಂ ಪಂಚವಿಂಶತಿಃ॥ ಅತುಲೋಷ್ಟಾ ದಶಾತ್ಮೇತಿ ಚ ॥ ಓಮ್ ॥ ಗಧಿ ಪ್ರಿಯಃ ಸತ್ರಾದಪ ಗೋಹ್ಯ ಗಿರಿರ್ನವಿಶ್ವತಃ ಪೃಥುಃ ಪತಿರ್ದಿವಃ ॥ ಅಭೀಹಿ ಸತ್ಯಸೋಮಪಾ ಉಭೀ ಬಭೂವ ರೋದಸೀ ॥ ಜಮ್ ॥ ಸಮುಚ್ಛ್ರಾಃ ಪರ್ವತಾಃ॥ ಚಿತ್ತಯಃ ದತ್ವದುಚ್ಛ್ರಯವತ್ವಾತ್ ಚತುಮೂರ್ತಿಃ ॥ ಓಮ್॥ ಸೋಮಂ ವೀರಾಯ ಶಕ್ರಾಯುಧಿರಾ ಪಿಬನ್ನರ್ಯಾಯ ಯೋವರಿಷ್ಟೋ ಅನ್ಯ ಧಿಷ್ಟತ್ವಾವಂತಂ ಜರಿತೃಭ್ಯಃ ವಾಜಂ ಸ್ತೋತ್ರಭ್ಯೋ ಗೋಮಂತಮ್॥ ॥ಓಮ್॥ ಇಂದ್ರಾವಾಹಾ ವಚೋಯುಜಾ ತ್ವಂ ನ ಇಂದ್ರಾ ಭರಂ ಓಜೋ ನೃಮ್ಣಂ ಶತಕೃತೋ ವಿಚರ್ಮಣೇ ॥ ಆ ವೀರಂ ಪ್ರತನಾಷಹಮ್ ॥

॥ಓಮ್॥ ಉತ್ತಮತ್ವ ಸಹನೋಜಃ ಸುಖಾನಿ ಚತ್ವಾರಿ ಯಾಚನೀಯಾನಿ ತನೋತಿ ಇತಿ ಚತುರಾತ್ಮಾ ॥೧೮॥

**ಕನ್ನಡಾರ್ಥ :–**

(೧) ಬ್ರಹ್ಮದೇವರಲ್ಲಿ ೩೦ ರೂಪಗಳಿಂದಲೂ, (೨) ವಾಯು ದೇವರಲ್ಲಿ ೨೭ ರೂಪಗಳಿಂದಲೂ, (೩) ಕೃತಿಪತಿ ಪ್ರದ್ಯುಮ್ನನ ಮಕ್ಕಳಾದ ಸರಸ್ವತಿ ದೇವಿಯರಲ್ಲಿ ೨೫ ರೂಪಗಳಿಂದಲೂ ಮತ್ತು (೪) ಭಾರತೀ ದೇವಿಯರಲ್ಲಿ ೧೮ ರೂಪಗಳಿಂದಲೂ ಇರುತ್ತಾನೆ– ಎಂದು ಪ್ರಮಾಣಾರ್ಥವು.

**ಬೃಹತೀಸಹಸ್ರವು** "ಚತುಮೂರ್ತಿ" —ಎಂಬಾರ್ಥದ ವಿವರಣೆಯನ್ನು ಕೊಡುವುದು. "ಪರ್ವತಗಳಂತೆ ಉನ್ನಾಹ (ಉಚ್ಛ್ರಾಯ. ಅಂದರೆ ಅತ್ಯುನ್ನತಿ ಉಳ್ಳವನಾದ್ದರಿಂದ, "ಚತುಮೂರ್ತಿ" -ಶಬ್ದವಾಚ್ಯನು. ಎರಡನೆಯ ವಸ್ತುಗಳಿಂದ ಅಸದೃಶನಾಗಿರುವುದರಿಂವ "ಅತುಲ" ಶಬ್ದಪ್ರಯೋಗವು. ಅಂದರೆ "ಏಕಮೇವಾದ್ವಿತೀಯ"ನೆಂದರ್ಥ. (1) ಉತ್ತಮತ್ವ. (2) ಬಲ, (3) ಓಜಸ್ಸು ಮತ್ತು (4) ಆನಂದ ಈ ನಾಲ್ಕು ವಸ್ತುಗಳನ್ನು ಬಯಸುವವರಿಗೆ ಕೊಡುವವನಾದ್ದರಿಂದ– "ಚತುರಾತ್ಮ"ನು. ಇವೇ ಬೃಹತೀಮಂತ್ರಗಳ ತಾತ್ಪರ್ಯಾರ್ಥವು ॥೧೮॥

**(೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–**

ಶತವತ್ಸರ ಕಾಲಾಭಿಮಾನ್ಯಂತರ್ಗತ ಚತುಮೂರ್ತ್ಯುಪಾಸನೆ ತಿಳಿಸುತ್ತಾರೆ. ಚತುರ ಎಂದು– ಮೂವತ್ತು ವರ್ಷಕಾಲ ಆಯುಸ್ಸಿಗಭಿಮಾನಿ ಬ್ರಹ್ಮದೇವರಲ್ಲಿ ಮೂವತ್ತು ರೂಪದಿಂದ ಶ್ರೀ ವಾಸುದೇವನಿರುವನು. ನಂತರ ೨೭ ವರ್ಷ ಕಾಲಾಭಿಮಾನಿ ವಾಯುದೇವರಲ್ಲಿ ೨೭ ರೂಪದಿಂದ ಸಂಕರ್ಷಣಮೂರ್ತಿ ಇರುವನು. ನಂತರ ೪೩ ವರ್ಷಕಾಲ ಆಯುಸ್ಸಿಗಭಿಮಾನಿಗಳಾದ ಪ್ರದ್ಯುಮ್ನ ಪುತ್ರಿಯರು ಸರಸ್ವತಿ ದೇವಿಯರಲ್ಲಿ ೨೫ರೂಪದಿಂದ ೨೫ ವರ್ಷವು, ನಂತರ ೧೮ ವರ್ಷಗಳ ಕಾಲ ಕಾಲಾಭಿಮಾನಿ ಭಾರತೀ

ದೇವಿಯರಲ್ಲಿ ೧೮ ರೂಪದಿಂದ ಪ್ರದ್ಯುಮ್ನ, ಅನಿರುದ್ಧ ಇರುವರು. ಅಂತು ನೂರುವರ್ಷ ಕಾಲಾಯುಸ್ಸಿನಲ್ಲಿ ಚತುರ್ಮೂರ್ತಿಗಳ ಪದಾರ್ಚನೆ ಎಂಬ ಉಪಾಸನೆಯನ್ನು ಭಾವಿಸುವದೆಂದರ್ಥ. ಪ್ರದ್ಯುಮ್ನಸುತೆಯರು ಸರಸ್ವತೀ ಭಾರತೀ ಎಂಬುದಕ್ಕೆ ಪ್ರಮಾಣ :—

**"ಪ್ರದ್ಯುಮ್ನತಃ ಕೃತೌ ಜಜ್ಞೇ ಕನ್ಯಾನಾಂತು ಚತುಷ್ಟಯಂ ಗಾಯತ್ರೀ ಚೈವ ಸಾವಿತ್ರೀ ಶ್ರದ್ಧಾ ಚೈವ ಸರಸ್ವತೀ"** ||

**—ಇಂತಿ ವಾರಾಹ ಪುರಾಣೇ** ||೧೮||

## ಸರ್ವವ್ಯಾಖ್ಯಾನಸಾರಸಂಗ್ರಹ

ಮಾನವರ ಆಯುರ್ಮಾನರೂಪವಾದ ೧೦೦ ವರ್ಷಗಳಲ್ಲಿ ಚಿಂತಿಸಬೇಕಾದ ಶ್ರೀ ಪರಮಾತ್ಮನ ಚತುರ್ಮೂರ್ತ್ಯಾತ್ಮಕ ಭಗವದ್ರೂಪಗಳ ಉಪಾಸನಾಕ್ರಮವನ್ನು ತಿಳಿಸುತ್ತಾರೆ- ಪ್ರಸಕ್ತ ೧೮ನೆಯ ಈ ಪದ್ಯದಿಂದ,

ಸಾಮಾನ್ಯವಾಗಿ ಮಾನವರ ಆಯುರ್ಮಾನವು ೧೦೦ ವರ್ಷಗಳೆಂದು ಪರಿಗಣಿಸುವುದು ವಾಡಿಕೆ, **"ಶತಮಾನಂ ಭವತಿ"**–ಎಂದೇ ಭೂಸುರರ ಆಶೀರ್ವಚನ. ಇಂತಹ ೧೦೦ ವರ್ಷಗಳ ಅವಧಿಯಲ್ಲಿ ನಾಲ್ಕು ಕಾಲಮಾನ ಹಂತಗಳಲ್ಲಿ ಶ್ರೀ ಪರಮಾತ್ಮನ ಚತುರ್ಮೂರ್ತ್ಯಾತ್ಮಕ ರೂಗಳನ್ನು ಅನುಸಂಧಾನಿಸಿ ಚಿಂತಿಸಬೇಕು.

(೧) ಮೊದಲನೆಯ ಮೂವತ್ತು ವರ್ಷಗಳು ಪ್ರಥಮ ಹಂತವು. ಈ ೩೦ ವರ್ಷಗಳ ಅವಧಿಯಲ್ಲಿ **ವಾಸುದೇವ** ನಾಮಕ ಶ್ರೀ ಪರಮಾತ್ಮನು **ಶ್ರೀ ಚತುರ್ಮುಖ ಬ್ರಹ್ಮದೇವರಲ್ಲಿ** ಅಂತಸ್ಥಿತನಾಗಿದ್ದು, ೩೦ರೂಪಗಳಿಂದ

ಈ ಶರೀರದ ರಕ್ಷಣೆಯನ್ನು ಮಾಡುತ್ತಾ, ದೇಹಗತ ವ್ಯಾಪಾರಗಳನ್ನು ನಡೆಯಿಸುವನು.

(೨) ಮುಂದಿನ ೨೭ ವರ್ಷಗಳವರೆಗೆ, ಅಂದರೆ ೩೧ನೆಯ ವರ್ಷದಿಂದ ೫೭ನೆಯ ವರ್ಷದವರೆಗೆ **ಸಂಕರ್ಷಣರೂಪಿ** ಶ್ರೀ ಪರಮಾತ್ಮನು **ಶ್ರೀ ಮುಖ್ಯಪ್ರಾಣ ದೇವರಲ್ಲಿ** ಅಂತಸ್ಥಿತನಾಗಿದ್ದು ಕ್ರಿಯಾಕಲಾಪಗಳನ್ನು ಮಾಡಿ ಮಾಡಿಸುತ್ತಿರುವನು.

(೩) ತದನಂತರ ಮುಂದಿನ ೨೫ ವರ್ಷಗಳಲ್ಲಿ, ಅಂದರೆ ೫೮ನೆಯ ವರ್ಷದಿಂದ ೮೨ನೆಯ ವಯಸ್ಸಿನ ಪರ್ಯಂತ, **ಪ್ರದ್ಯುಮ್ನ** ನಾಮಕ ಶ್ರೀ ಪರಮಾತ್ಮನು ಕೃತೀದೇವಿಯ ದೆಸೆಯಿಂದ ಜನಿಸಿದ **ಪ್ರಕೃತಿನಾಮಕ ಶ್ರೀ ಸರಸ್ವತೀ ದೇವಿಯರಲ್ಲಿ** ವಿದ್ಯಮಾನನಾಗಿದ್ದು, ದೇಹಗತ ಕ್ರಿಯಾದಿಗಳನ್ನು ನಡೆಸಿ, ನಡೆಯಿಸುತ್ತಿರುವನು.

(೪) ಅವಶಿಷ್ಟ ರೂಪವಾದ ೧೮ ವರ್ಷಗಳಲ್ಲಿ ಅಂದರೆ ೮೩ ನೆಯ ವಯಸ್ಸಿನಿಂದ ೧೦೦ ವರ್ಷಗಳ ಪರ್ಯಂತ, **ಅನಿರುದ್ಧರೂಪಿ** ಶ್ರೀ ಪರಮಾತ್ಮನು ೧೮ ರೂಪಗಳಿಂದ ಪೂರ್ವೋಕ್ತ ಕೃತಿರಮಣ ಪ್ರದ್ಯುಮ್ನ ಸುತೆಯಾದ **ಶ್ರದ್ಧಾ**ನಾಮಕ **ಶ್ರೀ ಭಾರತೀ ದೇವಿಯರಲ್ಲಿ** ಅಂತರ್ಗತನಾಗಿದ್ದು, ಕ್ರಿಯಾದಿಗಳನ್ನು ಮಾಡಿ ಮಾಡಿಸುವನು.

ಇಂತು ಮೂಲರೂಪಿ ಶ್ರೀಮನ್ನಾರಾಯಣನು ಸ್ವಾಭಿನ್ನಾಂಶಗಳಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ನಾಲ್ಕು ರೂಪಗಳಿಂದ, ಚತುಮೂರ್ತ್ಯಾತ್ಮಕನಾಗಿದ್ದು, ಮಾನವರ ಆಯುರ್ಮಾನವಾದ ೧೦೦ ವರ್ಷಗಳ ಆಯುಸ್ಸಿನ ಅವಧಿಯಲ್ಲಿ ಚಿಂತಿಸಬೇಕಾದ ಉಪಾಸನಾ ಕ್ರಮವನ್ನು ಈ ಕೆಳಗಿನ ಪಟ್ಟಿಯಿಂದ ಸುಲಭವಾಗಿ ಗ್ರಹಿಸಬಹುದು.

| ಕ್ರಮ ಸಂಖ್ಯೆ | ಭಗವದ್ರೂಪಗಳು | ಅಭಿಮಾನಿತ್ವ | ಅಧಿಷ್ಠಾನ | ಕಾಲಾವಧಿ | ರೂಪಗಳು | ವರ್ಷಗಳ ಸಂಖ್ಯೆ |
|---|---|---|---|---|---|---|
| ೧ | ವಾಸುದೇವ | ಆಯುಸ್ಸಿಗೆ ಅಭಿಮಾನಿ | ಪುರುಷನಾಮಕ ಬ್ರಹ್ಮದೇವರಲ್ಲಿ | ೧ ರಿಂದ ೩೦ವರ್ಷಗಳವರೆಗೆ | ೩೦ | ೩೦ ವರ್ಷಗಳು |
| ೨ | ಸಂಕರ್ಷಣ | ಶ್ವಾಸಾಭಿಮಾನಿ | ಸೂತ್ರನಾಮಕ ವಾಯುದೇವರಲ್ಲಿ | ೩೧ ರಿಂದ ೫೭ ರವರೆಗೆ | ೨೭ | ೨೭ ವರ್ಷಗಳು |
| ೩ | ಪ್ರದ್ಯುಮ್ನ | ವಾಗಾಭಿಮಾನಿ | ಪ್ರಕೃತಿನಾಮಕ ಸರಸ್ವತಿಯಲ್ಲಿ | ೫೮ ರಿಂದ ೮೨ರವರೆಗೆ | ೨೫ | ೨೫ ವರ್ಷಗಳು |
| ೪ | ಅನಿರುದ್ಧ | ಕಾಲಾಭಿಮಾನಿ | ಶ್ರದ್ಧಾನಾಮಕ ಭಾರತೀದೇವಿಯರಲ್ಲಿ | ೮೩ ರಿಂದ ೧೦೦ರವರೆಗೆ | ೧೮ | ೧೮ ವರ್ಷಗಳು |
| | | | | ಒಟ್ಟು | ೧೦೦ | ೧೦೦ ವರ್ಷಗಳು |

**ವಿಶೇಷ ವಿಚಾರ :—**

ಶ್ರೀ ಸಂಕರ್ಷಣಒಡೆಯರ ಹಾಗೂ ಭಾವಪ್ರಕಾಶಕಾಕಾರರ ವ್ಯಾಖ್ಯಾನದ ಪ್ರಕಾರ "ಸುತರೊಳಗೆ"- ಎಂಬ ಶಬ್ದದ ಆಧಾರದ ಮೇಲೆ. ಬ್ರಹ್ಮ ಮತ್ತು ವಾಯುದೇವರ ಮಕ್ಕಳಾದ ಗರುಡ, ಶೇಷ ಮತ್ತು ರುದ್ರ ೨೫+೧೮=೪೩ ವರ್ಷಗಳ ಕಾಲ ಎಂದು ವಿವರಿಸಿರುತ್ತಾರೆ. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಂತೆ ಅನಿರುದ್ಧನಿಂದ ಪ್ರಾರಂಭಿಸಿ. ವಾಸುದೇವ ರೂಪಪರ್ಯಂತ ಈ ಕಾಲಮಾನಗಳ ಹಂಚಿಕೆಯನ್ನು ತಿಳಿಸಿರುತ್ತಾರೆ.

ಅದರೆ, ಮೂಲರೂಪಿ ಶ್ರೀಮನ್ನಾರಾಯಣನು ತನ್ನದೇ ಆದ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಮತ್ತು ಅನಿರುದ್ಧ ಈ ಕ್ರಮದಲ್ಲಿ ಪ್ರಾದುರ್ಭಾವರೂಪಗಳಿಂದ ಪ್ರಕಟಿತನಾದನು. ಇದೇ **ಆತ್ಮ ಸೃಷ್ಟಿಯು.**

ತದನಂತರ (೧) ಮಾಯಾದೇವಿಯರಲ್ಲಿ ಶ್ರೀ ವಾಸುದೇವನಿಂದ ಪುರುಷನಾಮಕ ವಿರಂಚಿ (ಬ್ರಹ್ಮದೇವರ) ಸೃಷ್ಟಿ.

(೨) ಜಯಾಪತಿ ಸಂಕರ್ಷಣನಿಂದ ಸೂತ್ರನಾಮಕ ವಾಯುದೇವರ ಸೃಷ್ಟಿ.

(೩) ಕೃತಿರಮಣ ಪ್ರದ್ಯುಮ್ನನಿಂದ ಪ್ರಕೃತಿ ನಾಮಕ ವಾಣಿ ಮತ್ತು ಶ್ರದ್ಧಾನಾಮಕ ಭಾರತೀ ದೇವಿಯರ ಸೃಷ್ಟಿ,

(೪) ಶಾಂತೀಧವ ಅನಿರುದ್ಧನಿಂದ **ಸೂಕ್ಷ್ಮಸೃಷ್ಟಿ.**

ಇದಕ್ಕೆ ಪ್ರಮಾಣ :-

(೧) **"ಸೂತ್ರಂ ಸ ವಾಯುಃ ಪುರುಷೋ ವಿರಂಚಿಃ ।**

**ಪ್ರದ್ಯುಮ್ನಶ್ಚಾಥ ಕೃತಾ ಸ್ತ್ರೀಯೌ ದ್ವೇ ॥**

**–ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ (ಅಧ್ಯಾಯ ೩)**

(೨) **"ಪ್ರದ್ಯುಮ್ನತಃ ಕೃತೌಜಜ್ಞೇ ಕನ್ಯಾನಾಂತು ಚತುಷ್ಟಯಂ।
ಗಾಯತ್ರಿ ಚೈವ ಸಾವಿತ್ರೀ ಶ್ರದ್ಧಾ ಚೈವ ಸರಸ್ವತೀಃ "॥
—ವರಾಹ ಪುರುಣೋಕ್ತಿ.**

ಪೂರ್ವೋಕ್ತ ಪ್ರಮಾಣಗಳ ಆಧಾರದಮೇಲೆ (೧) ಬ್ರಹ್ಮದೇವರು. (೨) ಪ್ರಧಾನವಾಯುದೇವರು. (೩) ಸರಸ್ವತೀ ಮತ್ತು (೪) ಭಾರತೀ ಎಂದು ಅಧಿಷ್ಠಾನ ಚತುಷ್ಟಯಗಳಲ್ಲಿ ಉಪಾಸಿಸಬೇಕೆಂದು ಗ್ರಾಹ್ಯವು.

ಪೂರ್ವೋಕ್ತ ಚತುರ್ಮೂರ್ತ್ಯಾತ್ಮಕ ಭಗವದ್ರೂಪಗಳನ್ನು **"ಅತುಳ ರೂಪ ಗಳು"** ಎಂದು ದಾಸರಾಯರು ಪ್ರಸಕ್ತಪದ್ಯದಲ್ಲಿ ಹೇಳಿರುತ್ತಾರೆ. "ಅತುಳ" ಶಬ್ದಾರ್ಥವನ್ನು **ಬೃಹತಿ ಸಹಸ್ರ ಮಂತ್ರವು** ವಿವರಿಸುವುದು. ಶ್ರೀ ಪರ ಮಾತ್ಮನು ಸರ್ವವಿಧದಿಂದಲೂ ಅತ್ಯುನ್ನತನಾದುದರಿಂದ (ಸರ್ವೋತ್ತಮತ್ವ) **ಆತುಳ** ಶಬ್ದವಾಚ್ಯನು.

ಆಂತಹ ಅತುಳನಾಮಕ ಶ್ರೀಹರಿಯು ಬೇಡಿದ ತನ್ನ ಅಂತರಂಗ ಭಕ್ತರಿಗೆ (೧) ಉತ್ತಮತ್ವ (ಅವರವರ ಯೋಗ್ಯತಾನುಸಾರ ಪೂರ್ಣತ್ವ) (೨) ಬಲ (೩) ಓಜಸ್ಸು ಮತ್ತು (೪) ಆನಂದ ಎಂಬ ಈ ನಾಲ್ಕು ವರ ಗಳನ್ನು ಕೊಡುವವನಾದ್ದರಿಂದ **"ಚತುರಾತ್ಮಕ"**– ಶಬ್ದವಾಚ್ಯನು.

ಇಂತು, ಮಾನವರು ತಮ್ಮ ಆಯುರ್ಮಾನದ ನೂರ್ಮ್ವರ್ಷಗಳ ಪರ್ಯಂತ (ವತ್ಸರ ಶತಗಳಲ್ಲಿ) ಅತುಳನಾಮಕ ಚತುರಾತ್ಮಕನಾದ ಶ್ರೀ ಪರ ಮಾತ್ಮನ ಪಾದಾರವಿಂದಗಳನ್ನು ಎಡಬಿಡದೆ ತಮ್ಮ ಆಯುಃಪರ್ಯಂತರವೂ ಜ್ಞಾನಾನುಸಂಧಾನ ಕ್ರಮದಿಂದ ಆ ಚತುರ್ಮೂರ್ತ್ಯಾತ್ಮಕ ಭಗವದ್ರೂಪಗಳನ್ನು ಮನಸಾ ಧ್ಯಾನಿಸುತ್ತಿರಬೇಕು –ಎಂದು ತಿಳಿಸುತ್ತಾರೆ. ಇದನ್ನು ತಿಳಿಸುತ್ತಾ **ಶ್ರೀ ಮದಾಚಾರ್ಯರು.**

**"ಸಂತತಂ" ಚಿಂತಯೇತ್ ಅನಂತಂ । ಅಂತ್ಯಕಾಲೇ ವಿಶೇಷತಃ"**
–ಎಂಬ ಅಮೃತವಾಣಿಯನ್ನು ಸಾರಿದ್ದಾರೆ. ॥೧೪॥

## ಪದ್ಯ (೧೯)

**ಮೂಲ :—**

**ನೂರು ವರುಷಕೆ ದಿವಸ ಮೂವ ।**
**ತ್ತಾರು ಸಾವಿರವಹವು ನಾಡಿ ಶ ।**
**ರೀರದೊಳಗಿನಿತಿಹವು ಸ್ತ್ರೀಪುಂ ಭೇದದಲಿ ಹರಿಯು ॥**
**ಈರಧಿಕ ಎಪ್ಪತ್ತು ಸಾವಿರ ।**
**ಮೂರುತಿಗಳನೆ ನೆನೆದು ಸರ್ವಾ ।**
**ಧಾರಕನ ಸರ್ವತ್ರ ಪೂಜಿಸು ಪೂರ್ಣನೆಂದರಿದು ॥೧೯॥**

ಮಾನವರ ಆಯುರ್ಮಾನವಾದ ನೂರು ವರ್ಷ ಆಯುಸ್ಸಿನಲ್ಲಿ ಈ ಸ್ಥೂಲ ದೇಹಗತ ೭೨,೦೦೦ ನಾಡೀ ದೇವಾಂತರ್ಗತ ಭಗವದುಪಾಸನಾ ಕ್ರಮವನ್ನು ತಿಳಿಸುತ್ತಾರೆ, ಪ್ರಸಕ್ತ ಸಂಧಿಗತ ೧೯ನೆಯ ಈ ಪದ್ಯದಿಂದ.

ಒಂದು ವರ್ಷದ ಅವಧಿಗೆ ೩೬೦ ದಿನಗಳು. ಅಂತಹ ೧೦೦ ವರ್ಷಗಳಿಗೆ ೩೬೦ × ೧೦೦ = ೩೬,೦೦೦ ದಿವಸಗಳಾಗುವುವು. ಒಂದು ದಿನಕ್ಕೆ ಒಂದು ಹಗಲು ಮತ್ತು ಒಂದು ರಾತ್ರಿಯಂತೆ ನೂರು ವರ್ಷಗಳಲ್ಲಿ ೨ × ೩೬,೦೦೦ = ೭೨,೦೦೦ ರಾತ್ರಿಗಳು. ಈ ಸ್ಥೂಲಶರೀರಾದ್ಯಂತ ೭೨,೦೦೦ ನಾಡಿಗಳು ಓತಪ್ರೋತನಾಗಿ ಹಬ್ಬಿ ಹರಡಿವೆ. ಈ ೭೨,೦೦೦ ನಾಡಿಗಳ ವ್ಯೂಹದಲ್ಲಿ ದೇಹಬಲಪಾರ್ಶ್ವಗತ ೩೬,೦೦೦ ನಾಡಿಗಳು **ಪುಂನಾಡಿಗಳು** ಇವುಗಳಿಗೆ **ದಿವಾನಾಡಿ**ಗಳೆಂದು ಹೆಸರು. ಅಂತೆಯೇ ದೇಹ ಎಡಪಾರ್ಶ್ವಗತ ೩೬,೦೦೦ ನಾಡಿಗಳು **ಸ್ತ್ರೀನಾಡಿ**ಗಳು. ಇವುಗಳಿಗೆ **ನಿಶಾನಾಡಿ** ಗಳೆಂದು ಹೆಸರು. ಇಂತು, ಸಾಧನಶರೀರವೆಂದೆನಿಪ ಈ ಸ್ಥೂಲದೇಹದಲ್ಲಿ ೩೬,೦೦೦ ಪುರುಷ ನಾಡ್ಯಭಿಮಾನಿ ದೇವತೆಗಳು ಮತ್ತು ೩೬,೦೦೦ ಸ್ತ್ರೀನಾಡ್ಯಭಿಮಾನಿ ದೇವ-

ಗಳು ವಿದ್ಯಮಾನರಾಗಿದ್ದಾರೆ. ಅಲ್ಲಿಗೆ ನಾವು ಸ್ವೀಕರಿಸುವ ಭೋಜನ ಯೋಗ್ಯ ವಸ್ತುಗಳನ್ನು ರಸಪದವಾಚ್ಯನಾದ ಬಿಂಬರೂಪಿ ಶ್ರೀ ಪರಮಾತ್ಮನು ಈ ೭೨,೦೦೦ ನಾಡಿಗಳ ದ್ವಾರಾ ರಸವಿಭಾಗ ಮಾಡುವನು. ಇದರಿಂದ ೩೬,೦೦೦ ದಂಪತಿಗಳ ಭೋಜನ ಮಾಡಿಸಿದಂತಾಯಿತು. ಇದೇ ಭೋಜನ ಯಜ್ಞದ ರಹಸ್ಯವು. ಜೀವನ ಪ್ರಾಣಾಧಾರಕನಾಗಿ, ದೇಹರಕ್ಷಕನಾಗಿ ಇರುವ ಆ ಸರ್ವಾಧಾರಕ ಬಿಂಬನನ್ನು ಗುಣ, ರೂಪ, ಕ್ರಿಯಾ ಅವತಾರ ಇತ್ಯಾದಿ ಸಮಸ್ತ ವಿಷಯಗಳಲ್ಲಿಯೂ ಅನಂತ ಶುಭಗುಣಗಣಪರಿಪೂರ್ಣ ನೆಂದು. ಉತ್ತಮ ಜ್ಞಾನಾನುಸಂಧಾನದಿಂದ ತಿಳಿದು, ಅರ್ಚಿಸಿ, ಕೊಂಡಾಡುತ್ತಿರಬೇಕೆಂದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು ॥೧೬॥

**ಪ್ರತಿಪದಾರ್ಥ :—**

**ನೂರುವರ್ಷಕೆ** = ಮಾನವರ ನೂರು ವರ್ಷಗಳ ಆಯುರ್ಮಾನದಲ್ಲಿ **ದಿವಸ** = ದಿನಗಳ ಸಂಖ್ಯೆ **ಮೂವತ್ತಾರು ಸಾವಿರವಹವು** = ೩೬,೦೦೦ ಇವೆ (ತಿಂಗಳಿಗೆ ೩೦ ದಿನಗಳು. ೧೨ ತಿಂಗಳಿಗೆ ಒಂದುವರ್ಷ. ಒಂದು ವರ್ಷಕ್ಕೆ ೩೦ × ೧೨ = ೩೬೦ ದಿನಗಳು. ಅಂತಹ ನೂರು ವರ್ಷಗಳಿಗೆ ೩೬೦ × ೧೦೦ = ೩೬,೦೦೦ ದಿನಗಳಾಗುವುವು.) **ನಾಡಿ** = ನಾಡಿಗಳು **ಸ್ತ್ರೀಪುಂ ಭೇದದಲಿ** = ಸ್ತ್ರೀ ನಾಡಿಗಳು ಮತ್ತು ಪುರುಷನಾಡಿಗಳೆಂಬ ವಿಭಾಗ ಕ್ರಮದಲ್ಲಿ **ಶರೀರದೊಳಗೆ** = ಸಾಧನಶರೀರವೆಂದೆನಿಪ ಈ ದೇಹದಲ್ಲಿ **ಇನಿತಿಹವು** = ಈ ಪ್ರಕಾರವಾಗಿ ವಿಭಾಗವಾಗಿ ಇವೆ. **ಹರಿಯು** = ಇಂತಹ ನಾಡ್ಯಭಿಮಾನಿ ದೇವಾಂತರ್ಗತನಾದ ಬಿಂಬರೂಪಿ ಶ್ರೀ ಪರಮಾತ್ಮನ, **ಈರಧಿಕ** = ಎರಡು ಹೆಚ್ಚಾದ, **ಎಪ್ಪತ್ತು ಸಾವಿರ** = ೭೦,೦೦೦ ಸಂಖ್ಯಾಕವಾದ, ಅಂದರೆ, ೭೨,೦೦೦ ನಾಡಿಗಳಲ್ಲಿ, (೩೬,೦೦೦ ಪುರುಷನಾಡಿಗಳು + ೩೬,೦೦೦ ಸ್ತ್ರೀ ನಾಡಿಗಳು = ೭೨,೦೦೦ ನಾಡಿಗಳ ಸಂಖ್ಯಾ) **ಮೂರುತಿಗಳನೆ** = ನಾಡ್ಯಂತರ್ಗತ, ನಾಡ್ಯಭಿಮಾನಿ ದೇವತಾಂತರ್ಗತ ಶ್ರೀ ಪರಮಾತ್ಮನ ೭೨,೦೦೦ ಭಗವದ್ರೂಪಗಳನ್ನು (ತ್ರಿಗುಣಗಳು × ೨೪ ತತ್ತ್ವಗಳು × ವಿಶ್ವಾದಿ ಸಹಸ್ರರೂಪಗಳು = ೩ × ೨೪ × ೧೦೦೦ = ೭೨,೦೦೦

ಭಗವದ್ರೂಪಗಳು.) **ನೆನೆದು** = ಧ್ಯಾನಾಸಕ್ತನಾಗಿ ಚಿಂತಿಸುತ್ತಾ, **ಸರ್ವಾಧಾರಕನ** = ಬ್ರಹ್ಮಾಂಡಾಂತಸ್ಥ ಸಕಲ ಚರಾಚರಗಳಿಗೆ ಮುಖ್ಯಾಶ್ರಯನಾಗಿರುವ, ಹಾಗೂ ಪಿಂಡಾಂಡರೂಪವಾದ ಈ ದೇಹದಲ್ಲಿ ಆವಾಸನಾಗಿರುವ ಜೀವನಿಗೂ ಮತ್ತು ಶರೀರಕ್ಕೂ ಮುಖ್ಯ ಆಧಾರ ಮತ್ತು ರಕ್ಷಕನಾಗಿರುವ ಶ್ರೀ ಪರಮಾತ್ಮನನ್ನು **ಸರ್ವತ್ರ** = ಎಲ್ಲಾ ಕಾಲ ಮತ್ತು ದೇಶಾದಿಗಳಲ್ಲಿ **ಪೂರ್ಣನೆಂದು** = ಅನಂತ ಕಲ್ಯಾಣಗುಣಗಣಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆಂದು **ಅರಿದು** = ಶಾಸ್ತ್ರಯೋನಿತ್ವಾತ್, ಗುರೂಪದೇಶ ದ್ವಾರಾ ಉತ್ತಮಜ್ಞಾನಾನುಸಂಧಾನದಿಂದ ತಿಳಿದವನಾಗಿ, **ಪೂಜಿಸು** = ಅರ್ಚಿಸುತ್ತಾ ಕೊಂಡಾಡುತ್ತಿರು ||೧೯||

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ನೂರು ವರ್ಷಕ್ಕೆ ಆಗತಕ್ಕ ದಿನಗಳು–ಅದರ ಅರ್ಪಣಾ ಕ್ರಮವನ್ನು ಹೇಳತಾರೆ.

ನೂರು ವರುಷಕೆ–ಆಯುರ್ಮಾನ ಪೂರ್ವೋಕ್ತ ನೂರು ವರುಷಕ್ಕೆ ದಿವಸ- ರಾತ್ರಿ ಹಗಲು ಸೇರಿದ ಒಂದು ದಿವಸ, ಇಂಥಾ ಮೂವತ್ತಾರು ಸಾವಿರವಿಹವು- ದಿನಗಳು ೩೬,೦೦೦ ಆಗತದೆ. ತಿಂಗಳಿಗೆ ೩೦ ದಿನ. ೧೨ ತಿಂಗಳಿಗೆ ೩೦ × ೧೨ = ೩೬೦ ದಿನಗಳು. ಅಂದರೆ ಒಂದು ವರ್ಷಕ್ಕೆ ೩೬೦ ದಿನ. ನೂರು ವರ್ಷಗಳಿಗೆ ೩೬೦ × ೧೦೦ = ೩೬,೦೦೦ ದಿನಗಳು, ಇನಿತು–ಇಷ್ಟು ಸಂಖ್ಯಾದಿಂದ, ಶರೀರದೊಳಗೆ– ಈ ಸ್ಥೂಲಶರೀರದೊಳಗೆ ನಾಡಿ, ಇಹವು– ೩೬,೦೦೦ ನಾಡಿಗಳು ಇರೋದಾಗಿ ಅದೆ. ಸ್ತ್ರೀಪುಂಭೇದದಲಿ– ಪೂರ್ವೋಕ್ತ (೩೬,೦೦೦) ಮೂವತ್ತಾರು ಸಾವಿರ ದಿನಗಳು ರಾತ್ರಿ ಹಗಲು ಸೇರಿದ್ದನ್ನು ವಿಭಾಗಮಾಡಿದರೆ, ಏನಾಗತೆ ಎಂದರೆ,

೩೬,೦೦೦ ಹಗಲು ಪುರುಷ ದೇವತೆಗಳು ಅಭಿಮಾನಿಗಳು ಎಂತಲೂ, ೩೬,೦೦೦ ರಾತ್ರಿ ಸ್ತ್ರೀ ದೇವತೆಗಳು ಅಭಿಮಾನಿಗಳು ಎಂತಲೂ ಈ ಪ್ರಕಾರ (೭೨,೦೦೦) ಎಪ್ಪತ್ತೆರಡು ಸಾವಿರ ದಂಪತಿ ನಾಡಿಗಳು ಎಂತ ಕರಿಯೋವಾಗ ತದೆ. ಹರಿಯ– ದೇಹಾಂತರ್ಗತ ಬಿಂಬರೂಪಿ ಹರಿನಾಮಕ ಶ್ರೀ ಪರಮಾತ್ಮ ದೇಹಗತ ೭೨,೦೦೦ ನಾಡಿಗಳ ಒಳಗೆ ಮಾತೃಸ್ಥಾನಗಳಾದ ನಾಡಿಗಳು ನೂರು (ಇದರ ವಿಚಾರ ನಾಡೀಪ್ರಕರಣ ಸಂಧಿಯಲ್ಲಿ ವಿವರವಾಗಿ ಹೇಳಲ್ಪಟ್ಟಿದೆ.) ಈ ನೂರು ನಾಡಿಗಳ ಒಳಗೆ ಆಯಸ್ಸು ನೂರು ವರ್ಷಕ್ಕೆ ಅಭಿಮಾನಿಗಳಾದ ಅನಿರುದ್ಧಾದಿ ರೂಪಗಳು ಇರೋದಾಗಿ ಆದೆ. (ಹಿಂದಿನ ಶ್ಲೋಕದಲ್ಲಿ ರುದ್ರಾಂತರ್ಗತ ನೂರು ರೂಪಗಳ ವಿವರಿಸಿದ್ದು ನೋಡಬೇಕು) ಈರಧಿಕ ಎಪ್ಪತ್ತೆರಡುಸಾವಿರ–ಪೂರ್ವೋಕ್ತ ನೂರು ನಾಡಿಗಳಿಗೆ ನಾಡಿ ಒಂದಕ್ಕೆ ೭೨ ಸಾವಿರ, ೭೨,೦೦೦, ಮೂರುತಿಗಳ ನೆನೆದು–೩೬,೦೦೦ ಸ್ತ್ರೀರೂಪಗಳಾದ ಮೂರ್ತಿಗಳು, ೩೬,೦೦೦ ಪುರುಷರೂಪಗಳಾದ ಮೂರ್ತಿಗಳು. ಈ ಪ್ರಕಾರ ಆಯುರ್ಮಾನ ದಿನಗಳಲ್ಲಿ ಸ್ಮರಣೆಮಾಡಿ, ಸರ್ವಾಧಾರಕನ– ಸರ್ವ ಜೀವರಲ್ಲಿ ದೇಹಾಧಾರಕನಾದ ಶ್ರೀ ಪರಮಾತ್ಮನ, ಸರ್ವತ್ರ– ನಾಡೀ ಅಂತರ್ಗತ, ಆಯುರಂತರ್ಗತ ಶ್ರೀ ಪರಮಾತ್ಮನ್ನ ಐಕ್ಯಚಿಂತನೆ ಮಾಡಿ, ಪೂರ್ಣನೆಂದರಿದು– ಶ್ರೀನಾರಾಯಣ ಗುಣಪೂರ್ಣ ಎಂತ ತಿಳಿದು, ಪೂಜಿಸು– ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಪೂಜಿಸೋವ ನಾಗಬೇಕು ॥೧೯॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಮನುಷ್ಯರ ಆಯುಷ್ಯ ನೂರು ವರ್ಷಗಳಿಗೆ ವರ್ಷ ಒಂದಕ್ಕೆ ೩೬೦ ದಿವಸಗಳ ಪ್ರಕಾರ ನೂರು ವರ್ಷಗಳಿಗೆ ೩೬,೦೦೦ ದಿವಸಗಳಾಗುವುವು. ಇದರಲ್ಲಿ ೩೬,೦೦೦ ಹಗಲು ಮತ್ತು ೩೬ ಸಹಸ್ರ ರಾತ್ರಿಗಳು. ಇವುಗಳನ್ನು ಸೂಚಿಸುವ ನಾಡಿಗಳು ಪುರುಷನಾಡಿಗಳೆಂತಲೂ. ಸ್ತ್ರೀನಾಡಿಗಳೆಂತಲೂ ಈ ಶರೀರದ ಬಲ ಎಡ ಭಾಗಗಳಲ್ಲ ಅಹೋರಾತ್ರಿ ಸಂಖ್ಯಾತ್ಯಕವಾದ ನಾಡಿಗಳು ಒಟ್ಟು ೭೨ ಸಹಸ್ರಗಳಿರುವುವು. ಈ ನಾಡಿಗಳಲ್ಲಿ ಶ್ರೀ ಪರಮಾತ್ಮನು ೭೨

ಸಹಸ್ರ ರೂಪಗಳಿಂದ ಇದ್ದು ನಮ್ಮನ್ನು ರಕ್ಷಿಸುವನು, ಪೂರ್ಣಾನಂದ ಸ್ವರೂಪನಾಗಿಯೇ ಇರುವನು. ಅಂದರೆ, ಶರೀರ ಸಂಬಂಧದಿಂದ ನಾಡಿ ಗಳಿಗೆ ಏನುವಿಚಾರವಾದರೂ ಪರಮಾತ್ಮನು ನಿರ್ಲಿಪ್ತನಾಗಿಯೇ ಇರುವನೆಂದು ತಾತ್ಪರ್ಯ. ಹೀಗೆ ಪರಮಾತ್ಮನು ಸರ್ವಾಧಾರಕನೂ ಪೂರ್ಣನೂ ಆಗಿರು ವನೆಂದು ತಿಳಿದು. ಸರ್ವತ್ರ ಪೂಜಿಸಬೇಕೆಂಬ ತಾತ್ಪರ್ಯ ॥೧೯॥

(೩) "ಭಾವದರ್ಪಣ ಟೀಕಾ" – ವ್ಯಾಖ್ಯಾನ :—

ಶತಸಂವತ್ಸರಕ್ಕೆ ಮೂವತ್ತಾರು ಸಹಸ್ರ ದಿವಸವಾಗುತ್ತವೆ. ಈ ದೇಹದಲ್ಲಿ ಮೂವತ್ತಾರು ಸಾವಿರ ಸ್ತ್ರೀನಾಡಿಗಳು, ಮೂತ್ತಾರು ಸಾವಿರ ಪುರುಷನಾಡಿಗಳು. ಇವುಗಳಲ್ಲಿ ಸ್ತ್ರೀಪುಮಾತ್ಮಕವಾದ ಶ್ರೀಹರಿಯು ಮೂವ್ವ ತ್ತಾರು ಸಾವಿರ ರೂಪದಿಂದ ವ್ಯಾಪ್ತನಾಗಿದ್ದಾನೆಂದು ಭಕ್ತಿಪೂರ್ವಕ ಮನಸ್ಸಿನಲ್ಲಿ ತಂದು ಚಿಂತನೆ ಮಾಡೋದರಿಂದ ನೂರು ವರ್ಷಗಳಲ್ಲೂ ಚಿಂತಿದಂಥ ಫಲಪ್ರಾಪ್ತಿಯಾಗುತ್ತದೆಂದು ಹೇಳುತ್ತಾರೆ–"ನೂರೇತಿ" ॥

**ಉಕ್ತಂಚ ತೈತರೀಯ ಭಾಷ್ಯೇ :—**

**"ಷಟ್‌ತ್ರಿಂಶದ್ರೂಪವಾನ್ವಿಷ್ಣುರ್ವ್ಯಂಜನೇಷು ಚ ಸಂಸ್ಥಿತಃ ॥**
**ತಾನ್ಯೇವ ವಿಷ್ಣುರೂಪಾಣಿ ರಾತ್ರೀಣಾಮಪಿ ದೇವತಾಃ ॥**

**ಏಕೈಕಂಚ ರಹಸ್ರಂ ತನ್ ದಿನೇಷು ಚ ರಾತ್ರಿಷು ।**
**ರೂಪಂ ವಿಷ್ಣೋಃ ಸ್ಥಿತಂ ಏನಂ ಷಟ್‌ತ್ರಿಂಶತತಿ ಸಹಸ್ರಧಾ ॥**

**ಷಟ್‌ತ್ರಿಂಶತಿ ಸಹಸ್ರಾಣಿ ರೂಪಕಾಣಿ ಹರೇರಪಿ ।**
**ತಾನ್ಯೇವಾಹ್ನೋಃ ದೇವತಾನಿ ರೂಪಾಣಿ ಪರಮಾತ್ಮನಃ ॥**

**ದ್ವಾ ಸಪ್ತತಿ ಸಹಸ್ರಾಣಿ ರೂಪಾಣ್ಯೇವಂ ರಮಾಪತೇಃ ।**
**ಶತಾಬ್ಧಾ ನಾಮಾಹೋರಾತ್ರಿ ದೈವತಾನ್ಯುತ್ತಮಾನಿಚ್ ॥**

**ಬೃಹತೀ ಸಹಸ್ರ ವರ್ಣಾನಾಮಾನಿ ಧ್ಯಾತ್ವಾನ ಖಿಲಾನ್ಯಪಿ ।**
**ಶತವರ್ಷ ಹರಿಧ್ಯಾನ ಫಲಮಾಪ್ನೋತಿ ಪೂರುಷ" ॥ -ಇತಿ ॥೧೯॥**

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—

"ನೂರು"-ಇತಿ ॥ ದಿವಸಗಳು = ಹಗಲು. ಇನಿತು = ಇಷ್ಟು. ಈರ = ಎರಡು.

ನೂರು ವರ್ಷಕ್ಕೆ ಆಗುವ ಹಗಲು ರಾತ್ರಿಗಳ ಸಂಖ್ಯೆ ೩೦ × ೧೨ × ೧೦೦ × ೨ = ೭೨,೦೦೦. ಅಷ್ಟೇ ಸಂಖ್ಯಾಕವಾದ ನಾಡಿಗಳು ದೇಹದಲ್ಲಿವೆ. ಆ ನಾಡೀಗತ ಭಗವದ್ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ ಈ ಪದ್ಯ ದಿಂದ ॥೧೯॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

೭೨ ಸಹಸ್ರ ನಾಡಿಗತ, ದೇವರ ಸ್ತ್ರೀಪುರುಷರೂಪ, ದೇವರ ಚಿಂತನೆ ತಿಳಿಸುತ್ತಾರೆ :—

ಪುರುಷರ ನೂರು ವರುಷ ಆಯುಸ್ಸಿಗೆ ದಿನಗಳು ೩೬ ಸಹಸ್ರ ಆಗುವುವು. ದೇಹದ ಬಲಭಾಗದಲ್ಲಿರುವ ೩೬ ಸಹಸ್ರ ನಾಡಿಗಳಲ್ಲಿ ದೇವರು ಅಷ್ಟು ಪುರುಷರೂಪದಿಂದ ಇರುವನೆಂದೂ, ಎಡಭಾಗ ದೇಹದ ೩೬ಸಹಸ್ರ ನಾಡಿಗಳಲ್ಲಿ ಅಷ್ಟು ಸ್ತ್ರೀರೂಪಗಳಿಂದ ಇರುವನೆಂದೂ, ಜ್ಞಾನಿಗಳಿಂದ ತಿಳಿದು, ಒಟ್ಟು ಈ ೭೨ ಸಹಸ್ರ ನಾಡಿಗಳಲ್ಲಿಯೂ, ಸರ್ವದೇಶಕಾಲಗಳ ಲ್ಲಿಯೂ ಪರಿಪೂರ್ಣನಾಗಿ ದೇವರಿರುವನೆಂದು ತಿಳಿದು, ಅಷ್ಟು ರೂಪಗಳನ್ನು ಧ್ಯಾನಿಸಿ, ಪೂಜಿಸಬೇಕೆಂದು ನಿರೂಪಿಸುತ್ತಾರೆ. ॥೧೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ನಾಡೀಗತ ೭೨ ಸಹಸ್ರ ಸಂಖ್ಯಾಕವಾದ ಭಗವದ್ರೂಗಳ ಚಿಂತನೆ ಮತ್ತು ಧ್ಯಾನೋಪಾಸನಾಕ್ರಮವನ್ನು ನಿರೂಪಿಸುತ್ತಾರೆ. ಪ್ರಸಕ್ತ ೧೯ನೆಯ ಈ ಪದ್ಯದಿಂದ.

ಮಾನವರ ಆಯುಃಪ್ರಮಾಣವನ್ನು ಸಾಮಾನ್ಯವಾಗಿ ನೂರು ವರ್ಷಗಳೆಂದು ಪರಿಗಣಿಸಬಹುದು. ಇದಕ್ಕೆ **"ಶತಮಾನಂ ಭವತಿ ಶತಾಯುಃ"** - ಎಂಬುದಾಗಿ ಜ್ಞಾನಿಗಳಿಗೆ ನಮನ ಮಾಡಿದಾಗ, ಆಶೀರ್ವದಿಸುವುದು ಶಾಸ್ತ್ರಸಮ್ಮತ.

ಒಂದು ಮಾಸಕ್ಕೆ ೩೦ ದಿವಸಗಳು. ಒಂದು ವರ್ಷಕ್ಕೆ ೧೨ ಮಾಸಗಳು ಇದರಂತೆ ಒಂದು ವರ್ಷಕ್ಕೆ ೩೦ × ೧೨ = ೩೬೦ ದಿವಸಗಳಾಗುವುವು. ಅಂತಹ ಆಯುರ್ಮಾನವಾದ ನೂರುವರ್ಷಗಳಿಗೆ ೩೬೦ × ೧೦೦ = ೩೬,೦೦೦ ದಿವಸಗಳಾಗುವುವು.

ದೇಹದಲ್ಲಿ ಆದ್ಯಂತವಾಗಿ ನಾಡಿಗಳು ಓತಪ್ರೋತವಾಗಿ ಹಬ್ಬಿ ಹರಡಿವೆ. ಇಂತಹ ನಾಡಿಗಳು ದೇಹಗತ ೭೨,೦೦೦. ಈ ನಾಡಿಗಳಲ್ಲಿ ಎರಡು ಪ್ರಕಾರ.

(೧) ಪುರುಷನಾಡಿ ಮತ್ತು (೨) ಸ್ತ್ರೀ ನಾಡಿಗಳು. ಅಂದರೆ ೩೬,೦೦೦ × ೨ = ೭೨,೦೦೦ ನಾಡಿಗಳಾಗಿ ಸ್ತ್ರೀಪುಂಭೇದದಲ್ಲಿ ವಿಭಾಗವಾಗಿವೆ.

ಒಂದು ದಿವಸಕ್ಕೆ ಒಂದು ಹಗಲು (೧೨ ಘಂಟೆಗಳು-ಸೂರ್ಯೋದಯದಿಂದ ಸೂರ್ಯಾಸ್ತ ಪರ್ಯಂತ) ಮತ್ತು ಒಂದು ರಾತ್ರಿ. ಅಂದರೆ ನೂರು ವರ್ಷಗಳ ಮಾನವರ ಆಯುರ್ಮಾನಕ್ಕೆ ೩೬೦೦೦ × ೨ = ೭೨,೦೦೦ ಹಗಲು ರಾತ್ರಿಗಳಾಗುವುವು.

ಇದರಲ್ಲಿ ನಾಡೀಗತ ಸಂಖ್ಯಾವಿವರಣೆ ಇಂತಿದೆ :–

(೧) ದೇಹದಲ್ಲಿ **ಪಿಂಗಳಾನಾಡಿಯಿಂದ** ೩೬ ಸಹಸ್ರ ನಾಡಿಗಳು ಹೊರಡುವುವು. ಇವು ದೇಹದ **ಬಲ ಪಾರ್ಶ್ವದಲ್ಲಿ** ವ್ಯಾಪ್ತವಾಗಿವೆ. ದೇಹದ ಬಲಪಾರ್ಶ್ವಗತ ೩೬ ಸಹಸ್ರ ಈ ನಾಡೀ ವ್ಯೂಹಕ್ಕೆ **ಪುರುಷನಾಡಿ** ಗಳೆಂದು ಹೆಸರು. ಈ ಪುರುಷನಾಡಿಗಳಲ್ಲಿ ಬಿಂಬರೂಪಿ ಶ್ರೀ ಪರಮಾತ್ಮನು ೩೬ ಸಹಸ್ರ ಪುರುಷರೂಪದಿಂದ **ವಾಯುದೇವರಲ್ಲಿ** ಅಂತಸ್ಥಿತನಾಗಿದ್ದು. ಆ ಪುರುಷನಾಡಿ ಗಳಿಗೆ ಅಭಿಮಾನಿಗಳಾದ ದೇವತೆಗಳ ದ್ವಾರಾ ಹಗಲು ಹೊತ್ತಿನಲ್ಲಿ ನಾಡೀಗತ ವ್ಯಾಪಾರವನ್ನು ಮಾಡಿ, ಮಾಡಿಸುತ್ತಿರುವನು. ಈ ೩೬ ಸಹಸ್ರ ಪುರುಷ ನಾಡಿಗಳೇ **ದಿವಾನಾಡಿಗಳು.**

(೨) ದೇಹದಲ್ಲಿ **ಇಡಾನಾಡಿಯಿಂದ** ೩೬ ಸಹಸ್ರ ನಾಡಿಗಳು ಶರೀರದ **ಎಡಪಾಶ್ವದಲ್ಲಿ** ಹಬ್ಬಿ ಹರಡಿವೆ. ಇವುಗಳಿಗೆ **ಸ್ತ್ರೀನಾಡಿಗಳೆಂದು** ಹೆಸರು. ೩೬ ಸಹಸ್ರಸಂಖ್ಯಾಕವಾದ ಈ ಸ್ತ್ರೀನಾಡಿಗಳಲ್ಲಿ ಬಿಂಬರೂಪಿ ಶ್ರೀ ಪರಮಾತ್ಮನು ಸ್ತ್ರೀರೂಪದಿಂದ **ರಯೀನಾಮಕಳಾದ ಶ್ರೀ ಭಾರತಿದೇವಿಯರಲ್ಲಿ** ಮುಖ್ಯಪ್ರಾಣಾಂತರ್ಗತನಾಗಿದ್ದು ಅ ೩೬ ಸಹಸ್ರ ನಾಡ್ಯಭಿಮಾನೀ ದೇವತೆ ಗಳ ದ್ವಾರಾ ರಾತ್ರಿಕಾಲದಲ್ಲಿ ನಾಡೀ ಸಂಬಂಧ ಕ್ರಿಯಾವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು. ದೇಹ ಎಡಪಾರ್ಶ್ವಗತ ಈ ೩೬ ಸಹಸ್ರ ನಾಡಿಗಳಿಗೆ **ರಾತ್ರಿ (ನಿಶಾ) ನಾಡಿಗಳೆಂದು** ಹೆಸರು.

| | |
|---|---|
| ಅಲ್ಲಿಗೆ ದಿವಾನಾಡಿಗಳ ಸಂಖ್ಯೆ | = ೩೬,೦೦೦ |
| ಮತ್ತು ರಾತ್ರಿನಾಡಿಗಳ ಸಂಖ್ಯೆ | = ೩೬,೦೦೦ |
| **ಒಟ್ಟು ನಾಡಿಗಳ ಸಂಖ್ಯೆ** | **= ೭೨,೦೦೦** |

ಈ ೭೨ ಸಹಸ್ರ ಸಂಖ್ಯಾಕವಾದ ನರವ್ಯೂಹಗಳ ವಿವರಣೆಯ ವಿಹಂಗಮ ನೋಟವನ್ನು ಈ ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರಮ ಸಂಖ್ಯೆ | ದೇಹಗತ ಪಾರ್ಶ್ವ | ನಾಡಿ | ಪ್ರಭೇದ | ಕಾಲಸೂಚಕ | ಅಧಿಷ್ಠಾನ | ಸಂಖ್ಯೆ |
|---|---|---|---|---|---|---|
| ೧ | ಬಲಭಾಗದಲ್ಲಿ | ಪಿಂಗಳಾ | ಪುರುಷನಾಡಿಗಳು | ದಿವಾನಾಡಿಗಳು | ಮುಖ್ಯಪ್ರಾಣ ದೇವರು | ೩೬,೦೦೦ |
| ೨ | ಎಡಭಾಗದಲ್ಲಿ | ಇಡಾ | ಸ್ತ್ರೀನಾಡಿಗಳು | ರಾತ್ರಿ ನಾಡಿಗಳು | ರಮೀ ನಾಮಕ ಭಾರತಿದೇವಿ | ೩೬,೦೦೦ |
| | ಪುಂ ಸ್ತ್ರೀ ಭೇದದಿಂದ ಇರುವ ಒಟ್ಟು ನಾಡಿಗಳ ಸಂಖ್ಯೆ | | | | = | ೭೨,೦೦೦ |

ಈ ನಾಡಿಗಳ ಸಂಖ್ಯೆಯನ್ನು ದಾಸರಾಯರು "**ಈರಧಿಕ ಎಪ್ಪತ್ತುಸಾವಿರ**"ಎಂದಿದ್ದಾರೆ. ಅಂದರೆ ಈರಧಿಕ=ಎರಡು ಹೆಚ್ಚಾದ, ಎಪ್ಪತ್ತು ಸಾವಿರ ಅಂದರೆ (೭೦+೨) ಸಹಸ್ರ=೭೨,೦೦೦ ನಾಡಿಗಳೆಂದು ತಾತ್ಪರ್ಯ.

ಇಂತಹ ೭೨ ಸಹಸ್ರ ನಾಡಿಗಳಲ್ಲಿ ಸ್ತ್ರೀ ಪುಂ ಭೇದದಲ್ಲಿ ವ್ಯಾಪ್ತನಾಗಿರುವ ಹರಿನಾಮಕ ಬಿಂಬರೂಪಿ ಆ ಪರಮಾತ್ಮನ ವ್ಯಾಪಾರ ಪರಮಾಶ್ಚರ್ಯಕರ ಹಾಗೂ ಪರಮಾದ್ಭುತ! ಈ ಶರೀರದ ಪೋಷಣೆ ಹಾಗೂ ರಕ್ಷಣೆಯು ನಾಡಿಗಳ ದ್ವಾರಾ ನಡೆಯುವುದರಿಂದ ಇಂತಹ ೭೨ ಸಹಸ್ರ ನಾಡ್ಯಂತರ್ಗತ ಭಗವದ್ರೂಪಗಳ ಚಿಂತನೆ ಭಗವದನುಗ್ರಹಾಕಾಂಕ್ಷಿಗಳಾದ **ಸಾಧ** ಕರಿಗೆ ಅತ್ಯಗತ್ಯ. ಆ ಪರಮಾತ್ಮನು ಸರ್ವಾಧಾರಕನು, ಚರಾಚರ ಸಮಸ್ತವಸ್ತುಗಳೂ ಅವನಲ್ಲಿಯೇ ಆಶ್ರಯ ಹೊಂದುವುವು. ಅಂತಹ ಸರ್ವಾಧಾರಕವಾದ ಪರಮಾತ್ಮನು ಚರಾಚರಾತ್ಮಕವಾದ ಈ ಬ್ರಹ್ಮಾಂಡದ ಒಳಗೂ,

ಹೊರಗೂ, ಅಣುರೇಣು ತೃಣಕಾಷ್ಠ ಪರಿಪೂರ್ಣನಾಗಿ ಸರ್ವ, ಜಡ, ಚೇತನರು, ಕಾಲ, ದೇಶ, ಅವಸ್ಥಾದಿಗಳಲ್ಲಿ ವ್ಯಾಪ್ತನಾಗಿದ್ದಾನೆ. ಅಂತಹ ಸರ್ವತ್ರವ್ಯಾಪ್ತನಾದ ಶ್ರೀ ಪರಮಾತ್ಮನು ಅನಂತ ಕಲ್ಯಾಣ ಗುಣ ಗಣ ಪರಿಪೂರ್ಣನು. ಚಿನ್ಮಯ ರೂಪಿಯಾದ ಆ ಮಹಾಮಹಿಮನು ಗುಣ, ರೂಪ, ಕ್ರಿಯಾ, ಅನಂತಾನಂತ ಅವತಾರಗಳು ಇತ್ಯಾದಿ ಸಮಸ್ತ ಧರ್ಮಗಳಲ್ಲಿಯೂ ಪರಿಪೂರ್ಣನಾಗಿದ್ದಾನೆಂದು, ಶಾಸ್ತ್ರಯೋನಿತ್ವಾತ್, ಗುರೂಪದೇಶ ದ್ವಾರಾ, ತಿಳಿದು, ದೇಹಗತ ಎಪ್ಪತ್ತೆರಡು ಸಹಸ್ರ ನಾಡೀ ಗತ ಆ ಭಗವದ್ರೂಪಗಳನ್ನು ಸರ್ವಕಾಲ ದೇಶಗಳಲ್ಲಿ ಚಿಂತಿಸುತ್ತಾ, ಆ ಭಗವದ್ರೂಪಗಳನನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾಕ್ರಮದಿಂದ ಪೂಜಿಸ ಬೇಕೆಂದು ಈ ಪರಮರಹಸ್ಯ ಉಪಾಸನಾ ಮಾರ್ಗವನ್ನು ತಿಳಿಸುತ್ತಾರೆ. ಜ್ಞಾನಿ ಶ್ರೇಷ್ಠರಾದ ದಾಸರಾಯರು. ಅಲ್ಲಿಗೆ ಮೂವತ್ತಾರು ಸಹಸ್ರ ದಂಪತಿಗಳ ಪೂಜಾ ನಿರಂತರ ಮಾಡಿದ ಮಹಾ ಪುಣ್ಯಫಲವು ಪ್ರಾಪ್ತವಾಗು ವುದು. ॥೧೯॥

## ಪದ್ಯ (೨೦)

**ಮೂಲ :-**

**ಕಾಲ ಕರ್ಮ ಗುಣ ಸ್ವಭಾವಗ ।**
**ಳಾಲಯನು ತಾನಾಗಿ ಲಕುಮೀ ।**
**ಲೋಲ ತತ್ತದ್ರೂಪನಾಮದಿ ಕರೆಸುತೊಳಗಿದ್ದು ॥**
**ಲೀಲೆಯಿಂದಲಿ ಸರ್ವಜೀವರ ।**
**ಪಾಲಿಸುವ ಸಂಹರಿಸಿ ಸೃಷ್ಟಿಪ ।**
**ಮೂಲಕಾರಣ ಪ್ರಕೃತಿ ಗುಣಕಾರ್ಯಗಳ ಮನೆಮಾಡಿ ॥೨೦॥**

**ಅವತರಣಿಕೆ :–**

ಭೂತ, ಭವಿಷ್ಯ ಮತ್ತು ವರ್ತಮಾನಗಳೆಂಬ ಕಾಲತ್ರಯಗಳು, ಮಾಸ ಸಂವತ್ಸರಾದಿ ಕಾಲಪ್ರಭೇದಗಳು, ಸತ್ವಾದಿ ಗುಣತ್ರಯಗಳು, ಅನಾದಿಕರ್ಮ, ತ್ರಿವಿಧ ಜೀವರ ಸ್ವರೂಪಯೋಗ್ಯತೆ ಎಂಬ ಸ್ವಭಾವ ಇವು ಗಳಲ್ಲಿ ತಾನೇ ಅಂತಸ್ಥಿತನಾಗಿದ್ದು, ತದ್ರೂಪ, ತನ್ನಾಮಕ, ತತ್ತಶ್ಚಬ್ದ ವಾಚ್ಯನಾಗಿ ಕರೆಯಿಸಿಕೊಳ್ಳುತ್ತಾ. ಲೀಲಾಮಾತ್ರದಿಂದ, ನಿರಾಯಾಸವಾಗಿ ಸಮಸ್ತ ಜೀವಗಣವನ್ನೂ ಸೃಷ್ಟಿಸಿ, ಸಂರಕ್ಷಿಸಿ, ಕೊನೆಯಲ್ಲಿ ಸಂಹರಿಸುವ. ಆ ಲೀಲಾಮಾನುಷ ವಿಗ್ರಹನು ಮೂಲಪ್ರಕೃತಿ ಮತ್ತು ಅದರ ಧರ್ಮಗಳಾದ ತ್ರಿಗುಣಗಳ ವೈಷಮ್ಯದಿಂದ ಸೃಷ್ಟಿ ಮಾಡುವ ಆ ಪರಮಾತ್ಮನ ಸೃಷ್ಟ್ಯಾದಿ ವ್ಯಾಪಾರ ವಿಶೇಷಗಳನ್ನು ತಿಳಿಸುತ್ತಾರೆ- **"ಕಾಲಕರ್ಮಗುಣ"**–ಎಂಬ ಪ್ರಸಕ್ತ ಸಂಧಿಗತ ೨೦ನೆಯ ಈ ಪದ್ಯದಿಂದ ॥೨೦॥

**ಪ್ರತಿಪದಾರ್ಥ :–**

**ಕಾಲ** = ಭೂತ, ಭವಿಷ್ಯ ಮತ್ತು ವರ್ತಮಾನಗಳೆಂಬ ಕಾಲ ಪ್ರಭೇದ ಗಳು, ದಿನ, ಮಾಸ, ಸಂವತ್ಸರಾದಿಗಳು, ಯುಗಪ್ರಳಯ, ಇತ್ಯಾದಿ ಕಾಲಮಾನಗಳು **ಕರ್ಮ** = ಅನಾದಿಕರ್ಮ, ಸಂಚಿತ, ಆಗಾಮಿಗಳೆಂಬ ಕರ್ಮಪರಂಪರೆ **ಗುಣ** = ಸತ್ವಾದಿ ಗುಣತ್ರಯಗಳು **ಸ್ವಭಾವ** = ಮುಕ್ತಿಯೋಗ್ಯರು, ನಿತ್ಯ ಸಂಸಾರಿಗಳು ತಮೋಯೋಗ್ಯರು ಎಂಬ ತ್ರಿವಿಧ ಜೀವರ ಅನಾದಿನಿತ್ಯವಾದ ಸ್ವರೂಪಯೋಗ್ಯತೆ **ಗಳ ಆಲಯನು** = ಇವುಗಳನ್ನು ಅಧಿಷ್ಠಾನಮಾಡಿಕೊಂಡು, **ತಾನಾಗಿ** = ಅವುಗಳಲ್ಲಿ ಅಂತಸ್ಥಿತ ನಾಗಿ ಸರ್ವತಂತ್ರ ಸ್ವತಂತ್ರನಾಗಿದ್ದು, **ಲಕುಮೀಲೋಲ** = ಪ್ರಕೃತಿಗೆ ಅಭಿಮಾನಿಗಳಾದ ಶ್ರೀ ಲಕ್ಷ್ಮೀದೇವಿಯರನ್ನು ಉಪಾದಾನ ಕಾರಣವನ್ನಾಗಿ ಮಾಡಿಕೊಂಡು, ಅವರಲ್ಲಿ ಕ್ರೀಡಾವಿಶಿಷ್ಠನಾಗಿರುವ ಶ್ರೀ ಲಕ್ಷ್ಮೀನಾರಾಯಣನು **ತತ್ತದ್ರೂಪ** = ಕಾಲ, ಗುಣ, ಕರ್ಮ, ಸ್ವಭಾವಗನುಗುಣವಾಗಿ ತದ್ರೂಪನಾಗಿ, **ನಾಮದಿ** = ಆಯಾಯಾ ಅಧಿಷ್ಠಾನಗಳ ಹೆಸರಿನಿಂದಲೇ

**ಕರೆಸುತ**= ವಾಚ್ಯನಾಗಿದ್ದು, **ಒಳಗಿದ್ದು**= ಪೂರ್ವೋಕ್ತ ಅಧಿಷ್ಠಾನಾಂತರ್ಗತನಾಗಿದ್ದು, **ಲೀಲೆಯಿಂದಲಿ**= ಕ್ರೀಡಾಮಾಡುತ್ತಾ, **ಸರ್ವಜೀವರ**= ಸಮಸ್ತ ಜೀವಸಮುದಾಯವನ್ನು **ಮೂಲಕಾರಣ**=ಬ್ರಹ್ಮಾಂಡದ ಸೃಷ್ಟಿಗೆ ಮೂಲಸಾಮಗ್ರಿಯಾದ **ಪ್ರಕೃತಿ**=ಪ್ರಕೃತಿಯ **ಗುಣಗಳ**= ಗುಣತ್ರಯಗಳನ್ನೇ ಉಪಾದಾನ ಕಾರಣವನ್ನಾಗಿ ಮಾಡಿಕೊಂಡು **ಕಾರ್ಯಗಳ**= ಆ ತ್ರಿಗುಣಗಳ ಕ್ರಿಯಾರೂಪವಾದ **ಮನೆಮಾಡಿ**=ವ್ಯಾಪಾರದಲ್ಲಿ ಅಧಿಷ್ಟಿತನಾಗಿದ್ದು, **ಸೃಷ್ಟಿಪ**= ಜಗತ್ತನ್ನು ಗುಣವೈಷಮ್ಯದಿಂದ ಸೃಷ್ಟಿಮಾಡಿ. **ಪಾಲಿಸುವ**= ಸೃಷ್ಟವಾದ ಜಗತ್ತನ್ನೂ ಮತ್ತು ಸಮಸ್ತ ಜೀವವರ್ಗವನ್ನು ರಕ್ಷಿಸುತ್ತಾನೆ. **ಸಂಹರಿಸಿ**=ಲಯಕಾಲದಲ್ಲಿ ತನ್ನ ಉದರದಲ್ಲಿಟ್ಟು ಕೊಳ್ಳುವನು ಅಂದರೆ ಸೃಷ್ಟಿ, ಪಾಲನೆ ಮತ್ತು ಸಂಹಾರ ಎಂಬ ಜಗದ್ವ್ಯಾಪಾರಗಳಿಗೆ ನಿಯಾಮಕನಾಗಿ, ನಿರ್ವಹಿಸುತ್ತಿರುವನು ಎಂದು ತಾತ್ಪರ್ಯ ॥೨೦॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಸೃಷ್ಟಿ, ಸ್ಥಿತಿ, ಸಂಹಾರಾದಿಗಳು ಶ್ರೀ ಪರಮಾತ್ಮ ಮಾಡತ್ತಾನೆ. ಎಂತ ಹೇಳತಾರೆ.

ಕಾಲ- ಮಹಾಪ್ರಳಯಾನಂತರ. ಸೃಷ್ಟಿಕಾಲ, ಗುಣ-ತ್ರಿಗುಣಾತ್ಮಕವಾದ ಜೀವರಿಗೆ ಬಂಧಕ ರೂಪದಿಂದ ಇರುವ ಅನಾದಿ ಲಿಂಗಶರೀರ, ಕರ್ಮ ಇದರ ತೃತೀಯ ಪರಿಚ್ಛೇದವಾದ ತಮಃ ಪರಿಚ್ಛೇದಗತ ಅನಾದಿ ಕರ್ಮ, ಸ್ವಭಾವ- ಈ ಲಿಂಗಾಂತರ್ಗತನಾದ ಜೀವನ ಅನಾದಿ ಸ್ವರೂಪ ಸ್ವಭಾವ. ಹಾಂಗೆ ಜೀವ, ಗಳ- ಇವುಗಳ ಧರಿಸೋ ವಿಷಯದಲ್ಲಿ, ಆಲಯನು ತಾನಾಗಿ- ಅಂದರೆ, ಮನೆ, ಇಂಥಾ ಆಲಯ ಭೂತನು, ಎಂದರೆ, ಲಿಂಗ

ದೇಹದಿಂದ ಸಹಿತರಾದ ಜೀವರ ಧರಿಸೋದಕ್ಕೆ ಆಲಯಭೂತನಾಗಿ ಪ್ರಳಯಕಾಲದಲ್ಲಿ ಸರ್ವಜೀವರ ಉದಕದಲ್ಲಿ ಧರಿಸಿ, ಲಕುಮೀಲೋಲ– ಪ್ರಳಯೋದಕದಲ್ಲಿ ಶಯನ ಮಾಡಿ ಲಕ್ಷ್ಮೀದೇವೇರ ಕೂಡ ಲೋಲ ನಾಗಿದ್ದಾನೆ. ಆಗ್ಗೆ ಬ್ರಹ್ಮಾದಿಗಳು ದಾರೂ ಇರೋದಿಲ್ಲ. ತತ್ತದ್ರೂಪ ನಾಮದಿ ಕರೆಸುತ ತನ್ನ ಉದರಗತ ಜೀವರ (೧) ಸ್ವರೂಪದಲ್ಲಿ, ಸ್ವರೂಪ ಭಾವದಲಿ, (೨) ಲಿಂಗದೇಹದಲಿ, (೩) ಲಿಂಗದೇಹಗತ ಅನಾದಿಕರ್ಮ ದಲ್ಲಿ. ಈ ಮೂರರಲ್ಲಿ ಆಯಾ ರೂಪಗಳಿಂದ, ಆಯಾ ನಾಮಗಳಿಂದ ಕರೆಸುತ, ಒಳಗಿದ್ದು–ಜೀವದಲಿ, ಲಿಂಗದಲಿ, ಅನಾದಿ ಕರ್ಮದಲಿ, ಈ ಮೂರರಲಿ ಇದ್ದು, ಪ್ರಳಯಾಂತವಾಗಿ ಸೃಷ್ಟಿಕಾಲ ಪ್ರಾರಂಭವಾಗುತ್ತಿರ ಲಾಗಿ, ಲೀಲೆಯಿಂದಲಿ–ತನ್ನ ಆಟದಿಂದ ಲಿಂಗಗತ ರಜೋಗುಣದಿಂದ ಗುಣವೈಷಮ್ಯ ಐದಿಸಿ, ಅನಂತರ ಕ್ರಮಾತ್ ಅನಿರುದ್ಧ ಶರೀರದವರೆಗ್ಯೂ ಸೂಕ್ಷ್ಮ ಸೃಷ್ಟಿ ಮಾಡಿದ ನಂತರ, ಸ್ಥೂಲಶರೀರಗಳಿಗೆ ಕಾರಣ–ಉಪಾದಾನ ಕಾರಣವಾದ, ಮೂಲ–ಬ್ರಹ್ಮಾಂಡ ಸೃಷ್ಟಿಗೆ ಮೂಲಭೂತವಾದ, ಗುಣ– ಗುಣತ್ರಯಾತ್ಮಕ ಲಿಂಗೋಪಾದನಕ್ಕೆ ಅನ್ಯವಾದ ಗುಣತ್ರಯಾತ್ಮಕ, ಪ್ರಕೃತಿ–ಮೂಲ ಜಡ ಪ್ರಕೃತಿ ದೆಶೆಯಿಂದ, ಕಾರ್ಯಗಳ–ಕಾರ್ಯರೂಪ ವಾದ ಸ್ಥೂಲದೇಹಗಳ, ಮನೆಮಾಡಿ–ಸೂಕ್ಷ್ಮ ಸೃಷ್ಟಿಯಲ್ಲಿ ಅಂಡದ ಹೊರಗೆ ಲಿಂಗೋಪಾದಾನದಿಂದ ಅನಿರುದ್ಧ ಶರೀರ ಹೊಂದಿದ ಪ್ರಾಣಿಗಳ ಆ ದೇಹ ಸಹಿತ ಆವಾಸರಾಗಿ ಇರೋದಕ್ಕೆ ಮನೆಮಾಡಿ, ಅದರಲಿ ಜೀವ ರನ್ನು ಪ್ರವೇಶಮಾಡಿಸಿ, ಅಂಡದ ಒಳಗೆ ಸ್ಥೂಲಶರೀರದಿಂದ, ಸೃಷ್ಟಿಪ– ಸರ್ವಜೀವರನ್ನ ಸೃಷ್ಟಿಮಾಡತಾನೆ. ಸರ್ವಜೀವರ– ಈ ಸೃಷ್ಟಿ ಮಾಡಿದ ಸರ್ವಜೀವರನ್ನ, ಪಾಲಿಸುವ–ಸಂರಕ್ಷಣೆ ಮಾಡುವ, ಸಂಹರಿಸಿ–ಪ್ರಳಯ ಕಾಲದಲ್ಲಿ ಸಂಹರಿಸುವ, ಸಂಹಾರ ಮಾಡಿ. ಪೂರ್ವೋಕ್ತ ಪ್ರಕಾರ ಉದರ ದಲಿ ಧರಿಸುವ, ಸಾಧನೆ ಪೂರ್ತಿ ಆದವರಿಗೆ ಮೋಕ್ಷ ಕೂಡುವ. ಕಾಲ ಕರ್ಮ ಸ್ವಭಾವಗಳ ಅನುಸರಿಸಿ, ಅನೇಕ ಜನ್ಮಗಳಿಂದ ಸೃಷ್ಟಿ, ಸ್ಥಿತಿ. ಸಂಹಾರಾದಿಗಳು ಮಾಡತಾ ಇರತಾನೆ ಎಂತ ತಾತ್ಪರ್ಯ. ॥೨೦॥

## (೨) "ಭಾವಪ್ರಕಾಶಿಕೆ"–ವ್ಯಾಖ್ಯಾನ

ಶ್ರೀ ಪರಮಾತ್ಮನ ಸೃಷ್ಟ್ಯಾದಿ ಮಹಿಮೆಯನ್ನು– "ಕಾಲಕರ್ಮ"–ವೆಂಬ ಪದ್ಯದಿಂದ ಹೇಳುತ್ತಾರೆ :–

ಜೀವರು ಅನಾದಿಯಿಂದಲೂ ಸಾತ್ವಿಕರು, ರಾಜಸರು, ತಾಮಸರೆಂದು ಮೂರು ವಿಧವಾದ ಸ್ವಭಾವವುಳ್ಳವರಾಗಿದ್ದಾರೆ. ಅವರ ಕರ್ಮಗಳೆಂದರೆ, ಸಾತ್ವಿಕರು ಸುಖ ಪ್ರಾರಬ್ಧ ಕರ್ಮವುಳ್ಳವರು. ಮುಕ್ತಿಯೋಗ್ಯನೆನಿಸುವರು. ರಾಜಸರು ಸುಖ ದುಃಖ ಮಿಶ್ರವಾದ ಪ್ರಾರಬ್ಧದವರು. ತಾಮಸರು ದುಃಖ ಪ್ರಾರಬ್ಧ ಕರ್ಮ ಉಳ್ಳವರು. ಇವು ಅನಾದಿಕಾಲವಾಗಿ ಜೀವರ ಸ್ವಭಾವವಾಗಿಯೇ ಇರುವುವು. ಶ್ರೀ ಲಕ್ಷ್ಮೀರಮಣನು ಪರಮಾಣು ಮೊದಲಾದ ದ್ವಿಪರಾರ್ಧಾವಸಾನವಾದ ಕಾಲಾತ್ಮಕನಾಗಿ, ಜೀವರ ಗುಣ ಕರ್ಮಗಳನ್ನನುಸರಿಸಿ, ಅಂದರೆ. ಸಾತ್ವಿಕರ ಪ್ರಾರಬ್ಧವನ್ನನುಸರಿಸಿ ತಾರತಮ್ಯ ಪ್ರಕಾರ ಅವರಿಂದ ಸುಖ ಸಾಧನವನ್ನು ಮಾಡಿಸುತ್ತಲೂ, ರಾಜಸರ ಗುಣ ಕರ್ಮಗಳನ್ನನುಸರಿಸಿ ಸಂಸಾರ ಸಾಧನವನ್ನು ಮಾಡಿಸುತ್ತಲೂ, ತಾಮಸರ ಯೋಗ್ಯತಾನುಸಾರ ದುಃಖಕ್ಕೆ ಸಾಧನವನ್ನು ಮಾಡಿಸುತ್ತಲೂ, ತ್ರಿವಿಧ ಜೀವರನ್ನೂ ವಿಷ್ಣುರೂಪದಿಂದ ಪಾಲಿಸುವನು. ಪ್ರಳಯ ಕಾಲದಲ್ಲಿ ರುದ್ರಾಂತರ್ಗತನಾಗಿ ರುದ್ರರೂಪದಿಂದಿದ್ದು, ಪ್ರಪಂಚವನ್ನು ದಹಿಸಿ, ಸರ್ವಜೀವರಿಗೆ ಅವರವರ ಗುಣ ಕರ್ಮಾನುಸಾರವಾದ ಸುಖ, ಮಿಶ್ರ, ದುಃಖ ರೂಪಗಳಾದ ಮುಕ್ತಿ, ಸಂಸಾರ ಮತ್ತು ತಮಸ್ಸು–ಎಂಬ ಮೂರು ವಿಧವಾದ ಗತಿಗಳನ್ನು ಕೊಡಿಸುವನು. ಈ ವರೆವಿಗೂ ಸೃಷ್ಟಿಗೆ ಬಾರದ ಜೀವರ ಗುಣ ಕರ್ಮಾನುಸಾರವಾಗಿ ಮೂಲ ಪ್ರಕೃತಿಯನ್ನು ಕಾರಣ ಮಾಡಿ, ಸೃಷ್ಟಿಸುವನು. ಸೃಷ್ಟ್ಯಾದಿಗಳಿಗೆ ಈ ಪ್ರಕೃತಿ ಬ್ರಹ್ಮಾದಿಗಳು ನಿಮಿತ್ತ ಕಾರಣರು. ಮುಖ್ಯಕಾರಣನು ಶ್ರೀ ಪರಮಾತ್ಮನೇ. ॥೨೦॥

## (೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :–

ಮೂಲ ಪ್ರಕೃತಿಯೇ ಲಕ್ಷ್ಮಿಯು. ಕಾರಣ ಪ್ರಕೃತಿಯೇ ಜಡ ಪ್ರಕೃ

ತಿಯು. ತ್ರಿಗುಣವು ಇವುಗಳನ್ನೇ ಮನೆಮಾಡಿ ಸೃಷ್ಟ್ಯಾದಿ ಕಾರ್ಯ ನಡೆಸುವ ನೆಂದು ಹೇಳುತ್ತಾರೆ– "ಕಾಲೇತಿ" ॥೨೦॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–

"ಕಾಲ"- ಇತಿ ॥ ಸ್ವಭಾವತಃ - ಯೋಗ್ಯತಾ ॥ ಲೋಲ :- ಆಸಕ್ತಃ ॥ ಶ್ರೀ ಪರಮಾತ್ಮನು ಕಾಲ. ಕರ್ಮ. ಗುಣ, ಸ್ವಭಾವಗಳಲ್ಲಿ ಅಂತಸ್ಥಿತ ನಾಗಿದ್ದಾನೆ. ಅವುಗಳಲ್ಲಿ ತದ್ರೂಪ, ತನ್ನಾಮನಾಗಿದ್ದಾನೆ. ತನ್ನ ಇಚ್ಛಾ ಮಾತ್ರದಿಂದ ಸಮಸ್ತ ಬ್ರಹ್ಮಾಂಡದ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡು ವನು. ಸ್ವಭಾವವೆಂದರೆ ಜೀವರ ಸ್ವರೂಪಯೋಗ್ಯತೆ. ॥೨೦॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :–

ಕಾಲ, ಕರ್ಮ, ಗುಣ, ಸ್ವಭಾವ ನಿಯಾಮಕ, ರೂಪಸ್ಮರಣೋ ಪಾಸನ್ಯೆತಿಳಿಸುತ್ತಾರೆ :–

ಭೂತ ಭವಿಷ್ಯತ್ತು ವರ್ತಮಾನವೆಂದು ಮೂರು ವಿಧವಾದ ಸಂವತ್ಸ ರಾದಿ ರೂಪ, ಕಾಲದಲ್ಲೂ, ಶುಭಾಶುಭ. ಒಳ್ಳೆ ಅದೃಷ್ಟ ದುರಾದೃಷ್ಟ ವೆಂತ ಕರೆಸುವ ಕರ್ಮದಲ್ಲೂ, ಸತ್ವರಜಸ್ತಮವೆಂಬ ತ್ರಿಗುಣ ಸ್ವಭಾವದಲ್ಲೂ ಮುಕ್ತಿಯೋಗ್ಯ, ಅಯೋಗ್ಯ. ಮಿಶ್ರವೆಂಬ ತ್ರಿವಿಧ ಜೀವ ಸ್ವಭಾದಲ್ಲೂ, ಲಕ್ಷ್ಮೀಲೋಲನಾದ ದೇವರು ಆಧಾರನಾಗಿ ಆಯಾಯಾ ನಾಮ ರೂಪದಿಂದ ಕರೆಸುತ್ತಾ, ಲೀಲೆಯಿಂದ, ಎಂದರೆ, ಆಯಾಸಾದಿಗಳು ಇಲ್ಲದೆ, ಸ್ವೇಚ್ಛಾ ಮಾತ್ರ ಕ್ರೀಡೆಯಿಂದ, ಸರ್ವಜೀವರ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು, ಜಡ ಪ್ರಕೃತಿಯ ತ್ರಿಗುಣ ಕಾರ್ಯಗಳಾದ ಪಂಚ ಭೂತಾದಿಗಳ ತತ್ತ್ವಗಳ ಮೂಲಕ ಮಾಡುತ್ತಿರುವನು. ॥೨೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಕಾಲ, ಕರ್ಮ, ಗುಣ, ಸ್ವಭಾವಗಳಲ್ಲಿ ಅಂತಸ್ಥಿತನಾಗಿ. ಅವುಗಳಿಗೆ ಪರಮ ಮುಖ್ಯ ವೃತ್ತಿಯಿಂದ ನಿಯಾಮಕನಾದ ಶ್ರೀಹರಿಯ ಧ್ಯಾನೋಪಾಸನಾ ಕ್ರಮವನ್ನು ತಿಳಿಸುತ್ತಾರೆ– **"ಕಾಲಕರ್ಮ"**–ಎಂಬ ಪ್ರಸಕ್ತ ೨೦ ನೆಯ ಈ ಪದ್ಯದಿಂದ.

**(೧) ಕಾಲ :–**

ಕಾಲವು ಪ್ರವಾಹತೋನಿತ್ಯವಾದದ್ದು. ಕಾಲದಲ್ಲಿ ಭೂತ, ವರ್ತಮಾನ, ಭವಿಷ್ಯಗಳೆಂಬ ಪ್ರಭೇದತ್ರಯಗಳುಂಟು. ನಿತ್ಯಪ್ರವಾಹದಂತೆ ಹರಿಯುತ್ತಿರುವ ಕಾಲಮಾನವು ಅನಂತವಾದುದು. ಅದಕ್ಕೆ ಮೊದಲಿಲ್ಲ ಮತ್ತು ಕೊನೆಯಿಲ್ಲ. ಸಮಸ್ತ ಜೀವರೂ ಇಂತಹ ಅನಂತ ಕಾಲ ಪ್ರವಾಹಕ್ಕೆ ಬದ್ಧರು. ದಿನ, ವಾರ, ಪಕ್ಷ, ಮಾಸ, ಋತು, ಆಯನ ಮುಂತಾದ ಕಾಲಮಾನಗಳು ಸಂವತ್ಸರದ ಕಾಲ ಪ್ರಭೇದಗಳು. ಅಂತೆಯೇ ಸೆಕೆಂಡು, ನಿಮಿಷ, ತಾಸು ಇವೂ ಸಹ ದಿನಮಾನದ ಕಾಲಾಂಶಗಳು. ಯುಗಪ್ರಳಯ, ಮಹಾಯುಗಪ್ರಳಯ, ಮನ್ವಂತರ, ಮಹಾಪ್ರಳಯ ಇತ್ಯಾದಿ ಕಾಲಪ್ರವಾಹದಲ್ಲಿ ಸಮಾವೇಶವಾಗಿವೆ. ಶ್ರೀಪರಮಾತ್ಮನು ಕಾಲದಲ್ಲಿ ಕಾಲಾಂತರ್ಗವನಾಗಿ, ಕಾಲ ನಿಯಾಮಕನಾಗಿ, ಯುಗ ಪ್ರವರ್ತಕನಾಗಿದ್ದು, ಆಯಾಯಾ ಕಾಲಗಳಿಗನುಸಾರ ಧರ್ಮ ಕರ್ಮಗಳೆಂಬ ವ್ಯಾಪಾರಗಳನ್ನು ನಡೆಯಿಸುತ್ತಿರುವನು.

**(೨) ಕರ್ಮ :–**

ಜೀವರ ಅಧಿಷ್ಠಾನದಲ್ಲಿ, ದೇಹಗತ ಹಾಗೂ ಸ್ವರೂಪಗತ ಕ್ರಿಯಾವಿಶೇಷಗಳು ಕರ್ಮಗಳೆನಿಸುವುವು. ಜಡ ಸ್ವಭಾವದ ಈ ಕರ್ಮವು ಕಾಲದಂತೆಯೇ ಪ್ರವಾಹರೂಪದಿಂದ ಪರಂಪರಾ ಪ್ರಾಪ್ತವಾಗಿರುವುದು.

ಸ್ವರೂಪ ದೇಹಕ್ಕೆ ಆವರ್ಕವಾಗಿರುವ ಲಿಂಗದೇಹದ ತೃತೀಯ ಆವರಣವು ತಮೋಗುಣ ಪರಿಚ್ಛೇದವು. ಇದೇ ಅನಾದಿ ಕರ್ಮದ ಬೀಜಸ್ಥಾನವು. ಆದ ರಿಂದ ತ್ರಿಗುಣಗಳ ವ್ಯಾಪಾರದಿಂದ ಕಾರಣ ಭೂತಗಳಾದ ಸುಕರ್ಮ (ಸತ್ವ ಗುಣದ ಕ್ರಿಯಾ), ದುಷ್ಕರ್ಮ (ತಮೋ ಗುಣದ ಕಾರ್ಯ) ಮತ್ತು ಮಿಶ್ರ ಕರ್ಮ (ರಜೋಗುಣದ ಕ್ರಿಯಾ) ಗಳ ಪ್ರಾಚುರ್ಯ. ಇವುಗಳ ಪರಂಪರೆ ಯಿಂದ ಪರಿಣಮಿಸಿದ ಸಂಚಿತ ಮತ್ತು ಆಗಾಮಿ ಕರ್ಮಪರಂಪರೆಗಳು. ಇಂತಹ ಸರ್ವ ಕರ್ಮಗಳಲ್ಲಿ ಕರ್ಮನಾಮಕನಾಗಿ, ಕರ್ಮಶಬ್ದ ವಾಚ್ಯನಾಗಿ, ಕರ್ಮರೂಪನಾಗಿ. ತಾನೇ ಆ ಸಕಲ ಕರ್ಮಗಳನ್ನು ಬಿಂಬಕ್ರಿಯಾ ದ್ವಾರಾ ಮಾಡಿ, ದೇಹಗಳ ದ್ವಾರಾ ಸುಕರ್ಮಗಳನ್ನು ಮಾಡಿಸುತ್ತಾ. ದೈತ್ಯರ ಮೂಲಕ ದುಷ್ಕರ್ಮಗಳಿಗೆ ಪ್ರೇರಕನಾಗಿ, ತಜ್ಜನ್ಯವಾದ ಪುಣ್ಯ, ಮಿಶ್ರ ಮತ್ತು ಪಾಪ ಫಲಗಳನ್ನು ಜೀವರ ಅನುಭವಕ್ಕೆ ತಂದೀಯುವ ಕರ್ಮ ಪತಿಯೇ ಪರಮಾದ್ಭುತಚರಿತನಾದ ಆ ಬಿಂಬರೂಪಿ ಪರಮಾತ್ಮನು !

**(೩) ಗುಣ :–**

ಒಂದು ವಸ್ತುವಿನ ಸ್ವಭಾವಗತವಾದ ಧರ್ಮಕ್ಕೆ "ಗುಣ" ಎನ್ನುವರು. ಮೂಲ ಪ್ರಕೃತಿಯು ಸೃಷ್ಟಿಗೆ ಉಪಾದಾನಕಾರಣವು. ಈ ಪ್ರಕೃತಿಯ ಗುಣಗಳು ಮೂರು ಪ್ರಕಾರ ;–

(೧) ಸತ್ತ್ವಗುಣ. (೨) ರಜೋಗುಣ. (೩) ತಮೋಗುಣ. ಈ ಗುಣತ್ರಯುಗಳಿಗೆ ಶ್ರೀ ಲಕ್ಷ್ಮೀದೇವಿಯು ಕ್ರಮವಾಗಿ ಶ್ರೀ. ಭೂ, ದುರ್ಗಾ ರೂಪಗಳಿಂದ ವಿದ್ಯಮಾನಳಾಗಿದ್ದು, ತ್ರಿಗುಣಾಭಿಮಾನಿ ಎನಿಸಿದ್ದಾಳೆ. ಲಕ್ಷ್ಮ್ಯಂತರ್ಗತ ಶ್ರೀ ಪರಮಾತ್ಮನ ಅನಿರುದ್ಧ, ಪ್ರದ್ಯುಮ್ನ ಮತ್ತು ಸಂಕರ್ಷಣ ರೂಪಗಳು (ಅಥವಾ ವಿಶ್ವ, ತೈಜಸ ಮತ್ತು ಪ್ರಾಜ್ಞ ರೂಪತ್ರಯಗಳು) ಈ ತ್ರಿಗುಣಗಳ ವ್ಯಾಪಾರಕ್ಕೆ ಪ್ರೇರಕ ರೂಪಗಳಾಗಿವೆ. ಸತ್ವಗುಣ ಪ್ರಾಚುರ್ಯದಿಂದ ಸುಕರ್ಮ ಅದರಿಂದ ಪುಣ್ಯ ಫಲ ಪ್ರಾಪ್ತಿ. ರಜೋಗುಣ ಪ್ರಾಚುರ್ಯದಿಂದ ಮಿಶ್ರಕರ್ಮ (ಸುಖ ದುಃಖ ಮಿಶ್ರಿತ). ಅದರಿಂದ ಸುಖ ದುಃಖ ಮಿಶ್ರಿತವಾದ ಫಲ. ತಮೋಗುಣ ಪ್ರಾಚುರ್ಯ

ದಿಂದ ದುಷ್ಕರ್ಮಾನುಷ್ಠಾನ. ತಜ್ಜನ್ಯ ಪಾಪಫಲಾನುಭವ. ಇಂತು, ಶ್ರೀ ಪರಮಾತ್ಮನೇ ಪರಮ ಮುಖ್ಯವೃತ್ತಿಯಿಂದ ಗುಣತ್ರಯಗಳಿಗೆ ಮುಖ್ಯ ಪ್ರೇರಕನಾಗಿ ಆಯಾಯಾ ಗುಣಗಳ ಕಾರ್ಯ. ಅದಕ್ಕನುಸಾರವಾಗಿ ಫಲ ಪ್ರದನಾಗಿದ್ದಾನೆ.

## (೪) ಸ್ವಭಾವ :—

ಸಮಸ್ತ ಜೀವರ ಸ್ವರೂಪಯೋಗ್ಯತೆಗೆ "ಸ್ವಭಾವ" ಎಂದು ಹೆಸರು. ಸ್ವರೂಪ ದೇಹವು ಅನಾದಿ ಮತ್ತು ಅವಿನಾಶಿ. ಇಂತು ಅನಾದಿನಿತ್ಯವಾಗಿ ರುವ ಸ್ವರೂಪಗತ ಸ್ವಭಾವವೂ ಅನಾದಿ ಮತ್ತು ನಿತ್ಯ. ಜೀವರ ಸ್ವರೂಪ ಯೋಗ್ಯತೆ ಎಂದೆಂದಿಗೂ ಬದಲಾಯಿಸುವುದಿಲ್ಲ. ಈ ಸ್ವಭಾವಗಳು ಭಿನ್ನ ಭಿನ್ನವಾಗಿರುವುದರಿಂದ, ಜೀವರಲ್ಲಿ ವೈಲಕ್ಷಣ್ಯವಿದೆ. ಈ ಜೀವರ ಸ್ವರೂಪ ಗತ ತಾರತಮ್ಯವು ಅನಾದಿಸಿದ್ಧವಾದದ್ದು. ಅದು ಪರಮಾತ್ಮನಿಂದ ಸೃಷ್ಟಿಯಾದುದಲ್ಲ, ಬಿಂಬನಾದ ಪರಮಾತ್ಮನಂತೆಯೇ ಪ್ರತಿಬಿಂಬಭೂತ ರಾದ ಜೀವರ ಸ್ವರೂಪಗತ ಸ್ವಭಾವವು ಅನಾದಿನಿತ್ಯ. ಬಿಂಬನಾದ ಮೂಲೇಶನು ಆಯಾಯಾ ಜೀವರ ಯೋಗ್ಯತೆಗೆ ಅನುಸಾರವಾಗಿ ಗುಣ ಮತ್ತು ಕಾರ್ಯಗಳನ್ನು ಪ್ರೇರಿಸುವನು. ತನ್ಮೂಲಕ ಜೀವರ ಸ್ವಭಾವದ ಅಭಿವ್ಯಕ್ತಿ. ಇದರಿಂದ ಬಿಂಬರೂಪಿ ಶ್ರೀ ಪರಮಾತ್ಮನಿಗೆ ಸ್ನೇಹ, ದ್ವೇಷ, ಉದಾಸೀನ ಎಂಬ ವೈಷಮ್ಯ ಅಥವಾ ನೈರ್ಘೃಣ್ಯ ಮೊದಲಾದ ದೋಷ ಗಳಾವುವೂ ಇಲ್ಲವೇ ಇಲ್ಲ. ಇಂತು, ಕಾಲಾಂತರ್ಗತನಾಗಿ, ಕಾಲಕ್ಕೆ ತಕ್ಕಂತೆ, ಕರ್ಮ ಪ್ರೇರಕನಾಗಿ, ಗುಣತ್ರಯಗಳಿಗೆ ಪ್ರವರ್ತಕನಾಗಿ, ಜೀವರ ಸ್ವರೂಪ ಯೋಗ್ಯತೆ ಎಂಬ ಸ್ವಭಾವಕ್ಕೆ ಮುಖ್ಯ ಪ್ರೇರಕನಾಗಿದ್ದರೂ, ಶ್ರೀ ಪರಮಾತ್ಮನು ಅವುಗಳಿಂದ ಅತ್ಯಂತ ಭಿನ್ನನು. ಅಂದರೆ ಕಾಲ, ಕರ್ಮ, ಗುಣ, ಸ್ವಭಾವಗಳಲ್ಲಿ ತಾನೇ ಅಂತಸ್ಥಿತನಾಗಿದ್ದು, ಅವುಗಳಿಗೆ ಮುಖ್ಯ ವೃತ್ತಿಯಿಂದ ಪ್ರೇರಕನಾದರೂ, ಅವುಗಳಿಂದ ನಿರ್ಲಿಪ್ತನಾಗಿ, ಜೀವ ಜಡ ಸಮುದಾಯಗಳಿಂದ ಅತ್ಯಂತ ವಿಲಕ್ಷಣನೆನಿಸಿದ್ದಾನೆ.

**(೫) ಆಲಯನು ತಾನಾಗಿ—**

ಪೂರ್ವೋಕ್ತ ಕಾಲಪ್ರವಾಹ, ಜೀವರ ಅನಾದಿ ಕರ್ಮ ಪರಂಪರೆ, ಸತ್ವಾದಿ ಗುಣತ್ರಯಗಳು. ತ್ರಿವಿಧ ಜೀವರ ಸ್ವರೂಪಯೋಗ್ಯತಾರೂಪವಾದ ಸ್ವಭಾವ- ಇತ್ಯಾದಿಗಳಲ್ಲಿ ತಾನು ಅಂತಸ್ಥಿತನಾಗಿದ್ದು, ಬಿಂಬ ಕ್ರಿಯಾದ್ವಾರಾ ಕಾಲ ಪ್ರವರ್ತಕನಾಗಿ, ಕರ್ಮಪತಿ ಎಂದೆನಿಸಿ, ಕರ್ಮಸಾಕ್ಷಿಯಾಗಿದ್ದು, ಗುಣಗಳಿಗೆ ಪ್ರೇರಕನಾಗಿ, ಜೀವರ ಸ್ವಭಾವವನ್ನು ಅಭಿವ್ಯಕ್ತಗೊಳಿಸುತ್ತಾ, ಅಂತರ್ಯಾಮಿತ್ವೇನ ವಿದ್ಯಮಾನನಾಗಿದ್ದಾನೆ,

**(೬) ಲಕುಮೀಲೋಲ :—**

ಜಗತ್ತಿನ ಸೃಷ್ಟಿಗೆ ಮೂಲಸಾಮಗ್ರಿಯು ಮೂಲಪ್ರಕೃತಿ. ಈ ಮೂಲ ಪ್ರಕೃತಿಗೆ ಶ್ರೀ ಲಕ್ಷ್ಮೀದೇವಿಯೇ ಅಭಿಮಾನಿಯು, ಮೂಲ ಪ್ರಕೃತಿಯ ಸಹಜ ಧರ್ಮಗಳು ಸತ್ವ, ರಜ ಮತ್ತು ತಮ ಎಂಬ ಪ್ರಾಕೃತ ಗುಣತ್ರಯಗಳು. ಈ ಗುಣಗಳಿಗೆ ಶ್ರೀ ಲಕ್ಷ್ಮೀದೇವಿಯು ಕ್ರಮವಾಗಿ ಶ್ರೀ· ಭೂ. ಮತ್ತು ದುರ್ಗಾ ರೂಪಗಳಿಂದ ತ್ರಿಗುಣಾಭಿಮಾನಿಗಳಾಗಿದ್ದಾಳೆ. ಗುಣಗಳ ಸಮ್ಮೇಳನದಿಂದ ಸೃಷ್ಟಿ. ಇದಕ್ಕೆ **ಗುಣವೈಷಮ್ಯ** ಎಂದು ಹೆಸರು. ಸೃಷ್ಟಿಗೆ ಮುಖ್ಯಕಾರಣನಾದ ಶ್ರೀ ಪರಮಾತ್ಮನು ಮೂಲ ಪ್ರಕೃತಿಯನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು, ಗುಣವೈಷಮ್ಯದಿಂದ ಜಗತ್ತಿನ ಸೃಷ್ಟಿಯನ್ನು ಮಾಡುವನು. ಮೂಲ ಪ್ರಕೃತಿಯ ಅಭಿಮಾನಿಯಾದ ಶ್ರೀ ಲಕ್ಷ್ಮೀದೇವಿಯಲ್ಲಿ ಕ್ರೀಡಾ ವಿಶಿಷ್ಟನಾಗಿ, ತನ್ನ ಸಂಕಲ್ಪ ಮಾತ್ರದಿಂದ ಸೃಷ್ಟಿಕಾರ್ಯವನ್ನೆಸಗುವನು. **"ಇಚ್ಛಾಮಾತ್ರ ಪ್ರಭೋಃ ಸೃಷ್ಟಿಃ"**—ಎಂಬ ವಾಕ್ಯಾನುಸಾರ, ನಿರಾಯಾಸವಾಗಿ, ಲೀಲಾ ಜಾಲವಾಗಿ ಮಾಡುವ ಈ ಸೃಷ್ಟಿಯ ವ್ಯಾಪಾರವು ಶ್ರೀ ಪರಮಾತ್ಮನ ಸಹಜ ಲಕ್ಷಣವು, ಇದರಿಂದಲೇ **"ಲಕುಮೀ ಲೋಲ"**-ನೆಂದು ಕೊಂಡಾಡಿದ್ದಾರೆ.

**(೭) ತತ್ತದ್ರೂಪ ನಾಮದಿ—**

ಕಾಲಾಂತರ್ಗತನಾಗಿ, ಕಾಲರೂಪದಿಂದ, ಕಾಲಮಾನನಾಗಿದ್ದು ಪ್ರವಾ

ಹತೋನಿತ್ಯವಾದ ಕಾಲ ಪ್ರವರ್ತನ ಕಾರ್ಯವನ್ನು ನಡೆಯಿಸುವನು. ಕರ್ಮ ಪ್ರೇರಕನಾಗಿ, ಕರ್ಮರೂಪದಿಂದ, ಕರ್ಮ ನಾಮಕನಾಗಿ ಕರ್ಮವನ್ನು ಪ್ರಚೋದಿಸುವನು. ಗುಣತ್ರಯಗಳಲ್ಲಿ ತನ್ನಾಮಕನಾಗಿ, ಗುಣ ಕ್ರಿಯೆಗಳನ್ನು ನಡೆಯಿಸುವನು. ತ್ರಿವಿಧ ಜೀವರ ಸ್ವರೂಪ ದೇಹದಲ್ಲಿ ಬಿಂಬ ರೂಪನಾಗಿದ್ದು, ಅವರವರ ಯೋಗ್ಯತಾನುಸಾರ ಕ್ರಿಯಾವಿಶೇಷಗಳನ್ನು ನಡೆಯಿಸುವನು.

**(೮) ಲೀಲೆಯಿಂದಲಿ ಸರ್ವಜೀವರ ಪಾಲಿಸುವ, ಸಂಹರಿಸಿ, ಸೃಷ್ಟಿಪ–**

ಜಗದ್ವ್ಯಾಪಾರವು ಶ್ರೀ ಪರಮಾತ್ಮನಿಗೆ ಒಂದು ಲೀಲಾ ವೈಭವ. ನಿರಾಯಾಸವಾಗಿ ಈ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ. ಲಯಗಳನ್ನು ಎಸಗುತ್ತಿರುವ ಆ ಅಪಾರ ಗುಣಸಂಪನ್ನನಿಗೆ ಈ ಜಗತ್ತೇ ಒಂದು ರಂಗ ಮಂದಿರವು. ಜೀವರನ್ನು ಸೂತ್ರದ ಗೊಂಬೆಗಳನ್ನಾಗಿ ಮಾಡಿ, ಸರ್ವ ಜೀವರನ್ನು ಸಂರಕ್ಷಣೆ ಮಾಡುತ್ತಾ, ಕೊನೆಯಲ್ಲಿ ಸಂಹರಿಸುತ್ತಾ, ಪುನಃ ಸೃಷ್ಟಿಗೆ ತರುತ್ತಿರುವ ಆ ಜಗನ್ನಾಟಕ ಸೂತ್ರಧಾರಿಗೆ, ಸೃಷ್ಟ್ಯಾದಿ ವ್ಯಾಪಾರ ವಿಶೇಷಗಳು ಒಂದು ಲೀಲೆ.

**(೯) ಮೂಲ ಕಾರಣ ಪ್ರಕೃತಿ ಗುಣಕಾರ್ಯಗಳ ಮನೆಮಾಡಿ.**

ಜಗತ್ತಿನ ಸೃಷ್ಟಿಯು ಕಾರ್ಯವು. ಇದಕ್ಕೆ ಉಪಾದಾನ ಕಾರಣವು ಮೂಲ ಪ್ರಕೃತಿ. ಆ ಮೂಲಪ್ರಕೃತಿಯ ಸಹಜ ಧರ್ಮಗಳು ಸತ್ವ. ರಜ ಮತ್ತು ತಮ—ಎಂಬ ಗುಣತ್ರಯಗಳು. ಈ ಗುಣತ್ರಯಗಳಿಗೆ ಅಭಿಮಾನಿಯಾದ ಶ್ರೀ, ಭೂ, ದುರ್ಗಾತ್ಮಕಳಾದ ಶ್ರೀ ಲಕ್ಷ್ಮೀದೇವಿಯರಲ್ಲಿ ತಾನೇ ಅನಿರುದ್ಧ, ಪ್ರದ್ಯುಮ್ನ ಮತ್ತು ಸಂಕರ್ಷಣ ರೂಪಗಳಿಂದ ಇದ್ದು, ಅಂದರೆ, ಪ್ರಕೃತಿಯ ಗುಣ ಕಾರ್ಯಗಳ ಮನೆಯ ಮಾಡಿ, ಗುಣ ವೈಷಮ್ಯದಿಂದ ಸೃಷ್ಟಿ ಕಾರ್ಯವನ್ನೂ, ತ್ರಿಗುಣಗಳ ಭವಣೆಯಿಂದ ಈ ಸಂಸಾರಾಖ್ಯವಾದ ಪಾಲನಾ ಕಾರ್ಯವನ್ನೂ ಮತ್ತು ಕೊನೆಯಲ್ಲಿ ಗುಣ

ಸಾಮ್ಯದಿಂದ ಲಯಕಾರ್ಯವನ್ನೂ ನಿರಂತರ ಲೀಲಾಜಾಲವಾಗಿ, ನಿರಾಯಾಸವಾಗಿ ನಡೆಯಿಸುತ್ತಿರುವ ಆ ಸೃಷ್ಟ್ಯಾದ್ಯಷ್ಟ ಕರ್ತೃವಿನ ಮಹಿಮೆ ಎಷ್ಟು ಪರಮಾದ್ಭುತ ! ॥೨೦॥

## ಪದ್ಯ (೨೧)

**ಮೂಲ :-**

**ತಿಲಜವರ್ತಿಗಳನುಸರಿಸಿ ಪ್ರ ।**
**ಜ್ವಲಿಸಿ ದೀಪಗಳಾಲಯದ ಕ ।**
**ತ್ತಲೆಯ ಭಂಗಿಸಿ ತದ್ಗತಾರ್ಥವ ತೋರುವಂದದಲಿ ॥**
**ಜಲರುಹೇಕ್ಷಣ ತನ್ನವರ ಮನ ।**
**ದೊಳಗೆ ಭಕ್ತಿಜ್ಞಾನ ಕರ್ಮಕೆ ।**
**ಒಲಿದು ಹೊಳೆವುತ ತೋರುವನು ಗುಣರೂಪಕ್ರಿಯೆಗಳನು ॥೨೧॥**

**ಅವತರಣಿಕೆ :-**

ಪ್ರಣತಿಯಲ್ಲಿರುವ ಎಣ್ಣೆಯ ಪ್ರಮಾಣವನ್ನನುಸರಿಸಿ, ಬತ್ತಿಗಳು ಉರಿದು, ಮನೆಯಲ್ಲಿರುವ ಕತ್ತಲೆಯನ್ನು ಪರಿಹರಿಸುವುವು. ಎಂತಹ ಮನೋಹರ ದೃಷ್ಟಾಂತ ! ಬತ್ತಿಯ ಜ್ವಾಲೆ ಮತ್ತು ಅದರ ಪ್ರಕಾಶವು ಎಣ್ಣೆಯ ಶುದ್ಧತೆ ಹಾಗೂ ಪ್ರಮಾಣ ಇವುಗಳನ್ನು ಅವಲಂಬಿಸಿದೆ. ಕತ್ತಲೆಯಲ್ಲಿ ಪದಾರ್ಥಗಳು ನಮ್ಮ ಕಣ್ಣಿಗೆ ಗೋಚರಿಸುವುದಿಲ್ಲ. ದೀಪದ ಪ್ರಕಾಶದಲ್ಲಿ ಮಾತ್ರ ಕಾಣಿಸುವುವು. ದೀಪದ ಪ್ರಕಾಶ ಮತ್ತು ಪ್ರಖರತೆ ಹೆಚ್ಚಿದಷ್ಟು ಪದಾರ್ಥಗಳು ಅಷ್ಟಷ್ಟು ಸ್ಪಷ್ಟವಾಗಿ ಗೋಚರಿಸುವುವು. ಅದರಂತೆ ಕಮಲದಳಾಯತಾಕ್ಷನಾದ ಶ್ರೀ ಪರಮಾತ್ಮನು ತನ್ನ ಅಂತರಂಗ ಭಕ್ತರ ಮನವೆಂಬ

ಮಂದಿರದಲ್ಲಿದ್ದು, ಅವರವರ ಯೋಗ್ಯತಾನುಸಾರ ಜ್ಞಾನ, ಭಕ್ತಿ ಮತ್ತು ಕರ್ಮಗಳಿಗೆ ಒಲಿದು, ಪ್ರಕಾಶಿಸುತ್ತಾ, ಅವರ ಸ್ವರೂಪಗತ ಸ್ವಭಾವಕ್ಕನುಗುಣವಾಗಿ ತನ್ನ ಗುಣ, ರೂಪ, ಕ್ರಿಯಾದಿಗಳನ್ನು ಬಿಂಬ ದರ್ಶನ ದ್ವಾರಾ ತೋರಿಸುವನು ಎಂಬ ಪರಮಪ್ರಮೇಯರಹಸ್ಯವನ್ನು ಹೇಳುತ್ತಾರೆ—**"ತಿಲಜ ವರ್ತಿಗಳು"**—ಎಂಬ ಪ್ರಸಕ್ತ ಸಂಧಿಗತ ೨೧ ನೆಯ ಈ ಪದ್ಯದಿಂದ. ॥೨೧॥

## ಪ್ರತಿಪದಾರ್ಥ -:

**ತಿಲಜ**=ಎಣ್ಣೆಯನ್ನು (ತಿಲ=ಎಳ್ಳು ; ಜ=ಅದರಿಂದ ತಯಾರಾದದ್ದು =ಎಣ್ಣೆ) **ವರ್ತಿಗಳನು**=ಬತ್ತಿಗಳನು **ಅನುಸರಿಸಿ**=ಅದಕ್ಕನುಗುಣವಾಗಿ, **ದೀಪಗಳು**=ಉರಿಯುತ್ತಿರುವ ದೀಪವು **ಪ್ರಜ್ವಲಿಸಿ**= ಪ್ರಕಾಶಮಾನವಾಗಿ **ಆಲಯದ**=ಮನೆಯ **ಕತ್ತಲೆಯ** = ಅಂಧಕಾರವನ್ನು **ಭಂಗಿಸಿ**=ಪರಿಹಾರಮಾಡಿ, **ತದ್ಗತ** = ಆ ಮನೆಯೊಳಗಿರುವ **ಅರ್ಥವ**=ಪದಾರ್ಥಗಳನ್ನು **ತೋರುವಂದದಲಿ** = ಕಣ್ಣಿಗೆ ಗೋಚರಿಸುವೋಪಾದಿಯಲ್ಲಿ **ಜಲರುಹೇಕ್ಷಣ** = ಕಮಲದಳಾಯುತನೇತ್ರನಾದ ಬಿಂಬರೂಪಿಯಾದ ಶ್ರೀ ಪರಮಾತ್ಮನು **ತನ್ನವರ**=ತನ್ನ ಅಂತರಂಗ ಭಕ್ತರ **ಮನದೊಳಗೆ** = ಮನಸ್ಸಿನಲ್ಲಿ **ಭಕ್ತಿ**=ಭಕ್ತಿಪೂರ್ವಕವಾಗಿ **ಜ್ಞಾನ**= ಜ್ಞಾನಾನುಸಂಧಾನದಿಂದ **ಕರ್ಮಕೆ**=ಮಾಡತಕ್ಕ ಕರ್ಮಗಳಿಗೆ **ಒಲಿದು**= ಪ್ರಸನ್ನನಾಗಿ **ಹೊಳೆಯುತ**=ಅಪರೋಕ್ಷದಲ್ಲಿ ಪ್ರಕಾಶಮಾನವಾಗಿ ಗೋಚರನಾಗುತ್ತ, **ಗುಣರೂಪಕ್ರಿಯಗಳ**=ಅವರವರ ಯೋಗ್ಯತಾನುಸಾರ ಶ್ರೀ ಪರಮಾತ್ಮ ತನ್ನ ಗುಣವೇನು, ರೂಪವೇನು, ಕ್ರಿಯಾ ವಿಶೇಷಗಳೇನು **ತೋರುವನು**= ಇವುಗಳನ್ನು ಅಭಿವ್ಯಕ್ತಿ ಮಾಡುವವನಾಗುತ್ತಾನೆ. ॥೨೧॥

# ವ್ಯಾಖ್ಯಾನಗಳು

## (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಸ್ತುತ್ಯರಾದ ತನ್ನ ಭಕ್ತರಿಗೆ ತನ್ನ ದರ್ಶನ ಕೊಟ್ಟು, ಮೋಕ್ಷ ಕೊಡ ತಾನೆ-ಎಂತ ಹೇಳತಾರೆ.

ದೀಪಗಳು-ದೀಪಗಳು, ವರ್ತಿಗಳ-ಬತ್ತಿಗಳು, ತಿಲಜ-ಎಳ್ಳಿನಿಂದ ಉತ್ಪನ್ನವಾದ ಎಣ್ಣೆಯನ್ನು, ಅನುಸರಿಸಿ-ಆಶ್ರಯ ಮಾಡಿದಂಥಾದ್ದಾಗಿ, ಪ್ರಜ್ವಲಿಸಿ-ಛಂದಾಗಿ ಉರಿದು, ಆಲಯದ ಕತ್ತಲೆಯು-ಮನಿ ಒಳಗೆ ಇರ ತಕ್ಕ ಅಂಧಕಾರವನ್ನು, ಭಂಗಿಸಿ-ಪರಿಹಾರಮಾಡಿ, ತದ್ಗತಾರ್ಥವ-ಆ ಮನಿ ಒಳಗೆ ಇರುವಂಥಾ ಪದಾರ್ಥಗಳನ್ನು, ತೋರುವಂದದಲಿ-ತನ್ನ ಪ್ರಕಾಶ ದಿಂದ ತೋರಿಸೋದಾಗತದೆ. ಈ ದೀಪದೋಪಾದಿಯಲಿ ಅಧಿಕಾರಿಗಳ ದೇಹಾಖ್ಯ ಮನಿ ಒಳಗೆ ಇರುವ, ಮನದೊಳಗೆ-ಮನಸ್ಸಿನಲ್ಲಿ ಇರುವ. ಭಕ್ತಿ-ಭಕ್ತಿ ಎಂಬೋ ತೈಲದಲ್ಲಿ ವೈರಾಗ್ಯ ಎಂಬೋ ಬತ್ತಿಯನ್ನು ಇಟ್ಟು. ಜ್ಞಾನ-ಜ್ಞಾನವೆಂಬೋ ದೀಪ ಮೂಡಿಸಿ, ಅಜ್ಞಾನಾಂಧಕಾರ ಓಡಿಸಿ. ಕರ್ಮಕೆ-ಮಾಡತಕ್ಕ ಯಾವತ್ತು ಕರ್ಮಗಳಿಗೆ, ಜಲರುಹೇಕ್ಷಣ-ಕಮಲದಳ ದೋಪಾದಿಯಲಿ ನೇತ್ರಗಳು ಉಳ್ಳ ಬಿಂಬರೂಪಿ ಶ್ರೀ ಪರಮಾತ್ಮ ಮೆಚ್ಚಿದವ ನಾಗಿ. ಒಲಿದು-ಅವರಿಗೆ ವಶನಾಗಿ. ತನ್ನವರ-ಇಂಥಾ ತನ್ನ ಭಕ್ತರ ಮನಕ್ಕೆ, ಹೊಳೆವುತ-ಹೃದಯಾಕಾಶದಲ್ಲಿ ಹೊಳೆಯುತ, ಗುಣರೂಪಕ್ರಿಯೆ ಗಳ-ಅವರವರ ಯೋಗ್ಯತಾನುಸಾರ ಶ್ರೀ ಪರಮಾತ್ಮ ತನ್ನ ಗುಣವೇನು. ರೂಪವೇನು, ಕ್ರಿಯೆಗಳೇನು, ತೋರುವನು-ತೋರಿಸೋವವನಾಗತಾನೆ ಎಂತ ತಾತ್ಪರ್ಯ. ॥೨೧॥

## (೨) "ಭಾವ ಪ್ರಕಾಶಿಕೆ"-ವ್ಯಾಖ್ಯಾನ :-

ಶ್ರೀ ಪರಮಾತ್ಮನು ಪ್ರಾಣಿಗಳ ಭಕ್ತಿ, ಜ್ಞಾನ, ಕರ್ಮಗಳಿಗೆ ಮೆಚ್ಚಿ

ತನ್ನ ಗುಣರೂಪಕ್ರಿಯೆಗಳನ್ನು ತೋರಿಸುವನೆಂದು ಸದೃಷ್ಟಾಂತವಾಗಿ ಹೇಳು ತ್ತಾರೆ :—

ಒಂದು ಪಾತ್ರೆಯಲ್ಲಿ ಎಣ್ಣೆಯನ್ನೂ, ಬತ್ತಿಯನ್ನೂ ಹಾಕಿ ದೀಪ ವನ್ನು ಹಚ್ಚಿ, ಮನೆಯಲ್ಲಿಟ್ಟರೆ, ಆ ದೀಪವು ಎಣ್ಣೆಯನ್ನೂ ಬತ್ತಿಯನ್ನೂ ಅನುಸರಿಸಿ ಅಂದರೆ ಹೆಚ್ಚಿಗೆ ಎಣ್ಣೆ ಹಾಕಿ ಮತ್ತು ದಪ್ಪವಾದ ಬತ್ತಿಗಳನ್ನು ಹಾಕಿದರೆ, ದೀಪದ ಪ್ರಕಾಶವು ಹೆಚ್ಚುವುದು. ಸಣ್ಣದಾದ ಬತ್ತಿಯನ್ನು ಹಾಕಿದಾಗ ದೀಪವು ಸಣ್ಣದಾಗಿ ಉರಿಯುವುದು, ಅದರಂತೆಯೇ ಕಮಲದಳ ನೇತ್ರನಾದ ಶ್ರೀಹರಿಯು ನಮ್ಮ ಮನಸ್ಸೆಂಬ ಮನೆಯಲ್ಲಿ ಕರ್ಮವೆಂಬ ಪಾತ್ರೆ ಯನ್ನಿಟ್ಟು ಭಕ್ತಿ ಎಂಬ ಎಣ್ಣೆಯನ್ನೂ, ಜ್ಞಾನವೆಂಬ ಬತ್ತಿಗಳನ್ನೂ ಹಾಕಿ ಶ್ರೀ ಪರಮಾತ್ಮನೆಂಬ ದೀಪದ ಜ್ವಾಲೆಯನ್ನು ಪ್ರಕಾಶಿಸುವಂತೆ ಮಾಡಿದರೆ, ನಮ್ಮ ಅಜ್ಞಾನವೆಂಬ ಕತ್ತಲಿನಲ್ಲಿ ಕಾಣದಿರುವ ಭಗವಂತನ ಗುಣಗಳನ್ನೂ, ರೂಪಗಳನ್ನು ಮತ್ತು ಕ್ರಿಯಾದಿಗಳನ್ನೂ ತೋರಿಸುವನು. ಭಕ್ತಿಯಿಂದ ಭಗವತ್ಪ್ರೀತ್ಯರ್ಥವಾಗಿ ನಿಷ್ಕಾಮ ಕರ್ಮಗಳನ್ನು ಮಾಡಿದರೆ, ಅವರರವ ಯೋಗ್ಯತಾನುಸಾರವಾಗಿ ಪರಮಾತ್ಮನ ಸ್ವರೂಪಜ್ಞಾನವಾಗುವುದು. ಅದಕ್ಕೆ ಪರಮಾತ್ಮನು ಪ್ರೀತವಾಗಿ, ಅಪರೋಕ್ಷದಲ್ಲಿ ತಾನು ಪ್ರಕಾಶಮಾನ ವಾಗಿ, ತನ್ನ ರೂಪಗಳನ್ನು ತೋರಿಸುವನು. ಅನಂತರ ಪರಮಾತ್ಮನ ಗುಣ ಗಳು, ಅವನು ಮಾಡುವ ಸೃಷ್ಟ್ಯಾದಿ ಕರ್ಮಗಳು—ಇವುಗಳನ್ನು ಅವರವರ ಯೋಗ್ಯತಾನುಸಾರವಾಗಿ, ಪರಮಾತ್ಮನು ಅವರವರಿಗೆ ತೋರಿಸಿ ಕೊಡುವನು ಎಂಬ ತಾತ್ಪರ್ಯ. ॥೨೦॥

## (ಇ) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ತಿಲಜ"—ಇತಿ ॥ ತಿಲಜ = ತೈಲ ॥

ದೀಪದ ಜ್ವಾಲೆಯು ಬತ್ತಿ ಮತ್ತು ಎಣ್ಣೆಯನ್ನು ಅನುಸರಿಸಿರುವುದು. ಅದು ಉರಿಯುತ್ತಿರುವಾಗ, ಅದರ ಪ್ರಕಾಶದಿಂದ ಮನೆಯೊಳಗಿರುವ ಕತ್ತ ಲೆಯು ಪರಿಹಾರವಾಗುವುದು. ಅಲ್ಲಿರುವ ವಸ್ತುಗಳು ಸ್ಪಷ್ಟವಾಗಿ ಗೋಚರಿ

ಸುವುವು. ಅಂತೆಯೇ ಶ್ರೀ ಪರಮಾತ್ಮನು ಸ್ವಭಕ್ತ ಜನರ ಜ್ಞಾನ, ಭಕ್ತಿ ವೈರಾಗ್ಯಗಳನ್ನನುಸರಿಸಿ, ಅವರ ಮನೋಮಂದಿರದಲ್ಲಿ ಹೊಳೆಯುವನು. ಅವರ ಅಜ್ಞಾನವೆಂಬ ಅಂಧಕಾರವನ್ನು ಪರಿಹರಿಸಿ, ತನ್ನ ಗುಣ ರೂಪ ಕ್ರಿಯಾದಿಗಳನ್ನು ತೋರಿಸುವನು. ತಿಲಜ—ತೈಲ, ತಿಲದಿಂದಾಗುವ ಎಳ್ಳೆಣ್ಣೆ. ॥೨೧॥

**(೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–**

ಹೀಗೆ ಇರುವ ದೇವರ ಗುಣರೂಪ ಕ್ರಿಯೆಗಳ ಉಪಾಸನೆ, ತತ್ತ್ವಜ್ಜೀವ ಯೋಗ್ಯತಾನುಸಾರವೆಂದು ಸದೃಷ್ಟಾಂತವಾಗಿ ಬೋಧಿಸುತ್ತಾರೆ. ಎಣ್ಣೆಗೂ ಬತ್ತಿಗೂ ತಕ್ಕಹಾಗೆ ಆಕಾರವುಳ್ಳ ದೀಪವು ಪ್ರಕಾಶಿಸಿ, ಮನೆಯ ಕತ್ತಲೆಯ ಪರಿಹರಿಸಿ, ಆ ಮನೆಯಲ್ಲಿರುವ ವಸ್ತುಗಳನ್ನು ಕಾಣಿಸಿಕೊಡುವಂತೆ, ಕಮಲ ನೇತ್ರನಾದ ದೇವರು ತನ್ನ ಭಕ್ತರ ಮನಸ್ಸಿನಲ್ಲಿ ಭಕ್ತಿ ಜ್ಞಾನ ಕರ್ಮಗಳಿಗೆ ಅನುಕೂಲನಾಗಿ ಒಲಿದು, ಪ್ರಕಾಶಿಸಿ, ತನ್ನ ಗುಣರೂಪಕ್ರಿಯೆಗಳ ದರ್ಶನ ಮಾಡಿಸುವನು. ॥೨೧॥

## ಸರ್ವವ್ಯಾಖ್ಯಾನಸಾರಸಂಗ್ರಹ :

ಶ್ರೀ ಪರಮಾತ್ಮನ ರೂಪ, ಗುಣ ಮತ್ತು ಕ್ರಿಯೆಗಳ ಧ್ಯಾನೋಪಾಸನೆಯು ಆಯಾಯಾ ಜೀವರ ಯೋಗ್ಯತೆಗನುಸಾರವಾಗಿರುವುದೆಂದು ಹೃದಯಂಗಮವಾದ ದೀಪದ ದೃಷ್ಟಾಂತದಿಂದ ತಿಳಿಸುತ್ತಾರೆ–"**ತಿಜಲ ವರ್ತಿಗಳನು**"– ಎಂಬ ಪ್ರಸಕ್ತ ೨೧ ನೆಯ ಈ ಪದ್ಯದಿಂದ.

**(೧) ತಿಲಜ ವರ್ತಿಗಳನು :–**

ಮನೆಯಲ್ಲಿ ರಾತ್ರಿಯ ಕಾಲದಲ್ಲಿ ಕತ್ತಲೆಯ ಪರಿಹಾರಕ್ಕಾಗಿ ಎಣ್ಣೆಯ ದೀಪಗಳನ್ನು ಉರಿಸುತ್ತಿದ್ದ ಪದ್ಧತಿ ಉಂಟು. ಈಗ ವಿದ್ಯುದ್ದೀಪಗಳಿವೆ.

ಪೂರ್ವದಲ್ಲಿ ತೈಲ ದೀಪಗಳಿಂದಲೇ ಬೆಳಕು. "ತಿಲ"—ಎಂದರೆ "ಎಳ್ಳು" ಎಂದರ್ಥ. ಎಳ್ಳನ್ನು ಗಾಣಕ್ಕೆ ಹಾಕಿ ಅರೆದಾಗ ಎಳ್ಳೆಣ್ಣೆ ಉಂಟಾಗುವುದು. ಇದು ಉತ್ತಮ. ಇದು ಅತ್ಯಂತ ಶುದ್ಧವಾಗಿ ಮತ್ತು ತೆಳುವಾಗಿರುವುದರಿಂದ, ದೀಪದ ಪ್ರಕಾಶ ಹೆಚ್ಚು, ಅಂತೆಯೇ ದೀಪವನ್ನು ಉರಿಸಲು ಬತ್ತಿ ಅತ್ಯ ಗತ್ಯ. ಇದಕ್ಕೆ "ವರ್ತಿ" ಎಂದು ಹೆಸರು. ಬತ್ತಿಯು ದಪ್ಪವಾಗಿ, ಉದ್ದ ವಾಗಿದ್ದಷ್ಟೂ ಬೆಳಕಿನ ಪ್ರಕಾಶ ಅಷ್ಟು ಹೆಚ್ಚುವುದು. ಅಂದರೆ ಉರಿಯು ತ್ತಿರುವ ತೈಲದೀಪಗಳ ಪ್ರಕಾಶದ ಪ್ರಖರತೆಯು (೧) ಎಣ್ಣೆ ಮತ್ತು (೨) ಬತ್ತಿ ಇವೆರಡು ಸಾಮಗ್ರಿಗಳನ್ನು ಅವಲಂಬಿಸಿಕೊಂಡಿರುವುದು.

**(೨) ದೀಪಗಳಾಲಯದ ಕತ್ತಲೆಯ ಭಂಗಿಸಿ :—**

ದೀಪವನ್ನು ಹಚ್ಚಿದ ತಕ್ಷಣ, ಬೆಳಕಿನ ಪ್ರಕಾಶ ಕಿರಣಗಳು ಮನೆಯಲ್ಲಿ ಎಲ್ಲೆಲ್ಲಿಯೂ ಹರಡಿ. ಅಲ್ಲಿದ್ದ ಕತ್ತಲೆಯನ್ನು ಪರಿಹರಿಸುವುದು. ಆಗ ದೀಪದ ಬೆಳಕಿನಲ್ಲಿ ಮನೆಯಲ್ಲಿರುವ ಸಮಸ್ತ ಪದಾರ್ಥಗಳೂ ನಮ್ಮ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುವುವು. ಅಂದರೆ ಗೃಹಗತ ಪದಾರ್ಥಗಳ ಗೋಚರತೆಯು ಕತ್ತಲನ್ನು ಪರಿಹರಿಸುವ ದೀಪದ ಬೆಳಕನ್ನು ಅವಲಂಬಿಸಿದೆ. ಆದರೆ ಅಂತಹ ದೀಪದ ಪ್ರಕಾಶವು ಎಣ್ಣೆ ಮತ್ತು ಬತ್ತಿಗಳಿಗನುಸಾರವಾಗಿರುವುದು.

**(೩) ಜಲರುಹೇಕ್ಷಣ ತನ್ನವರ ಮನದೊಳಗೆ :–**

ಶ್ರೀ ಪರಮಾತ್ಮನ ನೇತ್ರಗಳು ಕಮಲದಳಗಳಂತೆ ವಿಸ್ತಾರವಾಗಿದೆ. ಅಂತಹ ಜಲರುಹೇಕ್ಷಣನ ಕೃಪಾದೃಷ್ಟಿಯೇ ಭಕ್ತರ ಪಾಪಕ್ಷಾಳನಗೈದು ಅವರ ಹೃನ್ಮಂದಿರದಲ್ಲಿ ಜ್ಞಾನ, ಭಕ್ತಿಗಳ ಅಂಕುರಕ್ಕೆ ಕಾರಣ. ನಮ್ಮ ಈ ಮನಸ್ಸು ಅಹಂಕಾರ ಮಮಕಾರಗಳಿಂದ ಗ್ರಸ್ತವಾಗಿ, ಪ್ರಾಪಂಚಿಕ ವಿಷಯ ಭೋಗಗಳಲ್ಲಿ ತಲ್ಲೀನವಾಗಿರುವುದು. ಇದು ಶ್ರೀಹರಿಯ ವಿಸ್ಮರಣೆಗೆ ಕಾರಣವು. ಇದೇ ಮನಸ್ಸಿನಲ್ಲಿ ಆವರಿಸಿರುವ ಅಜ್ಞಾನವೆಂಬ ಕತ್ತಲೆಯು. ಮನೆಯೆಂಬ ಮಂದಿರದಲ್ಲಿ ಗಾಢವಾಗಿ ಹಬ್ಬಿರುವ ಅಜ್ಞಾನವೆಂಬ ಕತ್ತಲೆ

ಪರಿಹಾರವಾಗಬೇಕಾದರೆ, ಭಗವತ್ಸಂಬಂಧವಾದ ಜ್ಞಾನವೆಂಬ ದೀಪವು ಅತ್ಯಗತ್ಯ. ಇಂತಹ ಜ್ಞಾನಾಂಕುರವು ಮನಸ್ಸಿನಲ್ಲಿ ಮೂಡಬೇಕಾದರೆ, ಅದಕ್ಕೆ ಕಮಲದಳಾಯತಾಕ್ಷನಾದ ಶ್ರೀ ಪರಮಾತ್ಮನ ಕಾರುಣ್ಯವೇ ಮುಖ್ಯ ಕಾರಣವು.

ನಮ್ಮ ಅಧಿಷ್ಠಾನದಲ್ಲಿ ನಡೆಯುತ್ತಿರುವ ಕ್ರಿಯಾರೂಪವಾವ ಸಮಸ್ತ ಕರ್ಮಗಳೂ ಭಗವದರ್ಪಿತವಾಗಬೇಕು. ಆಗ ಪರಮದಯಾಳುವಾದ ಆ ಕರುಣಾನಿಧಿಯು ಪಾಪ ಕರ್ಮಗಳನ್ನು ತನ್ನ ಕಟಾಕ್ಷವೀಕ್ಷಣದಿಂದ ಭಸ್ಮ ಗೊಳಿಸಿ, ಪುಣ್ಯ ಕರ್ಮಗಳನ್ನು ಅನಂತಮಾಡಿ ವರ್ಧಿಸಿ, ಪುಣ್ಯ ಫಲ ಗಳನ್ನು ಈಯುವನು. ಅಂದರೆ, ಭಗವದರ್ಪಿತ ಬುದ್ಧಿಯಿಂದ ಮಾಡಿದ ಪುಣ್ಯ ಕರ್ಮಗಳು ಜ್ಞಾನಕ್ಕೆ ಸಾಧನವಾಗಬೇಕು. ಶ್ರೀ ಪರಮಾತ್ಮನ ಮಹಾತ್ಮ್ಯೆಯನ್ನು ತಿಳಿಸುವ ಸುಜ್ಞಾನವು ಭಕ್ತಿಮಾರ್ಗಕ್ಕೆ ಕಾರಣ. ಅಂತಹ ಮಹಾತ್ಮಜ್ಞಾನಪೂರ್ವಕವಾದ ಪ್ರೇಮಪ್ರವಾಹ ರೂಪವಾದ ಸುದೃಢ ಸ್ನೇಹವು ವೈರಾಗ್ಯಕ್ಕೆ ಸಾಧನವಾಗುವುದು. ಸುಕರ್ಮ-ಸುಜ್ಞಾನ ನಿಷ್ಕಪಟ ಭಕ್ತಿ ಭಗವದ್ವಿಷಯದಲ್ಲಿಯೇ ಮನಸ್ಸನ್ನು ಆಸಕ್ತಗೊಳಿಸಿದ ವೈರಾಗ್ಯ ಇವು ಭಗವದಪರೋಕ್ಷಕ್ಕೆ ಸಾಧನ ಸಾಮಗ್ರಿಗಳು. ತನ್ಮೂಲಕ ಭಗವದನುಗ್ರಹ ಪ್ರಾಪ್ತಿ. ಭಗವದನುಗ್ರಹದಿಂದ ನಿತ್ಯಸುಖರೂಪವಾದ ಸ್ವರೂಪಾನಾಂದಾ ವಿರ್ಭಾವ ರೂಪವಾದ ಪರಮಪುರುಷಾರ್ಥವಾದ ಮೋಕ್ಷಪ್ರಾಪ್ತಿ. ಇಂತು, ಪರಮ ಕರುಣಾಸಾಗರನಾದ ಶ್ರೀ ಪರಮಾತ್ಮನು ಸ್ವಭಕ್ತರ ಅಂತರಂಗದಲ್ಲಿ ಹೊಳೆದು, ತನ್ನ ಅಪರೋಕ್ಷಜ್ಞಾನಾನಂದ ಭಾಗ್ಯವನ್ನು ಕರುಣಿಸಿ, ತನ್ನ ಗುಣಗಳನ್ನು ರೂಪ ವಿಶೇಷಗಳನ್ನು ಮತ್ತು ಕ್ರಿಯಾ ವಿಲಾಸವನ್ನು ಅವರಿಗೆ ದರ್ಶನ ಭಾಗ್ಯದ ದ್ವಾರಾ ತೋರಿಸುವನು. ಅಂತಹ ಬಿಂಬರೂಪಿ ಶ್ರೀ ಪರಮಾಪ್ತನು ಎಂತಹ ಪರಮಾಪ್ತ ಬಂಧು ! ॥೨೧॥

# ಪದ್ಯ (೨೨)

ಮೂಲ :-

**ಆವ ದೇಹವ ಕೊಡಲಿ ಹರಿ ಮ |**
**ತ್ತಾವ ಲೋಕದಲಿಡಲಿ ತಾ ಮ |**
**ತ್ತಾವ ದೇಶ ದೊಳಿಡಲಿ ಆವಾವ ಸ್ಥಿತಿಗಳು ಬರಲಿ ||**
**ಈ ವಿವಿಧ ಜಡ ಚೇತನದೊಳು ಪ |**
**ರಾವರೇಶನ ರೂಪಗುಣಗಳ |**
**ಭಾವಿಸುತ ಸುಜ್ಞಾನ ಭಕುತಿಯ ಬೇಡು ಕೊಂಡಾಡು ||೨೨||**

**ಅವತರಣಿಕೆ :—**

ಆವ ಜನ್ಮಬರಲಿ, ಆವ ಲೋಕದಲ್ಲಿರಲಿ, ಅವ ದೇಶದಲ್ಲಿ ಜನಿಸಲಿ ಆವ ಸ್ಥಿತಿಯಲ್ಲಿ ಇರಲಿ ನಿರಂತರ ಭಗವಂತನ ಧ್ಯಾನೋಪಾಸನೆ ಮಾಡ ಬೇಕೆಂದು ತಿಳಿಸುತ್ತಾರೆ- **"ಆವ ದೇಹವ ಕೊಡಲಿ"**—ಎಂಬ ಪ್ರಸಕ್ತ ಸಂಧಿ ಗತ ಈ ೨೨ ನೆಯ ಪದ್ಯದಿಂದ.

೮೪ ಲಕ್ಷ ಯೋನಿಗಳಲ್ಲಿ ಯಾವ ಜನ್ಮವನ್ನು ಜೀವರ ಕರ್ಮಾನುಸಾರ ವಾಗಿ ಶ್ರೀ ಪರಮಾತ್ಮನು ಕೊಡಬಹುದು, ಚತುರ್ದಶ ಲೋಕಗಳಲ್ಲಿ ಬೇಕಾ ದರೂ ಇಡಬಹುದು. ಭೂಲೋಕದಲ್ಲಿ ಯಾವ ದೇಶದಲ್ಲಿ ಬೇಕಾದರೂ ಜನ್ಮ ವೆತ್ತಬಹುದು. ಬಾಲ್ಯಾದಿ ವಾರ್ಧಿಕ್ಯ ಪರ್ಯಂತ ಯಾವ ಸ್ಥಿತಿಯಲ್ಲಿ ಬೇಕಾ ದರೂ ಇಡಬಹುದು. ಏನೇನು ಬಂದೊದಗಿದರೂ ಸಮಸ್ತ ಜಡರಾಶಿ

ಗಳಲ್ಲಿ ಜೀವ ವರ್ಗದಲ್ಲಿ ಪರನಾಮಕಳಾದ ಶ್ರೀ ಲಕ್ಷ್ಮೀದೇವಿಯರಿಗಿಂತ ಕೋಟಿ ಗುಣದಿಂದ ಉತ್ತಮನಾದ ಸರ್ವೋತ್ತಮನಾದ ಶ್ರೀ ಪರಮಾತ್ಮನ ರೂಪ, ಗುಣ, ಕ್ರಿಯಾದಿಗಳನ್ನು ಧ್ಯಾನೋಪಾಸನೆ ಮಾಡುತ್ತಿರಬೇಕು. ಸಮೀಚೀನವಾದ ಜ್ಞಾನವನ್ನು ಮತ್ತು ಭಗವಂತನ ಪಾದಾರವಿಂದಗಳಲ್ಲಿ ನಿರಂತರ ಪ್ರೇಮಪ್ರವಾಹ ರೂಪವಾದ ಭಕ್ತಿಯನ್ನು ಬೇಡಬೇಕು. ಅವನ ಅಪಾರ ಮಹಿಮಾತಿಶಯಗಳನ್ನು ಸ್ತೋತ್ರ ಮಾಡುತ್ತ ಹಿಗ್ಗುತ್ತಿರ ಬೇಕು-ಎಂದು ತಿಳಿಸುತ್ತಾರೆ. ॥೨೨॥

**ಪ್ರತಿಪದಾರ್ಥ :-**

**ಹರಿ** = ಬಿಂಬರೂಪಿಯಾದ ಆ ಶ್ರೀ ಪರಮಾತ್ಮನು **ಆವ ದೇಹವ ಕೊಡಲಿ** = ಯಾವ ಜನ್ಮವನ್ನಾದರೂ ಕೊಡಲಿ (ಆಯಾಯಾ ಜನ್ಮಕ್ಕೆ ತಕ್ಕಾಂತೆ ದೇಹದ ಆಕಾರ ಮತ್ತು ಲಕ್ಷಣಗಳು) **ಆವಲೋಕದೊಳಿಡಲಿ** = ನಮ್ಮ ಪೂರ್ವಕೃತ ಕರ್ಮಕ್ಕೆ ತಕ್ಕಂತೆ ನರಕ, ಸ್ವರ್ಗ, ಪಾತಾಳಾದಿ ಯಾವ ಲೋಕದಲ್ಲಿ ಬೇಕಾದರೂ ಇಡಲಿ, **ಮತ್ತಾವ ದೇಶದೊಳಿಡಲಿ** = ಭೂಲೋಕದಲ್ಲಿ ಜನ್ಮವೆತ್ತಿದಾಗ ಭಾರತ ಅಥವಾ ತದನ್ಯವಾದ ಯಾವ ಪ್ರದೇಶದಲ್ಲಿ ಜನ್ಮಕೊಡಲಿ, **ಆನಾವಸ್ಥೆಗಳು ಬರಲಿ** = ಬಾಲ್ಯ ಯೌವ್ವನಾದಿ ಆವ ಅವಸ್ಥೆಗಳಾಗಲಿ ಅಥವಾ ಸುಖ ದುಃಖಾವಸ್ಥೆಗಳ ಬರಲಿ, ಅಥವಾ ಜಾಗ್ರತೆ ಸ್ವಪ್ನ, ಸುಷುಪ್ತಿ ಎಂಬ ಯಾವ ಅವಸ್ಥಾತ್ರಯಗಳಲ್ಲಿಡಲಿ **ಈ ವಿಧದಿ** = ಪೂರ್ವೋಕ್ತ ಪ್ರಕಾರ **ಜಡಚೇತನರೊಳು** = ಜಡವಸ್ತುಗಳು, ಸ್ಥಾವರ ಜಂಗಮಾದಿ ಸಮಸ್ತ ಜೀವ ವರ್ಗಗಳಲ್ಲಿ **ಪರಾವರೇಶನ** = "ಪರ" ನಾಮಕಗಳಾದ ರಮಾದೇವಿಯರಿಗೂ "ಅವರ"-ಅವರಿಗಿಂತ ಅವರರಾದ ಬ್ರಹ್ಮಾದಿ ತೃಣಾಂತ ಜೀವರು, ಕಲ್ಯಾದಿಗಳು ಇತ್ಯಾದಿ ಚೇತನವರ್ಗಕ್ಕೆ "ಈಶ" ಎಂದರೆ ನಿಯಾಮಕನಾದ ಅಂದರೆ ಸರ್ವಚೇತನರಿಗೆ ಪರಮಮುಖ್ಯ ವೃತ್ತಿಯಿಂದ ನಿಯಾಮಕನಾದ ಶ್ರೀ ಪರಮಾತ್ಮನ **ರೂಪ** = ವಸ್ತುಗಳಲ್ಲಿ ತದ್ರೂಪದಿಂದ ವಿದ್ಯಮಾನನಾಗಿರುವ ಶ್ರೀ ಪರಮಾತ್ಮನ ಅಪಾರ ರೂಪಗಳನ್ನು, **ಗುಣ** = ಅವನ ಅನಂತ ಕಲ್ಯಾಣ ವಿಶೇಷಗಳನ್ನು **ಭಾವಿಸುತ** =

ಚಿಂತೆ ಮಾಡುತ್ತಾ, **ಸುಜ್ಞಾನ** = ಭಗವತ್ಸಂಬಂಧವಾದ ದಿವ್ಯ ಜ್ಞಾನ ಸಂಪತ್ತನ್ನು. **ಭಕ್ತಿಯು** = ದೃಢ ಭಕುತಿಯನ್ನು **ಬೇಡು** = ಅವನಲ್ಲಿ ಪ್ರಾರ್ಥಿಸು. **ಕೊಂಡಾಡು** = ಅವನ ಗುಣ ಮತ್ತು ಮಾಹಿಮಾತಿಶಯಗಳನ್ನು ಸ್ತೋತ್ರಮಾಡು ॥೨೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಶ್ರೀಪರಮಾತ್ಮನ ಜ್ಞಾನ ಭಕುತಿಗಳ ಬೇಡು ಎಂತ ಹೇಳತಾರೆ. ಹರಿ-ಬಿಂಬರೂಪಿಯಾದ ಶ್ರೀಲಕ್ಷ್ಮೀನಾರಾಯಣ ದೇವರು, ಆವ ದೇಹವ ಕೊಡಲಿ-ಭೂಮಿಯಲ್ಲಿ ದಾವ ದೇಹದಿಂದ ಉತ್ಪತ್ತಿಮಾಡಿಸಲಿ, ಮತ್ತಾವ ಲೋಕದಲಿಡಲಿ-ಪುನಶ್ಚ ಮರಣ ಸಂಭವಿಸಿ, ಊರ್ಧ್ವ, ನರಕಾದಿ ದಾವ ಲೋಕದಲ್ಲಿಡಲಿ, ತಾ ಮತ್ತಾವ ದೇಶದೊಳಗಿಡಲಿ- ಮತ್ತು ಶ್ರೀಹರಿ ಎಂಥಾ ಪ್ರದೇಶದಲ್ಲಾದರೂ ಇಡಲಿ, ಆವಾವ ಸ್ಥಿತಿಗಳು ಬರಲಿ-ಸುಖ ದುಃಖಾತ್ಮಕ ಅನೇಕ ವಿಧವಾದ ದಾವದಾವ ಅವಸ್ಥೆಗಳು ಪ್ರಾಪ್ತವಾದರೂ, ಈ ವಿಧದಿ- ಶ್ರೀ ಪರಮಾತ್ಮನ್ನ ಮರಿಯದೆ ಈ ಪೂರ್ವೋಕ್ತ ವಿಧದಿಂದ, ಜಡ ಚೇತನದೊಳು- ಸ್ಥಾವರಗಳಲ್ಲಿ, ಸ್ಥಾವರಜಂಗಮ ಜೀವರುಗಳಲ್ಲಿ, ಪರಾವರೇಶನ- ಪರಾ- ಜೀವೋತ್ತಮರಾದ ವಾಯುದೇವರಿಗೆ, ವರಾ- ಉತ್ತಮರಾದ ರಮಾದೇವೇರು, ಈಶನ-ಇವರಿಗೆ ಈಶನಾದ ಪರಮಾತ್ಮನ, ರೂಪಗುಣಗಳ-ರೂಪಗಳನ್ನೇನು, ಗುಣಗಳನ್ನೇನು. ಭಾವಿಸುತ-ಜ್ಞಾನಾನು ಸಂಧಾನದಿಂದ ತಿಳಿಯೋವನಾಗುತ, ಸುಜ್ಞಾನ ಭಕುತಿಯ- ಇನ್ನೂ ಆ ದೇವರ ಅವನ ವಿಷಯಕವಾದ ದಿವ್ಯಜ್ಞಾನವನ್ನೇನು, ಅಚಂಚಲವಾದ ಭಕ್ತಿಯನ್ನೇನು, ಬೇಡು ಕೊಂಡಾಡು-ಕೊಟ್ಟು ಸಂರಕ್ಷಣೆಮಾಡು ಅಂತ ಪ್ರಾರ್ಥನಾ ಮಾಡಿ, ಸದಾ ಆ ಪರಮಾತ್ಮನ್ನ ಸ್ಮರಣೆ ಮಾಡತಾ ಇರೋವ

ನಾಗಬೇಕೆಂತ ತಾತ್ಪರ್ಯ. ತದ್ವ್ಯತಿರಿಕ್ತ ಅಹಿತ ಸುಖಗಳನ್ನು ಬೇಡಬ್ಯಾಡ ಎಂತಲೂ ಅರ್ಥ. ॥೨೨॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಭಗವದಪರೋಕ್ಷವಾಗಬೇಕಾದರೆ, ಪ್ರಧಾನ ಸಾಧನಗಳು ಭಕ್ತಿ ಮತ್ತು ಜ್ಞಾನಗಳೇ. ಆದುದರಿಂದ ಕಾಮ್ಯ ಫಲವನ್ನು ಅಪೇಕ್ಷಿಸದೆ, ಜನ್ಮ ಜನ್ಮಾಂತರದಲ್ಲಿಯೂ ಪರಮಾತ್ಮನಲ್ಲಿ ಭಕ್ತಿ ಜ್ಞಾನಗಳು ಇರುವಂತೆ ಪ್ರಾರ್ಥಿಸ ಬೇಕೆಂದು. "ಆವ ದೇಹವ"- ಎಂಬ ಪದ್ಯದಿಂದ ಹೇಳುತಾರೆ.

ಶ್ರೀ ಪರಮಾತ್ಮನು ನಮ್ಮ ಕರ್ಮಾನುಸಾರವಾಗಿ ಯಾವ ಜನ್ಮಾದಿಗಳ ನ್ನಾದರೂ ಕೊಡಲಿ, ನರಕಾದಿ ಲೋಕಗಳು ಮತ್ತು ಆ ಲೋಕದ ನರಕಗಳಲ್ಲಿ ಯಾವ ನರಕವೇ ಬಂದಿರಲಿ ಅಥವಾ ಸ್ವರ್ಗ ಭೂ ಪಾತಾಳಾದಿ ಯಾವ ಲೋಕದಲ್ಲಿ ಯಾವ ದೇಶದಲ್ಲಾಗಲೀ ನಮ್ಮನ್ನ ಹುಟ್ಟಿಸಲಿ, ಅಲ್ಲಲ್ಲಿ ಸುಖವೋ ದುಃಖವೋ ಯಾವ ಅವಸ್ಥೆಗಳಲ್ಲಿ ನಮ್ಮನ್ನಿಟ್ಟರೂ, ಮೇಲೆ ಹೇಳಿದ ಪ್ರಕಾರ, ಸರ್ವೋತ್ತಮನಾದ ಶ್ರೀಪರಮಾತ್ಮನು ಸ್ಥಾವರ ಜಂಗಮ ಮೊದಲಾದ ಪ್ರಾಣಿಗಳಲ್ಲಿ ತತ್ತದ್ರೂಪಿಯಾಗಿ, ತತ್ತನ್ನಾಮಧೇಯನಾಗಿ ವ್ಯಾಪ್ತನಾಗಿರುವನೆಂಬ ಜ್ಞಾನವನ್ನೂ ಆ ಪರಮಾತ್ಮನಲ್ಲಿ ದೃಢವಾದ ಭಕ್ತಿ ಯನ್ನು ಸ್ಥಿರವಾಗಿ ಕೊಡು- ಎಂದು ಶ್ರೀ ಪರಮಾತ್ಮನನ್ನು ನಿತ್ಯದಲ್ಲಿಯೂ ಸ್ತೋತ್ರಮಾಡುತ್ತಾ ಪ್ರಾರ್ಥಿಸುತ್ತಿರು. ನಾಯಿ, ಕತ್ತೆ ಮೊದಲಾದ ಜನ್ಮಗ ಳಲ್ಲಿ ಹುಟ್ಟಿರುವಾಗಲೂ, ಪರಮಾತ್ಮನ ಸ್ವರೂಜ್ಞಾನವಾಗುವುದು ಅಸಂಭವ ವೆಂದು ಶಂಕಿಸಬಾರದು. **"ಸುಜ್ಞಾನ ಭಕುತಿಯು ಬೇಡು ಕೊಂಡಾಡು"** —ಎಂದು ದಾಸರಾಯರು ಹೇಳಿದ ವಾಕ್ಯವು ಶ್ವಾನಾದಿ ಜನ್ಮ ಬಂದ ಮೇಲೆ ಬೇಡುವುದೆಂಬ ಅರ್ಥವಲ್ಲ. ಈಗ ಮನುಷ್ಯರಾಗಿದ್ದು, ಹರಿ ಸರ್ವೋತ್ತಮ ತ್ವಾದಿ ಜ್ಞಾನದಿಂದಲೂ ಭಕ್ತಿಯಿಂದಲೂ ಪರಮಾತ್ಮನನ್ನು ಅವಿಚ್ಛಿನ್ನವಾಗಿ ಆರಾಧಿಸುತ್ತಿದ್ದರೆ. "ಪ್ರಾರಬ್ಧವಶಾತ್ ನಮಗೆ ನಾಯಿ, ಕತ್ತೆ ಮೊದಲಾದ ಜನ್ಮವನ್ನು ಕೊಟ್ಟರೂ, ಯಾವ ನರಕಾದಿಗಳಲ್ಲಿ ನಮ್ಮನ್ನಿಟ್ಟರೂ. ನಮ್ಮ

ಭೂಲೋಕದಲ್ಲಿ ಯಾವ ಸಂಸಾರದಲ್ಲಿ ನಮ್ಮನ್ನು ಬಂಧಿಸಿದ್ದರೂ, ನಮ್ಮ ಮನಸ್ಸು ಮಾತ್ರ ಭ್ರಮರವು ಮಕರಂದವನ್ನು ಸೇವಿಸುವಂತೆ. ನಿನ್ನ ಪಾದ ಕಮಲದಲ್ಲಿ ಇರಲಿ. ಇಂತಹ ವರವನ್ನು ಮಾತ್ರ ನಮಗೆ ಕೊಟ್ಟು, ನಮಗೆ ಯಾವ ಜನ್ಮ, ಯಾವ ಲೋಕ, ಯಾವ ದೇಶ, ಯಾವ ಅವಸ್ಥೆಗಳನ್ನು ಕೊಟ್ಟಾದರೂ ಕೊಡು– "ಎಂದು ನಿತ್ಯದಲ್ಲಿಯೂ ಪರಮಾತ್ಮನನ್ನು ಈ ಜನ್ಮದಲ್ಲಿ ಪ್ರಾರ್ಥಿಸಬೇಕೆಂದು ತಾತ್ಪರ್ಯ. ಇಂತಹ ಜ್ಞಾನಿಗಳಾದ ಭಕ್ತರಿಗೆ ಪ್ರಾರಬ್ಧಕರ್ಮಬಲದಿಂದ ಜಡಭರತನಿಗೆ ಜಿಂಕೆಯ ಜನ್ಮವೂ, ಇಂದ್ರ ದ್ಯುಮ್ನ ರಾಜನಿಗೆ ಗಜಜನ್ಮವೂ, ನಹುಷನಿಗೆ ಅಜಗರ ಜನ್ಮವೂ ಪ್ರಾಪ್ತಿ ಯಾದಂತೆ ಆದರೂ, ಅವರುಗಳಿಗೆ ಜಿಂಕೆ ಮೊದಲಾದ ಜನ್ಮಗಳಲ್ಲಿಯೂ ಕೂಡ ಜ್ಞಾನವಿದ್ದಂತೆ, ಜನ್ಮಾಂತರದಲ್ಲಿಯೂ ಭಗವದನುಗ್ರಹದಿಂದ ಜ್ಞಾನ, ಭಕ್ತಿ ಹುಟ್ಟುವುದರಲ್ಲಿ ಸಂಶಯವಿಲ್ಲ.

**ಭಾಗವತ ಅಷ್ಟಮಸ್ಕಂಧದ** ಗಜೇಂದ್ರಮೋಕ್ಷ ಪ್ರಕರಣದಲ್ಲಿ– **"ಜಜಾಪ ಪರಮಂ ಜಾಪ್ಯಂ ಪ್ರಾಕ್ ಜನ್ಮನ್ಯನುಶಿಕ್ಷಿತಮ್"**—ಎಂದಿದ್ದಾರೆ. ಗಜೇಂದ್ರನು ಪೂರ್ವಜನ್ಮದಲ್ಲಿ ಶಿಕ್ಷಿತವಾದ ಜ್ಞಾನಬಲದಿಂದ ಉತ್ತಮವಾದ ಭಗವಂತನ ಸ್ತೋತ್ರರೂಪವಾದ ಜಪವನ್ನು ಜಪಿಸಿದನು– ಎಂದು ಹೇಳಿರುವರು. **ಪಂಚಮಸ್ಕಂಧದಲ್ಲಿ** ಭರತರಾಜನಿಗೆ ಮೃಗಜನ್ಮ ಬಂದ ಕಾಲದಲ್ಲಿ ಮತ್ತು ಮೂರನೆಯ ಜನ್ಮ ಬ್ರಾಹ್ಮಣನಾಗಿದ್ದ ಕಾಲ ದಲ್ಲಿಯೂ ಸಹ ಭಗವದಾರಾಧನಾ ಪುಣ್ಯವಿಶೇಷದಿಂದ ಪೂರ್ವಜನ್ಮಗಳ ಜ್ಞಾನದಿಂದ ಭಗವಂತನನ್ನು ಕ್ಷಣ ಬಿಡದೆ ಧ್ಯಾದ ಮಾಡುತ್ತಿದ್ದನೆಂದು ಹೇಳಿರುವರು. ಫಲಾಪೇಕ್ಷೆಯಿಂದ ಕರ್ಮ ಮಾಡಬಾರದೆಂದು ಅನೇಕ ಸ್ಥಳ ಗಳಲ್ಲಿ ಹೇಳಿರುವರು. ಆದರೆ ಈ ಪದ್ಯದಿಂದ ಜನ್ಮ ಜನ್ಮಗಳಲ್ಲಿಯೂ ಜ್ಞಾನ ಭಕ್ತಿಗಳನ್ನು ಬೇಡು –ಎಂದು ಹೇಗೆ ಹೇಳಿದರೆಂದರೆ– ಭಗವತ್ಪ್ರಸಾದ ವನ್ನೂ, ಜ್ಞಾನ ಭಕ್ತಿಗಳನ್ನು ಬೇಡು–ಎಂದು ಎಂದು ಹೇಗೆ ಹೇಳಿದರೆಂದರೆ– ಭಗವತ್ಪ್ರಸಾದವನ್ನೂ, ಜ್ಞಾನ, ಭಕ್ತಿಗಳನ್ನೂ ಬೇಡುವುದು ಕಾಮ್ಯವಲ್ಲ. ಜ್ಞಾನ, ಭಕ್ತಿಯನ್ನು ಬೇಡುವುದು ಪರಮಾತ್ಮನ ಪ್ರಸಾದಕ್ಕಾಗಿ. ಪ್ರಸಾ ದವೇ ನಮಗೆ ಮುಖ್ಯ. ನೀನು ಪ್ರಸನ್ನನಾದರೆ ನಮಗೆ ಮುಕ್ತಿಯನ್ನು

ಕೊಡು." "ಐಶ್ವರ್ಯ ಕೊಡು" –ಎಂದು ಬೇಡುವುದು ಮಾತ್ರ ಕಾಮ್ಯ. ಅನುಗ್ರಹವನ್ನು ಮಾತ್ರವೇ ಬೇಡುವುದು ಕಾಮ್ಯವಾಗುವುದಿಲ್ಲ. ಕೇವಲ ನಿಷ್ಕಾಮರಾದ ಸನಕಾದಿಗಳು, ಪ್ರಹ್ಲಾದ ಮೊದಲಾದವರೂ ಸಹ ಇಂತಹ ವರಗಳನ್ನು ಬೇಡಿರುವರು. ಅದೆಲ್ಲೆಂದರೆ, **ಭಾಗವತ ತೃತೀಯ ಸ್ಕಂಧದ ೧೬ನೆಯ ಅಧ್ಯಾಯ—೪೯ನೆಯ ಶ್ಲೋಕ :** ಸನಕಾದಿಗಳು ಪರಮಾತ್ಮನನ್ನು ಕ್ಷಮೆ ಬೇಡುವ ಪ್ರಕರಣ :-

**"ಕಾಮಂ ವ್ರಜೇಮ ವೃಜಿನೈರ್ನಿರಯೇಷು ನಷ್ಟಾಶ್ಚೇತೋಲಿವದ್ಯದಿನುತೇ ಪದಯೋ ರಮೇಶ ॥ ವಾಚಶ್ಚನಸ್ತು ಲಸಿವ ದ್ಯದಿತೇಂಘ್ರಿಶೋಭಾಃ ಪೂರ್ಯೇತ ತೇ ಗುಣಗಣೈರ್ಯದಿ ಕರ್ಣರಂಧ್ರಃ ॥**

–ನಿನ್ನಪ್ಪಣೆಯಿಲ್ಲದೇ ನಿನ್ನ ಮನೆ ಕಾಯುವ ದ್ವಾರಪಾಲಕರನ್ನು ನಾವು ಶಿಕ್ಷಿಸಿದ ಅಪರಾಧಕ್ಕಾಗಿ, ಈಗಿನ ಸುಖದಿಂದ ಭ್ರಷ್ಟರಾಗಿ, ಕಷ್ಟಕರವಾದ ಯಾವ ನರಕಕ್ಕೆ ನಮ್ಮನ್ನು ಕಳುಹಿಸಿದರೂ, ಹೋಗಲು ಸಿದ್ಧರಾಗಿದ್ದೇವೆ. ಆದರೆ ಒಂದು ಮಾತ್ರ ನಾವು ಬೇಡಿಕೊಳ್ಳುವೆವು. ಯಾವ ನರಕದಲ್ಲಿ ನಾವಿದ್ದರೂ ನಮ್ಮ ಚಿತ್ತವು ಮಾತ್ರ ನಿನ್ನ ಪಾದಕಮಲದಲ್ಲಿ ಭ್ರಮರವು ಕಮಲದಲ್ಲಿ ಸೇರುವಂತೆ ಸೇರಿ ಸುಖಪಡುವಂತೆ ಮಾಡಬೇಕು ಮತ್ತು ನಮ್ಮ ವಾಗಿಂದ್ರಿಯವು ನಿನ್ನ ಪಾದದಲ್ಲಿ ತುಲಸಿಯು ಶೋಭಿಸುವಂತೆ ಶೋಭಿಸಲಿ, ಅಂದರೆ, ನಮ್ಮ ವಾಕ್ ನಿನ್ನ ಚರಣ ಕಮಲಗಳನ್ನೇ ಸ್ತೋತ್ರಮಾಡುತ್ತಲಿರಲಿ ಎಂದು ಭಾವ. ನಿನ್ನ ಗುಣಗಳಿಂದ ನಮ್ಮ ಕಿವಿಯ ದ್ವಾರಗಳು ತುಂಬಿರಲಿ. ಇಷ್ಟು ಮಾತ್ರ ನಿನ್ನ ಅನುಗ್ರಹವಿದ್ದರೆ ಯಾವ ನರಕವಾದರೂ ಬರಲಿ. ಹೋಗಲು ಸಿದ್ಧವಾಗಿದ್ದೇವೆ "–ಎಂದು ಪ್ರಾರ್ಥಿಸಿದರು.

ಇದೇ ಪ್ರಕಾರ, **ಸಪ್ತಮಸ್ಕಂಧದಲ್ಲಿ ೯ ನೆಯ ಅಧ್ಯಾಯ-೪೩ನೆಯ ಶ್ಲೋಕ :—**

**"ನೈವೋದ್ವಿಜೇ ಭವದುರತ್ಯಯ ವೈಕರಣ್ಯಾಸ್ತ್ವತ್ತೀರ್ಥಗಾಯನ ಮಹಾಮೃತ ಮತ್ತಚಿತ್ತಃ" ॥**

–ಮೇಲೆ ಘೋರಕರವಾದ ಸಂಸಾರದಲ್ಲಿ ಮಾತ್ರ ನಮ್ಮನ್ನು ಬಂಧಿಸಬೇಡವೆಂದು ಪ್ರಾರ್ಥಿಸಿರುವರು. ಈ ಶ್ಲೋಕದಿಂದ ಬೇಡುವುದೇನೆಂದರೆ- ನಿರ್ಬಂಧದಿಂದ ಸಂಸಾರದಲ್ಲಿ ನೀನು ಇಷ್ಟೇ ತೀರಬೇಕೆಂದು ನಮ್ಮನ್ನು ಬಂಧನದಲ್ಲಿ ತಗಲಿಸಿದರೂ, ದಾಟಲು ಅಶಕ್ಯವಾದ ಈ ಸಂಸಾರವೆಂಬ ವೈತರಣಿಗಾದರೂ ನಾವು ಭಯಪಡುವುದಿಲ್ಲ. ಅದಕ್ಕೆ ಒಂದು ಬಲವನ್ನು ಮಾತ್ರ ಅಪೇಕ್ಷಿಸುವೆವು. ಕೆಲವು ಅಜ್ಞಾನಿಗಳು ಮದ್ಯಾದಿ ಪಾನಗಳಿಂದ ಮತ್ತರಾಗಿ ತಮ್ಮ ಆಯಾಸವನ್ನು ಕಳೆದುಕೊಳ್ಳುವರು. ಅದರಂತೆ ನಾವು ನಿನ್ನ ಪವಿತ್ರಕರವಾದ ಮಹಿಮಾರೂಪವಾದ ಮಹಾಮೃತವನ್ನು ಪಾನ ಮಾಡಿ, ಅದರಿಂದ ಮತ್ತರಾದರೆ, ನಮಗೆ ಸಂಸಾರ ಭಯವಿಲ್ಲ, ಅಂದರೆ, ಅಂತಹ ವರವನ್ನು ಕೊಡೆಂಬ ಭಾವ. ಆದುದರಿಂದ ದಾಸರಾಯರು ಸುಜ್ಞಾನ ಭಕುತಿಯನ್ನು ಜನ್ಮ ಜನ್ಮಾಂತರದಲ್ಲಿಯೂ ಕೊಡು ಎಂದು ಬೇಡಿಕೊಳ್ಳೆಂದು ಹೇಳಿರುವರು. ॥೨೨॥

## (೩) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—

"ಆವ"–ಇತಿ ಆವ–ದಾವ–ಯಾವ. ಕಿಂಶರೀರಂ ಆಯಾಸ್ಯತಿ ಇತಿ ಭೀತಃ ಮಾಭವ–ಇತಿ ತಾತ್ಪರ್ಯಮ್.

ಶ್ರೀ ಪರಮಾತ್ಮನು ನಮ್ಮ ಕರ್ಮಾನುಸಾರ ಯಾವ ದೇಶ, ಲೋಕ, ಅವಸ್ಥೆಗಳಲ್ಲಿ ಇಡಲಿ. ಜಡಚೇತನಾತ್ಮಕವಾದ ಈ ಸಮಗ್ರ ಜಗತ್ತಿನಲ್ಲಿ ಅವನೇ ಮುಖ್ಯವಾಗಿ ನಿಯಾಮಕನು. ಸಮಸ್ತ ಜಗದ್ವ್ಯಾಪಾರಗಳನ್ನು ನಡೆಯಿಸುತ್ತಿರುವ ಸರ್ವಶಕ್ತ, ಸರ್ವೇಶ್ವರ. ಅಂತಹ ಶ್ರೀಹರಿಯ ಗುಣರೂಪೋಪಾಸನೆ ಮಾಡುತ್ತಾ, ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಪ್ರಾರ್ಥಿಸಬೇಕು. ಅಂತಹ ಧ್ಯಾನಾಸಕ್ತರಾಗಿರುವವರಿಗೆ ಯಾವ ಜನ್ಮ ಬಂದರೇನು ? ತತ್ಸಂಬಂಧವಾದ ಯೋಚನೆಯಾಗಲೀ ಭಯವಾಗಲೀ ಇರುವುದಿಲ್ಲ. ಅವುಗಳಿಗೆ ಹೆದರದೆ, ಧ್ಯಾನಾಸಕ್ತನಾಗು–ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು ॥೨೨॥

## (೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–

ಪೂರ್ವಜನ್ಮಗಳಲ್ಲಿ ದೇವರ ಉಪಾಸನಾಭ್ಯಾಸ ಇದ್ದವರು, ಪೂರ್ವ ವಾಸನಾಬಲದಿಂದ ದೇವರ ಭಜನೆ ಬಿಡದೆ ಮಾಡುವರೆಂದು ತಿಳಿಸುತ್ತಾರೆ–ಕೃತಾದಿ ಯುಗಗಳಲ್ಲಿ ಯಾವ ಕಾಲದಲ್ಲಾಗಲೀ, ಆರ್ಯಾವರ್ತ ಮೊದಲಾದ ಯಾವ ದೇಶದಲ್ಲಾಗಲೀ, ಬ್ರಾಹ್ಮಣಾದಿ ಜಾತಿ, ಯಾವ ದೇಹ ಶ್ರೀಹರಿ ಕೊಟ್ಟಾಗೂ, ಬಾಲ್ಯಾದಿ ಯಾವ ದೇಹಾವಸ್ಥೆ ಇದ್ದಾಗ್ಯೂ, ಭೂಮ್ಯಾದಿ ಯಾವ ಲೋಕದಲ್ಲಿದ್ದಾಗ್ಯೂ, ಪೂರ್ವೋಕ್ತರೀತ್ಯಾ, ಜಡ ಚೇತನ ವಸ್ತುಗಳಲ್ಲಿ ಪರಾವರೇಶನೆಂಬ ತಾರತಮ್ಯೋಪೇತ ಜೀವರಿಗೆ ಸ್ವಾಮಿಯಾದ ದೇವರ ಗುಣರೂಪಗಳನ್ನು ಧ್ಯಾನಿಸುತ್ತಾ, ಸುಜ್ಞಾನ ಭಕ್ತಿಯ ಪ್ರಾರ್ಥಿಸಿ ಕೊಂಡಾಡುವುದು. ॥೨೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವ ಕಾಲ, ದೇಶ. ಅವಸ್ಥಾ ವಿಶೇಷಗಳಲ್ಲಿಯೂ, ಪುರುಷೋತ್ತಮನಾದ ಆ ಪರಮಾತ್ಮನಲ್ಲಿ ಸುಜ್ಞಾನ, ದೃಢಭಕ್ತಿ, ಭಗವದನುಗ್ರಹಕ್ಕೆ ಕಾರಣವಾದ ವೈರಾಗ್ಯಭಾಗ್ಯಗಳನ್ನು ಬೇಡು–ಎಂದು ಮಾರ್ಗದರ್ಶನ ಮಾಡಿದ್ದಾರೆ ಪ್ರಸಕ್ತ ಸಂಧಿಗತ ೨೨ನೆಯ ಈ ಪದ್ಯದಿಂದ.

(೧) ನಮ್ಮ ಪೂರ್ವಾರ್ಜಿತ ಕರ್ಮ ಪರಂಪರೆಯ ಫಲವಾಗಿ ನಮಗೆ ನಾನಾ ಜನ್ಮಗಳು ಪ್ರಾಪ್ತವಾಗುವುವು. ೮೪ ಲಕ್ಷ ಯೋನಿಗಳಲ್ಲಿ ತೊಳಲಿ ಬಳಲಿ ಭವಣೆ ಪಡುವ ದುರಸ್ಥ ಜೀವನದು. ಆಯಾಯಾ ಜನ್ಮಗಳಿಗೆ ತಕ್ಕಂತೆ ದೇಹ ಪ್ರಾಪ್ತಿ. ಜನ್ಮಗಳಲ್ಲಿ ಮಾನವ ಜನ್ಮವೇ ಅತ್ಯಂತ ಶ್ರೇಷ್ಟ. ಆಗ ಸಾಧನಶರೀರವೆಂದೆನಿಪ ಈ ದೇಹದ ಮೂಲಕ ಸತ್ಸಾಧನೆಗಳನ್ನು ಮಾಡಿಕೊಳ್ಳಲು ಸಾಧ್ಯ. ಇಂತಹ ದುರ್ಲಭವಾದ ಮಾನುಷದೇಹ

ಬಂದಾಗ ಶ್ರೀ ಪರಮಾತ್ಮನಲ್ಲಿ ದೃಢವಾದ ಭಕ್ತಿಯನ್ನಿಟ್ಟು, ಸುಜ್ಞಾನಿಯಾಗಿ, ಆ ಸಂಸಾರೋತ್ತಾರಣನಾದ ಭಗವಂತನ ಗುಣಾತಿಶಯಗಳನ್ನು ಕೊಂಡಾಡುತ್ತಿರಬೇಕು. ಆಗ ಯಾವ ಜನ್ಮಗಳನ್ನು ನಮ್ಮ ಕರ್ಮಾನುಸಾರ ಫಲಭೋಗಕ್ಕಾಗಿ ಶ್ರೀ ಪರಮಾತ್ಮನು ಕೊಟ್ಟರೂ, ಪೂರ್ವಜನ್ಮದ ಸಂಸ್ಕಾರದಿಂದ ಹರಿಸ್ಮರಣೆ ಇದ್ದೇ ಇರುವುದು. ಇದಕ್ಕೆ ಜಿಂಕೆಯ ಜನ್ಮವನ್ನು ಹೊಂದಿದ ಭರತ, ಗಜಯೋನಿಯಲ್ಲಿ ಶಾಪಗ್ರಸ್ತನಾಗಿ ಜನ್ಮವೆತ್ತ ಇಂದ್ರದ್ಯುಮ್ನ ಗಂಧರ್ವ, ಅಜಗರನಾಗಿ ಹುಟ್ಟಿದ ನಹುಷ ಮಹರಾಜರೇ ಆದಿಯಾಗಿ ಪುರಾಣ ಇತಿಹಾಸಾದಿಗಳಲ್ಲಿ ಜ್ವಲಂತ ದೃಷ್ಟಾಂತರಾಗಿದ್ದಾರೆ.

(೨) ಪುಣ್ಯ ಫಲಭೋಗಕ್ಕಾಗಿ ಸ್ವರ್ಗಲೋಕ ಪ್ರಾಪ್ತಿ. **"ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ"**– ಎಂಬ **ಗೀತಾಚಾರ್ಯನ** ವಾಕ್ಯದಂತೆ, ಆ ಪುಣ್ಯ ವಿಶೇಷವನ್ನು ಅನುಭವಿಸಿದನಂತರ, ಪುನಃ ಭೂಲೋಕದಲ್ಲಿ ಜನ್ಮ ಪಾಪಕರ್ಮಗಳ ದೆಸೆಯಿಂದಾಗಿ ನರಕಾದ್ಯನರ್ಥಗಳ ಪ್ರಾಪ್ತಿ. ಹೀಗೆ ಕರ್ಮಾನುಸಾರ ಯಾವ ಲೋಕದಲ್ಲಿ ಶ್ರೀ ಪರಮಾತ್ಮನು ಇಡಲಿ. ಅವನ ಸ್ಮರಣೆಯಿಂದ ಆತ್ಮೋದ್ಧಾರ. **(ಆವಲೋಕದಲಿಡಲಿ)**

(೩) ಈ ಭರತ ಖಂಡದಲ್ಲಿ ಯಾವ ಪ್ರದೇಶದಲ್ಲಿ ಬೇಕಾದರೂ ಜನ್ಮತಾಳಬಹುದು. ಅಥವಾ ಭೋಗ ಭೂಮಿಗಳಾದ ಭೂಲೋಕದ ಇತರ ದೇಶಗಳಲ್ಲಿ ಹುಟ್ಟಬಹುದು. ಆದರೆ ಆ ಜೀವನಿಗೆ ಪೂರ್ವ ಸಂಸ್ಕಾರ ರೂಪವಾದ ವಾಸನಾದಿಬಲದಿಂದ ಶ್ರೀ ಪರಮಾತ್ಮನ ಸ್ಮರಣೆ ಪರಮ ಮುಖ್ಯ **(ಮತ್ತಾವ ದೇಶದೊಳಗಿಡಲಿ)**

(೪) ಮಾನವ ಜನ್ಮದಲ್ಲಿಯೇ ಕೌಮಾರಾವಸ್ಥೆ, ಬಾಲ್ಯಾವಸ್ಥೆ, ಯೌವ್ವನ, ಮುಪ್ಪು ಇತಾದಿ, ಯಾವ ಸ್ಥಿತಿಗಳೇ ಒದಗಲಿ, ಸರ್ವಶಕ್ತನಾದ ಆ ಭಗವಂತನ ಸಂಬಂಧವಾದ ಸುಜ್ಞಾನವಿದ್ದು, ಅವನ ನಿರಂತರ ಸಂಸ್ಮರಣೆಯಿಂದ ಜೀವನ ಸಾರ್ಥಕವಾಗುವುದು. **(ಆವಾವ ಸ್ಥಿತಿಗಳು ಬರಲಿ)** ಜೀವವನ್ನು ಎಚ್ಚರಿಸುವುದಕ್ಕಾಗಿಯೇ **ಶ್ರೀಮದಾಚಾರ್ಯರು**

**ದ್ವಾದಶಸ್ತೋತ್ರದಲ್ಲಿ– "ಸಂತತಂ ಚಿಂತಯೇತ್ ಅನಂತಂ ಅಂತಕಾಲೇ ವಿಶೇಷತಃ"-** ಎಂದು ಉದ್ಘೋಷಿಸಿದ್ದಾರೆ. ನಮಗೆ ಅಂತ್ಯಕಾಲ ಯಾವಾಗ ಬರುವುದೋ ಗೊತ್ತಿಲ್ಲ. ಆದುದರಿಂದ "ಸಂತತಂ ಚಿಂತಯೇತ್ ಅನಂತಂ" ಎಂದು ನಿರಂತರದಲ್ಲಿಯೂ ಕ್ಷಣಬಿಡದೆ ಶ್ರೀಹರಿಯ ಧ್ಯಾನ ಅತ್ಯಗತ್ಯ –ಎಂದು ಸುಜ್ಞಾನಮಾರ್ಗ ತೋರಿದ್ದಾರೆ, ಶ್ರೀಮದಾಚಾರ್ಯರು.

(೫) ಈ ಜಗತ್ತು ಚರಾಚರಾತ್ಮಕವಾದದ್ದು, ಜಡ ವಸ್ತುಗಳಲ್ಲಿ ತದಾಕಾರನಾಗಿ ತನ್ನಾಮಕನಾಗಿ, ತದ್ರೂಪಿಯಾಗಿ, ತತ್ತಶ್ಛಬ್ದವಾಚ್ಯನಾಗಿ ಶ್ರೀ ಪರಮಾತ್ಮನು ವ್ಯಾಪ್ತನಾಗಿದ್ದು, ಆಯಾಯಾ ವಸ್ತುಗಳ ಸಹಜ ಧರ್ಮಗಳನ್ನು ಅಭಿವ್ಯಕ್ತಿಮಾಡುತ್ತಲಿರುತ್ತಾನೆ. ಅಂತೆಯೇ ಸಕಲಚೇತನರಲ್ಲಿ ಬಿಂಬರೂಪದಿಂದಿದ್ದು. ಅವರ ದೈಹಿಕ, ಮಾನಸಿಕ, ವಾಚನಿಕ ಇತ್ಯಾದಿ ಸಮಸ್ತ ಇಂದ್ರಿಯ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುತ್ತಾನೆ. ಇಂತಹ ಸಕಲ ಸ್ಥಾವರ ಜಂಗಮಾತ್ಮಕ ಪ್ರಪಂಚದಲ್ಲಿ ಓತಪ್ರೋತನಾಗಿ ವ್ಯಾಪ್ತನಾಗಿರುವ ಆ ಪರಮಾತ್ಮನ ಸಂಸ್ಮರಣೆಯೇ ಜೀವನಿಗೆ ತಾರಕವು. **(ಈ ವಿಧದಿ ಜಡ ಚೇತನರೊಳು)**

(೬) ಶ್ರೀ ಲಕ್ಷ್ಮೀದೇವಿಯು ಈಶಕೋಟಿಪ್ರವಿಷ್ಟರು. ಅಕ್ಷರ ನಾಮಕಳಾದ ಶ್ರೀ ರಮಾದೇವಿಯರಿಗೆ "**ಪರಾ**"- ಎಂದು ಹೆಸರು. ಅಂದರೆ ಜೀವಕೋಟಿ ಪ್ರವಿಷ್ಟರಾಗಿರುವ ಚತುರ್ಮುಖಬ್ರಹ್ಮಾದಿ ತೃಣಾಂತ ಜೀವರಿಗೆ ಉತ್ತಮಳು ಎಂದರ್ಥ. ಇಂತಹ "ಪರ" ನಾಮಕಳಾದ ಶ್ರೀ ಲಕ್ಷ್ಮೀದೇವಿಯರಿಗಿಂತ ಅನಂತ ಕೋಟಿಗುಣರಿಂದ ಉತ್ತಮೋತ್ತಮನಾದ ಶ್ರೀ ಪರಮಾತ್ಮನಿಗೆ "**ಪರಾವರೇಶ**"–ನೆಂದು ಹೆಸರು.

ಅಥವಾ "ಪರ"– ಎಂದರೆ ಶ್ರೀ ಲಕ್ಷ್ಮೀದೇವಿ. "ಅವರ"– ಎಂದರೆ ಅವರಿಗಿಂತ ಕಡಿಮೆಯಾದ ಬ್ರಹ್ಮಾದಿ. ಸಮಸ್ತ ವಿವಿಧ ಜೀವ ವರ್ಗ. ಇವರಿಗೆ "ಈಶ"- ಅಂದರೆ ನಿಯಾಮಕನು. ಇದರಿಂದ ರಮಾ ಬಹ್ಮಾದಿ

ವಂದ್ಯನಾದಕ್ಷರಾಕ್ಷರಪುರುಷಪೂಜಿತ ಪಾದಪದ್ಮನಾದ ಶ್ರೀಹರಿಯು **"ಪರಾವರೇಶನು"**.

(೭) ಅಂತಹ ಪರಾವರೇಶನ ಅನಂತಾನಂತ ರೂಪಗಳು, ಅಪರಿಮಿತ ಗುಣರಾಶಿ, ಅವತಾರಾದಿಗಳು ಪಿಂಡಾಂಡ ರೂಪವಾದ ನಮ್ಮ ದೇಹಗತ ಇಂದ್ರಿಯಗಳ ದ್ವಾರಾ ನಡೆಸುತ್ತಿರುವ ಕ್ರಿಯಾವಿಶೇಷಗಳು. ಬ್ರಹ್ಮಾಂಡಲ್ಲಿ ಸರ್ವತ್ರವ್ಯಾಪ್ತನಾಗಿದ್ದು. ನಿರ್ವಹಿಸುತ್ತಿರುವ ಜಗದ್ವ್ಯಾಪಾರರೂಪವಾದ ಕಾರ್ಯ ವಿಶೇಷಗಳು ಇತ್ಯಾದಿ ಶ್ರೀ ಪರಮಾತ್ಮನ ಗುಣರೂಪಕ್ರಿಯಾದಿಗಳನ್ನು ನಿರಂತರದಲ್ಲಿ ಸ್ಮರಿಸುತ್ತಾ, ಧ್ಯಾನೋಪಾಸನೆಗೆ ವಿಷಯವನ್ನಾಗಿ ಮಾಡಬೇಕು. ಆ ಅಪಾರಮಹಿಮಾಸಂಪನ್ನನಲ್ಲಿ ಸಮೀಚೀನವಾದ ಜ್ಞಾನ, ಅಂದರೆ ಶ್ರೀಹರಿಸರ್ವೋತ್ತಮತ್ವ, ವಾಯು ಜಿವೋತ್ತಮತ್ವ. ಪ್ರಪಂಚ ಸತ್ಯತ್ವ. ಪಂಚಭೇದ ತಾರತಮ್ಯ ಯುಕ್ತವಾದ ಜ್ಞಾನವನ್ನು ಕೊಡೆಂದು ಪ್ರಾರ್ಥಿಸು. ಅಂತಹ ಭಗವತ್ಸಂಬಂಧವಾದ ಜ್ಞಾನವು ಶ್ರೀಶನ ಪಾದಾರವಿಂದಗಳಲ್ಲಿ ನಿರಂತರ ಪ್ರೇಮಪ್ರವಾಹರೂಪವಾದ ಸ್ನೇಹವೆಂಬ ಸದೃಢ ಭಕ್ತಿಗೆ ಸಾಧನವು. ಅಂತಹ ಸಮೀಚೀನ ಜ್ಞಾನ, ದೃಢ ಭಕ್ತಿ, ವೈರಾಗ್ಯ ಎಂಬ ಭಾಗ್ಯಗಳನ್ನು ಕೊಡುವಂತೆ ಆ ಪರಮಕರುಣಾ ಸಾಗರನನ್ನು ಬೇಡುತ್ತಿರು. ಅವನ ಗುಣರೂಪ ಕ್ರಿಯಾದಿಗಳನ್ನು ನಿರಂತರ ಸ್ಮರಿಸುತ್ತಾ ಕೊಂಡಾಡುತ್ತಿರು ಎಂದು ಜನನ ಮರಣಾಖ್ಯವಾದ ಈ ಭವವೆಂಬ ದುಸ್ತರ ಸಾಗರದಿಂದ ಉತ್ತರಣ ವಾಗುವ ಉತ್ತಮ ಉಪಾಯವನ್ನು ಬಿತ್ತರಿಸಿದ್ದಾರೆ. ಚಿತ್ತಜನಯ್ಯನದಾಸರು ॥೨೨॥

## ಪದ್ಯ (೨೩)

**ಮೂಲ :-**

**ಒಂದರೊಳಗೊಂದು ಬೆರೆದಿಹ ।**
**ಇಂದಿರೇಶನ ರೂಪಗಳ ಮನ ।**
**ಬಂದ ತೆರದಲಿ ಚಿಂತಿಸಿದಕನುಮಾನವಿನಿತಿಲ್ಲ ॥**
**ಸಿಂಧುರಾಜನೊಳಂಬರಾಲಯು ।**
**ಬಂಧಿಸಲು ಪ್ರತಿ ತಂತುಗಳೊಳುದ ।**
**ಬಿಂದು ವ್ಯಾಪಿಸಿದಂತೆ ಇರುತಿಪ್ಪನು ಚರಾಚರದಿ ॥೨೩॥**

**ಅವತರಣಿಕೆ :-**

ಈ ಜಗದಾದ್ಯಂತ ವ್ಯಾಪಿಸಿರುವ ಸರ್ವತ್ರ ವ್ಯಾಪ್ತನ ಖಂಡಾಖಂಡ, ಏಕಾನೇಕ ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ. "**ಒಂದರೊಳಗೊಂದು**"-ಎಂಬ ಪ್ರಸಕ್ತ ಸಂಧಿಗತ ೨೩ ನೆಯ ಈ ಪದ್ಯದಿಂದ.

ಶ್ರೀ ಲಕ್ಷ್ಮೀರಮಣನ ಗುಣ ರೂಪಗಳು ಅಪರಿಮಿತ. ಇಂದಿರೇಶನ ಅನಂತಾನಂತ ಗುಣ ರೂಪಗಳಲ್ಲಿ, ಪ್ರತಿ ಗುಣದಲ್ಲಿಯೂ ಅನಂತಗುಣಗಳು ಸಮಾವೇಶವಾಗಿವೆ. ಪ್ರತಿ ರೂಪದಲ್ಲೂ ಅನಂತಾನ ರೂಪಗಳು ಒಂದರಲ್ಲಿ ಮತ್ತೊಂದು ಮಿಳಿತವಾಗಿದೆ. ಮೂಲರೂಪದಲ್ಲಿ ಅನಂತ ಅವತಾರ ರೂಪಗಳು ಮತ್ತು ಪ್ರಾದುರ್ಭಾವ ರೂಪಗಳ ಅಖಂಡ ಚಿಂತನೆ. ನಿತ್ಯಾನಂದ ಉದ್ರಿಕ್ತನಾದ ಆ ಪರಾತ್ಪರನಲ್ಲಿ ಆನಂದ ಗುಣದಲ್ಲಿ ಜ್ಞಾನಾದಿ ಅನಂತಾನಂತ ಗುಣಗಳು ಪರಿಪೂರ್ಣ ರೂಪದಲ್ಲಿ ವ್ಯಾಪ್ತವಾಗಿದೆ. ಇಂತು ಕಂತುಪಿತನ ಅನಂತಾನಂತ ಗುಣ, ರೂಪ, ಕ್ರಿಯಾದಿಗಳನ್ನು ನಮ್ಮ

ನಮ್ಮ ಮನಸ್ಸಿಗೆ ತೋಚಿದಂತೆ ಚಿಂತಿಸಿದರೂ, ಅಷ್ಟಷ್ಟು ಅಪಾರ ಮಹಿಮಾ ಸಂಪನ್ನನಾಗಿ ಗೋಚರಿಸುವನು. ಅಖಂಡ ರೂಪಗಳಲ್ಲಿ ಖಂಡ ರೂಪಗಳು, ಖಂಡರೂಪಗಳಲ್ಲಿ ಅಖಂಡನಾಗಿ, ಸರ್ವ ದೇಶ, ಕಾಲ, ಅವಸ್ಥಾ ವಿಶೇಷಗಳಲ್ಲಿ ಪರಿಪೂರ್ಣನಾಗಿ ಜಗದಾದ್ಯಂತ ತುಂಬಿ, ಹಬ್ಬಿ ಹರಡಿಕೊಂಡಿರುವ ಇಂದಿರೇಶನ ಗುಣರೂಪ ಸಂದೋಹಗಳನ್ನು ಸಾಕಲ್ಯೇನ ಅರಿಯಲು ಆ ಲೋಕಮಾತೆ! ಇದನ್ನು ಒಂದು ಸುಂದರವಾದ ದೃಷ್ಟಾಂತದಿಂದ ನಿರೂಪಿಸುತ್ತಾರೆ ದಾಸರಾಯರು. ಸಮುದ್ರದಲ್ಲಿ ಬಟ್ಟೆಯ ಮನೆಯನ್ನು ಕಟ್ಟಲು, ಆ ವಸ್ತ್ರದ ಪ್ರತಿ ಎಳೆಎಳೆಯಲ್ಲಿಯೂ, ನೀರಿನ ಕಣಗಳು ವ್ಯಾಪಿಸಿರುವಂತೆ, ಈ ಚರಾಚರಾತ್ಮಕವಾದ ಜಗತ್ತೆಂಬ ಆಲಯದಲ್ಲಿ ಸರ್ವತ್ರ ತುಂಬಿಹನು. ॥೨೩॥

**ಪ್ರತಿಪದಾರ್ಥ :—**

**ಒಂದರೊಳಗೊಂದು** = ಪ್ರತ್ಯೇಕ ಪ್ರತ್ಯೇಕವಾಗಿರತಕ್ಕ ಒಂದೊಂದು ಅಧಿಷ್ಠಾನದಲ್ಲಿ ವಿದ್ಯಮಾನವಾಗಿರುವ ಒಂದು ಭಗವದ್ರೂಪದಲ್ಲಿ **ಒಂದೊಂದು** = ಒಂದೊಂದು ರೂಪದ ಪ್ರಕಾರ **ಬೆರೆದಿಹ** = ಸೇರಿಕೊಂಡಿರತಕ್ಕ (ಸಮಾವೇಶವಾಗಿರುವ) **ಇಂದಿರೇಶನ** = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ **ರೂಪಗಳ** = ಅನೇಕಾನೇಕ ರೂಪಗಳನ್ನು **ಮನಬಂದ ತೆರದಲಿ** = ಯಾವ ಅಧಿಷ್ಠಾನಗತ ಅಂತರ್ಯಾಮಿ ರೂಪವನ್ನು ಚಿಂತಿಸಬೇಕೆಂದು ಮನಸ್ಸಿಗೆ ಬರುವುದೋ ಅದರ ಪ್ರಕಾರ **ಚಿಂತಿಸು** = ಧ್ಯಾನ ಮಾಡುವವನಾಗು. **ಇದಕೆ** = ಈ ವಿಷಯದಲ್ಲಿ **ಅನುಮಾನ** = ಸಂಶಯವು **ಇನಿತಿಲ್ಲ** = ಕಿಂಚಿತ್ತಾದರೂ ಇಲ್ಲ. ಅಂದರೆ ನಿಸ್ಸಂಶಯವು. **ಸಿಂಧುರಾಜನೊಳು** = ಸಮುದ್ರ ಜಲದಲ್ಲಿ (ಜಲಾಭಿಮಾನಿ ವರುಣನು ಸಿಂಧುರಾಜ) **ಅಂಬರಾಲಯ** = ಬಟ್ಟೆಯನ್ನು ಮನೆಯ ಆಕಾರವಾಗಿ ಮಾಡಿ, **ಬಂಧಿಸಲು** = ಗಂಟು ಕಟ್ಟಿದರೆ, **ಪ್ರತಿತಂತುಗಳೊಳು** = ವಸ್ತ್ರದ ಒಂದೊಂದು ಎಳೆಯಲ್ಲಿಯೂ **ಉದಬಿಂದು** = ನೀರಿನ ಹನಿಗಳು (ಜಲಕಣಗಳು) **ವ್ಯಾಪಿಸಿದಂತೆ** = ವ್ಯಾಪಿಸಿರುವ ರೀತಿಯಲ್ಲಿ **ಚರಾಚರದಿ** = ಜಡ, ಸ್ಥಾವರ ಜಂಗ

ಮಾದಿ ವಸ್ತುಗಳಲ್ಲಿ **ಇರುತ್ತಿಪ್ಪನು** = ಪರಿಪೂರ್ಣನಾಗಿ ತುಂಬಿಕೊಂಡಿರುವನು. ॥೨೩॥

# ವ್ಯಾಖ್ಯಾನಗಳು

## (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಸರ್ವತ್ರ ಶ್ರೀ ಪರಮಾತ್ಮನ ಚಿಂತನೆ ಮಾಡಬೇಕೆಂದು ಹೇಳತಾರೆ. ಒಂದರೊಳಗೆ-ಖಂಡಖಂಡಗಳಾಗಿ ಇರತಕ್ಕದ್ದು ಅನೇಕ ಅಧಿಷ್ಠಾನಗಳು. ಅದರಲ್ಲಿ ಒಂದು ಅಧಿಷ್ಟಾನದೊಳಗೆ ಒಂದು ಭಗವದ್ರೂಪದ ವ್ಯಾರಿಗೆ ಅನೇಕ ಅಧಿಷ್ಠಾನಗಳೊಳಗೆ ಪ್ರತಿ ಅಧಿಷ್ಠಾನದಲ್ಲೂ, ಒಂದೊಂದು-ಒಂದೊಂದು ರೂಪದ ವ್ಯಾರಿಗೆ, ಬೆರೆದಿಹ-ತುಂಬಿಕೊಂಡು ಇರತಕ್ಕ, ಇಂದಿರೇಶನ-ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣ ದೇವರ, ರೂಪಗಳ-ಒಂದೊಂದು ರೂಪದ ಮೇರೆಗೆ ಅನೇಕ ಅಧಿಷ್ಟಾನಗಳಲ್ಲಿ ಅನೇಕ ರೂಪಗಳ, ಮನಬಂದ ತೆರದೆಲಿ-ಮನಸ್ಸಿಗೆ ಎಷ್ಟು ಪರಿ ಚಿಂತನಕ್ಕೆ ಸಾಧ್ಯವಾಗತದೋ ಅದೇ ರೀತಿ ಶ್ರೀ ಭಗವದ್ರೂಪಗಳ, ಚಿಂತಿಸು-ಚಿಂತನ ಮಾಡೋವನಾಗು. ಒಂದೊಂದರಲಿ-ಒಂದೊಂದು ರೂಪ ಎಂಬುದು ಬಿಂಬ ಒಂದು. ಪ್ರತಿಬಿಂಬ ಒಂದು ಎಂತ ತಾತ್ಪರ್ಯ. ಇದಕನುಮಾನ ಇನಿತಿಲ್ಲ-ಈ ವಿಷಯದಲ್ಲಿ ಕಿಂಚಿತ್ತಾದರೂ ಅನುಮಾನ ಪಡುವ ಕೆಲಸವಿಲ್ಲ. ದೇವತೆಗಳಿಗೆ ವ್ಯಾಪ್ತ ರೂಪದರ್ಶನ ಮತ್ತು ವ್ಯಾಪ್ತ್ಯೋಪಾಸನೆ ಎರಡೂ ಉಂಟು. ಪ್ರತೀಕಾಲಂಬನರಿಗೆ ವ್ಯಾಪ್ತದರ್ಶನವಿಲ್ಲ. ಅನುಸಂಧಾನದಿಂದ ವ್ಯಾಪ್ತ್ಯೋಪಾಸನಾ ಮಾತ್ರ ಉಂಟು. ಅದಕ್ಕೆ ದೃಷ್ಟಾಂತ ಹೇಳತಾರೆ. ಹ್ಯಾಂಗೆಂದರೆ- ಸಿಂಧುರಾಜನೊಳು - ಸಮುದ್ರರಾಜನೊಳು, ಅಂಬರಾಲಯ - ವಸ್ತ್ರಧಿಂದ ಮನಿ ಆಕಾರವಾಗಿ, ಬಂಧಿಸಲು-ಕಟ್ಟಿದರ, ಮತ್ತು ಆಲಯ-ಜಂಬೂದ್ವೀಪವೇ ಮನಿಯಾಗಿ ಉಳ್ಳ, ಸಿಂಧುರಾಜನೊಳು-ಸಮುದ್ರರಾಜನೊಳು, ವಿದ್ಯಮಾನವಾದ, ಅಂಬರ-ಉದಕವನ್ನ ವಸ್ತ್ರದಿಂದ ನಿಲ್ಲುವಂತೆ, ಬಂಧಿಸಲು-

ಗಂಟು ಕಟ್ಟಿದರೆ, ಪ್ರತಿತಂತುಗಳೊಳು-ವಸ್ತ್ರಗತ ಪ್ರತಿದಾರದಲ್ಲಿ, ಉದಕ ಬಿಂದು-ನೀರಿನ ಬಿಂದುಗಳು, ವ್ಯಾಪಿಸಿದಂತೆ. ವ್ಯಾಪಿಸಿ ಇರುವೋಪಾದಿಯಲ್ಲಿ, ಬಿಂದು ಶಬ್ದ ಇಲ್ಲಿ ಸಮನ್ವಯ ಏಕೆಂದರೆ, ಸಮುದ್ರೋದಕ ಅಖಂಡವು. ಬಿಂದುಗಳು ಖಂಡಗಳು. ತದ್ವತ್ ಅಖಂಡರೂಪನಾಗಿ, ಸರ್ವತ್ರ ವ್ಯಾಪ್ತ ಹ್ಯಾಂಗೋ ಹಾಂಗೆ, ಅಧಿಷ್ಟಾನಭೇದದಿಂದ ಖಂಡರೂಪದಿಂದ ವ್ಯಾಪ್ತಿ ಎಂತ ತಾತ್ಪರ್ಯ. ಪ್ರತಿಪ್ರತಿ ದಾರಗಳಲ್ಲಿ ಖಂಡ ಖಂಡವಾಗಿ ಉದಕ ವ್ಯಾಪಿಸಿದಂತೆ, ಚರಾಚರದಿ-ಚರಾಚರದಲ್ಲಿ ಅಖಂಡ ರೂಪದಿಂದ ವ್ಯಾಪ್ತ ನಾದ ಶ್ರೀ ಪರಮಾತ್ಮ ಖಂಡರೂಪದಿಂದ ಒಂದೊಂದು ಪ್ರತಿಬಿಂಬದಲ್ಲಿ ಒಂದೊಂದು ಬಿಂಬರೂಪದಿಂದ ಶ್ರೀ ಪರಮಾತ್ಮ ಇರುತಿಪ್ಪನು-ಇರೋವ ನಾಗಿದ್ದಾನೆ. ಇಂಥಾ ರೂಪಗಳನ್ನು ಮನಸ್ಸಿಗೆ ಸಾಧ್ಯವಾಗುವವರೆಗೆ ಚಿಂತಿಸ ಬಹುದೆಂದು ತಾತ್ಪರ್ಯ. ॥೨೩॥

## (೨) "ಭಾವಪ್ರಕಾಶಿಕೆ"-ವ್ಯಾಖ್ಯಾನ

ಅಧಿಕಾರಿಗಳಿಗೆ ವ್ಯಾಪ್ತೋಸನಾ ಕ್ರಮವನ್ನು "ಒಂದರೊಳಗೊಂದು ಬೆರದಿಹ"-ಎಂಬ ಪದ್ಯದಿಂದ ಹೇಳುತ್ತಾರೆ.

ಚರಾಚರಾಖ್ಯ ಪ್ರಪಂಚದಲ್ಲಿ ಪ್ರತಿಯೊಂದು ಜಡಚೇತನದಲ್ಲಿಯೂ ಒಂದೊಂದು ಭಗವದ್ರೂಪವಿದ್ದೇ ಇರುವುದು. ಬ್ರಹ್ಮಾದಿಗಳಲ್ಲಿ ವಾಸು ದೇವಾದಿ ರೂಪಗಳಿಂದ ಅಂತರ್ಯಾಮಿಯಾಗಿರುವನು. ಸ್ವಾಂಶರೂಪ ಗಳಿಂದ ರಾಮ, ಕೃಷ್ಣಾದಿ ರೂಪಗಳನ್ನು ತೋರುವನು. ಲಕ್ಷ್ಮಣ, ಬಲರಾಮ, ಪೃಥು ಮೊದಲಾದವರಲ್ಲಿ ಭಿನ್ನಾಂಶದಿಂದ ತದ್ರೂಪಿಯಾಗಿರು ವನು. ಘಟದಲ್ಲಿ ಘಟಾಕಾರನಾಗಿಯೂ, ಪಟದಲ್ಲಿ ಪಟಾಕಾರನಾ ಗಿಯೂ, ಶ್ವಾನ, ಚಂಡಾಲ, ಗೋ, ಖರಗಳಲ್ಲಿ ತದ್ರೂಪಿಯಾಗಿರು ವನು.

**"ಅಣೋರಣೀಯಾನ್ ಮಹತೋ ಮಹೀಯಾನ್-" ಎಂಬ ಶ್ರುತಿವಾಕ್ಯಾನುಸಾರ,** ಅತ್ಯಂತ ಸೂಕ್ಷ್ಮವಾದ ಪರಮಾಣು ರೂಪದ

ವಸ್ತುಗಳಲ್ಲಿ ಅದಕ್ಕಿಂತಲೂ ಅಣುವಾಗಿರುವನು, ದೊಡ್ಡದಾದ ಪದಾರ್ಥಗಳ ಮೇಲೆ ಅದಕ್ಕಿಂತಲೂ ದೊಡ್ಡರೂಪದಿಂದ ಅದರ ಆವರ್ಕವಾಗಿರುವನು. ಆದರೆ ಹೀಗೆ ವ್ಯಾಪ್ತವಾಗಿರುವ ಭಗವದ್ರೂಪೋಪಾಸನಾಧಿಕಾರವು ಸರ್ವರಿಗೂ ಇರುವುದಿಲ್ಲ.

**"ಪ್ರತಿಮಾ ಸ್ವಪ್ರಬುದ್ಧಾನಾಂ ಸರ್ವತ್ರ ವಿದಿತಾತ್ಮನಾಂ"**— ಎಂಬ ಪ್ರಮಾಣದ ಬಲದಿಂದ ಅಜ್ಞಾನಿಗಳು ಪ್ರತಿಮಾಧಿಷ್ಠಾನಗಳಲ್ಲಿರುವ ಪರಮಾತ್ಮನನ್ನು ಪೂಜಿಸಬೇಕೆಂತಲೂ, ಜ್ಞಾನಿಗಳೂ ಸರ್ವತ್ರವ್ಯಾಪ್ತನಾದ ಪರಮಾತ್ಮನನ್ನು ಪೂಜಿಸಬೇಕೆಂತಲೂ ನಿಶ್ಚಯವಾಗುವುದು. ಅಜ್ಞಾನಿಗಳೆಂದರೆ, ಮೂಢರಲ್ಲಿ, **"ಯಾವತ್ಸರ್ವೇಷು ಭೂತೇಷು ಮದ್ಭಾವೋ ನೋಪಜಾಯತೇ । ತಾವದೇವಮುಪಾಸೀತ........."** ಎಂದು **ಭಾಗವತ ವಾಕ್ಯ** ವಿರುವುದರಿಂದ, ತನ್ನೊಳಗಿರುವ ಪರಮಾತ್ಮನಿಗೂ, ಶ್ವಾನ, ಚಂಡಾಲಾದಿಗಳಲ್ಲಿಯೂ, ಸರ್ಪ, ವ್ಯಾಘ್ರಾದಿಗಳಲ್ಲಿಯೂ ಸಹ ಇರುವ ಪರಮಾತ್ಮನಿಗೂ ಭೇದವಿಲ್ಲವೆಂದು ತಿಳಿದು, ಅದರಂತೆ ಅನುಷ್ಠಾನಕ್ಕೆ ತರಲು ಯಾವಾಗ ಶಕ್ತನಾಗುವನೋ ಆಗ- **"ಪ್ರಣಮೇದ್ದಂಡವದ್ಭೂಮೌ ಅಶ್ವ ಚಂಡಾಲ ಗೋ ಖರಮ್"** — ಎಂಬಂತೆ, ಶ್ವಾನ, ಚಂಡಾಲ, ಗೋಖರಾದಿಗಳಿಗೂ ಸಹ ಸಾಷ್ಟಾಂಗನಮಸ್ಕಾರವನ್ನು ಮಾಡಬೇಕೆಂದು ಹೇಳಿರುವರು.

ಎಲ್ಲದರಲ್ಲಿಯೂ ಭಗವಂತನಿರುವನೆಂದು, ಬಾಯಿಯಿಂದ ಹೇಳುವುದು ಮತ್ತು ತಿಳಿದುಕೊಳ್ಳುವುದು-ಸುಲಭ. ಅನುಷ್ಠಾನಕ್ಕೆ ತರುವುದೇನೋ ಕಷ್ಟ. ಅನುಷ್ಠಾನವೆಂದರೇನು ? ಸರ್ಪಾದಿಗಳಲ್ಲಿಯೂ ಪರಮಾತ್ಮನಿದ್ದಾನೆಂದು ಸಾಮಾನ್ಯವಾಗಿ ಆಸ್ತೀಕರೆಲ್ಲರೂ ಹೇಳುತ್ತಾರೆ. ಆದರೆ ಹುಲಿ, ಹಾವುಗಳನ್ನು ಕಂಡ ಕೂಡಲೇ ಅವುಗಳನ್ನು ಕೊಲ್ಲಬೇಕೆಂಬ ಪ್ರಯತ್ನವನ್ನಾಗಲಿ ಅಥವಾ ತಾವು ಓಡಿ ಹೋಗುವ ಪ್ರಯತ್ನವನ್ನಾಗಲೀ ಮಾಡುತ್ತಾರೆ. ನಮ್ಮಲ್ಲಿರುವ ಭಗವಂತನೇ ಅಲ್ಲಿ ಇದ್ದಾನೆಂಬ ಜ್ಞಾನವು ದೃಢವಾದರೆ, ಬೆಂಕಿಯು ಬೆಂಕಿಯನ್ನು ಏನು ಮಾಡುವುದು ? ಅದರಂತೆ, ತಾನು,

ತನ್ನದು ಎಂಬ ಕರ್ತೃತ್ವಾಭಿಮಾನಿಯನ್ನು ಬಿಟ್ಟು, ಇಲ್ಲಿರುವವನೂ, ಅಲ್ಲಿರುವವನೂ ಒಬ್ಬನೇ ಆದುದರಿಂದ– "ತನ್ನನ್ನು ತಾನೇ ಏನು ಮಾಡ ಬಲ್ಲನು ? ಎಂಬ ಭಾವನೆಯನ್ನು ಮನಸ್ಸಿಗೆ ತಂದುಕೊಂಡು, ಸರ್ಪಾದಿ ಗಳನ್ನು ಕಂಡರೂ, ಪ್ರತಿಮಾದಿಗಳನ್ನು ಕಂಡರೆ ಹೇಗೆ ಪೂಜಿಸುವನೋ ಮತ್ತು ನಿರ್ಭೀತಿಯಿಂದಿರುವನೋ, ಹಾಗೆಯೇ ನಿರ್ಭೀತಿಯಿಂದ ಪೂಜಿಸುವ ಯೋಗ್ಯತೆ ಬಂದರೆ, ಅವನು ಸರ್ವತ್ರ ವ್ಯಾಪ್ತನಾದ ಪರಮಾತ್ಮನ ಪೂಜೆ ಯನ್ನು ಮಾಡಬಹುದು. ಆ ಜ್ಞಾನ ಬರುವವರೆವಿಗೂ ತನಗಿಂತಲೂ ಉತ್ತಮರೆಂದೇ ಯಾರಲ್ಲಿ ಭಕ್ತಿ ಹುಟ್ಟುವುದೋ, ಅವರಲ್ಲಿ ಅಂತರ್ಯಾಮಿ ಯಾದ ಪರಮಾತ್ಮನನ್ನು ಮಾತ್ರ ಪೂಜಿಸಬೇಕು. ಯಾರಲ್ಲಿ ತಪಸ್ಸು, ಜ್ಞಾನ, ಭಕ್ತಿ ಮೊದಲಾದವು ಅಧಿಕವಾಗಿರುವುವೋ, ಆ ಅಧಿಷ್ಠಾನದಲ್ಲಿ ತಾರತಮ್ಯಾನುಸಾರ ಭಕ್ತಿ ಮಾಡಬೇಕು. ನಮಗಿಂತಲೂ ನೀಚರಲ್ಲಿಯೂ, ಶ್ವಾನಾದಿಗಳಲ್ಲಿಯೂ, ಇರುವ ಭಗವದ್ರೂಪಗಳಿಗೆ ಅಭೇದಚಿಂತನೆ ಮಾಡಿಕೊಂಡು, ತನ್ನ ಯೋಗ್ಯತಾನುಸಾರ ಯಾವ ಯಾವ ಅಧಿಷ್ಠಾನದಲ್ಲಿ ತನಗೆ ಭಕ್ತಿ ಹುಟ್ಟುವುದೋ, ಆಯಾ ಅಧಿಷ್ಠಾನದಲ್ಲಿ ಭಗವತ್ಪೂಜೆ ಯನ್ನು ನಿಃಸ್ಸಂಶಯವಾಗಿ ಮಾಡಬಹುದು. ಆದುದರಿಂದಲೇ ದಾಸ ರಾಯರು — "ಮನಬಂದ ತೆರದಲಿ ಚಿಂತಿಸು" — ಎಂದು ಹೇಳಿರು ವರು.

ಭಗವದ್ರೂಪವು ಸರ್ವತ್ರ ತುಂಬಿರುವ ವಿಷಯದಲ್ಲಿ ದೃಷ್ಟಾಂತ ವನ್ನು ಹೇಳುತ್ತಾರೆ :–

ಸಮುದ್ರ ಮಧ್ಯದಲ್ಲಿ ಎಂಬ ಉಪಲಕ್ಷಣ ಮಾಡಿಕೊಂಡು, ನೀರುಳ್ಳ ಕರೆ ಮೊದಲಾದವುಗಳಲ್ಲಿ ವಸ್ತ್ರಮಯವಾದ (ಗೂಡಾರದ) ಮನೆಯನ್ನು ರಚಿಸಿದರೆ, ಆ ವಸ್ತ್ರದ ಪ್ರತಿ ದಾರದಲ್ಲಿಯೂ ಹೇಗೆ ಉದಕ ಬಿಂದುಗಳು ವ್ಯಾಪಿಸುವುವೋ, ಹಾಗೆ ಪರಮಾತ್ಮನು ಚರಾಚರಾಖ್ಯವಾದ ಪ್ರಪಂಚದಲ್ಲಿ ಸರ್ವತ್ರ ವ್ಯಾಪಿಸಿರುವನು. ಈ ದೃಷ್ಟಾಂತವು ಅಭೂತಪೂರ್ವವು. ನೀರೊಳಗೆ ವಸ್ತ್ರಗೃಹ (ಡೇರಾ) ವನ್ನು ರಚಿಸುವುದು ಎಲ್ಲಿಯೂ ಕಾಣಿ

ಸುವುದಿಲ್ಲ. ಈ ದೃಷ್ಟಾಂತ ಹೇಗೆ ಕೊಟ್ಟರು ಎಂದರೆ, ಉಪಮಾನದಲ್ಲಿ ಇದ್ದದ್ದೇ ಹೇಳಬೇಕೆಂಬ ನಿಯಮವಿಲ್ಲ. ಇಲ್ಲದಿದ್ದರೂ, ಇದ್ದರೆ ಹೇಗಿರುವುದೋ ಹಾಗೆ, ಎಂದು ಉಪಮಾನ ಹೇಳುವ ಸಂಪ್ರದಾಯ ಉಂಟು. ಲೋಕವಿಲಕ್ಷವಾದ ವಿಷಯದಲ್ಲಿ ಉಪಮಾನ ಕೊಡಬೇಕಾದರೆ, ಲೋಕವಿಲಕ್ಷಣವಾದ ಉಪಮಾನವನ್ನೇ ಹುಡುಕಬೇಕು. **ಭಾಗವತ ಪ್ರಥಮ ಸ್ಕಂದದಲ್ಲಿ,** ಶ್ರೀ ಕೃಷ್ಣನು ಹಸ್ತಿನಾಪತಿಪುರದಿಂದ ದ್ವಾರಾವತಿಗೆ ಬರುವಾಗ, ಅರ್ಜುನನು ರತ್ನದಂಡದಿಂದ ಕೂಡಿದ ಶ್ವೇತಚ್ಛತ್ರಿಯನ್ನು ಹಿಡಿದಿದ್ದನು. ಉದ್ಧವ, ಸಾತ್ಯಕಿ ಇತರಿಬ್ಬರೂ ಬಾಲವ್ಯಜನವನ್ನು ಹಿಡಿದು ಬೀಸುತ್ತಿದ್ದರು. ಶ್ರೀ ಕೃಷ್ಣನು ಕೌಸ್ತುಭ ಮಾಣಿಕ್ಯದಿಂದಲೂ, ವನಮಾಲಿಕೆಯಿಂದಲೂ ಶೋಭಿಸುತ್ತಿದ್ದನು. ಅದು ಹೇಗೆ ಶೋಭಿಸುತ್ತಿದ್ದಿತೆಂಬುದಕ್ಕೆ ದೃಷ್ಟಾಂತ ಹೇಳುತ್ತಾರೆ. **"ಘನೋ ಯಥಾರ್ಕೇನ ಚಾಪ ವೈದ್ಯುತ್ತೈಃ"**— ಉಚ್ಚದಲ್ಲಿ ಸೂರ್ಯ, ಹಗಲಿನಲ್ಲಿ ಪೂರ್ಣಚಂದ್ರ, ಮೇಘ ಮಂಡಲದಲ್ಲಿ ಇಂದ್ರ ಧನಸ್ಸು ಮತ್ತು ಮಿಂಚು-ಇವೆಲ್ಲವುಗಳಿಂದ ಕೂಡಿದ ನೀಲಮೇಘವು ಹೇಗೆ ಶೋಭಿಸುವುದೋ, ಹಾಗೆ ಪರಮಾತ್ಮನ ತಲೆಯ ಮೇಲೆ ಶೋಭಿಸುವ ಛತ್ರಿಯು ಸೂರ್ಯನಂತೆಯೂ, ವ್ಯಜನವು ಪೂರ್ಣ ಚಂದ್ರನಂತೆಯೂ, ವನಮಾಲಿಕೆಯು ನಾನಾ ವರ್ಣಗಳಿಂದ ಕೂಡಿದ (ಇಂದ್ರಚಾಪ) ಬಿಲ್ಲಿನಂತೆಯೂ, ಕೌಸ್ತುಭ ಮಾಣಿಕ್ಯವು ಮಿಂಚಿನಂತೆಯೂ ಶ್ರೀ ಕೃಷ್ಣನು ಇವೆಲ್ಲವುಗಳಿಂದ ಕೂಡಿದ ನೀಲಮೇಘದಂತೆಯೂ ಶೋಭಿಸಿದನು-ಎಂದು ಹೇಳಿರುವರು.

ನಮ್ಮ ದಾಸರಾಯರು ಕೊಟ್ಟ ಉಪಮಾನವು ಈಗಿನ ಪಾಶ್ಚಿಮಾತ್ಯರು ಯುಕ್ತಿಯಿಂದ ಸಮುದ್ರದಲ್ಲಿ ವಸ್ತ್ರಗೃಹವನ್ನು ರಚಿಸಿದರೂ ರಚಿಸಬಹುದು. ಭಾಗವತದಲ್ಲಿ ಕೊಟ್ಟ ಉಪಮಾನವು ಎಂದಾದರೂ ಸಂಭವಿಸಬಹುದೇ? ಮಧ್ಯಾಹ್ನದ ಸೂರ್ಯ, ಸೂರ್ಯನ ಸಮೀಪದಲ್ಲಿ ಪೂರ್ಣಕಲೋಪೇತ ಚಂದ್ರನನ್ನು ಯಾವ ಕಾಲದಲ್ಲಾದರೂ ನೋಡಲು ಸಾಧ್ಯವೇ ? ಅಮಾವಾಸ್ಯೆಯ ದಿವಸವೇ ಸೂರ್ಯ ಚಂದ್ರರೊಂದಾಗುವುದು. ಆ ದಿನ ಚಂದ ನಿಗೆ ಕಲಾ ಎಲ್ಲಿಯದು ? ಹೀಗಿರಲು ಸೂರ್ಯನನ್ನು ಉಚ್ಚದಲ್ಲಿಯೂ

ಬಗಲಲ್ಲಿ ಪೂರ್ಣ ಚಂದ್ರನನ್ನೂ ನೋಡುವುದು ಎಂದಿಗೂ ಇಲ್ಲ. ಇಂದ್ರ ಚಾಪವೆಂದರೆ ಪ್ರಾತಃಕಾಲದಲ್ಲಿ ಸೂರ್ಯನು ಪೂರ್ವದಲ್ಲಿದ್ದು, ಪಶ್ಚಿಮದಲ್ಲಿ ಮೇಘವಿದ್ದು, ಮಳೆ ಹನಿಗಳು ಬೀಳುತ್ತಿದ್ದರೆ, ಆವಾಗಾಗಲಿ ಅಥವಾ ಸಾಯಂಕಾಲದಲ್ಲಿ ಸೂರ್ಯನು ಪಶ್ಚಿಮದಲ್ಲಿದ್ದು, ಪೂರ್ವದಲ್ಲಿ ಮೇಘವೂ ಮಳೆ ಹನಿಗಳೂ ಇದ್ದರೆ ಆವಾಗಲೂ ಕೆಂಪು, ಕಪ್ಪು, ಹಸುರು ಮೊದ ಲಾದ ನಾನಾ ವರ್ಣಗಳಿಂದ ಕೂಡಿದ ಕಾಮನಬಿಲ್ಲು ಕಾಣುವುದು. ಇದು ಕಾಣಬೇಕಾದರೆ ಉದಯವಾಗಿ ೧-೨ ಘಳಿಗೆಯ ಒಳಗಾಗಿ ಅಥವಾ ಅಸ್ತ ಮಾನಕ್ಕೆ ೧-೨ ಘಳಿಗೆ ಮುಂಚಿತವಾಗಿ ಕ್ರಮವಾಗಿ ಪಶ್ಚಿಮದಲ್ಲೋ ಪೂರ್ವದಲ್ಲೋ ಕಾಣುವ ಸಂಪ್ರದಾಯವುಂಟು. ಮಧ್ಯಾಹ್ನಕಾಲದಲ್ಲಿ ಈ ಬಿಲ್ಲು ಎಂದಿಗೂ ಕಾಣುವುದಿಲ್ಲ. ಸೂರ್ಯನು ಉಚ್ಚದಲ್ಲಿದ್ದು ಬುಡ ದಲ್ಲಿ ಮೇಘಗಳಿದ್ದರೆ ಸುತ್ತಲೂ ಪ್ರಕಾಶಮಾವಾದ ಬಿಸಿಲಿರಲು ಮಿಂಚು ಕಾಣುವುದು, ಹೇಗೆ ? ಇದರಲ್ಲಿ ಒಂದಾದರೂ ಸಾಧ್ಯವಿಲ್ಲ. ಛತ್ರಿ, ವ್ಯಜನ, ವನಮಾಲಿಕೆ, ಕೃಷ್ಣ ಇವೆಲ್ಲವೂ ಕಣ್ಣಿಗೆ ಗೋಚರವಾಗುತ್ತಿದ್ದುವು. ಆದ್ದರಿಂದ ದೃಷ್ಟಾಂತದಲ್ಲಿಯೂ ಕೂಡ ಸೂರ್ಯ, ಚಂದ್ರ, ಬಿಲ್ಲು, ಮಿಂಚುಗಳಿಂದ ಕೂಡಿದ ಮೇಘವೆಂದು ಹೇಳಿದವೆಲ್ಲವನ್ನೂ ನೋಡಬೇಕಾ ಗಿತ್ತು. ಹೀಗೆ ಈ ಉಪಮಾನವು ಅಭೂತಪೂರ್ವವಾದರೂ ಲೋಕವಿಲಕ್ಷಣ ವಾದ ಭಗವದ್ರೂಪಕ್ಕೆ ಬೇರೆ ಉಪಮಾನವನ್ನು ಕೊಡಲು ಲೋಕವಿಲಕ್ಷಣ ವಾದ ಅಭೂತೋಪಮಾನವನ್ನು ಕೊಟ್ಟಿರುವರು. ಆದ್ದರಿಂದ ದಾಸರಾ ಯರು ಇಲ್ಲಿ ಕೊಟ್ಟ ಉಪಮಾನವು ಇದರಂತೆಯೇ ಎಂದು ಭಾವಿಸತಕ್ಕದ್ದು. ॥ ೨೩ ॥

(೩) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

"ಒಂದರೊಳಗೊಂದು" -ಇತಿ ॥ ಬೆರೆದಿಹ - ಮಿಳಿತವಾಗಿರುವ. ತೆರ = ಅದರೋಪಾದಿಯಲ್ಲಿ. ಸಿಂಧುಃ-ಅಬ್ಧಃ ॥ ಅಂಬರಾಲಯ = ವಸ್ತ್ರಗೃಹಂ ॥

ಒಂದೊಂದು ರೂಪದಲ್ಲಿಯೂ ಕೂಡ ಶ್ರೀ ಪರಮಾತ್ಮನ ಅನಂತಾನಂತ ರೂಪಗಳು ಮಿಳಿತವಾಗಿವೆ. ಆ ರೂಪಗಳಲ್ಲಿ ನಮ್ಮ ಯೋಗ್ಯತಾನುಸಾರ ಶಕ್ತಿ ಇದ್ದಷ್ಟು, ಮಾನಸಿಕವಾಗಿ ಚಿಂತಿಸಬೇಕು. ಶ್ರೀ ಪರಮಾತ್ಮನ ಅಪರಿಮಿತ ರೂಪಸಮೂಹಗಳು ಹ್ಯಾಂಗೆಂದರೆ-ಸಮುದ್ರದ ನೀರಿನಲ್ಲಿ ಒಂದು ಬಟ್ಟೆಯ ಮನೆಯನ್ನು ಗುಡಿಸಲಿನ ರೂಪದಲ್ಲಿ ಹಾಕಿದಾಗ, ಜಲಬಿಂದುಗಳು ಆ ವಸ್ತ್ರದ ಎಳೆ ಎಳೆಗಳಲ್ಲಿ ಸೇರಿಕೊಳ್ಳುವುವು. ಅದರಂತೆ, ಶ್ರೀ ಪರಮಾತ್ಮನ ಅನಂತಾನಂತ ರೂಪಗಳು ಸರ್ವತ್ರ ಓತಪ್ರೋತವಾಗಿ ತುಂಬಿವೆ. ಅವರವರ ಮನಸ್ಸಿನ ಶಕ್ತಿಗೆ ತಕ್ಕಂತೆ, ಧ್ಯಾನ ಧಾರಣೆಗನುಸಾರವಾಗಿ, ಆ ಶ್ರೀಹರಿಯ ರೂಪಕೋಟಿಗಳನ್ನು ಎಲ್ಲೆಂದರಲ್ಲಿ ಭಾವಿಸಬೇಕು ಎಂದು ತಾತ್ಪರ್ಯ. ॥೨೩॥

## (೪) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

**"ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಂ"— ಎಂಬ ಗೀತಾ ವ್ಯಾಖ್ಯಾನುಸಾರ,** ಭಕ್ತಿಯುಕ್ತ ಮನೋಗುಣವಾಗಿ ಒಂದು ರೂಪವೂ ಅನೇಕ ರೂಪ ಸಹಾ, ಉಪಾಸನೆ ಮಾಡುವುದಕ್ಕೆ ಸಂಶಯ ಬೇಡವೆಂದು ಬೋಧಿಸುತ್ತಾರೆ. **"ವಿಮಿಶ್ರಾಣಿ ವ್ಯಮಿಶ್ರಯನ್"-ಎಂಬ ಶ್ರುತಿರೀತ್ಯಾ,** ಜಾಂಬುವಂತನಿಗೆ ಕೃಷ್ಣರೂಪದಲ್ಲೇ ರಾಮರೂಪ ಕಂಡಂತೆ, ಒಂದು ರೂಪದಲ್ಲಿ ಅನೇಕ ರೂಪವೂ. ಜ್ಞಾನಾದಿ ಗುಣಗಳಲ್ಲಿ ಆನಂದ್ಯಾದನಂತ ಗುಣಗಳೂ ಕೂಡಿಕೊಂಡು ಇರುವ ಲಕ್ಷ್ಮೀಶನ ರೂಪವನ್ನು, ಮನಸ್ಸಿಗೆ ಅನುಕೂಲವಾಗಿ, ಸಾಧ್ಯವಾದ ಹಾಗೆಲ್ಲಾ ಚಿಂತಿಸುವುದಕ್ಕೆ ಏನೂ ಸಂಶಯ, ಅಂದರೆ, ಸಂದೇಹ ಬೇಡ. ಸಿಂಧುರಾಜನೆಂಬ ಸಮುದ್ರರಾಜನಲ್ಲಿ, ಅಂಬರಾಲಯವೆಂಬ ಗುಡಾರವನ್ನು ಹಾಕಲು, ಪ್ರತಿ ತಂತುಗಳೆಂಬ ಒಂದೊಂದು ನೂಲಿನಲ್ಲಿ, ಉದಬಿಂದುಗಳೆಂಬ ನೀರಹನಿಗಳು ವ್ಯಾಪಿಸಿರುವಂತೆ, ದೇವರು ಏಕಾನೇಕ ರೂಪಗಳಿಂದ ವ್ಯಾಪಿಸಿರುವನಾದ್ದರಿಂದ ಮನೋನುಕೂಲವಾಗಿ ಭಾವಿಸೆಂದರ್ಥ. ॥೨೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀ ಪರಮಾತ್ಮನ ಗುಣ, ಕ್ರಿಯಾ ಮತ್ತು ರೂಪಗಳು ಅನಂತಾನಂತ. ಅಂತಹ ಪ್ರತಿ ಗುಣ, ರೂಪ. ಕ್ರಿಯಾದಿಗಳಲ್ಲಿ ಅನಂತಾನಂತ ಗುಣ ರೂಪ ಕ್ರಿಯಾದಿಗಳು ಮಿಳಿತವಾಗಿ ಹಬ್ಬಿ ಹರಡಿಕೊಂಡು ವ್ಯಾಪಿಸಿರುವುವು ಎಂದು ತಿಳಿಸುತ್ತಾರೆ_"**ಒಂದರೊಳಗೊಂದು**" – ಎಂಬ ಪ್ರಸಕ್ತ ೨೩ ನೆಯ ಈ ಪದ್ಯದಿಂದ.

(೧) ಅಪಾರ ಮಹಿಮಾಸಂಪನ್ನನಾದ ಶ್ರೀ ಪರಮಾತ್ಮನು ಅನಂತ ಕಲ್ಯಾಣಗುಣ ಗಣ ಪರಿಪೂರ್ಣನು. ಅವನ ಒಂದೊಂದು ಗುಣವೂ ಪರಿಪೂರ್ಣವೇ. ಅಂತಹ ಗುಣಪರಿಪೂರ್ಣನಾದ ಜಗತ್ಪ್ರಭುವು ಈ ಜಗದಾದ್ಯಂತ ಪೃಥಕ್ ರೂಪಗಳಿಂದಲೂ ಮತ್ತು ಸಮಷ್ಟಿ ರೂಪಗಳಿಂದಲೂ ಓತಪ್ರೋತನಾಗಿ ವ್ಯಾಪಿಸಿರುವನು. ಇಂತಹ ಪೃಥಕ್‌ರೂಪಗಳಿಗೆ **ಖಂಡಾರೂಪ**ಗಳೆಂತಲೂ ಮತ್ತು ಸಮಗ್ರರೂಪಗಳಗೆ **ಅಖಂಡರೂಪ**ಗಳೆಂತಲೂ ಹೆಸರು. ಉದಾಹರಣೆಗಾಗಿ. (೧) ಅನ್ನದ ಪ್ರತಿ ಪ್ರತಿ ಅಗುಳಿನಲ್ಲಿ ಖಂಡರೂಪನಾಗಿಯೂ ಮತ್ತು ಅನ್ನರಾಶಿಯಲ್ಲಿ ಅಖಂಡರೂಪನಾಗಿಯೂ ವಿದ್ಯಮಾನನಾಗಿದ್ದಾನೆ. (೨) ಒಂದು ವಸ್ತುವಿನ ಅತ್ಯಂತ ಸೂಕ್ಷ್ಮವಾದ ಕಣಗಳಲ್ಲಿ ಖಂಡನೆಂತಲೂ, ಆ ಸಮಗ್ರವಸ್ತುವಿನಲ್ಲಿ ಅಖಂಡನೆಂದೂ ವ್ಯಾಪ್ತನಾಗಿದ್ದಾನೆ. ಈ **ಖಂಡಾಖಂಡರೂಪ**ಗಳಲ್ಲಿಯೂ ಪರಿಪೂರ್ಣನೇ ಆಗಿದ್ದಾನೆ. ಅಂದರೆ ಖಂಡರೂಪದಲ್ಲಿ ಅಖಂಡ ಗುಣಾತ್ಮಕನಾಗಿಯೂ, ಅಖಂಡದಲ್ಲಿ ಖಂಡರೂಪನಾಗಿಯೂ ಇರುವ ಈತನ ಚರಿತೆ ಅನುಪಮ ಹಾಗೂ ಅಚಿಂತ್ಯಾದ್ಭುತ ! ಈ ಕಾರಣದಿಂದಲೇ "**ಅಣೋರಣೀಯಾನ್ ಮಹತೋ ಮಹೀಯಾನ್**"_ಎಂದು **ಶ್ರುತಿವಾಕ್ಯ**ವು ಜಗತ್ತಿಗೆ ಸಾರುತ್ತಿದೆ. ಅಂದರೆ, ಪ್ರತಿ ವಸ್ತುವೂ ಅತ್ಯಂತ ಸೂಕ್ಷ್ಮವಾದ ಅಣುಗಳಿಂದ ರಚಿತವಾಗಿದೆ. ಅಂತಹ ಪ್ರತಿ ಪ್ರತಿ ಸೂಕ್ಷ್ಮಾಣುಗಳಲ್ಲಿ ಅವುಗಳಿಗಿಂತ ಸೂಕ್ಷ್ಮತರನಾಗಿ ಪರಮಾಣುರೂಪನಾಗಿದ್ದಾನೆ. ಮಹತ್ತಾದ ಪರ್ವತ, ಆಕಾಶ, ಸಾಗರ

ಮುಂತಾದ ವಸ್ತುಗಳಿಗಿಂತ ಮಹತ್ತರರೂಪನಾಗಿ ಆವರಣರೂಪದಲ್ಲಿರುವನು. ವಿಶ್ವೋಪಾಸಕರಾದ ಬ್ರಹ್ಮಜ್ಞಾನಿಗಳು ಈ ರೀತಿ ಭಗವಂತಹ ವ್ಯಾಪ್ತ್ಯೋಪಾಸನೆ ಮಾಡುವರು.

(೨) ಇಂತು, ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ (ಇಂದಿರೇಶನ) ಪ್ರತಿ ಪ್ರತಿ ಪೃಥಕ್‌ರೂಪದಲ್ಲಿಯೂ ಅನಂತಾನಂತರೂಪಗಳು ಅಡಕವಾಗಿವೆ. ಆ ಇಂದಿರೇಶನ ಒಂದು ರೂಪದಲ್ಲಿ ಒಂದರೊಳಗೊಂದು ಮಿಳಿತವಾಗಿರುವ ಅನಂತಾನಂತರೂಪಗಳನ್ನು ಶ್ರೀಕೃಷ್ಣನು ತನ್ನ ಸಖನಾದ ಅರ್ಜುನನಿಗೆ ವಿಶ್ವರೂಪ ದರ್ಶನದಲ್ಲಿ ತೋರಿಸಿದನು. ಅಂತೆಯೇ ತನ್ನ ಪುಟ್ಟ ಬಾಯಿಯಲ್ಲಿ ಆ ಬಾಲಗೋಪಾಲನು ಸಮಸ್ತ ಬ್ರಹ್ಮಾಂಡದರ್ಶನವನ್ನೇ ತೋರಿಸಿದನು ಯಶೋದೆಗೆ ! ತುಂಬಿದ ಸಭೆಯಲ್ಲಿ ದುರಾತ್ಮನಾದ ದುರ್ಯೋಧನನು ಭವಕಟ್ಟನ್ನು ಬಿಡಿಸುವ ಕೃಷ್ಣನನ್ನು ಕಟ್ಟಲು ಉದ್ಯುಕ್ತನಾದಾಗ, ಎಲ್ಲೆಲ್ಲಿಯೂ ಕೃಷ್ಣರೂಪನಾಗಿ ತನ್ನ ಅದ್ಭುತ ಚಮತ್ಕಾರವನ್ನು ಪ್ರದರ್ಶಿಸುವನು. ಹಾಗೆಯೇ ರಾಮಾವತಾರದಲ್ಲಿ ವಾನರ ದಾನವರ ಯುದ್ಧ ಪ್ರಸಂಗದಲ್ಲಿ ತನ್ನ ಅನಂತಾನಂತರೂಪಗಳನ್ನು ಏಕಕಾಲದಲ್ಲಿ ತೋರಿಸಿ. ಅಸುರರಲ್ಲಿ ಮೋಹವನ್ನುಂಟುಮಾಡಿ, ಅವರವರಲ್ಲಿಯೇ ಕಾದಾಡಿ ಸಂಹೃತರಾದರು. ಕೃಷ್ಣಾವತಾರದಲ್ಲಿ ಜಾಂಬುವಂತನಿಗೆ ದಿವ್ಯ ರಾಮ ರೂಪದರ್ಶನ ಭಾಗ್ಯವನ್ನು ನೀಡಿದನು. ಇಂತು ಪುರಾಣ ಇತಿಹಾಸ ಪ್ರಸ್ಥಾನಗಳಲ್ಲಿ ಅಪ್ರಮೇಯನ ಮಹಿಮಾತಿಶಯಗಳು ಅಪಾರ ಹಾಗೂ ಅನಂತಾನಂತ.

(೩) ಒಂದರೊಳಗೊಂದು ಬೆರೆದಿಹ ಆ ಇಂದಿರೇಷನ ರೂಪ, ಗುಣ ಕ್ರಿಯಾದಿ ವಿಶೇಷಗಳನ್ನು ನಮ್ಮ ಮನಸ್ಸಿನ ಶಕ್ತಿಗೆ ಅನುಗುಣವಾಗಿ ಧ್ಯಾನಿಸುತ್ತಾ ಉಪಾಸನೆಮಾಡಬೇಕೆಂದು ದಾಸರಾಯರು ತಿಳಿಸುತ್ತಾರೆ. ಬೇರೆ ಬೇರೆ ಕಾಲ, ದೇಶ, ಅವಸ್ಥಾವಿಶೇಷಗಳಿಗನುಸಾರ. ನಮ್ಮ ಮನಸ್ಸಿನ ಭಾವನೆಗಳೂ ಸಹ ನಾನಾ ರೂಪಗಳನ್ನು ತಾಳುವುವು. ಇಂತಹ ವಿವಿಧ ಭಾವನಾಲಹರಿಗಳಲ್ಲಿ ನಮ್ಮ ಮನೋಮಂದಿರದಲ್ಲಿ ಕಾಲೋಚಿತವಾಗಿ

ಆಯಾಯಾ ಸಂಧರ್ಭಾನುಸಾರವಾಗಿ ಇಂದಿರೇಶನ ರೂಪಗಳ ಉಪಾಸನೆಯನ್ನು ಮಾಡುತ್ತಿರಬೇಕು. (ಮನಬಂದ ತೆರದಲಿ ಚಿಂತಿಸುತ) ಅಂತಹ ವ್ಯಾಪ್ತೋಪಾಸಕರಿಗೆ ಭಗವದನುಗ್ರಹವಾಗುವುದರಲ್ಲಿ ಕಿಂಚಿತ್ತೂ ಸಂದೇಹವಿಲ್ಲ. (ಇದಕನುಮಾನವಿಲ್ಲ)

(೪) ಒಂದರೊಳಗೊಂದು ಬೆರೆದಿಹ ಇಂದಿರೇಶನ ಅನಂತಾನಂತ ಗುಣ, ರೂಪ, ಕ್ರಿಯಾವಿಶೇಷಗಳನ್ನು ದಾಸರು ಒಂದು ಸುಂದರವಾದ ದೃಷ್ಟಾಂತದಿಂದ ಸ್ಪಷ್ಟೀಕರಿಸುತ್ತಾರೆ. ಸಮುದ್ರದ ನೀರು ಅಪಾರ. ಅಂತಹ ಅಪಾರ ಜಲರಾಶಿಯಲ್ಲಿ (ಸಿಂಧುರಾಜನೊಳು) ಬಟ್ಟೆಯಿಂದ ಮನೆಯಂತೆ ಒಂದು ಗುಡಾರವನ್ನು ನಿರ್ಮಿಸಿ, (ಅಂಬರಾಲಯ) ನೀರಿನಲ್ಲಿ ಅದ್ದಿದರೆ, ನೀರು ಆ ವಸ್ತ್ರದ ಪ್ರತಿ ಪ್ರತಿ ನೂಲಿನ ಎಳೆಯಲ್ಲಿಯೂ ವ್ಯಾಪ್ತವಾಗುವುದು. ವಸ್ತ್ರವು ದಾರದ ಎಳೆಗಳಿಂದ ಓತಪ್ರೋತವಾಗಿ ನೇಯಲ್ಪಟ್ಟು ನಿರ್ಮಿತವಾಗಿದೆ. ಇಡೀ ವಸ್ತ್ರದಲ್ಲಿ ಬಂಧಿಸಿದ ನೀರು. ಆ ವಸ್ತ್ರದ ಪ್ರತಿ ತಂತುವಿನಲ್ಲಿ ಜಲಕಣಗಳ ರೂಪದಲ್ಲಿ ವ್ಯಾಪಿಸಿರುವುದು, ಅಂತೆಯೇ ಈ ಜಗದಾದ್ಯಂತ, ಸಮಸ್ತ ಚರಾಚರ ವಸ್ತುಗಳಲ್ಲಿ ಸರ್ವತ್ರ ಪರಿಪೂರ್ಣ ರೂಪಗಳಿಂದ ಖಂಡಾಖಂಡ ರೂಪಾತ್ಮಕನಾಗಿ ತುಂಬಿ ಹರಡಿ ಕೊಂಡಾಡಿದ್ದಾನೆ, ಆ ಸರ್ವತ್ರವ್ಯಾಪಕನು ! ಈ ದೃಷ್ಟಾಂತದಲ್ಲಿ (1) ಅಪಾರವಾದ ಜಲರಾಶಿಯು ಅಂಚಿತ್ಯಾದ್ಭುತ ಚರಿತನ ಅನಂತಾನಂತ ಗುಣ ವೃಂದಗಳಿಗೆ ಸದಶವು. (2) ವಸ್ತ್ರಗೃಹವು ಚರಾಚರಾತ್ಮಕವಾದ ಈ ಸಮಗ್ರ ಬ್ರಹ್ಮಾಂಡವು. (3) ವಸ್ತ್ರದ ಪ್ರತಿ ನೂಲಿನ ಎಳೆಯೂ ಒಂದೊಂದು ಪ್ರತ್ಯೇಕ ಪ್ರತ್ಯೇಕವಾದ ಅಧಿಷ್ಠಾನ ವಿಶೇಷಗಳು. (4) ಪ್ರತಿ ತಂತುವಿನಲ್ಲಿ ವ್ಯಾಪಿಸಿರುವ ಜಲಕಣಗಳು (ಉದಕಬಿಂದು) ಅಂತಹ ಸಮಸ್ತ ಅಧಿಷ್ಠಾನದಲ್ಲಿ ಓತಪ್ರೋತನಾಗಿ ವ್ಯಾಪಿಸಿರುವ ಆ ಪರಮಾತ್ಮನ ಅನಂತಾನಂತ ಗುಣ. ರೂಪ ಕ್ರಿಯಾದಿಗಳು.

ಈ ತತ್ತ್ವವನ್ನು "**ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಮ್** —ಎಂಬ ಗೀತಾವಾಕ್ಯವು ಪ್ರತಿಪಾದಿಸುವುದು.

ಅಂತೆಯೇ ಒಂದರೊಳಗೊಂದು ಮಿಳಿತವಾಗಿರುವ ಇಂದಿರೇಶನ ರೂಪಸಮೂಹಗಳನ್ನು **"ವಿಮಿಶ್ರಾಣಿ ವ್ಯಮಿಶ್ರಯನ್" - ಎಂಬ ಶ್ರುತಿ ಪ್ರಮಾಣವು** ಸಮರ್ಥಿಸುವುದು. ॥೨೩॥

## ಪದ್ಯ (೨೪)

**ಮೂಲ :—**

**ಒಂದು ರೂಪದೊಳೊಂದವಯವದೊ ।**
**ಳೊಂದು ರೋಮದೊಳೊಂದು ದೇಶದಿ ।**
**ಪೊಂದಿ ಇಪ್ಪಬುಜಾಂಡನಂತಾನಂತ ಕೋಟಿಗಳು ॥**
**ಹಿಂದೆ ಮಾರ್ಕಾಂಡೇಯ ಕಾಣನೆ ।**
**ಒಂದು ರೂಪದಿ ಸೃಷ್ಟಿ ಪ್ರಳಯವ ।**
**ಇಂದಿರೇಶನೊಳೇನಿದಚ್ಚರಿ ಅಪ್ರಮೇಯ ಸದಾ ॥೨೪॥**

**ಅವತರಣಿಕೆ :-**

ಅಂಚಿತ್ಯಾದ್ಭುತ ಚರಿತ್ರನಾದ ಶ್ರೀ ಪರಮಾತ್ಮನ ವ್ಯಾಪ್ತ ಮಹಿಮಾತಿಶಯಗಳನ್ನು **"ಒಂದು ರೂಪದೊಳು"** – ಎಂಬ ಪ್ರಸಕ್ತ ಸಂಧಿಗತ ೨೪ ನೆಯ ಈ ಪದ್ಯದಿಂದ ವಿವರಿಸುತ್ತಾರೆ.

ಶ್ರೀ ಪರಮಾತ್ಮನ ರೂಪಗಳು ಅನಂತಾನಂತ. ಇಂತಹ ಅಪಾರ ಸಂಖ್ಯಾ ರೂಪಗಳ ಪೈಕಿ ಪ್ರತಿಯೊಂದು ರೂಪದಲ್ಲಿಯೂ, ಕರಚರಣಾದ್ಯವಗಳ ಪೈಕಿ, ಪ್ರತಿ ಅವಯವದಲ್ಲಿಯೂ, ರೋಮ ಕೋಟಿಗಳಲ್ಲಿ ಪ್ರತಿ ರೋಮ ಪ್ರದೇಶದಲ್ಲಿ ವಿದ್ಯಮಾನವಾಗಿರುವ ದೇಶದಲ್ಲಿಯೂ, ಅನಂತಾನಂತ ಕೋಟಿ ಬ್ರಹ್ಮಾಂಡಗಳನ್ನು ಧರಿಸಿದ್ದಾನೆ. ತನ್ನ ಪರಮಾದ್ಭುತ ಶಕ್ತಿ

ವಿಶೇಷದಿಂದ ಮಹತ್ತಾದ ಅಂತಹ ಅನಂತ ಕೋಟಿ ಬ್ರಹ್ಮಾಂಡಗಳನ್ನು ಸೂಕ್ಷ್ಮರೂಪದಿಂದ ಧಾರಣಮಾಡಿದ್ದಾನೆ. ಹಿಂದೆ ಮಾರ್ಕಾಂಡೇಯನೆಂಬ ಋಷಿಯು ವಿದ್ಯಮಾನವಾಗಿರುವ ಸ್ಥಿತಿ ಕಾಲದಲ್ಲಿಯೇ ಪ್ರಳಯವನ್ನು ನೋಡಬೇಕೆಂಬ ಹಂಬಲವನ್ನು ವ್ಯಕ್ತಪಡಿಸಲು, ಪರಮಕರುಣಾಸಾಗರನಾದ ಶ್ರೀ ಪರಮಾತ್ಮನು ಶಿಶುರೂಪ ಧಾರಣಮಾಡಿ. ತನ್ನ ನಾಸಿಕಾ ದ್ವಾರದಿಂದ ಆ ಋಷಿಪುಂಗವನ್ನು ಎಳೆದು, ತನ್ಮೂಲಕ ಭಗವಂತನ ಉದರ ಪ್ರವೇಶಮಾಡಿದ ಆ ಮುನಿಯು ಒಂದೇ ರೂಪದಲ್ಲಿ ಸೃಷ್ಟಿ, ಸ್ಥಿತಿ ಪ್ರಳಯಾದಿಗಳನ್ನು ನೋಡಿ, ಆಶ್ಚರ್ಯದಿಂದ ಮೂಕನಾಗಿ, ಹೊರಗೆ ಬಂದ ಪುರಾಣ ಪ್ರಸಂಗವನ್ನು ದೃಷ್ಟಾಂತವಾಗಿ ಕೊಟ್ಟಿದ್ದಾರೆ ದಾಸರಾಯರು. ಶಶ್ವದೇಕ ಪ್ರಕಾರನಾಗಿ ನಿರ್ವಿಕಾರನಾಗಿ, ಜಗದ್ವಿಲಕ್ಷಣನಾದ ಇಂದಿರಾಪತಿಯಲ್ಲಿ ಒಂದೇ ರೂಪದಲ್ಲಿ ಅನಂತಾನಂತ ರೂಪಗಳು. "ಏಕ ಪ್ರದೇಶದಲ್ಲಿ ಅನಂತಕೋಟಿ ಬ್ರಹ್ಮಾಂಡಗಳು ತುಂಬಿಕೊಂಡಿರುವುದು ಏನು ಆಶ್ಚರ್ಯ ! ಎಂದು ಉದ್ಗಾರ ತೆಗೆದಿದ್ದಾರೆ ದಾಸವರ್ಯರು. ॥೨೪॥

**ಪ್ರತಿಪದಾರ್ಥ :–**

**ಒಂದು ರೂಪದೊಳು** = ಶ್ರೀ ಪರಮಾತ್ಮನ ಅನಂತಾನಂತ ರೂಪ. ಸಮೂಹಗಳ ಪೈಕಿ ಒಂದು ರೂಪದಲ್ಲಿ **ಒಂದೊಂದು ಅವಯವದೊಳು** = ಕರಚರಣಾದ್ಯವಯವಗಳ ಪೈಕಿ, ಪ್ರತಿ ಅವಯವದಲ್ಲಿಯೂ, **ಒಂದು ರೋಮದಿ** = ಅನೇಕ ರೋಮಸಮೂಹಗಳಲ್ಲಿ ಒಂದು ರೋಮದಲ್ಲಿ **ಒಂದು ದೇಶದಿ** = ದೇಹಗತ ಒಂದು ಭಾಗದಲ್ಲಿ, **ಅಬುಜಾಂಡ** = ಬ್ರಹ್ಮಾಂಡಗಳು **ಅನಂತಾನಂತ ಕೋಟಿಗಳು** = ಅನಂತಾನಂತ ಕೋಟಿ ಸಂಖ್ಯೆಗಳಲ್ಲಿ **ಪೊಂದಿ ಇಪ್ಪವು** = ಒಂದಕ್ಕೊಂದು ನಿಬಿಡವಾಗಿ ಸೇರಿಕೊಂಡಿರುವುವು. **ಹಿಂದೆ** = ಪೂರ್ವದಲ್ಲಿ **ಒಂದು ರೂಪದಿ** = ಶ್ರೀ ಪರಮಾತ್ಮನ ಒಂದು ರೂಪದಲ್ಲಿಯೇ, **ಸೃಷ್ಟಿ ಪ್ರಳಯವ** = ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು **ಮಾರ್ಕಂಡೇಯ** = ಮಾರ್ಕಂಡೇಯ ಮುನಿಯು

**ಕಾಣನೆ**=ಕಾಣಲಿಲ್ಲವೇ ? **ಸದಾ** = ಅನಾದ್ಯನಂತ ಕಾಲಕ್ಕೂ (ಸರ್ವ ಕಾಲದಲ್ಲಿಯೂ) **ಅಪ್ರಮೇಯ**=ಯಾರಿಂದಲೂ ಸಾಕಲ್ಯೇನ ತಿಳಿಯಲು ಅಸಾಧ್ಯನಾದ ಅಪರಿಚ್ಛಿನ್ನ ಮಹಿಮೋಪೇತನಾದ **ಇಂದಿರೇಶನೊಳು**= ಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನಲ್ಲಿ **ಏನಿದಚ್ಚರಿ**= ಇದು ಏನು ಆಶ್ಚರ್ಯ ! ಅಂದರೆ ಏನೇನೂ ಆಶ್ಚರ್ಯವಲ್ಲವೆಂಬರ್ಥ ||೨೪||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಒಂದು ರೂಪದೊಳು-ಶ್ರೀ ಪರಮಾತ್ಮನ ಒಂದು ರೂಪದಲ್ಲಿರುವ, ಒಂದು ಅವಯುವದೊಳ್-ಕರಚರಣಾದಿ ಅವಯುವಗಳೊಳಗೆ, ಒಂದು-ಇದರೊಳಗಿರುವ ಅನೇಕ ರೋಮಗಳಿಗೆ ಒಂದಾದ, ರೋಮದೊಳೊಂದು-ರೋಮದೊಳಗೆ ವಿದ್ಯಮಾನವಾದ ವಿಸ್ತಾರವಾದ ಪ್ರದೇಶಗಳಲ್ಲಿ, ದೇಶದಿ-ಏಕದೇಶ ಪ್ರದೇಶದಲ್ಲಿ, ಅಬುಜಾಂಡ-ಈ ಬ್ರಹ್ಮಾಂಡದೋಪಾದಿಯಲ್ಲಿ ಬ್ರಹ್ಮಾಂಡಗಳು, ಅನಂತಾನಂತ ಕೋಟಿಗಳು-ಅನಂತಾನಂತ ಕೋಟಿಗಳು, ಹಾಂಗೆ ಅಂತ್ಯರಹಿತಗಳಾಗಿ, ಪೊಂದಿ ಇಪ್ಪ - ಹೊಂದಿಕೊಂಡು ಇರೋವಾಗಿ ಅವೆ. ಈ ಪ್ರಕಾರ ಅವೆ ಎಂಬುದಕ್ಕೆ ದೃಷ್ಟಾಂತವೇನೆಂದರೆ, ಒಂದು ರೂಪದಿ-ಸ್ರೀ ಪರಮಾತ್ಮನ ಒಂದು ರೂಪದಲ್ಲೇ ಹಿಂದೆ-ಪೂರ್ವದಲ್ಲಿ, ಸೃಷ್ಟಿ ಪ್ರಳಯವ-ಸೃಷ್ಟಿಯೇನು, ಸ್ಥಿತಿಯೇನು, ಪ್ರಳಯವೇನು. ಮಾರ್ಕಂಡೇಯ-ಇವು ಮೂರು ಮಾರ್ಕಂಡೇಯ ಋಷಿ. ಕಾಣನೆ-ಕಾಣಲಿಲ್ಲವೇ, ಎಂದರೆ, ನೋಡುವವನಾಗಿದ್ದಾನೆ. ಹ್ಯಾಂಗೆಂದರೆ ವಿದ್ಯಮಾನ ಬ್ರಹ್ಮಾಂಡ ಸ್ಥಿತಿಯಾಗಿ ಇರೋ ಕಾಲದಲ್ಲೇ ಪ್ರಳಯವನ್ನ, ಕಾಣೋವನಾಗಿ, ಆ ಪ್ರಳಯೋದಕದಲ್ಲಿ ತಾನು ಸಂಚರಿಸುತ್ತಾ, ವಟಪತ್ರಶಾಯಿ ನಾರಾಯಣ ದೇವರನ್ನು ಕಂಡು, ನಾಸಿಕಾದ್ವಾರದಿಂದ ಪರಮಾತ್ಮನ ಶ್ವಾಸದಿಂದ ಆಕರ್ಷಿತನಾಗಿ, ಪರಮಾತ್ಮನ ಉದರಪ್ರವೇಶನಾಗಿ,

ಅಲ್ಲಿ ಸ್ಥಿತಿ ಕಂಡು. ಪುನಶ್ಚ ಶ್ವಾಸದಿಂದ ನಾಸಿಕಾ ಮಾರ್ಗವಾಗಿ ಹೊರಗೆ ಬಂದು. ಪ್ರಳಯ ಕಂಡನಂತರ, ಆ ವಟಪತ್ರಶಾಯಿಯಿಂದ ಆದ ಸೃಷ್ಟಿಯ ಕಾಣೋವನಾಗಿದ್ದಾನೆ. ಆದ್ದರಿಂದ ಶ್ರೀ ಪರಮಾತ್ಮನ ಒಂದೊಂದು ರೋಮದಲ್ಲಿ ಅನಂತಾನಂತ ಬ್ರಹ್ಮಾಂಡಗಳು ಇರೋವಾಗಿ ಅವೆ. ಅಲ್ಲಲ್ಲಿ ಸೃಷ್ಟಿ, ಸ್ಥಿತ್ಯಾದಿಗಳು ಆಗತಾ ಇರೋವಾಗಿ ಅವೆ. ಆದ ಕಡೆಯಿಂದ ಶ್ರೀ ಪರಮಾತ್ಮ ಸದಾ–ಅನಾದ್ಯನಂತಕಾಲಕ್ಕೂ, ಅಪ್ರಮೇಯ – ಅಪರಿಚ್ಛಿನ್ನವಾದ ಅಂತರಹಿತವಾದ ಮಹಿಮೋಪೇತನಾದ್ದರಿಂದಲೇ, ರಮಾ ಬ್ರಹ್ಮಾದಿಗಳಿಂದ ಪರಮಾತ್ಮನ ರೂಪಗಳ, ತದ್ಗತ ಬ್ರಹ್ಮಾಂಡಗಳ ಸಾಕಲ್ಯೇನ ತಿಳಿಕೊಂಬೋದಕ್ಕೆ ಅಶಕ್ಯನಾದವ. ಇಂಥಾ ಮಹಿಮಾ ಉಳ್ಳ, ಇಂದಿರೇಶನೊಳು–ಲಕ್ಷ್ಮೀಪತಿಯಾದ ಶ್ರೀ ನಾರಾಯಣ ದೇವರಲ್ಲಿ ಈ ಪ್ರಕಾರ ಇರೋಣ ಎಂಬುದು, ಏನಿದಚ್ಚರಿ–ಇದು ಏನು ಆಶ್ಚರ್ಯ ? ಅಂದರೆ, ಆಶ್ಚರ್ಯವೇನೂ ಇಲ್ಲ ಎಂತ ತಾತ್ಪರ್ಯ. ||೨೪||

## (೨) "ಭಾವ ಪ್ರಕಾಶಿಕೆ"–ವ್ಯಾಖ್ಯಾನ :–

ಭಗವನ್ಮಹಿಮೆಯು ಅದ್ಭುತವೆಂದು ಅನುಭವದಿಂದ ತೋರಿಸುತ್ತಾರೆ. ಶ್ರೀ ಪರಮಾತ್ಮನ ಅನಂತಾನಂತರೂಪಗಳ ಪೈಕಿ, ಒಂದು ರೂಪದ, ಅನೇಕ ಅವಯುವಗಳ ಪೈಕಿ, ಒಂದವಯವದ, ಅನೇಕ ರೋಮಗಳ ಪೈಕಿ ಒಂದು ಭಾಗದ ಅನೇಕ ಕೋಟಿ ಬ್ರಹ್ಮಾಂಡಗಳು ಅಡಗಿರುವುವು. ಇದನ್ನು ಕಂಡವರಾರೆಂದರೆ, ಮಾರ್ಕಾಂದೇಯ ಋಷಿಗಳು ಪರಮಾತ್ಮನನ್ನು ಕುರಿತು ತಪಸ್ಸನ್ನು ಮಾಡಿ,–"ಸೃಷ್ಟಿ, ಸ್ಥಿತಿ, ಸಂಹಾರ ರೂಪವಾದ ನಿನ್ನ ಮಾಯೆಯನ್ನು ನೋಡಬೇಕು" – ಎಂದು ಬೇಡಲು, ಪ್ರಳಯವನ್ನು ಶ್ರೀಹರಿಯು ಮಾರ್ಕಾಂಡೇಯರಿಗೆ ತೋರಿಸಿದನು. ಪ್ರಳಯೋದಕದಲ್ಲಿ ವಟಪತ್ರದಲ್ಲಿ ಶಯನಮಾಡಿರುವ ಭಗವದ್ರೂಪವನ್ನು ಕಂಡು, ಎತ್ತಿಕೊಳ್ಳಲು ಸಮೀಪಕ್ಕೆ ಬರುತಿರಲು, ಆ ಶಿಶುರೂಪಿಯಾದ ಶ್ರೀಹರಿಯು ಶ್ವಾಸವನ್ನು ಸೆಳೆಯಲು, ಮಾರ್ಕಾಂಡೇ

ಯರು ಆ ಶಿಶುವಿನ ಮೂಗಿನ ದ್ವಾರದಿಂದ ಉದರ ಪ್ರವೇಶಮಾಡಿ, ಅದರಲ್ಲಿ ಬ್ರಹ್ಮಾಂಡ ಮೊದಲಾದ ಸಕಲ ಪ್ರಪಂಚವನ್ನೂ ಕಂಡಿರುವರು. ಆದುದರಿಂದ ಆ ಭಗವಂತನ ಮಹಿಮೆಯು ಅಂಚಿತ್ಯವಾದುದು. ಇಂತಹ ಅಂಚಿತ್ಯಸ್ವರೂಪಿಯಾಗ ಲಕ್ಷ್ಮೀಪತಿಯು ಮಾರ್ಕಾಂಡೇಯರಿಗೆ ಸೃಷ್ಟಿ ಪ್ರಳಯಾದಿಗಳನ್ನು ಒಂದೇ ರೂಪದಿಂದ ತೋರಿಸುವುದೇ ಮೊದಲಾದ ಈ ವ್ಯಾಪಾರಗಳು ಆಶ್ಚರ್ಯವೆನಲ್ಲ. ॥೨೪॥

(೩) **"ಭಾವದರ್ಪಣ ಟೀಕಾ" ವ್ಯಾಖ್ಯಾನ :–**

"ಒಂದೊಂದು ರೂಪೇತಿ"–

**"ಅಯುತಾಯುತ ವರ್ಷಾಣಾಂ ಸಹಸ್ರಾಣಿ ಶತಾನಿ ಚ ।**
**ವ್ಯತೀಯುಭ್ರಮತಸ್ತಸ್ಮಿನ್ವಿಷ್ಣುಮಾಯಾವೃತಾತ್ಮನಃ ॥**

**ಸ ಕದಾಚಿಭ್ರಮಂಸ್ತಸ್ಮಿನ್ ಪೃಥಿವ್ಯಾಃ ಕಕುದಿದ್ವಿಜಃ ।**
**ನ್ಯಗ್ರೋಧಪೋತಂ ದದೃಶೇ ಫಲಪಲ್ಲವ ಶೋಭಿತಮ್ ।**
**ಪ್ರಾಗುತ್ತರಸ್ಯಾ ಶಾಖಾಯಾಂ ತಸ್ಯಾಪಿ ದದೃಶೇ ಶಿಶುಮ್" ॥**

–ಇತ್ಯಾದಿ ಶ್ರೀಮದ್ಭಾಗವತ ದ್ವಾದಶದಲ್ಲಿ ಉಕ್ತವಾಗಿರುತ್ತದೆ. ಅಲ್ಲೇ ನೋಡತಕ್ಕದ್ದು. ॥೨೪॥

(೪) **ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–**

ಶ್ರೀ ಪರಮಾತ್ಮನು ಪರಮಾದ್ಭುತಚರಿತನು. ಅವನ ಒಂದೊಂದು ರೂಪ, ಅವಯವ, ಅದರ ಪ್ರದೇಶ, ರೋಮ, ಅವಕಾಶ—ಪ್ರತಿಯೊಂದು ಪರಿಪೂರ್ಣ. ಅದರಿಂದಲೇ ಪ್ರತಿಯೊಂದರಲ್ಲಿಯೂ ಅನಂತಾನಂತ ಬ್ರಹ್ಮಾಂಡ ಕೋಟಿಗಳು ತುಂಬಿಕೊಂಡಿವೆ. ಇದನ್ನು ಶ್ರೀ ಪರಮಾತ್ಮನು ಹಿಂದೆ ಮಾರ್ಕಾಂಡೇಯ ಮುನಿಗಳಿಗೆ ತೋರಿಸಿದನು. ಶ್ರೀಹರಿಯು

ಅಪ್ರಮೇಯನು. ಆ ಕಾರಣದಿಂದ ಅನಂತಾನಂತ ಬ್ರಹ್ಮಾಂಡ ಕೋಟಿಗಳು ಶ್ರೀ ಪರಮಾತ್ಮನಲ್ಲಿ ವಿದ್ಯಮಾನವಾಗಿರುವುದು ಆಶ್ಚರ್ಯದ ಸಂಗತಿ ಏನಲ್ಲ ! ॥೨೪॥

## (ಆ) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ಏಕರೂಪವೇ ಅನೇಕ ರೂಪವೆಂಬುದಕ್ಕೆ, ಮಾರ್ಕಾಂಡೇಯಾದ್ಯನೇಕ ಸಾಕ್ಷಿ ಸಿದ್ಧವೆಂದು ವ್ಯಾಪ್ತಿಮಹಿಮೆ (೨೮ ನೆಯ ಪದ್ಯದವರೆಗೆ) ಸ್ಮರಣೋಪಾಸನೆ ನಿರೂಪಿಸುತ್ತಾರೆ.

ಒಂದು ವಟಪತ್ರ ಶಯನರೂಪದಲ್ಲಿ, ಒಂದು ಉದರಾವಯವದಲ್ಲಿ, ಒಂದು ಜ್ಞಾನಾತ್ಮಕ ರೋಮದ ಒಂದು ಭಾಗದ ಪ್ರದೇಶದಲ್ಲಿ, ಅತೀತಾನಗತ ವರ್ತಮಾನ ಕಾಲಗತ, ಸೂಕ್ಷ್ಮಾನಂತಾನಂತ ಬ್ರಹ್ಮಾಂಡ ಕೋಟಿಗಳು ಸಂದಣಿಸಿ, ಎಂದರೆ, ಗುಂಪು ಗುಂಪಾಗಿ ತುಂಬಿಕೊಂಡಿರುವುವು. ಹೀಗೆ ಒಂದೇ ರೂಪದಲ್ಲಿ ಸೃಷ್ಟಿ, ಪ್ರಳಯ ಸಹ, ಮಾರ್ಕಾಂಡೇಯ ಋಷಿ ಕಾಣಲಿಲ್ಲವೇ ? ಎಂದರೆ, ಕಂಡಿದ್ದಾನೆ. ಆದ್ದರಿಂದ ಅಪ್ರಮೇಯ ಎಂಬ ತಿಳಿಯಲಶಕ್ಯವಾದ ಲಕ್ಷ್ಮೀಪತಿಯಲ್ಲಿ ಈ ಮಹಿಮೆ ಏನಚ್ಚರಿ ! ಅಂದರೆ ಆಶ್ಚರ್ಯವೇನೂ ಅಲ್ಲ. ಸದಾ ಅತ್ಯಂತ ಸಹಜವಾದದ್ದೇ ಎಂದರ್ಥ. ॥೨೪॥

## ಸರ್ವವ್ಯಾಖ್ಯಾನಸಾರಸಂಗ್ರಹ :

ಶ್ರೀ ಪರಮಾತ್ಮನ ಮಹಾಮಹಿಮೆಗಳು ಅಪಾರ. ಅಚಿಂತ್ಯಾದ್ಭುತ ಚರಿತನಾದ ಆ ಮಹಾಮಹಿಮನ ವ್ಯಾಪಾರ ವಿಶೇಷಗಳನ್ನು ಸಾಕಲ್ಯೇನ ಯಾರು ತಿಳಿಯಲಶಕ್ಯವೆಂದು, ಮಾರ್ಕಾಂಡೇಯ ಋಷಿಯ ದೃಷ್ಟಾಂತದಿಂದ

ನಿರೂಪಿಸುತ್ತಾರೆ. **"ಒಂದುರೂಪದೊಳು"**—ಎಂಬ ಪ್ರಸಕ್ತ ೨ಳ ನೆಯು ಈ ಪದ್ಯದಿಂದ.

ಪರಮಾದ್ಭುತಚರಿತನಾದ ಶ್ರೀ ಪರಮಾತ್ಮನ ಅನಂತಾನಂದ ರೂಪಗಳ ಪೈಕಿ, ಒಂದು ರೂಪದಲ್ಲಿ, ಆ ರೂಪದ ಅವಯುವಗಳಲ್ಲಿ, ಆ ಅವಯುವಗಳಲ್ಲಿ ಒಂದರ ರೋಮದಲ್ಲಿ, ಆ ರೋಮಪ್ರದೇಶದಲ್ಲಿ ಅನಂತಾನಂತ ಕೋಟಿ ಬ್ರಹ್ಮಾಂಡಗಳು ಅಡಕವಾಗಿ ಸಂದಣಿಸಿ ತುಂಬಿಕೊಂಡಿವೆ.

ಅಂತಹ ಅನಂತ ಕೋಟಿ ಬ್ರಹ್ಮಾಂಡಗಳ ಪೈಕಿ, ಒಂದು ಬ್ರಹ್ಮಾಂಡವನ್ನು ಮಾತ್ರ ಶ್ರೀ ಪರಮಾತ್ಮನು ಪ್ರತಿ ಬ್ರಹ್ಮಕಲ್ಪಾನಂತರ, ಮಹಾಪ್ರಳಯುದ ಅಂತ್ಯದಲ್ಲಿ ಸೃಷ್ಟಿಸುತ್ತಾನೆ.

**ಇದಕ್ಕೆ ಪ್ರಮಾಣ :–**

**"ಏಕಸ್ಮಿನ್ ಪರಕಾಲೇಷು ಏಕಮಂಡಂ ಜಗದ್ಗುರುಃ ।**
**ದಶಾವರಣ ಸಂಯುಕ್ತಂ ಸೃಜತ್ಯವತಿ ಹಂತ್ಯಜಃ ॥**
**ನೈಕದಾಜಾಂಡ ಬಹುಳಂ ಸೃಷ್ಟುಮಿಚ್ಛತಿ ಕೇಶವಃ ।"**

**–ಪ್ರಕಾಶಸಂಹಿತೆಯ ಪ್ರಮಾಣ-ಅಧ್ಯಾಯ (೩)**

ಒಂದೇ ರೂಪದಲ್ಲಿ ಅನಂತಕೋಟಿಬ್ರಹ್ಮಾಂಡನಾಯಕನಾದ ಶ್ರೀ ಪರಮಾತ್ಮನ ಉದರ ಪ್ರವೇಶಮಾಡಿ, ಸೃಷ್ಟಿ ಸ್ಥಿತಿ ಲಯಾದಿಗಳನ್ನು ಪ್ರತ್ಯಕ್ಷನಾಗಿ ಕಂಡ ಆ ಮಹಾ ಋಷಿಪುಂಗವ ಮಾರ್ಕಾಂಡೇಯನ ಚರಿತ್ರೆಯನ್ನು ಸದೃಷ್ಟಾಂತಪೂರ್ವಕ ವಿವರಿಸುತ್ತಾರೆ.

**ಮಾರ್ಕಾಂಡೇಯ ಚರಿತ್ರೆ :–**

ಇದು ಶ್ರೀಮದ್ಭಾಗವತದ ದ್ವಾದಶಸ್ಕಂಧದಲ್ಲಿ ಉಕ್ತವಾದ ಕಥಾ

ಪ್ರಸಂಗ. ಮಾರ್ಕಾಂಡೇಯನು ಮೃಕಂಡು ಋಷಿಯ ಪುತ್ರ. ಸಕಾಲದಲ್ಲಿ ಉಪನೀತನಾಗಿ, ಸಕಲವೇದಗಳನ್ನೂ ಅಧ್ಯಯನಮಾಡಿದನು. ಉಗ್ರ ತಪಸ್ಸನ್ನಾಚರಿಸಿದನು. ತಪಃಸ್ವಾಧ್ಯಾಯನಿರತನಾಗಿ, ಸಾವಿರಾರು ವರ್ಷಗಳು ಗತಿಸಿರಲು, ಶ್ರೀ ಹೃಷೀಕೇಶನ ಪರಮಾನುಗ್ರಹದಿಂದ ಮೃತ್ಯುವನ್ನೂ ಗೆದ್ದನು. ಆರು ಮನ್ವಂತರಗಳು ಕಳೆದವು. ನಿಶ್ಚಲನಾಗಿ ತಪೋನಿರತನಾಗಿದ್ದ ಆ ಉಗ್ರ ತಪಸ್ಸಿಗೆ ಹೆದರಿ, ಆ ಮನ್ವಂತರದ ಪುರಂದರನು. ಅವನ ತಪೋವಿಘ್ನವನ್ನುಂಟುಮಾಡಲು ಹವಣಿಸಿದನು. ಶ್ರೀಶಾನುಗ್ರಹ ಭಾಜನನಾಗಿದ್ದ ಜಿತಮರಣನಾಗಿದ್ದ ಆ ಮಾರ್ಕಾಂಡೇಯ ಮಹಾಮುನಿಗೆ ಯಾವ ರೀತಿಯಲ್ಲೂ ತಪಸ್ಸು ಭಂಗವಾಗಲಿಲ್ಲ. ನಿಶ್ಚಲನಾಗಿ ನಿರ್ವಿಕಾರನಾಗಿ ಸಮಾಧಿ ಸ್ಥಿತಿಯಲ್ಲಿದ್ದ ಮಾರ್ಕಂಡೇಯನ್ನ ಕಂಡು ಇಂದ್ರನು ಬೆದರಿದ. ಅಂತಹ ಋಷಿಪುಂಗವನಿಗೆ ನರನಿಂದ ಕೂಡಿ ಶ್ರೀ ನಾರಾಯಣರ್ಷಿಯು ತನ್ನ ದರ್ಶನ ಭಾಗ್ಯವನಿತ್ತನು. ಪರಮಾನಂದ ಭರಿತನಾದ ಆ ಮಹಾಮುನಿಯು ನರ ನಾರಾಯಣರನ್ನು ನಾನಾ ಪ್ರಕಾರ ಸ್ತೋತ್ರಗೈದು ಅವನ ಚರಣಕಮಲಗಳಿಗೆ ನಮಸ್ಕರಿಸಿದನು. ಆತನ ಅಗಾಧ ತಪಸ್ಸಿಗೆ ಮೆಚ್ಚಿದ ನರಸಖನಾದ ನಾರಾಯಣನು "ಬೇಕಾದ ವರವನ್ನು ಬೇಡು"– ಎಂದೆನಲು. ಚಿರಂಜೀವಿಯಾದ ಮಾರ್ಕಾಂಡೇಯನು ಅಂಜಲೀಬದ್ಧನಾಗಿ, ಆ ಜಗತ್ಪ್ರಭುವನ್ನು ಕುರಿತು ಹೀಗೆಂದನು.

"ಎಲೈ ಶರಣಾಗತ ರಕ್ಷಾಮಣಿಯೇ, ನಾಶರಹಿತ, ದೇವದೇವ ! ನಿನ್ನ ದರ್ಶನ ಭಾಗ್ಯಕ್ಕಿಂತಲೂ ಶ್ರೇಯಸ್ಕರವಾದ ವರವು ಮತ್ತ್ಯಾವುದಿದೆ ? ಆದರೂ ಅಘಟಘಟಕ ಶಕ್ತನಾದ ನಿನ್ನ ದಿವ್ಯ ಪ್ರಳಯಶಕ್ತಿಯನ್ನು ನೋಡಬೇಕೆಂಬ ಹಂಬಲ ನನಗೆ ಬಹಳವಾಗಿದೆ. ಅದರಿಂದ ನಿನ್ನ ಜಗದ್ವಿಲಕ್ಷಣ ಮಹಿಮೆಯು ಮನಃ ಪಟಲದಲ್ಲಿ ಶಾಶ್ವತವಾಗಿ ನಿಲ್ಲುವುದು. ಅದನ್ನು ತೋರು ಹೇ ಮಹಿಮಾಸಂಪನ್ನ ! "ಎಂದು ಬೇಡಿಕೊಂಡನು. "ತಥಾಸ್ತು"- ಎಂದು ವರವನ್ನು ದಯಪಾಲಿಸಿ, ನಾರಾಯಣನು ಬದರಿಕಾಶ್ರಮಕ್ಕೆ ಹೊರಟು ಹೋದನು. ಆ ಋಷಿಯು ಭಗವದ್ಧ್ಯಾನ ನಿರತನಾಗಿ, ಅಸಂಪ್ರಜ್ಞಾತ ಸಮಾಧಿಯಲ್ಲಿದ್ದಾಗ, ಒಂದು ದಿನ ಸಂಧ್ಯಾಕಾಲದಲ್ಲಿ ಇದ್ದಕ್ಕಿದ್ದಂತೆ ಬಿರು

ಗಾಳಿ ಚಂಡವೇಗದಿಂದ ಬೀಸಲಾರಂಭಿಸಿತು. ಮೇಘ ಪಟಲವು ನಿಬಿಡವಾಗಿ ಕಾರ್ಗತ್ತಲೆ ಕವಿದು, ಧಾರಾಕಾರವಾಗಿ ಮಳೆ ಬೀಳಲು ಆರಂಭಿಸಿತು. ಸಮುದ್ರಗಳು ಉಕ್ಕೇರಿ ಮೊರೆದವು. ಭೂಮಿಯನ್ನು ನುಂಗಿದ ಸಮುದ್ರವು ಅಂತರಿಕ್ಷಕ್ಕೆ ನಾಲಿಗೆಯನ್ನು ಚಾಚಿ, ಉಕ್ಕೇರಿ ಋಷಿಯ ಆಶ್ರಮವನ್ನು ಕೊಚ್ಚಿಹಾಕಿತು. ಕ್ಷಣಾರ್ಧದಲ್ಲಿ ಮೃಕಂಡು ಪುತ್ರನು, ಸಮುದ್ರದ ತರಂಗಗಳಿಂದ, ತೇಲುತ್ತಾ, ಮುಳುಗುತ್ತಾ, ಭಯ ಭ್ರಾಂತನಾಗಿ ಆ ಜಲ ಪ್ರಳಯದಲ್ಲಿ ಹೋಗುತ್ತಿದ್ದಾನೆ. ಕತ್ತಲು ಕವಿದಿದೆ. ದಿಕ್ಕಿನ ಜ್ಞಾನವಿಲ್ಲ. ಇಂತು, ಆ ಮುನಿವರನು ಸಾವಿರಾರು ವರ್ಷಗಳ ಕಾಲವನ್ನು ಕಳೆದನು. ಶ್ರೀಹರಿಯ ಮಹಿಮೆಯಿಂದ ಸೃಷ್ಟವಾದ ಆ ಪ್ರಳಯವನ್ನು ನೋಡುತ್ತಿದ್ದ ಋಷಿವರ್ಯನಿಗೆ ಸಮುದ್ರಮಧ್ಯದಲ್ಲಿ ಒಂದು ದ್ವೀಪ, ಅಲ್ಲಿ ಒಂದು ಆಲದಮರ, ಅದರ ಈಶಾನ್ಯಭಾಗ್ಯದ ರೆಂಬೆ, ಆ ರೆಂಬೆಯ ಮೇಲೆ ಒಂದು ಸುಂದರ ಶಿಶುವು ಮಲಗಿದೆ. ಅತ್ಯಂತ ಕಾಂತಿಯುಕ್ತವಾದ ದೇಹದಿಂದ ಪ್ರಕಾಶಿಸುತ್ತಾ, ಬಲಗಾಲಿನ ಹೆಬ್ಬೆರಳನ್ನು ಕರಾರವಿಂದಗಳಿಂದೆತ್ತಿ, ಮುಖಾರವಿಂದದಲ್ಲಿಟ್ಟು ಚೀಪುತ್ತಿರುವ ಆ ದಿವ್ಯರೂಪನ್ನ ನೋಡಿ ಪರಮಾನಂದ ಆಶ್ಚರ್ಯ ಸಂಭ್ರಮದಿಂದ ಆ ಶಿಶುವನ್ನು ಸಮೀಪಿಸಿದ ಮಾರ್ಕಾಂಡೇಯ. ಆ ಶಿಶುವು ಉಸಿರನ್ನ ಒಳಗೆ ಎಳೆದುಕೊಂಡಿತು. ಅದರ ಶ್ವಾಸದ ವೇಗದಿಂದ ಆಕರ್ಷಿತನಾಗಿ, ಆ ಮುನಿವರ ನಾಸಿಕಾದ್ವಾರದ ಮೂಲಕ ಆ ಶಿಶುವಿನ ಉದರವನ್ನು ಪ್ರೇವೇಶಿಸಿದ. ಅಲ್ಲಿ ಆತ ಕಂಡದ್ದೇನು! ಸಮಸ್ತ ವಿಶ್ವವನ್ನೂ ಆ ಉದರ ಪ್ರದೇಶದಲ್ಲಿ ನೋಡಿದ. ಆಗ ಆಶ್ಚರ್ಯದಿಂದ ದಿಗ್ಭ್ರಾಂತನಾಗಿ ನೋಡುತ್ತಿರಲು, ಆ ಶಿಶುವು ಉಸಿರನ್ನು ಹೊರಗೆ ಬಿಟ್ಟಿತು. ಆಗ ಆ ತಪೋಧನನು ನಾಸಿಕಾ ದ್ವಾರಾ ಪುನಃ ಹೊರಗೆ ಬಂದು, ಸಮುದ್ರದಲ್ಲಿ ಬಿದ್ದನು. ಅದೇ ರೂಪನ್ನು ಸಮೀಪಿಸಿ, ಆಲಂಗಿಸಬೇಕೆಂದು ಹವಣಿಸಿದನು. ಆಗ ಪರಮಾದ್ಭುತ ಚರಿತನಾದ ಆ ಶಿಶುರೂಪಿ ಶ್ರೀ ಪರಮಾತ್ಮನು ತಾನು ಸೃಜಿಸಿದ ಪ್ರಳಯವನ್ನು ಇಂದ್ರಜಾಲದಂತೆ ಅತಿ ಶೀಘ್ರವಾಗಿ ಉಪಸಂಹರಿಸಿ, ತಾನು ಅದೃಶ್ಯನಾದನು. ಇಂತು. ಒಂದೇ ರೂಪದಿಂದ ಸೃಷ್ಟಿ ಸ್ಥಿತಿ ಪ್ರಳಯಾದಿಗಳನ್ನು ಪ್ರತ್ಯಕ್ಷ ರೂಪದಲ್ಲಿ ನೋಡಿದ ಮಹಾತ್ಮ ಮಾರ್ಕಾಂಡೇಯ ಮಹಾ ಮುನಿ!

ಹೀಗೆ ಪೂರ್ವದಲ್ಲಿ ಮಾರ್ಕಾಂಡೇಯನಿಗೆ ತನ್ನ ಪರಮಾದ್ಭುತ ಲೀಲಾ ವಿಲಾಸಗಳನ್ನು ಪ್ರತ್ಯಕ್ಷವಾಗಿ ತೋರಿಸಿದ ಆ ಪರಮಾತ್ಮನು **ಅಪ್ರಮೇಯನು.** ಅಂದರೆ ಆತನ ಗುಣ ರೂಪ ಕ್ರಿಯಾದಿ ವಿಶೇಷಗಳನ್ನು ಯಾರು ಸಾಕಲ್ಯೇನ ಅರಿಯಲಾರರು. ಅಂತಹ ಅಪ್ರಮೇಯನಾದ ಶ್ರೀ ಪರಮಾತ್ಮನು ಲಕ್ಷ್ಮೀ ರಮಣನು. ಆ **ಇಂದಿರೇಶನಲ್ಲಿ** ಒಂದು ರೂಪದಲ್ಲಿ, ಒಂದೊಂದು ಅವಯವದಲ್ಲಿ, ರೋಮಕೂಪ ಪ್ರದೇಶದಲ್ಲಿ ಇಂತಹ ಅನಂತಾನಂತ ಬ್ರಹ್ಮಾಂಡ ಕೋಟಿಗಳು **ಪೊಂದಿಕೊಂಡಿರುವುದು ಏನಚ್ಚರಿ !** ಅಂದರೆ ಆಶ್ಚರ್ಯವೇನೂ ಇಲ್ಲ ಎಂಬುದೇ ಪ್ರಸಕ್ತಪದ್ಯದ ತಾತ್ಪರ್ಯಾರ್ಥವು. ॥೨೪॥

## ಪದ್ಯ (೨೫)

**ಮೂಲ :–**

**ಒಂದನಂತಾನಂತ ರೂಪಗ ।**
**ಳೊಂದು ರೂಪದೊಳಿಹವು ಲೋಕದೊ ।**
**ಳೊಂದೆರೂಪದಿ ಸೃಷ್ಟಿ ಸ್ಥಿತಿ ನೊದಲಾದ ವ್ಯಾಪಾರ ॥**
**ಒಂದೆ ಕಾಲದಿ ಮಾಡಿ ತಿಳಿಸದೆ ।**
**ಸಂದಣಿಸಿಕೊಂಡಿಪ್ಪ ಜಗದೊಳು ।**
**ನಂದನಂದನ ರಣದೊಳಿಂದ್ರಾತ್ಮಜಗೆ ತೋರಿಸನೆ ॥ ॥೨೫॥**

**ಅವತರಣಿಕೆ :—**

ಶ್ರೀ ಪರಮಾತ್ಮನ ಮಹಿಮೆ ಅಗಾಧ, ಪರಮಾಶ್ಚರ್ಯಭರಿತವೆಂದು

ತಿಳಿಸುತ್ತಾರೆ "**ಒಂದನಂತಾನಂತ**"– ಎಂಬ ಪ್ರಸಕ್ತ ಸಂಧಿಗತ ಈ ೨೫ನೆಯ ಪದ್ಯದಿಂದ.

ಪರಮಾದ್ಭುತಚರಿತನಾದ ಆ ಪರಮಾತ್ಮನ ಒಂದೊಂದು ರೂಪದಲ್ಲಿ ಅನಂತಾನಂತ ರೂಪಗಳು ಅಡಕವಾಗಿವೆ. ಅಂತೆಯೇ ಅನಂತಾನಂತ ರೂಪಗಳು ಒಂದೇ ರೂಪದಲ್ಲಿ ಸಂದಣಿಸಿಕೊಂಡಿವೆ. ಹೀಗೆ ಸಮಸ್ತರಲ್ಲಿಯೂ ತಾನು ಅಂತರ್ಯಾಮಿಯಾಗಿದ್ದು. ಬಹುರೂಪಗಳಿಂದ ವ್ಯಾಪ್ತನಾಗಿ, ತನ್ನಲ್ಲಿ ಸಮಸ್ತ ಚರಾಚರಾತ್ಮಕವಾದ ಲೋಕಗಳನ್ನು ಧರಿಸಿದ್ದಾನೆ. ಇದರಿಂದಲೇ ಈಶನು ಜೀವ ಜಡವರ್ಗಗಳಿಂದ ಅತ್ಯಂತ ಭಿನ್ನನು ಎಂದು ತಿಳಿದು ಬರುವುದು. ಇದೇ ಜಗದ್ವಿಲಕ್ಷಣನಾದ ಆ ಪರಮಾತ್ಮನ ಪರಮ ಮಹಿಮೋಪೇತ ವ್ಯಾಪಾರ ವಿಶೇಷಗಳು. ಒಂದೇ ರೂಪದಿಂದ ಬ್ರಹ್ಮನಲ್ಲಿ ವಿದ್ಯಮಾನನಾಗಿದ್ದು ಜಗತ್ತಿನ ಸೃಷ್ಟಿಯನ್ನು, ಸ್ವಯಂ ವಿಷ್ಣುರೂಪದಿಂದ ಶಿಕ್ಷಣಾಕಾರ್ಯವನ್ನೂ ಮತ್ತು ಮಹರುದ್ರದೇವರ ಅಂತಸ್ಥಿತನಾಗಿ ಪ್ರಳಯಾದಿ ಲಯ ಕ್ರಿಯೆಯನ್ನೂ ಲೀಲಾಜಾಲವಾಗಿ, ಅತ್ಯಂತ ನಿರಾಯಾಸದಿಂದ ಎಸಗುತ್ತಿರುವನು. ಸೃಷ್ಟ್ಯಾದೃಷ್ಟಕರ್ತೃವಾದ ಅಚಿಂತ್ಯಾದ್ಭುತಶಕ್ತನಾದ ಆ ಜಗತ್ಪ್ರಭುವು ಒಂದೇ ಕಾಲದಲ್ಲಿ, ಅನಂತಾನಂತ ರೂಪಗುಣಕ್ರಿಯಾವಿಶಿಷ್ಟವಾಗಿ. ಒಂದೇ ರೂಪನಿಂದ ಸಕಲ ಜಗದ್ವ್ಯಾಪಾರಗಳನ್ನು ತಾನೇ ಸರ್ವತಂತ್ರ ಸ್ವತಂತ್ರನಾಗಿ ನಿರ್ವಹಿಸುತ್ತಿದ್ದರೂ, ಅವ್ಯಕ್ತನಾಗಿಯೇ ಇದ್ದಾನೆ. ತನ್ನ ಇರವನ್ನು ತೋರಗೊಡದೆ ಜಗದ್ವ್ಯಾಪಾರ ಕರ್ತೃವಾದ ಆ ಕೃಷ್ಣರೂಪಿ ಪರಮಾತ್ಮನು ಶ್ರೀಮನ್ಮಹಾಭಾರತ ಯುದ್ಧದಲ್ಲಿ ತನ್ನ ವಿಶ್ವರೂಪವನ್ನು ಇಂದ್ರಾತ್ಮಜನಾದ ಅರ್ಜುನನಿಗೆ ತೋರಿಸಿ, ಲೋಕಗಳ ಸೃಷ್ಟಿ, ಸ್ಥಿತಿ, ಲಯಾದಿ ಸಮಸ್ತ ಕ್ರಿಯಾವಿಶೇಷಗಳಿಗೂ ತಾನೇ ಮುಖ್ಯ ಕರ್ತೃವೆಂದು ವಿಶ್ವರೂಪದರ್ಶನ ದ್ವಾರಾ ಉದಪೇಶಿಸಿ, "**ನಿಮಿತ್ತಮಾತ್ರಂ ಭವ ಸವ್ಯಸಾಚಿನ್**"– ಎಂದು ಆವನ ಕರ್ತವ್ಯಪ್ರಜ್ಞೆಯನ್ನು ಜಾಗ್ರತಗೊಳಿಸಿದ್ದಾನೆ. ಆ ಗೀತಾಚಾರ್ಯ ಯಾದವಕುಲಭೂಷಣ ಶ್ರೀಕೃಷ್ಣ! ॥ ೨೫॥

**ಪ್ರತಿಪದಾರ್ಥ :-**

**ಒಂದು** = ಶ್ರೀ ಪರಮಾತ್ಮನ ಒಂದು ರೂಪವು, **ಅನಂತಾನಂತ ರೂಪಗಳು** = ಅನಂತಾನಂತವಾದ (ಅಗಣಿತ) ರೂಪಗಳಿಂದ ಯುಕ್ತವಾಗಿದೆ. **ಒಂದು ರೂಪದೊಳು** = ಪ್ರತಿಯೊಂದು ರೂಪದಲ್ಲಿಯೂ **ಲೋಕಗಳು** = ಅನಂತಾನಂತ ಬ್ರಹ್ಮಾಂಡಗಳು **ಇಹವು** = ಘಟಕವಾಗಿ ಇವೆ. **ಒಂದೇ ರೂಪದಿ** = ಒಂದೇ ರೂಪದಲ್ಲಿ **ಸೃಷ್ಟಿ** = ಬ್ರಹ್ಮಾಂಡದ ಸೃಷ್ಟಿ (ಅಭಿವ್ಯಕ್ತಿ) **ಸ್ಥಿತಿ** = ಪಾಲನಾ ಕಾರ್ಯ **ಮೊದಲಾದ** = ಇವೇ ಮುಂತಾದ ಅಂದರೆ, ಲಯ, ನಿಯಮ, ಜ್ಞಾನ, ಅಜ್ಞಾನ, ಬಂಧ, ಮತ್ತು ಮೋಕ್ಷ, ಎಂಬ ಅಷ್ಟವಿಧವಾದ **ವ್ಯಾಪಾರ** = ಕ್ರಿಯಾ ವಿಶೇಷಗಳು (ಲೀಲೆಗಳನ್ನು) **ಒಂದೇ ಕಾಲದಿ** = ಏಕಕಾಲದಲ್ಲಿ ಅಂದರೆ, ಏಕಕಾಲಾವಚ್ಛೇದೇನ **ಮಾಡಿ** = ತಾನೇ ಸರ್ವಸ್ವತಂತ್ರನಾಗಿ ನಿರ್ವಹಿಸುತ್ತಾ, **ತಿಳಿಸದೆ** = ತನ್ನ ಕರ್ತೃತ್ವ ವೈಶಿಷ್ಟ್ಯವನ್ನು ಯಾವ ಜೀವರಿಗೂ ತಿಳಿಸದೆಲೆ, **ಜಗದೊಳು** = ಚರಾಚರಾತ್ಮಕವಾದ ಈ ಬ್ರಹ್ಮಾಂಡಾದ್ಯಂತ **ಸಂದಣಿಸಿ ಕೊಂಡಿಪ್ಪ** = ಪರಿಪೂರ್ಣನಾಗಿ ಬಿಡದೆ ವ್ಯಾಪಿಸಿ ಕೊಂಡಿದ್ದಾನೆ. **ನಂದನಂದನ** = ನಂದಗೋಪನ ಮಗನಾದ ಶ್ರೀ ಕೃಷ್ಣನು **ಇಂದ್ರಾತ್ಮಜಗೆ** = ಇಂದ್ರಪುತ್ರನಾದ ಅರ್ಜುನನಿಗೆ **ರಣದೊಳು** = ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ **ತೋರಿಸನೆ** = ಪರಮಾದ್ಭುತವಾದ ತನ್ನ ವಿಶ್ವರೂಪವನ್ನು ತೋರಿಸಲಿಲ್ಲವೇ ? ॥೨೫॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಅನಂತಾನಂತ ಬ್ರಹ್ಮಾಂಡಗಳು ಸೃಷ್ಟಿ, ಲಯ ಕ್ರಮವೂ ಅನಂತಾನಂತ ಬ್ರಹ್ಮಾಂಡಗಳೂ ಸತ್ಯ ಎಂತಲೂ ಹೇಳುತ್ತಾರೆ.

ಒಂದು- ಶ್ರೀ ಪರಮಾತ್ಮನ ಒಂದು ರೂಪ ಎಂಬುದು, ಅನಂತಾನಂತ ರೂಪಗಳು-ಆನಂತಾನಂತ ರೂಪಗಳಿಂದ ಯುಕ್ತವಾಗಿ ಅವೆ. (ನವನಾರೀ ಕುಂಜರವತ್) (ಮುಂದಿನ ಪದ್ಯದಲ್ಲಿ ಹೇಳುತಾರೆ). ಒಂದು ರೂಪದೊಳು-ಅನಂತಾನಂತ ಬ್ರಹ್ಮಾಂಡಗಳೇನು, ಲೋಕದೊಳು, ಒಂದೊಂದು ಬ್ರಹ್ಮಾಂಡದಲ್ಲಿ, ವೈಕುಂಠಾದಿ ಅಂಧಂತಮಸ್ಸು ಅಂತವಾಗಿ ಹದಿನಾರು ಲೋಕಗಳು, ಅದನ್ನನುಸರಿಸಿದ, ಬ್ರಹ್ಮಾದಿ ತೃಣಾಂತ ವಿವಿಧ ಜೀವರು, ಇನ್ನೂ ಅನೇಕ ಜಡಗಳು, ಇಹವು-ಇರೋವಾಗಿ ಆವೆ. ಒಂದೇ ರೂಪದಿ- ಒಂದೇ ರೂಪದಲ್ಲಿ ವಿದ್ಯಮಾನವಾದ ಒಂದು ಕಾಲದಿ-ಏಕಕಾಲಾವಚ್ಛೇದೇನ ಭಿನ್ನಭಿನ್ನಗಳಾದ ಅನಂತಾನಂತ ಬ್ರಹ್ಮಾಂಡಗಳ ಧರಿಸಿದ್ದಾನೆ ಎಂತ ಅರ್ಥ. ಸೃಷ್ಠಿ, ಸ್ಥಿತಿ, ಮೊದಲಾದ ವ್ಯಾಪಾರ-ಆಯಾ ಬ್ರಹ್ಮಾಂಡಗಳಲ್ಲಿ ಅಲ್ಲಲ್ಲಿ ಇರತಕ್ಕ ರೂಪಗಳಿಂದ ಜೀವರ ಸೃಷ್ಟಿಯೇನು, ಪಾಲನ, ಸಂಹಾರ ಮೊದಲಾದ ವ್ಯಾಪಾರ ಆಯಾ ಜೀವರಿಗೆ ಅಲ್ಲಲ್ಲೇ ಮೋಕ್ಷ. ಇನ್ನೂ ಅವತಾರ ರೂಪಗಳಿಂದ ದುಷ್ಟರಾಕ್ಷಸರ ಸಂಹಾರ ಮೊದಲಾದ ಅನೇಕ ಕಾರ್ಯಗಳಿಂದ, ಮಾಡಿ-ಅಲ್ಲಲ್ಲಿ ಇದ್ದವನಾಗಿ ಮಾಡಿ, ತಿಳಿಸದೆ-ಒಂದು ಬ್ರಹ್ಮಾಂಡದಲ್ಲಿ ತಾನು ಮಾಡತಕ್ಕ ವ್ಯಾಪಾರ ಮತ್ತೊಂದು ಬ್ರಹ್ಮಾಂಡಗತ ಬ್ರಹ್ಮಾದಿ ಜೀವರಿಗೆ ತಿಳಿಸದೆ. ಜಗದೊಳು- ಆಯಾ ಬ್ರಹ್ಮಾಂಡಗಳಲ್ಲಿ ತದ್ಗತ ಲೋಕಗಳಲ್ಲಿ, ತದ್ಗತ ಪ್ರಾಣಿಗಳಲಿ, ಜಡಗಳಲ್ಲಿ, ಜಡಜೀವನಗಳಲ್ಲಿ, ಸಂದಣಿಸಿಕೊಂಡಿಪ್ಪ ಛಂದಾಗಿ ಪೂರ್ಣವಾಗಿ ವ್ಯಾಪ್ತನಾಗಿ ಇರೋವನಾಗಿದ್ದಾನೆ. ಈ ಪ್ರಕಾರ ಇರೋದಾಗಿ ಅದೆ ಎಂಬೋದಕ್ಕೆ ದೃಷ್ಟಾಂತವೇನೆಂದರೆ, ನಂದನಂದನ-ನಂದಗೋಪಗೆ ಮಗನಾದ ಶ್ರೀ ಕೃಷ್ಣದೇವರು, ರಣದೊಳು- ಭಾರತ ಯುದ್ಧ ರಂಗದಲ್ಲಿ, ಇಂದ್ರಾತ್ಮಜಗೆ-ಅರ್ಜುನನಿಗೆ, ತೋರಿಸನೆ-ತನ್ನ ವಿಶ್ವ ರೂಪವನ್ನು ತೋರಿಸನೆ.

**ವಿಶೇಷಾರ್ಥ :—**

ಅನಂತಾನಂತ ರೂಪಗಳೂನೂ ಒಂದೊಂದು ಅನಂತಾನಂತ ರೂಪಗಳಿಂದ ನವನಾರೀಕುಂಜರವತ್ ಇರೋದಾಗಿ ಅದೆ. ಈ ಪ್ರಕಾರ ಅದ್ಯಂತ ಶೂನ್ಯಗಳಾಗಿ ಅದೆ. ಪರಮಾತ್ಮನ ಮಹಿಮಾ ಅಪರಿಚ್ಛಿನ್ನಗಳು ಹ್ಯಾಂಗೋ, ರೂಪಗುಣಗಳೂ ಅಪರಿಚ್ಛಿನ್ನಗಳೇ. ರೋಮಾದಿ ಸರ್ವ ಅವಯುವಗಳು ಇದೇ ಪ್ರಕಾರವಪೆ. ರೋಮಾದಿ ಸರ್ವ ಅವಯುವಗಳಲ್ಲಿ ಒಂದೊಂದರಲ್ಲಿ ಕರಚರಣಾದಿ ಸರ್ವ ಅವಯುವಗಳೂ ಇರೋವಾಗಿ ಸಾಕಾರಗಳಾಗಿ ಅವೆ. **"ಸರ್ವತಃ ಪಾಣಿಪಾದಾಭ್ಯಾಂ"**- ಎಂಬ ಪ್ರಮಾಣವೂ. ರೋಮವೇನು, ರೋಮಕೂಪಳೇನು, ಸರ್ವವೂ ಪೂರ್ಣಮಹಿಮೋಪೇತವಾದದ್ದು, ಅಭಿನ್ನಗಳಾದದ್ದು. **"ರೋಮಃ ಪೂರ್ಣೋ ರೋಮಕೂಪಶ್ಚ ಪೂರ್ಣಃ"** –ಎಂತ ಪ್ರಮಾಣವೂ, ಈ ಪ್ರಕಾರ ಅಖಂಡರೂಪದಿಂದ ಅಪರಿಚ್ಛಿನ್ನ ವ್ಯಾಪ್ತನಾಗಿ ಮತ್ತು ಖಂಡರೂಪದಿಂದ ಖಂಡಖಂಡಗಳಾದ ಅಧಿಷ್ಠಾನಗಳಲ್ಲಿ ವ್ಯಾಪ್ತನಾಗಿದ್ದಾನೆ. ಇಂಥಾ ಅನಂತಾನಂತ ರೂಪವುಳ್ಳವನು ಶ್ರೀ ಪರಮಾತ್ಮನು ಎಂತ ತಿಳಿಯಬೇಕು.

ತನ್ನ ವಿಶ್ವರೂಪದಲ್ಲಿ ಭಾರತ ಯುದ್ಧವನ್ನು, ಹ್ಯಾಂಗೆ ಯಶೋದಾದೇವಿಗೆ ತನ್ನ ಮುಖದಲ್ಲಿ ನವಾರಣಸಹಿತ ಬ್ರಹ್ಮಾಂಡವ ತೋರಿಸೋವವನಾಗಿದ್ದಾನೆ. ವಿದ್ಯಮಾನ ಬ್ರಹ್ಮಾಂಡ ಸ್ಥಿರವಾಗಿ ಇರಲಾಗಿ, ತದನ್ಯಗಳ ತೋರಿಸಿದ್ದಾನೆ. ಆದ್ದರಿಂದ ಅನಂತಾನಂತ ಬ್ರಹ್ಮಾಂಡಗಳು ಶ್ರೀ ಪರಮಾತ್ಮ ಧರಿಸಿದ್ದಾನೆ ಎಂಬುವುದು. ಅತ ಏವ ಶ್ರೀಪರಮಾತ್ಮ "ಅಪ್ರಮೇಯ"– ಎಂತ ತಾತ್ಪರ್ಯ.

**ಪ್ರಮಾಣ :—**

**"ಏಕಸ್ಮಿನ್ ಪರಕಾಲೇತು ಏಕಮಂಡಂ ಜಗತ್ ಪ್ರಭುಃ ।**
**ನ ತತೋ ಽನ್ಯೇಽಜಾಂಡ ಬಹುಳಂ ಸ್ರಷ್ಟುಮಿಚ್ಛತಿ ಕೇಶವಃ ॥"**

–ಎಂಬ ಪ್ರಮಾಣಾನುಸಾರ ಅನಂತಬ್ರಹ್ಮಾಂಡಗಳು ಏಕಕಾಲಾವಚ್ಛೇದೇನ ಸೃಷ್ಟಿ ಮಾಡೋದಿಲ್ಲ ಎಂತ ತೋರತದೆ. ತಾತ್ಪರ್ಯವೇನೆಂದರೆ, ಪೂರ್ವದಲ್ಲಿ ಬ್ರಹ್ಮಾಂಡ ಸೃಷ್ಟಿಮಾಡಿದ ಸ್ಥಳದಲ್ಲಿ, ಪುನಶ್ಚ ಅದೇ ಸ್ಥಳದಲ್ಲಿ ಪೂರ್ವದ ಮ್ಯಾರಿಗೆ ಒಂದು ಬ್ರಹ್ಮಾಂಡ ಸೃಷ್ಟಿಮಾಡತಾನೇ ಹೊರತು, ಅಲ್ಲಿ ಅನಂತ ಬ್ರಹ್ಮಾಂಡಗಳ ಸೃಷ್ಟಿ ಮಾಡೋದಿಲ್ಲ ಎಂತ ತಾತ್ಪರ್ಯ.

"ವಾಮಪಾದಾಂಗುಷ್ಠನಖಭಿನ್ನ ಬ್ರಹ್ಮಾಂಡ ಮಸ್ತಕೇ ।
ಶ್ರೀ ವಾಮನಸ್ಯ ವಿವರೇ ಬ್ರಹ್ಮ ದ್ರವ ಸಮಾಕುಲೇ ॥೧೦॥

ಜಲಯಾನೇನ ಮಾರ್ಗೇಣ ಬಹಿಸ್ತೇ ನಿರ್ಯಯುಃ ಸುರಾಃ ।
ಕಲಿಂಗ ಬಿಂಬವಚ್ಛೇದಂ ಬ್ರಹ್ಮಾಂಡಂ ದದೃಶುಸ್ತ್ವಧಃ ॥೧೧॥

ಇಂದ್ರಾಯಣ ಫಲಾನೀವ ಉಶ್ಯಂತ್ಯನ್ಯಾನಿ ವೈಜಲೇ ।
ವಿಲೋಕ್ಯ ವಿಸ್ಮಿತಾಃ ಸರ್ವೇ ಬಭೂವುತ್ಪತಿತಾ ಇವ ॥೧೨॥

ಕಸ್ಯಾಂಡಾಧಿಪಾ ದೇವಾ ಯೂಯಂ ಸರ್ವೇ ಸಮಾಗತಾಃ ।
ವದತಾಶು ಗಮಿಷ್ಯಾಮಿ ತಸ್ಮೈ ಭಗವತೇ ಹ್ಯಹಮ್ ॥೧೩॥

ದೇವಾ ಊಚುಃ ॥

• ಅಹೋ ಅಂಡಾನ್ಯತಾನ್ಯಾನಿ ನಾಸ್ಮಾಭಿಃ ದರ್ಶಿತಾನಿ ಚ ।
ಏಕಮಂಡಂ ಪ್ರಜಾನೀಮೋಽಥೋಽಪರಂ ನಾಸ್ತಿ ನಃ ಶುಭೇ ॥೨೫॥

ಶ್ರೀ ಚಂದ್ರಾನನೋವಾಚ ॥

ಬ್ರಹ್ಮದೇವ ಲುಠಂತೀಹ ಕೋಟಿಶೋ ಹ್ಯಂಡ್‌ರಾಶಯಃ ।
ತೇಷು ಯೂಯಂ ಯಥಾ ದೇವಾಸ್ತಥಾಂಡೇಽಂಡೇ ಪೃಥಕ್ ಪೃಥಕ್' ॥೨೬॥

ಬ್ರಹ್ಮಾಂಡನ್ಯೇಕಂ ಜಾನಂತಿ ಯತ್ರ ಜಾತಾಸ್ತಥಾ ಜನಾಃ ।
ಮಶಕಾಶ್ಚ ಯಥಾಂತಸ್ಥಾ ಔದುಂಬರ ಫಲೇಷು ವೈ ॥೨೮॥

ಶ್ರೀ ವಿಷ್ಣುರುವಾಚ ॥

ಯಸ್ಮಿನ್ನಂಡೇ ಪ್ರಶ್ರಿಗರ್ಭೋಽವತಾ ರೋಭೂತ್ಸನಾತನಃ ।
ತ್ರಿವಿಕ್ರಮ ನಖೋದ್ಭಿನ್ನೇ ತಸ್ಮಿನ್ನಂಡೇ ಸ್ಥಿತಾವಯಮ್ ॥೩೦॥

ಬ್ರಹ್ಮಾವೈವರ್ತಪುರಾಣೇ ಅಷ್ಟಾದಶೋಧ್ಯಾಯಃ ॥೧೮॥

ಸೋಽಪಿ ಪುನರ್ನಮಶ್ಚಕ್ರೇ ತಸ್ಮೈ ವಟುವರಾಯಚ ।
ಉವಾಚ ತೇ ವಚೋ ರೂಪಂ ದರ್ಶಯಸ್ವ ಸ್ವಕಂ ಮಮ ॥೪೦॥

ವಟುರೂಪಂ ತು ಸಂತ್ಯಕ್ತ್ವಾ ನಿಜರೂಪಂ ಪರಂ ದಧೇ ।
ಮಹಾಮುಕರತಪ್ರಖ್ಯಂ ಕೌಸ್ತುಭಾದ್ಯೈರ್ವಿಭೂಷಿತಂ ॥೪೨॥

ಋಷಿ ಸಂಘೈರ್ದೇವಸಂಘೈಃ ಸೇವ್ಯಮಾನಂ ಮುದಾಸದಾ ।
ನಖಪ್ರಭಾಂ ತಸ್ಯ ದಿವ್ಯಾಂ ಪ್ರಥಮಂ ಸ ವ್ಯಲೋಕಯತ್ ॥೪೩॥

ಅನೇಕ ಪ್ರೌಢಿಮಾದಿತ್ಯ ಪ್ರಭಾಸಂಖ್ಯಾಧಿಕಾಮಿವ ।
ತಸ್ಮಿನ್ನಖೇ ವಿಶ್ವಮಿದಂ ಸೋಽಪಶ್ಯಜ್ಜನ ಸಂವೃತಂ ॥೪೪॥

ಸತ್ಯಃ ಸ್ವರ್ಗೋ ಮಹರ್ಲೋಕಃ ಪಾತಾಳೋ ದ್ವಿಪಸಪ್ತಮಃ ।
ತತ್ರ ಕ್ಷೀರಾಬ್ಧಿಶೇಷೇ ತು ಶಯಾನಂ ಪುರುಷೋತ್ತಮಂ ॥೪೫॥

ಮಹಾಕಾಯಂ ಮಹಾದಿತ್ಯಂ ಉತ್ಪ್ರೇಕ್ಷ್ಯಂ ಸವ್ಯಲೋಕಯತ್ ।
ತಸ್ಯ ರೋಮೇಷು ಸರ್ವೇಷು ಭುವನಾನಿ ಬಹೂನಿ ಚ ॥೪೬॥

ಸ ತಂ ನಖಂ ನಿವೇಶ್ಯಾದಾವಪಶ್ಯ ದಖಿಲಂ ಜಗತ್ ।
ಬ್ರಹ್ಮಾಂಡಾನಿ ಯಥಾ ವೃಕ್ಷಸಂಲಗ್ನಾನಿ ಫಲಾನಿ ಚ ||೪೭||

ಆಗಮತ್ತಸ್ಯ ಪುರುಷಸ್ಯ ನಿಕಟಂ ತಸ್ಯ ರೋಮಸು ।
ದೃಷ್ಟ್ವಾ ಲಗ್ನಾನ್ಯನೇಕಾನಿ ಬ್ರಹ್ಮಾಂಡಾನಿ ಬಹೂನಿ ಚ ||೪೮||

ಪ್ರವಿಷ್ಟ್ವೈಚ್ಛದೇಕಸ್ಮಿನ್ ಬ್ರಹ್ಮಾಂಡೇ ಮಾರ್ಗಹೀನಕಂ ।
ಅಪಶ್ಯಮಾನಃ ಸ ಋಷಿಃ ಮಾರ್ಗಂ ತತ ಪುರುಷಂ ಪದಂ ||೪೯||

ಅಸ್ತುವತ್ ಸ್ತುತಿಭಿಃ ಸ್ತುತ್ವಾ ಅಥ ಕೀಟಂ ದದರ್ಶ ಸಃ ।
ಬ್ರಹ್ಮಾಂಡೋಪರಿ ತಿಷ್ಠಂತಂ ಸ ತತ್ರ ಸ್ವಮುಖೇನ ತು ||೫೦||

ವಿದಾರ್ಯ ಚ ಖಿಲಂ ಚಕ್ರೇ ಮಹದ್ಗಮನಗೋಚರಂ ।
ವಿವೇಶ ತೇನ ಮಾರ್ಗೇಣ ಸದ್ಬ್ರಹ್ಮಾಂಡಂ ಮಹತ್ತರಮ್ ||೫೧||

ಏವಂ ಬಹೂನಿ ನಿವಿಶನ್ ಬ್ರಹ್ಮಾಂಡಾನಿ ಮುಹುರ್ಮುನಿಃ ।
ಶ್ರಾಂತೋಭೂತ್ಸ್ವಬಹಿರ್ಯಾತುಂ ಮಾರ್ಗಂ ನಾಪಶ್ಯ
ದಾತು ಗಃ ||೫೨||

ನಿಮೀಲ್ಯ ಲೋಚನಂ ಸ್ವೀಯಂ ಯದಾಜ್ಞಾಕುರುತೇ ಮುನೇ ।
ಪುನರುತ್ಥಾಯ ಪಶ್ಯಂತು ಯಥಾಸ್ಥಾನಂ ಸಪೂರ್ವಮ್ ||೫೩||

ಅಪಶ್ಯತ್ತತ್ರ ತಿಷ್ಠಂತಂ ಆತ್ಮಾನಂ ಪುರತಃ ಸ್ಥಿತಃ ।
ನಖಪ್ರಭಾಂ ಪ್ರಪಶ್ಯಾದೌ ಸೌಂತರ್ಧನಮಥಾ ಯಯೌ ||೫೪||

ಶ್ರುತಿ ಪ್ರಮಾಣ :–

"ಬ್ರಹ್ಮಾಣಂ ಗರುಡಂ ಶೇಷಂ ಇಂದ್ರಂ ಪ್ರಾಣಂ ರವಿಂ ಸುರಾನ್ ।
ಏಕೈಕಂ ತು ಹರಿರ್ಮುಕ್ತ್ವಂ ಪರಕಾಲೇ ಕರೋತ್ಯಜಃ ||

**ತಥಾಪ್ಯಜಾಂಡಾನಂತಾನಾಂ ನಿಯುತಾತ್ವಜಾಂಡರೂಪವಾನ್ |**
**ಹರಿಸ್ತಾದೃಕ್ ಮಹಾರೂಪಾನಂತಾನಂತಾನಿ ವೈ ಹರೇಃ ||**
**ರೋಮ ಕೂಪೇಷು ಅನಂತೇಷು ಸಂವಸಂತೀತಿ ಹಿ ಶ್ರುತಿಃ ||"**

–ಇತ್ಯಾದಿ ಪ್ರಮಾಣಗಳು ಅನೇಕ ಇವೆ.

ಒಂದನಂತಾನಂತ ರೂಪಗಳು ಎಂದರೆ, ಒಂದೇ ರೂಪ ಅನಂತಾನಂತ ರೂಪಗಳಿಂದ ಯುಕ್ತವಾಗಿದೆ. ನವನಾರೀಕುಂಜರವತ್. ಆದ್ದರಿಂದ, ಪರಮಾತ್ಮನ ಒಂದು ರೂಪವೇ ಅನಂತಾನಂತರೂಪವು. ಒಂದು ರೂಪದಿ ಅಂದರೆ, ನವನಾರೀಕುಂಜರ ಸದೃಶ ರೂಪಗಳು ಅನಂತಾನಂತ ರೂಪಗಳು. ಇಂಥಾ ಅನಂತಾನಂತ ರೂಪಗಳೊಳಗೆ ಒಂದು ರೂಪದಲ್ಲಿ ಪೂರ್ವೋಕ್ತ ಪ್ರಕಾರ ಒಂದು ರೂಪದಿ ವಿದ್ಯಮಾನವಾದ ಒಂದು ಅವಯವಗತ ಒಂದು ರೋಮದಲ್ಲಿ ವಿದ್ಯಮಾನವಾದ ಒಂದು ಪ್ರದೇಶದಲ್ಲಿ ಇಹವು ಎಂದರೆ, ಇರೋವಾಗಿ ಅದೆ. ದಾವುವು ಎಂದರೆ, ಪೂರ್ವೋಕ್ತ ಅನಂತಾನಂತ ಬ್ರಹ್ಮಾಂಡ ಕೋಟಿಗಳು. ಒಂಭತ್ತು ರೂಪಗಳಿಂದ ಯುಕ್ತವಾದ ಕುಂಜರಗತ ಖಂಡರೂಪಗಳಾದ ಒಂಭತ್ತು ರೂಪಗಳೊಳಗೆ ಒಂದು ರೂಪದಿ ಎಂತ ತಾತ್ಪರ್ಯ. ಏಕತ್ರ ನ್ಯಾಯ, ಸರ್ವ ಖಂಡಾಖಂಡರೂಪಗಳಲ್ಲಿಯೂ ಸಹ ತಿಳಿಯಬೇಕು. ಈ ಅನಂತಾನಂತ ರೂಪಗಳು ದಾವದರಿಂದ ವಿಶಿಷ್ಟಗಳಾಗಿ ಅವೆ ಎಂದರೆ, ಹದಿನಾಲ್ಕು ಲೋಕಗಳಿಂದ ವೈಕುಂಠ, ನರಕಾದಿ ಲೋಕಗಳಿಂದ ಒಂದೇ ರೂಪದಿ ಅಂದರೆ, ಏಕಾದೃಶವಾದ ಅನಂತ ಬ್ರಹ್ಮಾಂಡಗಳು ಒಂದೇ ಅಂದರೆ, ಅನಂತಾನಂತ ಬ್ರಹ್ಮಾಂಡಗಳು ಒಂದೇ ಪ್ರಕಾರ ಪರಸ್ಪರ ಲಕ್ಷಣದಿಂದ ಭೇದ ಭೇದಗಳಾಗಿ ಇರದೆ, ಸಮಾನ ಲಕ್ಷಣದಿಂದ, ಒಂದು ಬ್ರಹ್ಮಾಂಡದಂತೆ ಅನಂತಾನಂತ ಬ್ರಹ್ಮಾಂಡಗಳು ಒಂದು ರೂಪದಲ್ಲಿ ಇದ್ದು, ಸೃಷ್ಟಿ, ಸ್ಥಿತಿ, ಪಾಲನೆ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮೋಕ್ಷಾದಿ ವ್ಯಾಪಾರಗಳಿಂದ ಯುಕ್ತವಾಗಿ ಅವೆ. ಶ್ರೀ ಪರಮಾತ್ಮನಿಂದ ಸೃಷ್ಟ್ಯಾದಿ ವ್ಯಾಪಾರಗಳು ಮಾಡಲ್ಪಡುತ್ತಾ ಇರೋವಾಗಿ ಅವೆ. ಅನಂತಾನಂತ ಕೋಟಿ ಬ್ರಹ್ಮಾಂಡಗಳಲ್ಲಿ

ಸೃಷ್ಟ್ಯಾದಿ ವ್ಯಾಪಾರಗಳು ಏಕಕಾಲದಲ್ಲಿ ಆಗತದಾ. ಭಿನ್ನಕಾಲದಲ್ಲಿ ಆಗತದಾ ಎಂದರೆ, ಸಮಸ್ತವೂ ಒಂದೇ ಕಾಲದಲ್ಲಿ ಮಾಡತಾನೆ. ಅನಂತಾನಂತ ಬ್ರಹ್ಮಾಂಡಗಳು ಭಿನ್ನಭಿನ್ನ ದೇಹಗಳಲ್ಲಿ ಇರತಕ್ಕದ್ದು. ಕೆಲವು ಬ್ರಹ್ಮಾಂಡಗಳು ಏಕಕಾಲಾವಚ್ಛೇದೇನ ಆಗತದಾ ಇರತವೆ. ಹಾಂಗೆ, ಭಿನ್ನ ಭಿನ್ನ ದೇಶದಲ್ಲಿ ಇರತಕ್ಕ ಅನಂತಾನಂತ ಬ್ರಹ್ಮಾಂಡಗಳ ಒಂದೇ ಕಾಲದಲ್ಲಿ ಸ್ಥಿತಿ ಮಾಡತಾ ಇದ್ದಾನೆ. ದೇಶಮಾತ್ರ ಭೇದ. ಕಾಲಮಾತ್ರ ಒಂದೇ. ಈ ಪ್ರಕಾರ ಒಂದೇ ಕಾಲದಿ ಎಂದರೆ, ಏಕಕಾಲಾವಚ್ಛೇದದಲಿ, ಮಾಡತಕ್ಕ ಸೃಷ್ಟಿ, ಸ್ಥಿತಿ, ಸಂಹಾರಗಳ ತಿಳಿಸದೆ, ಏಕಬ್ರಹ್ಮಾಂಡಗತ ಜೀವರಿಗೆ ಅನಂತಾನಂತ ಬ್ರಹ್ಮಾಂಡಗಳ ಏಕಕಾಲದಲ್ಲಿ ಮಾಡತಕ್ಕ ಸೃಷ್ಟ್ಯಾದಿಗಳ ತಿಳಿಸದೆ ಮಾಡತಾನೆಂತ ತಾತ್ಪರ್ಯ. ಸಂದಣಿಕೊಂಡಿಪ್ಪ ಜಗದೊಳು, ಈ ಪ್ರಕಾರ ಅನಂತ ಕೋಟಿ ಬ್ರಹ್ಮಾಂಡಗಳ ಧರಿಸಿಕೊಂಡು ಸೃಷ್ಟ್ಯಾದಿಗಳ ಮಾಡುವ, ಸಂದು ಇಲ್ಲದ ಎಣೆ (ಜೋಡಿಸಿಕೊಂಡು) ಹಾಕಿಕೊಂಡು, ತುಂಬಿಕೊಂಡು ಇರೋವನಾಗಿ ಇದ್ದಾನೆ. ಇದಕ್ಕೆ ದೃಷ್ಟಾಂತ :— ಇಂದ್ರನ ಮಗನಾದಂಥಾ ಅರ್ಜುನಗೆ, ನಂದಗೋಪನ ಮಗನಾದಂಥಾ ಶ್ರೀ ಕೃಷ್ಣರೂಪಿ ಪರಮಾತ್ಮನಾದ ತಾನು, ಭಾರತ ಯುದ್ಧದಲ್ಲಿ ವಿಶ್ವರೂಪವನ್ನು ತೋರಿಸಲಿಲ್ಲವೇ ? ಆಗ್ಗೆ ತೋರಿಸಿದ ಜಗತ್ತು ವರ್ತಮಾನ ಜಗತ್ತಿಗೆ ಭಿನ್ನವಲ್ಲವೇ ಏನು ? ಅಂದರೆ ಭಿನ್ನವೇ. ಆದ್ದರಿಂದ ಮಾರ್ಕಾಂಡೇಯನ ದೃಷ್ಟಾಂತದಿಂದಲೂ, ಅರ್ಜುನನ ದೃಷ್ಟಾಂತದಿಂದಲೂ ಯಶೋದಾ ದೃಷ್ಟಾಂತದಿಂದಲೂ, ಅನಂತಾನಂತ ಬ್ರಹ್ಮಾಂಡಗಳು ಸತ್ಯವಾದದ್ದು. ಪೂರ್ವೋಕ್ತ ಪ್ರಕಾರ ದೇಶಭೇದದಿಂದ ಒಂದೇ ಕಾಲದಲ್ಲಿ ಸೃಷ್ಟಿ, ಸ್ಥಿತಿ, ಸಂಹಾರ ಮೂರೂನೂ ಆಗತಾ ಇವೆ ಎಂತ ತಿಳಿಯಬೇಕು ಎಂತ ಈ ಶ್ಲೋಕದ ತಾತ್ಪರ್ಯ. ಈ ಶ್ಲೋಕವನ್ನು ಅನುಸರಿಸಿ ಸಂಧ್ಯಂತರದಲ್ಲಿ ಹೇಳಿದ ಶ್ಲೋಕಗಳು ಎರಡು (೧೪ ನೇ ಸಂಧಿ–೨೪ ನೇ ಶ್ಲೋಕ) ವರ್ತಮಾನ ಈ ಏಳನೇ ಸಂಧಿ ೨೪ ನೇ ಶ್ಲೋಕದಲ್ಲಿ ವಿದಿತವಾದ ಅನಂತಾನಂತ ಕೋಟಿ ಬ್ರಹ್ಮಾಂಡಗಳ ಒಳಗೆ ಇರತಕ್ಕ ವಿದ್ಯಮಾನ ಅನ್ಯಸಂಧಿಗತ ೨೫ ನೇ ಶ್ಲೋಕದಲ್ಲಿ ವಿಸ್ತಾರ ಮಾಡುತ್ತೇವೆ. ಒಂದೊಂದು ಬ್ರಹ್ಮಾಂಡದಲ್ಲಿನೂ ವರ್ತಮಾನ ಬ್ರಹ್ಮಾಂಡ ಸದೃಶವಾಗಿ ಪೊಂದಿಕೊಂಡಿಹವು,

ಆಶ್ರಯಮಾಡಿಕೊಂಡಿಹರು, ಎಂದರೆ, ಅಜ (ಬ್ರಹ್ಮದೇವರು), ಭವ (ರುದ್ರದೇವರು) ಆದಿ ಮೊದಲಾದ ಸಮಸ್ತ ಜೀವರೂ ಎಂದರೆ, ಸಮಸ್ತ ರಾದ ತ್ರಿವಿಧರಾದ ಜೀವರ ಗಣ ಎಂದರೆ, ಸಮೂಹವು, ಭೂತ, ಭವಿಷ್ಯ, ವರ್ತಮಾನ ಜೀವಗಣಗಳು ಎಂತ ತಾತ್ಪರ್ಯ.

ಇದಲ್ಲದೆ ಸಿಂಧು ಎಂದರೆ, ಸಪ್ತ ಸಮುದ್ರಗಳು, ಸಪ್ತದ್ವೀಪಗಳು, ಮೇರು ಮಂದರ, ಎಂದರೆ, ಮೇರು, ಮಂದರವೇ ಮೊದಲಾದ ಪರ್ವತ ಗಳು, ಇದಲ್ಲದೇ ಬ್ರಹ್ಮದೇವರೇನು, ಇಂದ್ರನೇನು (ಪುರಂದರ) ಮೊದ ಲಾದ ಸಮಸ್ತದೇವತೆಗಳು. ಆವಾಸಕ್ಕೆ ಯೋಗ್ಯವಾದ ಲೋಕವೆಂದರೆ, ಅತಳಾದಿ ಊರ್ಧ್ವಪರ್ಯಂತ ಹದಿನಾಲ್ಕು ಲೋಕಗಳೇನು, ಪರಾಲಯ ಎಂದರೆ. ಪರಮಾತ್ಮನ ಆಲಯಗಳಾದ ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠ ಎಂಬುದು ಮೂರು ಆಲಯಗಳು. ಎಲ್ಲಾನೂ ಈ ಪ್ರಕಾರ ಇದನ್ನ ಅಂಗೀಕರಿಸಿದ ಮ್ಯಾಲೆ ಇದರನ್ನ ಅನುಸರಿಸಿದ್ದೇ, ಸೃಷ್ಟ್ಯಾದಿ ವ್ಯಾಪಾರಗಳು. ಆದ್ದರಿಂದ ಅಲ್ಲಲ್ಲಿ ಪ್ರತ್ಯೇಕ ಪ್ರತ್ಯೇಕ ಆಗತಾ ಇರುತ್ತದೆ ಎಂಬುದು ಅರ್ಥಾತ್ ಸಿದ್ಧವೇ ಸರಿ, ಅದರಮ್ಯಾಲೆ ಕಂಠೋಕ್ತವಾಗಿ ಜೀವರಿಗೆ ತಿಳಿಸದಲೆ ಮಾಡತಾನೆ ಎಂತ ಹೇಳತಾರೆ. ಕಕ್ಷ ತಾರತಮ್ಯ ಸಂಧಿ ಪ್ರಮಾಣ :—

"ರೋಮಕೂಪಗಳೊಳಗೆ ಪೃಥಕ್ ಪೃಥಕಾ ಮಹಾಪುರುಷನ ಸುಮೂರ್ತಿಯ ತಾಮರಸಜಾಂಡಗಳ ತದ್ಗಗ ವಿಶ್ವರೂಪಗಳ, ಶ್ರೀ ಮಹಿಳೆ ರೂಪಗಳ ಗುಣಗಳ ಸೀಮೆಗಾಣದೆ ಯೋಚಿಸುತ ಮಮ ಸ್ವಾಮಿಯ ಮಹಿಮೆಯು ಎಂತುಂಟೆಂದಡಿಗಡಿಗೆ ಬೆರಗಾದೆ ॥"

ಈ ಪ್ರಮಾಣವಾದರೋ ಅನಂತಾನಂತ ಬ್ರಹ್ಮಾಂಡಗಳು ಬ್ಯಾರೆ ಬ್ಯಾರೆ ಎಂತ ಹೇಳತದೆ. ರೋಮಕೂಪಗಳೊಳಗೆ ಎಂದರೆ, ಪರಮಾತ್ಮನ ದೇಹಗತ ಅಭಿನ್ನವಾದ ರೋಮಕೂಪಗಳು ಅನೇಕಗಳು. ಅನೇಕ ರೋಮ ಗಳು ಆಶ್ರಯಮಾಡಿಕೊಂಡಿರುವ ಸ್ಥಾನಗತ ಕೂಪವಂದರೆ ಹಳ್ಳಗಳು

ಅನೇಕ. ಈ ಕೂಪಗಳೊಳು ಪೃಥಕ್ ಪೃಥಕ್ ಎಂದರೆ. ಪ್ರತ್ಯೇಕ ತಾಮ ರಸಜಾಂಡಗಳು (ಎಂದರೆ ಬ್ರಹ್ಮಾಂಡಗಳು). ತದ್ಗತ ಆಯಾ ಬ್ರಹ್ಮಾಂಡ ಗತ ವಿಶ್ವರೂಪಗಳು ಎಂದರೆ, ಬ್ರಹ್ಮಾಂಡಾಕಾರ ಪರಮಾತ್ಮನ ರೂಪಗಳು ಅಂತ ಕಾಣಲಿಲ್ಲ (ಕೊನೆಗಾಣಲಿಲ್ಲ) ರಮಾದೇವೇರು, ಎಂತ ಹೇಳಿರೋಣ ದರಿಂದ ಅನಂತಾನಂತ ಬ್ರಹ್ಮಾಂಡಗಳು ಅನಂತಾನಂತವಾಗಿ ಒಂದೊಂದು ರೂಪದಲ್ಲಿ ಇರೋವಾಗಿ ಅವೆ ಎಂತಲೇ ಪ್ರಮಾಣವೂ ಹೇಳಿರೋಣ ದಾಗಿ ಅದೆ. ಒಂದೊಂದಾಜಾಂಡದಲ್ಲಿ ಒಂದು. ರೂಪದೊಳೊಂದು, ಅವ ಯವದೊಳಗೊಂದು, ನಖದೊಳೊಂದು, ಗುಣಗಳ ಪಾರಗಾಣದೆ ರಮಾ ದೇವೇರು ಪರಮಾತ್ಮನ ಮಹಿಮೆ ಮಹಾಗುಂಭವಾದದ್ದು ಎಂದು ಅಂತ ಗಾಣದೆ, ಆನಂದದಲ್ಲಿ ಮುಣಗೋವಳಾದರು ಎಂತ, ಕಕ್ಷತಾರತಮ್ಯ ಸಂಧಿ ಪ್ರಮಾಣ. ಅನಂತಾನಂತ ಬ್ರಹ್ಮಾಂಡದೊಳಗೆ ಒಂದು ಬ್ರಹ್ಮಾಂಡ ಗತ ಪರಮಾತ್ಮನ ಮಹಿಮೆಯ ಅರಿಯಲಿಲ್ಲ ಎಂದ ಮ್ಯಾಲೆ, ಅನಂತಾ ನಂತ ಬ್ರಹ್ಮಾಂಡಗಳು ಸತ್ಯವೇ ಆದುವು. ಅನಂತಾನಂತ ಬ್ರಹ್ಮಾಂಡಗಳಲ್ಲಿ ಅನಂತಾನಂತ ಬ್ರಹ್ಮರು. ಅನಂತಾನಂತ ಗರುಡರು, ಅನಂತಾನಂತ ಶೇಷರು ಇರೋವವರಾಗಿದ್ದಾರೆ. ಅಷ್ಟೇ ಹೊರತು ಒಂದು ಬ್ರಹ್ಮಾಂಡದಲ್ಲೇ ಅನಂತಾನಂತ ಬ್ರಹ್ಮಾದಿಗಳು ಇಲ್ಲ. ಅಂದರೆ, ಒಂದು ಬ್ರಹ್ಮಾಂಡದಲ್ಲೇ ಅನಂತ ಬ್ರಹ್ಮರ, ಗರುಡರ, ಶೇಷರ ಸೃಷ್ಟಿ ಮಾಡೋದಿಲ್ಲ. ಏಕಕಾಲ ದಲ್ಲಿ ಒಂದು ಬ್ರಹ್ಮಾಂಡದಲ್ಲಿ ಅನಂತಾನಂತ ಬ್ರಹ್ಮರಿಗೆ ಮೋಕ್ಷವೂ ಇಲ್ಲ. ಪರಮಾತ್ಮಗೆ ಅನಂತಾನಂತ ಬ್ರಹ್ಮಾಂಡಗಳು ಸೇರೋದರಲ್ಲೇನು ಅಲ್ಲಲ್ಲಿ ಸೃಷ್ಟ್ಯಾದಿ ವ್ಯಾಪಾರಗಳ ಮಾಡೋದರಲ್ಲೂ ಸಾಮರ್ಥ್ಯಉಳ್ಳವನಾದ್ದ ರಿಂದ, ಅನಂತಾನಂತ ಬ್ರಹ್ಮಾಂಡಗಳ, ತದ್ಗತ ಜೀವರಿಗೆ ಒಂದೇ ಬ್ರಹ್ಮಾಂಡದಲ್ಲೇ ಮೋಕ್ಷ ಕೊಡತಾನೆಂತ ತಿಳಿಯಬಾರದು. ಒಂದು ಬ್ರಹ್ಮಾಂ ಡಕ್ಕೆ ಒಬ್ಬನೇ ಬ್ರಹ್ಮ. ಒಬ್ಬನೇ ಗರುಡ, ಒಬ್ಬನೇ ಶೇಷ. ಒಬ್ಬೊಬ್ಬ ರಿಗೆ ಮೋಕ್ಷ ಎಂತ ತಿಳಿಯಬೇಕು. ಇದಕ್ಕೆ **ಪ್ರಮಾಣ :–**

**"ಬ್ರಹ್ಮಾಣಂ ಗರುಡಂ ಶೇಷಂ ಇಂದ್ರಂ ಪ್ರಾಣಂ ರವಿಂ ಸುರಾನ್ । ಏಕನೇಕಂ ಹರಿರ್ಮುಕ್ತ್ವಂ ಪರಕಾಲೇ ಕರೋತ್ಯಜಃ ॥**

**ತಥಾಪ್ಯ ಜಾಂಡನಂತಾನಾಂ ನಿಯಂತಾsಜಾಂಡ ರೂಪವಾನ್ । ಹರಿಸ್ತಾದೃಕ್ ಮಹಾರೂಪಾನಂತಾನಂತಾನಿ ವೈ ಹರೇಃ ॥ ರೋಮಕೂಪೇಷ್ವನಂತೇಷು ಸಂವಹ ಸಂತೀತಿ ಹಿ ಶ್ರುತಿಃ ॥"**

**ಅರ್ಥ :–**

ಬ್ರಹ್ಮಾಣಂ – ಬ್ರಹ್ಮದೇವರನ್ನು. ಗರುಡಂ – ಗರುಡ ದೇವರನ್ನು, ಶೇಷಂ–ಶೇಷದೇವರನ್ನು, ಇಂದ್ರಂ–ಇಂದ್ರದೇವರನ್ನು, ಪ್ರಾಣಂ–ಅಹಂಕಾರಿಕ ಪ್ರಾಣದೇವರನ್ನು, ರವಿಂ–ಸೂರ್ಯನನ್ನು, ಸುರಾನ್–ತದ್ವ್ಯತಿರಿಕ್ತ ಯಾವತ್ತೂ ದೇವತೆಗಳನ್ನೂ, ಪ್ರಾಣಂ–ಸಮಸ್ತ ಪ್ರಾಣಿಗಳನ್ನೂ, ಏಕಮೇಕಂ ಹರಿರ್ಮುಕ್ತಂ–ಬ್ರಹ್ಮ ಪ್ರಳಯಕ್ಕೆ ಒಂದೊಂದು ಬ್ರಹ್ಮಾಂಡದಲ್ಲಿ ಒಬ್ಬೊಬ್ಬನನ್ನೇ ಹರಿಃ–ಪರಮಾತ್ಮನು, ಮುಕ್ತಂ–ಲಿಂಗಭಂಗರೂಪವಾದ ಮುಕ್ತಿಯನ್ನು ಮಾಡುತ್ತಾನೆ. ಪರಕಾಲೇ–ಸ್ಥಿತಿಕಾಲಕ್ಕೆ ಅನ್ಯವಾದ ಪ್ರಳಯ ಕಾಲದಲ್ಲಿ ಕರೋತಿ–ಮಾಡುತ್ತಾನೆ. ಮತ್ತು ದಾವರನ್ನ ಸೃಷ್ಟಿ ಮಾಡ ತಾನೆ ಎಂದರೆ, ಮುಕ್ತರಾದ ಒಬ್ಬೊಬ್ಬರಿಗೆ ಸದೃಶವಾದ ಒಬ್ಬೊಬ್ಬ ಜೀವರ ಸೃಷ್ಟಿ ಮಾಡತಾನೆ. ದಾವಾಗ ಎಂದರೆ, ಪ್ರಳಯಕಾಲಕ್ಕೂ ಅನ್ಯವಾದ ಸೃಷ್ಟಿ ಕಾಲದಲ್ಲಿ ಎಂತ ತಾತ್ಪರ್ಯ. ಪುನಃ ಸೃಷ್ಟಿಕಾಲಕ್ಕೆ ಬ್ರಹ್ಮಪದ ಜೀವ ಒಂದು, ಗರುಡ ಪದ ಜೀವ ಒಂದು, ಶೇಷ ಪದ ಜೀವ ಒಂದು, ಹಾಂಗೆ ಸೃಷ್ಟಿಮಾಡಿ, ಮುಕ್ತರಾಗಿ ಕಡಿಮೆ ಬಿಟ್ಟಿರುವ ಅವಶಿಷ್ಟವನ್ನು ಪೂರ್ಣಮಾಡಾತನೇ ಹೊರ್ತು, ಒಂದು ಬ್ರಹ್ಮಾಂಡದಲ್ಲಿ ಅನಂತಾನಂತ ಬ್ರಹ್ಮಾದಿ ಸಜಾತಿ ಜೀನ ಸೃಷ್ಟಿ ಮಾಡೋದಿಲ್ಲ ಎಂತ ತಿಳಿಯಬೇಕು. ಈ ಸೃಷ್ಟಿ ದಾರುಮಾಡುತಾರೆಂದರೆ-ಅಜಃ–ಉತ್ಪತ್ತಿ ಶೂನ್ಯವಾದ ಪರಮಾತ್ಮ ಎಂಥ ತಾತ್ಪರ್ಯ. ತಥಾ–ಹೀಂಗೆ ಒಂದು ಬ್ರಹ್ಮಾಂಡದ ಹಾಂಗೆ, ಅಜಾಂಡಾನಂತಾನಾಂ–ಬ್ರಹ್ಮಾಂಡ ಅನಂತಗಳಲ್ಲಿ ಸೃಷ್ಟ್ಯಾದಿಗಳ ಮಾಡತಾ, ನಿಯಂತಾ–ನಿಯಮನ ಮಾಡುತಾ. ಎಂದರೆ, ಅನಂತಾನಂತ ರೋಮಕೂಪಗತ ಪ್ರತ್ಯೇಕ ಪ್ರತ್ಯೇಕ ಬ್ರಹ್ಮಾಂಡಗಳಲ್ಲಿ ಪೂರ್ವೋಕ್ತ ಪ್ರಕಾರ ನಡೆಯಿಸುತ್ತಾ, ಆ ಬ್ರಹ್ಮಾಂಡಗತ ಜೀವರಿಗೆ ನಿಯಮನ

ಮಾಡತಾ ಅಜಾಂಡ ರೂಪವನ್ನು ಬ್ರಹ್ಮಾಂಡಾಂತರ್ಗತವಾಗಿ, ಬ್ರಹ್ಮಾಂಡಾ ಕಾರ ರೂಪವನ್ನು ಧರಿಸಿ ಇರೋವನಾಗಿದ್ದಾನೆ. ಹರಿಃ–ಪರಮಾತ್ಮನು, ತಾದೃಕ್–ಒಂದು ಬ್ರಹ್ಮಾಂಡದಲ್ಲಿ, ಬ್ರಹ್ಮಾಂಡಾಕಾರರೂಪ ಧರಿಸಿದ ವಪ್ಪಂದ ತತ್ಸದೃಶ ಬ್ರಹ್ಮಾಂಡಾಕಾರ ಮಹಾರೂಪ ಎಂದರೆ, ಅನಂತಾ ನಂತಗಳಾದ ಬ್ರಹ್ಮಾಂಡಗಳಲ್ಲಿ ಅನಂತಾನಂತಗಳಾಗಿ ಇರೋದಾಗಿ ಅದೆ. ಈ ಪ್ರಕಾರ ಹರೇಃ–ಪರಮಾತ್ಮನ, ರೋಮಕೂಪೇಷು ಅನಂತೇಷು–ಅನಂತ ರೋಮ ಕೂಪಗಳಲ್ಲಿ ಪ್ರತಿ ಪ್ರತಿ ರೋಮಕೂಪಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಬ್ರಹ್ಮಾಂಡಗಳು ಅನಂತಾನಂತಗಳಾಗಿ, ಸಂವಸಂತಿ–ಛಂದಾಗಿ ವಾಸವಾಗಿ ಇರೋವಾಗಿ ಅವೆ. ಇತಿ–ಈ ಪ್ರಕಾರ ತಿಳಿಯತಕ್ಕದ್ದು. ಹಿ–ಪ್ರಸಿದ್ಧವು.

ಪ್ರಮಾಣ :—

ತಾದೃಶಾನಂತ ರೂಪಾಣಾಮನಂತಾನಂತಯೋಗತಃ । ಅಥ ಶ್ಚೋರ್ಧ್ವಂ ಚಾಷ್ಟದಿಕ್ಷು ಸಂಯುಕ್ತಾಮನಂಶಃ ॥ ರೂಪಾನಂಶತ್ವೈ ರಪೂರ್ಣೋರು ತನುರ್ಹರಿಃ । ಅತ್ಯಭಿನ್ನೋರುಚಿತ್ಸೌಖ್ಯ ಬಲಾದಿ ಗುಣವಿಗ್ರಹಃ ॥ ನಿರ್ವಿಶೇಷಃ ಸರ್ವಗತಃ ಸೂಕ್ಷ್ಮಸ್ಥೂಲಾದಿ ರೂಪಕಃ । ಸಮಶಕ್ತಿ ಸಮಜ್ಞಾನ ಬಲಾದಿ ಶುಭಸದ್ಗುಣಃ ॥ ಸಮಾ ಧಿಕ ವಿಹೀನಶ್ಚ ರಮಯಾನಂತರೂಪಯಾ । ಸಹ ಸ್ವಾಧೀನಯಾ ಸತ್ಯ ಶೇಷಚಿಜ್ಜಡಭೃದ್ಧರಿಃ ॥ ಸ್ವಾಭಿನ್ನಯಾ ಶ್ರಿಯಾ ಭಿನ್ನಂ ಮುಕ್ತಾಮುಕ್ತಿಷು ಚಿದ್ಗುಣೈಃ । ಭಿನ್ನರಿತ್ಯಜಡೈಸ್ಸತ್ಯೈ ಭಿನ್ನ ಜೀವೇಶ್ವರೈಸ್ಸದಾ ॥

ಅರ್ಥ :—

ತಾದೃಶಾನಂತರೂಪಾಣಾಂ = ಪೂರ್ವೋಕ್ತ ಅನಂತಾನಂತ ಬ್ರಹ್ಮಾಂಡಗಳ ಧರಿಸಿದ ರೂಪಕ್ಕೆ ಸದೃಶವಾದ ಅಭಿನ್ನಗಳಾದ ಅನಂತಾನಂತ ರೂಪಾಣಾಂ =

ಅನಂತಾನಂತ ರೂಪಗಳುಳ್ಳ ಪರಮಾತ್ಮ ಅನಂತಾನಂತ ರೂಪಗಳಿಗೆ ಯೋಗ್ಯವಾದ ಅನಂತಾನಂತ ಎಂದರೆ, ಅನಂತಾನಂತ ಬ್ರಹ್ಮಾಂಡಗಳನ್ನು ಹ್ಯಾಂಗೆ ಧರಿಸಿದ್ದಾನೆ ಎಂದರೆ, ಯೋಗತಃ = ತನ್ನ ಯೋಗ ಸಾಮರ್ಥ್ಯ ದಿಂದ ಧರಿಸಿದ್ದಾನೆ ಎಂತ ತಾತ್ಪರ್ಯ. ಪರಮಾತ್ಮನಿಂದ ಧರಿಸಲ್ಪಟ್ಟ ಬ್ರಹ್ಮಾಂಡಗಳು ಎಂಥಾದ್ದರಿಂದ ಯುಕ್ತವಾಗಿವೆ ಎಂದರೆ ಅಧಶ್ಚೋರ್ಧ್ವಂ = ಅಧ ಎಂದರೆ, ಅಧೋಭಾಗಗತ ಏಳು ಲೋಕಗಳಿಂದಲೂ, ಊರ್ಧ್ವ ಭಾಗಗತ ಏಳು ಲೋಕಗಳಿಂದಲೂ ಮತ್ತು ಅಷ್ಟದಿಕ್ಷು = ಎಂಟು ದಿಕ್ಕು ಗಳಲ್ಲಿ ವಿದ್ಯಮಾನರಾದ ದಿಕ್ಪಾಲಕರ ಪಟ್ಟಣಗಳಿಂದ ಸಹಿತವಾಗಿನ್ನು ದಶದಿಕ್ಕು ಸಹಿತವಾಗಿನ್ನು, ಸಂಯುಕ್ತಾನಾಂ = ಸಂ = ಛಂದಾಗಿ. ಯುಕ್ತನಾಂ— ಸ್ಥಿತಗಳಾದಂಥ, ಅನಂತಶಃ = ಅನಂತಗಳಾಗಿ ಧರಿಸಲ್ಪಟ್ಟ ಬ್ರಹ್ಮಾಂಡಗಳು ಉಳ್ಳ ರೂಪಾನಂತ್ಯೈಃ = ಅನಂತ ರೂಪಗಳಿಂದ ಸಹಿತನಾದ ಪರಮಾತ್ಮನು. ಅನಂತಾನಂತ ಬ್ರಹ್ಮಾಂಡಗಳ ಉದರದಲ್ಲಿ ಧರಿಸೋಣದರಿಂದ ಪರಮಾ ತ್ಮನ ಉದರ ಎಷ್ಟು ಬ್ರಹ್ಮಾಂಡಗಳ ಧರಿಸಿದ ಕಾಲಕ್ಕು ಪೂರ್ಣವಾಗದೇ ಅಪೂರ್ಣವಾದ, ಉರು = ಉತ್ಕೃಷ್ಟವಾದ ಸರ್ವಾವಯುಗಳ ಉಳ್ಳವ ಎಂತ ತಿಳಿಯಬೇಕು. ದೇಶಪೂರ್ಣಕನು ಹರಿಃ ಎಂದರೆ, ದೇಶ ಯಾವತ್ತೂ ದೇಶಗಳಲ್ಲಿ ಪೂರ್ಣ ಎಂದರೆ, ಛಿದ್ರರಹಿತದಿಂದ ಸಂಪೂರ್ಣ ವಾಗಿ ವ್ಯಾಪ್ತನಾಗಿ, ತನು ಎಂದರೆ, ಅಷ್ಟು ವಿಸ್ತಾರವಾದ ದೇಹದಿಂದ ಯುಕ್ತನಾದವ. ಅವಕಾಶಕ್ಕೆ ಅಂತ್ಯವಿಲ್ಲದ ಲಿಂಗ ಉಳ್ಳವ ಎಂತ ತಿಳಿಯ ಬೇಕು. ಅತ್ಯಭಿನ್ನೋರು ಚಿತ್ಸುಖ = ಪರಮಾತ್ಮನ ಅನಂತಾನಂತ ರೂಪ ಗಳು ಅತ್ಯಭಿನ್ನ ಪರಸ್ಪರ ಅತ್ಯಂತವಾಗಿ ಅಭಿನ್ನಗಳಾದದ್ದು, ಚಿತ್ ಸೌಖ್ಯ ಎಂದರೆ, ಚಿತ್-ಜ್ಞಾನ, ಸೌಖ್ಯ–ಆನಂದ, ಅಂದರೆ, ಜ್ಞಾನಾನಂದವೇ ಶರೀರವಾಗಿ ಉಳ್ಳವ. ಉರು ಎಂದರೆ, ಉತ್ಕೃಷ್ಟನಾದವ. ಸರ್ವಶ್ರೇಷ್ಠ ನಾದವ, ಬಲಾದಿಗುಣವಿಗ್ರಹ = ಪರಸ್ಪರ ರೂಪಗಳಲ್ಲಿ ವಿದ್ಯಮಾನಗ ಳಾದ, ಬಲವೇನು, ಗುಣವೇನು ಎಂದರೆ, ಸ್ವಾಖ್ಯಬಲ. ಸ್ವಾಖ್ಯ ಗುಣ ಆದಿ ಶಬ್ದದಿಂದ ಸ್ವಾಖ್ಯಜ್ಞಾನಾನಂದಾದಿಗಳು ಇವುಗಳೇ ವಿಗ್ರಹ = ಶರೀರವಾಗಿ ಉಳ್ಳವ. ನಿರ್ವಿಶೇಷ ಎಂದರೆ, ತನ್ನ ಇಂದ್ರಿಯಗಳಿಗೂ

ಪರಸ್ಪರ ವಿಶೇಷದಿಂದ ರಹಿತವಾದದ್ದು ಎಂದರೆ, ಒಂದು ಇಂದ್ರಿಯವೇ ಸರ್ವೇಂದ್ರಿಯಗಳ ವ್ಯಾಪಾರಗಳ ಹಾಂಗೆ, ರೋಮಾದಿಗಳು ಯಾವತ್ತೂ ಒಂದೊಂದೇ ಸರ್ವ ವ್ಯಾಪಾರಗಳ ಮಾಡತವೆ ಎಂತ ತಾತ್ಪರ್ಯ.

ಅದರಿಂದ ನಿರ್ವಿಶೇಷ ಇಂದ್ರಿಯ ಅವಯುವ ರೋಮಾದಿಗಳು ಉಳ್ಳವ ಎಂತ ತಾತ್ಪರ್ಯ. ಜೀವಸವಿಶೇಷವುಳ್ಳ ಇಂದ್ರಿಯವ್ಯಾಪಾರದವ. ಸರ್ವಗತ = ಪರಮಾತ್ಮನ ಸ್ಥೂಲರೂಪಕ್ಕೇನು, ಸೂಕ್ಷ್ಮರೂಪಕ್ಕೇನು ವ್ಯತ್ಯಾಸವಿಲ್ಲದೆ ಸಮಶಕ್ತಿಯೆಂದರೆ ಸಮಾನಶಕ್ತನು. ಸಮಾನ ಜ್ಞಾನ ಎಂದರೆ, ಸಮಾನ ಜ್ಞಾನಿಯು. ಬಲ ಎಂದರೆ ಸಮಾನ ಬಲನು. ಜ್ಞಾನಗಳೇನು, ಶುಭ ಸದ್ಗುಣ–ಸಮಾನವಾದ ಶುಭ—ಮಂಗಳಕರಗಳಾದ ಸದ್ಗುಣಗಳುಳ್ಳವ ಮತ್ತು ಸಮಾಧಿಕವಿಹೀನಶ್ಚ = ಪರಮಾತ್ಮ ತನಗೆ ಸಮಾನರಾದವರಿಂದಲೂ ಅಧಿಕರಾದವರಿಂದಲೂ ವಿಹೀನಶ್ಚ = ರಹಿತನಾದವನು. ರಮಯಾನಂತರೂಪಿಯ = ರಮಾದೇವೇರು ಅನಂತರೂಪಯಾ–ಅನಂತ ರೂಪಗಳಿಂದ ಸಹಿತರಾಗಿದ್ದಾರೆ. ರಮಾದೇವೇರಾದರೋ ಆ ಪರಮಾತ್ಮ ಸ್ವಾಧೀನಯಾ = ಸ್ವಾಧೀನದಿಂದ ಸತೀ ಇರೋವರಾಗಿದ್ದಾರೆ. ಅಶೇಷಚಿಜ್ಜಡಭೃದ್ಧರಿಃ = ಅಶೇಷ–ಸಮಸ್ತರಾದ ಜೀವರುಗಳ, ಹಾಂಗೆ ಚಿತ್ ಎಂದರೆ ಜಡಪ್ರಕೃತಿಯು. ಭೃದ್ಧರಿ = ಹರಿ ಪರಮಾತ್ಮ ಅನಂತಾನಂತ ರೂಪಗಳಲ್ಲಿ, ಭೃತು = ಧರಿಸೋವನಾಗಿದ್ದಾನೆ. ಸ್ವಾಭಿನ್ನಯಾಕ್ರಿಯಾ–ಭಿನ್ನ ಎಂದರೆ, ಸ್ವ-ಸ್ವಕೀಯವಾದ ತನ್ನ ಅನಂತಾನಂತ ರೂಪಗಳಿಗೂ ತನಗೂ ಅಭೇದದಿಂದ ಇತಕ್ಕವ. ಶ್ರಿಯಾಭಿನ್ನ = ಲಕ್ಷ್ಮಿದೇವೇರಿಂದ ಭಿನ್ನನಾದವ. ಮುಕ್ತಾಮುಕ್ತೇಷು = ಚಿದ್ಗಣೈಃ–ಸ್ವರೂಪದಲ್ಲಿ ಶುಚಿತ್ವವುಳ್ಳ ಅಮುಕ್ತ, ಮುಕ್ತ ಗಣೈಃ = ಸಮೂಹಗಳಿಂದ, ಭಿನ್ನ ಭಿನ್ನನೆಂದು, ಇತಿ–ಈ ಪ್ರಕಾರ ತಿಳಿಯಬೇಕು. ಜಡೈಃ = ಜಡಗಳಿಂದ ಜಡಗಳು, ಜೀವರಿಂದ ಜೀವರು ಭಿನ್ನರು. ಸತ್ಯೈಃ = ಸತ್ಯದಿಂದ, ಸದಾ = ಸರ್ವದಾ ತಿಳಿಯತಕ್ಕದ್ದು ಎಂತ ತಾತ್ಪರ್ಯ.

ಪರಮಾತ್ಮನ ಏಕರೂಪಕ್ಕೂ, ಅನಂತಾನಂತ ರೂಪಗಳಿಗೂ ಅತ್ಯಂತ ಅಭೇದ ಎಂತ ಯಾಕೆ ಹೇಳಿದರೆಂದರೆ, ಪರಮಾತ್ಮನ ಏಕರೂಪಗಳ ವಿದ್ಯಮಾನಗಳು ಅನಂತರೂಪಗಳಲ್ಲೀನೂ, ಅನಂತರೂಪಗತ ವಿದ್ಯಮಾನಗಳು ಏಕರೂಪದಲ್ಲೀನೂ ಇರೋಣವೆಂಬೋದೇ ಅಭೇದಕ್ಕೆ ಲಕ್ಷಣ ಎಂತ ತಾತ್ಪರ್ಯ. ಆದ್ದರಿಂದ, ಅನಂತಾನಂತ ಬ್ರಹ್ಮಾಂಡಗಳು ಏಕರೂಪದಲ್ಲಿದ್ದಂತೆ ಅನಂತಾನಂತ ರೂಪದಲ್ಲಿ ಅವೆ ಎಂತಲೂ, ಏಕರೂಪದಲ್ಲಿ ದಾವ ರೀತಿಯಿಂದ ಸೃಷ್ಟ್ಯಾದಿಗಳು ಅಗತ್ಯವೋ ತದ್ವತ್, ಅನಂತರೂಪಗಳಲ್ಲಿ ಆಗತಾ ಅವೆ. ಎಂತಲೂ. ಏತಾದೃಶ ಲಕ್ಷಣ ಸರ್ವ ರೂಪದಲ್ಲಿ ಇರೋಣದರಿಂದ ಅಧೀರ ಎಂತ ಹೇಳೋದಕ್ಕೆ ಕಾರಣವಾಯಿತು. ಹೀಂಗೆ ಹೇಳಿದರೆ, ಪರಸ್ಪರ ಭೇದವೂ ಅಪೂರ್ಣತ್ವವೂ ಬರೋದಾಗತದೆ. ಆದ್ದರಿಂದ. ಪ್ರತ್ಯೇಕ ಅನಂತಾನಂತ ಬ್ರಹ್ಮಾಂಡಗಳು, ತದ್ವ್ಯಾಪಾರಗಳು ಸರ್ವ ರೂಪಗಳಲ್ಲಿ ಅವೆ ಎಂತ ಸಿದ್ಧಾಂತ. ಇದರ ಮುಂದೆ ಉದಹರಿಸತಕ್ಕ ಪ್ರಮಾಣದಿಂದ ಪರಮಾತ್ಮ ಏಕಕಾಲಕ್ಕೆ ಅನಂತ ಬ್ರಹ್ಮಾಂಡಗಳ ಸೃಷ್ಟಿ ಮಾಡೋ ಇಚ್ಛಾ ಮಾಡೋದಿಲ್ಲ ಎಂತ ತೋರತದೆ. ಅದು ಪ್ರತೀತಾರ್ಥವೂ, ಗರ್ಗ ಸಂಹಿತಾ ಪ್ರಮಾಣವೂ, ಅದಕ್ಕೆ ಅರ್ಥವೂ ಮುಂದೆ ಹೇಳಲ್ಪಟ್ಟಿದೆ :—

**ತಾತ್ಪರ್ಯನಿರ್ಣಯ, ಅಧ್ಯಾಯ ೨೭ :–**

**"ಯಸ್ಮಿನ್ನಿರೇನ್ಯೇಪ್ಯಜ ಜೀವಕೋಶಾಃ ನಾಹಂಪರಾಯೋರ್ನ ಮರೀಚಿ ಮುಖ್ಯಾಃ । ಜಾನಂತಿ ಯದ್ಗುಣಾನ್ನ ರಮಾ ರಯೋಽಪಿ ನಿತ್ಯ ಸ್ವತಂತ್ರ ಉತ ಕೋಽಸ್ತಿ ತದನ್ಯ ಈಶಃ ॥"**

**ವ್ಯಾಖ್ಯಾನ–ವರದರಾಜೀಯ ವ್ಯಾಖ್ಯಾನ:–**

**"ಏಕಶ್ಲೋಕಘಟಕೀಭೂತ ಅಜ ಜೀವಕೋಶಾ ಇತ್ಯಸ್ಯ ಪದಸ್ಯ ವ್ಯಾಖ್ಯಾನಂ. ಅಜಜೀವಕೋಶಾಃ– ಅಜಸ್ಯ ಚತುರ್ಮುಖಸ್ಯ ಜೀವ ಕೋಶಾಃ ಜೀವ–ನಿಧಾನಸ್ಥಾನ ಭೂತಾಃ ಬ್ರಹ್ಮಾಂಡಾಃ ಸಹಸ್ರೋಽಪಿ**

**ಸೃಷ್ಟಿಕಾಲೇ ಭವಂತಿ ಸಂಹಾರಾಕಾಲೇ ನ ಭವಂತಿ || ಏಕಸ್ಮಿನ್‌ಪರೇ ಸರ್ವೋತ್ತಮೇ ಭೂಮ್ನಿ ಪರಿಪೂರ್ಣೇ ಈದೃಶಾಃ ವರ್ತಮಾನ ಬ್ರಹ್ಮಾಂಡಸದೃಶಾಃ ಅನ್ಯೇಪಿ ಭೂತ ಭವಿಷ್ಯಂತಃ ||**

**ಅರ್ಥ :-**

ಬ್ರಹ್ಮಾಂಡಗಳು ಉತ್ಪತ್ತಿಕಾಲದಲ್ಲಿ ಸಹಸ್ರಸಂಖ್ಯಾದಿಂದ ಸೃಷ್ಟಿ ಆಗೋದಾಗಿ, ಇರೋದಾಗಿ ಅವೆ. ಸಂಹಾರ ಕಾಲದಲ್ಲಿ ಸಂಹಾರವಾಗಿ ಇರೋದಿಲ್ಲ. ಅಂದರೆ, ಒಂದು ಬ್ರಹ್ಮಾಂಡ ಸದೃಶ ಅನೇಕ ಬ್ರಹ್ಮಾಂಡ ಗಳು ಪೂರ್ವೋಕ್ತ ಪ್ರಕಾರ ದೇಶ ಭೇದಗಳಲ್ಲಿ ಏಕಕಾಲವಚ್ಛೇದೇನ ಸಹಸ್ರ ಪ್ರಕಾರ ಬ್ರಹ್ಮಾಂಡಗಳ ಸೃಷ್ಟಿಯೂ ಸಂಹಾರವೂ ಮಾಡತಾ ಇರ್ತಾನೆ ಎಂತ ತಾತ್ಪರ್ಯ. ಸಹಸ್ರಶಬ್ದ ಅನಂತವಾಚಿ ಎಂತ ತಿಳೀಬೇಕು. ಇದು ಒಂದೊಂದು ಪ್ರದೇಶದ ವಿಚಾರ. ಲಯಕಾಲ ಪ್ರಾಪ್ತವಾದರೆ, ಆಗ್ಗೆ ಲಯವಾಗಿ ಆ ಕಾಲದಲ್ಲಿ ಇರೋದಿಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದಾಗೇ ಲಯ ಎಂತ ಹೇಳಿದಂತಾಯಿತು. ಈ ರೀತ್ಯಾ ಅನಂತ ಅಂಡಗಳು ಅನಂತ ದೇಶದಲ್ಲಿ ಒಂದೇ ಕಾಲದಲ್ಲಿ ಸೃಷ್ಟಿಯು ಆಗೋವಾಗತವೆ. ಪರೇ ಎಂದರೆ, ಪ್ರಳಯಕಾಲಕ್ಕೆ ಅನ್ಯವಾದ ಸೃಷ್ಟಿಕಾಲ ಎಂತ ತಾತ್ಪರ್ಯ. ಸೃಷ್ಟಿಕಾಲದಲ್ಲಿ ದಾವ ಪ್ರದೇಶದಲ್ಲಿ ಪೂರ್ವದಲ್ಲಿ ಒಂದು ಬ್ರಹ್ಮಾಂಡ ಸೃಷ್ಟಿ ಮಾಡಿತ್ತೋ ಆ ಪ್ರದೇಶದಲ್ಲಿ ಪುನಃ ಒಂದೇ ಬ್ರಹ್ಮಾಂಡ ಸೃಷ್ಟಿಯು. ಆ ಪ್ರದೇಶದಲ್ಲಿ ಸಹಸ್ರವಾಗಿ ಬ್ರಹ್ಮಾಂಡಗಳ ಸೃಷ್ಟಿಯು ಇಲ್ಲ. ಸಹಸ್ರವಾಗಿ ಬ್ರಹ್ಮಾಂಡಗಳು ಎಂದರೆ. ಲಯಾನಂತರ ಸೃಷ್ಟಿಮಾಡತಕ್ಕ ಕಾಲದಲ್ಲಿ ಅಂಡಗಳು ಬಹುತ್ವೇನ ಪ್ರತ್ಯೇಕವಾಗಿ ರೋಮ ಕೂಪಗಳಲ್ಲಿ ಧರಿಸತಾನೆ ಎಂತ ತಾತ್ಪರ್ಯ. ಸಂಹಾರಕಾಲದಲ್ಲಿ ಅಂಶಿಭೂತವಾದ ಬ್ರಹ್ಮಾಂಡದಲ್ಲಿ ಸೇರಿ ಲಯವಾಗತದೆ. ಇದು ಒಂದು ಪ್ರಕಾರ. ಇದೂನೂ ಸತ್ಯವೇ. ಪರಿಪೂರ್ಣನಾದ ಪರಮಾತ್ಮನು ವಿದ್ಯಮಾನ ಬ್ರಹ್ಮಾಂಡಕ್ಕೆ ಸದೃಶವಾದ ಅನ್ಯಗಳಾದ ಅನಂತಾನಂತ ಬ್ರಹಾಂಡಕ್ಕೆ ಸದೃಶವಾದ ಅನ್ಯವಾದ ಅನಂತಾ ನಂತವಾದ ಬ್ರಹ್ಮಾಂಡಗಳು ಮತ್ತು ಮುಕ್ತರು ಬರತಕ್ಕ ಅಸೃಜ್ಯರು ಏಕೈಕ

ದೇಶದಲ್ಲಿ ಒಂದೊಂದಾಗಿ ಅನಂತಾನಂತ ಬ್ರಹ್ಮಾಂಡಗಳ ಭೂತಭವಿಷ್ಯದ್ವರ್ತಮಾನ ಜೀವರ ಸಹಿತ ತನ್ನ ರೋಮಕೂಪದಲ್ಲಿ ಧರಿಸಿ ಸೃಷ್ಟ್ಯಾದಿಗಳ ಮಾಡತಾನಂತ ತಾತ್ಪರ್ಯ. ಒಂದೇ ಸ್ಥಳದಲ್ಲಿ ಸೃಷ್ಟಿ ಮಾಡುತಾನಾ ಎಂದರೆ, ಕಾಲ ಭೇದೇನ ಭೂತ ಭವಿಷ್ಯದ್ವರ್ತಮಾನ ಕಾಲಗಳಲ್ಲಿ ಸೃಷ್ಟಿ ಮಾಡತಕ್ಕ ಬ್ರಹ್ಮಾಂಡಗಳ ವಿವಕ್ಷಯಾ ಅನಂತ ಬ್ರಹ್ಮಾಂಡಗಳು ಒಂದು ಪ್ರದೇಶದಲ್ಲಿ ಸೃಷ್ಟಿ ಎಂತ ತಾತ್ಪರ್ಯ. ಉಭಯವಿಧ ಬ್ರಹ್ಮಾಂಡಗಳು ಸತ್ಯವೇ. ಅನಂತಾನಂತ ಬ್ರಹ್ಮಾಂಡಗಳು ಪ್ರತ್ಯೇಕವಾಗಿ ಏಕಕಾಲಾವಚ್ಛೇದೇನೆ ಇರೋಣವೂ ಸತ್ಯವೇ. ಈ ಪ್ರಕಾರ ತಿಳಿಯಬೇಕು. ಈ ವಿಷಯದಲ್ಲಿ ಅನೇಕ ಪ್ರಮಾಣಗಳು ಅವೆ. ಇಲ್ಲಿ ಬರೆಯಲಿಕ್ಕೆ ಅವಕಾಶ ವಿಲ್ಲ, ॥೨೫॥

(೨) "ಭಾವಪ್ರಕಾಶಿಕೆ"–ವ್ಯಾಖ್ಯಾನ:–

ಶ್ರೀ ಪರಮಾತ್ಮನ ಮಹಿಮೆಯು ಪರಮಾದ್ಭುತವೆಂದು ತಿಳಿಸುತ್ತಾರೆ. ಪರಮಾತ್ಮನ ಒಂದು ರೂಪದಲ್ಲಿ ಅನಂತಾನಂತ ರೂಪಗಳು ಇರುವುವು. **ಭಾಗವತ ದಶಮಸ್ಕಂಧ ೯ನೆಯ ಅಧ್ಯಾಯದಲ್ಲಿ** ಶ್ರೀಕೃಷ್ಣನು ಮಣ್ಣು ತಿಂದನೆಂಬ ಶಂಕೆಯಿಂದ ಅವನನ್ನು ಶಿಕ್ಷಿಸಲು ಬಂದ ತಾಯಿಯಾದ ಯಶೋದೆಗೆ ತಾನು ಮಣ್ಣು ತಿಂದಿಲ್ಲವೆಂದು ಸ್ಪಷ್ಟಪಡಿಸುವುದಕ್ಕಾಗಿ ಬಾಯಿ ತೆರೆದು ತೋರಿದ ಪ್ರಕರಣದಲ್ಲಿ :–

**ಸಾ ತತ್ರ ದದೃಶೇ ವಿಶ್ವಂ ಜಗತ್ ಸ್ಥಾಸ್ನು ಚ ಖಂಡಿತಃ ।**
**ಸಾದ್ರಿ ದ್ವೀಪಾಬ್ಧಿ ಭೂಗೋಳಂ ಸವಾಯ್ವಗ್ನೀಂದು ತಾರಕಂ ॥೩೭॥**

**ಏತದ್ವಿಚಿತ್ರಂ ಸಹಜೀವಕಾಲ ಸ್ವಭಾವ ಕರ್ಮಾಶಯ ಲಿಂಗಭೇದಂ ।**
**ಸೂನೋಸ್ತನೌ ವೀಕ್ಷ್ಯ ವಿದಾರಿತಾಸ್ಯೇ ವ್ರಜಂ ಸಹಾತ್ಮಾ**
**ನಮುನಾಪಶಂಕಾಲಮ್ ॥೩೮॥**

ಯಶೋದೆಯು ಶ್ರೀ ಕೃಷ್ಣನ ಬಾಯಲ್ಲಿ ಸ್ಥಾವರಜಂಗಮಾತ್ಮಕವಾದ ಪ್ರಪಂಚವನ್ನು ನೋಡಿದಳು ಎಂದು ಸಾಮಾನ್ಯವಾಗಿ ಪ್ರಪಂಚವೆಂದು ಹೇಳಿದುದನ್ನು ವಿವರಿಸುತ್ತಾರೆ. ಪ್ರಪಂಚದ ಸಕಲ ಪ್ರದೇಶಗಳನ್ನೂ, ಭೂಗೋಳವನ್ನೂ, ವಾಯು, ಅಗ್ನಿ, ಚಂದ್ರ, ನಕ್ಷತ್ರಾದಿಗಳಿಂದ ಕೂಡಿದ ಅಂತರಿಕ್ಷ ಮೊದಲಾದವುಗಳನ್ನ ನೋಡಿದಳು. ಅಷ್ಟು ಮಾತ್ರವೇ ಅ ಅನಾದಿಕಾಲೀನರಾದ ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರಾಶಿಗಳನ್ನೂ ಅವರಲ್ಲಿ ಸೃಷ್ಟಿಗೆ ಬಾರದವರನ್ನೂ ಕರ್ಮಾನು ಸಾರವಾಗಿ ಸೃಷ್ಟಿಗೆ ಒಂದು ಕರ್ಮಗಳನ್ನು ಮಾಡುತ್ತಿರುವವರನ್ನೂ, ಸಾತ್ವಿಕಾದಿ ಜೀವರು ಮುಕ್ತಿ, ಸಂಸಾರ, ತಮಸ್ಸೆಂಬ ತ್ರಿವಿಧಕರ್ಮ ಫಲವನ್ನು ಅನುಭವಿಸುತ್ತಿರುವುದನ್ನೂ, ಅವರವರ ಸಂಸಾರ ಲಕ್ಷಣಗಳು ಇವುಗಳೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದುದಲ್ಲದೆ, ತನ್ನ ಗೋಕುಲ, ಗೋಕುಲದಲ್ಲಿ ತಾನು, ಶ್ರೀ ಕೃಷ್ಣನ ಹೊಟ್ಟೆಯಲ್ಲಿ ಕಾಣುವ ಪ್ರಪಂಚ ವನ್ನು ತೆರೆದು ತೋರಿಸುತ್ತಿರುವ ಬಾಯಿಯ ಮಾರ್ಗವಾಗಿ ನೋಡುತ್ತಿರುವು ದನ್ನೂ, ಅದರೊಳಗೂ, ತಾನು-ಗೋಕುಲ-ಪ್ರಪಂಚಗಳು, ಆ ಪ್ರಪಂಚದಲ್ಲಿ ಗೋಕುಲ ಅಲ್ಲೂ ತಾನು ಕೃಷ್ಣನ ಬಾಯಲ್ಲಿ ಪ್ರಪಂಚಾದಿ ಗಳನ್ನೂ. ತನ್ನನ್ನೂ, ಕೃಷ್ಣನನ್ನೂ ಹೀಗೆ ಒಂದು ಕೃಷ್ಣನ ಉದರದಲ್ಲಿ ಒಂದರೊಳಗೊಂದಾಗಿ ಅನಂತಾನಂತ ಪ್ರಪಂಚ, ಗೋಕುಲಾದಿಗಳನ್ನು ಕಂಡು, ಶಂಕೆಯನ್ನು ಹೊಂದಿದಳೆಂದು ಹೇಳಿರುವರು. ಇಲ್ಲಿ ಈ ಶ್ಲೋಕ ದಲ್ಲಿ-"**ವ್ರಜಂ ಸಹಾತ್ಮಾನಂ**"- ಎಂದಿಷ್ಟೇ ಇರುವುದು. ಅನಂತಾನಂತ ವ್ರಜಾದಿಗಳನ್ನು ಕಂಡಳೆಂದು ಶಂಕಿಸಬಾರದು. "**ವ್ರಜಂ ಸಹಾತ್ಮಾನಂ**"- ಎಂಬ ಪದಪ್ರಯೋಗದಿಂದಲೇ ಅನಂತಾನಂತರೂಪಗಳೆಂದು ಅರ್ಥವಾಗು ವುದು. ಹೇಗೆಂದರೆ, ತಾನು, ಗೋಕುಲದಲ್ಲಿ ಶ್ರೀ ಕೃಷ್ಣನು ಬಾಯಿ ಯನ್ನು ತೆರೆದು ತೋರಿಸುತ್ತಿರುವುದನ್ನು ಶ್ರೀ ಕೃಷ್ಣನ ಹೊಟ್ಟೆಯಲ್ಲಿ ಕಂಡಳು. ಅಂದ ಮೇಲೆ ಆ ಬಾಯಲ್ಲಿ ಜಗತ್ತನ್ನೂ, ಗೋಕುಲವನ್ನೂ, ತನ್ನನ್ನೂ. ಬಾಯಿತೆರೆದು ತೋರಿಸುತ್ತಿರುವ ಶ್ರೀ ಕೃಷ್ಣನನ್ನೂ ಕಂಡಳೆಂದು

ಪುನಃ ಹೇಳಬೇಕಾಗಿಲ್ಲ. ಹೀಗೆ ಹೊಟ್ಟೆಯಲ್ಲಿ ಕಾಣುವ ಒಂದೊಂದು ಕೃಷ್ಣ ರೂಪದ ಉದರದಲ್ಲಿ ಇದರಂತೆಯೇ ಪ್ರಪಂಚವನ್ನು ಕಂಡೇ ಕಾಣಬೇಕಲ್ಲವೇ? ಈ ಬಲದಿಂದಲೇ ಅನಂತಾನಂತ ರೂಪಗಳನ್ನು ಕಂಡಳೆಂದು ಅರ್ಥವಾಗುವು ದೆಂಬ ತಾತ್ಪರ್ಯ. ಒಂದೇ ಕಾಲದಲ್ಲಿ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವನು. ಅಂದರೆ, ಸಾಮಾನ್ಯವಾಗಿ ಜಗತ್ತನ್ನು ಸೃಷ್ಟಿಕಾಲದಲ್ಲಿ ಸೃಷ್ಟಿ ಮಾಡುವುದು, ಮಧ್ಯಕಾಲದಲ್ಲಿ ರಕ್ಷಣೆ, ಪ್ರಳಯಕಾಲದಲ್ಲಿ ನಾಶ ಮಾಡುವುದು ಸಹಜವಾದರೂ **"ಜನಂ ಜನೇನ ಜನಯುನ್ ಮಾರಯುನ್ ಮೃತ್ಯುನಾತ್ಮನಃ"**– ಕಾಲನಾಮಕನಾದ ಶ್ರೀಹರಿಯು ತನ್ನ ವಶದಲ್ಲಿರುವ ಬ್ರಹ್ಮಾದಿಗಳಿಂದಲೂ ಇತರ ಜನಗಳಿಂದಲೂ ಜನಗಳನ್ನು ಹುಟ್ಟಿಸುತ್ತಾ, ಏಕಕಾಲದಲ್ಲಿಯೇ ತನ್ನ ವಶದಲ್ಲಿರುವ ಮೃತ್ಯುವಿಗೆ ನಿಮಿತ್ತಕಾರಣವಾದ ರೋಗಾದಿಗಳಿಂದ ಕೊಲ್ಲಿಸುತ್ತಾ, ಇರುವನು ಎಂಬ **ಭಾಗವತ ತೃತೀಯ ಸ್ಕಂಧದ** ವಾಕ್ಯದಿಂದ, ಒಬ್ಬನಲ್ಲಿದ್ದು ಹುಟ್ಟಿಸುವನು. ಅದೇ ಕಾಲದಲ್ಲಿಯೇ ಮತ್ತೊಬ್ಬರಲ್ಲಿದ್ದು ಹುಟ್ಟಿದವರನ್ನು ಸಾಕುವನು. ಮತ್ತೊಂದು ರೂಪ ದಿಂದ ಕೊಲ್ಲುತ್ತಿರುವನು. ಆದರೆ ಜಗತ್ತಿನಲ್ಲಿ ಜನರು ಹುಟ್ಟುತ್ತಿರುವುದು, ಜೀವಿಸುತ್ತಿರುವುದು, ಸಾಯುತ್ತಿರುವುದು ಇವುಗಳನ್ನು ಸಕಲರೂ ನೋಡು ತ್ತಿದ್ದರೂ, ಇವನ ಮಗನಿವನು, ಇವನನ್ನು ಸಾಕಿದವನಾತನು, ಈ ಕಾರಣದಿಂದ ಇವನು ಮೃತನಾದನು–ಎಂದು ಅಂದುಕೊಳ್ಳುವರೇ ಹೊರತು, ಇವುಗಳೆಲ್ಲವೂ ಭಗವದ್ವ್ಯಾಪಾರವೆಂದು ಯಾರೂ ಅರಿಯುವುದಿಲ್ಲ, ಜ್ಞಾನಿ ಗಳಿಗೆ ಮಾತ್ರವೇ ಗೋಚರವಾಗುವುದು. ಭಾರತಯುದ್ಧದಲ್ಲಿ ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿದಾಗ, ಭೀಷ್ಮ ಪ್ರಮುಖರಾದ ಯೋಧರೆಲ್ಲರೂ ಶ್ರೀಕೃಷ್ಣನ ಬಾಯೊಳಗೆ ಪ್ರವೇಶಿಸುತ್ತಿರುವುದನ್ನು ಶ್ರೀಕೃಷ್ಣನು ಅರ್ಜುನ ನಿಗೆ ತೋರಿಸಿದುದನ್ನೂ, ಅರ್ಜುನನು ಕಂಡುದನ್ನು **ಭಗವದ್ಗೀತೆಯ ೧೧ನೆಯ ಅಧ್ಯಾಯದಲ್ಲಿ** ಸ್ಪಷ್ಟ ಮಾಡಿರುವರು, ಆದುದರಿಂದಲೇ ಪರಮಾತ್ಮನ ಮಹಿಮೆಯು ವ್ಯಕ್ತವಾಗಲಿಲ್ಲವೇ ? —ಎಂದು ತಾತ್ಪರ್ಯ. ||೨೫||

(೩) "ಭಾವದರ್ಪಣ ಟೀಕಾ" – ವ್ಯಾಖ್ಯಾನ :—

ಅರ್ಜುನನಿಗೆ ತೋರಿಸಿದ ವಿಭೂತಿರೂಪವನ್ನು ಹೇಳುತ್ತಾರೆ– "ಒಂದೊಂದು"– ಎಂಬ ಪದ್ಯದಿಂದ,

"ತತ್ರೈಕಸ್ಥಂ ಪ್ರವಿಭಕ್ತ ಮನೇಕಧಾ ।
ಅಪಶ್ಯ ದೇವದೇವಸ್ಯ ಶರೀರೇ ಪಾಂಡವಸ್ತದಾ ॥
ತತಃ ಸ ವಿಸ್ಮಯಾವಿಷ್ಟೋ ಹೃಷ್ಟರೋಮಾ ಧನಂಜಯಃ ।
ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ ॥"

—ಇತಿ ಗೀತೋಕ್ತೇಃ ॥

(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ :–

ಪ್ರತಿಯೊಂದು ರೂಪದಲ್ಲಿ ಅನಂತಾನಂತರೂಪಗಳು ಅಡಕವಾಗಿವೆ. ಒಂದೇ ರೂಪದಿಂದ ಸಮಸ್ತ ಲೋಕಗಳನ್ನು ಶ್ರೀಹರಿಯು ಸೃಷ್ಟಿಮಾಡುವನು. ಅಂತಹ ಅಗಮ್ಯಮಹಿಮನಾದ ಶ್ರೀ ಪರಮಾತ್ಮನು ತನ್ನಲ್ಲಿರುವ ಅನಂತಾನಂತರೂಪಗಳನ್ನು ವಿಶ್ವರೂಪ ಸಂದರ್ಶನ ಭಾಗ್ಯವನ್ನು ಅರ್ಜುನನಿಗೆ ತೋರಿಸಿದನು. ಒಂದು ರೂಪದಲ್ಲಿ ಯುಕ್ತವಾಗಿರುವ ಅನಂತಾನಂತ ರೂಪಗಳ ಜ್ಞಾನವು ಅಜ್ಞರಿಗಾಗದು. ಅಧಿಕಾರಿಗಳಾದ ಜ್ಞಾನಿಗಳು ಮಾತ್ರ ತಿಳಿಯಬಲ್ಲರು ಎಂಬುದೇ ಈ ಪದ್ಯದ ಮುಖ್ಯ ತಾತ್ಪರ್ಯ. ॥೨೫॥

(೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–

ಒಂದೊಂದು ಅನಂತಾನಂತ ರೂಪಗಳುಳ್ಳ ಅನಂತರೂಪಗಳು ಒಂದೇ ರೂಪಿನಲ್ಲಿರುವುವು. ಒಂದೇ ರೂಪದಿಂದ ಸೃಷ್ಟಿ, ಸ್ಥಿತಿ, ಮೊದಲಾದ ಅಷ್ಟ ವ್ಯಾಪಾರಗಳನ್ನು ಒಂದೇ ಕಾಲದಲ್ಲಿ ಮಾಡಿ ಅಜ್ಞರಿಗೆ ತಿಳಿಸದಂತೆ ಪರಿಪೂರ್ಣನಾಗಿರುವನು. ನಂದನಂದನನಾದ ಶ್ರೀಕೃಷ್ಣನು ರಣಮಧ್ಯದಲ್ಲಿ ಇಂದ್ರಸುತ

ನಾದ ಅರ್ಜುನನಿಗೆ ವಿಶ್ವರೂಪವನ್ನು ತೋರಿಸಲಿಲ್ಲವೆ ? ಅಂದರೆ, ಗೀತೆಯಲ್ಲಿ ಹೇಳಿರುವಂತೆ ತೋರಿಸಿರುವನೆಂದರ್ಥ. ॥೨೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅಗಮ್ಯಮಹಿಮನಾದ. ಶ್ರೀಪರಮಾತ್ಮನು ತನ್ನ ಒಂದೇ ರೂಪದಿಂದ ಅನಂತಾನಂತ ರೂಪಗಳನ್ನು ಏಕಕಾಲದಲ್ಲಿ ಅಭಿವ್ಯಕ್ತಿಮಾಡಿ, ಸೃಷ್ಟ್ಯಾದಿ ಸಕಲ ವ್ಯಾಪಾರವಿಶೇಷಗನ್ನೂ ಏಕರೂಪದಿಂದಲೇ ಮಾಡಬಲ್ಲ ಅಂಚಿತ್ಯಾದ್ಭುತ ಚರಿತನು ಎಂದು ತಿಳಿಸುತ್ತಾರೆ. ಅರ್ಜುನನಿಗೆ ತನ್ನ ವಿಶ್ವರೂಪವನ್ನು ಸಮರ ಭೂಮಿಯಲ್ಲಿ ತೋರಿಸಿದ ದೃಷ್ಟಾಂತ ಸಹಿತ. **"ಒಂದನಂತಾನಂತ"**—ಎಂಬ ಪ್ರಸಕ್ತ ೨೫ನೆಯ ಈ ಪದ್ಯದಿಂದ.

(೧) ಶ್ರೀಪರಮಾತ್ಮನು ಪರಮಾದ್ಭುತಚರಿತನು. ಅವನ ಒಂದೊಂದು ರೂಪದಲ್ಲಿಯೂ ಅನಂತಾನಂತ ರೂಪಗಳು ಸಂದಣಿಸಿಕೊಂಡಿವೆ. ಪ್ರತಿ ಪ್ರತಿರೂಪವೂ ಪರಿಪೂರ್ಣವೇ. ಭಗವಂತನ ಪ್ರತಿಪ್ರತಿ ರೋಮಕೂಪಗಳಲ್ಲಿ ಅನಂತಬ್ರಹ್ಮಾಂಡಗಳು ಅಡಕವಾಗಿವೆ. ಆದರೆ ಒಂದು ಕಾಲದಲ್ಲಿ ಒಂದೇ ಬ್ರಹ್ಮಾಂಡವನ್ನು ಸೃಷ್ಟಿಸುತ್ತಾನೆ. ಹಾಗೆ ಸೃಷ್ಟವಾದ ಬ್ರಹ್ಮಾಂಡಗತ ಲೋಕಗಳಲ್ಲಿರುವ ಸಮಸ್ತ ಜೀವರಾಶಿಗಳ ಪಾಲನೆ ಸ್ವಯಂ ವಿಷ್ಣುರೂಪದಿಂದ ಮಾಡುತ್ತಾನೆ. ಕೊನೆಯಲ್ಲಿ ರುದ್ರಾಂತರ್ಗತನಾಗಿ, ರುದ್ರನಾಮದಿಂದ ಸಂಕರ್ಷಣರೂಪದಿಂದ ಜಗತ್ತಿನ ಲಯ ವ್ಯಾಪಾರವನ್ನೆಸಗುವನು.

(೨) ಅಂಚಿತ್ಯಾದ್ಭುತಚರಿತನಾದ ಶ್ರೀಪರಮಾತ್ಮನ ಮಹಿಮಾತಿಶಯಗಳನ್ನು ಅಧಿಕಾರಿಗಳಾದ ಜ್ಞಾನಿಗಳು ಮಾತ್ರ ತಮ್ಮ ಯೋಗ್ಯತಾನುಸಾರ ಬಲ್ಲರು. ಅಜ್ಞರಿಗೆ ತಿಳಿಯಗೊಡದೆ, ಇಡೀ ಬ್ರಹ್ಮಾಂಡದಲ್ಲಿ ಸಮಸ್ತ ಜಡ ಜಂಗಮಗಳಲ್ಲಿ ಓತಪ್ರೋತನಾಗಿ ವ್ಯಾಪ್ತನಾಗಿದ್ದು, ಸೃಷ್ಟ್ಯಾದಿ ಅಷ್ಟ ವ್ಯಾಪಾರಗಳನ್ನು ಮಾಡುತ್ತಿರುವನು,

(೩) ಕುರುಕ್ಷೇತ್ರದ ಮಹಾಸಮರವು ಪ್ರಾರಂಭವಾಗಬೇಕೆಂಬ ಸಮಯ. ಧೀರನಾದ ಸವ್ಯಸಾಚಿಯು ಬಂಡಿಬೋವನಾದ ಜಗಚ್ಚಕ್ರಪ್ರವರ್ತಕನಾದ ಶ್ರೀಕೃಷ್ಣನನ್ನು ಕುರಿತು–"**ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ**—ಎಂದು ಆತ್ಮವಿಶ್ವಾಸದಿಂದ ಕೇಳುತ್ತಾನೆ. ಆಗ ಎದುರು ಪಕ್ಷದಲ್ಲಿದ್ದ ತನ್ನ ಸಮಸ್ತ ಬಂಧುವರ್ಗವನ್ನು ಕಂಡು, ಅಧೀರನಾಗುತ್ತಾನೆ. ಅರ್ಜುನನಲ್ಲಿ ಕರ್ತವ್ಯಪ್ರಜ್ಞೆಯನ್ನು ಎಚ್ಚರಿಸಲು ಗೀತಾಚಾರ್ಯನು ಆ ರಣ ಮಧ್ಯದಲ್ಲಿ ಗೀತೋಪದೇಶ ಮಾಡಬೇಕಾಯಿತು. ಆ ಯದುಕುಲಶೇಖರನು ಪಾರ್ಥನನ್ನು ಕುರಿತು—

**"ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ ತ್ವಯ್ಯುಪಪದ್ಯತೇ ।**
**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥"**

ಎಂದು ಹತಾಶನಾಗಿ ನಿರ್ವಿಣ್ಣನಾಗಿದ್ದ ಅರ್ಜುನನಲ್ಲಿ ಕ್ಷಾತ್ರತೇಜವನ್ನು ತುಂಬುತ್ತಾನೆ.

ಅಧಿಕಾರಿಯಾದ ಆ ಇಂದ್ರಾತ್ಮಜನನಿಗೆ ತನ್ನ **ವಿಶ್ವರೂಪ** ಸಂದರ್ಶನ ಭಾಗ್ಯವನ್ನು ಕರುಣಿಸಿದನು.

ಶ್ರೀಕೃಷ್ಣನ ಆ ಒಂದೇ ರೂಪದಲ್ಲಿ ಅನಂತಾನಂತ ರೂಪ ಸಮೂಹ ಗಳನ್ನು ದಿವ್ಯದೃಷ್ಟಿಯಿಂದ ಈಕ್ಷಿಸಿದ ಅರ್ಜುನ ದಿಗ್ಭ್ರಾಂತನಾದ. ಕಿಂ ಕರ್ತವ್ಯಮೂಢನಾಗಿ ಕೈಜೋಡಿಸಿ, ಆ ಪರಾತ್ಪರನ ಮುಂದೆ ಮಣಿದು ನಿಂತ. ಆಗ ಸರ್ವಜೀವರ ಪ್ರೇರಕನಾದ ಶ್ರೀಕೃಷ್ಣನು—

**"ತಸ್ಮಾತ್ತ್ವಮುತ್ತಿಷ್ಠ ಯಶೋ ಲಭಸ್ವ**
**ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಮ್ ।**
**ಮಯೈವೈತೇ ನಿಹತಾಃ ಪೂರ್ವಮೇವ**
**ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥**

–ಎಂದು ಅರ್ಜುನನಲ್ಲಿ ಸುಪ್ತವಾಗಿದ್ದ ಕರ್ತವ್ಯಪ್ರಜ್ಞೆಯನ್ನು ಎಚ್ಚರಿಸುತ್ತಾನೆ.

(೩) ಅಂತೆಯೇ ನಂದಗೋಕುಲದಲ್ಲಿ ಯಶೋದೆಯು ಪುಟ್ಟಬಾಲಕ ಶ್ರೀಕೃಷ್ಣನನ್ನು—"ಮಣ್ಣು ತಿನ್ನುತ್ತೀಯಾ ? ಎಲ್ಲಿ ಬಾಯಿ ತೆರೆದು ತೋರಿಸು"–ಎಂದು ಗದರಿಕೆಯ ಮಾತುಗಳನ್ನಾಡಿದಾಗ, ಆ ಮನಮೋಹಕ ಬಾಲಕ ತನ್ನ ಪುಟ್ಟ ಬಾಯಿಯನ್ನು ತೆರೆದ. ಅಬ್ಬ! ಆ ಕಿರುಬಾಯಿಯಲ್ಲಿ ಯಶೋದೆ ನೋಡಿದುದೇನು ? ಇಡೀ ಬ್ರಹ್ಮಾಂಡವನ್ನು ಆ ಪುಟ್ಟ ಬಾಯಿಯಲ್ಲಿ ಕಂಡಳು. ಮೂಕ ವಿಸ್ಮಯಳಾಗಿ ಆ ಪುಟ್ಟ ಬಾಲಕನನ್ನೇ ಎವೆ ಇಕ್ಕದೇ ನೋಡುತ್ತಾ ನಿಂತಳು. ಆ ಚಿಕ್ಕಬಾಯಿಯಲ್ಲಿ ಸಮಸ್ತ ಬ್ರಹ್ಮಾಂಡ, ಅದರಲ್ಲಿ ನಂದಗೋಕುಲ, ಅಲ್ಲಿ ತನ್ನ ಮನೆಯ ಪಡಸಾಲೆ, ಅಲ್ಲಿ ತಾನು ಮತ್ತು ತನ್ನ ಎದುರಿಗೆ ಬಾಯಿತೆರೆದು ನಿಂತಿರುವ ಜಗದ್ಭರಿತ ಶ್ರೀಕೃಷ್ಣನನ್ನು ನೋಡಿದಳು. ಇಂತು ಒಂದೇ ರೂಪದಿಂದಲೇ, ಏಕಕಾಲದಲ್ಲಿ ವಿಶ್ವರೂಪ ದರ್ಶನ ಭಾಗ್ಯವನ್ನು ತನ್ನ ತಾಯಿಗೆ ತೋರಿಸಿದ ಪರಮಾದ್ಭುತಚರಿತನು ಆ ಆ ನಂದನಂದನನು ! ॥೨೫॥

## ಪದ್ಯ (೨೬)

**ಮೂಲ :—**

**ಶ್ರೀ ರಮೇಶನ ಮೂರ್ತಿಗಳು ನವ ।**
**ನಾರಿಕುಂಜರದಂತೆ ಏಕಾ ।**
**ಕಾರ ತೋರ್ಪವು ಅವಯವಾಹ್ವಯ ಅವಯವಗಳಲ್ಲಿ ॥**
**ಬೇರೆ ಬೇರೆ ಕಂಗೊಳಿಸುವ ಶ ।**
**ರೀರದೊಳು ನಾನಾ ಪ್ರಕಾರ ವಿ ।**
**ಕಾರಶೂನ್ಯ ವಿರಾಟನೆನಿಸುವ ಪದುಮಜಾಂಡದೊಳು ॥ ॥೨೬॥**

**ಅವತರಣಿಕೆ :-**

ಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನ ಖಂಡಾಖಂಡ ರೂಪೋಪಾಸನೆಯನ್ನು ಸದೃಷ್ಟಾಂತನಾಗಿ ವಿವರಿಸುತ್ತಾರೆ. **"ಶ್ರೀರಮೇಶನ"**— ಎಂಬ ಪ್ರಸಕ್ತ ಸಂಧಿಗತ ೨೬ನೆಯ ಈ ಪದ್ಯದಿಂದ.

ರಮಾರಮಣನಾದ ಶ್ರೀಪರಮಾತ್ಮನ ಭಗವದ್ರೂಪಗಳು **ನವನಾರೀ ಕುಂಜರ**ದಂತೆ ಏಕಾಕಾರದಲ್ಲಿ ತೋರುವುದು. ಒಂಭತ್ತು ಜನ ಸಲ್ಲಕ್ಷಣರಾದ ಸ್ತ್ರೀಯರನ್ನು ಒಂದು ಆನೆಯ ಆಕಾರ ಬರುವಂತೆ ಹೊಂದಿಸಿದಾಗ, ಆ ಸ್ತ್ರೀಸಮೂಹಕ್ಕೆ **"ನವನಾರೀ ಕುಂಜರ"**—ವೆಂದು ಹೆಸರು. ದೂರದಿಂದ ನೋಡಿದಾಗ ಒಂದೇ ಆನೆಯ ಆಕಾರದಲ್ಲಿ ಕಾಣುವುದು. ಆದರೆ ಆ ಆನೆಯ ವಿವಿಧ ಅವಯವಗಳ ಜೋಡಣೆಯಲ್ಲಿರುವ ಒಂಭತ್ತು ಮಂದಿ ಸ್ತ್ರೀಯರೂ ಹತ್ತಿರಹೋಗಿ ನೋಡಿದಾಗ ಪ್ರತ್ಯೇಕವಾಗಿಯೇ ಕಾಣಿಸುವರು. ಇಂತು, ಅಗಮ್ಯಮಹಿಮನಾದ ಶ್ರೀಪರಮಾತ್ಮನು ಈ ಜಗತ್ತಿನಲ್ಲಿ ಓತಪ್ರೋತವಾದ ತನ್ನ ವ್ಯಾಪ್ತ ರೂಪಗಳಿಂದ ತುಂಬಿರುವನು. ಖಂಡರೂಪನಾಗಿ ಪ್ರತ್ಯೇಕವಾಗಿಯೂ, ಅಖಂಡರೂಪನಾಗಿ ಸಮಗ್ರವಸ್ತುಗಳಲ್ಲಿಯೂ ಇರುವ ಶ್ರೀ ಪರಮಾತ್ಮನ ಮೂರ್ತಿಗಳು **ನವನಾರೀ ಕುಂಜರ**ದಂತೆ ಏಕಾಕಾರದಲ್ಲಿ ತೋರುವುವು. ಒಂದು ವಸ್ತುವಿನ ಪ್ರತಿಪ್ರತಿ ಕಣದಲ್ಲಿಯೂ, ಪ್ರತಿಪ್ರತಿ ಅಂಗಭಾಗಗಳಲ್ಲಿಯೂ ಖಂಡರೂಪದಿಂದ ವ್ಯಾಪ್ತನಾಗಿದ್ದು, ಆ ವಸ್ತುವನ್ನು ಇಡಿಯಾಗಿ ನೋಡಿದಾಗ, ತದಾಕಾರನಾಗಿ ತದ್ರೂಪನಾಗಿ ಅಖಂಡ ರೂಪದಿಂದ ವ್ಯಾಪ್ತನಾಗಿದ್ದಾನೆ. ಖಂಡಾಖಂಡರೂಪಗಳಿಂದ ವ್ಯಾಪ್ತನಾಗಿದ್ದಾಗ್ಯೂ, ಜಗತ್ತಿನಿಂದ ಅತ್ಯಂತ ಭಿನ್ನನಾಗಿದ್ದಾನೆ. ಇಂತು, ನಾನಾ ಪ್ರಕಾರಗಳಲ್ಲಿ ಪರಿಶೋಭಿಸುತ್ತಿರುವ ಆ ಜಗದ್ವಿಲಕ್ಷಣ ಮೂರ್ತಿಯು ನಿರ್ವಿಕಾರನು. ಆ ವಸ್ತುವಿನ ಗುಣಸಂಬಂಧದ ಲೇಪ ಅವನಿಗಿಲ್ಲ. ಈ ಬ್ರಹ್ಮಾಂಡದಲ್ಲಿ ವಿರಾಡ್ರೂಪದಿಂದ ಪುರುಷನಾಮಕನಾಗಿ ಖಂಡಾಖಂಡರೂಪಗಳಿಂದಜಗತ್ತಿನೆಲ್ಲೆಲ್ಲಾ ತುಂಬಿ ಹರಡಿರುವನು. ॥೨೬॥

**ಪ್ರತಿಪದಾರ್ಥ :-**

**ಶ್ರೀರಮೇಶನ** = ಶ್ರೀ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣ ದೇವರ **ಮೂರ್ತಿಗಳು** = ಭಗವದ್ರೂಪಗಳು **ನವನಾರೀಕುಂಜರದಂತೆ** = ಒಂಭತ್ತು ಮಂದಿ ಸ್ತ್ರೀಯರನ್ನು ಆನೆಯ ಆಕಾರದಲ್ಲಿ ಹೊಂದಿಸುವ ಜೋಡಣೆಯೋಪಾದಿಯಲ್ಲಿ **ಏಕಾಕಾರ** = ಒಂದೇ ಆಕಾರದಲ್ಲಿರುವಂತೆ **ತೋರ್ಪವು** = ಕಾಣಿಸುವುದು. **ಅವಯವಾಹ್ವಯ** = ಶ್ರೀ ಪರಮಾತ್ಮ ದೇಹ ಗತ ಕರಚರಣಾದ್ಯವಯಗಳು ತನ್ನ ಒಂದೊಂದು ರೂಪದಿಂದ ತಾನೇ ಆಗಿ ಆದೇ ಅವಯವ ನಾಮಗಳಿಂದ ಕರೆಸಿಕೊಳ್ಳುತ್ತ **ಅವಯವಗಳಲ್ಲಿ** = ತನ್ನ ಕರಚರಣಾದ್ಯವಯಗಳಲ್ಲಿ **ಬೇರೆ ಬೇರೆ** = ನವನಾರೀಕುಂಜರಗತ ಸ್ತ್ರೀಯರುಗಳು ಬೇರೆ ಬೇರೆ ಇರೋಪಾದಿಯಲ್ಲಿ ಇದ್ದು **ಕಂಗೊಳಿಸುವ** = ಅಧಿಕಾರಿಗಳ ಕಣ್ಣಿಗೆ ತೋರೋವನಾಗುತ್ತಾನೆ. **ಶರೀರದೊಳು** = ಪರಮಾತ್ಮನು ತನ್ನ ದೇಹದಲ್ಲಿ **ನಾನಾಪ್ರಕಾರ** = ವಿವಿಧ ರೀತಿಗಳಲ್ಲಿದ್ದರೂ **ವಿಕಾರ ಶೂನ್ಯ** = ತಾನು ಯಾವ ವಿಕಾರವನ್ನೂ ಹೊಂದದೆ **ಪದುಮಜಾಂಡದೊಳು** = ಬ್ರಹ್ಮಾಂಡದಲ್ಲಿ ( ಪದುಮ = ನಾಭೀಕಮಲ. ಪದುಮಜ = ಕಮಲಸಂಭವನಾದ ಬ್ರಹ್ಮ. ಪದುಮಜಾಂಡ = ಬ್ರಹ್ಮಾಂಡ ) **ವಿರಾಟನೆನಿಸುವ** = ವಿರಾಡ್ರೂಪಿ ಎಂದೆನೆಸಿದ್ದಾನೆ. ||೨೬||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಆಯಾ ಒಂದೊಂದು ಬ್ರಹ್ಮಾಂಡದಲ್ಲಿ ನವನಾರೀ ಕುಂಜರ ದೃಷ್ಟಾಂತದಿಂದ ವಿರಾಟ್ ರೂಪದಿಂದ ಶ್ರೀ ಪರಮಾತ್ಮ ಇದ್ದಾನೆ ಎಂತ ಹೇಳತಾರೆ.

ಶ್ರೀ ರಮೇಶನ-ಶ್ರೀ ಲಕ್ಷ್ಮೀಪತಿಯಾದ ಶ್ರೀ ನಾರಾಯಣ ದೇವರ, ಮೂರ್ತಿಗಳು – ಅನಂತಾನಂತ ರೂಪಗಳು, ನವನಾರೀ ಕುಂಜರದಂತೆ – ಒಂಭತ್ತು ಸ್ತ್ರೀ ರೂಪಗಳ ಆಕಾರವಾಗಿ ಒಂದೇ ಆನೆ ಶರೀರದಲ್ಲಿ ಆನೆಯೋ ಪಾದಿಯಲ್ಲಿ, ಏಕಾಕಾಲ-ಒಂದಾದಂಥಾ ಆಕಾರವೂ, ತೋರ್ಪವು – ತೋರೋದಾಗತದೆ. ಅಂದರೆ, ಅನಂತಾನಂತ ರೂಪಗಳಿಂದ ಸಹಿತವಾದದ್ದು. ಶ್ರೀ ಪರಮಾತ್ಮನ ಒಂದೊಂದು ರೂಪ ಎಂತ ತಾತ್ಪರ್ಯ, ಅವ ಯವಾಹ್ವಯ-ಶ್ರೀ ಪರಮಾತ್ಮ ತನ್ನ ದೇಹಗಳ ಕರಚರಣಾದ್ಯವಯುವ ಗಳು ತನ್ನ ಒಂದೊಂದು ರೂಪದಿಂದ ತಾನೆ ಆಗಿ ಅವಯುವನಾಮದಿಂದ ಕರೆಸುತ್ತಾ, ಅವಯುವಗಳಲ್ಲಿ – ಶ್ರೀ ಪರಮಾತ್ಮ ತನ್ನ ಅವಯುವಗಳಲ್ಲಿ, ಬೇರೆ ಬೇರೆ-ನವನಾರೀ ಕುಂಜರಗತ ಸ್ತ್ರೀಯರುಗಳು ಬ್ಯಾರೆ ಬ್ಯಾರೆ ಇರೋ ಪಾದಿಯಲ್ಲಿ ಇದ್ದು, ಕಂಗೊಳಿಸುವ-ಅಧಿಕಾರಿಗಳ ಕಣ್ಣಿಗೆ ತೋರೋವ ನಾಗತಾನೆ. ಶರೀರದೊಳು – ಪರಮಾತ್ಮ ತನ್ನ ಶರೀರದಲಿ, ನಾನಾ ಪ್ರಕಾರ-ನಾನಾ ವಿಧವಾದ ತನ್ನ ಸ್ವಾಖ್ಯ ರೂಪಗಳಿಂದ ಇರೋವನಾಗಿ ಇದ್ದಾನೆ. ಇಂಥಾ ಶ್ರೀ ಪರಮಾತ್ಮ, ವಿಕಾರಶೂನ್ಯ-ಚರಾಚರಗಳಲ್ಲಿ ವ್ಯಾಪ್ತನಾಗಿದ್ದ ಕಾಲಕ್ಕೂ ಚರಾಚರಗಳು ವಿಕಾರ ಹೊಂದೋಪಾದಿಯಲ್ಲಿ ತಾನು ವಿಕಾರ ಹೊಂದದೆ, ಅಂದರೆ, ವಿಕಾರದಿಂದ ಶೂನ್ಯನಾದವ ಮತ್ತು ಅನಂತಾನಂತ ರೂಪಗಳಿಂದ ಸಹಿತನಾದ ಕಾಲಕ್ಕೂ ವಿಕಾರನಾಗಿ ತೋರೋ ದಿಲ್ಲ. ಇಂಥಾ ದಿವ್ಯರೂಪ ಸೌಂದರ್ಯದಿಂದ, ಪದುಮಜಾಂಡದೊಳು-ಪ್ರತಿ ಬ್ರಹ್ಮಾಂಡದಲ್ಲೂ, ವಿರಾಟನೆನಿಸುವ-ತದಾಕಾರದಿಂದಿದ್ದು ವಿರಾಟ್ ರೂಪ ಎಂತ ಕರೆಸೋವನಾಗಿದ್ದಾನೆ. ತನ್ನಾಮದಿಂದಲೂ ಕರಿಸತಾನೆ ಎಂತ ತಾತ್ಪರ್ಯ. ||೨೬||

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಶ್ರೀ ಪರಮಾತ್ಮನ ಮಹಿಮೆಯನ್ನೇ ಮತ್ತೂ ಹೇಳುತ್ತಾರೆ. ಶ್ರೀ ಪರಮಾತ್ಮನು ನವನಾರೀ ಕುಂಜರವೆಂಬ ಚಿತ್ರದಲ್ಲಿ ಕಾಣುವ ಆನೆಯ ಆಕಾರವು ಹೇಗೆ ಒಂಭತ್ತು ನಾರಿಯರಿಂದ ರಚಿಸಲ್ಪಟ್ಟು, ಒಂದೇ ಆಕಾರ

ವಾಗಿ ಕಾಣುವುದೋ ಮತ್ತು ಅವರುಗಳನ್ನು ಬೇರ್ಪಡಿಸಿದರೆ ಒಂಭತ್ತು ಸ್ತ್ರೀಯರು ಪ್ರತ್ಯೇಕವಾಗಿ ಹೇಗೆ ಕಾಣುವರೋ, ಹಾಗೆಯೇ ಪ್ರತಿಯೊಂದು ಶರೀರದಲ್ಲಿಯೂ ತಾನೇ ಕೈ, ಕಾಲು ಮೊದಲಾದ ಅವಯುವ ರೂಪಿಯಾಗಿ ೨೪ ತತ್ತ್ವಗಳ ಹೆಸರಿನಿಂದ ಒಂದೇ ಶರೀರವಾಗಿ ಕಾಣುವನು. ಜ್ಞಾನಿಗಳಿಗೆ ಕರದಲ್ಲಿ ಕರಾಕಾರನಾಗಿ "ಕರ"–ನೆಂಬ ಹೆಸರಿನಿಂದಲೂ, ಚರಣದಲ್ಲಿ ಚರಣಾಕಾರನಾಗಿ, ಚರಣನಾಮಕನಾಗಿಯೂ, ಹೀಗೆ ಒಂದೊಂದು ಅವಯುವಗಳಲ್ಲಿ ತತ್ತದಾಕಾರನಾಗಿ, ತತ್ತಚ್ಛಬ್ದ ವಾಚ್ಯನಾಗಿ ಬೇರೆ ಬೇರೆಯಾಗಿ ಕಾಣುವನು. ಹೀಗಿದ್ದರೂ ಮನುಷ್ಯಾದಿಗಳ ಶರೀರಗಳ ಅವಯುವಗಳಿಗೆ ಭೇದಗಳು ಸಂಭವಿಸಿದರೂ, ಆಯಾಯಾ ಅಂಗಗತನಾದ ತಾನು ನಿರ್ವಿಕಾರನಾಗಿಯೇ ಇರುವನು. ಇದಲ್ಲದೆ ೧೪ ಲೋಕಗಳಿಂದ ಕೂಡಿದ ಬ್ರಹ್ಮಾಂಡವನ್ನೇ ತನ್ನ ಶರೀರವನ್ನಾಗಿ ಮಾಡಿಕೊಂಡು ತಾನೇ ಕರಚರಣಾದ್ಯವಯುವಾಕಾರನಾಗಿ ತೋರುತ್ತ, "ವಿರಾಟ್ ರೂಪಿ" – ಎನಿಸುವನು. **"ಪಾತಾಳಮೇತಸ್ಯ ಪಾದಮೂಲಮ್"— ಎಂಬ ಭಾಗವತ ದ್ವಿತೀಯ ಸ್ಕಂಧದ** ವಾಕ್ಯಗಳಿಂದ ವಿರಾಟ್‌ರೂಪವು ವಿಶದವಾಗುವುದು. ಇಂತಹ ಮಹಾಮಹಿಮೆಯುಳ್ಳವನು ಶ್ರೀ ಪರಮಾತ್ಮ ಎಂತ ತಾತ್ಪರ್ಯ. ||೨೬||

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

ನವನಾರಿಯರ ಒಂದು ಸಮೂಹವನ್ನು ಆನೆಯ ಆಕಾರ ಬರುವಂತೆ ಏರ್ಪಡಿಸಬಹುದು. ಅಂತಹ ನವನಾರೀಕುಂಜರದ ಆಕಾರದಂತೆ ಶ್ರೀ ಪರಮಾತ್ಮನು ಅವಯುವಗಳಲ್ಲಿ, ಆಯಾಯಾ ಅವಯುವಗಳ ನಾಮಗಳಿಂದ ಕರೆಯಿಸಿಕೊಳ್ಳುತ್ತಾ ಇದ್ದು, ತಾನು ಪೂರ್ಣನಾಗಿದ್ದರೂ ಅವಯುವ– ಅವಯುವೀ ರೂಪಗಳಿಂದ ತೋರುತ್ತಾನೆ. ನಿರ್ವಿಕಾರನಾದ ಶ್ರೀಹರಿಯು ಅನಂತಾನಂತ ಆಕಾರಗಳ ಸಹಿತ ಬ್ರಹ್ಮಾಂಡದಲ್ಲಿ ವಿರಾಡ್ರೂಪಿಯಾಗಿದ್ದಾನೆ ಎಂಬುದೇ ಪ್ರಸಕ್ತ ಪದ್ಯಗತ ತಾತ್ಪರ್ಯ. ||೨೬||

### (೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :-

ಶ್ರೀ ರಮಾಪತಿಯ ರೂಪಗಳು ಅನೇಕವಾದರೂ. ನವನಾರೀಕುಂಜರವೆಂಬ, ಒಂಭತ್ತು ಹೆಣ್ಣು ಪ್ರತಿಮೆ ಸೇರಿ, ಒಂದು ಆನೆ ಆಕಾರ ಆಗಿರುವಂತೆ ಒಂದೇ ರೂಪವಾಗಿರುವುದು. ಅವಯವಾಹ್ವಯ ಎಂಬ ಕರಚರಣಾದಿ ಅಂಗವೆಂಬ ನಾಮ ಉಳ್ಳ ದೇವರು, ಅವಯವಿಗಳೆಂಬ ಸಂಪೂರ್ಣಾಕಾರಗಳಲ್ಲಿ ಬೇರೆ ಬೇರೆ ಕಾಣಿಸಿದ್ದಾಗ್ಯೂ, ವಿಕಾರವಿಲ್ಲದೆ ಬ್ರಹ್ಮಾಂಡದಲ್ಲಿ, ಅನಂತಾಕಾರದಿಂದ ಒಂದೇ ವಿರಾಡ್ರೂಪನೆನಿಸುವನು. ॥೨೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತ್ರವ್ಯಾಪ್ತನಾದ ಶ್ರೀಪರಮಾತ್ಮನ ಅನಂತಾನಂತ ರೂಪಗತ ವಿರಾಡ್ರೂಪವನ್ನು ಸದೃಷ್ಟಾಂತವಾಗಿ ತಿಳಸುತ್ತಾರೆ.—"**ಶ್ರೀರಮೇಶನ**"–ಎಂಬ ಪ್ರಸಕ್ತ ೨೬ನೆಯ ಈ ಪದ್ಯದಿಂದ.

(೧) ರಮಾಪತಿಯಾದ ಶ್ರೀಪರಮಾತ್ಮನ ರೂಪಗಳು ಅನಂತಾನಂತ. ಅಗಣಿತ ಹಾಗೂ ಅಸದೃಶ. ಪ್ರತಿರೂಪವೂ ಪರಿಪೂರ್ಣವೇ. ಏತಾದೃಶ ಮಹಿಮೋಪೇತನಾದ ಶ್ರೀಪರಮಾತ್ಮನ ಅನಂತಾನಂತ ರೂಪ ಸಮೂಹಗಳು ಒಂದೇ ಆಕಾರದಲ್ಲಿ ವಿರಾಡ್ರೂಪದಲ್ಲಿ ಹೇಗೆ ಅಡಕವಾಗಿವೆ ಎಂಬ ವಿಷಯವನ್ನು ದಾಸರಾಯರು **"ನವನಾರೀಕುಂಜರ"** ವೆಂಬ ದೃಷ್ಟಾಂತದಿಂದ ಸಚಿತ್ರವಾಗಿ ವಿವರಿಸುತ್ತಾರೆ.

(೨) "**ನವನಾರೀಕುಂಜರ**"—ಎಂದರೆ ನವ = ಒಂಭತ್ತು ಸಂಖ್ಯೆಯಾಗಿ ನಾರೀ = ಸ್ತ್ರೀಯರುಗಳ ಸಮೂಹವನ್ನು ಕುಂಜರ = ಆನೆಯ ಆಕಾರ

ಬರುವಂತೆ ಜೋಡಿಸುವುದು ಎಂದರ್ಥ. ಒಂಭತ್ತು ಮಂದಿ ಬೇರೆ ಬೇರೆ ಸ್ತ್ರೀಯರನ್ನು ಕ್ರಮಬದ್ಧವಾದ ರೀತಿಯಲ್ಲಿ ಜೋಡಿಸಿ, ಆನೆಯ ಆಕಾರ ಬರುವಂತೆ ಒಂದು ಆಕೃತಿವಿಶೇಷವನ್ನು ರಚಿಸಬಹುದು. ಈ ಆಕಾರ ವನ್ನು ಚಿತ್ರದಲ್ಲಿ ತೋರಿಸಬಹುದು. ಈ ಸಮೂಹಕ್ಕೆ "**ನವನಾರೀಕುಂಜರ**" ವೆಂದು ಹೆಸರು.

(೩) ಇದರಂತೆ, ಬ್ರಹ್ಮಾಂಡಾಂತರ್ಗತವಾದ ಶ್ರೀಪರಮಾತ್ಮನ ವಿರಾಡ್ರೂಪವು ಏಕಾಕಾರವಾಗಿ ತೋರುವುದು. ಆನೆಗೆ ಬೆನ್ನು, ಸೊಂಡಿಲು, ಬಾಲ, ಕಾಲುಗಳು ಇತ್ಯಾದಿ ಬೇರೆ ಬೇರೆ ಅವಯವಗಳಿವೆ. ಈ ವಿವಿಧ ಅವಯವಗಳ ಜೋಡಣೆಯಿಂದ ಆನೆಯ ಆಕಾರವುಂಟಾಗುವುದು. ನವ ನಾರೀ ಕುಂಜರದಲ್ಲಿ ಒಂಭತ್ತು ಸ್ತ್ರೀಯರು ಬೇರೆ ಬೇರೆ ಅವಯವಗತ ರಾಗಿದ್ದಾರೆ. ಆದರೆ ಪ್ರತ್ಯೇಕವಾಗಿಯೇ ಇರುದ ಒಂಭತ್ತು ಸ್ತ್ರೀಯರು ಆನೆಯ ವಿವಿಧ ಅವಯವಗಳ ಆಕಾರದಂತೆ ಜೋಡಿಸಲ್ಪಟ್ಟಿರುವುದರಿದ, ಏಕಾಕಾರವಾಗಿ ಆನೆಯ ರೂಪದಂತೆ ಕಾಣಿಸುವರು.

ಇದಂತೆಯೇ ಅವಯವ—ಅವಯವೀ ಭಾವದಿಂದ ಶ್ರೀ ಪರಮಾತ್ಮನು ತನ್ನ ಅನಂತಾನಂತ ಪೂರ್ಣರೂಪಗಳಿಂದ ಏಕಾಕಾರವಾದ ವಿರಾಟ್‌ರೂಪ ದಲ್ಲಿ ಗೋಚರಿಸುವನು. ಬ್ರಹ್ಮಾಂಡಾಂತರ್ಗತ ಸಮಸ್ತವಸ್ತುಗಳಲ್ಲಿ ಪೃಥಕ್ ಅವಯವ ರೂಪಗಳಲ್ಲಿ ಆದೇ ಅವಯವಗಳ ಹೆಸರಿನಿಂದ ಕರೆ ಯಿಸುವನು. ತತ್ತನ್ನಾಮಕ. ತತ್ತದ್ರೂಪನಾಗಿದ್ದಾಗ್ಯೂ. ಜಗತ್ತಿನಿಂದ ಅತ್ಯಂತ ಭಿನ್ನನಾಗಿದ್ದಾನೆ. ಆ ವಸ್ತುಗಳ ಗುಣಲೇಪ ಶ್ರೀಪರಮಾತ್ಮನಿಲ್ಲ. ಇದರಿಂದ ಬ್ರಹ್ಮಾಂಡರೂಪಿಯಾಗಿದ್ದರೂ ನಿರ್ವಿಕಾರನಾಗಿದ್ದಾನೆ. ಶ್ರೀಪರ ಮಾತ್ಮನ ಅವಯವ ರೂಪಗಳು ನವನಾರೀಕುಂಜರದ ಬೇರೆಬೇರೆ ಸ್ತ್ರೀಯರು ಗಳಿದ್ದಂತೆ. ಅವಯವೀ ರೂಪವು ಏಕಾಕಾರದ ಆನೆಯ ರೂಪದದ್ದಂತೆ. ಇಂತು, ಅವಯವಗಳಲ್ಲಿ ಖಂಡ ರೂಪಗೆಳಿಂದ ಪೂರ್ಣನಾಗಿ, ಅವಯವೀ ರೂಪದಿಂದ ಸಮಸ್ತ ಬ್ರಹ್ಮಾಂಡಾಂತರ್ಗತ ಅಖಂಡ ವಿರಾಡ್ರೂಪಿಯಾಗಿ, ಈ ಬ್ರಹ್ಮಾಂಡದಲ್ಲಿ ವ್ಯಾಪ್ತನಾಗಿದ್ದು ಪರಿಪೂರ್ಣನಾಗಿ, ನಿರ್ವಿಕಾರ

ನಾಗಿ, ಜಗದ್ವಿಲಕ್ಷಣನಾಗಿರುವ ಆ ಜಗತ್ಪ್ರಭುವಿನ ಅವಯುವಾಹ್ವ ರೂಪ ವಿಶೇಷವನ್ನು ತಿಳಿಸುತ್ತಾರೆ. ॥೨೬॥

## ಪದ್ಯ (೨೭)

**ಮೂಲ :-**

**ವಾರಿಜಭವಾಂಡದೊಳು ಲಕುಮೀ ।**
**ನಾರಸಿಂಹನ ರೂಪಗುಣಗಳು ।**
**ವಾರಿಧಿಯೊಳಗಿಹ ತೆರೆಗಳಂದದಿ ಸಂದಣಿಸಿ ಇಹವು ॥**
**ಕಾರಣಾಂಶಾವೇಶವ್ಯಾಪ್ತವ ।**
**ತಾರಕಾರ್ಯಾವ್ಯಕ್ತ ವ್ಯಕ್ತವು ।**
**ಆರುನಾಲ್ಕು ವಿಭೂತಿಯಂತರ್ಯಾಮಿ ರೂಪಗಳು ॥ ॥೨೭॥**

**ಅವತರಣಿಕೆ :—**

ಈ ಜಗತ್ತಿನ ತುಂಬಾ ವ್ಯಾಪ್ತವಾಗಿರುವ ಶ್ರೀ ಲಕ್ಷ್ಮೀನರಸಿಂಹ ದೇವರ ಅನಂತಾನಂತ ರೂಪಗಳು, ಗುಣಗಳು, ಇತ್ಯಾದಿ ವಿವರಗಳನ್ನು ತಿಳಿಸುತ್ತಾರೆ. "**ವಾರಿಜ ಭವಾಂಡದೊಳು**"—ಎಂಬ ಪ್ರಸಕ್ತ ಸಂಧಿಗತ ೨೭ ನೆಯ ಈ ಪದ್ಯದಿಂದ.

ಈ ಬ್ರಹ್ಮಾಂಡದಲ್ಲಿ ಶ್ರೀ ಲಕ್ಷ್ಮೀನರಸಿಂಹರೂಪಿ ಶ್ರೀ ಪರಮಾತ್ಮನ ಅನಂತಾನಂತರೂಪ ಮತ್ತು ಗುಣರಾಶಿಗಳು ಸಮುದ್ರದಲ್ಲಿ ಒಂದರ ಮೇಲೊಂದು ನಿರಂತರ ಬರುತ್ತಿರುವ ಅಲೆಗಳಂತೆ ಹರಡಿಕೊಂಡು ವ್ಯಾಪ್ತ

ವಾಗಿವೆ. ಶ್ರೀ ಪರಮಾತ್ಮನ ಕಾರಣ ರೂಪಗಳು, ಅಂಶ ರೂಪಗಳು, ಆವೇಶ ರೂಪಗಳು, ವ್ಯಾಪ್ತ ರೂಪಗಳು, ಅವತಾರ ರೂಪ ವಿಶೇಷಗಳು, ಕಾರ್ಯ ರೂಪಗಳು, ವ್ಯಕ್ತಾವ್ಯಕ್ತ ರೂಪ ಸಮೂಹಗಳು. ಮತ್ತು ದಶ ವಿಧವಾದ ವಿಭೂತಿ ರೂಪಗಳನ್ನು ಬ್ರಹ್ಮಾಂಡದಲ್ಲಿ ವಿದ್ಯಮಾನವಾಗಿವೆ ಎಂಥ ಧ್ಯಾನಿಸಬೇಕೆಂದು ಪ್ರಸಕ್ತ ಪದ್ಯದ ತಾತ್ಪರ್ಯ. ॥೨೭॥

**ಪ್ರತಿಪದಾರ್ಥ :-**

**ವಾರಿಜಭವಾಂಡದೊಳು** = ಬ್ರಹ್ಮಾಂಡದಲ್ಲಿ (ವಾರಿ = ನೀರು, ವಾರಿಜ = ನೀರಿನಲ್ಲಿ ಹುಟ್ಟಿದ್ದು ಕಮಲ, ವಾರಿಜಭವ = ಪದ್ಮನಾಭ ರೂಪಿ ಶ್ರೀ ಪರಮಾತ್ಮನ ಹೊಕ್ಕಳ ಪ್ರದೇಶದಿಂದ ಉತ್ಪನ್ನವಾದ ಸುವರ್ಣಾತ್ಮಕ ವಾದ ಕಮಲದಲ್ಲಿ ಉತ್ಪನ್ನರಾದ ಶ್ರೀ ಚತುರ್ಮುಖ ಬ್ರಹ್ಮದೇವರು, ವಾರಿಜಭವಾಂಡ–ಬ್ರಹ್ಮಾಂಡ) **ಲಕುಮಿನಾರಸಿಂಹನ** = ಶ್ರೀ ಲಕ್ಷ್ಮೀನರ ಸಿಂಹ ರೂಪಿ ಶ್ರೀಮನ್ನಾರಾಯಣನ **ರೂಪಗುಣಗಳು** = ಅನಂತಾನಂತ ರೂಪಗಳೇನು, ಅನಂತಕಲ್ಯಾಣಭರಿತ ಗುಣ ಸಮೂಹಗಳು, **ವಾರಿಧಿ ಯೊಳಿಹ** = ಸಮುದ್ರದಲ್ಲಿ ಇರುವ **ತೆರೆಗಳಂದದಿ** = ಅಲೆಗಳೋಪಾದಿಯಲ್ಲಿ. **ಸಂದಣಿಸಿ** = ವ್ಯಾಪಿಸಿಕೊಂಡು (ತುಂಬಿಕೊಂಡು) **ಇಹವು** = ಇರುವುವು **ಕಾರಣ** = ಅನಿರುದ್ಧಾದಿ ಸೃಷ್ಟಿಗೆ ಕಾರಣವಾದ ರೂಪಗಳಿಂದಲೂ, **ಅಂಶ** = ಸರ್ವಜೀವರ ಸ್ವರೂಪದಲ್ಲಿರುವ ರೂಪಗಳಿಂದಲೂ, **ಆವೇಶ** = ಬಲ ರಾಮ, ಲಕ್ಷ್ಮಣ, ಅರ್ಜುನಾದಿಗಳಲ್ಲಿ ಆವೇಶ ವಿಶೇಷದಿಂದ ಇರತಕ್ಕ ರೂಪಗಳಿಂದಲೂ, **ಅವತಾರ** = ರಾಮ, ಕೃಷ್ಣ, ವೇದವ್ಯಾಸ, ಹಯ ಗ್ರೀವಾದಿ ಭಗವದವತಾರ ರೂಪಗಳಿಂದಲೂ, **ವ್ಯಾಪ್ತ** = ಸರ್ವತ್ರ ಅಣು ರೇಣುತೃಣಕಾಷ್ಠಾದಿಗತ ಪೂರ್ಣವಾದ ವ್ಯಾಪ್ತರೂಪಗಳಿಂದಲೂ, **ಕಾರ್ಯ** = ಸರ್ವೇಂದ್ರಿಯ, ಸರ್ವಚೇತನರ ದ್ವಾರಾ ನಡೆಯುತ್ತಿರುವ ಬಿಂಬಕ್ರಿಯಾ ರೂಪಗಳಿಂದಲೂ, (ಕಾರಣ ಕಾರ್ಯರೂಪ ವಿಶೇಷಗಳು) **ಅವ್ಯಕ್ತ** = ಅಜ್ಞರಿಗೆ ಗೋಚರವಾಗದೇ ಇರುವ ರೂಪಗಳಿಂದಲೂ, **ವ್ಯಕ್ತ** = ಬ್ರಹ್ಮಾದಿ ಅಧಿಕಾರಿ ಜೀವರಿಗೆ ವಾಸುದೇವಾದಿ ರೂಪಗಳಿಂದ ವ್ಯಕ್ತ

ನಾಗಿಯೂ. **ಆರುನಾಲ್ಕು**=೬+೪=ಹತ್ತು ಸಂಖ್ಯಾಕವಾದ **ವಿಭೂತಿ**= ವಿಶೇಷ ಸನ್ನಿಧಾನಯುಕ್ತವಾದ ರೂಪಗಳಿಂದ **ಅಂತರ್ಯಾಮಿ**=ಸಮಸ್ತ ಜಡವಸ್ತುವಂತರ್ಗತ ತದಾಕಾರ, ತದ್ರೂಪಗಳು ಹಾಗೂ ಸರ್ವ ಚೇತನಾಂತ ರ್ಗತ ಬಿಂಬರೂಪಗಳಿಂದ, ಅನೇಕ ರೂಪಾತ್ಮಕನಾಗಿದ್ದಾಗ್ಯೂ, ಏಕ ರೂಪನಾಗಿರುವನು. (ಸಮುದ್ರಗತ ಅಲೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಕಂಡರೂ, ಅವೆಲ್ಲವೂ ಏಕಾಕಾರವಾಗಿ ಸಮುದ್ರ ರೂಪವಾಗಿರುವಂತೆ). ॥೨೭॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀ ಲಕ್ಷ್ಮೀಪತಿಯಾದ ಶ್ರೀನಾರಾಯಣದೇವರು ದಶವಿಭೂತಿ ಗಳಿಂದ ವ್ಯಾಪ್ತ ಎಂತ ಹೇಳತಾರೆ.

ವಾರಿಜಭವಾಂಡದೊಳು–ಪ್ರತಿ ಬ್ರಹ್ಮಾಂಡದಲ್ಲೂ, ಲಕುಮೀ ನಾರ ಸಿಂಹನ–ಲಕ್ಷ್ಮೀಪತಿ ಶ್ರೀ ನೃಸಿಂಹಾಭಿನ್ನ ಶ್ರೀಮನ್ನಾರಾಯಣ ದೇವರ, ರೂಪಗುಣಗಳು – ರೂಪಗಳೇನು, ಅವನ ಗುಣಗಳೇನು, ವಾರಿಧಿಯೊಳ ಗಿಹ–ಸಮುದ್ರದೊಳಗೆ ಇರತಕ್ಕ, ತೆರೆಗಳಂದದಿ–ಅಲೆಗಳೋಪಾದಿಯಲ್ಲಿ ಸಂದಣಿಸಿ ಇಹವು–ತುಂಬಿಕೊಂಡು ಇರೋವಾಗಿ ಅವೆ. ಕಾರಣ–ಸೃಷ್ಟಿ ಸ್ಥಿತಿಲಯಗಳಿಗೆ ಕಾರಣವಾದ ಕರ್ಮದಲ್ಲಿ ಒಂದು ರೂಪ, ಅಂಶ–ಸರ್ವ ಜೀವರ ಸ್ವರೂಪದಲ್ಲಿ ಒಂದು ರೂಪ, ಆವೇಶ–ಅರ್ಜುನಾದಿಗಳಲ್ಲಿ ಆವೇಶ ವಿಶೇಷದಿಂದ ಇರತಕ್ಕ ರೂಪ, ವ್ಯಾಪ್ತ–ದೇಹೇಂದ್ರಿಯಗತ ಅಸುರನಿಗ್ರ ಹಕ್ಕೆ ದೇಹೇಂದ್ರಿಯಾದಿಗಳಲ್ಲಿ ವಾಪ್ತವಾಗಿರುವ ಒಂದು ರೂಪ, **ಅವ ತಾರ–ರಾಮ, ಕೃಷ್ಣ, ವೇದವ್ಯಾಸ, ಹಯಗ್ರೀವ ಆದಿ ಭಗವದವತಾರ**

ಗಳ ರೂಪ, ಕಾರ್ಯ–ಸರ್ವೇಂದ್ರಿಯಗಳ ಕಾರ್ಯರೂಪ, ವ್ಯಕ್ತ–ಮುಕ್ತಿಯೋಗ್ಯರ ಮನದಲ್ಲಿ ವ್ಯಕ್ತ ರೂಪ, ವ್ಯಕ್ತಾವ್ಯಕ್ತ- ನಿತ್ಯ ಸಂಸಾರಿಗಳ ಮನದಲ್ಲಿ ವ್ಯಕ್ತಾವ್ಯಕ್ತರೂಪ, ಅಂತರ್ಯಾಮಿ-ಜಡಗಳಲ್ಲಿ ಅಂತರ್ಯಾಮಿ ರೂಪ. ಈ ಪ್ರಕಾರ ಹತ್ತು ನಾಮಗಳಿಂದ (ಆಯಾ ನಾಮಗಳಿಂದ) ಆಯಾ ಅಧಿಷ್ಠಾನಗಳಲ್ಲಿ, 'ರೂಪಗಳ–ಭಗವದ್ರೂಪಗಳ, ಆರು ನಾಲ್ಕು ವಿಭೂತಿರೂಪಗಳು—ಆರೂನೂ ಸೇರಿ ಹತ್ತು ವಿಭೂತಿ ರೂಪಗಳು ತುಂಬ ಇರೋವಾಗಿ ಅವೆ. ದುಷ್ಟಶಿಕ್ಷಣ ಶಿಷ್ಟಪರಿಪಾಲನಾ ಮಾಡತಕ್ಕ ರೂಪಗಳು, ಪಾಪ ಸ್ವರೂಪರಿಗೆ ಪುಣ್ಯನಾಶ, ಪುಣ್ಯಸ್ವರೂಪಿಗೆ ಪಾಪನಾಶ– ಈ ಕಾರ್ಯಗಳು ವಿಭೂತಿ ಕಾರ್ಯಗಳೆಂದು ತಿಳಿಯಬೇಕಂತ ತಾತ್ಪರ್ಯ. ॥೨೭॥

## (೨) "ಭಾವಪ್ರಕಾಶಿಕೆ"–ವ್ಯಾಖ್ಯಾನ :–

ಶ್ರೀ ಲಕ್ಷ್ಮೀನರಸಿಂಹ ನಾಮಕನಾದ ಶ್ರೀ ಲಕ್ಷ್ಮೀನಾರಾಯಣನು ಒಂದೇ ಸಮುದ್ರದಲ್ಲಿ ಅನಂತಾನಂತವಾಗಿ ಅಲೆಗಳು ಹೇಗೆ ಒಂದರ ಹಿಂದೆ ಒಂದಾಗಿ, ಒಂದೇ ಕಾಲದಲ್ಲಿ ಕಾಣುವುವೋ, ಹಾಗೆ ಕಾರಣರೂಪ. ಅಂಶ, ಆವೇಶ, ವ್ಯಾಪ್ತ, ಅವತಾರ, ಕಾರ್ಯ, ಅವ್ಯಕ್ತ, ವ್ಯಕ್ತ- ೧೦ ವಿಧ ವಿಭೂತಿ, ಅಂತರ್ಯಾಮಿಗಳೆಂಬ ಅನಂತಾನಂತ ರೂಪಗಳಿಂದ, ಒಂದೇ ಕಾಲದಲ್ಲಿ ತೋರುವನು. ಕಾರಣ, ಅಂಶ ಮೊದಲಾದ ರೂಪಗಳೆಂದು ಯಾವರೂಪಗಳನ್ನು ಹೇಳುತ್ತಾರೆಂದರೆ– ಸೃಷ್ಟ್ಯಾದಿಗಳಿಗೆ ಕಾರಣ ರೂಪಗಳು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ನಾಲ್ಕು ರೂಪಗಳು ಸೃಷ್ಟಿಸ್ಥಿತ್ಯಾದಿಗಳಿಗಾಗಿ ಸ್ವೀಕರಿಸಿದನೆಂದು **ನಿರ್ಣಯ ಪ್ರಥಮಾಧ್ಯಾಯದಲ್ಲಿ–"ಇತ್ಯಂ ವಿಚಿಂತ್ಯ ಪರಮಸ್ಸತು ವಾಸುದೇವ ನಾಮಾ ಬಭೂವ ನಿಜಮುಕ್ತಿಪದಪ್ರದಾತಾ"**– ಎಂಬ ಆರನೆಯ ಶ್ಲೋಕಮೊದಲುಗೊಂಡು ಒಂಭತ್ತನೆಯ ಶ್ಲೋಕದವರೆಗೂ ವಾಸುದೇವಾದಿ ನಾಲ್ಕ ರೂಪಗಳ ವ್ಯಾಪಾರಗಳನ್ನು ಹೇಳಿರುವರು. ಆ

ಶ್ಲೋಕಾರ್ಥ ನೋಡಿದರೆ ಅನಿರುದ್ಧಾದಿ ರೂಪಗಳು ಸೃಷ್ಟಿ ಸ್ಥಿತ್ಯಾದಿಗಳಿಗೆ ಕಾರಣವೆಂದು ಗೊತ್ತಾಗುವುದು.

ಅಂಶವೆಂದರೆ— **"ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ"– ಎಂಬ ಗೀತಾವಾಕ್ಯದಿಂದ**, ಅಂಶವೆಂದರೆ ಪ್ರತಿಬಿಂಬವೆಂತಲೂ ಜೀವರೇ ಪ್ರತಿಬಿಂಬಭೂತರೆಂದೂ ಹೇಳಿರುವರು. ಅಂತಹ ಜೀವರಲ್ಲಿ ಜೀವಾಕಾರನಾಗಿರುವುದೇ **ಅಂಶರೂಪಗಳು.**

**ಆವೇಶ ರೂಪಗಳೆಂದರೆ–** ಲಕ್ಷ್ಮೀ, ಬ್ರಹ್ಮ, ಶೇಷಾದಿಗಳು, ಬಲರಾಮ, ಲಕ್ಷ್ಮಣ ಮೊದಲಾದವು.

**"ನರಃ ಫಲ್ಗುಣ ಇತ್ಯಾದ್ಯಾ ವಿಶೇಷಾವೇಶಿತೋ ಹರೇಃ ।**
**ವಾಲಿ ಸಾಂಬಾದಯಶ್ಚೈವ ಕಿಂಚಿದಾವಾಶಿತೋ ಹರೇಃ ।।"**

**–ಎಂಬ ನಿರ್ಣಯ ೨ನೆಯ ಅಧ್ಯಾಯ– ೩೩ನಯ ಶ್ಲೋಕದ ವಾಕ್ಯದಿಂದ** ಅರ್ಜುನಾದಿಗಳು ವಿಶೇಷಾವೇಶಉಳ್ಳವರೆಂತಲೂ, ವಾಲಿ, ಸಾಂಬಾದಿಗಳು ಪರಮಾತ್ಮನ. ಕಿಂಚಿದಾವೇಶಉಳ್ಳವರೆಂತಲೂ ಗೊತ್ತಾಗುವುದು. ಇವೇ **ಆವೇಶ ರೂಪಗಳು. ವ್ಯಾಪ್ತರೂಪವೆಂದರೆ–** ಬ್ರಹ್ಮಾಂಡದಲ್ಲಿ ಸರ್ವತ್ರ ವ್ಯಾಪ್ತರೂಪಗಳೆಂದರ್ಥ.

**ಅವತಾರ ರೂಪಗಳು–** ರಾಮ, ಕೃಷ್ಣಾದಿಗಳು ಕಾರ್ಯರೂಪ ಜಗತ್ತಿನ ಸರ್ವ ಪ್ರಾಣಿಗಳಲ್ಲಿಯೂ ಬ್ರಹ್ಮ, ರುದ್ರಾದಿ ರೂಪಗಳಿಂದ ಸೃಷ್ಟ್ಯಾದಿಗಳನ್ನು ಮಾಡುತ್ತಿದ್ದರೂ, ಅವರ ದೇಹದಲ್ಲಿ ತಾನು ಅಜ್ಞರಿಗೆ ಅವ್ಯಕ್ತನಾಗಿಯೇ ಇರುವನು. ಸರ್ವತ್ರ ಶರೀರಗಳಲ್ಲಿದ್ದರೂ ಅಜ್ಞಾನಿಗಳಿಗೆ ಗೋಚರವಾಗನು. ಜ್ಞಾನಿಗಳಿಗೆ ಸರ್ವತ್ರ ಗೋಚರನಾಗುವನು.

ಸಾಮಾನ್ಯ ಜನರಿಗೆ ವಾಸುದೇವಾದಿ ರೂಪಗಳಿಂದ ಅವ್ಯಕ್ತನಾಗಿಯೂ, ರಾಮ, ಕೃಷ್ಣಾದಿ ರೂಪಗಳಿಂದ ವ್ಯಕ್ತನಾಗಿಯೂ ಇರುವನು.

**ವಿಭೂತಿರೂಪಗಳು**- ಹತ್ತು ಪ್ರಕಾರ- ನೀತ, ಸಾಧಾರಣ, ವಿಶೇಷ ಸಜಾತಿ, ನೈಜ, ಅಹಿತ, ಸಹಜ, ವಿಜಾತಿ, ಖಂಡ ಮತ್ತು ಅಖಂಡ ಎಂಬ ೧೦ ವಿಧಗಳೆಂದು ೫ನೆಯ **ವಿಭೂತಿಸಂಧಿ**ಯಲ್ಲಿಯೇ ವಿಸ್ತಾರವಾಗಿ ಹೇಳಿರುವರು. **ಅಂತರ್ಯಾಮಿಯು** ಸರ್ವತ್ರ ಹೀಗೆ ಅನಂತಾನಂತರೂಪಿಯಾಗಿ ತೋರುವನೆಂಬ ತಾತ್ಪರ್ಯ ॥೨೭॥

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ :-

ಕಾರಣ, ಕಾರ್ಯ, ಅಂಶ, ಆವೇಶ, ವ್ಯಾಪ್ತ, ಅವತಾರ, ವ್ಯಕ್ತ ಮತ್ತು ಅವ್ಯಕ್ತ ಈ ೮ ವಿಭೂತಿರೂಪಗಳಂತರ್ಯಾಮಿ ರೂಪಗಳೆಂದು ಹೇಳುತ್ತಾರೆ– "ವಾರಿಜೇತಿ" ॥೨೭॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ವಾರಿಜ"– ಇತಿ ॥ ಕಾರಣಗಃ ॥ ಅಂಶಃ– ಅಭಿಮನ್ಯ್ವಾದೌ ॥ ಪೃಥ್ವಾದೌ ಆವೇಶಃ ॥ ಕಾರ್ಯ ಘಟಾದಿಗಃ ॥ ವ್ಯಕ್ತಂ ಮಹರಾದಿ ॥೨೭॥

**ಕನ್ನಡಾರ್ಥ :**

ಸಮುದ್ರದಲ್ಲಿ ತರಂಗಗಳು ಅನಂತವಾಗಿವೆ. ಅಂತೆಯೇ ಶ್ರೀಹರಿಯ ರೂಪಗಳು ಜಗತ್ತಿನಲ್ಲಿ ಅನಂತಾನಂತವಾಗಿ ಹಬ್ಬಿ ಹರಡಿವೆ. ಕಾರಣಗತ ರೂಪಗಳು, ಅಂಶ–ಅಂಶರೂಪಗಳು, ಪೃಥು ಮುಂತಾದವರಲ್ಲಿ ಆವೇಶ ರೂಪಗಳು. ವ್ಯಾಪ್ತರೂಪಗಳು, ಅವತಾರರೂಪಗಳು. ಘಟಾದಿಗಳಲ್ಲಿ ಕಾರ್ಯರೂಪಗಳು. ಅವ್ಯಕ್ತಗತರೂಪಗಳು. ವ್ಯಕ್ತವೆನಿಸಿರುದ ಮಹತ್ತತ್ತ್ವಗತ ರೂಪವಿಶೇಷಗಳು. ಶ್ರೀ ಪರಮಾತ್ಮನ ತತ್ತ್ವಗತ ನಾನಾರೂಪಗಳು, ವಿಭೂತಿರೂಪಗಳು, ಅಂತರ್ಯಾಮಿ ರೂಪಗಳು–ಹೀಗೆ ಅಸಂಖ್ಯ

ವಾಗಿ ಅನಂತಾನಂತವಾಗಿ ಬ್ರಹ್ಮಾಂಡದಲಿ ವ್ಯಾಪಿಸಿ ಕೊಂಡಿರುವುವು ಎಂದು ಪದ್ಯದ ತಾತ್ಪರ್ಯವು. ॥೨೭॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :–

ಬ್ರಹ್ಮಾಂಡದಲ್ಲಿ ಲಕ್ಷ್ಮೀರಮಣ, ಶ್ರೀ ನೃಸಿಂಹರೂಪಗಳು, ಸಮುದ್ರದತೆರೆಗಳಂತೆ, ಬೇರೆ ಬೇರೆ ಕಂಡರೂ, ಏಕಾಕಾರವಾಗಿ, ಅಂದರೆ, ಅಚ್ಛಿದ್ರವಾಗಿ ತುಂಬಿರುವುವು. ಮೂಲರೂಪದೊಡನೆ ಪಂಚಭೂತಗಳಲ್ಲಿ ಕಾರಣವೆಂತಲೂ, ರಾಮಕೃಷ್ಣಾದಿರೂಪಗಳಿಂದ ಅವತಾರವೆಂತಲೂ, ಜೀವರ ಹೃದಯದಲ್ಲಿ ಅಂತರ್ಯಾಮಿ ಎಂತಲೂ, ಅದೇರೂಪ ಅವಯವಿಗಳಲ್ಲಿರುವುದಕ್ಕೆ ಅಂಶಿ ಎಂತಲೂ, ಅವಯವಗಳಲ್ಲಿರುವುದಕ್ಕೆ ಅಂಶವೆಂತಲೂ, ಜಗತ್ಪರಿಣಾಮಕಾರಣ ತ್ರಿಗುಣ ಸೂಕ್ಷ್ಮ ಜಡಪ್ರಕೃತಿಯಲ್ಲಿ ಅವ್ಯಕ್ತವೆಂತಲೂ, ಅದರಿಂದ ಇಪ್ಪತ್ತು ನಾಲ್ಕು ತತ್ತ್ವಗಳ ದ್ವಾರಾ ಹುಟ್ಟಿದ ಬ್ರಹ್ಮಾಂಡದಲ್ಲಿ ವ್ಯಕ್ತ ಎಂತಲೂ, ಸರ್ವತ್ರ ಇದ್ದು, ವ್ಯಾಪ್ತ ಎಂತಲೂ, ಲಕ್ಷ್ಮಣ, ಪೃಥು ಮೊದಲಾದವರಲ್ಲಿದ್ದು ಆವೇಶ ಎಂತಲೂ, ಶರೀರಗಳಲ್ಲಿ ಕಾರ್ಯವೆಂತಲೂ, ನೀತ ಮೊದಲಾದ ದಶವಿಧ ವಿಭೂತಿಎಂತಲೂ (೫ನೆಯ ಸಂಧಿಗತವಿಷಯ), ಜ್ಞಾನಿಗಳ ಮನೋಗೋಚರನೆಂದರ್ಥ. ॥೨೭॥

# ಸರ್ವವ್ಯಾಖ್ಯಾನಸಾರಸಂಗ್ರಹ :

(೧) ಮೂಲರೂಪಿ ಶ್ರೀ ಮನ್ನಾರಾಯಣನು ಕ್ಷೀರಸಮುದ್ರದಲ್ಲಿ ಶೇಷಶಾಯಿಯಾಗಿ, ಪದ್ಮನಾಭರೂಪದಲ್ಲಿ ಪವಡಿಸಿರಲು, ಅವನ ಇಚ್ಛಾಮಾತ್ರದಿಂದ, ಶ್ರೀಹರಿಯ ನಾಭಿ ಎಂಬ ಮಡುವಿನಿಂದ ಕಮಲವು ಉತ್ಪನ್ನವಾಯಿತು. ಇದು ಲಕ್ಷ್ಮ್ಯಾತ್ಮಕವಾಗಿದ್ದು, ಸುವರ್ಣರೂಪದಿಂದ ಹದಿನಾಲ್ಕು ದಶವುಳ್ಳ ನಾಭಿಕಮಲವು. ಈ ಪದ್ಮದಲ್ಲಿ ಹಿರಣ್ಯಗರ್ಭನಾಮಕ

ರಾದ ಚತುರ್ಮುಖ ಬ್ರಹ್ಮದೇವರ ಉತ್ಪತ್ತಿ. ಅವರ ಶರೀರವೇ ಬ್ರಹ್ಮಾಂಡವು ಈ ವಿಷಯವನ್ನೇ ದಾಸರಾಯರು **ವಾರಿಜಭವಾಂಡರೊಳು** ಎಂದಿದ್ದಾರೆ. ಅಂದರೆ ವಾರಿ-ಎಂದರೆ ನೀರು. ವಾರಿಜ ನೀರಿನಲ್ಲಿ ಉತ್ಪನ್ನವಾದದ್ದು ಕಮಲ ವಾರಿಜಭವ-ಎಂದರೆ. ಕಮಲೋದ್ಭವರಾದ ಬ್ರಹ್ಮದೇವರು. ವಾರಿಜಭವಾಂಡ-ಎಂದರೆ ಬ್ರಹ್ಮಾಂಡವೆಂದರ್ಥ.

(೨) ಇಂತಹ ಬ್ರಹ್ಮಾಂಡದಲ್ಲಿ ಶ್ರೀ ಲಕ್ಷ್ಮೀನರಸಿಂಹದೇವರ ಅನಂತಾನಂತ ರೂಪಸಮೂಹಗಳು ಮತ್ತು ಅನಂತ ಕಲ್ಯಾಣಗುಣಗಣಗಳು ಓತಪ್ರೋತವಾಗಿ ಹಬ್ಬಿ ಹರಡಿವೆ. ಇಂತು ಜಗದಾದ್ಯಂತ ವ್ಯಾಪ್ತನಾಗಿರುವ ಶ್ರೀ ಪರಮಾತ್ಮನ ನಿತ್ಯಾನಂದ ಪರಿಪೂರ್ಣರೂಪಗುಣಗಳನ್ನು ವಿವರಿಸಲು ದಾಸರಾಯರು ಒಂದು ಸುಂದರವಾದ ಉಪಮಾನವನ್ನು ಕೊಡುತ್ತಾರೆ.

ಸಮುದ್ರವು ಅಪಾರವಾದ ಜಲರಾಶಿಯು. ಇಂತಹ ವಾರಿಧಿಯಲ್ಲಿ ಅಲೆಗಳು ಅನಂತ ಸಂಖ್ಯೆಯಲ್ಲಿ ಉತ್ಪತ್ತಿಯಾಗಿ. ಒಂದರ ಮೇಲೊಂದು ನಿರಂತರವಾಗಿ ಬರುತ್ತಲೇ ಇರವುವು, ಅವುಗಳ ಏಕಾಕಾರರೂಪವಾದ ಜಲರಾಶಿಯೇ ಸಮುದ್ರವು. ಪ್ರತಿ ತರಂಗವೂ ಪ್ರತ್ಯೇಕವಾಗಿ ಕಂಡು ಬಂದರೂ ಅವುಗಳ ಅಖಂಡರೂಪವೇ ವಾರಿಧಿಯು. ಇಂತು ಬ್ರಹ್ಮಾಂಡಾದ್ಯಂತ ಶ್ರೀ ಪರಮಾತ್ಮನು ಖಂಡಾಖಂಡರೂಪಗಳಿಂದ ಸರ್ವತ್ರ ಪರಿಪೂರ್ಣನಾಗಿ ತುಂಬಿರುವನು.

(೩) ಜಗತ್ತಿನ ಆದ್ಯಂತ ಪರಿಪೂರ್ಣವಾಗಿ ವ್ಯಾಪಿಸಿ ಕೊಂಡಿರುವ ಶ್ರೀ ಪರಮಾತ್ಮನ ರೂಪಗಳನ್ನು ಈ ಪ್ರಕಾರ ಚಿಂತಿಸಬೇಕೆಂದು ತಿಳಿಸುತ್ತಾರೆ (೧) ಕಾರಣ ರೂಪಗಳು (೨) ಅಂಶರೂಪಗಳು (೩) ಆವೇಶ ರೂಪಗಳು (೪) ವ್ಯಾಪ್ತರೂಪಗಳು (೫) ಅವತಾರ ರೂಪಗಳು (೬) ಕಾರ್ಯ ರೂಪಗಳು (೭) ಅವ್ಯಕ್ತ ರೂಪಗಳು (೮) ವ್ಯಕ್ತ ರೂಪಗಳು (೯) ಅಂತರ್ಯಾಮಿ ರೂಪಗಳು ಮತ್ತು (೧೦) ನೀತ, ಸಾಧಾರಣ, ವಿಶೇಷ

ಸಜಾತಿ, ವಿಜಾತಿ, ನೈಜ, ಅಹಿತ, ಸಹಜ, ಖಂಡ ಮತ್ತು ಅಖಂಡ ಎಂಬ ದಶವಿಧ ವಿಭೂತಿರೂಪಗಳು ಈ ಪ್ರಕಾರ ಆರು ನಾಲ್ಕು ಅಂದರೆ ೬+೪=೧೦ ಪ್ರಕಾರ ರೂಪಗಳ ಚಿಂತನೆ ಮಾಡಬೇಕೆಂದು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ.

**(೧) ಕಾರಣ ರೂಪಗಳು :—**

ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಗಳಾದ ಅನಿರುದ್ಧ ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ಸ್ವಾಭಿನ್ನ ಪ್ರಾದುರ್ಭಾವ ರೂಪಚತುಷ್ಟಯಗಳು. ಈ ಕಾರಣರೂಪಗಳೇ ಸಕಲ ಜಗದ್ವ್ಯಾಪಾರಗಳ ಮೂಲ.

**(೨) ಅಂಶರೂಪಗಳು :—**

ಸಮಸ್ತ ಜೀವರೂ ಶ್ರೀ ಪರಮಾತ್ಮನ ಪ್ರತಿಬಿಂಬಭೂತರು. ಸರ್ವ ಜೀವರ ಸ್ವರೂಪಗತ ರೂಪವೇ **ಅಂಶರೂಪವು**. ಜೀವರಲ್ಲಿ ಜೀವಾಕಾರನಾಗಿ ಜೀವನಾಮಕನಾಗಿರುವ ರೂಪವು ಅಂಶರೂಪವು. ಬಿಂಬನಾದ ಶ್ರೀ ಪರಮಾತ್ಮನು **ಅಂಶಿಯು.**

**ಪ್ರಮಾಣ :-**

**"ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ ||"** **–ಎಂಬ ಗೀತಾವಾಕ್ಯ ಪ್ರಮಾಣವು.**

**(೩) ಆವೇಶ ರೂಪಗಳು :**

ಅರ್ಜುನ, ಲಕ್ಷ್ಮಣ. ಪೃಥು, ಬಲರಾಮ ಮುಂತಾದವರಲ್ಲಿ ಇರುವ ರೂಪ ವಿಶೇಷಗಳಿಗೆ– **ಆವೇಶರೂಪ**ಗಳೆನ್ನುವರು. ಈ ಆವೇಶ ರೂಪಗಳಿಂದ ಆ ಜೀವರಲ್ಲಿ ಸ್ಥಿತನಾಗಿದ್ದು, ವಿಶೇಷ ಕಾರ್ಯಗಳನ್ನು ಅವರ ದ್ವಾರಾ ಮಾಡಿ ಮಾಡಿಸುವನು.

**(೪) ವ್ಯಾಪ್ತರೂಪಗಳು :**

ಬ್ರಹ್ಮಾಂಡಗತ ಸಮಸ್ತ ಜಡ ಹಾಗೂ ಚೇತನ ರಾಶಿಗಳಲ್ಲಿ ತದಾಕಾರ. ತದ್ರೂಪ, ತದ್ವಾಚ್ಯ, ತನ್ನಾಮಕನಾಗಿ, ಸಕಲ ಜಡ ಮತ್ತು ಚೇತನಗಳಿಂದ ಅತ್ಯಂತ ಭಿನ್ನನಾಗಿ, ಅಣುರೇಣು ತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ತುಂಬಿ ಹಬ್ಬಿ ಹರಡಿಕೊಂಡಿರುವ ರೂಪಗಳೇ **ವ್ಯಾಪ್ತರೂಪಗಳು.** ಇಂತಹ ವ್ಯಾಪ್ತರೂಪಗಳಿಂದ ಆಯಾಯಾ ವಸ್ತುಗಳ ಸ್ವಭಾವಗಳನ್ನು ಅಭಿವ್ಯಕ್ತಿಗೊಳಿಸುವನು.

**(೫) ಅವತಾರ ರೂಪಗಳು :**

ಶ್ರೀ ಪರಮಾತ್ಮನು ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥಿತನಾಗಿ, ಯುಗಧರ್ಮ ಪ್ರವರ್ತಕನಾಗಿ ದುಷ್ಟ ಶಿಕ್ಷಣ ಹಾಗೂ ಶಿಷ್ಟರಕ್ಷಣಾರ್ಥವಾಗಿ, ಅಧರ್ಮವನ್ನು ನಾಶಗೈಸಿ. ಧರ್ಮಸಂಸ್ಥಾಪನೆಗಾಗಿ, ಮತ್ಸ್ಯ, ಕೂರ್ಮ, ನರಸಿಂಹ, ರಾಮಕೃಷ್ಣಾದ್ಯವತಾರಗಳನ್ನು ತಾಳಿ ಪ್ರಕಟನಾದನು. ಅಂತೆಯೇ ಹಯಗ್ರೀವ. ಕಪಿಲ, ವೇದವ್ಯಾಸಾದಿ ರೂಪಗಳಿಂದ ಅವತರಿಸಿ, ಜ್ಞಾನ ಮಾರ್ಗವನ್ನು ಉಪದೇಶಿಸಿದನು. ಇವೆಲ್ಲವೂ ಶ್ರೀ ಪರಮಾತ್ಮನ **ಅವತಾರ ರೂಪಗಳು.**

**(೬) ಅವ್ಯಕ್ತ ರೂಪಗಳು :**

ತಾನು ಸಕಲ ಜೀವರಲ್ಲಿ ಇದ್ದೂ, ಸ್ವಯಂ ಸಕಲ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವವನಾದರೂ, ತನ್ನ ಇರವನ್ನು ಜೀವರಿಗೆ ತೋರಗೊಡನು. ಆದರೆ ಬ್ರಹ್ಮಾದಿದೇವತಗಳನ್ನು ಬಿಟ್ಟು ಉಳಿದವರಿಗೆ ಧ್ಯಾನಕ್ಕೆ ವಿಷಯನಾಗಿ ಗೋಚರಿಸುವನು. ಜಗತ್ಪರಿಣಾಮ ಕಾರಣ ತ್ರಿಗುಣ ಹಾಗೂ ಸೂಕ್ಷ್ಮಜಡ ಪ್ರಕೃತಿಯಲ್ಲಿ **ಅವ್ಯಕ್ತರೂಪದಿಂದಿರುವನು.**

**(೮) ವ್ಯಕ್ತ ರೂಪಗಳು :**

ಬ್ರಹ್ಮ, ವಾಯು ಮುಂತಾದ ಉತ್ತಮಾಧಿಕಾರಿಗಳಿಗೆ ಸ್ವಯಂವ್ಯಕ್ತನಾಗಿಯೂ ಕಾಣಿಸುವನು. ಇತರ ಸಚ್ಚೇತನರಿಗೆ ಸಾಧನಾನಂತರ ಬಿಂಬಾರೋಕ್ಷ ದ್ವಾರಾ ತನ್ನ ದರ್ಶನ ಭಾಗ್ಯವನ್ನೀಯುವನು. ಇದೇ ಅಭಿಪ್ರಾಯವನ್ನೇ ದಾಸರಾಯರು- **ಮಂಗಳಚರಣಸಂಧಿಯ** ಅಂತ್ಯ ಪದ್ಯದಲ್ಲಿ-

**"ಪರಿಮಳವು ಸುಮನದೊಳಗೆ ಅನಲನು**
**ಅರಣಿಯೊಳಗಿಪ್ಪಂತೆ ದಾನೋ ।**
**ಪರನು ಬ್ರಹ್ಮಾದಿಗಳ ಮನದಲ್ಲಿ ತೋರಿ ದೋರದಲೆ ॥"**

-ಎಂದು ವ್ಯಕ್ತಾವ್ಯಕ್ತ ರೂಪಗಳ ಮಹಿಮೆಯನ್ನು ತಿಳಿಸಿದ್ದಾರೆ.

**(೯) ಅಂತರ್ಯಾಮಿ ರೂಪಗಳು :**

ಸಕಲ ಜಡವಸ್ತುಗಳಲ್ಲಿ ತದಂತರ್ಗತ ವ್ಯಾಪ್ತರೂಪಗಳಿಂದ, ಸಮಸ್ತ ಜೀವರಾಶಿಗಳಲ್ಲಿ ಸ್ವರೂಪಸ್ಥಿತ **ಅಂತರ್ಯಾಮಿ** ಎಂದೆನಿಸಿ, ಅಂತರಾತ್ಮಕನಾಗಿ ಸಕಲ ವ್ಯಾಪಾರಗಳ ನಿರ್ವಹಣೆ.

**(೧೦) ದಶವಿಧ ವಿಭೂತಿ ರೂಪಗಳು :-**

ಪಂಚಮ ಸಂಧಿ- **"ವಿಭೂತಿ ಸಂಧಿ"** ಯಲ್ಲಿ ವಿಸ್ತಾರವಾಗಿ ಹೇಳಿರುವಂತೆ, (1) ನೀತ (2) ಸಾಧಾರಣ (3) ವಿಶೇಷ (4) ಸಜಾತಿ (5) ವಿಜಾತಿ (6) ನೈಜ (7) ಅಹಿತ (8) ಸಹಜ (9) ಖಂಡ ಮತ್ತು (10) ಅಖಂಡ— ಎಂಬ ಶ್ರೀ ಪರಮಾತ್ಮನ **ವಿಭೂತಿ ರೂಪಗಳು ದಶವಿಧವಾಗಿವೆ.**

ಇಂತು, ಪೂರ್ವೋಕ್ತ ಆರು ನಾಲ್ಕು, ಅಂದರೆ, ೬+೪=೧೦. ಪ್ರಕಾರವಾದ ರೂಪ ಗುಣ ವಿಶೇಷಗಳನ್ನು ಧ್ಯಾನಕ್ಕೆ ವಿಷಯವನ್ನಾಗಿ

ಮಾಡಿಕೊಂಡು, ವಾರಿಧಿಗತ ನಿರಂತರ ತರಂಗಗಳಂತೆ, ಅಸದೃಶನೂ, ಅಪರಿಮಿತ ಮಹಿಮಾಸಂಪನ್ನನೂ, ಅಪ್ರಮೇಯನೂ, ನಿತ್ಯಾನಂದಪರಿಪೂರ್ಣನೂ, ಅನಂತಾನಂತ ರೂಪ, ಗುಣ, ನಾಮ, ಕ್ರಿಯಾದಿಗಳಿಂದ ವಿಶಿಷ್ಟನಾಗಿ ಜಗದ್ವ್ಯಾಪಾರಗಳನ್ನು ಲೀಲಾಜಾಲವಾಗಿ ನಿರಾಯಾಸವಾಗಿ ನಿರ್ವಹಿಸುತ್ತಿರುವ ಆ ಜಗಚ್ಚರಿತನ ಧ್ಯಾನೋಪಾಸನೆ ಮಾಡಬೇಕೆಂದು ಈ ಪದ್ಯದ ತಾತ್ಪರ್ಯಾರ್ಥವು. ||೨೭||

## ಪದ್ಯ (೨೮)

**ಮೂಲ :-**

**ಮಣಿಗಳೊಳಗಿಹ ಸೂತ್ರದಂದದಿ ।**
**ಪ್ರಣವಪಾದ್ಯನು ಚೇತನಾಚೇ ।**
**ತನ ಜಗತ್ತಿನೊಳನುದಿನದೊಳಾಡುವನು ಸುಖಪೂರ್ಣ ॥**
**ದಣಿವಿಕೆಯು ಇವಗಿಲ್ಲ ಬಹುಕಾ ।**
**ರುಣಿಕನಂತಾನಂತ ಜೀವರ ।**
**ಗಣದೊಳೇಕಾಂಶ ರೂಪದಿ ನಿಂತು ನೇಮಿಸುವ ॥** ||೨೮ ||

**ಅವತರಣಿಕೆ -:**

ಜಗನ್ನಿಯಾಮಕನಾದ ಶ್ರೀ ಪರಮಾತ್ಮನ ವ್ಯಾಪಾರ ವಿಶೇಷಗಳನ್ನು ವಿವರಿಸುತ್ತಾರೆ ದೃಷ್ಟಾಂತ ಸಹಿತ, **"ಮಣಿಗಳೊಳಗಿಹ"**—ಎಂಬ ಪ್ರಸಕ ಸಂಧಿಗತ ಈ ೨೮ ನೆಯ ಪದ್ಯದಿಂದ.

ಅನೇಕ ಮಣಿಗಳನ್ನು ಮಾಲಾಕಾರವಾಗಿ ಪೋಣಿಸುವುದಕ್ಕಾಗಿ ದಾರವನ್ನು ಉಪಯೋಗಿಸುವರು. ದಾರದ ರೂಪದಲ್ಲಿರುವ ಸೂತ್ರವು ಮಣಿಗಳ

ಸಮೂಹಕ್ಕೆ ಆಧಾರವು ಸೂತ್ರ ಒಂದೇ. ಮಣಿಗಳು ಹಲವಾರು. ಇದರಂತೆ, ಏಕಮೇವಾದ್ವಿತೀಯನಾದ ಶ್ರೀ ಪರಮಾತ್ಮನು ಬ್ರಹ್ಮಾಂಡಗತ ಸಕಲ ಚೇತನಾಚೇತನ ವಸ್ತುಗಳಿಗೆ ಸೂತ್ರದಂತೆ ಆಧಾರವಾಗಿದ್ದಾನೆ. ವೇದಪ್ರತಿಪಾದ್ಯನಾದ ಆ ಜಗದಾಧಾರಕನು ನಿರಂತರದಲ್ಲಿ ಈ ಜಗತ್ತಿನ ತುಂಬಾ ವ್ಯಾಪಿಸಿಕೊಂಡು ವಿಹಾರಗೈಯ್ಯುವನು. ನಿತ್ಯಾನಂದ ಸುಖಪೂರ್ಣನಾದ ಆ ಸ್ವಾಮಿಗೆ ಸೃಷ್ಟ್ಯಾದಿ ವ್ಯಾಪಾರಗಳಿಂದ ಯಾವ ದಣಿವಿಕೆಯೂ ಇಲ್ಲ. ನಿರಾಯಾಸವಾಗಿ ಜಗದ್ವ್ಯಾಪಾರಗಳನ್ನು ತಾನೇ ತಾನಾಗಿ ಲೀಲಾವಿಲಾಸದಿಂದ ನಡೆಯಿಸುತ್ತಿರುವನು. ಅನಂತಾನಂತ ಜೀವರನ್ನು ಅಸೃಜ್ಯ ರಾಶಿಯಿಂದ ಸೃಷ್ಟಿಗೆ ತಂದು, ಅವರವರ ಸಾಧನಗಳನ್ನು ಮಾಡಿಮಾಡಿಸಿ, ಕರ್ಮವಿಮೋಚನಾ ದ್ವಾರಾ ಅವರವರವರ ನಿಜಗತಿಯನ್ನು ಕೊಡುವುದರಿಂದ, ಜೀವರ ವಿವಿಕ್ಷಯಾ ಅತ್ಯಂತ ಕರುಣಾಮಯನು. ಮಣಿಸಮೂಹಗಳಂತೆ ಇರುವ ಅನಂತಾನಂತ ಜೀವಕೋಟಿಗಳಿಗೆ ಏಕಸೂತ್ರಪ್ರಾಯನಾಗಿ ಅಧಿಕನಾಗಿದ್ದು, ಸಮಸ್ತ ಜೀವ ಜಡರಾಶಿಗಳಲ್ಲಿ ತಾನೇ ಸ್ಥಿತನಾಗಿದ್ದು ನಿಯಮನ ಮಾಡುವನು. ||೨೮||

**ಪ್ರತಿಪದಾರ್ಥ -:**

**ಮಣಿಗಳೊಳಗಿಹ** = ಮಣಿಗಳನ್ನು ಪೋಣಿಸಿ ಇರುವ, **ಸೂತ್ರದಂದದಿ** = ದಾರದಂತೆ, **ಪ್ರಣವಸಾಧ್ಯನು** = ಓಂ ಕಾರ ಪ್ರತಿಪಾದ್ಯನಾದ ಬಿಂಬರೂಪಿ ಶ್ರೀಪರಮಾತ್ಮನು, **ಚೇತನಾಚೇತನ** = ಜೀವ ಮತ್ತು ಜಡಾತ್ಮಕವಾದ **ಜಗತ್ತಿನೊಳು** = ಈ ಪ್ರಪಂಚದಲ್ಲಿ **ಅನುದಿನದೊಳು** = ಪ್ರತಿದಿನದಲ್ಲಿ (ನಿರಂತರವಾಗಿ) **ಆಡುವನು** = ಕ್ರೀಡಿಸುವನು (ವಿಹಾರ ಮಾಡುತ್ತಾನೆ) **ಸುಖಪೂರ್ಣ** = ಶ್ರೀಪರಮಾತ್ಮನು ನಿತ್ಯಾನಂದ ಪೂರ್ಣನಾದುದರಿಂದ, **ದಣುವಿಕೆಯು** = ಆಯಾಸವೆಂಬುದು, **ಇವಗಿಲ್ಲ** = ಶ್ರೀ ಪರಮಾತ್ಮನಿಗೆ ಕಿಂಚಿತ್ತೂ ಇಲ್ಲ. ಅಂದರೆ, ನಿರಾಯಾಸವಾಗಿ ಜಗದ್ವ್ಯಾಪಾರಗಳನ್ನು ನಿರ್ವಹಿಸುತ್ತಿರುವನು, **ಬಹುಕಾರುಣಿಕ** = ದಯಾಸಮುದ್ರನು. ಜೀವರ ಯೋಗ್ಯತಾನುಸಾರ ಅವರಲ್ಲಿ ಅಂತಃಕರಣ ಮಾಡು

ತ್ತಾನೆ. **ಅನಂತಾನಂತ ಜೀವ ಗಣದೊಳು** = ಅಸಂಖ್ಯಾತವಾದ, ಅಪರಿಮಿತವಾದ ಅನಂತ ಜೀವರ ಸಮೂಹದಲ್ಲಿ, **ಏಕಾಂಶರೂಪದಿ** = ಮೂಲ ರೂಪಿ ನಾರಾಯಣನಿಂದ ಹೊರಟ ವಾಸುದೇವಾದಿ ರೂಪಗಳಿಂದ ಜೀವರ ಸ್ವರೂಪ ದೇಹಸ್ಥಿತನಾಗಿಯೂ, ದೇಹೇಂದ್ರಿಗಳಗತನಾಗಿಯೂ **ನಿಂತು** = ಸ್ವಯಂ ಸರ್ವ ದೇಶ, ಕಾಲ, ಜಡ. ಸ್ವಭಾವಗಳಲ್ಲಿ ವಿದ್ಯಮಾನನಾಗಿದ್ದು, (ತದಾಕಾರನಾಗಿ ತದ್ರೂಪದಿಂದ ಇದ್ದವನಾಗಿ) **ನೇಮಿಸುವ** = ಬಿಂಬ ಕ್ರಿಯಾದ್ವಾರಾ ಪ್ರೇರಿಸಿ, ನಿಯಾಮಕನಾಗಿದ್ದಾನೆ. ॥೨೮॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ರಮಾತ್ಮಕ ಸರ್ವಜೀವರಿಗೆ ಏಕಾಂಶದಿಂದ ನಿಯಮನ ಮಾಡತಾನೆ ಎಂದು ಹೇಳತಾರೆ.

ಮಣಿಯೊಳಗಿಹ—ಮಣಿಯೊಳಗೆ ಇರತಕ್ಕ, ಸೂತ್ರದಂದದಿ—ದಾರದೋಪಾದಿಯಲ್ಲಿ, ಪ್ರಣವಪಾದ್ಯನು—ಓಂಕಾರ ಪ್ರತಿಪಾದ್ಯನಾದ ಬಿಂಬ ರೂಪಿ ಶ್ರೀಪರಮಾತ್ಮನು, ಚೇತನ—ಚಲನ ಮಾಡತಕ್ಕ ಮಾನುಷ ಪಶ್ವಾದಿ ಜೀವರು, ಎಂದರೆ, ಚೇತನ ಜೀವರು. ಅಚೇತನ—ಗಮನಾಗಮನ ರಹಿತರಾದ ಅಚೇತನ ಜೀವರು ಎಂದಕೆ, ವೃಕ್ಷಾದಿ ಜೀವರು (ಚೇತನಾ ಚೇತನ ಎಂಬೋದು ಸ್ವರೂಪ ವಿವಕ್ಷಾ ಎಂತ ತಾತ್ಪರ್ಯ). ಇಂಥ ಜಗತ್ತಿನೊಳು—ಜೀವರು. ಜಡಜೀವರುಗಳಲ್ಲಿ, ಅನುದಿನದೊಳು—ಪ್ರತಿ ದಿನದಲ್ಲೂ. ಆಡುವನು—ಒಂದೊಂದು ಇಂದ್ರಿಯಗಳಲ್ಲಿ ಸಂಚಾರ ಮಾಡುವನು, ಸುಖಪೂರ್ಣ–ಶ್ರೀ ಪರಮಾತ್ಮನು ಸುಖಪೂರ್ಣನಾದ್ದರಿಂದ ಆಯಾ ಅಧಿಷ್ಠಾನಾಂತರ್ಗತ ತನ್ನ ಅಭೇದರೂಪಗಳ ಗ್ರಾಹ್ಯ ಮಾಡತಾನೆ. ದಣಿಕೆಯು ಇವಗಿಲ್ಲ—ಜೀವೇಂದ್ರಿಯಗಳಿಂದ ಸ್ಥೂಲದೇಹದಿಂದ ಅನೇಕ

ಕರ್ಮಗಳು ಬಿಂಬಕ್ರಿಯಾ ದ್ವಾರಾ ಮಾಡಿಸಿದ್ದಾಗ್ಯೂ (ಮಾಡಿಸಿದ ಕಾಲಕ್ಕೂ) ಅದರಿಂದ ಆಯಾಸ ಎಂಬೋದು ಬಿಂಬರೂಪಿ ಶ್ರೀ ದೇವರಿಗಿಲ್ಲ. ಜೀವರಿಗೆ ಮಾತ್ರ ದಣುವಿಕೆ ಉಂಟು. ಅಪೂರ್ಣನಾದ್ದರಿಂದ ಜೀವಗೆ ದಣಿವು ಎಂದರೆ, ಆಯಾಸಗಳು ಉಂಟು. ಶ್ರೀ ಪರಮಾತ್ಮನಿಗೆ ಶ್ರಮ ಇಲ್ಲಾ ಎಂಬುದು ಹ್ಯಾಂಗೆಂದರೆ, ಶ್ರೀ ಪರಮಾತ್ಮನ ಮೂಲರೂಪ ಸಚ್ಚಿದಾನಂದಾತ್ಮಕವಾದದ್ದು. ರೂಪಗಳು ಅಭೇದವಾದ ಕಡಿಯಿಂದ ಈ ತಾತ್ಪರ್ಯವು. ಬಹು ಕಾರುಣಿಕ—ಜೀವರಲ್ಲಿ ಅವರವರ ಯೋಗ್ಯತಾನುಸಾರವಾಗಿ ಅಂತಃಕರಣಮಾಡತಕ್ಕವ. ಅನಂತಾನಂತ ಜೀವರ ಗಣದೊಳು—ಅಸಂಖ್ಯಾತವಾದ ಅಪರಿಮಿತ ಜೀವರ ಸಮೂಹದೊಳು, ಏಕಾಂಶ—ಒಂದಾದಂಥ ನಾರಾಯಣ ರೂಪದಿಂದ ಹೊರಟ ವಾಸುದೇವ ರೂಪವೆಂಬ ಅಂಶರೂಪದಿಂದ ಜೀವರ ಸ್ವರೂಪದಲ್ಲೂ, ಅಂಶ—ಅದೇ ವಾಸುದೇವ ರೂಪದಿಂದ ಹೊರಬಂದ ಅಂಶಸ್ಥೂಲದೇಹದಲ್ಲೂ ಎಂತ ತಾತ್ಪರ್ಯ,

**"ವಾಸನಾತ್ ವಾಸುದೇವೋಽಸಿ ವಾಸಿತಂ ತೇ ಜಯತ್ರಯಮ್ ||**
**ಸರ್ವಭೂತನಿವಾಸೋಽಸಿ ವಾಸುದೇವ ನಮೋಽಸ್ತುತೇ ||"**
**ಮತ್ತು "ಬ್ರಹ್ಮಣಿ ಬ್ರಹ್ಮರೂಪೋಽಸೌ ಶಿವರೂಪಃ ಶಿವಸ್ಥಿತಃ ||"**

—ಎಂಬ ವಚನಾನುಸಾರ, ಆಯಾ ಜೀವಾಕಾರಗಳಂತೆ ಅನಂತಾನಂತ ರೂಪಗಳ ಧರಿಸಿ, ಆಯಾ ಜೀವರಿಗೆ ನಿತ್ಯಬಿಂಬನಾದ ಜೀವಾಕಾರವಾದ ತನ್ನ ಸ್ವರೂಪರಲಿ ತಾನು ಅಂಶದಿಂದ ಪ್ರವೇಶಮಾಡಿ, ಅದೇ ರೂಪದಿಂದ ಅಂಶ ಹೊರಟು, ಸ್ಥೂಲದೇಹದಲ್ಲಿ ಜೀವಾಕಾರ ಬಿಂಬನಾದ ಅಗ್ರೇಶನಲಿ ಪ್ರವೇಶಿಸಿ, ರೂಪದಿ ನಿಂತು-ಆಕಾರರೂಪದಿಂದ ನಿಂತು, ನೇಮಿಸುವ-ಬಾಹ್ಯಾಂತರ್ಗತ ಜೀವೇಂದ್ರಿಯಗಳಿಗೆ ನಿಯಮನ ಮಾಡುತ್ತಾನೆ. ಸ್ವರೂಪಗತ ನಿತ್ಯಬಿಂಬನಕಾರ್ಯ, ಲಿಂಗಭಂಗಾನಂತರ ಸ್ವರೂಪದೇಹಗಳ ಕಾರ್ಯ, ನಡೆಸತಕ್ಕವ. ಆ ಬಿಂಬಕಾರ್ಯ ಪೃಥಕ್ ಪೃಥಕ್ಕಾಗಿ ಇಲ್ಲ. ಪ್ರವಿಷ್ಟರೂಪ ನಿತ್ಯಬಿಂಬನಾದ ಜೀವಬಿಂಬ ವ್ಯತಿರಿಕ್ತ ಮಾಡ

ಲಿಕ್ಕೆ ಇಲ್ಲ. ರಾಮಾವತಾರದಿಂದ ರಾವಣಸಂಹಾರ ನೇಮದಂತೆ ನೇಮವು. ಈ ಪ್ರಕಾರ ಇದ್ದು, ಬಾಹ್ಯದಲ್ಲಿ ತತ್ಕ್ರಿಯಾ, ಆಯಾ ಇಂದ್ರಿಯಗಳ ದ್ವಾರಾ ನಡೆಸತಾನೆ, ಪ್ರವಿಷ್ಟರೂಪಗಳು ಪ್ರಳಯದಲ್ಲಿ ಪುನಃ ಮೂಲ ರೂಪ ಸೇರತವೆ, ಈ ಪ್ರಕಾರ ತಿಳಿಯಬೇಕು ಎಂತ ತಾತ್ಪರ್ಯ ॥೨೮॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ—:

ದಾರದಲ್ಲಿ ಮಾಣಿಕ್ಯಗಳನ್ನು ಪೋಣಿಸಿರಲು ಹೇಗೆ ದಾರವು ಎಲ್ಲಾ ಮಾಣಿಕ್ಯಗಳಿಗೂ ಆಧಾರವಾಗಿರುವುದೋ, ಹಾಗೆ ಶ್ರೀಪರಮಾತ್ಮನು ಬ್ರಹ್ಮಾದಿ ಚೇತನರಾಶಿಗಳೊಳಗೂ ಅಚೇತನಗಳಾದ ನದಿ, ಪರ್ವತ ಮೊದ ಲಾದವುಗಳೊಳಗೂ, ಅಂತು. ಸರ್ವಪ್ರಪಂಚಕ್ಕೆ ಆಧಾರಭೂತನಾಗಿದ್ದು, ಅವರವರು ಮಾಡಬೇಕಾದ ಕೃತ್ಯಗಳನ್ನು ಸರ್ವದಾ ನೂಡುತ್ತಾ, ಮಾಡಿ ಸುತ್ತಿದ್ದರೂ, ಸುಖಪೂರ್ಣಸ್ವರೂಪನಾದುದರಿಂದ ಲೇಶವಾದರೂ ಆಯಾಸ ವಿಲ್ಲದೆ ವಿಹರಿಸುತ್ತಿರುವನು. ಕರುಣಾಸಮುದ್ರನಾದ ಶ್ರೀಹರಿಯು ವಾಸು ದೇವ ಸ್ವಾಂಶರೂಪದಿಂದ ಬ್ರಹ್ಮದೇವರಲ್ಲಿಯೂ ಬ್ರಹ್ಮಾಂಶದಿಂದ ರುದ್ರ ದೇವರಲ್ಲಿಯೂ ಹೀಗೆ ಸಾಂಶಗಳು ರಾಮ ಕೃಷ್ಣಾದಿ ರೂಪಗಳು ಮಿಗಿ ಲಾದ ಜೀವರಲ್ಲಿರುವುವು. ಇಂತಹ ರೂಪಗಳಿಂದ ಎಲ್ಲರಲ್ಲಿಯೂ ಇದ್ದು. ಅವರವರ ಯೋಗ್ಯತಾನುಸಾರವಾಗಿ ಕರ್ಮಗಳನ್ನು ಪ್ರೇರಿಸಿ, ಮಾಡಿ ಮಾಡಿಸುವನೆಂದು ತಾತ್ಪರ್ಯ. ॥೨೮॥

## (೩) "ಭಾವದರ್ಪಣ ಟೀಕಾ"– ವ್ಯಾಖ್ಯಾನ :-

ಮಣಿ ಪಂಕ್ತಿಗತ ಸೂತ್ರದಂತೆ ಚೇತನಾಚೇತನ ಜಗತ್ತಿನಲ್ಲಿದ್ದು ನಿಯಮನ ಮಾಡುತ್ತಾನೆಂದು ಹೇಳುತ್ತಾರೆ– "ಮಣೀತಿ" ॥ ॥೨೮॥

## (೪) "ವ್ಯಾಸದಾಸಸಿದ್ಧಾಂತ ಕೌಮುದೀ" (ಸಂಸ್ಕೃತ ಮೂಲ) :—

"ಮಣಿ"– ಇತಿ ॥ ಮಯಿ ಸರ್ವಮಿದಂ ಪ್ರೋಕ್ತಂ ಸೂತ್ರೇ ಮಣಿ ಗಣಾ ಇವ ॥ ಇತ್ಯುಕ್ತೇಃ ॥ ॥೨೮॥

**ಕನ್ನಡಾರ್ಥ :–**

ಶ್ರೀಹರಿಯು ಓಂ ಕಾರವಾಚ್ಯನು (ಪ್ರಣವಪ್ರತಿಪಾದ್ಯನು) ಅಂತಹ ಓಂಕಾರ ರೂಪಿ ಶ್ರೀಹರಿಯು ಸಮಸ್ತ ಚೇತನಾಚೇತನಾತ್ಮಕ ವಿಶ್ವದಲ್ಲಿ ಓತಪ್ರೋತನಾಗಿ ವ್ಯಾಪಿಸಿದ್ದಾನೆ. ವಿತತನಾದ ಆ ಶ್ರೀಪರಮಾತ್ಮನು ಮಣಿಗಳಿಗೆ ಸೂತ್ರದೋಪಾದಿಯಲ್ಲಿ ಸಮಸ್ತಜಗತ್ತಿಗೂ ಆಶ್ರಯು ಹಾಗೂ ಆಧಾರಭೂತನಾಗಿದ್ದಾನೆ. ಸರ್ವಾಧಾರರೂಪಿಯಾದ ಶ್ರೀ ಹರಿಯು ಸಮಸ್ತ ಜೀವರಾಶಿಗಳಲ್ಲಿ ಅಂತರ್ಯಾಮಿಯಾಗಿದ್ದು ಕೊಂಡು, ವಿವಿಧ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಾ, ಕ್ರೀಡಿಸುತ್ತಿರುವನು, ಗೀತಾ ಚಾರ್ಯನಾದ ಶ್ರೀ ಕೃಷ್ಣನು ಅರ್ಜುನನಿಗೆ– ಎಲೈ ಪಾರ್ಥ ! ನನ್ನ ಲ್ಲಿಯೇ ಈ ಸಮಗ್ರ ವಿಶ್ವವು ಆಧಾರವನ್ನು ಹೊಂದಿದೆ. ಸೂತ್ರವು ಮಣಿ ಗಳಿಗೆ ಹೇಗೋ ಹಾಗೆ ನಾನು ಈ ವಿಶ್ವಕ್ಕೆ ಸೂತ್ರರೂಪಿಯಾಗಿ ಆಧಾರ ನಾಗಿದ್ದೇನೆ. ನಾನು ಓತಪ್ರೋತನಾಗಿ ವಿಶ್ವದಲ್ಲೆಲ್ಲಾ ವ್ಯಾಪ್ತನಾಗಿದ್ದೇನೆ" —ಎಂದು ಉಪದೇಶಿಸಿದ್ದಾನೆ. ॥೨೮॥

## (ಆ) "ಗುರುಹೃದಯ ಪ್ರಕಾಶಿಕೆ"– ವ್ಯಾಖ್ಯಾನ

"ಓಂ" ಕಾರ ಪ್ರತಿಪಾದ್ಯನಾದ ಸುಗುಣಪೂರ್ಣ ದೇವರು, ಮುತ್ತು ಗಳೊಳಗೆ ಪೋಣಿಸಿದ ದಾರ, ಮುತ್ತುಗಳಿಗಾಧಾರವಾಗಿರುವಂತೆ, ಜಡ ಚೇತನಾತ್ಮಕ ಪ್ರಪಂಚದಲ್ಲಿ, ನಿತ್ಯದಲ್ಲೂ ಏಕರೂಪನಾಗಿ ಕ್ರೀಡೆಯಾಡು ವನು. ಆನಂದ ಪೂರ್ಣನಾದ್ದರಿಂದ, ಆಯಾಸಾದಿ ದೋಷಗಳು, ಸೂರ್ಯ ನಿಗೆ ಕತ್ತಲೆ ತಗಲದಂತೆ ಸೋಕುವುದಿಲ್ಲ. ದಯಾಶಾಲಿಯಾದ್ದರಿಂದ, ಅಸ್ವಂ ತಂತ್ರ ಅನಂತ ಜೀವರ ಕ್ರಿಯಾಗಳನ್ನು ವ್ಯಕ್ತಮಾಡುವುದಕ್ಕೆ ಒಂದೊಂದು ಅಂಶದಿಂದ ಎಲ್ಲರಲ್ಲೂ ನಿಂತು ನಿಯಾಮಕನಾಗಿರುವನು. ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ :

ಸರ್ವತ್ರ ವ್ಯಾಪ್ತನಾದ ಶ್ರೀ ಪರಮಾತ್ಮನು ಚೇತನಾಚೇತನಾತ್ಮಕವಾದ ಈ ಜಗತ್ತಿಗೆ ಸರ್ವಾಧಾರನೆಂದು ವಿವರಿಸುತ್ತಾರೆ ಪ್ರಸಕ್ತ ೨೮ನೆಯ ಈ ಪದ್ಯದಿಂದ.

(೧) ಮುತ್ತು, ಮಾಣಿಕ್ಯ ಮುಂತಾದ ಮಣಿಗಳ ಹಾರಗಳನ್ನು ಮಾಡಲು, ದಾರದಲ್ಲಿ ಆ ಮಣಿಗಳನ್ನು ಪೋಣಿಸುವರು. ಆ ಸೂತ್ರದ (ದಾರ) ಆಧಾರದಿಂದ ಮಣಿಗಳು ಮಾಲಾಕಾರವಾಗಿ ಜೋಡಣೆಯಾಗುವುವು. ಮಣಿಗಳಿಗೆ ಸೂತ್ರವೇ ಆಧಾರವು.

ಇದರಂತೆ ಈ ಸಗ್ರಮ ವಿಶ್ವದಲ್ಲಿ ಚೇತನ ಮತ್ತು ಅಚೇತನ ವಸ್ತುಗಳು ಅನಂತಸಂಖ್ಯೆಯಲ್ಲಿವೆ. ಈ ಸಕಲ ಜಡ ಹಾಗೂ ಜೀವರಾಶಿಗಳಲ್ಲಿ ಒಂದು ಕ್ರಮಬದ್ಧವಾದ ಸುವ್ಯವಸ್ಥೆ ಇದೆ. ಇದಕ್ಕೆ ಸೂತ್ರರೂಪಿಯಾದ ಶ್ರೀ ಪರಮಾತ್ಮನ ಆಧಾರಶಕ್ತಿಯೇ ಮುಖ್ಯಕಾರಣ. ಶ್ರೀ ಪರಮಾತ್ಮನು ಸೂತ್ರ ಸದೃಶ. ಚೇತನಾಚೇತನ ವಸ್ತುಗಳು ಸೂತ್ರಗತ ಮಣಿಗಳ ಸದೃಶ.

(೨) ಮೂಲರೂಪಿ ಶ್ರೀಮನ್ನಾರಾಯಣನು "ಓಂ ಕಾರ" ಪ್ರತಿಪಾದ್ಯನು. ಅ–ಕಾರ, ಉ–ಕಾರ ಮತ್ತು ಮ–ಕಾರಗಳೆಂಬ ವರ್ಣತ್ರಯಗಳಿಂದ ನಾದ, ಬಿಂದು, ಘೋಷ, ಶಾಂತ ಮತ್ತು ಅತಿಶಾಂತ ಎಂಬ ಅಂಶಗಳಿಂದ ಘಟಕವಾಗಿರುವುದೇ "ಪ್ರಣವ ಮಂತ್ರವು". ಇದೇ "ಓಂ" ಕಾರವು. ಈ ಎಂಟು ದಳಗಳಲ್ಲಿ ಅಷ್ಟಾಕ್ಷರಮಂತ್ರಪ್ರತಿಪಾದ್ಯನಾದ ಶ್ರೀಮನ್ನಾರಾಯಣನು ಕ್ರಮವಾಗಿ ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಜ್ಞಾನಾತ್ಮ ಮತ್ತು ಪರಮಾತ್ಮ–ಎಂಬ ಅಷ್ಟರೂಪಗಳಿಂದ ವಾಚ್ಯನಾಗಿದ್ದಾನೆ.

(೩) ಅಂತಹ ಓಂ ಕಾರ ಪ್ರತಿಪಾದ್ಯನಾದ ಪ್ರಣವರೂಪಿ ಶ್ರೀ ಪರಮಾತ್ಮನು ವಿಶ್ವದಲ್ಲಿ ವಿದ್ಯಮಾನವಾಗಿರುವ ಅಖಿಳ ಜಡ ಮತ್ತು ಜೀವರಾಶಿಗಳಲ್ಲಿ ಅಂತರ್ಯಾಮಿಯಾಗಿದ್ದು, ಜಗದ್ವ್ಯಾಪಾರಗಳನ್ನು ಲೀಲಾ ಮಾತ್ರದಿಂದ ನಿರ್ವಹಿಸುತ್ತಿರುವನು. ಚೇತನಾಚೇತನಾತ್ಮಕವಾದ ಈ ಜಗತ್ತಿನಲ್ಲಿ ಶ್ರೀ ಪರಮಾತ್ಮನು ಓತಪ್ರೋತನಾಗಿ ವ್ಯಾಪ್ತನಾಗಿದ್ದಾನೆ. ಸಕಲ ಜಡಜಂಗಮಗಳೆಂಬ ಮಣಿಗಳಿಗೆ ಶ್ರೀ ಪರಮಾತ್ಮನೇ ಸೂತ್ರದೋಪಾದಿಯಲಿದ್ದು, ಈ ಜಗತ್ತಿಗೆ ಸರ್ವರೀತಿಗಳಲ್ಲಿಯೂ ಆಧಾರನಾಗಿ ನಿಯಾಮಕನಾಗಿದ್ದಾನೆ.

(೪) ಇಂತು ಸಮಸ್ತ ಜಗದ್ವ್ಯಾಪಾರಗಳನ್ನು ನಿಯಾಮಕನಾಗಿ ತಾನೇ ಮಾಡುತ್ತಿದ್ದರೂ, ತತ್ಕ್ರಿಯಾ ಸಂಬಂಧವಾದ ಆಯಾಸವು ಶ್ರೀ ಪರಮಾತ್ಮನಿಗಿಲ್ಲ. ಅಲ್ಪವಾದ ಒಂದು ಸಣ್ಣ ಕೆಲಸಮಾಡಿದಾಗಲೂ, ಶ್ರಮವಾಗುವುದು. ಇದಕ್ಕೆ ನಮ್ಮ ಅಲ್ಪ ಬಲ ಮತ್ತು ಕ್ರಿಯಾಸಾಮರ್ಥ್ಯವೇ ಕಾರಣ. ಆದರೆ ಶ್ರೀ ಪರಮಾತ್ಮನಾದರೋ ಸರ್ವಶಕ್ತನು. ಸರ್ವತಂತ್ರಸ್ವತಂತ್ರನು. ಜೀವರು ಅಪೂರ್ಣರು. ಅಲ್ಪ ಬಲ, ಆನಂದ. ಜ್ಞಾನ, ವೀರ್ಯವುಳ್ಳವರು. ಈ ಧರ್ಮಗಳೂ ಸಹ ಶ್ರೀ ಪರಮಾತ್ಮನ ಅಧೀನವಾಗಿವೆ. ಆದರೆ ಶ್ರೀ ಪರಮಾತ್ಮನು ಸರ್ವಗುಣಸಂಪೂರ್ಣನಾದ ಪರಬ್ರಹ್ಮವಸ್ತುವು ಸರ್ವಾತ್ಮನಾಗಿರುವುದರಿಂದಲೇ "ಪರಬ್ರಹ್ಮ" ವಾಚ್ಯನು. ನಿತ್ಯಾನಂದ ಪರಿಪೂರ್ಣನು. ಆಪ್ತಕಾಮನಾದ ಪರಮಾತ್ಮನು ಪರಾಪೇಕ್ಷಾರಹಿತನು. ಸಕಲ ಜೀವಜಡಗಳಲ್ಲಿ ಅಂತಸ್ಥಿತನಾಗಿದ್ದು, ಅವುಗಳ ಕ್ರಿಯಾಭಿವ್ಯಕ್ತಿ ಮಾಡಿ, ನಿಯಾಮಕನಾಗಿರುವುದರಿಂದ. ಶ್ರೀ ಪರಮಾತ್ಮನಿಗೆ ಈ ಜಗತ್ತಿನ ಸೃಷ್ಟಿ, ಪಾಲನೆ ಮತ್ತು ಲಯಾದಿ ವ್ಯಾಪಾರಗಳಿಂದ ಲವಲೇಶವೂ ಆಯಾಸವಿಲ್ಲ. ನಿರಾಯಾಸವಾಗಿ, ಲೀಲೆಯಿಂದ ಬಿಂಬಕ್ರಿಯಾ ದ್ವಾರಾ ಸಕಲ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ಈ ಕಾರಣದಿಂದಲೇ ದಾಸರಾಯರು– **"ಸುಖಪೂರ್ಣ ದಣುವಿಕೆಯು ಇವಗಿಲ್ಲ"** –ಎಂದು ಸ್ತೋತ್ರಮಾಡಿದ್ದಾರೆ.

(೫) **ಜೀವರ ಬಗ್ಗೆ ಶ್ರೀ ಪರಮಾತ್ಮನ ಕಾರುಣ್ಯ ವಿಶೇಷವು ಅಪಾರ**

ವಾದದ್ದು. ಪರಮ ದಯಾಸಮುದ್ರನಾಗಿರುವುದರಿಂದಲೇ, ಜೀವರನ್ನು ಅಸ್ಪೃಶ್ಯ ರಾಶಿಯಿಂದ ಸೃಷ್ಟಿಗೆ ತಂದು. ಅವರ ಅನಾದಿಕರ್ಮವನ್ನು ಭೋಗ ದ್ವಾರಾ ಕ್ಷಯಗೊಳಿಸಿ, ಕೊನೆಯಲ್ಲಿ ಲಿಂಗಭಂಗ ದ್ವಾರಾ ಕರ್ಮಬಂಧನ ದಿಂದ ಮುಕ್ತಗೊಳಿಸಿ. ತನ್ನ ಕೃಪಾಕಟಾಕ್ಷವೀಕ್ಷಣದಿಂದ ಸ್ವರೂಪಾನಂದಾ ವಿರ್ಭಾವರೂಪವಾದ ಮುಕ್ತಿ ಸುಖವನ್ನು ಕೊಡುವ ಬಿಂಬರೂಪಿ ಪರಮಾ ತ್ಮನು ಅದೆಂತಹ ಪರಮಕರುಣಾಳು !

(೬) ಇಂತಹ ಪರಮ ಕರುಣಾಸಮುದ್ರನಾದ ಶ್ರೀ ಪರಮಾತ್ಮನು ಅನಂತಾನಂತ ಜೀವರಾಶಿಗಳಲ್ಲಿ ಅಂತರ್ಯಾಮಿಯಾಗಿದ್ದು, ಬಿಂಬರೂಪ ನಾಗಿ ನಿಯಮನ ಮಾಡುತ್ತಿರುವನು. ಪ್ರತಿ ಜೀವರಲ್ಲೂ, ಜೀವಾಕಾರ ನಾಗಿ, ಜೀವನಾಮಕನಾಗಿ, ತದ್ರೂಪಿಯಾಗಿ ಸ್ವಾಭಿನ್ನಾಂಶಗಳಾದ ಬಿಂಬ ರೂಪದಿಂದ ನಿಯಾಮಕನಾಗಿರುವನು. ಪ್ರತಿಬಿಂಬಾಂಶರಾದ ಜೀವರುಗಳು ಬೇರೆ ಬೇರೆ. ಜೀವವರ್ಗದಲ್ಲಿ ಪರಸ್ಪರ ಭೇದವಿದೆ. ಆದರೆ ಬಿಂಬರೂಪಿ ಯಾದ ಶ್ರೀ ಪರಮಾತ್ಮನು ಒಬ್ಬನೇ.

ಮಣಿಗಳಿಗೆ ಸೂತ್ರವು ಆಧಾರವಾಗಿರುವ ದೃಷ್ಟಾಂತಕ್ಕೆ ಪ್ರಮಾಣ :–

**ಶ್ರೀಮದ್ಭಗವದ್ಗೀತೆಯ ಅಧ್ಯಾಯ ೭ರ, ೭ನೆಯ ಶ್ಲೋಕ :–**

**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।**

**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥೭॥**

**ಇದಕ್ಕೆ ಗೀತಾಭಾಷ್ಯ ಪ್ರಮಾಣ ಹೀಗಿದೆ :–**

**ಅಹಮೇವ ಪರತರಃ । ಮತ್ತಃ ಅನ್ಯತ ಪರತರಂ ನ ಕಿಂಚಿ ದಪಿ ॥೭॥**

ಅಂದರೆ, "ಪರತರತತ್ತ್ವ ನಾನೊಬ್ಬನೇ. ನನಗಿಂತ ಬೇರೆ ಪರತತ್ತ್ವ

ಇನ್ನೊಂದಿಲ್ಲ"– ಎಂಬುದೇ ಅರ್ಜುನನಿಗೆ ಗೀತಾಚಾರ್ಯನ ಉಪದೇಶಾಮೃತ ವಾಣಿ ॥೨೮॥

## ಪದ್ಯ (೨೯)

**ಮೂಲ :--**

**ಜೀವಜೀವರಭೇದ ಜಡ ಜಡ।**
**ಜೀವರಜಡ ಜಡಜೀವರಿಂದಲಿ ।**
**ಶ್ರೀವರನು ಅತ್ಯಂತ ಭಿನ್ನ ವಿಲಕ್ಷಣನು ಲಕ್ಷ್ಮೀ ॥**
**ಮೂವರಿಂದಲಿ ಪದುಮಜಾಂಡದಿ ।**
**ತಾ ವಿಲಕ್ಷಣಳೆನಿಸುತಿಪ್ಪಳು ।**
**ಸಾವಧಿಕ ಸಮಶೂನ್ಯಳೆಂದರಿತೀರ್ವರನು ಭಜಿಸು ॥೨೯॥**

**ಅವತರಣಿಕೆ :**

ಜಗತ್ತಿನಲ್ಲಿ (೧) ಚೇತನ ವರ್ಗ ಮತ್ತು (೨) ಜಡವರ್ಗ ಎಂದು ಎರಡು ಪ್ರಭೇದಗಳಿವೆ. ಇಂತಹ ಜೀವ ಜಡರಿಗಿಂತ ಶ್ರೀ ಲಕ್ಷ್ಮೀನಾರಾಯಣರು ಅತ್ಯಂತ ಭಿನ್ನರು ಎಂಬ ಜ್ಞಾನ ಅತ್ಯಗತ್ಯ. ಈ ಉಪಾಸನಾ ಮಾರ್ಗಕ್ಕೆ ಪರಮ ಮುಖ್ಯ ಸಾಧನವೆಂದರೆ ಪಂಚಭೇದ ಮತ್ತು ತಾರತಮ್ಯಗಳ ಜ್ಞಾನ. ಈ ವಿವರಣೆಯನ್ನು ತಿಳಿಸುತ್ತಾರೆ– **"ಜೀವ ಜೀವರ"** ಎಂಬ ಪ್ರಸಕ್ತ ಸಂಧಿಗತ ೨೯ನೆಯ ಈ ಪದ್ಯದಿಂದ.

(೧) ಜೀವರು (೨) ಜಡವಸ್ತುಗಳು ಮತ್ತು (೩) ಪರಮಾತ್ಮ

ಎಂದು ಮೂರು ಪ್ರಕಾರವಾದ ಭೇದಗಳಲ್ಲಿ ಗಣನೆಮಾಡಲಾಗಿ, ಐದು ಭೇದಗಳು ಸಿದ್ಧಿಸುವುವು. ಇದಕ್ಕೆ **ಪಂಚಭೇದ**ವೆಂದು ಶಾಸ್ತ್ರಸಮ್ಮತವು. ಇವು ಕ್ರಮವಾಗಿ (೧) ಈಶ-ಜೀವ ಭೇದ (೨) ಈಶ-ಜಡ ಭೇದ (೩) ಜೀವ-ಜಡಭೇದ (೪) ಜೀವ--ಜೀವ ಭೇದ ಮತ್ತು (೫) ಜಡ-ಜಡ ಭೇದ ಎಂದು ಐದು ಪ್ರಕಾರ. ಪುನಃ ಚೇತನವರ್ಗದಲ್ಲಿ (೧) ಕ್ಷರರು ಮತ್ತು (೨) ಅಕ್ಷರರು- ಎಂದು ಎರಡು ವಿಧ. ಬ್ರಹ್ಮಾದಿ ತೃಣಾಂತ ತ್ರಿವಿಧಜೀವರೂ ಕ್ಷರವರ್ಗಕ್ಕೆ ಸೇರಿದವನು. ಶ್ರೀಮನ್ನಾರಾಯಣ ಮತ್ತು ಶ್ರೀ ಲಕ್ಷ್ಮೀದೇವಿ ಇವರಿಬ್ಬರೂ ಅಕ್ಷರರು. ಈ ಅಕ್ಷರವರ್ಗಕ್ಕೆ ಸೇರಿದ ಈಶಕೋಟಿಪ್ರವಿಷ್ಟಳಾದ ಶ್ರೀ ಲಕ್ಷ್ಮೀದೇವಿ ಸಮಸ್ತ ಜೀವರಾಶಿ ಸಮಸ್ತ ಜಡವರ್ಗ ಹಾಗೂ ಶ್ರೀಮನ್ನಾರಾಯಣ ಈ ಮೂವರಿಂದ ಅತ್ಯಂತ ಭಿನ್ನಳೆಂದು ಉಪಾಸಿಸಬೇಕು. ನಿತ್ಯಮುಕ್ತಳೂ ನಿರ್ವಿಕಾರಳೂ ಆದ ಶ್ರೀರಮಾ ಅನಂತಾನಂತ ಕೋಟಿಗುಣಗಳಿಂದ ಶ್ರೀಮನ್ನಾರಾಯಣನಿಗಿಂತ ಅವರಳು. ಶ್ರೀಹರಿಗೆ ದೇಶತಃ ಮತ್ತು ಕಾಲತಃ ಸಮಳೆನಿಸಿ, ಗುಣತಃ ಅಸಮಳಾಗಿದ್ದಾಳೆ. ಅಂದರೆ ಶ್ರೀ ಪರಮಾತ್ಮನಿಗೆ **ಸಮಾಸಮಳು.** ಬ್ರಹ್ಮಾದಿ ಕ್ಷರವರ್ಗಗತ ಜೀವಕೋಟಿಗಳಿಗಿಂತ ಕೋಟಿ ಗುಣಗಳಿಂದ ಅಧಿಕಗಳು. ಹೀಗೆಂದು ಪಂಚಭೇದ ಮತ್ತು ತಾರತಮ್ಯ ಜ್ಞಾನವನ್ನು ಶಾಸ್ತ್ರಯೋನಿತ್ವಾತ್ ತಿಳಿದು, ಗುರೂಪದೇಶದ್ವಾರಾ ಜ್ಞಾನ ಸಂಪಾದಿಸಿ, ಪೂರ್ವೋಕ್ತ ಉತ್ತಮ ಜ್ಞಾನಾನುಸಂಧಾದಿಂದ ಶ್ರೀ ಲಕ್ಷ್ಮೀ ಮತ್ತು ನಾರಾಯಣರನ್ನು ಭಜಿಸಬೇಕೆಂದು ತಿಳಿಸುತ್ತಾರೆ. ॥೨೯॥

**ಪ್ರತಿಪದಾರ್ಥ :-**

**ಜೀವ ಜೀವರ ಭೇದ** = ಚೇತನವರ್ಗದಲ್ಲಿ ಜೀವ ಜೀವರೊಳಗೆ ಪರಸ್ಪರ ವೈಲಕ್ಷಣ್ಯ, **ಜಡ ಜಡ** = ಒಂದು ಜಡ ಪದಾರ್ಥಕ್ಕೂ ಮತ್ತು ಇನ್ನೊಂದು ಜಡವಸ್ತುವಿಗೂ ಇರುವ ಅನ್ಯೋನ್ಯ ಭೇದ, **ಜೀವ ಜಡ** = ಜೀವವರ್ಗಕ್ಕೂ ಮತ್ತು ಜಡವರ್ಗಕ್ಕೂ ಇರುವ ಪರಸ್ಪರ ವ್ಯತ್ಯಾಸ. **ಜಡ ಜೀವರಿಂದಲಿ** = ಈ ಪ್ರಕಾರ ಸಮಸ್ತ ಜಡರಾಶಿಗಳಿಂದಲೂ ಮತ್ತು

ಜೀವವರ್ಗದಿಂದಲೂ **ಶ್ರೀವರನು**=ಶ್ರೀಲಕ್ಷ್ಮೀದೇವಿಯರಿಗಿಂತ ಶ್ರೇಷ್ಠನೂ ಮತ್ತು ಲಕ್ಷ್ಮೀರಮಣನೂ ಆದ ಶ್ರೀಪರಮಾತ್ಮನು **ಅತ್ಯಂತ ಭಿನ್ನನು**= ವಿಶೇಷಾಕಾರವಾಗಿ ಪರಮ ವಿಲಕ್ಷಣನು. (ಜೀವ, ಜಡದಿಂದ ಈಶನ ಭೇದ ಪರಮಾಂತಕವಾಗಿದೆ) **ಲಕ್ಷ್ಮೀ**=ಶ್ರೀರಮಾದೇವಿಯು **ಮೂವರಿಂದಲಿ**= ಬ್ರಹ್ಮಾದಿ ತೃಣಾಂತ ಸಮಸ್ತ ಕ್ಷರವರ್ಗ ಪ್ರವಿಷ್ಠರಾದ ತ್ರಿವಿಧ ಜೀವ ರಿಂದಲೂ, ಸ್ವತಃ ಏವ ಪ್ರವೃತ್ತಿಯೇ ಇಲ್ಲದ ಸಕಲ ಜಡಗಳಿಂದಲೂ, ಸಮಾಭ್ಯಧಿಶೂನ್ಯನಾದ ಸರ್ವೋತ್ತಮನಾದ, ಶ್ರೀಲಕ್ಷ್ಮಿಗಿಂತ ಅನಂತಾನಂತ ಕೋಟಿ, ಅಪರಿಮಿತ ಗುಣಗಳಿಂದ ಅಧಿಕನಾದ ಶ್ರೀಪರಮಾತ್ಮ ಈ ಮೂರು ವರ್ಗಗಳಿಂದಲೂ **ಪದುಮಜಾಂಡದಿ**= ಪದ್ಮನಾಭದೇವರ ನಾಭೀಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರ ಶರೀರವಾದ ಈ ಬ್ರಹ್ಮಾಂಡದಲ್ಲಿ, **ತಾ**=ಅಂತಹ ಶ್ರೀಲಕ್ಷ್ಮಿದೇವಿಯರು **ವಿಲಕ್ಷಣವೆನಿಸು ತಿಪ್ಪಳು**=ಭೇದ ಉಳ್ಳವಳಾಗಿದ್ದಾಳೆ. ಅಂದರೆ, ಅನಾದ್ಯನಂತ ಕಾಲದಲ್ಲೂ ರಮಾದೇವಿಯರು ಒಬ್ಬರೇ ಆಗಿ ಈಶಕೋಟಿ ಪ್ರವಿಷ್ಠರಾಗಿದ್ದಾರೆ. ಆದ್ದರಿಂದ ವಿಲಕ್ಷಣ ವ್ಯಾಪಾರವುಳ್ಳವರು. ಶ್ರೀಪರಮಾತ್ಮನ ವಿವಕ್ಷಯಾ ಪರಾಧೀನಳು. ಅಸ್ವತಂತ್ರರು. ಬ್ರಹ್ಮಾದ್ಯಪೇಕ್ಷಯಾ ಈಶಳು. ಅಂದರೆ ಬ್ರಹ್ಮಾದಿ ಜೀವವರ್ಗದಿಂದ ಕೋಟಿ ಗುಣಗಳಿಂದ ಉತ್ತಮಳಾಗಿ ಅವರಿಗೆ ನಿಯಾಮಕಳು, **ಸಾವಧಿಕ**=ದೇಶ ಮತ್ತು ಕಾಲಗಳ ವ್ಯಾಪ್ತಿಗಳ ವಿವ ಕ್ಷಯಾ, ದೇಶತಃ ಮತ್ತು ಕಾಲತಃ ಶ್ರೀಪರಮಾತ್ಮನಿಗೆ **ಸಮ**=ಸಮ ಳೆಂದೂ **ಶೂನ್ಯ**=ನಿರವಧಿಕ ಶುಭಗುಣಗಣನಿಧಿಯಾದ ಶ್ರೀಪರಮಾತ್ಮನಿಗಿಂತ ಅನಂತಾನಂತಕೋಟಿ ಗುಣಗಳಿಂದ ಅವರಳು, ಅಂದರೆ ಗುಣತಃ ಅಸ ಮಳು. **ಎಂದು**=ಈ ರೀತಿಯಲ್ಲಿ, **ಅರಿತು**=ಜ್ಞಾನಾನುಸಂಧಾನ ಕ್ರಮ ದಿಂದ ತಿಳಿದು, **ಈರ್ವರನು**=ಈಶಕೋಟಿ ಪ್ರವಿಷ್ಠರಾದ ಶ್ರೀಲಕ್ಷ್ಮಿ ಮತ್ತು ಶ್ರೀಮನ್ನಾರಾಯಣ ಇವರಿಬ್ಬರನ್ನೂ **ಭಜಿಸು**=ಪ್ರಾರ್ಥನಾರೂಪ ದಿಂದ ಕೊಂಡಾಡುತ್ತಿರು ॥೨೯॥

# ವ್ಯಾಖ್ಯಾನಗಳು

## (೧) ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಜೀವ ಜೀವರಿಗೆ ಪರಸ್ಪರ ಭೇದ ಉಂಟು. ಎಂತಲೂ, ಪರಮಾತ್ಮ ನಿಂದ ಭಿನ್ನರೂ ಎಂತಲೂ ಹೇಳತಾರೆ.

ಜೀವ ಜೀವರ ಭೇದ_ಚೇತನ ಜೀವರೊಳಗೆ ಪರಸ್ಪರ ಭೇದ, ಜಡ ಜಡ_ಜಡ ಜೀವರೊಳು ಪರಸ್ಪರ ಭೇದ, ಜೀವ ಜಡ_ಚೇತನ ಜೀವಕ್ಕೂ ಜಡ ಜೀವಕ್ಕೂ ಭೇದ. ಜಡ_ಜಡಜೀವರಿಗೂ ಶ್ರೀಪರಮಾತ್ಮನಿಗೂ ಭೇದ. ಜೀವರಿಂದಲಿ-ಈ ಪ್ರಕಾರ ಜೀವರಿಂದಲೂ ಜಡಗಳಿಂದಲೂ. ಅಂದರೆ ಜಡ ಜೀವಗಳಿಂದಲೂ, ಶ್ರೀವರನು-ಶ್ರೀ ಲಕ್ಷ್ಮೀಪತಿಯಾದ ಶ್ರೀನಾರಾಯಣ ದೇವರು, ಅತ್ಯಂತ ಭಿನ್ನನು-ವಿಶೇಷಾಕಾರವಾಗಿ ಭಿನ್ನನಾದವನು. ವಿಲಕ್ಷಣನು-ಈ ಯಾವತ್ತು ಜೀವರಿಂದಲೂ ಜಡರಿಂದಲೂ ವಿಲಕ್ಷಣನಾದವನು ಎಂದರೆ, ಯಾವ ವಿಷಯದಲ್ಲಿ ಸಂಬಂಧಿಸದವನು. ಲಕ್ಷ್ಮೀ-ಅಸ್ವತಂತ್ರಳಾದ, ಶ್ರೀ ಪರಮಾತ್ಮನ ಪತ್ನಿಯಾದ ಲಕ್ಷ್ಮೀ ದೇವೇರು, ಪದುಮಜಾಂಡದ - ಬ್ರಹ್ಮಾಂಡದಲ್ಲಿ ಸೃಜ್ಯರಾದ ತದನ್ಯ ಮುಕ್ತರಾದ, ಅಮುಕ್ತರಾದ, ಅಸೃಜ್ಯರಾದ, ಮೂವರಿಂದಲೂ-ಏತಾದೃಶರಾದ ತ್ರಿವಿಧರಿಂದಲೂ, ತಾ ವಿಲಕ್ಷಣಳೆನಿಸುತಿಪ್ಪಳು-ಜೀವರೋಪಾದಿಯಲ್ಲಿ ಅಸ್ವಂತಂತ್ರ ಚೇತನಗಳಾದ ಕಾಲಕ್ಕೂ, ಅನಾದ್ಯನಂತಕಾಲಕ್ಕೂ ರಮಾದೇವೇರು ಒಬ್ಬರೇ ಆದ್ದರಿಂದಲೂ, ವಿಲಕ್ಷಣ ವ್ಯಾಪಾರವುಳ್ಳವರಾದ್ದರಿಂದಲೂ, ತಾನು ದಾರಿಗೂ ಸಂಬಂಧಿಸದೆ ಇರತಕ್ಕವರು. ಶ್ರೀ ಪರಮಾತ್ಮನ ವಿವಕ್ಷಯಾ ಜೀವಳು. ಬ್ರಹ್ಮಾದ್ಯಪೇಕ್ಷಯಾ ಈಶಳು. ಈ ಈ ಪ್ರಕಾರ ಕರೆಸೋವವಳಾಗಿದ್ದಾಳೆ. ಸಾ-ಆ ಲಕ್ಷ್ಮೀದೇವೇರು, ಅಧಿಕ-ಶ್ರೀ ಪರಮಾತ್ಮನಿಗೆ ಅಧಿಕಳು ಎಂತಾಗಲಿ, ಸಮ-ಸಮಳು ಎಂತಾಗಲೀ. ಶೂನ್ಯಳೆಂದರಿತು-ಈ ಉಭಯವಿಧದಿಂದಲೂ ಶೂನ್ಯಳು ಅಂದರೆ, ಶ್ರೀ ಪರಮಾತ್ಮನಿಗೆ ಅವರಳು ಎಂತ ಈ ತಾರತಮ್ಯವನ್ನು ತಿಳಿದು,

ಈರ್ವರನು ಭಜಿಸು-ರಮಾ ಮಧುಸೂದನರನ್ನು ಭಜಿಸುವವನಾಗಬೇಕು. ಎಂದರೆ, ರಮಾಸಮೇತನಾದ ಶ್ರೀ ಪರಮಾತ್ಮನ ಭಜಿಸಬೇಕು ಎಂತ ತಾತ್ಪರ್ಯ. ಇದರಿಂದ ಬ್ರಹ್ಮಾದಿ ಜೀವರಲ್ಲಿ ಜಡಜೀವರಲ್ಲಿ ಶುದ್ಧ ಜಡ ಗಳಲ್ಲಿ, ಪಂಚಭೇದವೂನು. ರಮಾ ಮಧುಸೂದನರಲ್ಲಿ ಒಂದು ಭೇದವೂ, ಅಂತು, ಆರು ಭೇದ ತಿಳಿಯಬೇಕೆಂದು ಹೇಳಿದಂತಾಯಿತು. ಎಂತ ತಾತ್ಪರ್ಯ.

**ವಿಶೇಷಾರ್ಥ :-**

ಪೂರ್ವೋಕ್ತ ದೇವರ ರೂಪಗಳಲ್ಲೆಲ್ಲಾ ಜೀವ ಜಡಾತ್ಮಕ ಪ್ರಪಂ ಚಕ್ಕೆ ಅತ್ಯಂತ ಭಿನ್ನ, ಪ್ರತ್ಯೇಕವೆಂದು ತಿಳಿಯುವುದಕ್ಕೆ ಪಂಚಭೇದಜ್ಞಾನ ಅತ್ಯಾವಶ್ಯಕವಾದ್ದರಿಂದ, ಆ ಪಂಚಭೇದಗಳನ್ನು ವಿವರಿಸಿ ತಿಳಿಸುತ್ತಾರೆ. ಈ ಪದ್ಯದಲ್ಲಿ ಜೀವರುಗಳೊಳಗೆ ಆಯಾಯಾ ದೇಹದಲ್ಲಾಗುವ ಸುಖ ದುಃಖಗಳು ಆಯಾಯಾ ಜೀವ ಒಟ್ಟಿಗೆ ಅಭಿಮಾನದಿಂದ ಆಗುವುದಲ್ಲದೆ, ಮತ್ತೊಂದು ದೇಹಗತ ಜೀವನಿಗೆ ಇಲ್ಲವಾದ್ದರಿಂದ, ದೇಹೋಪಾಧಿ ಎಂಬ ನಿಮಿತ್ತ ಹೋದರೆ ಜೀವ ಚೈತನ್ಯ ಒಂದೇ ಆಗುವುದೆಂದು ಭಾವಿಸ ಬಾರದು. ಅಂದರೆ, ಹಾಗೆ ತಿಳಿಯಬಾರದು. ಒಬ್ಬ ಜೀವನು ಮತ್ತೊಂದು ಜೀವನಿಂದ ಐಕ್ಯ ಹೊಂದುವುದಿಲ್ಲವೆಂದು, ಜೀವರುಗಳನ್ನು ಬ್ಯಾರೆ ಬ್ಯಾರೆ ತಿಳಿಯುವುದು, ಜೀವ ಜೀವ ಭೇದ. (೧) ಕತ್ತಲು, ಬೆಳಕು, ನೀರು. ಬೆಂಕಿ ಮುಂತಾದ ಜ್ಞಾನವಿಲ್ಲದ್ದು ಜಡವೆಲ್ಲಾ ಒಂದೇ ವಸ್ತು ಎಂತಲೂ, ದೃಶ್ಯವಾದ್ದರಿಂದ ಕಪ್ಪೇಚಿಪ್ಪಿನಲ್ಲಿ ತೋರುವ ಬೆಳ್ಳಿಯಂತೆ, ಭ್ರಾಂತಿಯಿಂದ ನಿಜವೆಂದು ತೋರುವುದು, ಪರಮಾರ್ಥವಾಗಿ ಸರ್ವವೂ ಮಿಥ್ಯವೂ ಎಂದೂ ತಿಳಿಯದೆ ಪ್ರತ್ಯೇಕ ಪ್ರತ್ಯೇಕ ಸ್ವಭಾವ ಜಡಗಳೆಲ್ಲಾ ಬ್ಯಾರೆ ಬ್ಯಾರೆ ಎಂದು ತಿಳಿಯುವುದೇ ಜಡ ಜಡ ಭೇದ. (೨) ಜೀವ ಜ್ಞಾನ ರೂಪನಾದ್ದರಿಂದ, ಜಡ ಜ್ಞಾನ ರಹಿತವಸ್ತುವಾದ್ದರಿಂದ ಎರಡೂ ಒಂದಲ್ಲ. ಬ್ಯಾರೆ ಬ್ಯಾರೆ ಎಂದು ತಿಳಿಯುವುದೇ ಜಡ ಜೀವ ಭೇದ. (೩) ದೇವರು ಸ್ವತಂತ್ರ, ಜ್ಞಾನರೂಪ. ಜೀವ ಪರಾಧೀನವಾದ ಅಲ್ಪ ಜ್ಞಾನರೂಪ.

ಹಾಂಗೆ ವಿರುದ್ಧ ಸ್ವಭಾವವುಳ್ಳವರಾದ್ದರಿಂದ, ಜೀವರು ಬ್ಯಾರೆ, ದೇವರು ಬ್ಯಾರೆ-ಎಂದು ತಿಳಿಯುವುದೇ ಜೀವ ಪರಮಾತ್ಮ ಭೇದ. (೪) ತನ್ನ ಜ್ಞಾನಕ್ಕೆ ಇತರ ಸಹಾಯಾಪೇಕ್ಷೆ ಇಲ್ಲದೇ ಅನಂತ ಜೀವ ಜಡಾತ್ಮಕ ಪ್ರಪಂಚವನ್ನು ಸಾಕ್ಷಾತ್ತಾಗಿ ನೋಡುವ ಸರ್ವಜ್ಞ ದೇವರು ಜ್ಞಾನರಹಿತ ಸ್ವರೂಪನಾಗನು. ಎಂದೂ ದೇವರು ಬ್ಯಾರೆ, ಜಡವಸ್ತುವು ಬ್ಯಾರೆ-ಎಂದು ತಿಳಿಯುವುದೇ ಜಡ ಪರಮಾತ್ಮರ ಭೇದ. (೫) ಹೀಂಗೆ ಪಂಚ ಭೇದಜ್ಞಾನ, ರಮಾದೇವಿಯು ಜೀವ, ಜಡ, ಪರಮಾತ್ಮ-ಎಂಬ ಮೂರು ವಸ್ತುಗಳಿಗೂ ಅತ್ಯಂತ ವಿಲಕ್ಷಣರು, ಅಂದರೆ, ಜೀವರಂತೆ ಪರಾಧೀನ ಸ್ವರೂಪರಾದಾಗ್ಯೂ. ದೇವರಂತೆ ನಿತ್ಯಮುಕ್ತರಾದ್ದರಿಂದ, ಜಡದಂತೆ ಜ್ಞಾನರಹಿತರಲ್ಲವಾದ್ದರಿಂದಲೂ, ಈಕೆ ಪ್ರತ್ಯೇಕ ವಸ್ತುವೆಂದು ಸಹ ತಿಳಿದು, ಸಾವಧಿಕ ಸಮಶೂನ್ಯರೆಂದೇ ಎಂದರೆ, ದೇಶಕಾಲ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಅವಧಿ ಎಂದು ಇಲ್ಲದ್ದರಿಂದ, ಲಕ್ಷ್ಮೀನಾರಾಯಣರೆಂಬ ಈ ಇಬ್ಬರನ್ನ ದೇಶ ಕಾಲ ವ್ಯಾಪ್ತಿಯಲ್ಲಿ ನಿರವಧಿಕ ಸಾಮ್ಯವುಳ್ಳವರೆಂದು ಗುಣತಃ ಅಸಮರು ಎಂದು ಅರ್ಥ, ॥೨೯॥

## (೨) "ಭಾವಪ್ರಕಾಶಿಕೆ"-ವ್ಯಾಖ್ಯಾನ:-

ಜಡಚೇತನಾತ್ಮಕ ಪ್ರಪಂಚದಲ್ಲಿ ವ್ಯಾಪ್ತನಾಗಿರುವನೆಂದು ಉಪಾಸನಾ ಮಾಡಬೇಕೆಂದು ಮೇಲಿನ ಪದ್ಯದಿಂದ ಹೇಳಿದರು, ಈಗ ಇಂತಹ ಪ್ರಪಂಚದಲ್ಲಿದ್ದರೂ ಜಡಚೇತನದಿಂದ ವಿಲಕ್ಷಣರು ಲಕ್ಷ್ಮೀ, ನಾರಾಯಣರೆಂದು ಉಪಾಸನೆಯನ್ನು ಹೇಳುತ್ತಾ, ಅದಕ್ಕೆ ಮುಖ್ಯ ಸಾಧನವಾದ ಪಂಚಭೇದವನ್ನೂ ಸಹ ಹೇಳುತ್ತಾರೆ.

ಜೀವರಿಗೂ ಜೀವರಿಗೂ ಪರಸ್ಪರ ಭೇದ, ಜಡ ಜಡರಿಗೂ ಪರಸ್ಪರ ಭೇದ. ಜೀವರಿಗೂ, ಮೇಲಿನ ಸ್ಥೂಲದೇಹಭೂತರಾದ ಜಡಗಳಿಗೂ ಭೇದ, ಜೀವನಿಗೂ ಪರಮಾತ್ಮನಿಗೂ ಭೇದ. ಜಡಗಳಿಗೂ ಪರಮಾತ್ಮನಿಗೂ ಭೇದ-ಎಂಬ ಪಂಚಭೇದಗಳನ್ನೂ ತಿಳಿಯಬೇಕು. ಜೀವರಿಗೆ ಜೀವರು ಭಿನ್ನರು ಎಂಬ ವಿಷಯವು ನಮ್ಮ ಅನುಭವದಲ್ಲಿಯೇ

ಇರುವುದು. ಲೋಕದಲ್ಲಿರುವ ಅನೇಕ ಪ್ರಾಣಿಗಳಲ್ಲಿ ಕೆಲವರು ಸುಖ ಪಡುತ್ತಿರುವರು. ಕೆಲವರು ದುಃಖಪಡುತ್ತಿರುವರು. ಕೆಲವು ಜನರು ರೋಗಿಗಳು, ಕೆಲವರು ಆರೋಗ್ಯವಂತರು. ಅಲ್ಲದೆ ಕತ್ತೆ, ಕುದುರೆ ಮೊದಲಾದ ಪ್ರಾಣಿಗಳಾಗಿ ಹುಟ್ಟುವರು. ಇವೆಲ್ಲವೂ ಒಂದೇ ಹೇಗೆ ಆದೀತು ? ಆದುದರಿಂದ ಜೀವರಲ್ಲಿ ಪರಸ್ಪರ ಭೇದ ಹೇಳಿಯೇ ತೀರ ಬೇಕು. ಜೀವರು ನಿತ್ಯರು. ದೇಹವು ಅನಿತ್ಯವು.

**"ಘಟೇಭಿನ್ನೇಯಥಾಕಾಶ ಆಕಾಶಸ್ಯಾದ್ಯಥಾ ಪುರಾ"— ಎಂಬ ಭಾಗವತ ದ್ವಾದಶ ಸ್ಕಂದ** ವಾಕ್ಯಾನುಸಾರವಾಗಿ ಘಟ ಒಡೆದು ಹೋಗಲು, ಘಟದೊಳಗಿನ ಆಕಾಶವು ಆಕಾಶವಾಗಿ ನಿಂತುಹೋಗುವುದು. ಆ ಆಕಾಶವು ನಾಶವಾಗದು. ಆದ್ದರಿಂದ ದೇಹವು ನಾಶವಾದರೂ ಜೀವವು ದೇಹಾಂತರವನ್ನು ಹೊಂದುವುದು. ಆದುದರಿಂದಲೇ ಜೀವರಿಗೂ ಜಡರಿಗೂ ಭೇದವುಂಟೆಂದು ತಿಳಿಯಬೇಕು. ಜಡಕ್ಕೂ ಜಡಕ್ಕೂ ಸಹ ಭೇದವುಂಟು. ನೊಣ, ಇರುವೆ, ಕತ್ತೆ, ಕುದುರೆ ಮೊದಲಾದ ಪ್ರಾಣಿಗಳ ದೇಹಗಳಿಗೂ, ಪರ್ವತ, ನದಿ ಮೊದಲಾದವುಗಳಿಗೂ ಒಂದಕ್ಕೊಂದು ಭಿನ್ನವಾಗಿಯೇ ಇರುವುದರಿಂದ ಜಡಕ್ಕೂ ಜಡಕ್ಕೂ ಭೇದ ಒಪ್ಪಿಗೊಳ್ಳಬೇಕಾಯಿತು. ಜೀವರಿಗೂ ಪರಮಾತ್ಮನಿಗೂ ಭೇದ. ಹೇಗೆಂದರೆ—

ಜೀವರು ಅಸ್ವತಂತ್ರರು. ಜನನ ಮರಣಾದಿ ಕ್ಲೇಶ (ಅಂದರೆ, ಜೀವ ನಿತ್ಯವಾದರೂ, ಶರೀರ ಸಂಯೋಗ ವಿಯೋಗಗಳೇ ಜನನ-ಮರಣಗಳು) ಆ ದುಃಖಗಳನ್ನು ಅನುಭವಿಸಬೇಕಾದವರು, ಪರಮಾತ್ಮನನು ಸ್ವತಂತ್ರನು. ಆನಂದಪೂರ್ಣನು. ಅಚಿಂತ್ಯಮಹಿಮೆಯುಳ್ಳವನು. ಈ ಕಾರಣದಿಂದ ಜೀವರಿಗೂ ಪರಮಾತ್ಮನಿಗೂ ಭೇದ ಒಪ್ಪಿಕೊಳ್ಳಬೇಕು. ಜಡದಲ್ಲಿ ಕ್ರಿಯಾಸಕ್ತಿ ಇಲ್ಲವಾದ್ದರಿಂದ, ಪರಮಾತ್ಮನು ಜಡದಿಂದ ಭಿನ್ನನೆಂದು ಒಪ್ಪಿಕೊಳ್ಳಬೇಕಾಯಿತು. ಜೀವ ಜಡಾದಿಗಳಲ್ಲಿ ಇಲ್ಲದಿರುವ ವಿಲಕ್ಷಣ ಧರ್ಮವು ಪರಮಾತ್ಮನಲ್ಲಿ ಇರುವುದರಿಂದ "ವಿಲಕ್ಷಣ"—ನೆಂದು ಹೇಳಿರುವರು, ಲಕ್ಷ್ಮೀದೇವಿಯರು ಪರಮಾತ್ಮನಿಂದಲೂ, ಜಡದಿಂದಲೂ ಮತ್ತು

ಚೇತನದಿಂದಲೂ ಸಹ ವಿಲಕ್ಷಣರಾಗಿರುವರು. ಬ್ರಹ್ಮಾದಿ ಜೀವರಂತೆ ಲಕ್ಷ್ಮೀದೇವಿಯರನ್ನು ಸಾಧಾರಣ ಜೀವರೆನ್ನುವುದಕ್ಕೆ, ಬ್ರಹ್ಮಾದಿಗಳಿಗೆ ಶರೀರ ಪ್ರಾಪ್ತಿ, ಶರೀರನಾಶಗಳುಂಟು. ರಮಾದೇವಿಯರಿಗೆ ಅದಿಲ್ಲ. ಪ್ರಳಯಕಾಲದಲ್ಲಿ ಕೂಡ ಇದ್ದೇ ಇರುವರು. ಆದುದರಿಂದ ಅವರು ಜೀವ ವಿಲಕ್ಷಣರೆಂದು ಹೇಳಬೇಕಾಯಿತು. ಜಗತ್ಸೃಷ್ಟಿಗೆ ಕಾರಣರೂಪ ಳಾಗಿ ಜಡಪ್ರಕೃತಿರೂಪರಾಗಿದ್ದರೂ, ಜಡಸೃಷ್ಟಿಗಾಗಿ ಜಡರೂಪವನ್ನು ಸ್ವೀಕರಿಸುವರೇ ಹೊರತು ತಾವು ಜಡರಲ್ಲ, ಏಕೆಂದರೆ, ಬ್ರಹ್ಮಾದಿ ಗಳನ್ನು ಸೃಷ್ಟಿಮಾಡುವಾಗ ಚೇತನ ಸ್ವರೂಪದಿಂದಲೇ ಇರುವರು. ಚೇತನ ರಿಗೆ ಕ್ರಿಯಾಶಕ್ತಿ ಇರುವುದರಿಂದ ಸಾಮರ್ಥ್ಯವುಳ್ಳವರು, ಜಡ ಚೇತ ನಾದಿ ರೂಪಗಳನ್ನು ಧರಿಸಬಹುದು. ಬರೇ ಜಡವು ಚೇತನವೆಂದಿಗೂ ಆಗದು. ಆದುದರಿಂದ ಶ್ರೀಲಕ್ಷ್ಮೀದೇವಿಯರು ಜಡದಿಂದ ಭಿನ್ನರೆಂದು ಹೇಳಬೇಕಾಯಿತು. ಪರದೂತ್ಮನಂತೆ ಪ್ರಳಯಕಾಲದಲ್ಲಿಯೂ ಸಹ ನಾಶ ವಿಲ್ಲದ ಶರೀರವುಳ್ಳವಾದ್ದರಿಂದ, ಪರಮಾತ್ಮನೇ ಲಕ್ಷ್ಮೀಸ್ವರೂಪನೆಂದು ಹೇಳುವುದೆಂದರೆ, ಪ್ರಳಯಕಾಲದಲ್ಲಾದರೂ ಪರಮಾತ್ಮನ ಅಧೀನರಾಗಿ ಅಸ್ವತಂತ್ರರಾಗಿಯೇ ಇರುವರು. ಆದುದರಿಂದ ಪರಮಾತ್ಮನಿಂದ ಭಿನ್ನ ರಾದರು, ಈ ವಿಲಕ್ಷಣವನ್ನು ದಾಸರಾಯರು ತೋರಿಸುತ್ತಾರೆ–**"ಸಾವ ಧಿಕ ಸಮಶೂನ್ಯಳೆಂದು"** ಇಷ್ಟೇ ಎಂದು ಅವಧಿಯುಳ್ಳ, ಅಂದರೆ ಪರಿ ಮಿತಿವುಳ್ಳ ಗುಣಾದಿಗಳಿಂದ ಕೂಡಿದವರಾಗಿ ಸಮರಹಿತರಾಗಿರುವರು. ಅಂದರೆ, ಪರಮಾತ್ಮನಿಗಿಂತಲೂ ಕಡಿಮೆಯಾಗಿರುವರು. ಬ್ರಹ್ಮಾದಿಗಳಿ ಗಿಂತಲೂ ಉತ್ತಮರು, ಈಕೆಗೆ ಸಮರಾದವರು ಮತ್ತಾರೂ ಇಲ್ಲ, ಹೀಗೆ ಲಕ್ಷ್ಮೀನಾರಾಯಣರು ಲೋಕವಿಲಕ್ಷಣರೆಂದು ಉಪಾಸನೆ ಮಾಡ ಬೇಕೆಂದು ತಾತ್ಪರ್ಯ. ॥೨೯॥

**(ಇ) "ಭಾವದರ್ಪಣ ಟೀಕಾ" – ವ್ಯಾಖ್ಯಾನ :—**

ಈಗ **"ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ಸರ್ವದಾ ||"** ಎಂತಲೂ,

**"ಪಂಚಭೇದಾಂಶ್ಚ ವಿಜ್ಞಾಯ ವಿಷ್ಣೋಃ ಸ್ವಾಭೇದನೇವ ಚ |**
**ನಿರ್ದೋಷತ್ವಂ ಗುಣೋತ್ಕರ್ಷಂ ಜ್ಞಾತ್ವಾ ಮುಕ್ತಿರ್ನಚಾನ್ಯಥಾ |"**

—ಎಂಬಂತ **ಶ್ರೀಮದ್ಭಗವತ್ಪಾದರ** ಉಕ್ತ್ಯನುಸಾರ ಮೋಕ್ಷಾಪೇಕ್ಷಿ ಉಳ್ಳವರಿಗೆ ಪಂಚಭೇದಜ್ಞಾನ ಪರಮಾವಶ್ಯಕವಾದ್ದರಿಂದ ಅಂಥ ಅಧಿಕಾರಿಗಳಿಗೆ ಇದರ ವಿವರ ಛಂದಾಗಿ ಮನನವಾಗಬೇಕೆಂದು ಪರಮಾಂತಃಕರಣ ಪೂರ್ವಕನಾಗಿ ಪಂಚಭೇದ ತಿಳಿಸಿಕೊಡುತ್ತಾರೆ.

**(೧) ಜೀವ ಜೀವರ ಭೇದ :—**

**"ದೇವರ್ಷಿಪಿತೃ ಪ ನರಾ ಇತಿ ಮುಕ್ತಾಸ್ತು ಪಂಚಧಾ |"**

**ಎಂಬ ತತ್ವಸಂಖ್ಯಾನಾನುಸಾರ** ಪಂಚವಿಧ ಮುಕ್ತಿಯೋಗ್ಯರು.

"ಸ್ಮೃತಿಸಂಸ್ಥಾಃ"—ಎಂಬ **ಪ್ರಕಾಶಸಂಹಿತಾನುಸಾರ,** ಭೂ—ಪ್ರಚುರರು, ನರಕ-ಪ್ರಚುರರು ಮತ್ತು ಸ್ವರ್ಗ-ಪ್ರಚುರರು ಹೀಗೆ ತ್ರಿವಿಧ ನಿತ್ಯ ಸಂಸಾರಿಗಳು.

**"ದೈತ್ಯ ರಕ್ಷ ಪಿಶಾಚಕಾಃ | ಮರ್ತ್ಯಾಧಮಾಶ್ಚತುರ್ಧೈವ ತಮೋಯೋಗ್ಯಾಃ ಪ್ರಕೀರ್ತಿತಾಃ ||"**

**—ಎಂಬಂಥ ತತ್ವಸಂಖ್ಯಾನಾನುಸಾರ** ಕಲಿ, ವಿಪ್ರಚಿತ್ತಿ, ಕಾಲನೇಮಿ ಜರಾಸಂಧ ಮೊದಲಾದ ತಮೋಯೋಗ್ಯರು ಚತುರ್ವಿಧರು. ಹೀಂಗೆ ಪೂರ್ವೋಕ್ತರಾದಂಥ ತ್ರಿವಿಧ ಜೀವರಿಗೂ ಪರಸ್ಪರ ಭೇದ ಸಿದ್ಧ.

**(೨) ಜಡ ಜಡ ಭೇದ :—**

ಅನಂತಾನಂತ ವೇದಗಳೂ, ಪಂಚಾಶದ್ವರ್ಣಗಳೂ, ಅವ್ಯಾಕೃತಾ

ಕಾಶ, ಕಾಲ, ದೇಶ–ಇವುಗಳೇ ನಿತ್ಯ ಜಡಗಳು ಎಂತರ್ಥ. ಇದಕ್ಕೆ ಪ್ರಮಾಣ :–

**"ನಿತ್ಯಾಸ್ತು ವೇದ ವರ್ಣಾಶ್ಚ ಪರಮಾಕಾಶ ಏವ ಚೇತಿ ।"**
**—ಸತತ್ತ್ವರತ್ನಮಾಲೋಕ್ತೇಃ ॥**

**"ಗುಣ ಕಾಲ ದೇಶ ವೇದ ನಿತ್ಯ"–ಎಂದು ಶ್ರೀ ಪುರಂದರದಾಸರ** ಸುಳಾದಿ ಅದೆ. ನಿತ್ಯಾನಿತ್ಯಾ ಜಡ ವಿವರ. ಪುರಾಣಾದಿಗಳು ಅರ್ಥತಃ ನಿತ್ಯ, ಶಬ್ದತಃ ಅನಿತ್ಯ ಇದಕ್ಕೆ ಪ್ರಮಾಣ :—

**"ಸ್ಮೃತ್ಯಯಾ ಅರ್ಥತೋ ನಿತ್ಯಾ ವ್ಯತ್ಯಾಸಾತೇ ವಿನಾಶಿನಃ॥"** ಅಂದರೆ, ಪಾಠವ್ಯತ್ಯಾಸಾತ್ ಎಂದು ವ್ಯಾಖ್ಯಾನ ಇರುತ್ತದೆ । ಹೀಗೆ **ಶಾಂಡಿಲ್ಯೋಕ್ತಿ** ಸಿದ್ಧ. ಅನಿತ್ಯವಾದ ಜಡ ಪದಾರ್ಥಗಳೂ ಘಟಪಟಾದಿಗಳೂ ಎಂದರ್ಥ. ಈ ಜಡತ್ರಯಗಳಿಗೆ ಪರಸ್ಪರ ಭೇದ ಸಿದ್ಧವು,

(೩) ಈ ಪೂರ್ವೋಕ್ತ ಜೀವಜಡಗಳಿಗೆ ಪರಸ್ಪರ ಭೇದವು.

(೪) ಜೀವಸಮೂಹಕ್ಕೂ ಈಶನಿಗೂ ಭೇದವು.

(೫) ಜಡಸಮೂಹಕ್ಕೂ ಈಶನಿಗೂ ಭೇದವು.

ಇಂಥ ಪಂಚ ಭೇದದಲ್ಲಿ–

**"ಈಶ ಜೀವಾರೊಳು ಲಕುಮಿಗೆ ಭೇದ ಬಲ್ಲ ।**
**ದಾಸರ ನೆರೆ ಇಡೋ ವಿಜಯವಿಠ್ಠಲ ಬಂಧೋ ॥"**

–ಎಂದು ಅಪರೋಕ್ಷಜ್ಞಾನಿಗಳ ಸುಳಾದಿ ಉಕ್ತಿ ಇರೋಣದರಿಂದ, ಮೂವರಿಂದಲಿ ವಿಲಕ್ಷಣಳು ಎಂಥ ದಾಸಾರ್ಯರು ಹೇಳಿದ್ದಾರೆ. ಅದರ ವಿವರ:–

**"ದೇಶತಃ ಕಾಲತೋ ವ್ಯಾಪ್ತಾ ಚಿದ್ರೂಪೀ ಶ್ರೀಹರೇಃ ಸದಾ ।"**

-ಎಂಬ **ಪ್ರಕಾಶಸಂಹಿತಾನುಸಾರ,** ದೇಶತಃ ಕಾಲತಃ ಪರಮಾತ್ಮನ ಸಮಳೆಂತ ಶ್ರುತಿಗಳಲ್ಲಿ ಕೂಡ ಉಕ್ತವಾಗಿದ್ದಾಗ್ಯೂ, ಪಂಚಭೇದ ಘಟನ ಕಾಲದಲ್ಲಿ **"ಅನಂತ ಗುಣತೋ ನೀಚಾ"**-ಎಂಬ **ಪ್ರಕಾಶಸಂಹಿತಾನುಸಾರ,** ಜೀವಕೋಟಿಯಲ್ಲಿ ತರಬೇಕಾಗುತ್ತದೆ. ಹಾಗಾದರೆ ಲಕ್ಷ್ಮೀದೇವಿ ಜೀವಗಳೇನು ? ಎಂದರೆ, ನಿತ್ಯಮುಕ್ತಳು. ಸರ್ವಥಾ ಜೀವಳಲ್ಲ. ಇದಕ್ಕೆ ಪ್ರಮಾಣ:-

**ಉಕ್ತಂಚ ಸೌಪರ್ಣಶ್ರುತೌ :—**

**"ಸಮಾವೇತೌ ಪ್ರಕೃತಿಶ್ಚ ಪರಮಶ್ಚ ನಿತ್ಯೌ ಸರ್ವಗತೌ ನಿತ್ಯ ಮುಕ್ತಾವಿತಿ ।"**

ಈ ದೇವಿಯು ಜೀವೋತ್ತಮರಾದ ಬ್ರಹ್ಮವಾಯುಗಳಿಗೆ ಕೋಟಿ ಗುಣದಿಂದ ಅಧಿಕಗಳು ಎಂತದೆ.

**"ಏತೇಭ್ಯೋ ಶ್ರೀಸ್ತುಮುಕ್ತೇಭ್ಯೋ ಗುಣ್ಯೈಃ ಕೋಟಿಗುಣೋತ್ತರಾ"** ಎಂಬ **ಬೃಹದ್ಭಾಷ್ಯ** ಪ್ರಮಾಣ ಇರುತ್ತದೆ. ಆದರೂ

**"ಅಲ್ಪಶಕ್ತಿರಸರ್ವಜ್ಞಂ ಪಾರತಂತ್ರ್ಯಮಪೂರ್ಣತಾ ।**
**ಉಪಜೀವಕತ್ವ ಜೀವತ್ವಂ ।"**

-ಎಂತ **ಪೂರ್ಣಪ್ರಜ್ಞರು ಅನುವ್ಯಾಖ್ಯಾನ**ದಲ್ಲಿ ಜೀವಲಕ್ಷ ಹೇಳಿದ್ದಾರೆ. ಪೂರ್ಣಸರ್ವಜ್ಞತ್ವ, ಪೂರ್ಣಸ್ವಾತಂತ್ರ್ಯತ್ವಾದಿ ಪೂರ್ಣ ಗುಣ ಉಳ್ಳವನೆಂದು ಈಶ ಲಕ್ಷಣ ಹೇಳಿದ್ದಾರೆ. ಆದ ಪ್ರಯುಕ್ತ ಶ್ರಿ ಪರಮಾತ್ಮಾಪೇಕ್ಷೆಯಾ ಅನಂತ ಗುಣತಃ ಕಡಿಮೆ ಆದ್ದರಿಂದ ಜೀವ ಕೋಟಿಯಲ್ಲಿ ಪಂಚಭೇದ ಕಾಲಕ್ಕೆ ಶೇರಿಸಬೇಕೆಂದು ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನರೂಪವಾದ **ಅನುವ್ಯಾಖ್ಯಾನ**ದಲ್ಲಿ ಹೇಳಿದ ತಾತ್ಪರ್ಯವನ್ನೇ ತಿಳಿಸೋದಕ್ಕೋಸ್ಕರ ಮೂವರಿಂದಲಿ ಬ್ಯಾರೆ ಎಂದು ಪದ್ಯದ ಭಾವ ತೋರಿಸಿದ್ದಾರೆ. ಏತಾ

ದೃಶಳಾದ ಲಕ್ಷ್ಮೀದೇವಿಗೆ ಸಮರಿಲ್ಲ. ಶ್ರೀ ಪರಮಾತ್ಮಗೆ ಸಮಾಧಿಕರಿಲ್ಲೆಂಬೋ ಭಾವ ॥೨೯॥

### (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–

"ಪಂಚಭೇದಾಂಶ್ಚ ವಿಜ್ಞಾಯ" –ಇತಿ ಮುಕ್ತ್ಯಂತರಂಗ ಭೇಧಪಂಚಕಮಾಹ– "ಜೀವ" ಇತಿ ॥ "ಜೀವೇಶಯೋಃ ಭಿದಾ "ಇತ್ಯುಕ್ತೇಃ ॥ ಮೂವರು ಜಡ ಜೀವೇಶಾಃ । ಹರಿರವಧಿಃ । ಹರೇ ಆಧಿಕ್ಯಾತ್ ಅನ್ಯಸ್ಯ ಅವರತ್ವಾತ್ ಸಮಶೂನ್ಯಃ ॥ ಈರ್ವರು = ಇಬ್ಬರು ॥೨೯॥

### ಕನ್ನಡಾರ್ಥ :—

ಪಂಚಭೇದಗಳ ಜ್ಞಾನ, ವಿಷ್ಣುಸರ್ವೋತ್ತಮತ್ವದ ಉಪಾಸನೆ. ಜೀವೋತ್ತಮತ್ವದ ಚಿಂತನೆ, ಜಗತ್ಸತ್ಯತ್ವದಲ್ಲಿ ಧೃಡವಾದ ನಂಬಿಕೆ ಪಡೆದು, ತನ್ಮೂಲಕ ಭಗವಂತನನ್ನು ಆರಾಧಿಸಿದರೇ ಮೋಕ್ಷಪ್ರಾಪ್ತಿ –"ಎಂದು ಮುಕ್ತಿಯನ್ನು ಕುರಿತ ಭೇದ ಪಂಚಕಜ್ಞಾನವು. ಇದರ ಜ್ಞಾನವು ಅತ್ಯಗತ್ಯ ಮತ್ತು ಅಂತರಂಗ ಸಾಧನಕ್ಕೆ ಮೂಲ ಕಾರಣವು ಎಂದು ಪಂಚಭೇದಗಳನ್ನು ಹೇಳುತ್ತಾರೆ- "ಜೀವ ಜೀವರ" ಎಂಬ ಪದ್ಯದಿಂದ. (೧) ಜೀವ-ಜೀವರುಗಳಲ್ಲಿ ಭೇದ (೨) ಜಡ–ಪರಮಾತ್ಮರಲ್ಲಿ ಭೇದ (೩) ಜೀವ–ಪರಮಾತ್ಮರಲ್ಲಿ ಭೇದ (೪) ಜಡ-ಪರಮಾತ್ಮರಲ್ಲಿ ಭೇದ ಮತ್ತು (೫) ಜೀವ–ಜಡಗಳಲ್ಲಿ ಭೇದ. ಶ್ರೀಲಕ್ಷ್ಮಿಯು ಜಡಜೀವರಿಂದ ವಿಲಕ್ಷಣಗಳು ಪರಮಾತ್ಮನಿಂದ ಭಿನ್ನಳು. ಪರಮಾತ್ಮನ ತರುವಾಯ ಸರ್ವೋಚ್ಚಳು. ಇದರಿಂದ ಶ್ರೀಲಕ್ಷ್ಮೀಸಹಿತವಾಗಿ ಶ್ರೀಹರಿಯನ್ನು ಸಮಾಭ್ಯಧಿಕ ಶೂನ್ಯಳೆಂದು ಕೊಂಡಾಡಬೇಕು. ಪರಮಾತ್ಮನಿಗಿಂತ ಅಧಿಕರಾರೂ ಇಲ್ಲ. ಮಿಕ್ಕವರೆಲ್ಲಾ ಅವರರು. ಆದುದರಿಂದ ಅಸಮನು ॥೨೯॥

### (೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–

ಪೂರ್ವೋಕ್ತ ದೇವರ ರೂಪಗಳಲ್ಲೂ, ಅನಂತ ಜಡ ಜೀವಗಳಿಂದ

ಸಂಯುಕ್ತ ಪ್ರಪಂಚಕ್ಕೆ ಅತ್ಯಂತ ಪೃಥಕ್ ಎಂಬ-ಬೇರೆಯಾದುದರಿಂದ, ತ್ರಿವಿಧ ವಸ್ತುಗಳ ಭೇದ ತಿಳಿಯುವುದಕ್ಕೆ, ಪಂಚಭೇದಜ್ಞಾನ ಅತ್ಯಾವಶ್ಯಕ ವಾದ್ದರಿಂದ, ಅದನ್ನು ವಿವರಿಸಿ ತಿಳಿಸುತ್ತಾರೆ.

ಅನಂತ ಜೀವರೊಳಗೆ ಆಯಾಯ ದೇಹದಲ್ಲಾಗುವ ಸುಖ ದುಃಖಗಳು, ಆಯಾಯಾ, ಒಬ್ಬೊಬ್ಬ ಜೀವಗೆ ಪೃಥಕಾಗಿ ಅಭಿಮಾನದಿಂದ ಆಗುವುದ ರಿಂದ, ದೇಹೋಪಾಧಿ ತಪ್ಪಿದರೆ, ಜೀವ ಚೈತನ್ಯವೆಲ್ಲಾ ಒಂದೇ ಎಂದು ತಿಳಿಯಬಾರದು. ಹೇಗೆಂದರೆ, ಪ್ರಮಾಣ :—

(1) **"ಸುಖದುಃಖಂ ನಾನ್ಯಗತಂ ||"**

(2) **"ತಥೈಶಾಂತಾಃ ಪೃಥಕ್ಕಳಾಃ ||"**

**-ಎಂಬ ಭಾಗವತ ರೀತ್ಯಾ,**

**"ಓಂ ವೃಥಗುಪದೇಶಾತ್ ಓಂ"- ಎಂಬ ಬ್ರಹ್ಮಸೂತ್ರದಿಂದಲೂ** ವಾಲಾಗ್ರಶತ ಪರಿಮಾಣವುಳ್ಳ ಜೀವರು ಬೇರೆ ಬೇರೆ ಎಂದು ತಿಳಿಯುವುದು, ಜೀವ ಜೀವ ಭೇದ, ಕತ್ತಲೆ ಬೆಳಕು, ಬೆಂಕಿ ನೀರು, ಮುಂತಾದ ಜ್ಞಾನ ವಿಲ್ಲದ ಜಡವೆಲ್ಲಾ ಒಂದೇ ಎಂತಲೂ, ಕಪ್ಪೇಚಿಪ್ಪಿನಲ್ಲಿ ಬೆಳ್ಳಿ ಎಂಬ ಭ್ರಮೆ ಹುಟ್ಟುವ ಹಾಗೆ, ಈ ಜಡವಸ್ತು ಪರಮಾರ್ಥ ಸತ್ಯವಲ್ಲ, ಭೇದವ್ಯವ ಹಾರ ಮಿಥ್ಯೆ ಎಂದು ತಿಳಿಯದೆ, ಪ್ರತ್ಯೇಕ ಸ್ವಭಾವಗಳುಳ್ಳ ಜಡಗಳೆಲ್ಲಾ ಒಂದೇ ಆಗುವುದಿಲ್ಲ. ಬೇರೆ ಬೇರೆ ಇರುವುವು ಎಂದು ತಿಳಿಯುವುದೇ ಜಡ ಜಡಗಳ ಭೇದ. ಚಿದ್ರೂಪ ಜೀವ ಜಡದಲ್ಲಿ ಐಕ್ಯವಾಗುವುದಿಲ್ಲ. ಜ್ಞಾನ ವಿಲ್ಲದ ಜಡಗಳು ಬೇರೆ ಜ್ಞಾನಿಯಾದ ಚೇತನ ಬೇರೆ-ಎಂದು ತಿಳಿಯುವುದೇ ಜೀವ ಜಡಗಳ ಭೇದ ದೇವರು ಸ್ವತಂತ್ರ ಜ್ಞಾನ ಪೂರ್ಣರೂಪಿ. ಜೀವರು ಪರಾಧೀನ ಅಲ್ಪಜ್ಞಾನ ಸ್ವರೂಪರು. ಹೀಗೆ ವಿರುದ್ಧ ಸ್ವಭಾವವಾದ್ದರಿಂದ ಜೀವರು ಪರಮಾತ್ಮನಲ್ಲಿ ಐಕ್ಯರಾಗುವುದಿಲ್ಲ. ಮುಕ್ತಿಯಲ್ಲೂ ಬೇರೆ ಬೇರೆ ಇರುವರೆಂದು ತಿಳಿಯುವುದೇ ಜೀವ ಪರಮಾತ್ಮ ಭೇದ ತನ್ನ ಜ್ಞಾನಕ್ಕೆ

ಇತರರ ಸಹಾಯಾಪೇಕ್ಷೆ ಇಲ್ಲದೆ, ಅನಂತ ಜೀವ ಜಡಗಳನ್ನು ಸಾಕ್ಷಾತ್ತಾಗಿ ನೋಡುವ ಸರ್ವಜ್ಞ ದೇವರು, ಜ್ಞಾನರಹಿತ ಸ್ವರೂಪನಲ್ಲ. ಜಡ ಬೇರೆ. ಪರಮಾತ್ಮ ಬೇರೆ- ಎಂದು ತಿಳಿಯುವುದೇ ಜಡಪರಮಾತ್ಮ ಭೇದ. ಹೀಗೆ ಸಂಕ್ಷೇಪ ಪಂಚಭೇದ ತಿಳಿದು, ಶ್ರೀಲಕ್ಷ್ಮಿಯೇ ಜೀವ-ಜಡ-ಪರಮಾತ್ಮ ಎಂಬ ಈ ಮೂರು ವಸ್ತುಗಳಿಗೂ ಅತ್ಯಂತ ಪರಮಾರ್ಥ ವಿಲಕ್ಷಣಳು ಬೇರೆ ಸ್ವರೂಪಳು. ಜೀವರಂತೆ ಪರಾಧೀನ ಸ್ವರೂಪಳಾದಾಗ್ಯೂ, ದೇವರಂತೆ ಅನಾದಿಬಂಧರಹಿತಳಾದ್ದರಿಂದಲೂ, ದೇವರಂತೆ ಸ್ವತಂತ್ರಳಲ್ಲಿದ್ದರಿಂದಲೂ, ಜಡದಂತೆ ಜ್ಞಾನರಹಿತಳಲ್ಲದ್ದರಿಂದಲೂ, ಈಕೆ ಪ್ರತ್ಯೇಕಳೆಂದು ಸಹಾ ತಿಳಿದು, **ಸಾವಧಿಕಸಮಶೂನ್ಯ**ಳೆಂದು, ಅಂದರೆ, ದೇಶ ಕಾಲ ವ್ಯಾಪ್ತಿಯಲ್ಲಿ ಎಲ್ಲಿಯವರೆಗೆ ಎಂದು ಅವಧಿಯಲ್ಲಿದ್ದರಿಂದ, ಈ ಲಕ್ಷ್ಮೀನಾರಾಯಣರೆಂಬ ಇಬ್ಬರನ್ನು ದೇಶ ಕಾಲ ವ್ಯಾಪ್ತಿಯಲ್ಲಿ ನಿರವಧಿಕ ಸಾಮ್ಯವುಳ್ಳವರೆಂದು ಭಜಿಸು. ॥೨೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮೋಕ್ಷಾಪೇಕ್ಷಿಗಳಾದ ಸಾಧಕ ವರ್ಗದವರಿಗೆ ಪ್ರಪಂಚ ಸತ್ಯತ್ವ, ಪಂಚಭೇದ, ತಾರತಮ್ಯ ಇವುಗಳ ಜ್ಞಾನ ಅತ್ಯಗತ್ಯವೆಂದೂ, ಈಶ ಕೋಟಿ ಪ್ರವಿಷ್ಟರಾದ ಲಕ್ಷ್ಮೀ ಮತ್ತು ಶ್ರೀಮನ್ನಾರಾಯಣರ ವಿಚಾರಗಳನ್ನೂ ವಿವರಿಸುತ್ತಾರೆ,- **"ಜೀವ ಜೀವ"** ಎಂಬ ಪ್ರಸಕ್ತ ೨೯ ನೆಯ ಈ ಪದ್ಯದಿಂದ.

### (೧) ಪಂಚಭೇದ ವಿಷಯ :—

ನಮ್ಮ ಸುತ್ತಲಿರುವ ಈ ಚಿತ್ರವಿಚಿತ್ರವಾದ ಜಗತ್ತಿನಲ್ಲಿ ಗೋಚರಿಸುತ್ತಿರುವ ವಸ್ತುಗಳನ್ನು ಎರಡು ಪಂಗಡಗಳಾಗಿ ವಿಭಾಗಿಸಬಹುದು. (೧) ಜಡ ವರ್ಗ ಮತ್ತು (೨) ಜಡ ವರ್ಗ. ಪರಮಾಶ್ಚರ್ಯಭರಿತವಾದ ಈ

ಜಗತ್ತಿನ ಸೃಷ್ಟಿಗೆ ಮುಖ್ಯಕಾರಣನಾದ ಒಂದು ಮಹಾನ್ ಶಕ್ತಿ ಇರಲೇ ಬೇಕಲ್ಲವೇ ? ಆ ಜಗತ್ಸೃಷ್ಟಿಕರ್ತೃವನ್ನು ಭಗವಂತ, ದೇವರು ಎನ್ನುತ್ತೇವೆ, ಸರ್ವಕ್ಕೂ ಅವನು ನಿಯಾಮಕನಾದುದರಿಂದ ಅವನಿಗೆ **ಈಶ** ಎಂದು ಹೆಸರು. ಅಲ್ಲಿಗೆ (೧) ಈಶ, (೨) ಜೀವರು ಮತ್ತು (೩) ಜಡರು ಎಂದು ಮೂರು ಪ್ರಕಾರ ವಿಂಗಡಣೆ. ಮೇಲಿನ ತ್ರಿವರ್ಗದಲ್ಲಿ ಪರಸ್ಪರ ಹೋಲಿಸಬೇಕಾದರೆ. ಅಂದರೆ ಸಾಪೇಕ್ಷವಾಗಿ ವಿಚಾರಮಾಡಲು ಯಾವುದಾದರೂ ಎರಡು ವಸ್ತುಗಳನ್ನು ಪರಿಶೀಲಿಸಬೇಕು. ಆಗ ಐದು ಭೇದಗಳು ಸಿದ್ಧಿಸುವುವು. ಈ ವಿಂಗಡಣೆ ಗಣಿತಶಾಸ್ತ್ರದ ದೃಷ್ಟಿಯಿಂದಲೂ ಸಮನ್ವಯವಾಗುವುದು. ಇದಕ್ಕೆ **ಪಂಚಭೇದ** ಎಂದು ಹೆಸರು.

### (೧) ಈಶ ಜೀವರ ಭೇದ :–

ಸರ್ವನಿಯಾಮಕನಾದ ಶ್ರೀ ಪರಮಾತ್ಮನು ಸರ್ವತಂತ್ರಸ್ವತಂತ್ರ. ಆದರೆ ಜೀವರು ಅಸ್ವಂತತತ್ರರು, ಈಶನು ಸರ್ವಕರ್ತೃ. ಜೀವರು ಪರಾಧೀನ ಕರ್ತೃತ್ವವುಳ್ಳವರು. ಭಗವಂತನು ಸರ್ವಜ್ಞ. ಜೀವರಾದರೋ ಅಲ್ಪಜ್ಞರು. ಶ್ರೀ ಪರಮಾತ್ಮನು ಸರ್ವಶಕ್ತ. ಜೀವರು ಅಲ್ಪಶಕ್ತರು. ಈಶನು ನಿಯಾಮಕ. ಜೀವರು ಅವನಿಂದ ನಿಯಮ್ಯರು. ದೇವರು ಪ್ರೇರಕನು. ಜೀವರು ಅವನಿಂದ ಪ್ರೇರ್ಯರು. ಜೀವರ ಸ್ವರೂಪಗತವಾದ ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಗಳು ಭಗವದಧೀನ. ಶ್ರೀಪರಮಾತ್ಮನು ಸರ್ವಜೀವರ ಬಿಂಬನು. ಬಿಂಬಾಧೀನರಾದ ಸಕಲ ಜೀವರೂ ಪ್ರತಿಬಿಂಬಭೂತರು. ಈ ರೀತಿಯಲ್ಲಿ ಸರ್ವಪ್ರಕಾರಗಳಲ್ಲಿಯೂ ಈಶನಿಗೂ ಜೀವನಿಗೂ ಭೇದ. ಇದು ಪಂಚಭೇದಗಳಲ್ಲಿ ಮೊದಲನೆಯದು. ಅದೇ **ಜೀವೇಶ ಭೇದ.**

### (೨) ಈಶ ಜಡ ಭೇದ :–

ಪ್ರಕೃತಿ, ಕಾಲ, ದೇಶ ಮುಂತಾದುವೆಲ್ಲಾ ಜಡವಸ್ತುಗಳು. ಅವುಗಳಿಗೆ ಸ್ವತಃ ಏವ ಪ್ರವೃತ್ತಿ ಶಕ್ತಿ ಇಲ್ಲ. ಜಡಗಳಿಗೆ ಜ್ಞಾನ ಮತ್ತು

ಇಚ್ಛಾ ಶಕ್ತಿಗಳಿಲ್ಲ. ಶ್ರೀಶನಾದ ಈಶನು ಸಮಸ್ತ ಜಡವಸ್ತುಗಳ ಕಣ ಕಣಗಳಲ್ಲಿ ವ್ಯಾಪ್ತನಾಗಿರುವುದರಿಂದಲೇ, ಆ ಜಡವಸ್ತುಗಳ ಇರುವಿಕೆ ಹಾಗೂ ಅವುಗಳ ಸಹಜ ಗುಣಗಳ ಅಭಿವ್ಯಕ್ತಿಗೆ ಕಾರಣ. ಇಂತು ಸಮಸ್ತ ಶುದ್ಧ ಜಡವಸ್ತುಗಳೂ, ಸ್ಥಾವರಗಳಾದ ಗಿಡ, ವೃಕ್ಷ, ಬಳ್ಳಿ, ಗುಲ್ಮ, ಮುಂತಾದವೂ ಈಶ್ವರಾಧೀನವಾಗಿವೆ. ಹೀಗೆ **ಈಶನಿಗೂ ಮತ್ತು ಜಡಗಳಿಗೂ** ಭೇದವಿದೆ. ಅಂದರೆ ಶ್ರೀ ಪರಮಾತ್ಮನು ಸಕಲ ಜಡಗಳಿಂದ ಅತ್ಯಂತ ವಿಲಕ್ಷಣನಾಗಿದ್ದಾನೆ.

## (೩) ಜೀವ ಜೀವ ಭೇದ

ಈ ಜಗತ್ತಿನಲ್ಲಿ ಒಬ್ಬನಂತೆ ಇನ್ನೊಬ್ಬನಿಲ್ಲ. ಆಕಾರ, ಗಾತ್ರ, ವರ್ಣ, ರೂಪ ಇತ್ಯಾದಿ ಬಾಹ್ಯ ಲಕ್ಷಣಗಳಲ್ಲಿ ಪರಸ್ಪರ ವ್ಯತ್ಯಾಸವಿರುವುದನ್ನು ನಾವು ಕಾಣುತ್ತೇವೆ. ಇವು ಜಡರೂಪದಲ್ಲಿರುವ ಸ್ಥೂಲದೇಹಗತ ಲಕ್ಷಣಗಳಲ್ಲಿ ಕಂಡುಬರುವ ವ್ಯತ್ಯಾಸ ವಿಶೇಷಗಳು. ಅಂತೆಯೇ, ಮಾನವನ ಅಂತಃಲಕ್ಷಣಗಳಲ್ಲಿಯೂ ವಿಪರೀತ ವ್ಯತ್ಯಾಸಗಳಿವೆ. ಮನಸ್ಸು, ಬುದ್ಧಿಶಕ್ತಿ, ವಿವೇಚನಾಶಕ್ತಿ, ವಿಷಯಗ್ರಹಣ ಸಾಮರ್ಥ್ಯ, ಚಿತ್ತ ಸಾಮರ್ಥ್ಯ ಇತ್ಯಾದಿ ಅಂತಃಸ್ಥಿತ ಪ್ರವೃತ್ತಿ ವಿಶೇಷಗಳಲ್ಲಿ ಪರಸ್ಪರ ವೈಲಕ್ಷಣ್ಯವಿರುವುದು, ನಮ್ಮ ದಿನಚರಿಯ ಜೀವನದಲ್ಲಿ ಅನುಭವಸಿದ್ಧವಾದ ವಿಷಯ. ಅಂತೆಯೇ ಜೀವರ ಸ್ವರೂಪಗತ ಲಕ್ಷಣಗಳಾದ ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಗಳಲ್ಲಿ ಒಬ್ಬರಂತೆ ಮತ್ತೊಬ್ಬರದಿಲ್ಲ. ಈ ಸ್ಥಿತಿಕಾಲದಲ್ಲಿ ಸ್ವರೂಪಗತ ವ್ಯಾಪಾರಗಳು ಪ್ರತ್ಯಕ್ಷವಾಗಿ ಅನುಭವ ವಿಷಯವಲ್ಲವಾದರೂ, ಅವುಗಳ ಮೂಲದಿಂದ ಹೊರಟ, ವ್ಯಾಪಾರ ವಿಶೇಷಗಳು ಸಾಧನ ಶರೀರವಾದ ಈ ಶ್ಥೂಲ ದೇಹದ ದ್ವಾರಾ, ದೇಹಾದ್ಯಂತ ಪ್ರಕಾಶತೋವ್ಯಾಪ್ತನಾದ ಜೀವನಿಗೆ ಅನುಭವವಕ್ಕೆ ಬರುತ್ತಿರುವುದು ಪರಮ ಸ್ವಾಭಾವಿಕವು. ಇಂತು, **ಜೀವ-ಜೀವರಲ್ಲಿ ಪರಸ್ಪರ ಭೇದ**ವನ್ನು ಕಾಣುತ್ತೇವೆ.

(iii) **ಜಡ ಜಡ ಭೇದ:-**

ನಮ್ಮ ಸುತ್ತಲಿನ ಚಿತ್ರ ವಿಚಿತ್ರವಾದ ಈ ಜಗತ್ತಿನಲ್ಲಿ ಕಲ್ಲು, ಇಟ್ಟಿಗೆ, ಮುಂತಾದ ಅನೇಕ ಜಡಪದಾರ್ಥಗಳನ್ನು ನೋಡುತ್ತಲೇ ಇರುತ್ತೇವೆ. ಅವುಗಳ ಬಾಹ್ಯ ಹಾಗೂ ಅಂತರಿಕ ಲಕ್ಷಣಗಳನ್ನು ಗಮನಿಸಿದಾಗ, ಪರಸ್ಪರ ಭೇದವಿರುವುದು ಗೊತ್ತಾಗುವುದು. ಶಿಲೆಯಲ್ಲಿರುವ ವೈವಿಧ್ಯಗಳೆಷ್ಟು ? ಅವುಗಳ ಬಣ್ಣ, ಸಾಂದ್ರತೆ, ರಚನಾಕ್ರಮ ಇತ್ಯಾದಿಗಳಲ್ಲಿ ತುಂಬಾ ವ್ಯತ್ಯಾಸಗಳಿವೆ. ಅಂತೆಯೇ ಪಂಚಭೂತಗಳಾದ ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಗಶಳಲ್ಲಿ ಪರಸ್ಪರ ಭೇದವಿದೆ. ಜೀವನಾಧಾರವಾದ ಭೂಮಿ, ಅದರ ಮಣ್ಣಿನ ಕಣಗಳು, ಹರಿಯುತ್ತಿರುವ ನೀರು ಬೀಸುತ್ತಿರುವ ಗಾಳಿ, ಉರಿಯುತ್ತಿರುವ ಬೆಂಕಿಯಿಂದ ಉತ್ಪನ್ನವಾಗುವ ಪ್ರಕಾಶದ ಪ್ರಖರತೆ ಮತ್ತು ಉಷ್ಣಪ್ರಮಾಣ, ವಿಶಾಲವಾಗಿ ಸರ್ವತ್ರ ಅವಕಾಶಪ್ರದವಾದ ಆಕಾಶ ಈ ಭೂತ ಪಂಚಕಗಳಲ್ಲಿ ವೈಲಕ್ಷಣ್ಯವಿದೆ. ಹಾಗೆಯೇ ಅಕ್ಷರಗಳು, ಶಬ್ದ ಪ್ರಪಂಚ ರೂಪವಾದ ವೇದರಾಶಿಗಳು ಪ್ರವಾಹತೋನಿತ್ಯವಾದ ಕಾಲ, ವ್ಯಾಪ್ತವಾಗಿರುವ ದೇಶಾದಿಗಳು ಇಂತಹ ಜಡಗಳಲ್ಲಿ ಪರಸ್ಪರ ವ್ಯತ್ಯಾಸವಿದೆ. ಅಕ್ಷರಗಳಲ್ಲಿ ಒಂದು ವರ್ಣದ ಆಕಾರ, ಅವುಗಳ ಉಚ್ಚಾರಣೆ, ಅರ್ಥವಿನ್ಯಾಸಗಳಲ್ಲಿ ವ್ಯತ್ಯಾಸವಿದೆ. ಅಕ್ಷರೇಡ್ಯನಾದ ಶ್ರೀಪರಮಾತ್ಮನು ವರ್ಣಗಳಲ್ಲಿ ವರ್ಣವಾಚ್ಯನಾಗಿ ವ್ಯಾಪ್ತನಾಗಿದ್ದು, ಅವುಗಳಿಗೆ ಅಭಿವ್ಯಂಜಕ ಶಕ್ತಿಪ್ರದನಾಗಿರುವುದರಿಂದಲೇ, ಆಯಾಯ ವರ್ಣಗಳ ಉಚ್ಚಾರಣೆ, ವರ್ಣಗಳ ಸಂಯೋಗದಿಂದ ಪದಗಳ ಅರ್ಥ, ಪದಗಳ ಜೋಡಣೆಯಿಂದ ವಾಕ್ಯಸಮೂಹಗಳ ಪತ್ತಿ-ಉಂಟಾಗಬೇಕಾದರೆ. ಇಂತು. **ಜಡ ಜಡ ವಸ್ತುಗಳಲ್ಲಿ ಪರಸ್ಪರ ಅರ್ಥಾನು ಭೇದವಿದೆ.** ಹೀಗೆ **ಪಂಚಭೇದ**ಗಳಿಂದ ಯುಕ್ತವಾಗಿರುವುದರಿಂದಲೇ ಈ ಜಗತ್ತಿಗೆ **"ಪ್ರಪಂಚ"**-ಎಂದು ಹೆಸರು. ಅಂದರೆ, **ಪಂಚ** = ಪಂಚ ಭೇದಗಳಿಂದ **ಪ್ರ** = ಪ್ರಕೃಷ್ಟವಾಗಿರುವುದು-ಎಂದರ್ಥ.

ಮೇಲೆ ವಿವರಿಸಿರುವ **ಪಂಚಭೇದ**ವು ಅನಾದಿ ಹಾಗೂ ನಿತ್ಯ, ಈ

ಭೇದಗಳು ಸಹಜ ರೀತಿಯಲ್ಲಿಯೇ ಇವೆ. ಅವು ಭ್ರಮಾತ್ಮಕವಲ್ಲ. ಪರ ಬ್ರಹ್ಮನೊಬ್ಬನೇ ಸತ್ಯ ಮತ್ತು ಪ್ರಪಂಚ ಮಿಥ್ಯ–ಎಂಬ ಮಿಥ್ಯಾವಾದಿಗಳ ಮಾತು ಶಾಸ್ತ್ರಕ್ಕೆ ಪರಮ ವಿರುದ್ಧ ಹಾಗೂ ಸತ್ಯಕ್ಕೆ ಮಹಾಪಚಾರ. ಇದು ಕೇವಲ ವ್ಯಾವಹಾರಿಕ ಸತ್ಯವೆಂದರೆ, ಪಾರಮಾರ್ಥಿಕ ಸತ್ಯವಾದ ಆ ಪರ ಬ್ರಹ್ಮನನ್ನು ತಿಳಿಯುವ ಮಿಥ್ಯಾವಾದಿಗಳ ವಚನಗಳೂ ಕೇವಲ ಭ್ರಮಾತ್ಮಕ ಅಂದರೆ, ಮಿಥ್ಯವಾಗಿರುವುವು. ಅನುಭವಸಿದ್ಧವಾದ ವಿಷಯವದ್ನು ಮಿಥ್ಯೆ ಎಂದು ಯಾವ ಪ್ರಾಜ್ಞರೂ ಹೇಳುವಂತಿಲ್ಲ. ಸತ್ಯಭೂತವಾದ ಈ ಪ್ರಪಂಚದಲ್ಲಿ ನಡೆಯುತ್ತಿರುವ ಸಮಸ್ತ ಜಗದ್ವ್ಯಾಪಾರಗಳೆಲ್ಲವೂ ಮಿಥ್ಯ ವಾಗಿದ್ದಲ್ಲಿ, ಅವು ನಮ್ಮ ಅನುಭವಕ್ಕೆ ಸಾಕ್ಷಿಯಾಗುವುದೆಂತು ? ಇಂತು, ಜಗತ್ಸತ್ಯತ್ವ, ಪಂಚಬೇಧ, ತಾರತಮ್ಯಾದಿ ತತ್ವಗಳು ಅನಾದಿನಿತ್ಯ ವಾದುವು. ತತ್ವಜ್ಞಾನಮಂದಿರಕ್ಕೆ ಇವೇ ಅಡಿಗಲ್ಲು. ಈ ಪ್ರಮೇಯ ಗಳನ್ನು ಒಪ್ಪದಿದ್ದರೆ, ತತ್ವಜ್ಞಾನದ ಪ್ರಗತಿಯೇ ಸಾಧ್ಯವಿಲ್ಲ. ಯಾರ ದರ್ಶನವೂ ಸಾಫಲ್ಯವನ್ನು ಹೊಂದಲಾರದು. ಪ್ರಾರಂಭದಲ್ಲಿಯೇ ಅಸಂಭಾ ವಿತವೆನಿಸುವುವು.

**ಪಂಚಭೇದಗಳಿಗೆ ಪ್ರಮಾಣ ವಾಕ್ಯಗಳು :-**

**(೧) "ದೈತ್ಯರಕ್ಷ ಪಿಶಾಚಕಾಃ । ಮರ್ತ್ಯಾಧಮಾಶ್ಚತು ಥೈವ ತನೋ ಯೋಗ್ಯಾಃ ಪ್ರಕೀರ್ತಿತಾಃ ॥"**

**–ತತ್ವಸಂಖ್ಯಾನ ವಾಕ್ಯ ಪ್ರಮಾಣ**

**(೨) ನಿತ್ಯಾಸ್ತು ವೇದವರ್ಣಾಶ್ಚ ಪರಮಾಕಾಶ ಏವಚೇತಿ "**

**–ಸತ್ತತ್ವರತ್ನ ಮಾಲೋಕ್ತಿ.**

**(೩) "ಸ್ಮೃತ್ಯಾ ದ್ಯಾ ಅರ್ಥತೋ ನಿತ್ಯಾ ವ್ಯತ್ಯಾಸಾತ್ತೇ ವಿನಾ ಶನಃ ॥"**

**–ಶಾಂಡಿಲ್ಯಸೂತ್ರ.**

(೨) ಇಂತು, ಈಶ-ಜೀವ-ಜಡಗಳಲ್ಲಿ ಪರಸ್ಪರ ಭಿನ್ನಗಳಾದ ಪಂಚಭೇದಗಳನ್ನು ವಿವರಿಸಿ, ಮುಂದೆ **ಶ್ರೀ ಲಕ್ಷ್ಮೀದೇವಿಯರ** ಪ್ರಕರಣವನ್ನು ತಿಳಿಸುತ್ತಾರೆ.

ಶ್ರೀ ಲಕ್ಷ್ಮೀದೇವಿಯು ಈಶಕೋಟಿ ಪ್ರವಿಷ್ಟಳು, ಶ್ರೀ ಪರಮಾತ್ಮ ಮತ್ತು ಶ್ರೀ ಲಕ್ಷ್ಮೀ ಇವರಿಬ್ಬರೇ ಈಶಕೋಟಿಗೆ ಸೇರಿದವರು. ಬ್ರಹ್ಮಾದಿ ತೃಣಾಂತ ಸಮಸ್ತ ತ್ರಿವಿಧ ಜೀವರಾಶಿಗಳಿಗೆ ದೇಹನಾಶವುಂಟು. ಆ ಕಾರಣದಿಂದ ಜೀವವರ್ಗವು **"ಕ್ಷರ"** ರೆನಿಸುತ್ತಾರೆ. ಆದರೆ ಶ್ರೀ ಲಕ್ಷ್ಮಿ ದೇವಿಗೆ ಯಾವ ವಿಧವಾದ ದೇಹನಾಶವಿಲ್ಲದ್ದರಿಂದ, **"ಅಕ್ಷರ"** ನಾಮಕಳಾಗಿದ್ದಾಳೆ. ಜೀವರು ಲಿಂಗದೇಹಬದ್ಧರು, ಆದರೆ ಮೂಲ ಪ್ರಕೃತಿಗೆ ಅಭಿಮಾನಿಗಳಾದ ಶ್ರೀ ರಮಾ ನಿತ್ಯ ಮುಕ್ತಳು ಹಾಗೂ ನಿರ್ವಿಕಾರಳು. ಈ ದೃಷ್ಟಿಯಿಂದ ಈಶಕೋಟಿ ಪ್ರವಿಷ್ಟಳಾಗಿ, ಬ್ರಹ್ಮಾದಿಗಳಿಗಿಂತ ಕೋಟಿ ಗುಣಗಳಿಂದ ಉತ್ತಮಳೆಾಗಿದ್ದಾಳೆ. ಇದರಿಂದ ಕ್ಷರವರ್ಗಕ್ಕೆ ಸೇರಿದ ಜೀವ ರಾಶಿಗಳಿಂದ ಭಿನ್ನಳು. ಅನಂತಾನಂತ ಕೋಟಿಗುಣಗಳಿಂದ ಶ್ರೀ ಪರಮಾತ್ಮನು ಶ್ರೀ ಲಕ್ಷ್ಮೀದೇವಿಯರಿಗಿಂತ ಉತ್ತಮನು. ದೇಶತಃ ಮತ್ತು ಕಾಲತಃ ಶ್ರೀ ಪರಮಾತ್ಮನಿಗೆ ಸಮಳು. ಆದರೆ ಗುಣತಃ ಅತ್ಯಂತ ಅಸಮಳು. ಇದರಿಂದ ಶ್ರೀ ಪರಮಾತ್ಮನಿಗೆ **"ಸಮಾಸಮಳು"** ಎಂದು ಕರೆಯಿಸುತ್ತಾಳೆ. ನಿರ್ದೋಷಿಯಾದ, ನಿರ್ವಿಕಾರಳಾದ ಲಕ್ಷ್ಮೀಯಲ್ಲಿರುವ ಒಂದೇ ಒಂದು ನ್ಯೂನತೆ ಏನೆಂದರೆ **ಭಗವದಧೀನತ್ವ**, ಆಕೆಯು ಸದಾ ಸರ್ವಕಾಲವೂ ಶ್ರೀ ಪರಮಾತ್ಮನ ಆಧೀನಳು, ಶ್ರೀ ರಮಾದೇವಿಯರಿಗೂ ಮುಖ್ಯನಿಯಾಮಕನು ಪರಾತ್ಪರನಾದ ಸರ್ವೋತ್ತಮನಾದ ಆ ಪರಮಾತ್ಮನೇ, ಈ ದೃಷ್ಟಿಯಿಂದ ಈಶನಿಗಿಂತ ಭಿನ್ನಳು. ಜ್ಞಾನಕ್ರಿಯಾ ರಹಿತವಾದ ಜಡವಸ್ತುಗಳಿಗಿಂತ ವಿಲಕ್ಷಣಳು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂತು ಈಶ, ಜೀವ, ಮತ್ತು ಜಡ ಈ ಮೂರರಿಂದ ಶ್ರೀ ಲಕ್ಷ್ಮೀದೇವಿಯು ಭಿನ್ನಳು ಎಂದು ಉಪಾಸನೆ ಮಾಡಬೇಕೆಂದು **"ಲಕ್ಷ್ಮೀ ಈ ಮೂವರಿಂದಲಿ ಪದುಮಜಾಂಡದಿ ತಾ ವಿಲಕ್ಷಣಗಳೆನಿಸುತಿಪ್ಪಳು-"** -ಎಂದು ವಿವರಿಸಿದ್ದಾರೆ ದಾಸರಾಯರು.

ಸಾವಧಿಕ ಸಮಶೂನ್ಯಳು. ಜಡ ಜೀವರಿಂದ ವಿಲಕ್ಷಣಳು. ನಿತ್ಯ ಮುಕ್ತಳು. ಪರಮಾತ್ಮನ ಅಧೀನಳಾಗಿ ದೇಶ ಕಾಲ ಸಮಳು. ಅನಂತ ಗುಣ ದಿಂದ ಅವರಳು. ಅತಏವ ಜೀವರಿಂದ ಭಿನ್ನಳಾದ ಕಾರಣದಿಂದ ಈಶ ಕೋಟಿ ಪ್ರವಿಷ್ಟಳೆಂದು ತಿಳಿಯಬೇಕು. ॥೨೯॥

## ಪದ್ಯ (೩೦)

**ಮೂಲ :—**

**ಅದಿತೇಯರು ತಿಳಿಯದಿಹ ಗುಣ ।**
**ವೇದಮಾನಿಗಳೆಂದೆನಿಪ ವಾ ।**
**ಣ್ಯಾದಿಗಳು ಬಲ್ಲರವರಿಯದ ಗುಣಗಣಂಗಳನು ॥**
**ವೇದ ಬಲ್ಲನು ಬೊಮ್ಮನರಿಯದ ।**
**ಗಾಢಗುಣಗಳ ಲಕುಮಿ ಬಲ್ಲಳು ।**
**ಶ್ರೀಧರೊಬ್ಬನುಪಾಸ್ಯ ಸದ್ಗುಣಪೂರ್ಣ ಹರಿಯೆಂದು ॥ ॥೩೦॥**

**ಅವತರಣಿಕೆ :—**

ಗುಣೋಪಾಸನಾತಾರತಮ್ಯ ಕ್ರಮವನ್ನು ತಿಳಿಸುತ್ತಾರೆ, ಪ್ರಸಕ್ತ ಸಂಧಿಗತ ೩೦ನೆಯ ಈ ಪದ್ಯದಿಂದ.

ತಾರತಮ್ಯ ಶ್ರೇಣಿಯಲ್ಲಿ ಅವರರಾದ ದೇವತೆಗಳು ತಿಳಿಯದೇ ಇರುವ ಶ್ರೀಪರಮಾತ್ಮನ ಮಂಗಳ ಗುಣಗಳನ್ನು ಅವರಿಗಿಂತ ಸ್ವೋತ್ತಮ ರಾದ ದೇವತೆಗಳು ತಿಳಿದಿರುತ್ತಾರೆ. ರುದ್ರಾದಿ ದೇವತಾವರ್ಗ ಅರಿಯ ದಿರುವ ಶ್ರೀಹರಿಯ ಗುಣಾವಳಿಗಳನ್ನು, ವೇದಾಭಿಮಾನಿಗಳಾದ ಸರ ಸ್ವತಿ ಮತ್ತು ಭಾರತಿಯರು, ಅಂತೆಯೇ ಋಜುಪತ್ನಿಯರು ತಾರತಮ್ಯತ್ವೇನ ತಿಳಿದಿರುತ್ತಾರೆ. ಅಂತಹ ಸರಸ್ವತ್ಯಾದಿಗಳು ಅರಿಯದಂಥ ಗುಣ ಗಳನ್ನು ಋಜುಕುಲಪುಂಗವರಾದ ಚತುರ್ಮುಖ ಬ್ರಹ್ಮದೇವರು, ವಾಯು ದೇವರು, ಅಂತೆಯೇ ತಾರತಮ್ಯಕ್ರಮಾನುಸಾರ ಉಳಿದ ಋಜುಗಳು

ಬಲ್ಲರು, ಅಂತಹ ಬ್ರಹ್ಮಾದಿಗಳು ತಿಳಿಯದಿರುವ ಭಗವಂತನ ಅಪರಿಮಿತ ಗುಣಗಣಗಳನ್ನು ಈಶಕೋಟಿ ಪ್ರವಿಷ್ಟಳೂ, ಶ್ರೀಹರಿಯ ನಿತ್ಯಾವಿನಿಯೋಗಿಯೂ ಆದ ಶ್ರೀಲಕ್ಷ್ಮೀದೇವಿ ತಿಳಿದಿದ್ದಾಳೆ. ಅಂದರೆ, ಆಯಾಯ ದೇವತೆಗಳು ತಮ್ಮ ತಮ್ಮ ಯೋಗ್ಯತಾನುಸಾರ ಶ್ರೀಪರಮಾತ್ಮನ ಅಗಾಧ ಮಹಿಮೆಗಳನ್ನು ತಿಳಿದಿರುತ್ತಾರೆಯೇ ಹೊರತು, ಆತನ ಸರ್ವಗುಣಗಳನ್ನು ಸಾಕಲ್ಯೇನ ಯಾರೂ ಅರಿಯರು. ಶ್ರೀಪರಮಾತ್ಮನ ಗುಣರಾಶಿಗಳು ಅಪರಿಚ್ಛಿನ್ನ, ನಿರವದ್ಯ. ನಿರವಧಿಕ, ಆದ್ಯಂತರಹಿತ ಹಾಗೂ ಪರಿಪೂರ್ಣಗಳಾಗಿವೆ. ಶ್ರೀವತ್ಸಾಂಕಿತನಾದ ಶ್ರೀಪರಮಾತ್ಮನೊಬ್ಬನೇ ರಮಾಬ್ರಹ್ಮಾದಿ ಸಮಸ್ತ ದೇವತಾವರ್ಗದಿಂದ ಸರ್ವೋತ್ತಮನೆಂದು ಗೇಗೀಯಮಾನನಾಗಿದ್ದಾನೆ. ತದನ್ಯರಾದ ರಮಾಬ್ರಹ್ಮಾದಿಗಳು ತಾರತಮ್ಯಾನುಸಾರ ಉಪಾಸನಾಯೋಗ್ಯರೇ ಹೊರತು, ಸರ್ವೋತ್ತಮತ್ವೇನ ಅಲ್ಲ ಎಂದು ಪ್ರಸಕ್ತ ಪದ್ಯದ ಹೃದ್ಗತಭಾವವು. ||೩೦||

**ಪ್ರತಿಪದಾರ್ಥ -:**

**ಆದಿತೇಯರು** = ಅದಿತಿದೇವಿಯ ಪುತ್ರರಾದ ರುದ್ರ ದೇವರು ಪ್ರಾರಂಭಿಸಿಕೊಂಡು, ಯಾವತ್ತೂ ದೇವತೆಗಳು **ತಿಳಿಯದಿಹ** = ಅರಿಯದಿರುವ. **ಗುಣ** = ಶ್ರೀಪರಮಾತ್ಮನ ಅಪಾರಗುಣರಾಶಿಗಳನ್ನು, **ವೇದಾಭಿಮಾನಿಗಳೆಂದೆನಿಪ** = ವೇದಗಳಿಗೆ ಅಭಿಮಾನಿಗಳು ಎಂದು ಕರೆಯಿಸುವ **ವಾಣ್ಯಾದಿಗಳು** = ಶ್ರೀಸರಸ್ವತೀ ಮತ್ತು ಶ್ರೀಭಾರತಿದೇವಿಯರು. ಅಂತೆಯೇ ಉಳಿದ ಋಜುಗಳ ಪತ್ನಿಯರು **ಬಲ್ಲರು** = ತಾರತಮ್ಯಾನುಸಾರ ತಿಳಿಯುವವರಾಗಿತ್ತಾರೆ. **ಅವರು ಅರಿಯದ** = ಆ ಸರಸ್ವತ್ಯಾದಿಗಳು ತಿಳಿಯದೇ ಇರತಕ್ಕ, **ಗುಣಗಣಂಗಳನು** = ಶ್ರೀಪರಮಾತ್ಮನ ಅಪರಿಚ್ಛಿನ್ನ ಅನಾದ್ಯಂತರಹಿತ ಅನಂತ ಕಲ್ಯಾಣ ಗುಣಸಮೂಹಗಳನ್ನು, **ವೇಧ** = ಶ್ರೀಚತುರ್ಮುಖ ಬ್ರಹ್ಮದೇವರು, ವಾಯುದೇವರು. ಅಂತೆಯೇ ಉಳಿದ ಋಜುಗಳು **ಬಲ್ಲನು** = ತಿಳಿದಿದ್ದಾನೆ, **ಬೊಮ್ಮನರಿಯದ** = ಆ ಬ್ರಹ್ಮದೇವರು ತಿಳಿಯದಂಥ, **ಅಗಾಧಗುಣಗಳ** = ಅಪರಿಮಿತ, ನಿರವಧಿಕವಾದ ಗುಣಸ್ತೋಮಗಳನ್ನು **ಲಕುಮಿ ಬಲ್ಲಳು** = ಶ್ರೀರಮಾದೇವಿಯರು ತಿಳಿದಿದ್ದಾರೆ.

**ಶ್ರೀಧರ**=ಶ್ರೀಲಕ್ಷ್ಮೀದೇವಿಯರನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿರುವ ಶ್ರೀವತ್ಸಾಂಕಿತನಾದ ಶ್ರೀಪರಮಾತ್ಮನು **ಒಬ್ಬನು**=ಅವನೊಬ್ಬನೇ (ಏಕೈಕನಾಗಿ) **ಸದ್ಗುಣ**=ಅಸ್ವಾತಂತ್ರ್ಯ. ಅಪೂರ್ಣತಾ ಇತ್ಯಾದಿ ಯಾವ ದೋಷಗಳೂ ಇಲ್ಲದ, ಅಪ್ರಾಕೃತ ಶುಭಗುಣಗಣ ಸಾಗರನಾಗಿದ್ದಾನೆಂದೂ, **ಪೂರ್ಣ**=ಅನಾದ್ಯನಂತನಾದ ತನ್ನ ಸಮಸ್ತ ಗುಣಗಳಲ್ಲಿಯೂ ಸರ್ವಥಾ ಸದಾ ಪರಿಪೂರ್ಣನಾಗಿದ್ದಾನೆಂದೂ, **ಉಪಾಸ್ಯ**=ರಮಾಬ್ರಹ್ಮಾದಿ ಸಮಸ್ತ ದೇವತಾಸ್ತೋಮದಿಂದ ಉಪಾಸನೆಗೆ ಮುಖ್ಯ ವಿಷಯನಾಗಿದ್ದಾನೆಂದೂ, **ಹರಿ ಎಂದು**=ಸಮಾಭ್ಯಧಿಕ ಶೂನ್ಯನಾದ ಸರ್ವದೋಷರಹಿತನಾದ, ಅನಂತಕಲ್ಯಾಣಗುಣಗಣ ರತ್ನಾಕರನಾದ ಶ್ರೀಹರಿಯೊಬ್ಬನೇ ಎಂದೂ, ಅವನ ಅನಂತ ಗುಣರಾಶಿಗಳನ್ನು ಸಾಕಲ್ಯೇನ ಯಾರೂ ಅರಿಯರೆಂದೂ ಶ್ರೀಲಕ್ಷ್ಮೀದೇವಿಯರು ಬಲ್ಲರು. ॥೩೦॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಗುಣೋಪಾಸನಾ ತಾರತಮ್ಯವನ್ನು ತಿಳಿಯಬೇಕೆಂದು ಹೇಳುತಾರೆ. ಆದಿತೇಯರು–ರುದ್ರದೇವರು ಮೊದಲು ಮಾಡಿಕೊಂಡು ಯಾವತ್ತೂ ದೇವತೆಗಳು, ತಿಳಿಯದಿಹ–ಅರಿಯದೇ ಇರತಕ್ಕ, ಗುಣ–ಶ್ರೀ ಪರಮಾತ್ಮನ ಗುಣಗಳನ್ನು, ವೇದಾಭಿಮಾನಿಗಳೆಂದೆನಿಪ – ವೇದಾಭಿಮಾನಿಗಳಿಂದು ಕರಿಸತಕ್ಕ, ಪಾಣ್ಯಾದಿಗಳು–ಸರಸ್ವತಿ ಭಾರತೀ ದೇವೇರು, ಹಾಂಗೆ ಋಜುಪತ್ನೇರು ತಾರತಮ್ಯದಿಂದ ಕ್ರಮವಾಗಿ, ಬಲ್ಲರು–ತಿಳಯೋವರಾಗಿದ್ದಾರೆ. ಅವರರಿಯದ–ಈ ಸರಸ್ವತ್ಯಾದಿಗಳು ತಿಳಿಯದಂಥಾ, ಗುಣಗಣಂಗಳನು–ಗುಣ ಸಮೂಹಗಳನ್ನು, ವೇಧ ಬಲ್ಲನು–ಬ್ರಹ್ಮದೇವರು ಬಲ್ಲರು. ಹಾಂಗೇ ವಾಯುದೇವರು, ಹಾಂಗೆ ತಾರತಮ್ಯದಿಂದ ಋಜುಗಳು ತಿಳಿಯೋವರಾಗಿದ್ದಾರೆ. ಬೊಮ್ಮನರಿಯದ–ಆ ಬ್ರಹ್ಮದೇವರು ಅರಿಯದೇ ಇರತಕ್ಕಂಥಾ,

ಅಗಾಧ ಗುಣಗಳು – ಅಪರಿಮಿತ ಗುಣಗಳನ್ನು, ಲಕುಮಿ ಬಲ್ಲಳು – ರಮಾ ದೇವೇರು ತಿಳಿಯೋವರಾಗಿದ್ದಾರೆ. ಎಂಬೋಣದರಿಂದ ಶ್ರೀ ಪರಮಾತ್ಮನ ಗುಣಗಳನ್ನು ಅವರವರು ತಮ್ಮ ಯೋಗ್ಯತಾನುಸಾರ ತಿಳಿಯೋವರಾಗಿದ್ದಾರೆಯೇ ಹೊರ್ತು, ಸರ್ವಗುಣಗಳನ್ನೂ ಅರಿಯರು. ಸದ್ಗುಣಪೂರ್ಣ ಆದ ಕಡಿಯಿಂದ ಶ್ರೀ ಪರಮಾತ್ಮನ ಗುಣಗಳು ಅಪರಿಚ್ಛಿನ್ನಗಳಾಗಿನ್ನೂ, ಅಪಾರಗಳಾಗಿನ್ನೂ, ಆದ್ಯಂತರಹಿತಗಳಾಗಿನ್ನೂ ಛಂದಾಗಿ ಪೂರ್ಣಗಳಾಗಿನ್ನೂ ಅವೆ. ಸಚ್ಛಬ್ದದಿಂದ, ಅಸ್ವಾತಂತ್ರ್ಯ ಅಪೂರ್ಣತಾ ಇತ್ಯಾದಿ ದೋಷಗಳಿಲ್ಲವೆಂದು ತಾತ್ಪರ್ಯ. ಶ್ರೀಧರನೊಬ್ಬನು – ಶ್ರೀ ವತ್ಸಾಂಕಿತ ಶ್ರೀ ಪರಮಾತ್ಮನೊಬ್ಬನೇ, ಉಪಾಸ್ಯ–ರಮಾ ಬ್ರಹ್ಮಾದಿಗಳಿಂದ ಸರ್ವೋತ್ತಮನೆಂದು ಉಪಾಸನಾ ಮಾಡಿಸಿಕೋತಾನೆ. ತದನ್ಯರಾದ ರಮಾ ಬ್ರಹ್ಮಾದಿಗಳು ತಾರತಮ್ಯಾನುಸಾರ ಉಪಾಸನಕ್ಕೆ ಯೋಗ್ಯರೇ ಹೊರ್ತು, ಸರ್ವೋತ್ತಮತ್ವೇನ ಉಪಾಸನಕ್ಕೆ ಯೋಗ್ಯರಾದವರಲ್ಲ. ಆದ ಕಡಿಯಿಂದಲೇ ಹರಿಯೆಂದು–ಶ್ರೀ ಲಕ್ಷ್ಮೀಪತಿ ನಾರಾಯಣದೇವರು ಪೂರ್ವೋಕ್ತ ರೀತ್ಯಾ ತಾರತಮ್ಯ ಪಂಚಭೇದದಿಂದ ಸರ್ವೋತ್ತಮನೆಂದು ಹೇಳಿಸಿಕೊಳ್ಳಲ್ಪಡುತಾನೆ. ಗುಣೋಪಾಸನಾದಿಂದ ಜೀವರ ತಾರತಮ್ಯ ಹೇಳಿದಂತಾಯಿತು. ॥೩೦॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಮುಂದಿನ ಮೂರು ಪದ್ಯಗಳಿಂದ ಲಕ್ಷ್ಮೀದೇವಿಯರ ಮಹಾಮಹಿಮೆಯನ್ನು ಹೇಳಿ, ಅಂತಹ ರಮಾದೇವಿಯರು ಪರಮಾತ್ಮನ ಅಪಾರ ಗುಣಗಳನ್ನು ಇನ್ನೂ ಹುಡುಕುತ್ತಿರುವರು–ಎಂಬ ವಚನಗಳಿಂದ ವಿಶೇಷವಾದ ಭಗವನ್ಮಹಿಮೆಯನ್ನು ಹೇಳುತ್ತಾರೆ.

ರುದ್ರಾದಿ ದೇವತೆಗಳು ತಿಳಿಯದ ಭಗವನ್ಮಹಿಮೆಯನ್ನು ವೇದಾಭಿಮಾನಿಗಳೆಂದು ಪ್ರಸಿದ್ಧರಾದ ಸರಸ್ವತಿ, ಭಾರತೀ ದೇವಿಯರು ಬಲ್ಲರು. ಅವರು ಕಾಣದ ಗುಣಗಣಗಳನ್ನು ಬ್ರಹ್ಮದೇವರು ಬಲ್ಲರು. ಬ್ರಹ್ಮದೇವರಿಗೂ ಗೋಚರವಾಗದ ಮಹಾಮಹಿಮೆಗಳನ್ನು ಶ್ರೀ ಲಕ್ಷ್ಮೀದೇವಿಯರು

ಬಲ್ಲರು. ಆ ಗುಣಗಳು ಎಂತಹವೆಂದರೆ, ಶ್ರೀವತ್ಸದಲ್ಲಿ ಶ್ರೀ ಲಕ್ಷ್ಮೀ ದೇವಿಯರನ್ನು ಧರಿಸಿರುವನು. ಸರ್ವಸದ್ಗುಣಪೂರ್ಣನೂ ದುರಿತ ಹರನಾದುದರಿಂದ, "ಹರಿ" ಶಬ್ದವಾಚ್ಯನು. ಇಂತಹ ಪರಮಾತ್ಮನೊಬ್ಬನೇ ಸಕಲ ಜನರಿಂದಲೂ ಉಪಾಸ್ಯನು ಎಂಬ ಇವೇ ಮೊದಲಾದುವು. ॥೩೦॥

## (೩) "ಭಾವದರ್ಪಟೀಕಾ" ವ್ಯಾಖ್ಯಾನ :–

ಆದಿತೇಯೇತಿ ॥ **ಉಕ್ತಂಚ ಶ್ರೀಮದ್ಭಗವದ್ಪಾದೈ :-**

**"ಗಿರಿಶೋ ಗರುಡಶ್ಚೈವ ತನೋಮಾತ್ರಗತಂ ಹರಿಮ್ ।**
**ಪಶ್ಯೇದ್ವಿಶೇಷಾನಪಿಹಿ ವಾಣೀ ದೃಷ್ಟ್ವಾ ನ ಪಶ್ಯತೀತಿ ॥"**

**ವೇದೇತಿ । "ಪಶ್ಯಂತಿ ನ ತಯಾ ವಾಣಿ ವಿಶೇಷಾಂಸ್ತಾವತ ಇತ್ಯುಕ್ತೇಃ ॥" ಬೋಮೇತಿ ॥**

**"ನ ರಮಾ ತದ್ವಿಶೇಷಾಣಾಂ ದರ್ಶನಂ ಶಕ್ನುಯತ್ಕಿಂಚಿದಿತಿ" —ವಚನಾಜ್ಞೇಯಂ ॥ ॥೩೦॥**

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–

"ಆದಿತೇಯ–" ಇತಿ ॥ ಆದಿತೇಯಾಃ ದೇವಾಃ ॥ ವೇಧ=ಬ್ರಹ್ಮಾ ॥ ಶ್ರೀಧರಃ– "ಓಂ ಗವ್ಯಗ್ರೇ ಮಥೀನಾಂ ವಿತತ್ತ ಇಂದ್ರವೀರ್ಯಂ ಗೋಭಿರ್ಗೃಣಂತಿ ಕಾರವಃ ॥ ತೇ ಸ್ತೋಭಂತ ಊರ್ಜಮಾವನ್ ಘೃತ ಶ್ರುತಮ್ ಓಂ"– ॥ ಶ್ರಯತೇ ಇತಿ ಶ್ರೀಃ ವೀರ್ಯಮ್ ॥ ತದ್ ಧರತಿ ಇತಿ ತಥೋಕ್ತಃ ॥ ॥೩೦॥

## ಕನ್ನಡಾರ್ಥ :

ಸರಸ್ವತಿಯವರು ತಮಗಿಂತಲೂ ಕಡಿಮೆಯಾದವರಿಗಿಂತ ಅಧಿಕವಾಗಿ ಶ್ರೀ ಪರಮಾತ್ಮನ ಗುಣಗಳನ್ನು ತಿಳಿದಿರುತ್ತಾರೆ. ಅವರಿಗಿಂತಲೂ ಅಧಿಕವಾಗಿ ಬ್ರಹ್ಮದೇವರು ತಿಳಿದಿರುತ್ತಾರೆ. ಶ್ರೀ ಲಕ್ಷ್ಮೀದೇವಿಯಾದರೋ ಆ ಬ್ರಹ್ಮದೇವರಿಗಿಂತ ಅತಿಶಯವಾಗಿ ಭಗವಂತನ ಗುಣಗಳನ್ನು ಬಲ್ಲರು.

ಶ್ರೀ ಭೂ ದುರ್ಗಾರೂಪಿಣಿಯಾದ ಶ್ರೀ ರಮಾದೇವಿಯರಿಗಿಂತ ಅನಂತಾನಂತ ಗುಣಕೋಟಿಗಳಿಂದ ಉತ್ತಮನು ಶ್ರೀ ಪರಮಾತ್ಮನು. ಅಂತಹ ಅನಂತಾನಂತ ಗುಣಗಳಿಂದ ಉಪಾಸಿತನಾದ, ಗುಣಪರಿಪೂರ್ಣನಾದ, ಸಮಸ್ತ ದೋಷ ವಿದೂರನಾದ ಶ್ರೀ ಹರಿಯನ್ನು ಉಪಾಸಿಸಬೇಕೆಂದು ತಾತ್ಪರ್ಯವು: "ಶ್ರೀಧರ"– ಈ ನಾಮದ ಅರ್ಥವನ್ನು **ಬೃಹತೀಮಂತ್ರವು** ವಿವರಿಸುತ್ತದೆ– ಶ್ರೀ = ವೀರ್ಯ, ಅದನ್ನು ಧರಿಸಿಕೊಂಡಿರುವವನು ಪೂರ್ಣ ವೀರ್ಯ (ಬಲ = ಓಜಸ್ಸು) ವಂತನಾದವನು "ಶ್ರೀಧರ" ನಾಮಕನೆಂದರ್ಥ. ॥೩೦॥

## (೪) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–

ಅನಾದ್ಯನಂತ ದೇಶಕಾಲಗಳಲ್ಲಿ, ದೇವರಂತೆ ಲಕ್ಷ್ಮಿಯು ನಿರವಧಿಕ ಸಮಳಾದಾಗ್ಯೂ, ದೇವರ ಆನಂದಾದಿ ಗುಣಗಳ ಅಂತ ಅರಿಯಳಾದ್ದರಿಂದ, ಈಕೆ ದೇವರಿಗಿಂತ ಅನಂತಗುಣ ಕಡಿಮೆ ಎಂದು ವಿವರಿಸುತ್ತಾರೆ. ಆದಿತೇಯ ರೆಂಬ ಇಂದ್ರಾದಿ ದೇವತೆಗಳರಿಯದ ದೇವರ ಗುಣಗಳನ್ನು ರುದ್ರಾದಿಗಳು ಬಲ್ಲರು. ರುದ್ರಾದಿಗಳು ತಿಳಿಯದ ಗುಣಗಳನ್ನು ವೇದಾಭಿಮಾನಿ ಭಾರತೀ, ಸರಸ್ವತಿಯರು ಬಲ್ಲರು, ಸರಸ್ವತೀ ಭಾರತೀಯರು ತಿಳಿಯದ ಬಹು ಸದ್ಗುಣಗಳನ್ನು ವೇದ ಎಂಬ ಬ್ರಹ್ಮ ವಾಯುಗಳು ಬಲ್ಲರು. ಬ್ರಹ್ಮವಾಯು ಗಳು ತಿಳಿಯದ ಅಗಾಧ ಎಂದರೆ, ಅಪರಿಮಿತ ಸದ್ಗುಣಗಳನ್ನೂ ಲಕ್ಷ್ಮೀ ಬಲ್ಲಳು. ಆದ್ದರಿಂದ ಶ್ರೀ ಧರಾರೂಪಗಳಾದ ರಮಾದೇವಿ ಎಂಬ ಜಗಜ್ಜ ನನಿಯಿಂದ ಮುಖ್ಯವಾಗಿ ತಿಳಿದು, ಉಪಾಸನೆ ಮಾಡಿಸಿಕೊಳ್ಳುವ ಸದ್ಗುಣ ಪೂರ್ಣನು ಶ್ರೀಹರಿ ಎಂದು ತಿಳಿಯಬೇಕೆಂದರ್ಥ. ॥೩೦॥

# ಸರ್ವವ್ಯಾಖ್ಯಾನಸಾರಸಂಗ್ರಹಃ

ಅಪ್ರಮೇಯನಾದ ಆ ಜಗತ್ಪ್ರಭುವಿನ ಕಲ್ಯಾಣ ಗುಣಗಳು ಅಪಾರ ಹಾಗೂ ಅಪರಿಮಿತ. ಅನಾದ್ಯಂತಕಾಲದಿಂದಲೂ ಪರಿಪೂರ್ಣವಾಗಿರುವ

ಆಪರಾತ್ಪರನ ಅನಂತ ಕಲ್ಯಾಣ ಗುಣರಾಶಿಗಳನ್ನು ತಮ್ಮ ತಮ್ಮ ಯೋಗ್ಯತಾನುಸಾರ ದೇವತೆಗಳು ಅರಿತು, ಉಪಾಸನೆ ಮಾಡುತ್ತಾರೆಂದು. ತಾರತಮ್ಯಾನುಸಾರ ವಿವರಿಸುತ್ತಾರೆ. **"ಆದಿತೇಯರು"**– ಎಂಬ ಪ್ರಸಕ್ತ ೩೦ನೆಯ ಈ ಪದ್ಯದಿಂದ.

(೧) ದೇವತಾ ವರ್ಗದಲ್ಲಿ ಇಂದ್ರಾದಿ ದೇವತೆಗಳು ಆರಿಯದಿಹ ಶ್ರೀ ಪರಮಾತ್ಮನ ಗುಣಗಳನ್ನು ಅವರಿಗಿಂತ ತಾರತಮ್ಯದಲ್ಲಿ ಉತ್ತಮರಾದ ಗರುಡ, ಶೇಷ, ರುದ್ರಾದಿಗಳು ಬಲ್ಲರು.

(೨) ಅಂತಹ ರುದ್ರಾದಿಗಳು ಅರಿಯದ ಶ್ರೀ ಭಗವನ್ಮಾಹಾತ್ಮ್ಯವನ್ನು ಅವರಿಗಿಂತ ಉತ್ತಮರಾದ ವೇದಾಭಿಮಾನಿಗಳೆಂದೆನಿಪ ಶ್ರೀ ಭಾರತೀ. ಶ್ರೀ ಸರಸ್ವತೀ ದೇವಿಯರು ತಿಳಿದಿರುತ್ತಾರೆ. ಅಂತೆಯೇ ಉಳಿದ ಋಜುಗಳ ಪತ್ನಿಯರು ಬಲ್ಲರು.

(೩) ವಾಣ್ಯಾದಿಗಳು ತಿಳಿಯದಿರುವ್ವ ಶ್ರೀ ಪರಮಾತ್ಮನ ಗುಣಗಳನ್ನು "ವೇಧ" ನಾಮಕರಾದ ಶ್ರೀ ಚತುರ್ಮುಖ ಬ್ರಹ್ಮದೇವರು ಬಲ್ಲರು. ಅಂತೆಯೇ ಶ್ರೀ ವಾಯುದೇವರು ಮತ್ತು ಉಳಿದ ಋಜುಗಣಸ್ಥರು ತಿಳಿದಿದ್ದಾರೆ.

(೪) ಅಂತಹ ಬೊಮ್ಮಾದಿಗಳರಿಯದ ಗುಣಸಮೂಹಗಳನ್ನು ಈಶ ಕೋಟಿ ಪ್ರವಿಷ್ಠರಾದ ಶ್ರೀ ರಮಾದೇವಿಯರು ತಿಳಿದಿದ್ದಾರೆ. ಅನಾದ್ಯನಂತ ದೇಶ ಕಾಲಾದಿಗಳಲ್ಲಿ ಶ್ರೀ ಪರಮಾತ್ಮನಂತೆ ಶ್ರೀ ಲಕ್ಷ್ಮಿಯು ನಿರವಧಿ ಸಮಳು. ಆದರೆ ಅಚಿಂತ್ಯಾದ್ಭುತ ಮಹಿಮಾಸಂಪನ್ನನಾದ ಆ ಸದಾ ಆನಂದ ಉದ್ರಿಕ್ತನಾದ ಶ್ರೀ ಪರಮಾತ್ಮನ ಗುಣಗಳನ್ನು ನಿರಂತರವೂ ಚಿಂತಿಸುತ್ತಾ ಇರುವ ಆ ಅಧೋಕ್ಷಜನವಕ್ಷಸ್ಥಳ ವಾಸಿನಿಯಾದ ಶ್ರೀ ಲಕ್ಷ್ಮಿದೇವಿಗೂ ಶ್ರೀ ಭಗವಂತನು ಕ್ಷಣಕ್ಷಣಕ್ಕೆ ನಿತ್ಯ ನೂತನವಾಗಿ ಕಾಣಿಸುತ್ತಲೇ ಇರುವನು. ಅವನ ಅಪರಿಮಿತ ಹಾಗೂ ಪರಿಪೂರ್ಣ ಸದ್ಗುಣಗಳ ರಾಶಿಗಳನ್ನು ಸಾಕ

ಲ್ಯೇನ ಕಾಣದೆ, ಶ್ರೀ ಇಂದಿರೆಯೇ ದಿಗ್ಭ್ರಾಂತಳಾಗಿದ್ದಾಳೆಂದ ಮೇಲೆ, ತದನ್ಯ ಜೀವಕೋಟಿ ಪ್ರವಿಷ್ಟರಾದ ಇತರರ ಪಾಡೇನು ? ಅಂದರೆ ಶ್ರೀ ಲಕ್ಷ್ಮೀದೇವಿಯು ಶ್ರೀ ಪರಮಾತ್ಮನಿಗೆ ದೇಶತಃ ಮತ್ತು ಕಾಲತಃ ಸಮಳು. ಆದರೆ ಶ್ರೀ ಪರಮಾತ್ಮನಿಗಿಂತ ಅನಂತ ಕೋಟಿ ಗುಣದಿಂದ ಅಸಮಳು. ಈಶಾಧೀನಳಾದ ಲಕುಮಿಗೆ **ಸಮಾಸಮ**ಳೆಂದು ಶಾಸ್ತ್ರವಚನ.

(೫) ಶ್ರೀ ಲಕ್ಷ್ಮೀದೇವಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿರುವುದ ರಿಂದ ಶ್ರೀ ಪರಮಾತ್ಮನಿಗೆ **ಶ್ರೀಧರ**ನೆಂದು ಹೆಸರು. ಸಿರಿವತ್ಸಲಾಂಛನನಾದ "ಶ್ರೀಧರ" ಎಂಬ ಹೆಸರಿನ ಅರ್ಥವನ್ನು **ಬೃಹತೀಮಂತ್ರ**ವು ವಿವರಿಸುತ್ತದೆ. "ಶ್ರೀ"–ಎಂದರೆ "ವೀರ್ಯ" ವೆಂದರ್ಥ. ಅಂತಹ ಪೂರ್ಣವೀರ್ಯವನ್ನು ತಾನು ಧರಿಸಿರುವುದರಿಂದ "ಶ್ರೀಧರ" ನಾಮಕನು. ಅಂದರೆ ಪೂರ್ಣ ವೀರ್ಯವಂತನಾದ ಶ್ರೀಧರ ನಾಮಕ ಹರಿಯಲ್ಲಿಯೇ ಈ ಶಬ್ದಾರ್ಥದ ಮುಖ್ಯ ತಾತ್ಪರ್ಯವು.

ಅಂತಹ ಶ್ರೀಧರನೊಬ್ಬನೇ ರಮಾ ಬ್ರಹ್ಮಾದಿ ಸಮಸ್ತ ದೇವತಾ ಸಮೂಹರಿಂದ ಉಪಾಸ್ಯನಾಗಿದ್ದಾನೆ. ಸರ್ವದೇವತಾ ಉಪಾಸ್ಯಮೂರ್ತಿ ಯಾದ ಆ ಪರಾತ್ಪರನು ಸದ್ಗುಣ ಪರಿಪೂರ್ಣನು. ಅಪ್ರಾಕೃತ ಹಾಗೂ ಜಗದ್ವಿಲಕ್ಷಣವಾದ ಜ್ಞಾನಾನಂದಾದಿ ಶರೀರವುಳ್ಳವನು. ಸರ್ವಪಾಪಪರಿ ಹಾರಕನಾದ ಸರ್ವಜೀವರ ಬಿಂಬನೆಂದೆನಿಸುವ ಸಮಸ್ತ ದೋಷವಿದೂರನಾದ, ಸರ್ವೋತ್ತಮನಾದ ಆ ಪರಮಾತ್ಮನೇ **"ಹರಿ"** ನಾಮಕನೆಂದು ಶ್ರೀ ಲಕ್ಷ್ಮೀ ದೇವಿಯು ಇತರರಿಗಿಂತ ಅಧಿಕವಾಗಿ ತಿಳಿದಿದ್ದಾಳೆ– ಎಂದು ಪ್ರಸಕ್ತ ಪದ್ಯದ ತಾತ್ಪರ್ಯವು. ॥೩೦॥

## ಪದ್ಯ (೩೧)

**ಮೂಲ :-**

ಇಂತನಂತಾನಂತ ಗುಣಗಳ ।
ಪ್ರಾಂತಗಾಣದೆ ಮಹಲಕುಮಿ ಭಗ ।
ವಂತಗಾಭರಣಾಯುಧಾಂಬರವಾಲಯಗಳಾಗಿ ॥
ಸ್ವಾಂತದಲಿ ನೆಲೆಗೊಳಿಸಿ ಪರಮು ದು ।
ರಂತ ಮಹಿಮನ ದೌತ್ಯ ಕರ್ಮ ನಿ ।
ರಂತರದಿ ಮಾಡುತಲಿ ತದಧೀನತ್ವನೈದಿಹಳು ॥ ॥೩೧॥

**ಅವತರಣಿಕೆ :-**

ಶ್ರೀ ಪರಮಾತ್ಮನ ಅನಂತಾನಂತ ಕಲ್ಯಾಣಗುಣಗಣಗಳ ಅಂತವನ್ನು ಎಷ್ಟು ಧ್ಯಾನಿಸಿದರೂ, ಸಾಕಲ್ಯೇನ ಅರಿಯದ ಶ್ರೀ ಲಕ್ಷ್ಮೀದೇವಿಯರ ದೌತ್ಯ ಕರ್ಮ ಹಾಗೂ ಭಗವದಧೀನತ್ವ ವಿಷಯವನ್ನು ತಿಳಿಸುತ್ತಾರೆ, ಪ್ರಸಕ್ತ ಸಂಧಿಗತ ೩೧ ನೆಯ ಈ ಪದ್ಯದಿಂದ.

ಅನಂತಾನಂತ ಅಪರಿಮಿತ ಗುಣ ಗಣ ರತ್ನಾಕರನಾದ ಶ್ರೀ ಭಗವಂತನ ಮಹಾ ಮಹಿಮಾ ವಿಶೇಷಗಳ ಪ್ರಾಂತ ಕಾಣದೆ ಮಹಾಲಕ್ಷ್ಮೀ ಅವನಿಗೆ ನಾನಾ ಆಭರಣಗಳಾಗಿ, ಆಯುಧ ವಿಶೇಷಗಳಾಗಿ, ವಸ್ತ್ರಗಳ ರೂಪದಲ್ಲಿ ಮತ್ತು ಶ್ವೇತ ದ್ವೀಪ, ಅನಂತಾಸನ ಮತ್ತು ವೈಕುಂಠಗಳೆಂಬ ತ್ರಿಧಾಮ ರೂಪಗಳಾಗಿ, ಶ್ರೀ ಪರಮಾತ್ಮನ ವಕ್ಷಸ್ಥಳನಿವಾಸಿನಿಯಾಗಿ ನೆಲೆಸಿ, ಸದಾ ಸರ್ವಕಾಲ ದೇಶ ಅವಸ್ಥೆಗಳಲ್ಲಿಯೂ ಆ ಅಪಾರಮಹಿಮಾಸಂಪನ್ನನ ಸ ಪ್ರಪ್ರಥಮ ಚರಣದಾಸಿ ಎಂದೆನಿಸಿ. ಅವನ ನಿರಂತರ ಸೇವಾಕಾರ್ಯದಲ್ಲಿ ತತ್ಪರಳಾಗಿ ಅವನ ಅಧೀನಳಾಗಿದ್ದಾಳೆಂದು ಈ ಪದ್ಯದ ತಾತ್ಪರ್ಯಾರ್ಥ. ॥೩೧॥

**ಪ್ರತಿಪದಾರ್ಥ :-**

**ಇಂತು** = ಈ ಪ್ರಕಾರ, **ಅನಂತಾನಂತಗುಣಗಳ** = ಶ್ರೀ ಪರಮಾತ್ಮನ ಅಪರಿಮಿತವಾದ ಗುಣಸಮೂಹಗಳ, **ಪ್ರಾಂತಗಾಣದೆ** = ಕೊನೆಯನ್ನು ಕಾಣದೇ **ಮಹಾಲಕುಮಿ** = ಶ್ರೀ ಲಕ್ಷ್ಮೀದೇವಿಯರು, **ಭಗವಂತಗೆ** = ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀ ಪರಮಾತ್ಮನಿಗೆ **ಆಭರಣ** = ಕೌಸ್ತುಭಾದಿ ಅನೇಕ ನವರತ್ನಾತ್ಮಕ ಆಭರಣಗಳಾಗಿಯೂ, **ಆಯುಧ** = ಗದಾ, ಧನಸ್ಸು ಮುಂತಾದ ಆಯುಧರೂಪಿಯಾಗಿಯೂ, **ಅಂಬರ** = ದಿವ್ಯ ವಸ್ತ್ರರೂಪಿಯರಾಗಿಯೂ, **ಆಲಯಂಗಳಾಗಿ** = ಮನೆಗಳಾಗಿ (ಇನ್ನೂ ಛತ್ರ ಚಾಮರಾದಿ ಉಪಚಾರ ರೂಪ ವಸ್ತುಗಳ ರೂಪದಲ್ಲಿಯೂ) **ಸ್ವಾಂಶದಲಿ** = ತನ್ನ ಅಂತರಂಗದಲ್ಲಿ (ತನ್ನ ಹೃದಯ ಅಷ್ಟಕಮಲದಲ್ಲಿ) **ನೆಲೆಗೊಳಿಸಿ** = ಸ್ಥಿರವಾಗಿ ಭಗವದ್ರೂಪವನ್ನು ನಿಲ್ಲಿಸಿಕೊಂಡು, **ಪರಮ** = ಅತ್ಯಂತ ಶ್ರೇಷ್ಠನಾದ (ಸರ್ವೋತ್ತಮನಾದ) **ದುರಂತ ಮಹಿಮನ** = ಕೊನೆಗಾಣದ (ಅನಂತ) ಮಹಾಮಹಿಮಸಂಪನ್ನನಾದ **ದೌತ್ಯಕರ್ಮವ** = ದಾಸರು ಮಾಡುವ ಸೇವಾ ರೂಪವಾದ ಕ್ರಿಯಾದಿಗಳನ್ನು (ಕೈಂಕರ್ಯವನ್ನು) **ನಿರಂತರದಿ** = ಯಾವಾಗಲೂ (ಎಡಬಿಡದೆ) **ಮಾಡುತಲಿ** = ಮಾಡುತ್ತಾ, **ತಧೀನವ** = ಆ ಪರಮಾತ್ಮನ ಅಧೀನತ್ವವನ್ನು **ಐದಿಹಳು** = ಹೊಂದಿಹಳು. ॥೩೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಶ್ರೀ ಪರಮಾತ್ಮನ ಗುಣಗಳ ರಮಾದೇವೇರು ಉಪಾಸನಾಕ್ರಮ ಸೇವಾ ಮಾಡತಕ್ಕ ಕ್ರಮವಿಚಾರ ಹೇಳತಾರೆ.

ಇಂತ_ಈ ಪೂರ್ವೋಕ್ತನಾದ ಶ್ರೀಮನ್ನಾರಾಯಣದೇವರ, ಅನಂತಾ

ನಂತ ಗುಣಗಳ–ಅಪರೋಕ್ಷೇನ ಗುಣಗಳ, ಪ್ರಾಂತಗಾಣದೆ–ಅಂತ ಕಾಣದೇ (ತಮ್ಮ ಯೋಗ್ಯತಾನುಸಾರ ಕಂಡಿದ್ದಾರೆ ಎಂತ ತಾತ್ಪರ್ಯ). ಮಹಲಕುಮಿ–ಬ್ರಹ್ಮಾದಿ ಜೀವರಪೇಕ್ಷೆಯಾ ಭಿನ್ನರಾದ ಮತ್ತು ಇನ್ನೂ ಉತ್ತಮರಾದ ಶ್ರೀ ಲಕ್ಷ್ಮೀದೇವೇರು ತಮ್ಮ ರಮಾಖ್ಯ ಶ್ರೀ ಭಾಗದ ಒಳಗೆ ನಿಲ್ಲಿಸಿ ಮತ್ತು ಸ್ವಾಂಶದಲಿ–ತಮ್ಮ ಹೃದಯ ಅಷ್ಟದಳ ಕಮಲದಲ್ಲಿ, ನೆಲೆಗೊಳಿಸಿ–ನಿಲ್ಲಿಸಿದವರಾಗಿ. ಭಗವಂತಗೆ–ತನ್ನ ಪತಿಯಾದ ಶ್ರೀ ನಾರಾಯಣ ದೇವರಿಗೆ ಎಂದರೆ, ರಮಾದೇವರಿಗೆ ಬಿಂಬರೂಪ ಸರ್ವದಾ ಹೃದಯಾಕಾಶದಲ್ಲಿ ಇರೋದಾಗಿ ಅದೆ. ಅವಿಯೋಗ ರೂಪ ಒಂದು, ಪತಿತ್ವೇನ ಬಾಹ್ಯಗತ ರೂಪ ಒಂದು, ಸ್ವಾಂತದಲಿ ಮಾಡಿಕೊಂಡ ರೂಪ ಬಾಹ್ಯಗತ ಪತಿ ಸಾಂಕೇತ ರೂಪ ಒಂದು, ಇವರನ್ನ ಹೃದಯಾಕಾಶದಲ್ಲಿ ನಿಲ್ಲಸಿದಂಥವರಾಗಿ, ಆಭರಣ–ಅನೇಕ ನವರತ್ನಾತ್ಮಕಗಳಾದ ಆಭರಣಗಳು, ಆಯುಧ–ಗದಾ ಮೊದಲಾದ ಆಯುಧಗಳು, ಅಂಬರವು–ದಿವ್ಯ ವಸ್ತ್ರಗಳು, ಆಲಯಗಳಾಗಿ–ಮನಿಗಳು ಇನ್ನೂ ಛತ್ರ ಚಾಮರಾದಿ ಉಪಚಾರರೂಪ ಪದಾರ್ಥಗಳು ಆದಂಥಾವರಾಗಿ, ಪರಮದುರಂತ ಮಹಿಮನ – ಅವಶ್ಯಕವಾದ ಮಹಿಮೋಪೇತನಾದ ಶ್ರೀ ಪರಮಾತ್ಮನ, ದೌತ್ಯಕರ್ಮ–ದೂತಕರ್ಮಗಳ, ನಿರಂತರದಿ ಮಾಡುತಲಿ–ಪ್ರತಿನಿತ್ಯ ಮಾಡುವಂಥಾವರಾಗಿ, ತದಧೀನತ್ವ ವೈದಿಹಳು–ಶ್ರೀ ಪರಮಾತ್ಮನ ಆಧೀನದಲ್ಲಿ ಇರೋವರಾಗಿದ್ದಾರೆ.

**ವಿಶೇಷಾರ್ಥ :–**

**"ವೈಢೂರ್ಯಸ್ತಬಕ ಛತ್ರ ಪಾದುಕೇ ರತ್ನಪೀಠಕೇ ।**
**ಸರ್ವ ರಾಜೋಪಚಾರಾಣಿ ರಾಜಚಿಹ್ನಾನಿ ಯಾನಿ ಚ ॥ ॥೬೬॥**
**ಸರ್ವಾಣ್ಯಭೂದ್ರಮಾದೇವೀ ದೇವಾಯಾನಂತ ತೇಜಸೇ ।**
**ಭೋಗ್ಯವಸ್ತುಸ್ವರೂಪೇಣ ತವ ಸೇವಾಭಿಲಾಷಿಣೀ ॥ ॥೬೭॥**

–ಇತ್ಯಾದಿ ಆದಿತ್ಯಪುರಾಣ ಶ್ರೀ ವೆಂಕಟೇಶಮಾಹಾತ್ಮ್ಯೋಕ್ತ ಪ್ರಮಾಣಗಳು ಬಹಳ ಇವೆ. ಆದ ಕಡಿಯಿಂದ ರಮಾದೇದೇರು ಇಂಥಾ ಪರಮಾತ್ಮಗೆ ವೈಕುಂಠದಲ್ಲಿ ಶುದ್ಧ ಶ್ರೀ ಭಾಗಗಳು ತಾವೇ ಆಗಿ, ಆದ

ರಲ್ಲಿ ಅನೇಕ ಮನಿಗಳು ತಾವೇ ಆಗಿ, ಆ ತಮ್ಮ ಸ್ವಾಂತದಲ್ಲಿ ತಮ್ಮ ಪತಿಯನ್ನ ನೆಲೆಗೊಳಿಸಿ, ಆಯುಧಾಂಬರ ಆಭರಣಗಳು ತಾವೇ ಆಗಿ ಸೇವಾ ಮಾಡೋದರಲ್ಲಿ ಪತ್ನಿಯಾಗಿನ್ನೂ ಅನೇಕ ರೂಪಗಳಿಂದ ದಾಸೀ ರೂಪಗಳ ಧರಸಿನ್ನು, ಸೇವಾಮಾಡುತ್ತಾ, ಆಯಾರೂಪಗಳಿಂದ ಅವನ ಅಧೀನದಿಂದ ಇದ್ದಾರೆ. ಅವನ ಆಜ್ಞಾನುಸಾರ ಪ್ರವರ್ತಿಸತಾ ಸೇವಾಮಾಡತ್ತಾ ಇದ್ದಾರೆ ಎಂತ ತಾತ್ಪರ್ಯವು. ॥೩೧॥

(೨) "ಭಾವಪ್ರಕಾಶಿಕೆ"–ವ್ಯಾಖ್ಯಾನ :–

ಮೇಲಿನ ಪದ್ಯದಲ್ಲಿ ರಮಾದೇವಿಯರು ಬ್ರಹ್ಮಾದಿಗಳು ಕಾಣದ ಭಗನ್ಮಹಿಮೆಗಳನ್ನು ಬಲ್ಲರು ಎಂದು ಹೇಳಿದ್ದರಿಂದ, ಭಗವನ್ಮಹಿಮೆಗಳೆಲ್ಲವನ್ನೂ ಬಲ್ಲವರೆಂದು ಸಂಶಯ ಬಂದೀತೆಂದು ದಾಸರಾಯರು ಅದನ್ನು ಪರಿಹರಿಸುತ್ತಾರೆ.

ಯದ್ಯಪಿ ಬ್ರಹ್ಮಾದಿಗಳಿಗಿಂತಲೂ ಹೆಚ್ಚಿಗೆ ಭಗವನ್ಮಹಿಮೆಯನ್ನು ರಮಾದೇವಿಯರು ಬಲ್ಲವರಾದರೂ ಪರಮಾತ್ಮನ ಅನಂತಾನಂತಗುಣಗಳನ್ನು ಕೊನೆಗಾಣದೆ, ತಮ್ಮ ಮನಸ್ಸಿನಲ್ಲಿ ಭಗವದ್ರೂಪವನ್ನು ಸ್ಥಿರವಾಗಿ ನಿಲ್ಲಿಸಿ, ಅದ್ಯಾಪಿ ಗುಣಗಳನ್ನು ಹುಡುಕುತ್ತಿರುವರು. ಆದರೂ ಪಾರುಗಾಣರು. ಅಂತಹ ಭಗವಂತನ ಸೇವಾ ಮಾಡುವುದಕ್ಕೆ ತಮ್ಮ ಒಂದೇ ರೂಪದಿಂದಾಗಲೀ, ಶ್ರೀ, ಭೂ, ದುರ್ಗಾದಿ ಮೂರು ರೂಪದಿಂದಲೂ ಸೇವಾ ಮಾಡುತ್ತಿದ್ದರೂ ತೃಪ್ತಿ ಇಲ್ಲದೆ, ವಸ್ತ್ರ, ಆಭರಣ, ಛತ್ರ ಚಾಮರಾದಿ ರೂಪಗಳನ್ನು ಧರಿಸಿ, ಸೇವಾಮಾಡಿ ಪರಮಾತ್ಮನನ್ನು ಮೆಚ್ಚಿಸುತ್ತಿರುವರು. ತಮಗೆ ಅನೇಕ ದಾಸಿಯರಿದ್ದರೂ, ಸ್ವಯಂ ಭಗವಂತನ ಸೇವಾದಿಗಳನ್ನು ತಾವೇ ಮಾಡುತ್ತಿರುವರು.

**ಭಾಗವತ ತೃತೀಯಸ್ಕಂಧ–೧೬ನೆಯ ಅಧ್ಯಾಯ-ಶ್ಲೋಕ ೨೧ :-**

**"ಶ್ರೀ ರೂಪಿಣೀ ಕ್ವಣಯತೀ ಚರಣಾರವಿಂದಂ**
**ನೀಲಾಂಬುಜೇನ ಹರಿಸದ್ಮನಿ ಮುಕ್ತ ದೋಷಾ ॥**

**ಸಂಲಕ್ಷ್ಯತೇ ಸ್ಫಟಿಕ ಕುಡ್ಯ ಉಪೇತ ಹೇಮ್ನಿ**
**ಸಮ್ಮಾರ್ಜತೀಯದನುಗ್ರಹಣೇನ್ಯಯತ್ನಾ ||**

**ವಿಜಯಧ್ವಜೀಯ ವ್ಯಾಖ್ಯಾನ :–**

"ಅನ್ಯೇಷಾಮುಪಾಸಕಾನಾಂ ಅಸ್ಮದಾದೀನಾಂ
ಉಪಾಸನಾದಿ ಪ್ರಯತ್ನಾಯ ಸ್ಯಾನುಗ್ರಹಣೇsನುಗ್ರಹಾರ್ಥಂ ||"

ಇತರರಾದ ನಮ್ಮಂತಹವರು ಯಾವ ಲಕ್ಷ್ಮೀದೇವಿಯರ ಅನುಗ್ರಹವನ್ನು ಪಡೆಯುವುದಕೋಸ್ಕರ ಲಕ್ಷ್ಮೀದೇವಿಯರನ್ನು ಉಪಾಸನೆ ಮಾಡುತ್ತಿರುವೆವೋ, ಅಂತಹ ಜನನಾದಿ ದೋಷರಹಿತರಾದ ಲಕ್ಷ್ಮೀದೇವಿಯರು ತಮ್ಮ ದಿವ್ಯರೂಪದಿಂದ ಪರಮಾತ್ಮನ ಅಂತಃಪುರದಲ್ಲಿ ಚರಣಾರವಿಂದಗಳಲ್ಲಿ ಶೋಭಿಸುತ್ತಿರುವ ಕಾಲಂದಿಗೆಯ ಶಬ್ದವನ್ನುಂಟುಮಾಡುತ್ತಾ. ನೀಲವರ್ಣನಾದ ಕಮಲಪುಷ್ಪಗಳಿಂದ ರಚಿಸಲ್ಪಟ್ಟ, ಕಸಬಳಿಯಲು ಸಾಧನವಾದ ಸಮ್ಮಾರ್ಜನೆಯನ್ನು ಕೈಯಲ್ಲಿ ಹಿಡಿದು, ಕಸಬಳಿಯುತ್ತಿರುವಂತೆ ಸುವರ್ಣಖಚಿತವಾದ ಸ್ಫಟಿಕಮಯವಾದ ಗೋಡೆಯಲ್ಲಿ ಪ್ರತಿಬಿಂಬಿತರಾಗಿ ಕಾಣುತ್ತಿರುವರು"–ಎಂದು ಹೇಳಿರುವರು.

ಇದಲ್ಲದೇ, ಶ್ರೀ ಪುರಂದರದಾಸರಾಯರು ರಚಿಸಿರುವ ಪದ್ಯದಲ್ಲಿ:–

"ಏನು ಧನ್ಯಳೋ ಲಕುಮಿ ಎಂಥಾ ಮಾನ್ಯಳೋ |
ಛತ್ರ ಚಾಮರ ವ್ಯಜನ ಪರ್ಯಂಕ । ಪಾತ್ರ ರೂಪಳಾಗಿ ನಿಂತು ।
ಚಿತ್ರ ಚರಿತನಾದ ಹರಿಯ । ನಿತ್ಯ ಸೇವೆ ಮಾಡುತಿಹಳು ||
ಏನು ಧನ್ಯಳೋ ||"

—ಎಂದು ಹೇಳಿರುವರು. ಇದೇ ಅಭಿಪ್ರಾಯವನ್ನೇ ದಾಸರಾಯರು ಹೇಳಿರುತ್ತಾರೆ—

**"ದೌತ್ಯಕರ್ಮವನ್ನು ನಿತ್ಯದಲಿ ಮಾಡುತಿಹಳು"**

ದೂತಶಬ್ದವು ಒಂದು ಕಾರ್ಯಕ್ಕೋಸ್ಕರ ಮತ್ತೊಬ್ಬರಲ್ಲಿ ಕಳು ಹಿಸಲ್ಪಡುವವನಿಗೆ ಮಾತ್ರವೇ ಬರುವುದು. ಹನುಮಂತ ದೇವರನ್ನು ಸೀತೆಗೆ ಉಂಗುರವನ್ನು ಕೊಟ್ಟು, ಚೂಡಾಮಣಿಯನ್ನು ತರಲು ರಾಮದೇವರು ಕಳು ಹಿಸಿದುದರಿಂದಲೋ, ಅಥವಾ ರಾವಣನ ಸಮೀಪಕ್ಕೆ ಕಳುಹಿಸಿದ ನಿಮಿತ್ತ ದಿಂದಲೋ "**ಶ್ರೀರಾಮದೂತ**"ನೆಂದು ಹನುಮಂತ ದೇವರಿಗೆ ಹೆಸರಾಯಿತು. ಶ್ರೀಕೃಷ್ಣನು ಪಾಂಡವರಿಗೆ ರಾಜ್ಯವನ್ನು ಕೊಡಿಸಿ, ಕುರುಪಾಂಡವರ ಸಂಧಿ ಗೋಸ್ಕರ ದೌತ್ಯವನ್ನು ಮಾಡಿದನೇನು ? ದೌತ್ಯಕರ್ಮವನ್ನು ಮಾಡಿದ ರೆಂದೇ ದಾಸರಾಯರು ಹೇಗೆ ಹೇಳಿದರಂದರೆ:—

ದಾಸ ದಾಸಿಯರಿಗೆ ದೌತ್ಯಕರ್ಮವು ಸಹಜವಾಗಿದ್ದೇ ಇರುವುದು. ದೌತ್ಯಕ್ಕೆ ಮಾತ್ರ ದಾಸ ದಾಸಿಯರೇ ಇರಬೇಕೆಂಬ ನಿಯಮವಿಲ್ಲ. ದಾಸ ರಲ್ಲದವರೂ ಸಹ ದೌತ್ಯವನ್ನು ಮಾಡಬಹದು. ರಾಜಸೂಯಯಾಗದಲ್ಲಿ ಧರ್ಮರಾಜನಿಗೆ ನಾರದರು ದೌತ್ಯವನ್ನು ಮಾಡಿರುವರು. ಪಾಂಡವರಿಗೆ ಶ್ರೀಕೃಷ್ಣನೇ ದೌತ್ಯಮಾಡಿರುವನು. ದ್ರುಪದರಾಜನ ಪುರೋಹಿತರು ದೂತ ಧೃತರಾಷ್ಟ್ರರಾಜನ ಸಮೀಪಕ್ಕೆ ಬಂದಿರುವರು. ಇವರೆಲ್ಲರೂ ದೌತ್ಯಕರ್ಮ ವನ್ನು ಮಾಡಿದ್ದರೂ ದಾಸರಾಗಿಲ್ಲ. ದಾಸ ದಾಸಿಯರೊಂದಿಗೆ ಮಾತ್ರ ಮೇಲೆ ಹೇಳಿರುವಂತೆ ದೌತ್ಯವು ಸಹಜವಾಗಿ ಇದ್ದೇ ಇರುವುದು. ಕುರುಪಾಂಡವ ನ್ಯಾಯದಂತೆ ಕುರುವಂಶದಲ್ಲೇ ಪಾಂಡವರು ಹುಟ್ಟಿರುವರು. ಆದ್ದರಿಂದ ಕೌರವ ಶಬ್ದವು ಪಾಂಡವರಲ್ಲಿದ್ದರೂ, ಅವರ ಮಹಿಮೆಯಿಂದ ಕೌರವರೆಲ್ಲ ರನ್ನೂ ಒಟ್ಟುಗೂಡಿಸಿ, ಪಾಂಡುರಾಯನ ಮಕ್ಕಳಾದ ಪಾಂಡವರನ್ನು ಮಾತ್ರ ಕೌರವರ ಡೇರೆಯಿಂದ ಬೇರ್ಪಡಿಸಿದರು. ಕೌರವಶಬ್ದ ಮಾತ್ರ ಪಾಂಡವರಲ್ಲಿ ಬರುವುದೇ ಹೊರತು, ಪಾಂಡವ ಶಬ್ದವು ಕೌರವರಿಗೆ ಹೇಗೆ ಬಾರದೋ ಹಾಗೆ "ದೂತಿ"— ಎಂದು ದಾಸಿಯರಿಗೆ ಹೇಳ ಬಹುದೇ ಆಗಲಿ, ದೂತಿಯನ್ನು ಮಾತ್ರ ದಾಸಿ ಎಂದು ಕರೆಯಲು

ಸಾಧ್ಯವಿಲ್ಲ. ಆದರೆ ರಮಾದೇವಿಯರನ್ನು ಪರಮಾತ್ಮನಿಗೆ ದಾಸಿಯೆಂದೇ ಹೇಳಬೇಕಾಗಿತ್ತು. ದೌತ್ಯಕರ್ಮ ಮಾಡುತ್ತಿದ್ದರೆಂದೇಕೆ ಹೇಳಿದರೆಂದರೆ, ಸಾಧಾರಣವಾಗಿ ಸಂಬಳಕ್ಕೆ ಇರುವ ದಾಸಿಯರು ಹೊರಗಿನ ಸಾಮಾನ್ಯ ಕೆಲಸವನ್ನು ಮಾಡುವರೇ ಹೊರತು, ಅಂತರಂಗಕ್ಕೆ ಸೇರಿದ, ದೌತ್ಯಾದಿ ಕರ್ಮಗಳನ್ನು ಅವರಿಂದ ಯಾರೂ ಮಾಡಿಸುವುದಿಲ್ಲ. ಆದುದರಿಂದಲೇ ರಾಜಕನ್ಯೆಯರು ತಮ್ಮಲ್ಲಿ ಸರಿಯಾದ ದಾಸಿಯರಿಲ್ಲದಿದ್ದರೆ, ತಮ್ಮ ಗೆಳತಿಯರನ್ನೇ ದೌತ್ಯ ವಿಷಯದಲ್ಲಿ ಕಳುಹಿಸುವ ಸಂಪ್ರದಾಯವಿತ್ತು. ಆದುದರಿಂದ ಕೇವಲ ಅಂತರಂಗಕ್ಕೆ ಸೇರಿದವರೇ ದೌತ್ಯಕರ್ಮಕ್ಕೆ ಯೋಗ್ಯರು. ಆದುದರಿಂದ ರಮಾದೇವಿಯರು ಪರಮಾತ್ಮನ ಕೇವಲ ಅಂತರಂಗ ದಾಸಿಯರಾಗಿದ್ದಾರೆಂಬುದನ್ನು ತೋರಿಸುವುದಕ್ಕಾಗಿ **"ದೌತ್ಯಕರ್ಮ"ವನ್ನು** ಎಂದು ಹೇಳಿದರೆಂದು ತಿಳಿಯಬೇಕು. ಹೀಗೆ ಭಗವಂತನ ಅಧೀನರಾಗಿ ಭಗವದನುಗ್ರಹದಿಂದಲೇ ಭಗವನ್ಮಹಿಮೆಗಳನ್ನು ಬ್ರಹ್ಮಾದಿಗಳಿಗಿಂತಲೂ ಹೆಚ್ಚಾಗಿ ತಮ್ಮ ಯೋಗ್ಯತಾನುಸಾರವಾಗಿ ಬಲ್ಲವರೆಂದು ತಾತ್ಪರ್ಯ ॥೩೦॥

**(೩) "ಭಾವದರ್ಪಣ ಟೀಕಾ" – ವ್ಯಾಖ್ಯಾನ :—**

**(೧) ಆದಿತ್ಯ ಪುರಾಣೋಕ್ತೇ :—**

**"ಅಥಾತ್ಮಾನಂ ಕಲ್ಪಯಂತೀ ದೋಲಾಮಂಚಂ ಮನೋರಮಂ ।**
**ಸುವರ್ಣಶೃಂಖಲಾಲಂಬಂ ಸುವಿಶಾಲಂ ಸುಲಕ್ಷಣಮ್ ॥**

**ಪ್ರವಾಲಪಾದಸಂಯುಕ್ತಂ ಸುವಜ್ರ ಫಲಕೇವೃತಂ ।**
**ಜಾಂಬೂನದ ವಿತಾನಾಢ್ಯಂ ಮುಕ್ತಾಸ್ತಬಕರಂಜಿತಂ ॥**

**ಭೂರುಪಾಭೂಸ್ತ್ವಯಂ ಶಯ್ಯಾ ಶ್ರೀರೂಪಾ ಸೋಪಬರ್ಹಣಮ್ ।**
**ದುರ್ಗಾಭೂತ್ಪಾದ ಸೇವಾರ್ಥಂ ತಾಬುಲಂ ಭೋಗಸಾಧನಂ ॥**

ಸುವರ್ಣದಂಡ ವ್ಯಜನಂ ವಿದ್ಯುದಾಭೇ ಸುಚಾಮರೇ ।
ವೈಢೂರ್ಯಸ್ತಬಕಚ್ಛತ್ರಂ ಪಾದುಕೇ ರತ್ನಪೀಠಕೇ ॥

ಸರ್ವರಾಜೋಪಚಾರಿಣಿ ರಾಜಚಿಹ್ನಾನಿ ಯಾನಿಚ ।
ಸರ್ವಾಣ್ಯಭೂದ್ರಮಾ ದೇವೀತಿ ॥"

(೨) ತಂತ್ರಸಾರ ಸಂಗ್ರಹೇಚ :—

"ಶ್ವೇತದ್ವೀಪೋ ಮಂಟಪಶ್ಚ ದಿವ್ಯ ರತ್ನಮಯೋ ಮಹಾನ್ ।
ಪದ್ಮಮೇತತ್ರಯಂ ದೇವೀ ರಮೈವ ಬಹುರೂಪಿಣೀತಿ ॥"

ಇಂತು, ಶ್ರೀಲಕ್ಷ್ಮೀದೇವಿಯರ ವಿಷಯದಲ್ಲಿ (೧) ಆದಿತ್ಯಪುರಾಣ ಮತ್ತು (೨) ತಂತ್ರಸಾರ—ಈ ಪ್ರಮಾಣ ವಾಕ್ಯಗಳಿವೆ. ॥೩೧॥

(೪) "ವ್ಯಾಸದಾಸ ಸಿದ್ಧಾಂತ ಕೌಮುದೀ" (ಸಂಸ್ಕೃತ ಮೂಲ) :—

"ಇಂತ"—ಇತಿ॥ ಮಂಟಪಂ ಚಾ ಭವದ್ರಮಾ। ದೋಲಾಮಂಚಃ। "ಸರ್ವಾಣ್ಯಭೂದ್ ರಮಾದೇವಿ। ದೇವಾಯಾನಂತ ರಾಧಸೇ।—ಇತಿ ಉಕ್ತೇಃ। ನೆಲೆಗೊಳಿಸಿ = ನಿಂದಿರಿಸಿ ॥೩೧॥

ಕನ್ನಡಾರ್ಥ :—

ಶ್ರೀ ರಮಾದೇವಿಯರು ಶ್ರೀಪರಮಾತ್ಮನ ಗುಣರಾಶಿಗಳ ಕೊನೆಯನ್ನು ನಿರ್ಣಯಿಸಲು ಅಸಮರ್ಥರಾದ್ದರಿಂದ, ಸ್ವಯಂ ಆಯುಧ, ಆಭರಣ, ವಸ್ತ್ರ, ವಾಸಗೃಹ, ಆಸನ, ಶಯನ ಯಾನ ಇತ್ಯಾದಿ ನಾನಾ ರೂಪಗಳಿಂದ ಶ್ರೀಪರಮಾತ್ಮನನ್ನು ಸದಾ ಸೇವಿಸುತ್ತಾ, ಸರ್ವಕಾಲದಲ್ಲಿ ತಾನೇ ಅವನ ಸೇವಕಗಳಾಗಿ, ಅವನ ಅಧೀನಳಾಗಿದ್ದಾಳೆ. "ಇಂತಹ ರಮಾದೇವಿಯು ಮಂಟಪರೂಪಿಯಾಗಿ ಸೇವಿಸಿದಳು. ಆ ಅನಂತಗುಣಗಣ

ಪರಿಪೂರ್ಣನಾದ ಶ್ರೀಹರಿಗೆ ಸರ್ವ ಸೇವೋಪಕರಣರೂಪಳಾದಳು"-ಎಂದು ನಾನಾ ವಚನ ಪ್ರಮಾಣಗಳಿವೆ. ॥೩೦॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ಇಂತು, ಅಂದರೆ ಹೀಗೆ, ಬ್ರಹ್ಮಾದಿ ದೇವತೆಗಳು ಮನಗಾಣದ ಬಲ, ರೂಪ, ಸೌಂದರ್ಯ, ಔದಾರ್ಯ ಮೊದಲಾದನಂತಗುಣಗಳನ್ನು ಬಲ್ಲವಳಾದಾಗ್ಯೂ, ಲಕ್ಷ್ಮಿಯು ಅನಂತಾನಂತ ಗುಣಗಳ ಪ್ರಾಂತಗಾಣದೆ, ಅಂದರೆ ಒಂದು ಸೌಂದರ್ಯವೆಂಬ ಗುಣದಲ್ಲಿ ಆನಂದ್ಯಾನಂತ ಗುಣ—ಆ ಆನಂದದಲ್ಲಿ ಮತ್ತು ಸೌಂದರ್ಯಾದ್ಯನಂತ ಗುಣದಲ್ಲಿ, ಹೀಗೆ ಕಲ್ಯಾಣಗುಣಗಳನ್ನು ಕೊನೆಗಾಣದೆ, ಭಗವಂತನೆಂಬ ಅವ್ಯಾಹತ ಷಡ್ಗುಣೈಶ್ವರ್ಯನಿಧಿಯಾದ ಶ್ರೀವಿಷ್ಣುವಿಗೆ ಕಿರೀಟಾದಿ ಪಾದುಕಾಂತ ಆಭರಣಗಳು ತಾನೇ ಆಗಿಯೂ, ಚಕ್ರಾದಿ ಆಯುಧರೂಪಳೂ ಆಗಿ, ಪೀತಾಂಬರಾದಿ ವಸ್ತ್ರರೂಪಗಳು ಆಗಿ ವೈಕುಂಠಾದಿಲೋಕ ಗೃಹರೂಪಳೂ ತಾನೇ ಆಗಿ, ಮನಸ್ಸಿನಲ್ಲಿ ಸ್ಥಿರವಾಗಿ ದೇವರ ರೂಪಗಳನ್ನಿಟ್ಟುಕೊಂಡು ಧ್ಯಾನಿಸುತ್ತಾ, ಉತ್ತಮವಾಗಿಯೂ ಕೊನೆಗಾಣುವುದಕ್ಕೆ ಅಶಕ್ಯವಾಗಿಯೂ ಇರುವ ಮಹಾಮಹಿಮೆಯುಳ್ಳ ಸ್ವಾಮಿಯ, ದೌತ್ಯಕರ್ಮ ಎಂಬ ಸಕಲ ಉಪಚಾರರೂಪ ಪರಿಚಾರಿಕೆಯನ್ನು ದಾಸಿಯಂತೆ ನಿರಂತರ ಮಾಡುತ್ತಾ, ಶ್ರೀಪರಮಾತ್ಮನ ಕೃಪಾಭಿಲಾಷಿಣಿಯಾಗಿ ಸೇವಕಿಯಂತೆ ಅಧೀನಳಾಗಿರುವಳು. ॥೩೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ಅನಂತಾನಂತ ಕಲ್ಯಾಣಗುಣರಾಶಿಗಳ ಅಗಾಧತೆಯನ್ನು ಶ್ರೀ ರಮಾದೇವಿಯೂ ಸಹ ಸಾಕಲ್ಯೇನ ಕಾಣಲು ಶಕ್ತಳಾಗದೆ, ಅವನ ಪ್ರಪ್ರಥಮ ಸೇವಕಳಾಗಿ, ಆ ಅನಂತಮಹಿಮಾಸಂಪನ್ನನಿಗೆ ನಾನಾ ಆಯುಧ, ಆಭರಣ, ಅಂಬರ, ಆಲಯಗಳಾಗಿ, ವಿವಿಧ ಪ್ರಕಾರದಿಂದ, ದೌತ್ಯ

ಕರ್ಮಗಳನ್ನು ಮಾಡುತ್ತಾ, ಭಗವದಧೀನಳಾಗಿದ್ದಾಳೆ—ಎಂಬ ತತ್ತ್ವಾರ್ಥ ವನ್ನು ತಿಳಿಸುತ್ತಾರೆ ಪ್ರಸಕ್ತ ೩೧ನೆಯ ಈ ಪದ್ಯದಿಂದ.

(೧) ಶ್ರೀಪರಮಾತ್ಮನು ಅನಂತಕೋಟಿ ಕಲ್ಯಾಣಗುಣಗಣರತ್ನಾ ಕರನು. ಸದಾ ಆನಂದೋದ್ರಿಕ್ತ ವಸ್ತುವಾದ ಆತನ ಅಪಾರ ಮಹಿಮೆ ಗಳನ್ನು ಈಶಕೋಟಿ ಪ್ರವಿಷ್ಟಳಾದ ಶ್ರೀರಮಾದೇವಿಯೂ ಸಹ ಸಾಕಲ್ಯೇನ ಅರಿಯಳು. ಶ್ರೀಹರಿಗೆ ದೇಶತಃ ಹಾಗೂ ಕಾಲತಃ ಸಮಳೆಂದೆನಿಸಿರುವ ಇಂದಿರೆಯು ಆ ಇಂದೀವರಾಕ್ಷನ ಗುಣಸಂದೋಹಗಳನ್ನು ಇನ್ನೂ ಹುಡುಕು ತ್ತಲೇ ಇದ್ದಾಳೆ. ಅಧೋಕ್ಷಜನ ವಕ್ಷಸ್ಥಳ ನಿವಾಸಿನಿಯಾದ ಆ ಲಕ್ಷ್ಮೀ ಮೋಕ್ಷಪ್ರದನಾದ ಸರ್ವಜೀವರ ರಕ್ಷಕನಾದ ಆ ಶ್ರೀಹರಿಗಿಂತ ಅನಂತಕೋಟಿ ಗುಣಗಳಿಂದ ಅವರಳು. ಅತಏವ ಶ್ರೀಮನ್ನಾರಾಯಣನಿಗೆ **ಸಮಾ ಸಮಳು.**

(೨) ಶ್ರೀಹರಿಗೆ ಸಮಾಸಮಳೆನಿಸಿರುವ ಆ ಲೋಕಮಾತೆ ಕ್ಷರಾಕ್ಷರ ಪುರುಷಪೂಜಿತ ಪಾದನಾದ ಆ ಲೋಕನಾಯಕನಿಗೆ ಗದಾ, ಪದ್ಮ ಇತ್ಯಾದಿ ಆಯುಧ ರೂಪಳಾಗಿ ಸೇವಿಸುತ್ತಿದ್ದಾಳೆ. ಕನಕಮಯ ರತ್ನಹಾರಾದಿ ಆಭ ರಣ ರೂಪಗಳಿಂದ ಆ ಪರಮಾತ್ಮನ ಚರಣದಾಸಿಯಾಗಿದ್ದಾಳೆ. ಪೀತಾಂಬ ರಾದಿ ನಾನಾ ವಸ್ತ್ರರೂಪಳಾಗಿ ಸೇವಿಸುತ್ತಿದ್ದಾಳೆ. ವೈಕುಂಠವು ಪರ ಮಾತ್ಮನ ಆಲಯವು. ಅದು ಲಕ್ಷ್ಮ್ಯಾತ್ಮಕವಾದದ್ದು. ಇಂತು ಆಲಯ ರೂಪದಲ್ಲಿ ನಿಂತು, ಆ ವೈಕುಂಠನಿಲಯನ ನಿರಂತರ ಸೇವೆ ಮಾಡುತ್ತಿ ದ್ದಾಳೆ.

(೩) ಇಂತು ಆಭರಣ, ಆಯುಧ, ಅಂಬರ, ಆಲಯಗಳಾಗಿ ನಾನಾ ರೂಪಗಳಿಂದ ಆ ಚಿತ್ರಚರಿತನಾದ ಹರಿಯ ನಿತ್ಯ ಸೇವೆ ಮಾಡು ತ್ತಿರುವ ಆ ಲಕುಮಿ ಅದೆಂತಹ ಧನ್ಯಳೋ, ಪರಮ ಮಾನ್ಯಳೋ–ಎಂದು ಉದ್ಗಾರ ತೆಗೆದಿದ್ದಾರೆ **ದಾಸಶ್ರೇಷ್ಠ ಶ್ರೀಪುರಂದರದಾಸರು.** ಶ್ರೀಪರ ಮಾತ್ಮನ ಚರಣಾಗ್ರದಲ್ಲಿರುವ ಒಂದೊಂದು ಗುಣದಲ್ಲಿ ಅನಂತಾನಂತ

ಗುಣಗಳನ್ನು ಕಾಣುತ್ತಾ, ಒಂದೊಂದು ರೂಪದಲ್ಲಿ ಅನಂತ ರೂಪಗಳನ್ನು ವೀಕ್ಷಿಸುತ್ತಾ, ಒಂದೊಂದು ಕ್ರಿಯೆಯಲ್ಲಿ ಅಪಾರ ಕ್ರಿಯಾವಿಶೇಷಗಳನ್ನು ಚಿಂತನೆಗೈಯ್ಯುತ್ತಾ, ಕ್ಷಣಕ್ಷಣಕ್ಕೆ ನಿತ್ಯನೂತನನಾಗಿ ಗೋಚರಿಸುತ್ತಿರುವ ಆ ಸದ್ಗುಣ ನಿಧಿಯ ಗುಣರಾಶಿಗಳ ಅಂತವನ್ನು ಕಾಣದವಳಾಗಿ, ದಿಗ್ಭ್ರಾಂತಳಾಗಿ ಆ ಪರಮ ಮಂಗಳ ಮೂರ್ತಿಯ ಬಿಂಬವನ್ನು ತಮ್ಮ ಹೃನ್ಮಂದಿರದಲ್ಲಿ ನೆಲೆಗೊಳಿಸಿ ಪೂಜಿಸಿ, ನಿತ್ಯ ಸೇವಿಸುತ್ತಿರುವ ಶ್ರೀ ಲಕ್ಷ್ಮೀದೇವಿಯರ ಭಾಗ್ಯವೆಂತಹುದೋ !

(೪) ಅಪಾರಮಹಿಮನ ಗುಣ, ರೂಪ, ಕ್ರಿಯಾದಿಗಳ ಅಂತವನ್ನು ಕಾಣದೇ, ಕೋಟಿ ಕೋಟಿ ಭೃತ್ಯರಿರಲು. ಆ ಹಾಟಕಾಂಬರನ ಸೇವೆ ನಿತ್ಯದಲ್ಲೂ ಮಾಡುತ್ತಾ, ಶ್ರೀ ಪರಮಾತ್ಮನ ಚರಣದಾಸಿಯಾಗಿ, ಆ ಭಗವಂತನ ದೌತ್ಯಕರ್ಮವಹಿಸಿ, ಛತ್ರ, ಚಾಮರ. ವ್ಯಜನ, ಪರ್ಯಂಕ ರೂಪಗಳಾಗಿ, ನಾನಾಪರಿ ಸೇವಿಸುತ್ತಾ, ಆ ಭಗವಂತನ ಅಧೀನತ್ವವನ್ನು ಹೊಂದಿದಳು. ಶ್ರೀ ಪರಮಾತ್ಮನಿಗಿಂತ ಗುಣತಃ ಅಸಮಳಾದ ಆ ರಮಾದೇವಿ ಭಗವಧೀನಳಾಗಿ, ಈಶಕೋಟಿ ಪ್ರವಿಷ್ಟಳಾಗಿದ್ದರೂ, ಶ್ರೀ ಪರಮಾತ್ಮನಿಗಿಂತ ಅನಂತಾನಂತ ಕೋಟಿ ಗುಣಗಳಿಂದ ಅವರಳೆನಿಸಿದ್ದಾಳೆ. ॥೩೦॥

## ಪದ್ಯ (೩೨)

**ಮೂಲ :–**

ಪ್ರಳಯ ಜಲಧಿದೊಳುಳ್ಳ ನಾವೆಯು ।  
ಹೊಲಬುಗಾಣದೆ ಸುತ್ತುವಂದದಿ ।  
ಜಲರುಹೇಕ್ಷಣನಮಲ ಗುಣರೂಪಗಳ ಚಿಂತಿಸುತ ॥  
ನೆಲೆಯ ಕಾಣದೆ ಮಹಲಕುಮಿ ಚಂ ।  
ಚಲವನೈದಿಹಳ್ಬಜೀವರಿ ।  
ಗಳವಡುವುದೇನಿವನ ಮಹಿಮೆಗಳೀಜಗತ್ರಯದಿ ॥ ॥೩೩॥

**ಅವತರಣಿಕೆ :-**

ಶ್ರೀ ಪರಮಾತ್ಮನ ಅಪಾರ ಗುಣರಾಶಿಗಳ ಅಂತವನ್ನು ಸಾಕಲ್ಯೇನ ಅರಿಯದ ಶ್ರೀ ಲಕ್ಷ್ಮೀದೇವಿಯರ ಚಿಂತನಾಕ್ರಮವನ್ನು ಸುಂದರವಾದ ದೃಷ್ಟಾಂತಪೂರ್ವಕ ವಿವರಿಸುತ್ತಾರೆ– **"ಪ್ರಳಯಜಲಧಿಯೊಳ್ಳು"** ಎಂಬ ಪ್ರಸಕ್ತ ಸಂಧಿಗತ ೩೨ನೆಯ ಈ ಪದ್ಯದಿಂದ.

ಮಹಾಪ್ರಳಯಕಾಲ. ಎಲ್ಲೆಲ್ಲಿಯೂ ಅಪಾರ ಜಲರಾಶಿ. ಅಂತಹ ಪ್ರಳಯ ಮಹೋದಧಿಯಲ್ಲಿ ಸಿಕ್ಕಿದ ಒಂದು ನಾವೆಯು ನೆಲೆಯನ್ನು ಕಾಣದೆ. ಗಿರಗಿರನೆ ಸುತ್ತಲೂ ಸುತ್ತುತ್ತಿದೆ. ಅದರಂತೆ ಶ್ರೀಹರಿಯ ವಕ್ಷಸ್ಥಳನಿವಾಸಿನಿಯಾದ ಶ್ರೀ ಲಕ್ಷ್ಮೀದೇವಿಯು ಆ ಕಮಲದಳಾಯತಾಕ್ಷನ ಅನಂತಾನಂತ ಕೋಟಿ ಗುಣವೃಂದ, ರೂಪಸಮೂಹಗಳು, ಕ್ರಿಯಾವಿಶೇಷಗಳನ್ನು ಚಿಂತಿಸುತ್ತಾ, ಕ್ಷಣಕ್ಷಣಕ್ಕೂ ನಿತ್ಯನೂತನವಾಗಿ ಅವಳ ಕಣ್ಣಿಗೆ ಗೋಚರಿಸುತ್ತಿರುವ ಆ ಅನಂತನಾಮಕನ ಅಪಾರ ಗುಣ, ರೂಪ, ನಾಮ, ಕ್ರಿಯಾದಿಗಳನ್ನು ಸಾಕಲ್ಯೇನ ಅರಿಯದೇ, ಪ್ರಳಯಜಲಧಿಯಲ್ಲಿ ಸಿಕ್ಕಿ ಬುಗುರಿಯಂತೆ ಗಿರಗಿರನೆ ನೆಲೆಯನ್ನು ಕಾಣದೆ ಸುತ್ತುತ್ತಿರುವ ನಾವೆಯಂತೆ, ದಿಗ್ಭ್ರಾಂತಳಾಗಿ ಚಿತ್ತಚಾಂಚಲ್ಯವನ್ನು ಹೊಂದಿದಳು ಎಂದ ಮೇಲೆ, ಅಲ್ಪರಾದ ಜೀವರಾಶಿಗಳಿಗೆ ಆ ಅಪಾರಮಹಿಮನ ಮಹಿಮಾವಿಶೇಷಗಳು ಮೂರು ಲೋಕಗಳಲ್ಲ ಅರಿಯಲು ಸಾಧ್ಯವಾಗುವುದೇ ? ಅಂದರೆ, ಎಂದೆಂದಿಗೂ ಇಲ್ಲವೆಂತ ತಾತ್ಪರ್ಯ. ||೩೨||

**ಪ್ರತಿಪದಾರ್ಥ :-**

**ಪ್ರಳಯಜಲಧಿಯೊಳುಳ್ಳ** = ಮಹಾಪ್ರಳಯ ಸಮುದ್ರಯಲ್ಲಿ ಇರುವ **ನಾವೆಯು** = ದೋಣಿಯು (ಹಡಗೂ ಆಗಬಹುದು) **ಹೊಲಬುಗಾಣದೆ** = ದಡವನ್ನು ಕಾಣದೆ **ಸುತ್ತುವಂದದಿ** = ಗಿರಗಿರನೆ ಸುತ್ತುತ್ತಿರುವಂತೆ, **ಜಲರುಹೇಕ್ಷಣನ** = ಕಮಲದಳದಂತೆ ನೇತ್ರವುಳ್ಳ ಶ್ರೀ ಪರಮಾತ್ಮನ **ಅಮಲ** = ನಿರ್ದೋಷವಾದ (ಅತ್ಯಂತ ಶುದ್ಧವಾದ) **ಗುಣರೂಪಗಳ** = ಗುಣ

ಸಮೂಹಗಳೇನು, ಅನಂತಾನಂತ ರೂಪ ವಿಶೇಷಗಳೇನು ಇವುಗಳನ್ನು **ಚಿಂತಿಸುತ**=ಮನಸ್ಸಿನಲ್ಲಿ ಧ್ಯಾನಮಾಡುತ್ತಾ, **ನೆಲೆಯ ಕಾಣದೆ**=ಪಾರುಗಾಣದೆ (ಅಂತವನ್ನು ಸಾಕಲ್ಯೇನ ಅರಿಯಲು ಸಾಧ್ಯವಾಗದೆ) **ಮಹಲಕುಮಿ**=ಮಹಾಲಕ್ಷ್ಮೀದೇವಿ **ಚಂಚಲವನೈದಿಹಳು**=ಮನಸ್ಸಿಗೆ ವಿಸ್ಮಯತೋಚದೆ ದಿಗ್ಭ್ರಮೆಯನ್ನು ಹೊಂದಿರುವಳು. **ಅಲ್ಪಜೀವರಿಗೆ**=ಇಂತಿರಲಾಗಿ ಅಲ್ಪಶಕ್ತಿ, ಅಲ್ಪಜ್ಞಾನವುಳ್ಳ ಸಾಮಾನ್ಯ ಜೀವರಿಗೆ **ಈ ಜಗತ್ರಯದಿ**=ಬ್ರಹ್ಮಾಂಡಗತ ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳೆಂಬ ಮೂರು ಲೋಕಗಳಲ್ಲಿ **ಇವನ ಮಹಿಮೆಗಳು**=ಶ್ರೀಪರಮಾತ್ಮನ ಅಪಾರ ಮಹಿಮಾವಿಶೇಷಗಳು **ಅಳವಡುವುದೇ**=ಇಷ್ಟೇ ಎಂದು ನಿಶ್ಚಯಿಸಲು ಸಾಧ್ಯವಾಗುವುದೇ ? ಅಂದರೆ, ಎಂದೆಂದಿಗೂ ಸಾಧ್ಯವೇ ಇಲ್ಲ ಎಂತ ತಾತ್ಪರ್ಯ. ॥೩೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀ ರಮಾದೇವೇರು ಶ್ರೀ ಪರಮಾತ್ಮನ ಗುಣಗಳನ್ನು ಅಂತ ಕಾಣಲಿಲ್ಲ ಎಂಬುವುದಕ್ಕೆ ಸದೃಷ್ಟಾಂತರೂಪದಿಂದ ಹೇಳತಾರೆ.

ಪ್ರಳಯಜಲಧಿಯೊಳುಳ್ಳ — ಮಹಾಪ್ರಳಯೋದಕದಲ್ಲಿ ಇರತಕ್ಕ, ನಾವೆಯು—ಪಡವಿಯು ಅಂದರೆ ದೋಣಿಯು, ಹೊಲಬುಗಾಣದೆ- ಉಭಯಪಾರ್ಶ್ವದಲ್ಲಿ ದಡವನ್ನು ಕಾಣದೆ, ಸುತ್ತುವಂದದಿ- ಸುತ್ತುತ್ತಾ ಇರೋಪಾದಿಯಲ್ಲಿ, ಜಲರುಹೇಕ್ಷಣನ - ಕಮಲದಳದೋಪಾದಿಯಲ್ಲಿ ನೇತ್ರಗಳುಳ್ಳ ಶ್ರೀ ಪರಮಾತ್ಮನ, ಅಮಲ ಗುಣ ರೂಪಗಳ-ನಿರ್ದೋಷಗಳಾದ ಗುಣ ರೂಪಗಳೆಂಬ ಪ್ರಳಯೋದಕದಲ್ಲಿ, ಚಿಂತಿಸುತ-ಮನವೆಂಬೋ ನಾವೆಯನ್ನು ಈ ಪ್ರಳಯೋದಕ ಸಮುದ್ರದಲ್ಲಿ ಪ್ರವೇಶಮಾಡಿಸಿ, ದಡಾ

ಕಾಣೋ ಉದ್ದಿಶ್ಯ ನಾವೆಯೆಂಬ ಮನಸ್ಸನ್ನ ಸಂಚಾರಮಾಡಿಸುತ್ತಾ, ಎಂದರೆ, ಚಿಂತನಾರೂಪದಿಂದ ಸಂಚಾರಮಾಡಿಸುತ್ತಾ, ನೆಲೆಯ ಕಾಣದೆ- ಶ್ರೀ ಪರಮಾತ್ಮನ ಗುಣಸಮುದ್ರಕ್ಕೆ ನೆಲೆಯನಸತಕ್ಕ ಉಭಯಪಾರ್ಶ್ವಗಳ ದಡಗಳ ಕಾಣದಂಥವರಾಗಿ, ಮಹಲಕುಮಿ-ದೇಶತಃ ಸಮರಾಗಿನ್ನು, ಗುಣತಃ ಅಸಮರಾಗಿನ್ನು ಇರುವಂಥಾ ರಮಾದೇವೇರು, ಚಂಚಲವನ್ನೈದಿ ಹಳು- ಆದರ ಮ್ಯಾಲೆ ಮನಸ್ಸಿಗೆ ಒಂದೂ ತೋರದಂತೆ ದಿಗ್ಭ್ರಮೆಯೈದಿ. ಮನಸ್ಸು ಚಪಲ ಹೊಂದೋವರಾಗಿದ್ದಾರೆ. ಹೀಂಗಿರಲಾಗಿ, ಈ ಜಗತ್ರಯದಿ- ವಿದ್ಯಮಾನ ಬ್ರಹ್ಮಾಂಡಗತ ಚತುರ್ದಶಲೋಕಗತ ಬ್ರಹ್ಮಾದಿ ತೃಣಾಂತ ಸಮಸ್ತರಾದ, ಅಸ್ವತಂತ್ರರಾದ, ಅಲ್ಪಜೀವರಿಗೆ-ಅಲ್ಪಜ್ಞಾನವುಳ್ಳ ಜೀವರಿಗೆ, ಆಳವಡುವುದೇನು- ಶ್ರೀ ಪರಮಾತ್ಮನ ಗುಣಗಳ ಆದ್ಯಂತ ಸಿಕ್ಕುವುದೇ ಎಂದರೆ, ಇವನ ಮಹಿಮೆಗಳು- ಇವನ ಮಹಿಮೆಗಳು ಸಿಕ್ಕಲಾರವು. ಇವನ ಮಹಾಮಹಿಮೆಯು ನೋಡೋದಕ್ಕೆ ಸಾಧ್ಯವಾಗಲಾರದು. ಅಪರಿಚ್ಛಿನ್ನ ಗುಣಗಳೆಂತಲೂ, ಅಪಾರವಾದ ಮಹಿಮೆಗಳು ಎಂತಲೂ ತಾತ್ಪರ್ಯ. ॥೩೨॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಭಗವಂತನ ಗುಣ ರೂಪಾದಿ ಮಹಿಮೆಗಳನ್ನು ಸಾಕಲ್ಯೇನ ತಿಳಿಯಲು ಯಾರಿಗೂ ಸಾಧ್ಯವಿಲ್ಲವೆಂಬ ವಿಷಯವನ್ನು ಸದೃಷ್ಟಾಂತವಾಗಿ ಕೈಮುತ್ಯ ನ್ಯಾಯದಿಂದಲೂ ತಿಳಿಸುತ್ತಾರೆ ("ಕೈಮುತ್ಯ ದ್ಯಾಯ"-ವೆಂದರೆ "ಮಹಾ ಗಜಗಳೆಲ್ಲಾ ಗಾಳಿಗೆ ಹಾರುತ್ತಿರುವಾಗ ಗುಂಗಾಡಿನ ಹೆಸರೆಲ್ಲಿ ?"-ಎಂಬ ಗಾದೆಯೆಂತೆ, ಇಂತಿಂಥಾ ಮಹಾತ್ಮರೆಲ್ಲಾ ಹೀಗಾದ ಮೇಲೆ ಇನ್ನು ಆಲ್ಪರ ಪಾಡನ್ನು ಹೇಳುವುದೇನು ?- ಎಂದು ಸ್ಥಾಪಿಸುವುದಕ್ಕೆ- "ಕೈಮುತ್ಯ ನ್ಯಾಯ"- ಎಂದು ಹೆಸರು.)

ಜಗತ್ತೆಲ್ಲವೂ ಪ್ರಳಯೋದಕದಲ್ಲಿ ಮುಣುಗಿರುವಾಗ, ಅದರಲ್ಲಿ ಒಂದು ಹಡಗು ಮಾತ್ರವಿದ್ದರೆ, ಆ ಹಡಗು ದಡವನ್ನು ಕಾಣದೆ, ಹೇಗೆ ನೀರಿನಲ್ಲಿಯೇ

ಇಲ್ಲಿಂದಿಲ್ಲಿಗೆ ಸುತ್ತುತ್ತಿರುವುದೋ, ಅದರಂತೆಯೇ, ಮಹಾಲಕ್ಷ್ಮೀದೇವಿಯರು ಪರಮಾತ್ಮನ ಅಪಾರವಾದ ಗುಣ ರೂಪರಾಶಿಗಳನ್ನು ಕೊನೆಗಾಣದೆ ಅದರಲ್ಲೇ ಲೋಲಾಡುತ್ತಾ ಚಾಂಚಲ್ಯವನ್ನು ಹೊಂದಿರುವರು. ಅಂದ ಮೇಲೆ ಇನ್ನು ಸಾಮಾನ್ಯರಾದ ಇತರ ಜೀವರು ಪರಮಾತ್ಮನ ಗುಣಾದಿ ಮಹಿಮೆಗಳನ್ನು ತಿಳಿಯುವುದೆಂತು ? ॥೩೨॥

**(ಇ) "ಭಾವದರ್ಪಣ ಟೀಕಾ"– ವ್ಯಾಖ್ಯಾನ :–**

ಶ್ರೀ ಲಕ್ಷ್ಮೀದೇವಿಯರಿಗೇ ಸಿಗದೇ ಇದ್ದ ಪರಮಾತ್ಮನ ಗುಣಗಳು ಅಲ್ಪ ಜೀವರಿಗೆ ಸಿಗಬಲ್ಲವೇ ? ಎಂದು ಸದೃಷ್ಟಾಂತ ಹೇಳುತ್ತಾರೆ– **"ಪ್ರಳಯೇತಿ"** ॥೩೨॥

**(ಈ) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–**

ಒಂದು ನೌಕೆಯು ಮಹಾಪ್ರಳಯಸಮುದ್ರದಲ್ಲಿ ಸಿಕ್ಕಾಗ, ತನ್ನ ಗುರಿಯನ್ನು ಕಾಣದೇ ಒಂದೇ ಸಮನೆ ಪರಿಭ್ರಮಿಸುತ್ತಿರುವುದು. ಅದರಂತೆ ಜಲಜಾಕ್ಷನ ನಿರ್ದೋಷವಾದ ಗುಣ ರೂಪರಾಶಿಗಳನ್ನು ಮನಸ್ಸಿನಲ್ಲಿಯೇ ಚಿಂತಿಸುತ್ತಾ, ಆ ಅಪಾರವಾದ ಭಗವಂತನ ಗುಣಸಮುದ್ರದಲ್ಲಿ ಮುಳುಗಿ ಪರಿಮಿತಿಯನ್ನು ಕಾಣಲಾರದವಳಾಗಿ, ಚಾಂಚಲ್ಯವನ್ನು ಹೊಂದಿದಳು. ಅಂದಮೇಲೆ ಅತ್ಯಲ್ಪರಾದ ಜೀವರಿಗೆ ಆ ಪರಮಾತ್ಮನ ಮಹಿಮೆಯು ಎಷ್ಟು ಮಾತ್ರ ತಿಳಿಯುತ್ತದೆ ? ॥೩೨॥

**(ಉ) "ಗುರುಹೃದಯ ಪ್ರಕಾಶಿಕೆ"– ವ್ಯಾಖ್ಯಾನ:—**

ಪ್ರಳಯ ಸಮುದ್ರದಲ್ಲಿರುವ ಹಡಗು, ಹೊಲಬುಗಾಣದೆ ಸುತ್ತುವಂದದಿ ಅಂದರೆ, ಇಂಥಾ ದಿಕ್ಕಿಗೆ ಹೀಗೆ ಕೊನೆಗಂಡು ಹೋಗುತ್ತದೆಂದು ಗೊತ್ತು ಗುರುತೂ ಇಲ್ಲದೇ ಸುಮ್ಮನೆ ಸಂಚಾರ ಮಾತ್ರ ಮಾಡುತ್ತಾ ಇರುವಂತೆ, ಕಮಲನೇತ್ರನಾದ ದೇವರ ನಿರ್ದೋಷ ಗುಣ ರೂಪಗಳನ್ನು ಚಿಂತಿಸುತ್ತಾ,

ಕೊನೆಗಾಣದೆ, ಮಹಾಲಕ್ಷ್ಮಿಯು ಚಂಚಲವನ್ನೈದಿಹಳು, ಎಂದರೆ, ಗುಣ ರೂಪಾದಿಗಳು ಒಟ್ಟು ಇಲ್ಲಿಗೇ ಪೂರ್ತಿ ಎಂದು ಸ್ಥಿರಚಿತ್ತವಿಲ್ಲದ್ದರಿಂದ, ಮತ್ತೂ ನೂತನ ನೂತನ ಗುಣ ಕ್ರಿಯಾದಿಗಳನ್ನು ಕಾಣುತ್ತಾ, ಪೂಜಿಸುತ್ತಲೇ ಇರುವಳೆಂದರ್ಥ. ಹೀಗೆ ಇರುವಲ್ಲಿ, ಈ ಜಗತ್ರಯಗಳಲ್ಲಿರುವ ಅಲ್ಪ ಜೀವರಿಗೆ ಈ ಸ್ವಾಮಿ ಮಹಿಮೆ ತಿಳಿಯಲಸಾಧ್ಯವೆಂದು ಹೇಳತಕ್ಕದ್ದೇನಿದೆ ? ಎಂದರ, ಸಾಕಲ್ಯವಾಗಿ ಶ್ರೀರಮಾದೇವಿಯರೇ ಅರಿಯರು. ಇನ್ನೂ ಮಾನವರು ತಿಳಿಯಲಸಾಧ್ಯವಾದ್ದದ್ದೆಂದು ನಿರೂಪಿಸುತ್ತಾರೆ. ॥೩೨॥

# ಸರ್ವವ್ಯಾಖ್ಯಾನಸಾರಸಂಗ್ರಹ:

ಶ್ರೀ ಪರಮಾತ್ಮನ ಅಪಾರಗುಣರೂಪರಾಶಿಗಳ ಕೊನೆಯನ್ನು ಕಾಣದೇ ಸಾಕಲ್ಯೇನ ಆತನ ಅಗಾಧ ಮಹಿಮಾತಿಶಯಗಳನ್ನು ಇನ್ನೂ ಅರಿಯದಿರುವ ಶ್ರೀ ಲಕ್ಷ್ಮೀದೇವಿಯರ ಸ್ಥಿತಿಯೇ ಇಂತಿರಲಾಗಿ ಅನ್ಯರಾದ ಅಲ್ಪ ಜೀವರಾಶಿಗಳ ಪಾಡೇನು ಎಂದು ಕೈಮುತ್ಯನ್ಯಾಯದಿಂದ ತಿಳಿಸುತ್ತಾರೆ, ಪ್ರಸಕ್ತ ಸಂಧಿಗತ ೩೨ ನೆಯ ಈ ಪದ್ಯದಿಂದ.

(೧) **"ಲೋಕಭರಿತನೋ ರಂಗಾನೇಕಚಂತನೋ"**

—ಎಂದು ಪರಮಪೂಜ್ಯ **ಶ್ರೀ ವಾದಿರಾಜ ಶ್ರೀಮಚ್ಚರಣರು** ತಮ್ಮ ಕೃತಿಯೊಂದರಲ್ಲಿ ಅದ್ಭುತ ಚರಿತ್ರೆಗಳನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ರಂಗನು ಲೋಕಭರಿತನು. ಅಂದರೆ, ಬ್ರಹ್ಮಾಂಡದಲ್ಲಿ ಸರ್ವತ್ರ ವ್ಯಾಪ್ತನಾಗಿ ತುಂಬಿ ಹರಡಿಕೊಂಡಿದ್ದಾನೆ. ಆತನ ಚರಿತ್ರೆ, ಮಹಿಮಾತಿಶಯಗಳು ಅಪಾರ, ಅನಂತಾನಂತ. ಅಗಾಧ ಮಹಿಮಾಸಂಪನ್ನನಾದ ಶ್ರೀಹರಿಯ ಗುಣರೂಪಕ್ರಿಯಾದಿಗಳ ಅಂತವನ್ನು ಸಾಕಲ್ಯೇನ ಅರಿಯಳು ನೀರಜಾಕ್ಷನ ವಕ್ಷಸ್ಥಳ ನಿವಾಸಿಯಾದ ಆ ಮಹಾಲಕ್ಷ್ಮೀದೇವಿ. ಇದನ್ನು ಸುಂದರವಾದ

ದೃಷ್ಟಾಂತದಿಂದ ಹೃದಯಸ್ಪರ್ಶಿಯಾಗುವಂತೆ ವಿವರಿಸುತ್ತಾರೆ. ಭಾವುಕರಾದ ದಾಸರಾಯರು.

(೨) ಮಹಾ ಪ್ರಳಯಕಾಲ. ಎಲ್ಲೆಲ್ಲಿಯೂ ಅಪಾರ ಜಲರಾಶಿ. ಆ ಮಹಾ ಪ್ರಳಯಸಮುದ್ರದಲ್ಲಿ ಸಿಕ್ಕ ನಾವೆಯ ಪರಿಸ್ಥಿತಿ ಏನಾಗ ಬಹುದು ? ಆ ನಾವೆಯು ತನ್ನ ಹೊಲಬನ್ನು ಅಂದರೆ ಗುರಿಯನ್ನು ಕಾಣದೆ, ಇದ್ದಲ್ಲಿಯೇ ಗಿರಗಿರನೆ ಸುಮ್ಮನೇ ಸುತ್ತುತ್ತಿರುವುದು. ಆ ಅಪಾರವಾದ ಪ್ರಳಯ ಜಲಧಿಯ ದಡವನ್ನು (ಅಂತ) ಕಾಣದೇ ಪರಿಭ್ರಮಿಸು ತ್ತಿರುವ ನಾವೆಯಂತಿದ್ದಾರೆ ಶ್ರೀ ಲಕ್ಷ್ಮೀದೇವಿಯರು.

(೩) ಮಹಲಕುಮಿ ಕಮಲದಳಾಯತಾಕ್ಷನ ವಕ್ಷೋನಿವಾಸಿನಿ, ದೇಶತಃ ಹಾಗೂ ಕಾಲತಃ ತನ್ನ ಪ್ರಿಯನಿಗೆ ಸಮಳು. ಆದರೆ ಗುಣತಃ ಅನಂತಾನಂತ ಕೋಟಿಗುಣಗಳಿಂದ ಅವರಳು. ಇಂತು ಶ್ರೀಹರಿಗೆ ಸಮಾ ಸಮಳೆನಿಸಿರುವ ಶ್ರೀರಮಾ ನಿತ್ಯ ಮುಕ್ತಳು ಹಾಗೂ ನಿರ್ವಿಕಾರಳು. ಶ್ರೀಹರಿಗೆ ನಾನಾ ಆಯುಧಗಳಾಗಿ, ಅಂಬರವಾಗಿ, ಆಭರಣಗಳಾಗಿ, ಆಲಯವಾಗಿ, ಛತ್ರ ಚಾಮರ ವ್ಯಜನ ಪರ್ಯಂಕ ರೂಪದಲ್ಲಿ ನಾನಾ ಪ್ರಕಾರ ವಾಗಿ ಶ್ರೀ ಪರಮಾತ್ಮನಿಗೆ ಅತ್ಯಂತ ಸಮೀಪದ ಚರಣ ದಾಸಿಯಾಗಿ ಸೇವಿಸು ತ್ತಿರುವಳು. ಹೀಗಿದ್ದರೂ, ಆ ಭಗದಂತನ ನಿರ್ದೋಷವಾದ ಅನಂತಾನಂತ ಗುಣರಾಶಿಗಳನ್ನು ರೂಪ ಸಮೂಹಗಳನ್ನು, ನಾಮಾವಳಿಗಳನ್ನೂ, ಕ್ರಿಯಾ ವಿಶೇಷಗಳನ್ನು ಮನಸ್ಸಿನಲ್ಲಿ ಚಿಂತಿಸುತ್ತಿದ್ದರೂ, ಇನ್ನೂ ಪಾರುಗಾಣದೆ. ಪ್ರಳಯ ಜಲದಲ್ಲಿ ಸಿಕ್ಕ ನಾವೆಯಂತೆ, ದಿಗ್ಭ್ರಾಂತರಾಗಿದ್ದಾರೆ. ಆತನ ಅನಂತವಾದ, ಅಪಾರ ಗುಣ ಕ್ರಿಯಾದಿಗಳನ್ನು ಸಾಕಲ್ಯೇನ ಅರಿಯಲು ಅಸಮರ್ಥರಾಗಿದ್ದಾರೆ, ಒಂದು ಗುಣ, ಒಂದು ರೂಪ, ಒಂದು ಕ್ರಿಯಾ ವೈಶಿಷ್ಟ್ಯಗಳನ್ನು ಚಿಂತಿಸುತ್ತಿರುವಷ್ಟರಲ್ಲಿಯೇ ಅವರಿಗೆ ಕ್ಷಣಕ್ಷಣಕ್ಕೆ ನಿತ್ಯ ನೂತನವಾಗಿ ಕಾಣಿಸುತ್ತಿದ್ದಾನೆ ಆ ಅಪಾರಮಹಿಮಾಸಾಗರ ! ಪುರಾತನ ಪುರುಷನೂ, ನಿತ್ಯನೂತನನೂ ಅಪಾರಮಹಿಮಾಸಂಪನ್ನನೂ, ಯಾರೂ ಸಾಕಲ್ಯೇನ ಅರಿಯದಂಥ ಅನಂತ ಕಲ್ಯಾಣ ಗುಣಗಣಪೂರ್ಣನೂ ಆದ

ಆ ಪರಮಾತ್ಮನ ಲೀಲಾ ವೈಭವಗಳನ್ನು ಇನ್ನೂ ಹುಡುಕುತ್ತಲೇ ಇದ್ದಾಳೆ ಆ ಲೋಕ ಜನನಿಯಾದ ಮಹಾಲಕುಮಿ, ಅಂತು ಚಿತ್ತಚಾಂಚಲ್ಯವನ್ನು ಈಶ ಕೋಟಿಪ್ರವಿಷ್ಟಳಾದ ಶ್ರೀ ಲಕ್ಷ್ಮೀದೇವಿಯರೇ ಹೊಂದಿದ್ದಾರೆ ಎಂದ ಮೇಲೆ ತದ್ಭಿನ್ನರಾದ ಅಲ್ಪರಾದ ಜೀವರ ಪಾಡೇನು ?

(೪) ಶ್ರೀಹರಿಗೆ ಸಮಾಸಮಳೆನಿಸಿರುವ ಇಂದಿರೆಯು ವಿವೀಕ್ಷಾ, ಕ್ಷರವರ್ಗಕ್ಕೆ ಸೇರಿದ ಬ್ರಹ್ಮಾದಿ ತೃಣಾಂತ ಜೀವರ ವಿಷಯ ತಿಳಿಸುತ್ತಾರೆ. ಜೀವರು ಅಲ್ಪಶಕ್ತಿ, ಅಲ್ಪಜ್ಞಾನವುಳ್ಳವರು. ಅನಾದ್ಯನಂತಕಾಲಕ್ಕೂ ಭಗವದಧೀನರಾಗಿ ಪರಾಧೀನಕರ್ತೃತ್ವವುಳ್ಳ ಜೀವರು ಆ ಜಗದ್ಭರಿತನ ಅಪಾರ ಮಹಿಮೆಗಳನ್ನು ಸಾಕಲ್ಯೇನ ಎಂದಿಗಾದರೂ ತಿಳಿಯಲು ಸಾಧ್ಯವೇ ? ಅಕ್ಷರನಾಮಕಳಾದ ಶ್ರೀ ರಮಾ ಅರಿಯಳು ಎಂದಮೇಲೆ, ಉಳಿದ ಅಲ್ಪ ಜೀವರಿಗ ಶ್ರೀಹರಿಯ ಆಗಾಧ ಮಹಿಮೆಗಳು ಭುವನತ್ರಯಗಳಲ್ಲಿ ವಿದ್ಯಮಾನ ರಾಗಿರುವ ಜೀವರಿಗೆ ಎಂದಿಗಾದರೂ ಅಳವಡುವುದೇ ? ಎಂದು **ಕೈಮುತ್ಯ ನ್ಯಾಯ** ದಿಂದ ತಿಳಿಸುತ್ತಾರೆ. ॥೩೨॥

## ಪದ್ಯ (೩೩)

**ಮೂಲ :-**

**ಶ್ರೀನಿಕೇತನ ಸಾತ್ತ್ವತಾಂಪತಿ ।**
**ಜ್ಞಾನಗಮ್ಯ ಗಯಾಸುರಾರ್ದನ ।**
**ಮೌನಿಕುಲಸನ್ಮಾನ್ಯ ಮಾನದ ಮಾತುಳಧ್ವಂಸಿ ॥**
**ದೀನಜನಮಂದಾರ ಮಧುರಿಪು ।**
**ಪ್ರಾಣದ ಜಗನ್ನಾಥವಿಠ್ಠಲ ।**
**ತಾನೆ ಗತಿಯೆಂದನುದಿನದಿ ನಂಬಿದವರನು ಪೊರೆವ॥ ॥೩೩॥**

**ಅವತರಣಿಕೆ :-**

ಶರಣಾಗತರಕ್ಷಕನಾದ, ತನ್ನನ್ನು ನಂಬಿದ ಭಕ್ತ ಜನರನ್ನು ಪೊರೆವ, ತಮ್ಮ ಉಪಾಸ್ಯಮೂರ್ತಿ ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ ಜಗನ್ನಾಥವಿಠ್ಠಲನ ಗುಣಾವಳಿಗಳನ್ನು ಕೊಂಡಾಡುತ್ತಾ, ಸಂಧಿಗತ ಕೊನೆಯ ಈ ಪದ್ಯದಿಂದ ಪ್ರಸಕ್ತ ಸಂಧಿಯನ್ನು ಉಪಸಂಹಾರ ಮಾಡುತ್ತಾರೆ "**ಶ್ರೀನಿಕೇತನ**" ಎಂಬ ಪದ್ಯದಿಂದ. ಶ್ರೀ ಲಕ್ಷ್ಮೀದೇವಿಯರನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿದವನಾಗಿ, ಸಜ್ಜನರಿಗೆ ಈಶನಾದ, ಜ್ಞಾನಗಮ್ಯನಾದ ಗಯಾಸುರನನ್ನು ಸಂಹರಿಸಿದ, ಜ್ಞಾನಿಗಳ ಕುಲದಿಂದ ಸಂಸ್ತುತ್ಯಮಾನನಾದ ನಿಜಭಕ್ತರಿಗೆ ಅನುಗ್ರಹಪ್ರದನಾದ, ಕಂಸಾರಿಯಾದ, ಶರಣಾಗತ ಜನ ಮಂದಾರನಾದ, ಮಧುನಾಮಕ ದೈತ್ಯಾರಿಯಾದ, ಸರ್ವಜೀವರ ಪ್ರಾಣಾಧಾರಕನಾದ ಜಗನ್ನಾಥವಿಠ್ಠಲ ಸ್ವಾಮಿಯು, ತನ್ನನ್ನೇ ಗತಿಯೆಂದು ನಂಬಿದ ಪ್ರಣತರನ್ನು ನಿರಂತರದಲ್ಲಿ ಬಿಡದೆ ಸಂರಕ್ಷಿಸುವನು. ||೩೩||

**ಪ್ರತಿಪದಾರ್ಥ :-**

**ಶ್ರೀನಿಕೇತನ** = ಶ್ರೀ ಲಕ್ಷ್ಮೀದೇವಿಯರನ್ನು ತನ್ನ ವಕ್ಷಸ್ಥಳದಲ್ಲಿ ಸದಾ ಧರಿಸಿಕೊಂಡಿರುವ (ಸರ್ವತ್ರದಲ್ಲಿ ರಮಾಂತರ್ಗತನಾಗಿರುವ), **ಸಾತ್ತ್ವತಾಂಪತಿ** = ಸಜ್ಜನರಿಗೆ ಸ್ವಾಮಿಯಾದ **ಜ್ಞಾನಗಮ್ಯ** = ಸಮೀಚೀನವಾದ ಜ್ಞಾನದಿಂದಲೇ ಹೊಂದಲು ಶಕ್ಯನಾದ (ಜ್ಞಾನದಿಂದ ಪ್ರತ್ಯಕ್ಷನಾಗತಕ್ಕವ), **ಗಯಸುರಾರ್ದನ** = ಗಯನಾಮಕನಾದ ದೈತ್ಯನನ್ನು ಸಂಹರಿಸಿದ, **ಮೌನಿಕುಲಸನ್ಮಾನ್ಯ** = ಜ್ಞಾನಿಗಳಾದ ತಪಸ್ವಿಗಳಿಂದ ಚೆನ್ನಾಗಿ ಸನ್ಮಾನಿತನಾದ (ಗೇಗೀಯಮಾನನಾದ), **ಮಾನದ** = ತನ್ನ ಭಕ್ತವರ್ಗಕ್ಕೆ ಗೌರವಪ್ರದನಾದ, **ಮಾತುಳಧ್ವಂಸಿ** = ತನ್ನ ಸೋದರಮಾವನಾದ ಕಂಸಾಸುರನನ್ನು ಸಂಹರಿಸಿದ, **ದೀನಜನಮಂದಾರ** = ಶರಣಾಗತರಾದವರಿಗೆ ಅವರವರ ಯೋಗ್ಯತಾನುಸಾರ ಇಷ್ಟಪ್ರದನಾದ ಕಲ್ಪವೃಕ್ಷದಂತಿರುವ, **ಮಧುರಿಪು** = ಮಧು ಎಂಬ ರಾಕ್ಷಸನನ್ನು ಸಂಹರಿಸಿದ, **ಪ್ರಾಣದ** = ಸಮಸ್ತ ಜೀವರಿಗೂ ಪ್ರಾಣಪ್ರದನಾದ

(ಜೀವರಿಗೆ ಲಿಂಗಭಂಗಾನಂತರ ಸ್ವರೂಪಾಭಿವ್ಯಕ್ತಿ ಮಾಡಿ ಕೊಡುವ), **ಜಗನ್ನಾಥವಿಠ್ಠಲ**=ಶ್ರೀ ಜಗನ್ನಾಥ ವಿಠ್ಠಲನಾಮಕನಾದ (ದಾಸರಾಯರ ಬಿಂಬ ಮೂರ್ತಿಗೆ ಅರ್ಪಣೆ), **ತಾನೇ ಗತಿಯೆಂದು**=ಆ ಪರಮಾತ್ಮನೇ ಗತಿ ಎಂಬುದಾಗಿ (ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ), **ಅನುದಿನದಿ**=ಪ್ರತಿ ದಿವಸದಲ್ಲಿಯೂ (ನಿರಂತರವಾಗಿ), **ನಂಬಿದವರನು**= ತದೇಕಚಿತ್ತರಾಗಿ ಭಕ್ತಿಯಿಂದ ನಂಬಿದಂಥ ಸಜ್ಜನರನ್ನು **ಪೊರೆವ**=ಸಂರಕ್ಷಿಸುವನು. ॥೩೩॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇಂಥಾ ಶ್ರೀ ಪರಮಾತ್ಮನ್ನ ನಂಬಿದವರನ್ನ ಶ್ರೀದೇವರು ಸಂರಕ್ಷಣ ಮಾಡುತಾನೆ ಎಂತ ಹೇಳತಾರೆ.

ಶ್ರೀನಿಕೇತನ- ಶ್ರೀರಮಾದೇವೇರೇ ಮನಿಯಾಗಿ ಉಳ್ಳವಾ ಎಂದರೆ, ಸರ್ವತ್ರದಲ್ಲಿ ರಮಾಂತರ್ಗತನಾಗಿ ಇರತಕ್ಕವ, ಸಾತ್ತ್ವತಾಂಪತಿ-ಸಜ್ಜನರಿಗೆ ಸ್ವಾಮಿಯಾದವ, ಜ್ಞಾನಗಮ್ಯ-ದಿವ್ಯ ಜ್ಞಾನದಿಂದ ಪ್ರತ್ಯಕ್ಷನಾಗತಕ್ಕವ, ಗಯಾಸುರಾರ್ದನ- ಗಯಾನಾಮಕ ದೈತ್ಯನ್ನ ಸಂಹಾರಮಾಡಿದವ, ಮೌನಿಕುಲಸನ್ಮಾನ್ಯ- ಬಹಿರ್ಲೋಕವಾರ್ತಾದಲ್ಲಿ ಇಷ್ಟವಿಲ್ಲದೇ ಪರಮಾತ್ಮನ ವಿಷಯಕವಾದ ವಾರ್ತಾದಲ್ಲಿ ದೃಷ್ಟಿಯಿರುವ ಜ್ಞಾನಿಗಳಿಂದ ಛಂದಾಗಿ ಸರ್ವೋತ್ತಮನೆಂದು ಮಾನ್ಯನಾದವ, ಮಾನದ-ತನ್ನ ಭಕ್ತರನ್ನ ತನ್ನ ವೈಕುಂಠಲೋಕದಲ್ಲಿ ಇಟ್ಟು ಮಾನಮಾಡತಕ್ಕವ, ಪೂಜ್ಯಸ್ಥಾನವಾದ ವೈಕುಂಠಲೋಕ ಕೊಡತಕ್ಕವ, ಮಾತುಳಧ್ವಂಸಿ-ತನ್ನ ಸೋದರಮಾವನ್ನ ಸಂಹಾರಮಾಡಿದವ, ದೀನಜನಮಂದಾರ- ತನಗೆ ಶರಣಾಗತರಾದವರಿಗೆ ಯೋಗ್ಯತಾನುಸಾರ ಇಷ್ಟಾರ್ಥಗಳ ಕೊಡತಕ್ಕ ಕಲ್ಪವೃಕ್ಷಸದೃಶನಾದವ,

ಮಧುರಿಪು-ಮಧುನಾಮಕ ದೈತ್ಯನಿಗ ಶತ್ರುವಾದವ, ಪ್ರಾಣದ- ಜೀವರಿಗೆ ಲಿಂಗ ಭಂಗ ಐದಿಸಿ, ಸ್ವರೂಪವ್ಯಕ್ತಿ ಮಾಡಿಕೊಡತಕ್ಕವ, ಮತ್ತು ಪ್ರಾಣ ದೇವರ ದ್ವಾರಾ ಮೋಕ್ಷ ಕೊತಕ್ಕವ, ಜಗನ್ನಾಥವಿಠ್ಠಲ-ಜಗತ್ತಿಗೆ ಸ್ವಾಮಿ ಯಾಗಿ, ವಿಠ್ಠಲಶಬ್ದವಾಚ್ಯ ಶ್ರೀ ಪರಮಾತ್ಮನ್ನ, ತಾನೇ ಗತಿಯೆಂದು- ಆತನೇ ಗತಿಪ್ರದನೆಂದು, ಅನುದಿನದಿ- ಪ್ರತಿ ದಿನದಲ್ಲೂ ನಂಬಿದವರನು- ನಂಬಿ ಇರತಕ್ಕಂಥಾ ಮುಕ್ತಿಸ್ವರೂಪರಾದ ಭಕ್ತರನ್ನು, ಪೊರೆವ-ತನ್ನ ಲೋಕವಾದ ವೈಕುಂಠಾದಿಲೋಕಗಳಲ್ಲಿ ಇಟ್ಟು ಸಂರಕ್ಷಣ ಮಾಡೋವನಾಗ ತಾನೆ. ತನ್ನ ದ್ವೇಷಿಗಳನ್ನು ಅವರಿಗೆ ಯೋಗ್ಯವಾದ ಲೋಕಗಳಲ್ಲಿಟ್ಟು ಸಂರ ಕ್ಷಣರೂಪವಾದ ದುಃಖಾದಿಗಳನ್ನು ಕೊಡತಾ ಇರತಾನೆ. ಆದಕಡಿಯಿಂದ ಸರ್ವ ವಿಷಯದಿಂದಲೂ ಶ್ರೀ ಪರಮಾತ್ಮ ಸರ್ವೋತ್ತಮನೆಂದು ತಿಳಿದು, ಉಪಾಸನಾ ಮಾಡಬೇಕೆಂದು ತಾತ್ಪರ್ಯ.

**ವಿಶೇಷಾರ್ಥ :-**

ಪರಮಾತ್ಮನ ಪಾದ ಸೇರತಕ್ಕವರಿಗೆ ತ್ರಿವಿಧಜ್ಞಾನ ಬೇಕು. ಅದು ಹೊರತು ಭಗವತ್ಸಂದರ್ಶನವಾಗೋದಿಲ್ಲ. ಆ ತ್ರಿವಿಧವು ದಾವುದೆಂದರೆ-

(೧) ಆಪ್ತ ಜ್ಞಾನ (೨) ಮಿಶ್ರ ಜ್ಞಾನ (೩) ದ್ವೇಷಜ್ಞಾನ. ಇವು ಮೂರೂ ಇರಬೇಕು. ಯಾವುದರಲ್ಲಿ ಎಂದರೆ, ಪರಮಾತ್ಮನಲ್ಲಿ ಆಪ್ತಜ್ಞಾನವಿರಬೇಕು. ಮಿಶ್ರಜ್ಞಾನ ಎಂದರೆ, ಉದಾಸೀನ ಜ್ಞಾನ ಲಾಭ ನಷ್ಟಗಳಲ್ಲಿ ಉದಾಸೀನ ಇರಬೇಕು. ಸ್ರಕ್ಚಂದನವನಿತಾದಿ ವಿಷಯುಗಳಲ್ಲಿ ದ್ವೇಷಜ್ಞಾನ ಇರಬೇಕು. ಇವು ಮೂರು ಹೊರ್ತು ಮೋಕ್ಷವಾಗಲಾರದು. ಆದ್ದರಿಂದ ತ್ರಿಗುಣಕಾರ್ಯಗಳು ಇವು. ತ್ರಿಗುಣಗಳನ್ನು ತತ್ಕಾರ್ಯಗಳನ್ನು ಈ ರೀತ್ಯಾ ಪರಮಾತ್ಮನ ಸೇವಾದಲ್ಲಿ ಅರ್ಪಿಸಬೇಕು. ಸತ್ತ್ವಗುಣದ ಜ್ಞಾನ ಆಪ್ತಜ್ಞಾನ. ರಜೋಗುಣದ ಉದಾಸೀನ. ತಮೋಗುಣದ ಜ್ಞಾನ ದ್ವೇಷ. ಈ ಪ್ರಕಾರ ತ್ರಿವಿಧ. ಈ ತ್ರಿಗುಣಗಳನು ಮನೋದ್ವಾರಾ ಪ್ರಕಾರಾಂತರ ತಿರುಗಿಸಿ ಸಾರ್ಥಕ್ಯ ಮಾಡಿಕೋಬೇಕು. ಇದರಂತೆ ಅನುಷ್ಠಾನ ಮಾಡ ಬೇಕು.

**ಪಂಚತನ್ಮಾತ್ರಾ ಸಂಧಿಯಲ್ಲಿ ಮುಖ್ಯವಾದ ವಿಚಾರ ವಿಷಯಗಳು :-**

(೧) ಶ್ಲೋಕ ೫-ಶರೀರ ಚತುಷ್ಟಯದಲ್ಲಿ ಹಂಸಮಂತ್ರ

(೨) ಶ್ಲೋಕ ೬-ಶಿರಗಳೈದೆರಡು.

(೩) ಶ್ಲೋಕ ೧೫-ಕಾಲಮೃತ್ಯು. ಅಪಮೃತ್ಯುರೋಗ.

(೪) ಶ್ಲೋಕ ೨೪-ಮಾರ್ಕಾಂಡೇಯ ಪ್ರಳಯ ವಿಚಾರ.

(೫) ಶ್ಲೋಕ ೨೫-ಅನಂತಾನಂತ ಬ್ರಹ್ಮಾಂಡ ವಿಚಾರ. ॥೩೩॥

**॥ ಇಂತು ಶ್ರೀಮತ್ಸತ್ಯಪರಾಯಣತೀರ್ಥ ಕರಕಮಲಸಂಜಾತ**
**ಶ್ರೀಮತ್ಸಂಕರ್ಷಣತೀರ್ಥ ವಿರಚಿತಾಯಾಂ**
**ಶ್ರೀಮದ್ಧರಿಕಥಾಮೃತಸಾರ**
**ಕನ್ನಡ ಭಾಷಾ ಟೀಕಾಯಾಂ**
**ಪಂಚತನ್ಮಾತ್ರಸಂಧಿ ವ್ಯಾಖ್ಯಾನಂ ಸಂಪೂರ್ಣಂ ॥**

**॥ ಶ್ರೀ ಮಧ್ವೇಶಾರ್ಪಣಮಸ್ತು ॥**

(೨) **"ಭಾವಪ್ರಕಾಶಿಕೆ"-ವ್ಯಾಖ್ಯಾನ :-**

ಸಂಧಿಯನ್ನು ಸಮಾಪನ ಮಾಡುತ್ತಾ, ಪರಮಾತ್ಮನನ್ನು ಸ್ತುತಿಸಿ,

ಇಂತಹ ಪರಮಾತ್ಮನನ್ನು ನಂಬಿದವರನ್ನು ಶ್ರೀಹರಿಯು ಸಂರಕ್ಷಿಸವನೆಂದು ಹೇಳುತ್ತಾರೆ–

ಶ್ರೀ ಲಕ್ಷ್ಮೀದೇವಿಯರನ್ನು ಸರ್ವದಾ ವಕ್ಷಸ್ಥಳದಲ್ಲಿ ಇಟ್ಟುಕೊಂಡಿರುವುದರಿಂದ ಶ್ರೀನಿಕೇತನ ಹೆಸರುಳ್ಳವನು. ಯಾದವಕುಲಕ್ಕೆ ಸೇರಿದ ಸಾತ್ವತಕುಲದಲ್ಲಿ ಅವತಾರಮಾಡಿದುದರಿಂದ ಸಾತ್ವತಾಂಪತಿ ಎಂದು ಹೆಸರು. ಅಥವಾ ಸಾಧುಜನರಿಗೆ ಸ್ವಾಮಿಯಾದುದರಿಂದಲೂ ಸಾತ್ವತಾಂಪತಿ ಎಂದು ಹೆಸರು. ಪರಮಾತ್ಮನನ್ನು ಸೇರಬೇಕಾದರೆ ಜ್ಞಾನದಿಂದಲೇ ಸಾಧ್ಯವಾದುದರಿಂದ ಜ್ಞಾನಗಮ್ಯನೆಂದರು. ಗಯಾ ಎಂಬ ಅಸರನನ್ನು ಸಂಹರಿಸಿ, ಪುಣ್ಯಕರವಾದ ಗಯಾಕ್ಷೇತ್ರವನ್ನು ರಚಿಸಿದವನು. ಮುನಿಕುಲಜನದಿಂದ ಸನ್ಮಾನವನ್ನು ಹೊಂದುವವನು–ತಾನು ಈ ಋಷ್ಯಾದಿಗಳಿಗೆ ಮರ್ಯಾದಾರ್ಥವಾಗಿ ಸನ್ಮಾನವನ್ನು ಮಾಡುವನು. ತನ್ನ ಸೋದರಮಾವನಾದ ಕಂಸನನ್ನು ಸಂಹರಿಸಿ, ಯಾದವರನ್ನು ಕಾಯ್ದವನು. ದೀನಜನರಿಗೆ ಕಲ್ಪವೃಕ್ಷದಂತೆ ಇರುವನು. ಮಧು ಎಂಬ ಮಹಾದೈತ್ಯನನ್ನು ಕೊಂದವನು. ಸರ್ವರಿಗೂ ಪ್ರಾಣದಾತನು. ಇಂತಹ ಬಿಂಬರೂಪಿಯಾದ ಶ್ರೀ ಜಗನ್ನಾಥವಿಠ್ಠಲನನ್ನು "ನೀನೇ ಗತಿ" ಎಂದು ಯಾರು ದೃಢವಾಗಿ ನಂಬಿರುವರೋ, ಅವರನ್ನು ಸ್ವಾಮಿಯು ಸಂರಕ್ಷಣೆ ಮಾಡಿಯೇ ಮಾಡುವನು. ॥೩೩॥

**॥ ಇಂತು ಶ್ರೀ ಪದ್ಮನಾಭದಾಸ ವಿರಚಿತ– "ಭಾವಪ್ರಕಾಶಿಕೆ" ಎಂಬ ವ್ಯಾಖ್ಯಾನದಲ್ಲಿ "ಪಂಚತನ್ಮಾತ್ರಾಸಂಧಿ" ಎಂಬ ೭ನೆಯ ಸಂಧಿಯು ಸಮಾಪ್ತವು ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

**(೩) "ಭಾವದರ್ಪಟೀಕಾ" ವ್ಯಾಖ್ಯಾನ :–**

**ಶ್ರೀ ನಿಕೇತನೇತಿ ॥ ಶ್ರೀ ಲಕ್ಷ್ಮೀಗೆ ಆಶ್ರಯನಾದವನು, ಯಾದವ**

ಪತಿಯು. ಜ್ಞಾನಿಗಳಿಂದ ಪ್ರಾಪ್ಯನು. ಗಯಾಸುರಮರ್ದನನು. ಮನನ ಶೀಲರಾದವರಿಂದ ಮಾನ್ಯನು. ಕಂಸ ನಾಶಕನು. ಭಕ್ತಜನ ಕಲ್ಪತರುವು. ಮಧುಮಥನನು. ಶ್ರೀ ಲಕ್ಷ್ಮಿಗೂ ಮುಖ್ಯ ಪ್ರಾಣನಿಗೂ ಇಷ್ಟದನು. ಹೀಗೆ ತಿಳಿದವರನ್ನು ಸಂರಕ್ಷಿಸುವನು. ॥೩೩॥

**॥ ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸರಾಜ**

**ವಿರಚಿತ ಶ್ರೀ ಮದ್ಧರಿಕಥಾಮೃತಸಾರಸ್ಯ**

**ಭಾವದರ್ಪಣ ಟೀಕಾಯಾಂ**

**ಕಮಲಾಪತಿದಾಸ ಹೃದ್ಗತೇನ ಶ್ರೀಹರಿಣಾಕೃತಾಯಾಂ**

**ಪಂಚತನ್ಮಾತ್ರಾಸಂಧಿಃ ಸಮಾಪ್ತಃ॥**

॥ ಶ್ರೀಕೃಷ್ಣಾರ್ಪಣಮಸ್ತು ॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ):–

**॥ ಶ್ರೀನಿಕೇತನ "–ಇತಿ ॥ ಸಾತ್ವತಾಂಪತಿ**–॥ಓಂ॥ ಯದಿಂದ್ರ ಪ್ರಾಗ ಪಾಗುದ ಙ್ನ್ಯಗ್ವಾ ಹೂಯಸೇನೃಭಿಃ ॥ ಸಿಮಾ ಪುರೂ ನೃಪತೋ ಅಸ್ಯಾನವೇಸಿ ಪ್ರಶರ್ಧತುರ್ವಶೇ ॥ಓಂ॥ ಸತ್ವಂ–ಬಲಮ್ । **ತದ್ವಂತಃ** ಯಾದವಾಃ ಸಾತ್ವತಾಃ । ತತ್ಪತಿಃ ॥ **ಜ್ಞಾನಗಮ್ಯ**– ॥ಓಂ॥ ಪ್ರಪಥೇ ಸತ್ಯಃ ಸೋ ಅಸ್ಯಮಹಿಮಾ ಗೃಣೇ ಶವೋ ಯಜ್ಞೇಷು ವಿಪ್ರರಾಜ್ಯೇ ॥ ಇಂದ್ರಮಿದ್ದೇವತಾತಯ ಇಂದ್ರಂ ಪ್ರಯತ್ಯಧ್ವರೇ ॥ಓಂ॥ ಜ್ಞಾನಂ ಜ್ಞಾನಾ ನಂದಾದಿ ಮಹಾತ್ಮ್ಯಮ್ । ತೇನ ಗಮ್ಯೋಯುಕ್ತಃ ಅಬಾಧಿತ ಮಹಾತ್ಮ್ಯಃ **ಮಾನದ**– ಓಂ॥ ಸ್ತುವತೋ ಅದ್ರಿವಃ । ಋತಾದಿಯರ್ಮಿ ತೇ ಧಿಯಮ್ ಮನೋಯುಜಂ ಈ ಹತ್ವಾ ಸಧಮದ್ಯಾಯು ಜಾನಃ ಸೋಮಃ ಪೀತಯೇ

ಹರೀ ಇಂದ್ರಃ ॥ಓಮ್॥ ಮಾನಂ ಜ್ಞಾನಂ ದದಾತಿ ಇತಿ ಮಾನದಃ ॥ **ಮಾನ್ಯಃ**– ॥ಓಮ್॥ ಪ್ರತದ್ವಸು ಅಭಿಸ್ವರ ಅಭಿಸ್ವರಂತು ಯೇ ತವ ರುದ್ರಾಸಃ ಸಕ್ಷತ ಶ್ರಿಯಂ ಉತೋ ಮರುತ್ವತೀರ್ವಿಶೋ ಅಭಿಪ್ರಿಯಃ ॥ಓಮ್॥ ವಾಯ್ವಾದಿಭಿಃ ಮಾನ್ಯತೇ ಇತಿ ಮಾನ್ಯಃ॥ ಮಾನ–ಪೂಜಾಯಾಮ್ ॥ **ಪ್ರಾಣದಃ**-॥ಓಮ್॥ ಅಧೀಭಿ ಶುವಂ ದಧಿ ಯುಗ್ರೋ ರನ್ನಪಃ ನ್ಯರ್ಬುದಸ್ಯ ವಿಷ್ಟನಂ ವರ್ಷಾಣಂ ಬೃಹತಸ್ತಿರ ಸ್ಕೃಷೇ ತದಿಂದ್ರ ಪೌಲಸ್ಯಮ್ ॥ಓಮ್॥ ಪ್ರಕೃಷ್ಟಮನೋನನಂ ಗಮನಂ–ನದ್ಯಾದೀನಾಂ ಸಮುದ್ರಗಮನಂ– ತದ್ ದದಾತಿ ಇತಿ ॥ ಯದ್ವಾ ಬಹು ಸಂಖ್ಯಾಕ ಯೋನಿಷು ಗಮನಂ ಪ್ರಾಣಃ॥ ತತ್‌ದ್ಯತಿ ಖಂಡಯತಿ ಇತಿ ತಥೋಕ್ತಃ ॥ಓಮ್॥॥೩೩॥

**॥ ಇತಿ ಶ್ರೀಮದ್ವಿದ್ವಚ್ಚಕ್ರವರ್ತಿ ಶ್ರೀಮಜ್ಜಗನ್ನಾಥದಾಸ ವಿರಚಿತ ಹರಿಕಥಾಮೃತಸಾರ ಟೀಕಾಯಾಂ ಸೋದಾಧಿಪಾನುಗ್ರಹಿ ಶ್ರೀನಿವಾಸಾರ್ಯಸುತ ವಾದಿರಾಜ ವಿರಚಿತಾಯಾಂ ವ್ಯಾಸದಾಸಸಿದ್ಧಾಂತ ಕೌಮುದ್ಯಾಂ ಪಂಚತನ್ಮಾತ್ರಾಸಂಧಿಃ ಸಮಾಪ್ತಃ ॥**

॥ ಶ್ರೀ ಹಯಗ್ರೀವಾರ್ಪಣಮಸ್ತು ॥

**ಕನ್ನಡಾರ್ಥ :**

ಮುಕ್ತಾಮುಕ್ತನಿಯಾಮಕನೂ, ಜ್ಞಾನಗಮ್ಯನೂ ಆದ ಶ್ರೀ ಜಗನ್ನಾಥವಿಠ್ಠಲರೂಪಿ ಶ್ರೀಹರಿಯನ್ನು–"ನೀನೇ ಗತಿ"–ಎಂದು ನಂಬಿ ಭಜಿಸುವವರನ್ನು ಆ ಭಗವಂತನು ಸದಾ ಸರ್ವರೀತಿಗಳಲ್ಲಿಯೂ ಸಂರಕ್ಷಿಸುವನು.

"ಸಾತ್ವತಾಂಪತಿ, ಜ್ಞಾನಗಮ್ಯ,—ಮಾನ್ಯ—ಮಾನದ—ಪ್ರಾಣದ-ಈ ನಾಮಗಳ ಅರ್ಥವನ್ನು ಬೃಹತೀ ಋಙ್ಮಂತ್ರಗಳು ವಿವರಿಸುವುವು.

(೧) **ಸಾತ್ವತಾಂಪತಿ**— ಸತ್ವವೆಂದರೆ ಬಲ. ಅಂತಹ ಬಲವಂತರು ಯಾದವರು. ಅವರಿಗೆ ಪತಿ-ಪ್ರಭುವು ಎಂದರ್ಥ.

(೨) **ಜ್ಞಾನಗಮ್ಯ**— ಜ್ಞಾನ-ಜ್ಞಾನಾನಂದ ಮುಂತಾದ ರೂಪವಾದ ಮಹಾತ್ಮ್ಯವು. ಈ ಜ್ಞಾನಾನಂದಾದಿ ರೂಪವಾದ ಮಹಿಮೆಯಿಂದ ಯುಕ್ತನಾಗಿ ಅವುಗಳ ದ್ವಾರಾ ತಿಳಿಯಲ್ಪಡುವವನು. ಅಂದರೆ ಅಬಾಧಿತವಾದ ಜ್ಞಾನಾನಂದಾದಿ ಮಹಿಮನು ಎಂದರ್ಥ.

(೩) **ಮಾನದ**—ಮಾನಂ=ಜ್ಞಾನ. ಜ್ಞಾನಪ್ರದ ಎಂದರ್ಥ.

(೪) **ಮಾನ್ಯ**- ಮಾನ-ಎಂದರೆ ಪೂಜಿಸು ಎಂದರ್ಥ. ವಾಯ್ವಾದಿಗಳಿಂದ ಪೂಜಿತನು ಎಂದು ತಾತ್ಪರ್ಯ.

(೫) **ಪ್ರಾಣದ :**- ಅತಿಶಯದ ಗಮನಕ್ಕೆ ಪ್ರಾಣವೆಂದು ಹಸರು. ಇಂಥ ಪ್ರಾಣ ಗಮನವನ್ನು ಇಟ್ಟು ನದಿಗಳಿಗೆ ಸಮುದ್ರ ಸಂಗಮ ಮಾಡಿಸುವುದರಿಂದ "ಪ್ರಾಣದ" ಅಥವಾ "ಪ್ರಾಣ" ಎಂದರೆ, ಬಹು ಸಂಖ್ಯೆಗಳಿಂದ ಕೂಡಿರುವ ಸುರನರತಿರ್ಯಗಾದಿ ನಾನಾವಿಧ ಯೋನಿಗಳಲ್ಲಿ ಸಂಚರಿಸುವರು- "ಗಮನ" ಎಂಡರ್ಥ. ಇಂಥ ಸುರನರಾದಿ ಯೋನಿಗಮನವನ್ನು ಭಕ್ತರಿಗೆ ತಪ್ಪಿಸುವವನು- ಖಂಡಿಸುವವನು. ಆದುದರಿಂದ "ಪ್ರಾಣದ"-ಎಂದು ಕರೆಯುತ್ತಾರೆ. ॥೩೩॥

**॥ ಇಂತು ಶ್ರೀ ಜಂಬುಖಂಡಿ ವಾದಿರಾಜಾಚಾರ್ಯಕೃತ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ ಎಂಬ ವ್ಯಾಖ್ಯಾನದ ಕನ್ನಡಾರ್ಥಾನುವಾದದಲ್ಲಿ ಸಪ್ತಮಸಂಧಿ- "ಪಂಚತನ್ಮಾತ್ರಾಸಂಧಿ" ಯ ಕನ್ನಾಡಾನುವಾದವು ಪರಿಸಮಾಪ್ತಿಯು॥**

॥ ಶ್ರೀ ಮಧ್ವೇಶಾರ್ಪಣಮಸ್ತು ॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ದೇವರನ್ನು ತಿಳಿವುದು ಅಸಾಧ್ಯವಾದರೆ, ತದ್‌ಜ್ಞಾನ ಹೊರ್ತು ಮೋಕ್ಷವಿಲ್ಲವಾದ್ದರಿಂದ, ಮುಂದೇನು ಗತಿ-ಎಂಬ ಪ್ರಶ್ನೆಗೆ ಆ ಸ್ವಾಮಿಯ ಶರಣಾಗತಿಯೇ ಉಪಾಯವೆಂದು, "ಶ್ರೀನಿಕೇತನ" -ಎಂಬ ಪದದಿಂದ ಬೋಧಿಸುತ್ತಾರೆ. ಲಕ್ಷ್ಮೀನಿಲಯ ಅಂದರೆ, ಲಕ್ಷ್ಮೀದೇವಿಗೆ ತನ್ನ ಉರ ವೆಂಬ ಎದೆಯ ಮೇಲೆ ವಾಸಸ್ಥಾನ ಮಾಡಿಕೊಟ್ಟವನು ಯಾದವರರಸ. ಸಾತ್ವತರೆಂಬ ಪಂಚರಾತ್ರ ಶಾಸ್ತ್ರರೀತ್ಯಾ ಉಪಾಸಕರ ಸ್ವಾಮಿ, ತನ್ನ ಪ್ರಸಾದವೆಂಬ ಅನುಗ್ರಹದಿಂದ ಮಾತ್ರ ಲಭಿಸುವ ಜ್ಞಾನದಿಂದ ದೊರೆಯ ತಕ್ಕವನು. (ಪ್ರಾಪ್ಯನು). ಗಯಾಸುರನೆಂಬ ದೈತ್ಯ ಸಂಹಾರಕನು, ಜ್ಞಾನಿ ಸಮೂಹದಿಂದ ಪೂಜ್ಯ, ಜ್ಞಾನಪ್ರದ. ಕೃಷ್ಣಾವತಾರದಲ್ಲಿ ತನ್ನ ಸೋದರ ಮಾವನಾದ ಕಂಸನನ್ನು ಸಂಹರಿಸಿದವ, (ನಾರದಾದಿಗಳಿಂದ ಕೃಷ್ಣನಾದ ತಾನು ವಿಷ್ಣುವು, ಗೆಲ್ಲುವುದಕ್ಕೆ ಅಸಾಧ್ಯನೆಂದು ತಿಳಿಸಿದಾಗ್ಯೂ. ಗೋಕುಲ ದಲ್ಲೂ, ಮಧುರಾಪುರದಲ್ಲೂ, ಅಸಾಧ್ಯ ಮಹಿಮೆಗಳನ್ನು ತೋರಿಸಿದಾಗ್ಯೂ, ಕಂಸನೂ ಶರಣಾಗತನಾಗಲಿಲ್ಲವಾದ್ದರಿಂದ, ಅಂತಹ ಅಸುರರಿಗೆ ದುಃಖ ಪ್ರದನು ತಾನೆಂದು ತೋರಿಸುವುದಕ್ಕಾಗಿ ಸಂಹರಿಸಿದವನು—ಎಂದು ಅಭಿ ಪ್ರಾಯ). ದೀನಜನಮಂದಾರ-ಶರಣಾಗತರಾದ ಅಕ್ರೂರಾದಿ ಸರ್ವ ಸಜ್ಜನರಿಗೆ ಕಲ್ಪವೃಕ್ಷದಂತೆ ಸಕಲೇಷ್ಟಗಳನ್ನೂ ಕೊಟ್ಟವನು. ಮಧುನಾಮಕ ದೈತ್ಯನನ್ನು ಸಂಹರಿಸಿ, ಬ್ರಹ್ಮದೇವರ ಇಷ್ಟಾರ್ಥ ಕೊಟ್ಟವನು. ಪ್ರಾಣದ- ಎಂದರೆ, ಸಕಲ ಜಗಚ್ಚೇಷ್ಟಾಪ್ರದ ಸ್ವಾಮಿ, ಅಜ್ಞಜನೋದ್ಧಾರಕ ದೇವರು. ನೀನೇ ಗತಿ ಎಂದು ಸದಾ ನಂಬಿದವರನ್ನು ಉರೆ-ಅಂದರೆ ಹೆಚ್ಚಾಗಿ, ಬಹಳ ವಿಧವಾಗಿ ಪೊರೆವ-ರಕ್ಷಿಸುವನೆಂದರ್ಥ. ॥೩೩॥

॥ಇಂತು, "ಗುರುಹೃದಯ ಪ್ರಕಾಶಿಕಾ"- ಎಂಬ ವಾಖ್ಯಾನ ಸಹಿತ ಶ್ರೀ ಹರಿಕಥಾಮೃತಸಾರದಲ್ಲಿ "ಪಂಚತನ್ಮಾತ್ರಾ" ಎಂಬ ಏಳನೆಯ ಸಂಧಿಯು ಸಂಪೂರ್ಣವು ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

# ಸರ್ವವ್ಯಾಖ್ಯಾನಸಾರಸಂಗ್ರಹ :

ಅಪಾರ ಮಹಿಮಾಸಂಪನ್ನನಾದ ಶ್ರೀಹರಿಯ ದಿವ್ಯ ನಾಮಾವಳಿಗಳನ್ನು ಕೊಂಡಾಡುತ್ತಾ, ಶರಣಾಗತ ರಕ್ಷಕನಾದ ಆ ಲಕ್ಷ್ಮೀರಮಣನು ತನ್ನನ್ನೇ ಪರಮಗತಿ ಎಂದು ನಂಬಿರುವ ದೀನ ಜನರನ್ನು ನಿರಂತರದಲ್ಲಿ ಸಂರಕ್ಷಿಸುವನು ಎಂದು **"ಶ್ರೀನಿಕೇತನ"** –ಎಂಬ ಪ್ರಸಕ್ತ ಸಂಧಿಗತ ೩೩ ನೆಯ ಈ ಅಂತ್ಯ ಪದ್ಯದಿಂದ **ಪಂಚತನ್ಮಾತ್ರಾ ಸಂಧಿ** ಎಂಬ ಪ್ರಸಕ್ತ ಸಂಧಿಯನ್ನು ಉಪ ಸಂಹಾರ ಮಾಡುತ್ತಾರೆ.

## (೧) ಶ್ರೀನಿಕೇತನ :–

ಶ್ರೀಹರಿಯು ಶ್ರೀಲಕ್ಷ್ಮೀದೇವಿಗೆ ನಿಲಯನು, ನಿತ್ಯಾವಿಯೋಗಿನಿ ಯೂದ ಆ ಲೋಕಮಾತೆಯನ್ನು ಸದಾ ತನ್ನ ವಕ್ಷಸ್ಥಳದಲ್ಲಿ ಧರಿಸಿದ್ದಾನೆ. ಶ್ರೀವತ್ಸಾಂಕಿತನಾದ ಶ್ರೀಪರಮಾತ್ಮನಿಗೆ **"ಶ್ರೀನಿಕೇತನ"**–ಎಂದು ಹೆಸರು. ಅಂದರೆ ಶ್ರೀ = ಲಕ್ಷ್ಮೀದೇವಿಯರಿಗೆ ನಿಕೇತನ = ಆಲಯ (ಆಶ್ರಯ) ರೂಪ ನಾಗಿದ್ದಾನೆ, ಶ್ರೀಲಕ್ಷ್ಮೀವಿಲಾಸಾಸ್ಪದನು. ಶ್ರೀಲಕ್ಷ್ಮೀಸುಕುಂಕುಮಾಂಕಿತ ಪದನು.

## (೨) ಸಾತ್ತ್ವತಾಂಪತಿ :–

"ಸಾತ್ವತ"ರು ಎಂದರೆ ಯಾದವರು–ಎಂದರ್ಥ. ಅಂತಹ ಯಾದವ ಕುಲಕ್ಕೆ ಒಡೆಯನು. ಅಂದರೆ ಯಾದವವಂಶಾಧಿಪತಿಯಾದ ಶ್ರೀಕೃಷ್ಣ ನೆಂದರ್ಥ, ಮುಕ್ತಿಯೋಗ್ಯಜೀವರಾದವರು "ಸಾತ್ವಿಕರು". ಅಂತಹ ಸತ್ವಯೋಗ್ಯ ಜೀವರಾಶಿಗಳಿಗೆ ಒಡೆಯನು ಎಂದು ಇನ್ನೊಂದು ಅರ್ಥ ವನ್ನು ಮಾಡಬಹುದು.

**"ಸತ್ವ" ವೆಂದರೆ ಬಲ ಅಥವಾ ವೀರ್ಯವೆಂದರ್ಥ, ಸಕಲ ಜೀವರಿಗೆ**

ಸತ್ತಾಪ್ರದನಾಗಿದ್ದು, ಬಲಪ್ರದನಾಗಿರುವುದರಿಂದ "ಸಾತ್ತ್ವತಾಂಪತಿ" ಎಂತಲೂ ಇನ್ನೊಂದು ಅರ್ಥಉಂಟು (**ವಾದಿರಾಜಾ ಚಾರ್ಯರ ವ್ಯಾಸದಾಸಸಿದ್ಧಾಂತ ಕೌಮುದೀ ಪ್ರಕಾರ**)

## (೩) ಜ್ಞಾನಗಮ್ಯ :-

ಸಮೀಚೀನವಾದ ಭಗವತ್ಸಂಬಂಧವಾದ ಜ್ಞಾನದಿಂದ ಮಾತ್ರವೇ ಲಭ್ಯನು. ಸದಾಗಮೈಕವೇದ್ಯನಾದ ಪ್ರಣವಸ್ವರೂಪಿ ಶ್ರೀಮನ್ನಾರಾಯಣನು ಜ್ಞಾನಯೋಗದಿಂದ ಪ್ರಾಪ್ಯನು. ಇದರಿಂದ **ಜ್ಞಾನಗಮ್ಯ**ನೆಂದು ತಿಳಿಸಿರುತ್ತಾರೆ.

## (೪) ಗಯಾಸುರಾರ್ದನ :-

"ಗಯಾ" ಎಂಬ ಹೆಸರಿನ ರಾಕ್ಷಸನು ಮದೋನ್ಮತ್ತನಾಗಿ ಲೋಕ ಹಿಂಸಕನಾಗಿದ್ದನು. ದೇವತೆಗಳಿಂದ ಪ್ರಾರ್ಥ್ಯಮಾನರಾದ ಶ್ರೀಬ್ರಹ್ಮದೇವರು ಗಯನ ಬಳಿಗೆ ಬಂದರು. ಗಯನನ್ನು ಕುರಿತು–"ಅಯ್ಯಾ, ನಾನೊಂದು ಪವಿತ್ರ ಯಜ್ಞವನ್ನು ಮಾಡಬೇಕೆಂದಿರುವೆನು, ಯಜ್ಞವೇದಿಕೆಯನ್ನು ರಚಿಸಲು ನಿನ್ನ ದೇಹಕ್ಕಿಂತಲೂ ಪರಿಶುದ್ಧವಾದ ಸ್ಥಾನ ಮತ್ತೊಂದಿಲ್ಲ"– ಎಂದರು. ಬ್ರಹ್ಮನ ವಚನಗಳಿಂದ ಗಯನು ಉಬ್ಬಿಹೋದನು. ಆಗ ಬ್ರಹ್ಮನು ಗಯನ ಎದೆಯ ಮೇಲೆ ವಿಶಾಲವಾದ ಒಂದು ಹಾಸುಗಲ್ಲನ್ನು ಇಟ್ಟು ಯಜ್ಞವೇದಿಕೆಯನ್ನು ರಚಿಸಿದನು. ಗಯನು ಅಲುಗಾಡಿದಾಗ, ಆ ವೇದಿಕೆಯೂ ಅಲ್ಲಾಡತೊಡಗಿತು. ಆಗ ಶ್ರೀವಿಷ್ಣುವು ಗಯನು ಕದಲದಿರುವಂತೆ, ಅವನ ಮೇಲೆ ಕಾಲನ್ನಿಟ್ಟು ಊರಿ ನಿಂತನು. ಆಗ ಗಯನು –"ನನ್ನ ಮರಣಾನಂತರ ಈ ಪ್ರದೇಶ ಪುಣ್ಯಕ್ಷೇತ್ರವಾಗುವಂತೆ ವರವನ್ನು ಕೊಡು. ಆ ಕ್ಷೇತ್ರವು ನನ್ನ ಹೆಸರಿನಿಂದಲೇ ಖ್ಯಾತಿಯಾಗಬೇಕು. ನಾನು ತಲೆ ಇಟ್ಟಿರುವ ಪ್ರದೇಶವನ್ನು ಪುಣ್ಯಸ್ಥಳವೆಂದಿನಿಸಬೇಕು. ಈ ಪ್ರದೇಶದಲ್ಲಿ ಪಿತೃಗಳ ಪ್ರೀತ್ಯರ್ಥವಾಗಿ ಮಾಡಿದ ಪಿಂಡದಾನ ಅಕ್ಷಯವಾಗಬೇಕು"–ಎಂದು ಬೇಡಿದನು. ಆಗ ವಿಷ್ಣುವು "ತಥಾಸ್ತು" ಎಂದು ವರ

ಪ್ರದಾನ ಮಾಡಿದನು. ಇಂತು ಆ ಪ್ರದೇಶವೇ **ಗಯಾಕ್ಷೇತ್ರ**ವೆಂದು ಪ್ರಸಿದ್ಧಿಯಾಗಿದೆ. ಅವನ ಶಿರವಿದ್ದ ಭಾಗವು **ಗಯಾತೀರ್ಥ**ವೆನಿಸಿದೆ. ಇಂತು ಗಯಾನಾಮಕ ಅಸುರನನ್ನು ಸಂಹರಿಸಿದ ಗಯಾಸುರ ಮರ್ದನನು.

**(೫) ಮೌನಿಕುಲ ಸನ್ಮಾನ್ಯ :–**

ಲೋಕವಿಷಯಗಳಲ್ಲಿ ವಿರಾಗಿಗಳಾಗಿ, ಯಾವಾಗಲೂ ಪಾರಮಾರ್ಥಿಕ ವಿಚಾರಗಳಲ್ಲಿಯೇ ಮನಸ್ಸನ್ನು ತೊಡಗಿಸಿರುವ ತಪಸ್ವಿಗಳಿಗೆ **ಮೌನಿ**ಗಳೆಂದು ಹೆಸರು. ಪ್ರಾಪಂಚಿಕ ವಿಷಯಗಳಲ್ಲಿ ಎಷ್ಟು ಅಗತ್ಯವೋ ಅಷ್ಟೆ, ಮಾತು. ಭಗದ್ವಿಷಯಕವಾದ ವಿಚಾರಗಳಲ್ಲಿ ನಿರಂತರ ಸ್ವಾಧ್ಯಾಯ ಪ್ರವಚನಾದಿಗಳಲ್ಲಿ ನಿರತರು. ಆದರೂ ಅವರು ಮೌನಿಗಳೇ. ಅಂತಹ ಜ್ಞಾನಿವರ್ಗದವರಿಂದ ಸನ್ಮಾನ್ಯನಾದವನು. ಅವರಿಂದ ಪೂಜ್ಯನಾದುದರಿಂದ, **ಮೌನಿಕುಲ ಸನ್ಮಾನ್ಯನು.**

**(೬) ಮಾನದ :–**

"ಮಾನ" ಎಂದರೆ, "ಜ್ಞಾನ" ವೆಂದರ್ಥ. ಭಕ್ತರಿಗೆ ಜ್ಞಾನಪ್ರದ ನಾದುದರಿಂದ **ಮಾನದನು.**

"ಮಾನ" ಎಂದರೆ ಗೌರವ ಅಥವಾ ಮರ್ಯಾದೆ ಎಂಬ ಅರ್ಥವೂ ಉಂಟು. ನಿಜಭಕ್ತರಿಗೆ ಗೌರವವನ್ನು ಕೊಡಿಸುವವನಾದ್ದರಿಂದ **ಮಾನದನು.**

ಅತ್ಯಂತ ಗೌರವಯುತವಾದ ಸ್ಥಾನವೆಂದರೆ, ಪರಮಪುರುಷಾರ್ಥ ರೂಪವಾದ ಮೋಕ್ಷ, ಸಜ್ಜನರಿಗೆ ಮೋಕ್ಷಪ್ರದನಾಗಿ ವೈಕುಂಠಾದಿ ಮುಕ್ತ ಸ್ಥಾನಗಳನ್ನು ಕೊಡುವನು. ಇದರಿಂದ **ಮಾನದನು.**

**(೭) ಮಾತುಳಧ್ವಂಸಿ :–**

ಲೋಕ ಕಂಟಕನಾದ ಕಂಸನು ಶ್ರೀ ಕೃಷ್ಣನ ಸೋದರಮಾವನು, ಮಧುರಾ ಪಟ್ಟಣದಲ್ಲಿ ಬಿಲ್ಲಿನ ಹಬ್ಬದ ನೆವದಿಂದ ಬಲರಾಮ ಕೃಷ್ಣರನ್ನು

ಬರಮಾಡಿಕೊಂಡು. ಅವರನ್ನು ಸಂಹರಿಸುವ ದುರುದ್ದೇಶ ಹೊಂದಿದ್ದ ಕಂಸಾಸುರನ ಮೇಲೆ ಸಿಂಹದ ಮರಿಯು ಗಜದ ಕುಂಭಸ್ಥಳಕ್ಕೆ ಹಾರುವಂತೆ ಜಿಗಿದು, ಅವನ ಕೂದಲನ್ನು ಹಿಡಿದು, ಸಂಹರಿಸಿದ ಧೀರ ಪುರುಷ ಶ್ರೀ ಕೃಷ್ಣನು, ಸೋದರ ಮಾವನ ವೈರಿಯಾದ್ದರಿಂದ **ಮಾತುಳ ಧ್ವಂಸಿಯು.**

**(೮) ದೀನಜನಮಂದಾರ :-**

"ನೀನೇ ಗತಿ" ಎಂದು ಏಕೈಕ ಭಾವದಿಂದ ಶರಣಾಗತರಾಗಿ ಬಂದಿರುವ ಭಕ್ತರೇ "ದೀನಜನರು", ಅಂತಹ ದೀನ ಜನರಿಗೆ ಮಂದಾರ ಅಂದರೆ ದೇವ ಲೋಕದ ಕಲ್ಪವೃಕ್ಷ ಸದೃಶನಾಗಿದ್ದಾನೆ. ಆ ಶರಣಾಗತ ರಕ್ಷಾಮಣಿಯು, ದೀನ ಜನರನ್ನು ಸಂತೈಸಿ, ಕಲ್ಪವೃಕ್ಷದಂತೆ ಅವರ ಇಷ್ಟಪ್ರದನಾಗಿದ್ದಾನೆ.

**(೯) ಮಧುರಿಪು-**

ಮಧು ಮತ್ತು ಕೈಟಭರೆಂಬುವರು ಸಹೋದರರು. ಮಧುನಾಮಕ ದೈತ್ಯ ಅಣ್ಣ. ಕೈಟಭನು ತಮ್ಮ. ಅವರಿಬ್ಬರೂ, ಕಲ್ಪಾದಿಯಲ್ಲಿ ವಿಷ್ಣುವು ವಟಪತ್ರಶಾಯಿಯಾಗಿ ಮಲಗಿದ್ದಾಗ, ವಿಷ್ಣುವಿನ ಕಿವಿಯ ಮಲದಿಂದ ಜನಿಸಿದರು. ಕೂಡಲೇ ವಿಷ್ಣುವಿನ ನಾಭೀಕಮಲದಲ್ಲಿದ್ದ ಹಿರಣ್ಯಗರ್ಭನಾಮಕನಾದ ಚತುರ್ಮುಖ ಬ್ರಹ್ಮದೇವರನ್ನು ಪೀಡಿಸಲಾರಂಭಿಸಿದರು, ಬ್ರಹ್ಮನಿಂದ ಪ್ರಾರ್ಥ್ಯಮಾನನಾದ ಶ್ರೀವಿಷ್ಣುವು ಇಬ್ಬರನ್ನೂ ಸಂಹರಿಸಿದನು. ಮಧುನಾಮಕ ದೈತ್ಯನ ಸಂಹಾರಕನಾದ ಶ್ರೀವಿಷ್ಣುವೇ **ಮಧುರಿಪು.**

**(೧೦) ಪ್ರಾಣದ :-**

"ಪ್ರಾಣ"-ಎಂದರೆ ಸಕಲ ಜೀವರ ಚೇಷ್ಟಾಪ್ರೇರಕತ್ವ. ಸಮಸ್ತ ಜೀವರ ಚೇಷ್ಟಾಪ್ರದನಾದ್ದರಿಂದ **ಪ್ರಾಣದನು.**

ಸುರನರಾದಿ ಸಚ್ಚೇತನ ಜೀವರಿಗೆ ಯೋನಿಗಮನವನ್ನು ಅಂದರೆ ನಾನಾ ಯೋನಿಗಳಲ್ಲಿ ಹುಟ್ಟುವುದನ್ನು ತಪ್ಪಿಸುವವನಾದ್ದರಿಂದ **ಪ್ರಾಣದನು** (ಅತಿಶಯವಾದ ಗಮನಕ್ಕೆ "ಪ್ರಾಣ" ಎಂಬರ್ಥವಿದೆ)

ಜೀವರಿಗೆ ಲಿಂಗಭಂಗದ್ವಾರಾ ಸ್ವರೂಪಾನಂದದ ಅಭಿವ್ಯಕ್ತಿಯನು ಶ್ರೀಮುಖ್ಯ ಪ್ರಾಣದೇವರ ದ್ವಾರಾ ಕೊಡಿಸುವವನಾದ್ದರಿಂದ **ಪ್ರಾಣದನು.**

**(೧೧) ಜಗನ್ನಾಥವಿಠ್ಠಲ :-**

ದಾಸರಾಯರ ಅಂಕಿತನಾಮ "ಜಗನ್ನಾಥ ವಿಠ್ಠಲ." ಅಂದರೆ ಸಮಸ್ತ ಜಗತ್ತಿಗೇ ಪ್ರಭು (ನಿಯಾಮಕ) ಎಂದರ್ಥ. ದಾಸರಾಯರ ಉಪಾಸ್ಯ ಮೂರ್ತಿ ಗರುಡವಾಹನ ಶ್ರೀ ಲಕ್ಷ್ಮೀನರಸಿಂಹದೇವರು. ಅಂತಹ ಶ್ರೀಲಕ್ಷ್ಮೀ ನಾರಸಿಂಹಾಭಿನ್ನ ಶ್ರೀಜಗನ್ನಾಥ ವಿಠ್ಠಲ ಸ್ವಾಮಿಯು-ನೀನೇ ಗತಿ. ನಿನ್ನ ಹೊರತು ಶರಣ್ಯರು ಬೇರೊಬ್ಬರಿಲ್ಲ"-ಎಂದು ನಿರಂತರದಿ ನಂಬಿದ ಭಕ್ತಜನ್ನರನ್ನು ಅವರ ಕಷ್ಟಗಳನ್ನು ಪರಿಹರಿಸಿ, ಸದಾ ಸಂರಕ್ಷಿಸುವನು. ಎಂದು ತಿಳಿಸುತ್ತಾ ಪ್ರಸಕ್ತ ಸಂಧಿ ವಿಷಯವನ್ನು ಉಪಸಂಹರಿಸುತ್ತಾರೆ. ||೩೩||

**||ಇಂತು, "ಸರ್ವವ್ಯಾಖ್ಯಾನಸಾರಸಂಗ್ರಹ"ವೆಂಬ ತಾತ್ಪರ್ಯ ರೂಪ ವ್ಯಾಖ್ಯಾನದಲ್ಲಿ ಪ್ರಸಕ್ತ ಸಂಧಿ-"ಪಂಚತನ್ಮಾತ್ರಾಸಂಧಿ ಪೂರ್ತಿಯಾಯಿತು ||**

||ಶ್ರೀಜಗನ್ನಾಥವಿಠ್ಠಲಾರ್ಪಣಮಸ್ತು ||